ಕೆ.ವಿ.ಎನ್. ಈವರೆಗಿನ ಬರೆಹಗಳು

ಕಂತೆ ಒಂಬತ್ತು

# ತೊಂಡು ಮೇವು



# ಡಾ. ಕೆ.ವಿ. ನಾರಾಯಣ

ಹುಟ್ಟಿದ್ದು 1948ರಲ್ಲಿ. ಮೈಸೂರು ಜಿಲ್ಲೆ, ಪಿರಿಯಾಪಟ್ಟಣ ತಾಲ್ಲೂಕು ಕಂಪಲಾಪುರದಲ್ಲಿ. ಅಮ್ಮ-ಅಪ್ಪನ ಕೆಂಚಮ್ಮ ಮತ್ತು ವೀರಣ್ಣ. ಮೊದಲ ಹಂತದ ಓದು ಹುಟ್ಟೂರು ಮತ್ತು ತಾಲೂಕು ಕೇಂದ್ರ ಪಿರಿಯಾಪಟ್ಟಣದಲ್ಲಿ. ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ವಿಜ್ಞಾನವನ್ನು ತೆಗೆದುಕೊಂಡು ಪಿ.ಯು.ಸಿ. ಓದಿದರು. ಇಂಜಿನಿಯರಿಂಗ್ ಮಾಡಲು ಅವಕಾಶವಿದ್ದರೂ ಇಂಜಿನಿಯರ್ ಆಗಕೂಡದೆಂದು ತೀರ್ಮಾನಿಸಿದ ಕೆ.ವಿ.ಎನ್ ಮತ್ತೆ ಮೈಸೂರಿನ ಯುವರಾಜಾಸ್ ಕಾಲೇಜಿನಲ್ಲಿ ವಿಜ್ಞಾನದ ಅಭ್ಯಾಸವನ್ನು ಮುಗಿಸಿದರು. ಆನಂತರದಲ್ಲಿ ಬಿಎಡ್ ಮುಗಿಸಿ ಆರಂಭಿಸಿದ್ದು ಹೈಸ್ಕೂಲಿನಲ್ಲಿ ಅಧ್ಯಾಪನ. ಮುಂದಿನ ಓದಿಗಾಗಿ ಮತ್ತೆ ಬೆಂಗಳೂರಿನತ್ತ ಪಯಣ. ಆ ಹೊತ್ತಿಗೇನೆ ಸಾಹಿತ್ಯದ ಓದಿಗೂ ಬಿದ್ದು, ಬರವಣಿಗೆಯಲ್ಲೂ ತೊಡಗಿಸಿಕೊಂಡಿದ್ದ ಕೆ.ವಿ.ಎನ್ ಮುಂದಿನ ಓದಿಗೆ ಆರಿಸಿಕೊಂಡಿದ್ದು ಸಾಹಿತ್ಯವನ್ನು. ಬೆಂಗಳೂರು ವಿಶ್ವವಿದ್ಯಾಲಯದ ಸೆಂಟ್ರಲ್ ಕಾಲೇಜಿನಲ್ಲಿ ಕನ್ನಡ ಎಂ.ಎ. ತಮ್ಮ ಜೊತೆ ಓದುಗರಾಗಿದ್ದ, ಕನ್ನಡದಲ್ಲಿ ಮಹತ್ವದ ಸ್ತ್ರೀವಾದಿ ಚಿಂತಕಿಯಾಗಿರುವ ಶ್ರೀಮತಿಯವರೊಡನೆ ಒಲುಮೆ ಸಂಭವಿಸಿದ್ದು ಇಲ್ಲೆ. ಗೆಳೆಯರ ಸಮ್ಮುಖದಲ್ಲಿ ಮದುವೆ. ಅಧ್ಯಾಪನ ಕೆಲಸ ಆರಂಭಿಸಿದ್ದು ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ. ಬೆಂಗಳೂರು ವಿಶ್ವವಿದ್ಯಾಲಯದ ಜಿ.ಎಸ್.ಎಸ್ ನೇತೃತ್ತ್ವದಲ್ಲಿದ್ದ ಕನ್ನಡ ಅಧ್ಯಯನ ಕೇಂದ್ರಕ್ಕೆ ಆಗಮನ. ಜಿ.ಎಸ್.ಎಸ್ ಮಾರ್ಗದರ್ಶನದಲ್ಲಿ ಆನಂದವರ್ಧನನ 'ಧ್ವನ್ಯಾಲೋಕ'ವನ್ನು ಅಧ್ಯಯನ ಮಾಡಿ ಪಿಎಚ್‌ಡಿ ಪದವಿ ಪಡೆದರು. ಬೋಧಿಸಿದ್ದು ಸಾಹಿತ್ಯ, ಸಾಹಿತ್ಯ ಮೀಮಾಂಸೆ ಮತ್ತು ಭಾಷಾವಿಜ್ಞಾನವನ್ನು. ವಿಜ್ಞಾನದ ತಾತ್ವಿಕತೆಯನ್ನಿರಿಸಿಕೊಂಡೇ ಕೆ.ವಿ.ಎನ್ ಬೆಳೆದದ್ದು ಸಾಹಿತ್ಯ ವಿಮರ್ಶಕರಾಗಿ, ಭಾಷಾವಿಜ್ಞಾನಿಯಾಗಿ, ಕನ್ನಡ ಸಂಸ್ಕೃತಿ ಚಿಂತಕರಾಗಿ.

ತಿಳುವಳಿಕೆ ಮತ್ತು ನಡುವಳಿಕೆ ಎರಡರಲ್ಲೂ ಸರಳವಾಗಿರುವ ಕೆ.ವಿ.ಎನ್ 1993ರಲ್ಲಿ, ಕನ್ನಡಿಗರ ಕನಸಿನ ಸಂಸ್ಥೆಯಾಗಿದ್ದ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಬಂದ ಶುರುವಿನಲ್ಲೇ ರಿಜಿಸ್ಟ್ರಾರ್ ಆಗಿ ಅಲ್ಲಿನ ಆಡಳಿತ ನಿರ್ವಹಣೆಯೊಳಗೂ ಪ್ರವೇಶ ಪಡೆದರು. ಅಲ್ಲಿಂದ ನಿವೃತ್ತಿಯಾಗಿ ಹೊರಗೆ ಬರುವವರೆಗೆ ಹಲವುಜನ ಕುಲಪತಿಗಳ ಅವಧಿಯಲ್ಲಿ ಆಡಳಿತ ಮತ್ತು ಅಧ್ಯಯನಗಳ ಮೂಲಕ ಕನ್ನಡ ವಿಶ್ವವಿದ್ಯಾಲಯವನ್ನು ಕಟ್ಟುವಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಿದರು. ಬೆಂಗಳೂರು ವಿಶ್ವವಿದ್ಯಾಲಯದ ತಮ್ಮ ಅಧ್ಯಾಪನ ಸಂದರ್ಭದಲ್ಲೇ ಶುರುಮಾಡಿದ್ದ ಕನ್ನಡಭಾಷೆ ಮತ್ತು ಕನ್ನಡಸಂಸ್ಕೃತಿಯ ಚಿಂತನೆಗಳನ್ನು ಕನ್ನಡಸಮಾಜದ ಬೇರುಗಳ ಮೂಲಕ ಅರಸುವ ಕೆಲಸವನ್ನು ಮತ್ತಷ್ಟು ಸ್ಪಷ್ಟವಾಗಿ ಮಂಡಿಸುತ್ತಾ ಬಂದರು. ಈಗಲೂ, ಭಾಷೆ, ಸಾಹಿತ್ಯ, ಶಿಕ್ಷಣ ಮತ್ತು ವಿಜ್ಞಾನ ಮೊದಲಾಗಿ ಕನ್ನಡಸಮಾಜಕ್ಕೆ ಸಂಬಂಧಿಸಿದ ಯಾವುದರಲ್ಲೂ ಜರೂರಾಗಿ ನಡೆಯಬೇಕಿರುವ ಕೆಲಸ ಇದೇ ಎಂದು ತೊಡಗಿಸಿಕೊಂಡು ಈ ಕಾಲದ ಕನ್ನಡದ ಮಹತ್ವದ ಚಿಂತಕರಾಗಿದ್ದಾರೆ.

ಪ್ರಗತಿ ಪುಸ್ತಕಮಾಲೆ–183

ಕೆ.ವಿ.ಎನ್ ಈವರೆಗಿನ ಬರೆಹಗಳು

# ತೊಂಡುಮೇವು

ಕಂತೆ ಒಂಬತ್ತು

ಕೆ.ವಿ. ನಾರಾಯಣ

ಪ್ರಗತಿ ಗ್ರಾಫಿಕ್ಸ್ ಬೆಂಗಳೂರು

**KVN** eevaregina barehagalu - **TONDUMEVU- Kante ombattu** b
**K.V. NARAYANA**, 329, `Gouri', Duo Marvel Colony, Ananthapura Roac
Yelahanka, Bangalore-560064 e-mail:narayana48@gmail.com

Publisher: **M. Byregowda** for **PRAGATI GRAPHICS**, Bengaluru,
119a, 3red cross, 8th main, Hampi nagara (RPC Layout
Vijayanagara), Bengaluru-560104, Ph: 080-2340 9512.

e-mail: byregowda.m1@gmail.com

| | | |
|---|---|---|
| ISBN | : | 978-93-81441-95-4 |
| pages | : | 24+340 |
| paper | : | NS Maplitho 80 GSM |
| price | : | Rs. 350/- |
| size : | | 1/8 Demy |
| First Impression : | | 2010 |
| Revised Impression : | | 2020 |

| | | |
|---|---|---|
| ಪುಟಗಳು | : | 24+340 |
| ಕಾಗದ | : | ಎನ್.ಎಸ್. ಮ್ಯಾಪ್ಲಿಥೊ 80 ಜಿಎಸ್ಎಂ |
| ಬೆಲೆ | : | ರೂ 350/- |
| ಮೊದಲ ಆವೃತ್ತಿ | : | 2010 |
| ಪರಿಷ್ಕೃತ ಆವೃತ್ತಿ | : | 2020 |
| © | : | ಡಾ. ಕೆ.ವಿ. ನಾರಾಯಣ |
| ಸೈಜ್ | : | 1/8 ಡೆಮಿ |
| ಪ್ರತಿಗಳು | : | 1000 |
| ರಕ್ಷಾಪುಟ ವಿನ್ಯಾಸ | : | ಸುಧಾಕರ ದರ್ಬೆ |
| ಪ್ರಕಾಶಕರು | : | ಎಂ. ಬೈರೇಗೌಡ, ಪ್ರಗತಿ ಗ್ರಾಫಿಕ್ಸ್ – ಬೆಂಗಳೂರು<br>ನಂ. 119, 3ನೇ ತಿರುವು, 8ನೇ ಮುಖ್ಯ ರಸ್ತೆ, ಹಂಪಿನಗರ<br>ಬೆಂಗಳೂರು–104. ದೂರವಾಣಿ: 080–23409512 |
| ಮುದ್ರಣ | : | SR Graphics ಶ್ರೀರಂಗ ಗ್ರಾಫಿಕ್ಸ್ Sreeranga Graphics<br>Chamarajpet, Bangalore - 560 018<br>9060312298, 8050437201 |

## ಅರ್ಪಣೆ

ಒಂದಷ್ಟು ಹೊತ್ತು
ಆಟಕ್ಕೆ ಸೇರಿಸಿಕೊಂಡಿದ್ದ
ರಂಗಭೂಮಿ ಗೆಳೆಯರಿಗೆ

## ಮನ್ನಿಸಲು ಕೋರುತ್ತ ಈ ಹಿನ್ನೋಟದ ಮಾತುಗಳು

ಬರೆಯುವುದೇಕೇ? ಇನ್ನೊಬ್ಬರೊಡನೆ ಮಾತನಾಡುವ ಒಂದು ದಾರಿಯಾಗಿ ಬರಹವನ್ನು ಹುಡುಕಿಕೊಳ್ಳುತ್ತೇವೆಂದು ತೋರುತ್ತದೆ. ಆದರೆ ಅದು ನಮ್ಮನ್ನೇ ನಮಗೆ ತೋರಿಸುವ ದಾರಿಯೂ ಆಗಿರುತ್ತದೆ ಎಂಬುದು ಗೊತ್ತಾಗಬೇಕು. ದೀಪವೆಂದರೆ ಬೆಳಕೂ ಹೌದು ದಾರಿಯೂ ಹೌದು ಅಲ್ಲವೇ? ಹೀಗೆ ಬರೆದದ್ದೆಲ್ಲಾ ಬರೆದವರ ಅಪರಾಧ ಖಾತೆಗಳಲ್ಲಿ ಜಮೆಯಾಗತೊಡಗುತ್ತದೆ ಎನ್ನುವುದು ನನಗೆ ಗೊತ್ತಾದದ್ದು ತೀರಾ ಈಚೆಗೆ. ಬರೆದದ್ದನ್ನೆಲ್ಲಾ ಒಂದು ಕಡೆ ಕೂಡಿಸಿ ಅಚ್ಚು ಮಾಡುವ ಇರಾದೆಯನ್ನು ನನ್ನೆದುರಿಗಿಟ್ಟು ನನ್ನ ಒಪ್ಪಿಗೆಯನ್ನು ಗೆಳೆಯರು ಪಡೆದುಕೊಂಡಮೇಲೆ ಈ ದಿಟ ನನಗೆ ತಿಳಿಯಿತು. ಬರೆದಾದ ಮೇಲೆ ಬರಹದ ಮೇಲೆ ನನ್ನ ಹಕ್ಕುಗಳು ಇಲ್ಲ ಎಂದು ತಿಳಿದ ನನಗೆ ಈ ಬರಹಗಳನ್ನು ಒಗ್ಗೂಡಿಸಿ ಅಚ್ಚುಮಾಡಿಸುವ ಕೆಲಸಕ್ಕೆ ಅಡ್ಡಿತರಲು ಯಾವ ಹಕ್ಕುಗಳೂ ಇರಲಿಲ್ಲ. ಆದರೆ ಒಂದೊಂದಾಗಿ ಹಳೆಯ ಬರಹಗಳನ್ನು ಒಗ್ಗೂಡಿಸುತ್ತಿರುವಾಗ ಅನಿಸಿದ್ದೇ ಬೇರೆ.

ಬರೆಯುವುದು ಒಂದು ಅಪರಾಧವಿರಬೇಕು. ಬರೆದು ಮೊದಲು ಅಚ್ಚು ಮಾಡಿಸಿದ ಮೇಲೆ ಆ ಅಪರಾಧಕ್ಕೆ ಬಿ ರಿಪೋರ್ಟ್ ಸಿಕ್ಕಿಬಿಟ್ಟಿರುತ್ತದೆ. ಎಷ್ಟೋ ವರುಷಗಳಾದ ಮೇಲೆ ಅದೇ ಬರಹವನ್ನು ಮರಳಿ ಅಚ್ಚು ಮಾಡಲು ನೋಡಿದರೆ ಯಾರೋ ಹಳೆಯ ಕೇಸಿಗೆ  ನೀಡಿದ್ದ ಬಿ ರಿಪೋರ್ಟ್‌ನ್ನು ಹಿಂದಕ್ಕೆ ಪಡೆದು ಕೇಸನ್ನು ಮರಳಿ ತೆರೆದು ಕೂರಿಸಿದಂತೆ ತೋರುತ್ತದೆ. ನನಗಂತೂ ಹಾಗೇ ಅನ್ನಿಸಿದೆ. ಆದರೂ ಇದೊಂದು ತಪ್ಪೊಪ್ಪಿಗೆಯ ಗಳಿಗೆ. ಬರೆದು ಏನು ಮಾಡಿದ್ದೇನೋ ಗೊತ್ತಿಲ್ಲ. ಹೀಗೆ ಬರೆಯುವುದು ಅಗತ್ಯವಾಗಿತ್ತೇ? ಅದೂ ಗೊತ್ತಿಲ್ಲ. ಬರೆಯುವುದು ಕಷ್ಟವಲ್ಲ; ಬರೆಯದಿರುವುದೇ ಕಷ್ಟ ಎಂಬ ಮಾತನ್ನು ನಂಬಿ ಈ ಹಾದಿ ಹಿಡಿದಿದ್ದರೂ ಅಚ್ಚರಿಯಿಲ್ಲ.

ಇದೆಲ್ಲ ಹೇಗೆ ಮೊದಲಾಯಿತು? ಆಗ ಬರೆಯುವುದು ಒಂದು ಹೊಸ ಹೊಣೆ ಎಂಬ ನಂಬಿಕೆ ಗಟ್ಟಿಯಾಗಿತ್ತು. ಅದನ್ನು ಹೊರುವವರಿಗೆ ಹೆಚ್ಚಿನ ಸಿದ್ಧತೆ ಬೇಕೆಂದು ನಂಬಿದ್ದೆವು. ಹಾಗೆಯೇ ಸುಮ್ಮನೆ ಬೇಕಾದ್ದಕ್ಕಿಂತ ಹೆಚ್ಚನ್ನು ಬರೆಯುವ ಬಗೆಯನ್ನೂ ನಗೆಗೀಡು ಮಾಡುತ್ತಿದ್ದೆವು. ನನ್ನ ಎಷ್ಟೋ ಒಡನಾಡಿಗಳು ಇದಕ್ಕಿಂತ ಹೆಚ್ಚು ಬರೆಯಬಹುದಾಗಿದ್ದರೂ ಹಾಗೆ ಬರೆಯದೇ ಈಗಲೂ ನನ್ನಂತಹವರನ್ನು ನೋಡಿ ನಗುತ್ತಿದ್ದಾರೆ. ಇದು ನನಗೂ ಗೊತ್ತಿದೆ.

ಮೊದಮೊದಲು ಮಾತಿನ ಮುಂದುವರಿಕೆಯಾಗಿ ಈ ಬರಹಗಳು ಮೈತಳೆದವೆಂದು ತೋರುತ್ತದೆ. ಮಾತಿನ ಹರಹನ್ನು ಕಡಿಮೆ ಮಾಡಿಕೊಂಡು, ನುಡಿದದ್ದಕ್ಕೆ ಹೊಣೆಗಾರರಾಗುವ ಬಯಕೆಯಿಂದಾಗಿ ಈ ಬರಹಗಳು ಹುಟ್ಟಿಕೊಂಡವು. ಅಂದಂದಿನ ದಂದುಗಕ್ಕೆ ಹೆಣೆದ, ಹೊಸೆದ ಬರಹಗಳೆಂದು ತೋರಿದರೂ ಎಲ್ಲರೊಡನೆ ಆಡುತ್ತಿದ್ದ ಮಾತುಗಳ ಜಾಲದಲ್ಲಿ ಇದ್ದ ನಂಟು ಈ ಬರಹಗಳಲ್ಲೂ ಸೇರಿಕೊಂಡಿದೆ. ಇದು ಸ್ಪಷ್ಟತೆಯೂ ಆಗಿರಬಹುದು; ಕೆಲವೊಮ್ಮೆ ಗೊಂದಲವೂ ಆಗಿದ್ದಿರಬಹುದು. ಆದರೆ ಸುಳ್ಳು ಆಗಿಲಾರದು. ಸಾಹಿತ್ಯದ ಓದುಗರೂ ಮೇಸ್ಟ್ರೂ ಆಗಿದ್ದ ನನ್ನಂತಹವರಿಗೆ ಏಳು ಎಂಟನೆಯ ದಶಕಗಳು ಹೊಸ ಸವಾಲನ್ನು ಎಸೆದಿದ್ದವು. ಸರ್ವರ ಸಮ್ಮತಿಯ ಸಂತೆಯ ದಾರಿಯನ್ನು ಹಿಡಿಯಬಾರದೆಂಬ ಹಟವಿದ್ದರೂ ಆ ಸಮ್ಮತಿಯ ದಾರಿಗೆ ಇದ್ದ ಮನ್ನಣೆಯ ಸೆಳೆತದಿಂದ ತಪ್ಪಿಸಿಕೊಳ್ಳುವುದು ಕಡುಕಷ್ಟವಾಗಿತ್ತು. ಇದು ಎಲ್ಲದರಲ್ಲೂ ಸ್ವಂತಿಕೆ ಇರಬೇಕೆಂಬ ಅಹಂಕಾರದ ಮಾತಲ್ಲ. ಆದರೆ ನಮ್ಮ ಹುಡುಕಾಟದಿಂದ ಹೊಸ ದಾರಿ ಸಿಗಬೇಕು. ಕೊನೆಯ ಪಕ್ಷ ನಮ್ಮ ದಾರಿಯನ್ನು ನಾವೇ ಕಂಡುಕೊಂಡೆವೆಂಬ ಸಂತಸವಾದರೂ ಸಿಗಬೇಕಿತ್ತು. ಆವರೆಗೆ ಕೈಹಿಡಿದು ನಡೆಸುತ್ತಿದ್ದ ಮಾದರಿಗಳು ದಾರಿ ತಪ್ಪಿಸುತ್ತಿರಲಿಲ್ಲವಾದರೂ ಕರೆದುಕೊಂಡು ಹೋಗುತ್ತಿದ್ದ ಹಾದಿಯಲ್ಲಿ ನಮ್ಮತನಕ್ಕೆ ಎರವಾಗಬೇಕೆಂಬ ಅನಿಸಿಕೆ ಮಾತ್ರ ಗಟ್ಟಿಗೊಳ್ಳುತ್ತಿತ್ತು. ಈಗಲೂ ಅದು ಹುಚ್ಚಾಟವಾಗಿರಲಿಲ್ಲ ಎನ್ನುವ ನಂಬಿಕೆ ಇದೆ.

ನೆನಪಿದೆ. 1971ರಲ್ಲಿ ನಡೆದ ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು ಎಂಬ ವಿಷಯದ ವಿಚಾರ ಸಂಕಿರಣವೊಂದರಲ್ಲಿ ಬೇಂದ್ರೆ, ಶಂಕರ ಮೊಕಾಶಿ ಪುಣೇಕರ್ ಮತ್ತು ಲಂಕೇಶ್ ಅವರ ನಡುವೆ ನಡೆದ ಮಾತಿನ ಮಾರಾಮಾರಿಯನ್ನು ಕಂಡು, ಕೇಳಿ ನಾವೆಲ್ಲ ಹುಡುಗರು ದಿಕ್ಕುತಪ್ಪಿದಂತಾಗಿದ್ದ ಗಳಿಗೆ ಈಗಲೂ ನೆನಪಿದೆ. ದಿಕ್ಕುತಪ್ಪಿದಂತೆ ಅನಿಸಿದ್ದಕ್ಕೆ ಆ ಜಗಳ ಮತ್ತು ಅದರ ತಿರುಳು ಮಾತ್ರ ಕಾರಣವಾಗಿರಲಿಲ್ಲ. ಮೊದಲ ಬಾರಿಗೆ ನಾವು ಕಟ್ಟಿಕೊಂಡಿದ್ದ ಗೌರವದ ವಿಗ್ರಹಗಳು ಪುಡಿಪುಡಿಯಾಗುತ್ತಿದ್ದನ್ನು ಕಾಣುತ್ತಿದ್ದ ಅನುಭವವೂ ಕಾರಣವಾಗಿದ್ದಿರಬೇಕು. ಮಾತಿಗೆ ಇರುವ ಬಲವನ್ನು ನಂಬಿದ್ದವರು ಬೇಂದ್ರೆ. ವಾಕ್ ಸ್ವಾತಂತ್ರ್ಯದ ಹೆಚ್ಚಳವನ್ನು ಜವಾಹರ್ ಲಾಲ್ ನೆಹರೂ ಅವರಿಗೆ ತಾವು ಮನವರಿಕೆ ಮಾಡಿಕೊಟ್ಟದ್ದನ್ನು ಹೇಳುತ್ತಿದ್ದರು. ಆದರೆ ನಾಡಿನ ಚರಿತ್ರೆಯ ಆ ಹಂತವನ್ನು ಬಲ್ಲವರಿಗೆ ಅಂದಿನ ಪರಿಸ್ಥಿತಿಯ ಅರಿವಿತ್ತು. ಎಲ್ಲರಿಗೂ ಮಾತಾಡಲು ಅವಕಾಶವಿದ್ದರೂ ಆ ಮಾತನ್ನು ಕೇಳಿಸಿಕೊಳ್ಳುವವರೇ ಇಲ್ಲದಂತಾದರೆ ಆಗ ಮಾತಿಗೇನು ಬಲವೆಂಬುದು ಲಂಕೇಶರ ಪ್ರಶ್ನೆಯಾಗಿತ್ತು. ಇದೆಲ್ಲ ಮುಂದಿನ ನಾಲ್ಕೈದು ವರ್ಷಗಳಲ್ಲಿ ಹರಳುಗಟ್ಟುತ್ತ ನಾಡಿನಲ್ಲಿ ಅನುಶಾಸನ ಪರ್ವ ಮೊದಲಾದಾಗ ಲಂಕೇಶ್ ಹೇಳಿದ್ದರ ತಿರುಳು ಮನವರಿಕೆಯಾಗತೊಡಗಿತ್ತು. ಮಾತುಗಳನ್ನು ಗೋಡೆಯ ಎದುರು ಆಡಬೇಕಾಗಿ ಬಂದರೆ ಏನಾಗುವುದೆಂಬ ಅಂಜಿಕೆಯೇ ಬರಹಕ್ಕೆ ಕೋಡು ಮೂಡಿಸಿದ್ದಿರಲೂಬಹುದು. ಬರಹಕ್ಕೆ ಈಗ ಮತ್ತು ಇಲ್ಲಿ ಎಂಬ ಕಟ್ಟು ಇರುವುದಿಲ್ಲ. ಹಾಗಾಗಿ ಎಲ್ಲಿಯೋ ಯಾರೋ ಅದನ್ನು ಓದಬಹುದಾಗಿದೆ. ಹಾಗಾಗಿ ಬರಹಕ್ಕೆ ಬಲ ಉಳಿದೇ ತೀರುತ್ತದೆ ಎನ್ನುವ ಒತ್ತಾಸೆ ಆಗ ಬಲಗೊಂಡಿದ್ದಿರಬಹುದು. ಮುಂದಿನ ದಶಕಗಳಲ್ಲಿ ಅಕ್ಷರ ಕಲಿತವರಲ್ಲಿ ಹಲವರು ಏಕೆ ಬರಹದ ಮೊರೆ ಹೊಕ್ಕರು ಎಂಬುದಕ್ಕೆ ಇಲ್ಲಿ ಸೂಚನೆಗಳು ಸಿಕ್ಕಿಯಾವು.

ಹೊಸ ದಾರಿಯನ್ನು, ಇಲ್ಲವೇ ದಾರಿಯನ್ನು ಹೊಸದಾಗಿ ಕಂಡುಕೊಳ್ಳುವ ಮಾತನ್ನು ಮೇಲೆ ಆಡಿದ್ದೇನೆ. ಸಾಹಿತ್ಯವನ್ನು ಅರಿಯಲು ನಮಗೆ ಒದಗಿಸಿಕೊಟ್ಟದ್ದ ಮಾದರಿಗಳು ನಮ್ಮ ಕೃತಿಗಳನ್ನು ಹೊರಗಿನಿಂದ ನೋಡಲು ಒತ್ತಾಯಿಸುತ್ತಿವೆ ಎಂಬ ಅನಿಸಿಕೆ ಮೂಡಿತ್ತು. ನಾವು ತೆರೆದುಕೊಂಡ ಹಾಗಾಗಿಯೇ ಬಳಸುತ್ತಿದ್ದ ಸಾಹಿತ್ಯತತ್ತ್ವ ಮತ್ತು ಪರಿಕರಗಳು ಕನ್ನಡದ ಪರಂಪರೆಯಿಂದ ಹುಟ್ಟಿಕೊಂಡಿರಲಿಲ್ಲ. ಇದಕ್ಕೆ ಚರಿತ್ರೆಯಲ್ಲಿ ಕಾರಣಗಳೇನೇ ಇರಲಿ. ಆದರೆ ಅದೇ ದಾರಿಯನ್ನು ಹಿಡಿದು ನಡೆಯಬೇಕೆಂಬ ಒತ್ತಾಯಕ್ಕೆ ಮಾತ್ರ ಕಾರಣಗಳಿರಲಿಲ್ಲ. ಅರಿಯುವುದು ಮತ್ತು ಬೆಲೆಕಟ್ಟುವುದು ಈ ಎರಡೂ ಕೆಲಸಗಳಲ್ಲಿ ಎರಡನೆಯದಕ್ಕೆ ಮನ್ನಣೆ ಹೆಚ್ಚಾದಾಗ ಕೃತಿಗಳಲ್ಲಿ, ಕೃತಿಕಾರರಲ್ಲಿ ಆಯ್ಕೆಗಳನ್ನು ಮಾಡಿಕೊಳ್ಳುವ ಹಾಗೂ ನಿರಾಕರಣೆ ಮಾಡುವ ನೆಲೆಗಳು ಬೇರೂರತೊಡಗುತ್ತವೆ. ನಮ್ಮ ಸಾಹಿತ್ಯ ಚರಿತ್ರೆಯೆಂಬ ಬರೆವಣಿಗೆಯಲ್ಲಿ ಇದೇ ಕೆಲಸವನ್ನು ಮಾಡಿದ್ದೇವೆ ತಾನೆ. ಇದರಿಂದ ಕೃತಿಗಳ ಲೋಕವನ್ನು ಒಳಹೊಗುವ ದಾರಿಗಳೇ ಮುಚ್ಚಿಹೋಗುತ್ತವೆ. ಹಾಗಿದ್ದರೆ ಬೆಲೆ ಕಟ್ಟುವುದಕ್ಕಿಂತ ಅರಿಯುವ ನೆಲೆಗೆ ಮನ್ನಣೆ ಸಿಗಬೇಕೆಂಬ ಇರಾದೆ ಮುಂಚೂಣಿಗೆ ಬಂತು. ಇದರಿಂದ ನಾನು ಬರೆದದ್ದನ್ನು ಓದಿದವರು ನನ್ನನ್ನು ಸತೃಣಾಭ್ಯವಹಾರಿ ಎಂದು ಬೆರಳುಮಾಡಿ ತೋರಿಸತೊಡಗಿದರು. ಅಂದರೆ ಸಾಹಿತ್ಯಕ ಅಭಿರುಚಿ ಇಲ್ಲದ , ಏನೂ ಸಿಕ್ಕರೂ ಅದೆಲ್ಲವನ್ನೂ ಮೇಯುವವನು ಎಂದಾಯಿತು. ಈ ಬಿರುದಿನಿಂದ ನನಗೇನೂ ಬೇಸರವಾಗಿಲ್ಲ. ಆದರೆ ಹಲವು ಒತ್ತಡಗಳಿಗೆ ಒಳಗಾಗಿ ತನ್ನ ಚಹರೆಗಳಿಗೆ ಎರವಾಗಬೇಕಾಗಿ ಬಂದಿರುವ ಕನ್ನಡ ಬರೆವಣಿಗೆಯನ್ನು ನೋಡಲು ನಮಗೆ ಬೇರೆ ಯಾವುದಾದರೂ ದಾರಿಗಳಿದ್ದವೋ ಇಲ್ಲವೋ ನನಗೆ ತಿಳಿಯದು.

ನಮ್ಮ ಕೃತಿಗಳ ಒಡಲಿನಿಂದಲೇ ನಮಗೆ ಬೇಕಾದ ಅರಿಯುವ ಮಾಪುಗೋಲುಗಳನ್ನು, ಪರಿಕರಗಳನ್ನು ಹುಡುಕಿಕೊಳ್ಳಬೇಕೆಂದು ಹೇಳಿದಾಗ ಎರಡು ಬಗೆಯಲ್ಲಿ ಬದಲುಗಳು ಬಂದವು. ಒಂದು ನೆಲೆಯಲ್ಲಿ ನಿಂತವರು ಹೀಗೆ ನಮ್ಮದೇ ಮಾಪುಗೋಲು ಮತ್ತು ಪರಿಕರಗಳನ್ನು ಹುಡುಕುವುದೆಂದರೆ ಹಳೆಯದಕ್ಕೆ ಮರಳುವ, ಮರುಗಳಿಕೆಯ ದಾರಿಯಾಗಿದೆ. ಇದು ಹಳಹಳಿಕೆಯ ದಾರಿ. ಹಾಗಾಗಿಯೇ ಇದು ಮುನ್ನೋಟಕ್ಕೆ ಎರವಾಗುವ ದಾರಿ ಎಂದರು. ಮತ್ತೆ ಕೆಲವರು ಹೀಗೆ 'ಬೇರೆ' ಎಂದು 'ಹೊರಗಿನದು' ಎಂದು ತಿಳಿಯಲಾದ ಪರಿಕರಗಳನ್ನು ತೊರೆದರೆ ನಾವೇ ಬಡವಾಗಿಬಿಡುತ್ತೇವೆ; ಆಗ ನಮಗೆ ದಿಕ್ಕೇ ತೋಚದಂತೆ ಆಗಿಬಿಡಬಹುದು ಎಂದರು. ಆದರೆ ಈ ಎರಡೂ ಬದಲುಗಳ ಬೇರುಗಳು ಗಟ್ಟಿಯಾಗಿರಲಿಲ್ಲ. ಏಕೆಂದು ನೋಡೋಣ.

ಬರೆವಣಿಗೆ ಇಲ್ಲವೇ ಜನರ ನೆನಪಿನಲ್ಲಿರುವ ರಚನೆಗಳನ್ನು ಅರಿಯುವ ಪರಿಕರಗಳು ಒಳಗಿನಿಂದಲೇ ಬರಬೇಕು ಎನ್ನುವ ಮಾತನ್ನು ಸರಿಯಾಗಿ ತಿಳಿದರೆ ಅದು ಕೃತಿಗಳ ಒಡಲು ಮತ್ತು ಪರಿಸರ ಇವೆರಡಕ್ಕೂ ಸಂಬಂಧಿಸಿದ ಸಂಗತಿ ಎನ್ನುವುದು ಗೊತ್ತಾಗುತ್ತದೆ. ಒಂದು ಉದಾಹರಣೆಯನ್ನು ನೋಡೋಣ. ಇಪ್ಪತ್ತನೆಯ ಶತಮಾನದ ಮೊದಮೊದಲ ಮೂರ್‍ನಾಲ್ಕು ದಶಕಗಳಲ್ಲಿ ನಡೆದ ಸಂಗತಿ ಇದು. ಜನರಲ್ಲಿ ಬಾಯ್ದರೆಯಾಗಿ ಇದ್ದ ಜನಪದ ಸಾಹಿತ್ಯವನ್ನು ಆಗ ಕೂಡಿಹಾಕಲು ಹೊರಟವರು

ತಳೆದ ನಿಲುವನ್ನು ನೋಡಿ. ಎಲ್ಲ ಬರೆವಣಿಗೆಗೂ ತಾಯಿಬೇರು ಈ ಜನಪದ ಸಾಹಿತ್ಯ ಎನ್ನುವ ನಿಲುವನ್ನು ತಳೆದರಷ್ಟೆ ಹಲಸಂಗಿಯ ಗೆಳೆಯರು ಕೂಡಿ ಹಾಕಿದ ಇಂತಹ ಬರೆವಣಿಗೆಯನ್ನು ಅವರು ನೋಡಿದ ಬಗೆಯನ್ನು ನೋಡಿ. ಹಾಗೆಯೇ ತೆಂಕಣ ಸೀಮೆಯಲ್ಲಿ ಮಾಸ್ತಿಯವರೇ ಮೊದಲಾಗಿ ಬಿಎಂಶ್ರೀ, ಗೊರೂರು ಮುಂತಾದವರು ಜನಪದಗೀತೆಗಳನ್ನು ಇಂದಿನ ಬರೆವಣಿಗೆಯ ಬೇರು ಎಂತಲೇ ತಿಳಿದಿದ್ದರು. (ಹಲಸಂಗಿಯ ಗೆಳೆಯರು ಕೊಂಚ ಮುಂದೆ ಹೋಗಿ ತಮ್ಮವೇ ಕೆಲವು ರಚನೆಗಳನ್ನು 'ಗರತಿಯ ಹಾಡು' ಕೃತಿಯಲ್ಲಿ ಜನರ ಹೆಸರಿನಲ್ಲಿ ಬಳಕೆ ತಂದಿದ್ದಾರೆಂದು ನನಗೆ ತೋರುತ್ತದೆ. ಇದು ಆಪಾದನೆಯಲ್ಲ. ಜನರ ನೆನಪಿನ ರಚನೆ ಮತ್ತು ನಮ್ಮ ಇಂದಿನ ರಚನೆಗಳ ನಡುವೆ ಇರುವ ಕರುಳುಬಳ್ಳಿಯ ನಂಟನ್ನು ತಿಳಿಸಿಹೇಳುವ ಬಗೆಯೂ ಇದಾಗಿತ್ತು.) ಚರಿತ್ರೆ ಮತ್ತು ಸಂವೇದನೆಗಳು ಕಡಿದುಹೋಗದೆ ಮುಂದುವರೆದುಕೊಂಡು ಬಂದಿವೆ ಎಂಬುದನ್ನು ತೋರಿಸುವುದು ಅಂದಿನ ಪರಿಸರದ ಒತ್ತಾಯವಾಗಿತ್ತಷ್ಟೆ ಹೀಗಾಗಿ ಜನಪದ ರಚನೆಗಳನ್ನು ನೋಡುವ ಈ ಬಗೆಯ ಪರಿಕರ ಹುಟ್ಟಿಕೊಂಡದ್ದು ಸರಿಯಾಗಿಯೇ ಇದೆ. ಕೆಲವರು ಇದರ ಹಿನ್ನೆಲೆಯಲ್ಲಿ ಐರ್ಲೆಂಡ್ ನಾಡು ಬಿಡುಗಡೆಗಾಗಿ ಹೋರಾಡುತ್ತಿರುವಾಗ ಅಲ್ಲಿನ ಸಾಂಸ್ಕೃತಿಕ ನಾಯಕರು ಅಲ್ಲಿನ ಜನಪದರಚನೆಗಳನ್ನು ನೋಡಿದ ಬಗೆಯ ಪ್ರಭಾವವಿದೆ ಎನ್ನಬಹುದು. ಆದರೆ ಇದನ್ನು ಗಟ್ಟಿಯಾಗಿ ಹೇಳಲು ಆಗುತ್ತಿಲ್ಲ. ಏಕೆಂದರೆ ಬೇಂದ್ರೆಯವರನ್ನು ಐರ್ಲೆಂಡಿನ ಈ ಕವಿಯ ಹಾಗೆ ಉಳಿದವರು–ಅಂದರೆ ಡಬ್ಲ್ಯೂ.ಬಿ. ಯೇಟ್ಸ್, ಲೇಡಿ ಗ್ರೆಗೊರಿ, ನಾಟಕಕಾರ ಜೆ.ಎಂ. ಸಿಂಜ್(ಅಥವಾ ಸಿಂಗ್?) ಸೆಳೆದಂತೆ ತೋರುತ್ತಿಲ್ಲ. ತೆಂಕಣನಾಡಿನಲ್ಲಿ ಕುವೆಂಪು ಅವರಿಗೆ ಕನ್ನಡದಲ್ಲಿ ಬರೆಯಲು ಹೇಳಿದ ಜೆ.ಎಚ್.ಕಸಿನ್ಸ್ ಆ ನಾಡಿನವನೇ ಆಗಿದ್ದರೂ ಇಲ್ಲಿಯ ಬರಹಗಾರರ ಮೇಲೆ ಐರಿಶ್ ಕವಿಗಳ ನೆರಳೂ ಬಿದ್ದಂತೆ ತೋರುತ್ತಿಲ್ಲ. ಹಾಗಾಗಿ ಜನಪದರಚನೆಗಳನ್ನು ನೋಡಲು ಆಯ್ದುಕೊಂಡ ಮಾದರಿ ನಮ್ಮ ಒಳಗಿನ ಒತ್ತಡದಿಂದಲೇ ಹುಟ್ಟಿದ್ದೆಂದು ತೋರುತ್ತದೆ.

ಆದರೆ ಮುಂದೆ ಕನ್ನಡದ ಗುರುತುಗಳನ್ನು ಹುಡುಕಿಕೊಳ್ಳುವ ಕೆಲಸ ಮೊದಲಾದಾಗ ನಾವು ಹಿಡಿದ ದಾರಿಯೇ ಬೇರೆಯಾಯಿತು. ಕನ್ನಡವನ್ನು ದ್ರಾವಿಡ ಸಂಸ್ಕೃತಿಯ ನೆಲೆಯಲ್ಲಿ ನೋಡುವ ಬಗೆ ನೆಲೆಯೂರಿತಷ್ಟೆ. ಆಗ ಜನಪದಸಾಹಿತ್ಯ ನಮಗೆ ಶಿಷ್ಟಸಾಹಿತ್ಯಕ್ಕೆ ವಿರುದ್ಧವಾದ ನೆಲೆಯಲ್ಲಿ ಕಾಣತೊಡಗಿತು. ಶಿಷ್ಟವೆಂದು ನಾವು ಗುರುತಿಸಿಕೊಂಡ ಸಾಹಿತ್ಯವು ವೈದಿಕ ಮತ್ತು ಧಾರ್ಮಿಕ ನೆಲೆಗಳಿಂದ ಒತ್ತಾಸೆ ಪಡೆದುಕೊಂಡಿದ್ದರೆ ಜನಪದಸಾಹಿತ್ಯವನ್ನು ಅವೈದಿಕ ನೆಲೆಯಲ್ಲಿ ಇರಿಸಿ ನೋಡತೊಡಗಿದೆವು. ಇದೂ ಕೂಡ ಅಂದಿನ ನಮ್ಮ ಕನ್ನಡ ಗುರುತುಗಳ ಹುಡುಕಾಟದ ಕಾರಣದಿಂದ ಹುಟ್ಟಿಕೊಂಡ ಚಿಂತನೆ. ಒಂದೆರಡು ದಶಕಗಳು ಕಳೆದಮೇಲೆ ನಾವು ಜನಪದ ಸಾಹಿತ್ಯಕ್ಕೆ ಕೊಟ್ಟುಕೊಂಡಿದ್ದ ಕೃಷಿಮೂಲವನ್ನು ಬಿಟ್ಟುಕೊಟ್ಟು ದಲಿತ ನೆಲೆಗಳನ್ನು ಕಂಡುಕೊಳ್ಳಬೇಕಾದ ಅಗತ್ಯ ಉಂಟಾಯಿತು. ಆವರೆಗೆ ಕಡೆಗಣನೆಗೆ ಒಳಗಾಗಿದ್ದ ಹತ್ತಾರು ಒಳಹೊಳೆಗಳು ಈಗ ಮೈದುಂಬಿಕೊಂಡಂತೆ ತೋರತೊಡಗಿವವು. ಇದೆಲ್ಲವನ್ನೂ ಹೇಳಿದ್ದರ ಉದ್ದೇಶವಿಷ್ಟೆ. ನಮ್ಮ ಸಾಹಿತ್ಯವನ್ನು ಅರಿಯುವ

ಮಾಪುಗೋಲುಗಳನ್ನು ಪರಿಕರಗಳನ್ನು ನಮ್ಮ ಬೇಕು ಬೇಡಗಳಿಗೆ ತಕ್ಕಂತೆ ಹುಡುಕಿಕೊಳ್ಳಬೇಕು ಎನ್ನುವುದು ಅಷ್ಟೇನೂ ಗಾಬರಿ ಹುಟ್ಟಿಸಬೇಕಾದ ಸಂಗತಿಯಲ್ಲ ಎನ್ನುವುದನ್ನು ಇಲ್ಲಿ ಹೇಳಬೇಕಾಗಿದೆ. ನಮಗೇ ಗೊತ್ತಿಲ್ಲದಂತೆ ನಾವು ಆ ಮಾದರಿಯನ್ನು ನಂಬಿಯೇ ಹೆಜ್ಜೆ ಇಡುತ್ತಿದ್ದೇವೆ. ನಾವು ಹುಡುಕಿಕೊಂಡ ದಾರಿ ಸರಿಯೋ ತಪ್ಪೋ ಎನ್ನುವುದನ್ನು ನೋಡಿಕೊಳ್ಳುವ ಅವಕಾಶವನ್ನು ನಾವು ಕಾಯ್ದುಕೊಂಡಿದ್ದೇವೆಯಷ್ಟೆ

ಸಾಹಿತ್ಯ ಕೃತಿಯ ದಿಟವಾದ ಇರವು ಎಲ್ಲಿದೆ ಎನ್ನುವುದು ನಮ್ಮನ್ನೆಲ್ಲ ಕಾಡಿಸುತ್ತಿದ್ದ ಇನ್ನೊಂದು ಪ್ರಶ್ನೆ. ಭಾಷೆಯೇ ಅದರ ಮೈ ಆಗಿದ್ದರಿಂದ ಅದರ ಭಾಷಿಕ ಶರೀರವನ್ನೇ ನೆಮ್ಮಿ ಅದನ್ನು ಅರಿಯಲು ಮುಂದಾಗಬೇಕೆಂಬುದು ಆಗ ಹೊಳೆದ ದಾರಿ. ಆ ಭಾಷಿಕ ಮೈಯನ್ನು ಬಿಟ್ಟು ನಾವು ಕಟ್ಟಿಕೊಟ್ಟ ಯಾವ ಹೊರ ಪ್ರಭಾವಳಿಯೂ ಕೂಡ ಕೃತಿಯನ್ನು ಅರಿಯಲು ನೇರವಾಗಿ ನೆರವಾಗಲಾರದು ಮತ್ತು ಅಂತಹ ನೆರವನ್ನು ಪಡೆದರೆ ದಾರಿ ತಪ್ಪುವುದಂತೂ ದಿಟ ಎನ್ನುವುದು ಆಗ ಅನಿಸಿತ್ತು. ಹಾಗಾಗಿಯೇ ಕೃತಿಗಳಿಗೆ ನಿನ್ನೆಗಳಿಲ್ಲ ಎಂದು ನಂಬಬೇಕಾಯಿತು. ಅದನ್ನೇ ಪಾಠಗಳನ್ನು ಕೇಳುತ್ತಿದ್ದ ವಿದ್ಯಾರ್ಥಿಗಳಿಗೂ ಹೇಳಬೇಕಾಯ್ತು. ವಿಕ್ರಮಾರ್ಜುನ ವಿಜಯವಿರಲಿ, ಕುಮಾರವ್ಯಾಸ ಭಾರತವಿರಲಿ, ಬಸವರಾಜದೇವರ ರಗಳೆಯಿರಲಿ, ಮಲೆಗಳಲ್ಲಿ ಮದುಮಗಳು ಇರಲಿ, ಜೋಗಿಯಿರಲಿ ಈ ಎಲ್ಲವೂ ಒಂದೇ ಸಾಲಿನಲ್ಲಿ ನಿಂತಂತೆ ತೋರತೊಡಗಿದವು. ಯಾವುದೂ ಒಂದಾದ ಮೇಲೊಂದರಂತೆ ಹುಟ್ಟಿಕೊಂಡಂತೆ ತೋರಲೇ ಇಲ್ಲ. ದಿಟ. ಒಂದು ಹತ್ತನೆಯ ಶತಮಾನದ್ದು, ಇನ್ನಾವುದೋ ಹದಿನೈದರದ್ದು, ಮತ್ತೊಂದು ನಿನ್ನೆ ಮೊನ್ನೆ ಹುಟ್ಟಿದ್ದು ಸರಿ. ಆದರೆ ಓದುವವರಿಗೆ ಅವೆಲ್ಲವೂ ಈಗ ಮತ್ತು ಇಲ್ಲಿ ಮಾತ್ರ ದಿಟ.

ಈ ನೆಲೆಯನ್ನು ಒಪ್ಪಿದಾಗ ಕೃತಿಯೊಳಗೇ ಇರುವ ಅದು ಹುಟ್ಟಿದಕಾಲದ ನೆನಪನ್ನು ಕೈಬಿಡುವುದು ತಪ್ಪಲ್ಲವೇ ಎಂದು ಕೇಳುವುದುಂಟು. ಅದು ಸರಿಯೇ. ಇಲ್ಲಿಯೂ ಯಾವ ನೆನಪೇ ಆದರೂ ಕೂಡ ಅದು ನಮ್ಮ ಕಾಲದೊಡನೆ ನಂಟನ್ನು ಬೆಳೆಸಿಕೊಳ್ಳದಿದ್ದರೆ ಅದು ಕೆಲಸಕ್ಕೆ ಬಾರದಂತೆಯೇ ಸರಿ ಎನ್ನುವುದು ನನ್ನ ತಿಳುವಳಿಕೆ. ನಾವು ನಮಗೆ ಬೇಡದ ನೆನಪುಗಳನ್ನು ಹೊತ್ತು ನಡೆಯುತ್ತಿರುವವರಲ್ಲ. ಹಾಗೆ ಹೊತ್ತು ನಡೆಯಬೇಕೆಂಬ ಒತ್ತಾಯಗಳನ್ನು ನಿರಾಕರಿಸುವವರು. ಹಾಗಾಗಿ ಕೃತಿಯಲ್ಲಿ ಅದು ಹುಟ್ಟಿದಕಾಲಕ್ಕೆ ಮಾತ್ರ ಸಲ್ಲುವ ನೆನಪಿನ ನಂಟುಗಳಿರುತ್ತವೆ ಎನ್ನುವುದನ್ನು ಒಪ್ಪಿ ಅದರಿಂದಾಗಿ ಅದನ್ನು ಅರಿಯುವ ಬಗೆಯಲ್ಲೇ ಬದಲಾವಣೆಯನ್ನು ಮಾಡಿಕೊಳ್ಳಬೇಕು ಎನ್ನುವುದನ್ನು ನಾನು ಒಪ್ಪಲಾರೆ.

ನಾನು ಮತ್ತು ನನ್ನ ಸರೀಕ ಕನ್ನಡ ಮೇಸ್ಟ್ರುಗಳು ಇನ್ನೊಂದು ಇಕ್ಕಟ್ಟನ್ನು ಎದುರಿಸುತ್ತಿದ್ದೆವೆಂದು ತೋರುತ್ತದೆ. ಪಶ್ಚಿಮದ ಸಾಹಿತ್ಯ ಮತ್ತು ಸಾಹಿತ್ಯತತ್ವಗಳ ಚೌಕಟ್ಟನ್ನು ಪರಾಮರ್ಶನ ಬಿಂದುವನ್ನಾಗಿ ಮಾಡಿಕೊಳ್ಳಬೇಕೆಂಬ ಒತ್ತಾಯವನ್ನು ಹೂಡುತ್ತಿದ್ದ ವಿಮರ್ಶಕರ ಒತ್ತಡಗಳಿಗೆ ಹೇಗೆ ಪ್ರತಿಕ್ರಿಯಿಸುವುದು ಎನ್ನುವುದೇ ಆ ಇಕ್ಕಟ್ಟು. ಶರಣಾಗತಿಯ ಹಾದಿಯೊಂದು ತೆರೆದೇ ಇತ್ತು. ಈ ಹಾದಿಯಲ್ಲಿ ಹೋಲಿಕೆಗಳಿಗೆ ಒತ್ತು ತುಂಬಾ ಇತ್ತು. ಆದರೆ ಹೋಲಿಕೆಗಳು ಯಾವಾಗಲೂ

ಒಂದು ನಿಟ್ಟಿನಲ್ಲೇ ಸಾಗುತ್ತಿದ್ದವು. ಬೀಜಚಿಂತನೆಗಳು ಯಾವಾಗಲೂ ಪಶ್ಚಿಮದ ಕಡೆಯಿಂದಲೇ ಹರಿದು ಬಂದಿವೆ ಎನ್ನುವುದನ್ನು ಒಪ್ಪಿಕೊಳ್ಳಲೇಬೇಕಿತ್ತು. ಹಾಗಲ್ಲದೆ ಕನ್ನಡದ್ದೇ ಆದ ಸಾಧನೆಗಳಿದ್ದರೂ ಅವುಗಳನ್ನು ವಿನಾಯತಿಗಳಂತೆ ಆಕಸ್ಮಿಕಗಳಂತೆ ನೋಡಬೇಕಿತ್ತು. ಇಂದಿಗೂ ವಚನಗಳನ್ನು ಹೇಗೆ ಚರ್ಚಿಸಬೇಕು, ಚರ್ಚಿಸುವುದಿರಲಿ ಹೇಗೆ ಓದಬೇಕು ಎಂಬ ಬಗ್ಗೆ ಗೊಂದಲವಿರುವುದು ಇದೇ ಕಾರಣದಿಂದಾಗಿ ಎಂದುಕೊಂಡಿದ್ದೇನೆ. ಈ ದಾರಿಯನ್ನು ಬಿಟ್ಟು ಹೊರಳಲು, ಇಲ್ಲವೇ ನಮ್ಮದೇ ಹಾದಿಗಳನ್ನು ಕಟ್ಟಿಕೊಳ್ಳಲು ಅವಕಾಶಗಳಿದ್ದರೂ ಅದಕ್ಕೆ ಬೇಕಾದ ಕಸುವನ್ನು ಕಟ್ಟಿಕೊಳ್ಳುವುದು ಒಂದು ಸವಾಲಾಗಿಯೇ ಕಾಣುತ್ತಿತ್ತು. ನನ್ನ ಕೆಲವು ಜೊತೆಗಾರರರಾದರೂ ಈ ನಿಟ್ಟಿನಲ್ಲಿ ದಿಟ್ಟ ಹೆಜ್ಜೆಗಳನ್ನು ಇಟ್ಟು ಸಾಗಿದವರಾಗಿದ್ದಾರೆ. ಈಗಲೂ ಕನ್ನಡದ ಮೇಸ್ಟ್ರುಗಳನ್ನು ಈ ದೆವ್ವ ಕಾಡುವುದನ್ನು ನಿಲ್ಲಿಸಿಲ್ಲ.

ಭಾಷೆಯ ಮೈಯನ್ನು, ಕೃತಿಯನ್ನು ತಿಳಿಯುವ ಮೊದಲ ಮತ್ತು ಕೊನೆಯ ಪರಿಕರವನ್ನಾಗಿ ಬಳಸುವ ಹಾದಿಯಲ್ಲಿ ಸಾಗಿದ ಮೇಲೆ ಭಾಷೆಯೇ ಇಲ್ಲಿನ ಬರಹಗಳ ಮುಖ್ಯ ಭಿತ್ತಿಯಾಗುವುದನ್ನು ಕಾಣಬಹುದು. ಇಲ್ಲಿಂದ ಬರಹಗಳ ಮುಖ್ಯ ನೆಲೆ ಕೇವಲ ಭಾಷೆಯೇ ಆಗಿಬಿಟ್ಟಿವೆ. ಇದಕ್ಕೆ ನಾನು ಕೆಲಸ ಮಾಡತೊಡಗಿದ್ದ ಕನ್ನಡ ವಿಶ್ವವಿದ್ಯಾಲಯದ ವಾತಾವರಣ, ಹೊಣೆ ಮತ್ತು ಅಲ್ಲಿನ ಬೇಡಿಕೆಗಳೂ ಕಾರಣವಾಗಿರಬಹುದು. ಜೊತೆಗೆ ಕಳೆದ ಶತಮಾನದ ಕೊನೆಯ ದಶಕದಿಂದ ಮೊದಲಾಗಿ ಕನ್ನಡ ಭಾಷೆಯನ್ನು ಆತಂಕದಲ್ಲಿರುವ ನುಡಿಯೆಂದು ತಿಳಿದು ಚಿಂತಿಸುವ ಬಗೆ ಬಲವಾಗಿ ಬೇರೂರಿತು. ಅದನ್ನು ಹೀಗೆ ಹೇಳೋಣ. ಕನ್ನಡದಂತಹ ನುಡಿಗಳು ಮತ್ತು ಅದನ್ನು ಅವಲಂಬಿಸಿದ ಸಂಸ್ಕೃತಿಗಳು ಜಾಗತೀಕರಣದ ಉರುಬಿನಲ್ಲಿ ಎದುರಿಸುತ್ತಿರುವ ಬಿಕ್ಕಟ್ಟುಗಳು ಎಲ್ಲರ ಎದುರು ಸವಾಲಾಗಿ ನಿಂತಿವೆ. ಇವು ಕಲ್ಪಿಸಿಕೊಂಡ ಹೋರಾಟದ ನೆಲೆಗಳಲ್ಲ. ದಿಟವಾಗಿಯೂ ಎದುರಿಸುತ್ತಿರುವ ಬಿಕ್ಕಟ್ಟುಗಳು. ಈ ಬಿಕ್ಕಟ್ಟುಗಳಿಗೆ ಚಾರಿತ್ರಿಕ ಒತ್ತಡಗಳಿರುವಂತೆ ಜಾಗತಿಕವಾದ ಒತ್ತಡಗಳೂ ಕಾರಣವಾಗಿವೆ. ಇವೆಲ್ಲವನ್ನೂ ಅರಿಯುವುದು , ಅರಿಯಲು ಬೇಕಾದ ಪರಿಕರಗಳನ್ನು ಹುಡುಕಿಕೊಳ್ಳುವುದು ಇಂದಿನ ಅಗತ್ಯವಾಗಿದೆ.

ಎಲ್ಲಕ್ಕಿಂತ ಮೊದಲು ಅರಿಯಬೇಕಾದ ಸಂಗತಿಯೆಂದರೆ ದೂರದಿಂದ ಬಿರುಕುಗಳಿಲ್ಲದಂತೆ ಕಾಣುತ್ತಿದ್ದ ನೆಲೆಗಳು ಹತ್ತಿರ ಹತ್ತಿರ ಹೋಗುತ್ತಿದ್ದಂತೆ ಹಲವಾರು ಬಿರುಕುಗಳಿರುವ ರಚನೆಗಳೆಂದು ತೋರತೊಡಗಿದ್ದು. ಇದನ್ನು ಇಡೀ ಕನ್ನಡ ಸಂಸ್ಕೃತಿಗೆ ಹೊಂದಿಸಿಕೊಂಡು ನೋಡಬೇಕಾಗಿದೆ. ನಾವು ಹಕ್ಕುದಾರರೂ ಹೊಣೆಗಾರರೂ ಆಗಿರುವ ಚರಿತ್ರೆ ಮತ್ತು ಸಂಸ್ಕೃತಿಗಳು ವಾಸ್ತವವಾಗಿ ನಮ್ಮೆಲ್ಲರದ್ದೂ ಆಗಿರದೆ ಕೆಲವರ ಹೊಣೆ ಮತ್ತು ಹೊರೆಗಳನ್ನು ಎಲ್ಲರೂ ತಮ್ಮದೆಂದು ಹೊರುತ್ತಿರುವ ಬಗೆ ಢಾಳಾಗಿ ಕಾಣತೊಡಗಿತು. ಇದೆಲ್ಲವೂ ಮೊದಲಾದದ್ದು ಸಚಿವ ಬಿ. ಬಸವಲಿಂಗಪ್ಪನವರು ರಾಜ್ಯದಲ್ಲಿ ಮಲಹೊರುವ ಪದ್ಧತಿಯನ್ನು ಕಾನೂನಿನ ಮೂಲಕ ಬಹಿಷ್ಕರಿಸುವ ಯೋಜನೆಯನ್ನು ಕೈಗೊಂಡಾಗ. ಹಾಗೆ ಮಲಹೊರುವ ಪದ್ಧತಿಯನ್ನು ಮುಂದುವರೆಸುವುದು ಅಪರಾಧವೆಂದು ಹೇಳುವ ಕಾನೂನು ಜಾರಿಗೆ ಬಂತಷ್ಟೆ.

ಈ ಕಾನೂನಿನ ಪರಿಣಾಮವಾಗಿ ಸಾಮಾಜಿಕ ಪಲ್ಲಟಗಳು ಮೊದಲಾದವು. ಈ ಪಲ್ಲಟಗಳು ನೇರವಾಗಿ ಈ ಕಾನೂನಿನ ಗುರಿಯಾಗಿದ್ದ ಅನಿಷ್ಟ ಪದ್ಧತಿಯೊಂದಕ್ಕೆ ಮಾತ್ರ ತಳುಕು ಹಾಕಿಕೊಂಡಿರಲಿಲ್ಲ. ದಲಿತರು ಹೊರುತ್ತಿದ್ದುದು ಸಮಾಜದ ತ್ಯಾಜ್ಯವನ್ನು. ಈ ಕಾನೂನು ಬದಲು ದಾರಿಯಿಂದ ಹೇಳಿದ್ದೇನು? ದಲಿತರು ತಮ್ಮದಲ್ಲದ ಹಾಗೂ ಇತರರು ತ್ಯಾಜ್ಯವೆಂದು ತಿಳಿದ ಪಾರಂಪರಿಕ ನೆಲೆಗಳಿಗೆ, ಹೊರೆಗಳಿಗೆ ಹಕ್ಕುದಾರರೂ ಅಲ್ಲ; ಹೊಣೆಗಾರರೂ ಅಲ್ಲವೆಂದು ಹೇಳಿದಂತಾಯ್ತು. ಅಲ್ಲವೆ? ಇದರ ಪರಿಣಾಮದಿಂದಾಗಿ ಕನ್ನಡ ಸಮಾಜದಲ್ಲಿ ಉಂಟಾದ ತಿಕ್ಕಾಟಗಳನ್ನು ನೋಡಿ. ಈ ಕಾನೂನು ಜಾರಿಯಾಗಿದ್ದು ಒಂದು ಸಂದರ್ಭವನ್ನು ಹುಟ್ಟುಹಾಕಿತು. ಆದರೆ ಒಳಗಿದ್ದ ಒಡಕುಗಳು ಆಗಲೇ ಹೇಳಿದಂತೆ ಹೊರಗೆ ಕಾಣತೊಡಗಿದ್ದರಿಂದ ತಿಕ್ಕಾಟಗಳು ಮೊದಲಾದವು. ಸಾಮಾಜಿಕವಾಗಿ ನಾವು ಕಲ್ಪಿಸಿಕೊಂಡಿದ್ದ ನಂಟಿನ ಜಾಲ ಹುಸಿಯಾಗಿತ್ತು. ಒಳಗಿನ ಹುನ್ನಾರಗಳು ಎದ್ದು ಕಾಣತೊಡಗಿದವು. ಕೆರೆ ಮೈದೆರೆದಾಗ ಏನೆಲ್ಲ ಕಾಣುವುದೋ ಅದು ಮೊದಲೇ ಅಲ್ಲಿ ಇದ್ದುದು ತಾನೆ. ಈ ಮಾತು ನಮಗಿಲ್ಲಿ ಮುಖ್ಯ. ಏಕೆಂದರೆ ಕನ್ನಡ ನುಡಿಯೂ ಕೂಡ ನಾವು ಆವರೆಗೆ ತಿಳಿದಂತೆ ಎಲ್ಲರ ಕನ್ನಡವಾಗಿರುವ ಬದಲು ಕೆಲವರ ಕನ್ನಡವೇ ಎಲ್ಲರ ಕನ್ನಡವೆಂದು ಸೋಗು ತೊಟ್ಟಿತ್ತೆಂಬುದು ಈಗ ಕಣ್ಣಿಗೆ ರಾಚತೊಡಗಿತ್ತು. ಇದೆಲ್ಲದರ ಹಿಂದಿನ ಸಾಂಸ್ಕೃತಿಕ ರಾಜಕಾರಣವನ್ನು ಸರಿಯಾದ ನಿಟ್ಟಿನಲ್ಲಿ ಅರಿಯುವುದು ಇಂದಿನ ಅಗತ್ಯವಾಗಿದೆ. ಕಳೆದ ಇಪ್ಪತ್ತು ವರುಷಗಳಿಂದ ಬರೆದದ್ದರಲ್ಲಿ ನಾನು ಈ ನೆಲೆಯಲ್ಲಿ ಹೆಜ್ಜೆಗಳನ್ನು ಇಡಲು ಬಯಸಿದ್ದೇನೆಂದು ತೋರುತ್ತಿದೆ.

ಕನ್ನಡ ಬದುಕು ವ್ಯಕ್ತಿಗಳನ್ನು ಅತಿಯಾಗಿ ಹಚ್ಚಿಕೊಳ್ಳುತ್ತದೆ. ಏನನ್ನೇ ಆಗಲಿ ಅದನ್ನು ಯಾರು ಹೇಳಿದರು ಎಂಬುದು ಮುಖ್ಯವಾಗುತ್ತದೆಯೇ ಹೊರತು ಹೇಳಿದ್ದು ಏನು ಎಂಬುದು ಹಿಂದಕ್ಕೆ ಸರಿಯುತ್ತದೆ. ಇದನ್ನು ಕರ್ತೃವನ್ನು ಕಟ್ಟಿಕೊಳ್ಳುವುದು ಎಂದು ಬೇರೆಲ್ಲೋ ಕರೆದಿದ್ದೇನೆ. ಮಾಡಿದ ಕೆಲಸಗಳು ಹಿಂದಕ್ಕೆ ಸರಿದು, ಅದನ್ನು ಮಾಡಿದವರು ಕರ್ತೃಗಳಾಗಿ ಬಿಡುತ್ತಾರೆ. ಇದರಲ್ಲಿ ತಪ್ಪೇನೂ ಇಲ್ಲವಾದರೂ ಕೆಲವೊಮ್ಮೆ ಹೀಗೆ ಕರ್ತೃತ್ವ ದೊರಕಿದ ಮೇಲೆ ವ್ಯಕ್ತಿಗಳ ಎಲ್ಲ ಕೆಲಸಗಳಿಗೂ ಕನ್ನಡ ಬದುಕು ಹೆಚ್ಚಿನ ಮನ್ನಣೆಯನ್ನು ನೀಡತೊಡಗುತ್ತದೆ. ಇದೊಂದು ಅಪಾಯಕಾರಿ ಸ್ಥಿತಿ ಎಂದೇ ನನ್ನ ತಿಳುವಳಿಕೆ. ಈ ಅಪಾಯಗಳಿಗೆ ತುತ್ತಾದ ಜೀವನಕ್ರಮಗಳು ಎದುರಿಸುತ್ತಿರುವ ಬಿಕ್ಕಟ್ಟುಗಳನ್ನು ನಾವು ಕಂಡಿದ್ದೇವೆ. ಪ್ರಜಾಪ್ರಭುತ್ವವನ್ನು ಒಪ್ಪಿ ಆಚರಿಸಹೊರಡುವವರು ಇದರಿಂದ ಕಲಿಯಬೇಕಾದ ಪಾಠ ಇದೆ. ಈ ಮಾತನ್ನು ಇಲ್ಲಿ ಹೇಳಿದ್ದಕ್ಕೆ ಕಾರಣಗಳಿವೆ. ಏಕೆಂದರೆ ಈಗ ನಮ್ಮ ತಿಳಿವಿನ ಬದುಕು ಒಂದು ಬಿಕ್ಕಟ್ಟಿನಲ್ಲಿದೆ. ಕರ್ತೃತ್ವ ಪಡೆದವರು– ಅವರು ಸಾಹಿತಿಗಳಾಗಿರಲಿ, ರಾಜಕಾರಣಿಗಳಾಗಿರಲಿ, ಸಂಸ್ಕೃತಿ ಚಿಂತಕರಾಗಿರಲಿ, ಉದ್ಯಮಿಗಳಾಗಿರಲಿ, ದರೋಡೆಕೋರರಿರಲಿ, ಮಾಫಿಯಾ ದೊರೆಗಳಿರಲಿ ಮತ್ತೇನೋ ಆಗಿರಲಿ ಅವರು ನುಡಿದದ್ದು ಮತ್ತು ಬರೆದದ್ದು ಮನ್ನಣೆಯನ್ನು ಪಡೆದುಬಿಡುತ್ತದೆ. ಆದರೆ ಅಪಾಯದ ಮೊಳಗು ಬೇರೆಲ್ಲೋ ಇದೆ. ಏಕೆಂದರೆ ಈಗ ಮಾತಾಡುವವರ ಎದುರು ಜನರಿಲ್ಲ; ಕನ್ನಡಿಗಳಿವೆ. ಬರೆಯುವವರು ಈಗ ಏಕಾಂತ ಮತ್ತು ಮೌನದ ಸಾಹಚರ್ಯವನ್ನು ಪಡೆದಿಲ್ಲ; ಅವರ ಕಣ್ಣು ಕಿವಿಗಳಿಗೆ ಜನರ ಸಂದಣಿ ಮತ್ತು

ಮೊಳಗುಗಳು ಕೇಳುತ್ತಿವೆ. ಇದನ್ನೇ ನಾನು ಅಪಾಯಕಾರಿ ಅವಸ್ಥೆ ಎಂದು ತಿಳಿದಿರುವೆ. ಈಗ ನುಡಿದದ್ದು ಬರೆದದ್ದು ಚಲಾವಣೆಯ ನಾಣ್ಯಗಳಾಗದೆ ತಿಜೋರಿಯಲ್ಲಿ ಭದ್ರವಾಗ ತೊಡಗುತ್ತವೆ. ಕನ್ನಡ ಬದುಕು ಎದುರಿಸುತ್ತಿರುವ ಈ ಬಿಕ್ಕಟ್ಟನ್ನು ಚಿಕ್ಕವರು ತಿಳಿಯತೊಡಗಿದ್ದಾರೆ. ಹೊರಬರಲು ದಾರಿಗಳಿಗಾಗಿ ತಡಕಾಡುತ್ತಿದ್ದಾರೆ. ಇಂತಹ ಹೊತ್ತಿನಲ್ಲಿ ಈ ಬರಹಗಳು ಮತ್ತೊಮ್ಮೆ ಒಗ್ಗೂಡಿ ಅಚ್ಚಾಗುತ್ತಿವೆ. ಇವು ಚಲಾವಣೆಗೆ ಬರುತ್ತವೋ ಇಲ್ಲವೇ ತಿಜೋರಿಯಲ್ಲಿ ಕೊಳೆಯುತ್ತವೋ ಕಾಯ್ದು ನೋಡಬೇಕು.

ಈ ಬರಹಗಳು ಸುಮಾರು ನಲವತ್ತು ವರುಷಗಳ ಹರಹಿನಲ್ಲಿ ಮೈತಳೆದಿವೆ. ಇದೇ ಕಾರಣವಾಗಿ ಬರಹಗಳ ಮಂಡನೆಯ ಬಗೆಯಲ್ಲಿ ಹಲವು ದಾರಿಗಳು ಕಾಣುವುದು ಸಹಜವೇ ಆಗಿದೆ. ಕೆಲವೊಮ್ಮೆ ಯಾವುದೋ ಪೂರ್ವಪಕ್ಷವನ್ನು ಊಹಿಸಿಕೊಂಡು ಉತ್ತರಕೊಡುವ ನೆಲೆ ಕಂಡುಬಂದರೆ, ಮತ್ತೆ ಕೆಲವೊಮ್ಮೆ ಹೊಸದನ್ನು ಹೇಳಲೇಬೇಕೆಂಬ ಹಂಬಲವೇ ಮೆರೆಯುತ್ತಿರುವಂತೆ ತೋರಬಹುದು. ಮತ್ತೆ ಕೆಲವು ಬರಹಗಳು ಒಮ್ಮೆ ಹೇಳಿದ್ದನ್ನೆ ಬೇರೆ ಮಾತುಗಳಲ್ಲಿ ಮತ್ತೊಮ್ಮೆ ಹೇಳುವಂತೆಯೂ ಇವೆ. ಬಳಸುವ ಭಾಷೆಯೂ ಕೂಡ ಹೀಗೆ ಏರುಪೇರಿನಿಂದ ಕೂಡಿದೆ. ಎಷ್ಟು ಬೇಕೋ ಅಷ್ಟು ಮಾತ್ರ (ಕೆಲವೊಮ್ಮೆ ಬೇಕಾದ್ದಕ್ಕಿಂತಲೂ ಕಡಿಮೆ) ಹೇಳುವ ನೆಲೆ ಕಂಡು ಬಂದರೆ ಮತ್ತೆ ಕೆಲವೊಮ್ಮೆ ಒಪ್ಪಿಸುವ ಹಠದಿಂದ ಹರಡಿಕೊಂಡ ಬಗೆಯ ಮಂಡನೆ ಕಾಣುವುದೂ ಉಂಟು. ಅಲ್ಲಲ್ಲಿ ಪ್ರವಾದಿತನದ ಸೋಗು ಕೂಡ ನುಸುಳಿದ್ದರೆ ಅಚ್ಚರಿಯಿಲ್ಲ. ಅಲ್ಲದೆ ಈ ಬರಹಗಳನ್ನು ಅವುಗಳನ್ನು ಬರೆದ ಕಾಲಕ್ಕೆ ಅನುಗುಣವಾಗಿ ಜೋಡಿಸಿಲ್ಲ. ಇದರಿಂದಲೂ ಇವುಗಳ ನಂಟು ಮತ್ತಷ್ಟು ಜಟಿಲವಾಗಿರಲೂಬಹುದು. ಹೀಗೆ ಮಾಡುವುದಲ್ಲದೆ ನನಗೆ ಬೇರೆ ದಾರಿ ಇರಲಿಲ್ಲ. ಬೇರೆಯವರು ಬರೆದ ಕೆಲವು ಬರಹಗಳನ್ನು ಕನ್ನಡದ ಸಂದರ್ಭದಲ್ಲಿ ಓದುವುದು ಅಗತ್ಯ ಎಂದು ತಿಳಿದದ್ದರಿಂದ ಅಂತಹ ಮೂರ್ನಾಲ್ಕರ ಅನುವಾದ ರೂಪಗಳನ್ನು ಇಲ್ಲಿ ಉಳಿಸಿಕೊಂಡಿದ್ದೇನೆ

ಇನ್ನು ಈ ಒಗ್ಗೂಡಿಸಿದ ಹೊತ್ತಗೆಗಳಿಗೆ 'ತೊಂಡುಮೇವು' ಎಂದು ಹೆಸರಿಟ್ಟುದೇಕೆ? ಹೆಸರಿಸುವಾಗ ಹುಬ್ಬುಗಂಟಿಕ್ಕುವಂತೆ ಇರಬಾರದು ಎಂಬುದು ಮೊದಲ ಮಾತು. ಅಲ್ಲದೆ ನಿಡುಗಾಲದಿಂದ ಬೇಂದ್ರೆಯವರ ಕವಿತೆಯ ಸಾಲೊಂದು ನನ್ನ ಬೆನ್ನೇರಿದೆ. ಅವರ ನಭೋವಾಣಿ ಸಂಕಲನದ 'ನವ ವಿಸರ್ಗ' ಕವಿತೆಯ ಸಾಲುಗಳಿವು. **'ನಕ್ಷೆಯನು ಹಿಡಿದು ತಡಕಾಡಬೇಡ ನಕ್ಷತ್ರ ಮಾರ್ಗವನ್ನು/ ತೊಂಡುಮೇವರಿಗೆ ಹಾದಿ ಕೇಳದಿರು, ಹತ್ತು ದುರ್ಗವನ್ನು'**. ಈ ಸಾಲುಗಳಲ್ಲಿದ್ದ ತೊಂಡುಮೇ(ಯು) ಎಂಬ ಕೆಲಸಪದ ನನ್ನನ್ನು ಕಾಡುತ್ತಿದೆ. ಇದರ ತಿರುಳೇನಾದರೂ ಇರಲಿ. ತೊಂಡುಮೇ(ಯು) ಎಂಬ ಈ ಕೆಲಸಪದವನ್ನು ಹೆಸರುಪದವನ್ನಾಗಿ ಇಲ್ಲಿ ಬದಲಿಸಿಕೊಂಡು ತೊಂಡುಮೇವು ಎಂದು ಮಾಡಿಕೊಂಡದ್ದಕ್ಕೂ ಕಾರಣಗಳಿವೆ. ಬೇಂದ್ರೆಯವರು ದುರ್ಗ ಹತ್ತುವವರಿಗೆ ಅವರ ಹಾದಿಯನ್ನು ಅವರೇ ಕಂಡುಕೊಳ್ಳಬೇಕೆಂದೂ. ಅಲ್ಲಲ್ಲಿ ತೊಂಡುಮೇವರು ಇದ್ದರೂ ಅಂತಹವರಲ್ಲಿ ಹಾದಿ ಕೇಳುವುದು ಬೇಡವೆಂದೂ ಹೇಳಿದ್ದಾರೆ. ಮೊದಲ ಸಾಲಿನಲ್ಲಿ ನಕ್ಷತ್ರ ಮಾರ್ಗ ಮತ್ತು ನಕ್ಷೆಗಳಿಗೆ ಇರುವ ನಂಟನ್ನು ಹೇಳಿದ್ದಾರಷ್ಟೆ. ಕವಿ ನೀಡುವ ಎಚ್ಚರಿಕೆಯೇ ನಮ್ಮ ಬದುಕಿನ ಒಂದು ವಿಪರ್ಯಾಸವನ್ನು ಹೇಳುವಂತಿದೆ.

ನೀವು ನಕ್ಷೆಯನ್ನೂ ತೊರೆಯಲಾರಿರಿ; ತೊಂಡುಮೇವರನ್ನೂ ಕಡೆಗಣಿಸಲಾರಿರಿ. ಅವು ನಮ್ಮೊಡನೆ ಇರುವಂತಹವೇ ಆಗಿವೆ. ನಮ್ಮೆಲ್ಲರ ಬರೆಹಗಳು ಹೀಗೆ ನಕ್ಷೆಗಳೋ ತೊಂಡುಮೇವರು ತೋರಿಸುವ ಪರಿಚಿತ ಒಳದಾರಿಗಳೋ ಆಗಿದ್ದರಬಹುದು. ಅಲ್ಲವೇ? ಹಾಗಾಗಿ ಈ ಬರಹಗಳನ್ನು ತೊಂಡುಮೇವು ಎಂದು ಕರೆಯಲು ಮುಂದಾದೆ.

ಇದೂ ಅಲ್ಲದೆ ನನ್ನ ಹಾಗೆ ನನ್ನ ಹಲವು ಸರೀಕರ ಹುಡುಕಾಟವೂ ಒಂದು ಗೊತ್ತಾದ ಕಣ್ಣುಕಟ್ಟದ ಹಾದಿಯಲ್ಲಿ ಸಾಗಿಲ್ಲ. ಹೀಗೆ ಸಿಕ್ಕಿದಕಡೆಗೆ ನುಗ್ಗಿ ಸಿಕ್ಕಿದ್ದನ್ನು ತಿಂದು, ಸಿಕ್ಕಿಬಿದ್ದರೆ ಒದೆ ತಿಂದು ಸಾಗಿ ಬಂದಿದ್ದೇವೆ. ಇದು ನಮ್ಮ ಆಯ್ಕೆಯಾಗಿತ್ತೋ ಅಥವಾ ಇದನ್ನು ನಮ್ಮ ಆಯ್ಕೆಯನ್ನಾಗಿ ಮಾಡಿಕೊಳ್ಳುವ ಒತ್ತಾಯವಿತ್ತೋ ಎಂಬುದನ್ನು ಕಡ್ಡಿ ಮುರಿದಂತೆ ಹೇಳಲಾರೆ. ಆದರೆ ಈ ಹಾದಿಯ ಏರುಪೇರುಗಳೇನೇ ಇರಲಿ, ಸಾಗಿಬಂದಾಗ ದೊರಕಿದ ಉಲ್ಲಾಸವನ್ನು ನಿರಾಕರಿಸುವುದು ಆಗದ ಮಾತು. ಈ ಕಾರಣದಿಂದಲೂ ಈ ಎಲ್ಲ ಬರಹಗಳ ಕಟ್ಟಿಗೆ **ತೊಂಡುಮೇವು** ಎಂದು ಹೆಸರಿಸಲು ಹಿಂಜರಿಕೆ ಉಂಟಾಗಿಲ್ಲ.

**ಕೈಮುಗಿವೆ**

ಎಷ್ಟು ಜನರಿಗೆ ಕೈಮುಗಿಯುವುದು? ಯಾರನ್ನು ಬಿಟ್ಟರೂ ಈ ಬೈರೇಗೌಡರನ್ನು ಮಾತ್ರ ಬಿಡುವಂತಿಲ್ಲ. ಇವರು ಅದು ಹೇಗೆ ನನಗೆ ಬಲ್ಲವರಾದರೋ ತಿಳಿಯದು. ಮುಗಿಬಿದ್ದು ಮೈದುಂಬಿದಂತೆ ಈ ಕೆಲಸ ಮಾಡಿದ್ದಾರೆ. ಈ ಬರಹಗಳನ್ನು ನಾನು ಒಗ್ಗೂಡಿಸಿ ಕೊಡಲಿಲ್ಲ. ಎಲ್ಲೆಲ್ಲಿಂದಲೋ, ಯಾರು ಯಾರಿಂದಲೋ ತಾವೇ ಹುಡುಕಿ ಜೋಡಿಸಿಕೊಂಡಿದ್ದಾರೆ. ಕೆಲವನ್ನು ಕಸದ ಬುಟ್ಟಿಯಿಂದಲೂ ತೆಗೆದಿರಬೇಕು. (ಅಂತಹವು ಅಲ್ಲೇ ಇರಬೇಕಿತ್ತು ಎಂದು ಓದುವ ನಿಮ್ಮಲ್ಲಿ ಕೆಲವರಿಗಾದರೂ ಅನ್ನಿಸೀತು) ಈ ಒತ್ತಾಸೆ ಯಾರಿಗೆ ದೊರಕುತ್ತದೆ? ಅವರಿಗೆ ಶರಣು ಎಂದು ಕೈಮುಗಿಯುತ್ತೇನೆ. ಇನ್ನು ತಂಪು ಹೊತ್ತಿನಲ್ಲಿ ನೆನೆಯಬೇಕಾದವರ ಪಟ್ಟಿ ಬಲು ದೊಡ್ಡದು. ಅವರನ್ನು ಹೆಸರಿಸಿದರೆ ಕೆಲವರಿಗೆ ಮುಜುಗರ, ಕೆಲವರಿಗೆ ಕೋಪ, ಕೆಲವರಿಗೆ ನಗು ಮತ್ತು ಕೆಲವರು ನನ್ನೊಡನೆ ಮಾತು ಬಿಟ್ಟರೂ ಬಿಟ್ಟರೆ. ಹೀಗೆ ಬಗೆಬಗೆಯಲ್ಲಿ ಅವರು ಪ್ರತಿಕ್ರಿಯೆ ತೋರುತ್ತಾರೆ. ಅವರೆಲ್ಲರೂ ನನ್ನೊಳಗೆ ಇದ್ದಾರಾಗಿ ಬೇರೆಯಾಗಿ ಅವರನ್ನು ಹೆಸರಿಸುವುದನ್ನೇ ಕೈಬಿಟ್ಟಿದ್ದೇನೆ.

ಆದರೆ ಎರಡು ಸಂಸ್ಥೆಗಳನ್ನು ಹೆಸರಿಸಲೇ ಬೇಕು. ನಾನು ಬರೆಯಲು ಕಾರಣವಾದದ್ದು ಬೆಂಗಳೂರು ವಿಶ್ವವಿದ್ಯಾಲಯದ ಅಧ್ಯಯನ ಕೇಂದ್ರ ಮತ್ತು ಕನ್ನಡ ವಿಶ್ವವಿದ್ಯಾಲಯ. ಇವೆರಡೂ ಸಂಸ್ಥೆಗಳು ಬರೆಯಲು ಒತ್ತಾಸೆ ನೀಡಿದ್ದು ಮಾತ್ರವಲ್ಲದೆ ಬರಹಕ್ಕೆ ಯಾವ ಕಡಿವಾಣವನ್ನೂ ಹಾಕಲಿಲ್ಲ ಎಂಬುದನ್ನು ನೆನೆದುಕೊಳ್ಳಬೇಕು. ಪ್ರಜಾವಾಣಿ, ಉದಯವಾಣಿ, ವಿಜಯ ಕರ್ನಾಟಕ, ಸುಧಾ, ತರಂಗ, ವಿಕ್ರಾಂತ ಕರ್ನಾಟಕ, ಮಯೂರ, ಸಾಕ್ಷಿ, ಅಂಕಣ, ಸಂಚಯ, ಶೂದ್ರ (ಈ ಪತ್ರಿಕೆಯ ಸಂಪಾದಕರಾದ ಹೆಸರಾಂತ ಗೆಳೆಯ ಶ್ರೀನಿವಾಸ್ ಅವರನ್ನು ಹೆಚ್ಚಾಗಿ ನೆನೆಯಬೇಕು. ಕುತ್ತಿಗೆಯ

ಮೇಲೆ ಕುಳಿತು ಬರೆಸಿದ್ದು ಮಾತ್ರವಲ್ಲದೆ ಅವುಗಳನ್ನು ತಮ್ಮದೇ ಆದ ಬಗೆಯಲ್ಲಿ ಅಚ್ಚು ಮಾಡಿ ಹಲವು ಬಾರಿ ನನಗೇ ಗಾಬರಿಯಾಗುವಂತೆ ಮಾಡಿದ್ದಾರೆ. ಆ ಪುರಾಣ ಬೇರೊಮ್ಮೆ ಹೇಳುವೆ.) ರುಜುವಾತು, ಸಮುದಾಯ ವಾರ್ತಾಪತ್ರ, ಮುಕ್ತ ಹೀಗೆ ಹಲವು ಪತ್ರಿಕೆಗಳ ಗೆಳೆಯರು ಇಲ್ಲಿನ ಹಲವು ಬರಹಗಳಿಗೆ ಮತ್ತು ಅವು ಬೆಳಕು ಕಾಣುವುದಕ್ಕೆ ಕಾರಣರಾಗಿದ್ದಾರೆ.

ಬಿ ರಿಪೋರ್ಟ್ಗೆ ಹಿಂದಕ್ಕೆ ಪಡೆದ ಈ ಹಳೆಯ ಕೇಸುಗಳನ್ನು ನೀವೀಗ ಮರುಪರಿಶೀಲನೆಗೆ ಗುರಿಪಡಿಸಿರಿ. ಈ ಬರಹಗಳಲ್ಲಿ ಕೆಲವಾದರೂ ಚಿಕ್ಕವರಲ್ಲಿ ಚರ್ಚೆಗೆ ಕಾರಣವಾದರೆ ಅದಕ್ಕಿಂತ ಸಂತಸ ನನಗೆ ಬೇರೊಂದಿಲ್ಲ. ಮೆಚ್ಚುಗೆ, ಹೊಗಳಿಕೆ ನಾನು ಅಷ್ಟು ಇಷ್ಟಪಡುವುದಿಲ್ಲ. ಯಾರೋ ಎಲ್ಲೋ ಹೇಳಿದ ಮಾತನ್ನು ನೆನೆಯುವುದಾದರೆ ಹೊಗಳಿಕೆ ಪೂಸಿಕೊಳ್ಳುವ ಡಿಯೋಡರೆಂಟ್ ಇದ್ದಹಾಗೆ. ಈ ಪೂಸಿಕೊಂಡದ್ದು ದಿಟವನ್ನು ಮರೆಮಾಡಿ ಹುಸಿಯನ್ನು ಮುಂಚೂಣಿಗೆ ತಂದು ಬಿಡುತ್ತದೆ ಅಲ್ಲವೇ? ಇನ್ನು ಎಲ್ಲವೂ ನಿಮಗೆ ಸೇರಿದ್ದು.

**ಕೆ.ವಿ. ನಾರಾಯಣ**

# ತೊಂಡುಮೇವು ಹೊರೆಹೊತ್ತು...

ಮೂರು ವರ್ಷಗಳ ಹಿಂದಿನ ಮಾತು. ಕೆ.ವಿ.ಎನ್. ಮೇಷ್ಟ್ರು ಮೈಸೂರಿನಲ್ಲಿದ್ದರು. ಸಕಲ ಪುರಾತನರೆಂದು ನಾವೆಲ್ಲ ಪ್ರೀತಿಯಿಂದ ಕರೆಯುವ ಪ್ರೊ. ಶಿವರಾಮಯ್ಯ, ಯಂಗ್ ರುದ್ರ ಎಂದೇ ಖ್ಯಾತಿ ಪಡೆದ ಕೆ.ವೈ.ಎನ್. ಮತ್ತು ನಾನು ಮೂವರೂ ಕೂಡಿ ಡಾ. ಎಲ್. ಬಸವರಾಜು ಅವರನ್ನು ಪಂಪನ ಆದಿಪುರಾಣ ಪುಸ್ತಕ ಬಿಡುಗಡೆಗೆ ಆಮಂತ್ರಿಸಲು ಹೋಗಿದ್ದಾಗ ಕೆ.ವಿ.ಎನ್. ಮೇಷ್ಟ್ರ ಮನೆಗೂ ಭೇಟಿ ನೀಡಿದೆವು. ಕೆ.ವಿ.ಎನ್. ಬರವಣಿಗೆಯನ್ನು ಒಂದು ಕಡೆ ತಂದರೆ! ಬಯಕೆಯನ್ನು ಹತ್ತಿಕ್ಕಲಾರದೆ ಕೇಳಿಯೇಬಿಟ್ಟೆ. ನೋಡುವ ಎಂದಷ್ಟೇ ಕೆ.ವಿ.ಎನ್. ಹೇಳಿದರು. ಮೈಸೂರಿಗೆ ಹೋದಾಗಲೆಲ್ಲ ಸಿ.ಐ.ಐ.ಎಲ್. ನಲ್ಲಿ ಮೇಷ್ಟ್ರನ್ನ ಭೇಟಿಯಾಗುತ್ತಿದ್ದೆ. ಅಲ್ಲಿಯೂ ಪ್ರಕಟಣೆಯ ವಿಷಯ ಮಾತನಾಡಲು ಸಾಧ್ಯವಾಗಲೇ ಇಲ್ಲ. ಮತ್ತೊಮ್ಮೆ ಮೇಷ್ಟ್ರ ಮನೆಗೆ ಡಾ. ಆರ್. ಶಿವಪ್ಪ ಅವರೊಡನೆ ಹೋದಾಗ ಪಟ್ಟುಬಿಡದೆ, ಸರ್ ನಿಮ್ಮೆಲ್ಲ ಬರವಣಿಗೆಯನ್ನು ಒಂದೆಡೆ ಕಲೆಹಾಕಿ ತರೋಣ, ಒಪ್ಪಿಗೆ ಕೊಡಿ ಎಂದು ದುಂಬಾಲು ಬಿದ್ದೆ. ಹಸಿರು ನಿಶಾನೆ ತೋರಿದರು. ಈ ಕಾರ್ಯಕ್ಕೆ ಒತ್ತಾಸೆಯಾಗಿ ನಿಂತವರು ಶ್ರೀಮತಿ ಮೇಡಂ. ಕೆ.ವಿ.ಎನ್. ಮೇಷ್ಟ್ರು, ಶ್ರೀಮತಿ ಮೇಡಂ ಇಬ್ಬರಿಗೂ ಅನಂತಾನಂತ ನಮನಗಳು.

ಡಾ. ಕೆ.ವೈ.ಎನ್., ಪ್ರೊ. ಶಿವಪ್ಪ ಮುಂತಾದವರು ಸೇರಿ ವಿವೇಕ ಬಳಗದ ಮೂಲಕ ಪ್ರಕಟಿಸಿದ್ದ ಬೇರು ಕಾಂಡ ಚಿಗುರು ಪುಸ್ತಕದ ಅಕ್ಷರ ಜೋಡಣೆಯಾಯ್ತು. ಸಂಚಯದ ಡಿ.ವಿ. ಪ್ರಹ್ಲಾದ್, ಪುಸ್ತಕ ಮನೆ ಖ್ಯಾತಿಯ ಚಿಂತಕ ಹರಿಹರಪ್ರಿಯ, ಶೂದ್ರ ಪತ್ರಿಕೆಯ ಶ್ರೀನಿವಾಸ್, ಅನ್ವೇಷಣ ಪತ್ರಿಕೆಯ ಆರ್.ಜಿ. ಹಳ್ಳಿ ನಾಗರಾಜ್ ಅವರ ಮನೆಗಳಲ್ಲಿದ್ದ ಅಂಕಣ, ಶೂದ್ರ, ಸಂಚಯ, ಮುಕ್ತ, ಸಮುದಾಯ ವಾರ್ತಾಪತ್ರ ಹೀಗೆ ಹಲವು ಮೂಲಗಳಿಂದ ಕೆ.ವಿ.ಎನ್. ಬರೆಹಗಳನ್ನು ಕಲೆಹಾಕಿದ್ದಾಯ್ತು. ಮೇಲೆ ಹೆಸರಿಸಿರುವ ಎಲ್ಲ ಮಹನೀಯರಿಗೂ ನಮಸ್ಕಾರಗಳು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ಡಾ. ಅಶೋಕ ಕುಮಾರ್ ರಂಜರೆ, ಡಾ. ಪಿ. ಮಹಾದೇವಯ್ಯ, ಡಾ. ಸುಜ್ಞಾನಮೂರ್ತಿ, ರವೀಂದ್ರ, ರಾಜಶೇಖರ್, ಶಿವಮೊಗ್ಗದ ಡಿ.ಎಸ್. ನಾಗಭೂಷಣ, ಬೆಂಗಳೂರಿನ ಡಾ. ಬಸವರಾಜ

ಕಲ್ಲುಗುಡಿ, ಎಂ.ಎಸ್. ಆಶಾದೇವಿ, –ಹೀಗೆ ತೊಂಡುಮೇವು ಸಂಪುಟಗಳು ರೂಪಗೊಳ್ಳುವಲ್ಲಿ ನೆರವಾದವರು ಅನೇಕರು. ಅಭಿನವ ರವಿಕುಮಾರ್ ಧ್ವನ್ಯಾಲೋಕ ಮತ್ತು ಅಂಕೆ ತಪ್ಪಿದ ಆರ್ಥರೋ ಊಯಿ ಕೃತಿಗಳ ಸಾಫ್ಟ್ ಮತ್ತು ಹಾರ್ಡ್ ಕಾಪಿ ನೀಡಿ ಸಹಕರಿಸಿದರು. ಎಲ್ಲರನ್ನೂ ಗೌರವದಿಂದ ಸ್ಮರಿಸುವೆ.

ಡಾ. ಸಿ.ಪಿ. ನಾಗರಾಜ್, ಡಾ. ರಾಮಲಿಂಗಪ್ಪ ಟಿ. ಬೇಗೂರು, ಜಯಶಂಕರ್, ಪ್ರದೀಪ್ ಮಾಲ್ಗುಡಿ, ಬ್ರಹ್ಮಾನಂದ್ ಇವರೆಲ್ಲರೂ ಕರಡು ತಿದ್ದುವಲ್ಲಿ ನೆರವಾಗಿದ್ದಾರೆ. ಅವರ ಸೇವೆಯನ್ನು ಕೃತಜ್ಞತಾಪೂರ್ವಕ ಸ್ಮರಿಸುತ್ತೇನೆ.

ಕಳೆದ ಎರಡು ತಿಂಗಳುಗಳಿಂದ ಬೇರೆಲ್ಲಾ ಕೆಲಸಗಳನ್ನೂ ಬದಿಗಿಟ್ಟು ಒಂದು ವ್ರತದಂತೆ ನನ್ನೊಡನೆ ತೊಡಗಿಸಿಕೊಂಡಿರುವ ಡಾ. ಆರ್. ಚಲಪತಿ ಅವರಿಗೆ ಹೇಗೆ ಕೃತಜ್ಞತೆ ಸಲ್ಲಿಸಲಿ?

ಕೆ.ವಿ.ಎನ್. ಅವರ ತೊಂಡುಮೇವು ಸರಣಿಗೆ ಮುಖಪುಟ ಬರೆದ ಸುಧಾಕರ ದರ್ಬೆ, ಡಿ.ಟಿ.ಪಿ. ಮಾಡಿದ ಬಿ.ಕೆ. ಶೋಭಾರಾಣಿ, ಮಂಗಲಾ ಗಣೇಶ್, ಸವಿತಾ, ಜೋಸ್ಪಿನ್, ಸಿಸಿಲಿಯಾ ಎಲ್ಲರನ್ನು ನೆನೆವೆ. ಮುದ್ರಣ ಕಾರ್ಯದ ಜವಾಬ್ದಾರಿ ಹೊತ್ತ ವಿಶ್ವಾಸ್ ಪ್ರಿಂಟ್ಸ್ ಮತ್ತು ಸ್ನೇಹ ಪ್ರಿಂಟ್ಸ್ ಮಾಲೀಕರಾದ ಟಿ.ಎಲ್. ವೆಂಕಟೇಶ ಮತ್ತು ಮಂಜುನಾಥ್, ಡಿ.ಟಿ.ಪಿ. ವಿಭಾಗದ ಪೂರ್ಣಿಮಾ, ವಿ. ರಾಜ್ ಇವರುಗಳ ಸಹಕಾರವನ್ನು ಸ್ಮರಿಸದಿರಲಾರೆ.

ಕೆ.ವಿ.ಎನ್. ಅವರ ಈವರೆಗಿನ ಬರೆಹಗಳನ್ನು ಒಂದೆಡೆ ಕಲೆಹಾಕಿ ತೊಂಡುಮೇವು ಹೆಸರಿನಲ್ಲಿ ಒಂಬತ್ತು ಕಂತೆಗಳನ್ನು ಕಟ್ಟಿಕೊಟ್ಟಿದ್ದೇನೆಂಬ ಹೆಮ್ಮೆ ನನ್ನದು. ನನ್ನ ಸಂತೋಷಕ್ಕೆ ಕಾರಣರಾದ ಎಲ್ಲರಿಗೂ ಕೃತಜ್ಞನಾಗಿದ್ದೇನೆ.

**ಎಂ. ಬೈರೇಗೌಡ**

# ಪರಿಷ್ಕೃತ ಮುದ್ರಣ ಕುರಿತು

ತೊಂಡು ಮೇವು ಎಂಬ ಹೆಸರಿನಲ್ಲಿ ಬರಹಗಳ ಒಂಬತ್ತು ಸಂಪುಟಗಳನ್ನು 2010ರಲ್ಲಿ ಹೊರತರಲಾಗಿತ್ತು. ಈಗ ಹತ್ತನೆಯ ಸಂಪುಟವನ್ನು ನಿಮ್ಮ ಮುಂದೆ ಇಡಲಾಗುತ್ತಿದೆ. ಜೊತೆಗೆ ಹಿಂದಿನ ಒಂಬತ್ತು ಸಂಪುಟಗಳನ್ನು ಕೊಂಚ ಬದಲಾವಣೆಗಳೊಂದಿಗೆ ಮತ್ತೆ ಅಚ್ಚು ಮಾಡಿ ಪ್ರಕಟಿಸಲಾಗುತ್ತಿದೆ. ಈ ಹತ್ತು ವರುಶಗಳಲ್ಲಿ ಆಗಿರುವ ಬದಲಾವಣೆಯೊಂದಿದೆ. ಆಗ ಅಲ್ಲಿಯವರೆಗೆ ಬರೆದಿದ್ದರ ಬಗೆಗೆ ನಂಬಿಕೆ ಕಡಿಮೆಯಾಗಿತ್ತು. ಈಗ ಬರೆಯುವುದರ ಬಗೆಗೇ ನಂಬಿಕೆ ಕಡಿಮೆಯಾಗಿದೆ. ಇದು ಸಿನಿಕತನವೆಂದು ಅನಿಸಲೂಬಹುದು. ಆದರೆ ನನಗೆ ಹಾಗನ್ನಿಸುತ್ತಿಲ್ಲ. ಬರವಣಿಗೆಯನ್ನು ಅದರ ತಾಳಿಕೆಯ ಗುಣಕ್ಕಾಗಿಯೇ ಒಪ್ಪಿಕೊಳ್ಳುವ ಕಾಲವೊಂದಿತ್ತು. ಈಗ ಹಾಗಿಲ್ಲ. ಬರೆದದ್ದು ಮಾತಿನಂತೆಯೇ ಹುಟ್ಟಿದ ಕೂಡಲೇ ಸಾಯುತ್ತಿದೆ. ಎಷ್ಟೋ ವೇಳೆಯಲ್ಲಿ ಯಾರಿಗಾಗಿ ಬರೆದದ್ದೋ ಅವರಿಗೆ ತಲುಪುವ ಹೊತ್ತಿಗೆ ಅದರ ಚಹರೆಗಳು ಬದಲಾಗಿಬಿಡುತ್ತಿವೆ. ಇದೆಲ್ಲವನ್ನೂ ಕಂಡರೆ ಬರೆವಣಿಗೆಗೆ ಒಂದು ಹೆಚ್ಚಿನ ಮನ್ನಣೆ ಇದೆಯೆಂದು ಈಗ ನನಗೆ ತೋರುತ್ತಿಲ್ಲ.

ಅಲ್ಲದೆ ಬರೆಯುವುದರ ಗುರಿಯೇ ಮಾತಿಗೆಳೆಯುವುದು; ಸಂವಾದವನ್ನು ಹುಟ್ಟಿಹಾಕುವುದು. ಈ ನಂಬಿಕೆ ಕೂಡ ಈಗ ಇಲ್ಲವಾಗುತ್ತಿದೆ. ಎದುರು ನಿಲುವುಗಳಿಗೆ ಮಾತುಕತೆಗಳಲ್ಲಿ ಜಾಗವಿರುತ್ತದೆ. ಅವು ಒಪ್ಪದಿರುವ, ಮೆಚ್ಚದ ಮಾತುಗಳನ್ನೂ ಕೇಳಲು ಹಿಂಜರಿಯುವುದಿಲ್ಲ. ಹಾಗೆಯೇ ಎಲ್ಲರೂ ಒಪ್ಪುವ ಇಲ್ಲವೇ ಮೆಚ್ಚುವಮಾತುಗಳನ್ನೇ ಆಡಬೇಕೆಂಬ ಹಪಾಹಪಿ ಇರುವುದಿಲ್ಲ. ಈಗ ಹಾಗಿದೆ ಎಂದು ನನಗೆ ಅನ್ನಿಸುತಿಲ್ಲ. ಎಲ್ಲರೂ ಒಪ್ಪುವುದನ್ನೆ, ಮೆಚ್ಚುವುದನ್ನೇ ಬರೆಯುವ ತವಕವಿದೆ. ಹಾಗೆಯೇ ಓದುವವರೂ ತಮಗೆ ಒಪ್ಪಿಗೆ ಆಗುವುದನ್ನೇ ಓದಲು ಮುಂದಾಗುತ್ತಿದ್ದಾರೆ. ನನ್ನ ಈ ಮಾತುಗಳಿಗೆ ಬುಡವಿಲ್ಲವೆಂದು ಕೆಲವರಿಗೆ ಅನ್ನಿಸಲೂಬಹುದು. ಸರಿಯೇ ಸರಿ. ಆದರೆ ಈ ಬಿಕ್ಕಟ್ಟು ನನ್ನ ತಿಳಿವಿನ ನೆಲೆಗೆ ಬಂದಿದ್ದರಲ್ಲಿ ಸಟೆಯಿಲ್ಲ.

ಇಂತಹ ಹೊತ್ತಿನಲ್ಲಿ ತೊಂಡುಮೇವು ಬರಹಗಳು ಮತ್ತೆ ಅಚ್ಚಾಗುತ್ತಿರುವುದು, ಹತ್ತು ವರುಶಗಳಿಂದ ಈಚೆಗೆ ಬರೆದದ್ದು ಇನ್ನೊಂದು ಕಂತೆಯಾಗಿ ಮೈದಳೆಯುತ್ತಿರುವುದು ಮುಜುಗರದ ಸಂಗತಿಯೇ ಸರಿ. ಆದರೆ ಗೆಳೆಯ ಡಾ. ಬೈರೇಗೌಡರು ಈ ಕೆಲಸಕ್ಕೆ ಮುಂದಾಗಿದ್ದಾರೆ. ಅವರಿಗೆ ಒಳಿತಾಗಲಿ ಎಂದು ಕೋರುವುದಷ್ಟೇ ನನ್ನ ಕೆಲಸ.

**ಕೆ.ವಿ. ನಾರಾಯಣ**

# ಪರಿವಿಡಿ

# ಅಕ್ಷರಜ್ಞಾನ ಮತ್ತು ಶಿಕ್ಷಣದ ಆಶಯ

ಸಂಪರ್ಕ ವ್ಯವಸ್ಥೆಯ ಅತಿ ಪ್ರಮುಖ ಸಾಧನ ಬರೆಹ-(ಸಾಹಿತ್ಯ ಎನ್ನುವ ಸೀಮಿತ ಅರ್ಥದಲ್ಲಿ ಅಲ್ಲ). ಈ ದೇಶದ ಮೂರರಲ್ಲಿ ಎರಡು ಪಾಲು ಜನ ಈ ವ್ಯವಸ್ಥೆಯ ವಲಯದೊಳಗೆ ಬರುತ್ತಿಲ್ಲ. ಇದೊಂದು ವಿಪರ್ಯಾಸ; ಆದರೆ ಸತ್ಯ. ಈ ಪರಿಸ್ಥಿತಿ ಬದಲಾದ ಹೊರತು ಮೂಲಭೂತ ಕ್ರಾಂತಿ ಸಾಧ್ಯವಾಗುವುದಿಲ್ಲ. ಡಾ.ಅನಂತಮೂರ್ತಿಯವರು ಈ ಬಗ್ಗೆ ಹೌದೆನ್ನಿಸುವ ಹಲವು ಮಾತುಗಳನ್ನು ಹೇಳಿದ್ದಾರೆ. (ನೋಡಿ: ಅಕ್ಷರ ಜ್ಞಾನ ಮತ್ತು ಪ್ರಜ್ಞೆ; ಶಿಕ್ಷಣ-ಸಂಸ್ಕೃತಿ, ಬದರಿನಾರಾಯಣ್ ಸನ್ಮಾನ ಗ್ರಂಥ, 1973). ಓದುವ ಶಕ್ತಿ ಬರದ ಹೊರತು ಶೋಷಿತರಿಗೆ ಬದುಕಿನ ಇನ್ನುಳಿದ ಸಾಧ್ಯತೆಗಳ ಅರಿವು ದೂರದಲ್ಲೇ ಉಳಿಯುತ್ತದೆ ಎನ್ನುವ ಮಾತನ್ನು ಒಪ್ಪಬೇಕು. ಇತಿಹಾಸದಲ್ಲಿ ಇದಕ್ಕೆ ಉದಾಹರಣೆಗಳಿವೆ. ಅಷ್ಟೇಕೆ? ಈ ದೇಶದಲ್ಲಿ ಕಳೆದ ಶತಮಾನದಲ್ಲಿ ಆದದ್ದೂ ಹಾಗೇ. ಇಂಗ್ಲಿಶರ ಶಿಕ್ಷಣ ಅವರ ಉದ್ದೇಶವನ್ನು ಪೂರೈಸುವುದರ ಜತೆಗೆ ಅವರು ನಿರೀಕ್ಷಿಸದೆ ಇದ್ದ ಫಲವನ್ನೂ ಕೊಟ್ಟಿತು. "ನಿರೀಕ್ಷಿಸದಿದ್ದ' ಎಂದೆ. ಕೆಲವರು ನಿರೀಕ್ಷಿಸಿದ್ದರು ಎಂದುಕೊಳ್ಳಿ. ಆದರೆ ಅಪೇಕ್ಷಿಸಿರಲಿಲ್ಲ. ಈ ದೇಶದ ಪ್ರಜ್ಞೆಯಲ್ಲೇ ಮೂಲಭೂತ ಬದಲಾವಣೆಗಳು ಜರುಗಿ ಹೋದವು. ಆದ್ದರಿಂದ ಓದುವ ಶಕ್ತಿ ಪ್ರಬಲವಾದ ಅಸ್ತ್ರ. ಅದರಿಂದ ವ್ಯಕ್ತಿಯ ಪ್ರಜ್ಞಾವಲಯ ದೊಡ್ಡದಾಗುತ್ತದೆ; ವ್ಯವಸ್ಥೆಯ ಅತಿ ಪ್ರಮುಖ ಸಂಪರ್ಕ ಸಾಧನವೂ ತನ್ನ ಅರ್ಥವಂತಿಕೆಯನ್ನು ಕಾಯ್ದುಕೊಳ್ಳುತ್ತದೆ.

ಈ ಮಾತನ್ನು ಹೇಳುತ್ತಲೇ ಒಂದು ಅಪಸ್ವರವನ್ನು ಎತ್ತಬೇಕಾಗಿದೆ. ಅಕ್ಷರ ಜ್ಞಾನವನ್ನು ಪಡೆಯುವ ಹಂತದಲ್ಲಿ ಈ ದೇಶದ ಪ್ರಜೆ ರೂಢಿಸಿಕೊಳ್ಳುತ್ತಿರುವ ಮೌಲ್ಯ ವ್ಯವಸ್ಥೆಯನ್ನು ನಾವು ಗಮನಿಸಬೇಕು. ಅಕ್ಷರಜ್ಞಾನ ಶಿಕ್ಷಣದ ಹಲವು ಗುರಿಗಳಲ್ಲಿ ಒಂದು. ಇದೊಂದನ್ನೇ ಪ್ರತ್ಯೇಕವಾಗಿ ಸಾಧಿಸುವುದು ಸಾಧ್ಯವಿಲ್ಲ. ಅಥವಾ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಅಕ್ಷರಜ್ಞಾನದ ಜತೆಗೆ ಲಭಿಸುತ್ತಿರುವ ಶಿಕ್ಷಣದ ಆಶಯವನ್ನು ನಾವೀಗ ನೋಡಬೇಕು. ಇದು ತೀರಾ ಸುಲಭದ ಕೆಲಸವಲ್ಲ. ಎರಡು ಉದಾಹರಣೆಗಳಿಂದ ಶಿಕ್ಷಣದ ಆಶಯದ ಸ್ವರೂಪದಲ್ಲಿನ ಕೆಲವು ಅಂಶಗಳನ್ನು ವಿವರಿಸುತ್ತೇನೆ.

ನನ್ನ ಮೊದಲ ಉದಾಹರಣೆ, ಪ್ರಖ್ಯಾತವಾದ 'ಗೋವಿನ ಹಾಡು', ಸತ್ಯ ಮತ್ತು ಪ್ರಾಮಾಣಿಕತೆಗಳ ಎದುರಿನಲ್ಲಿ ಹಿಂಸೆ, ಕ್ರೌರ್ಯಗಳು ನಿಷ್ಕ್ರಿಯವಾಗುತ್ತವೆಂದು ಹೇಳಲು 'ಗೋವಿನ ಹಾಡು' ಅನ್ಯೋಕ್ತಿಯ ಕ್ರಮವನ್ನು ಬಳಸುತ್ತದೆ.

ಪುಣ್ಯಕೋಟಿ ಎನ್ನುವ ಹಸುವಿನ ಪ್ರಾಮಾಣಿಕತೆ ಹುಲಿಯೊಂದರ ಕ್ರೌರ್ಯವನ್ನು ತಣ್ಣಗಾಗಿಸಿದ ಕತೆಯೊಂದನ್ನು ಓದುವವರ ಹೃದಯ ಕರಗುವಂತೆ ಈ ಕೃತಿ ನಿರೂಪಿಸುತ್ತದೆ. ಬದುಕಿನಲ್ಲಿ ಸತ್ಯ ಪ್ರಾಮಾಣಿಕತೆಗಳನ್ನು ಪರಮ ಮೌಲ್ಯಗಳನ್ನಾಗಿ ರೂಢಿಸಿಕೊಳ್ಳಬೇಕೆಂದೂ, ಅದು ಭಾರತೀಯ ಸಂಸ್ಕೃತಿಯ ತಿರುಳೆಂದೂ ಬೋಧಿಸುವ ಕನ್ನಡಿಗರೆಲ್ಲಾ ತಪ್ಪದೇ ಈ ಕೃತಿಯನ್ನು ಉದ್ಧರಿಸುತ್ತಾರೆ. ಆದರೆ ಈ ಕೃತಿ ಇಷ್ಟು ಸರಳವಾಗಿಲ್ಲ.

ಕಾಳಿಂಗನೆಂಬ ಗೊಲ್ಲನಲ್ಲಿದ್ದ ಹಸುಗಳು ಮೇಯಲೆಂದು ಹೋಗುತ್ತವೆ. ಹಿಂತಿರುಗಿ ಬರುವಾಗ ಹುಲಿ ಅಡ್ಡಗಟ್ಟುತ್ತದೆ. ಎಲ್ಲ ಹಸುಗಳೂ ಚೆಲ್ಲಾಪಿಲ್ಲಿಯಾಗಿ ಓಡಲಾರಂಭಿಸಿದರೂ ಪುಣ್ಯಕೋಟಿ ಎಂಬ ಗೋವು ಅನ್ಯಮನಸ್ಕತೆಯಿಂದ ಹುಲಿಗೆ ಸಿಕ್ಕಿಬೀಳುತ್ತದೆ. ತನ್ನ ಸಾವು ನಿಶ್ಚಿತವೆಂದುಕೊಂಡು ದೊಡ್ಡಿಯಲ್ಲಿರುವ ತನ್ನ ಕರುವಿಗೆ ಹಾಲುಣಿಸಿ ಬರಲು ಅಪ್ಪಣೆ ಕೇಳುತ್ತದೆ. ಮೊದಲು ಅನುಮತಿಯನ್ನು ನಿರಾಕರಿಸಿದ ಹುಲಿ ಆಮೇಲೆ 'ಆಗಲಿ' ಎನ್ನುತ್ತದೆ. ಮನೆಗೆ ಬಂದ ಹಸು ಗೋಳಿನ ಮಧ್ಯೆ ಮಗನನ್ನು, ಗೆಳತಿಯರನ್ನು ಬೀಳ್ಕೊಂಡು ಹುಲಿಯ ಮನೆಗೆ ಬರುತ್ತದೆ. ಹುಲಿಗೆ ಈ ಸತ್ಯನಿಷ್ಠೆ ಅನಿರೀಕ್ಷಿತ ಆಘಾತ. ಆಗ ಅದು ನಿನ್ನಂತಹವಳನ್ನು ತಿಂದರೆ 'ಮೆಚ್ಚನಾ ಜಗದೀಶ'ನು ಎಂದು ಹೇಳಿ ನೆಗೆದು ಬಿದ್ದು ಸಾಯುತ್ತದೆ. ಗೋವು ಹಿಂತಿರುಗುತ್ತದೆ. ಹಟ್ಟಿಯಲ್ಲಿ ಹಬ್ಬ ಮಾಡುತ್ತಾರೆ. ಈ ಕಥೆಗೆ ಮೊದಲು ಕಾಳಿಂಗ ಗೊಲ್ಲನ ಐಷಾರಾಮಾದ ದಿನಚರಿಯ ವಿವರಗಳಿವೆ. ಪುಣ್ಯಕೋಟಿ ಮತ್ತು ಹರಿಶ್ಚಂದ್ರ ಇವರ ಸತ್ಯದ ಕಲ್ಪನೆಗಳಲ್ಲಿ ಹೋಲಿಕೆ ಇದೆ. ಕರ್ತವ್ಯ ಮತ್ತು ಸತ್ಯ ಇವುಗಳ ನಡುವೆ ಆಯ್ಕೆ ಬಂದಾಗ ಇಬ್ಬರೂ ಸತ್ಯವನ್ನೇ ಆರಿಸಿದ್ದಾರೆ. ಈ ಬಗೆಯ ಆಯ್ಕೆ ಆದರ್ಶವೂ ಅಲ್ಲ ಶುದ್ಧವೂ ಅಲ್ಲವೆಂದು ಯಾರಾದರೂ ಹೇಳಬಹುದು.

ಅಲ್ಲದೆ ಇಲ್ಲಿನ ಗೋವು ತನಗೆ ಬಂದ ಈ ಸಾವಿನ ಬೆದರಿಕೆಯನ್ನು ಅನಿವಾರ್ಯವೆಂದು ಭಾವಿಸುತ್ತದೆ; ತಾನು ಆ ಬಗೆಯ ಸಾವಿಗೆ ಬದ್ಧವೆಂದೂ ತಿಳಿದುಕೊಳ್ಳುತ್ತದೆ. ಕಾಡಿನ ನ್ಯಾಯದಲ್ಲಿ ಬಲಿಷ್ಠ ಪ್ರಾಣಿಗೆ ಆಹಾರವಾಗುವುದು ನ್ಯಾಯವೇ ಇರಬಹುದು. ಆದರೆ ಗೋವು ಈಗ ಬದುಕುತ್ತಿರುವ ವ್ಯವಸ್ಥೆ ಬೇರೆಯೇ ರೀತಿಯದು; ಹೆಚ್ಚು ಸಾಮಾಜಿಕವಾದದ್ದು. ಕಾಳಿಂಗಗೊಲ್ಲ ಅದನ್ನು ಸಾಕುತ್ತಿದ್ದಾನೆ; ಉಳಿದ ಹಸುಗಳನ್ನೂ ಕೂಡ. ದಿನವೂ ಅವು 'ತುಂಬಿ ಸೂಸುವಂತೆ' ಕರೆದ ಹಾಲನ್ನೂ ಬಳಸುತ್ತಿದ್ದಾನೆ. ಹಸುಗಳು ಅವನಿಗೆ ಉತ್ಪಾದನೆಯ ಮೂಲಗಳು. ಇಂತಹ ವ್ಯವಸ್ಥೆಯಲ್ಲಿ ಸಾಮಾನ್ಯವಾಗಿ ಕೆಲವು ನಿಯಮಗಳೂ ಇರುತ್ತವೆ; ಅಥವಾ ಇರಬೇಕು. ಈ ಹಸುಗಳ ರಕ್ಷಣೆ ಗೊಲ್ಲನಿಗೆ ಸೇರಿದ ಕರ್ತವ್ಯ. ಈ ಕರ್ತವ್ಯವನ್ನು ನಿರ್ವಹಿಸದ ಗೊಲ್ಲ ಹಸುಗಳನ್ನು ಉತ್ಪಾದನೆಗಾಗಿ ಬಳಸಲಾಗದು. ಗೋವಿಗೂ ಕೂಡ ಇದರ ಅರಿವು ಇರಬೇಕು. ತನ್ನನ್ನು ಬಳಸುವ ಗೊಲ್ಲ ತನಗೆ ಆಗುವ ಅಪಘಾತಗಳಿಂದ ರಕ್ಷಣೆ ಕೊಡಬೇಕು; ಹಾಗೆ ಮಾಡದೇ ತನ್ನನ್ನು ಕೇವಲ ಉತ್ಪಾದನೆಗೆ ಬಳಸುವುದು ಶೋಷಣೆ ಎನ್ನುವುದು ಸಾಮಾಜೀಕರಣಗೊಂಡ ಗೋವಿಗೆ ಅರಿವಾಗದೇ ಹೋದುದು ಅದರ ಬೋಳೆತನವನ್ನು ತೋರಿಸುತ್ತದೆ.

ಹೋಗಲಿ. ಇಡೀ ಘಟನೆಯೇ ಅನಿರೀಕ್ಷಿತವೆಂದುಕೊಳ್ಳೋಣ. ಹೀಗಾದರೂ ಗೊಲ್ಲನನ್ನು ಶೋಷಣೆಯ ಆರೋಪದಿಂದ, ಹಸುವನ್ನು ಬೋಳೆತನದಿಂದ

ಮುಕ್ತಗೊಳಿಸಬಹುದೇ? ಅದೂ ಸಾಧ್ಯವಿಲ್ಲ. ಮನೆಗೆ ಬಂದ ಗೋವು ತನ್ನ ಮಗನಿಗೆ ಹೇಳುವುದನ್ನು ಗಮನಿಸಿ. 'ಹುಲಿಯ ಬಾಯಿಗೆ ಬೀಳಬೇಡ. ಅದು ಇರುವ ಕಡೆ ಸುಳಿದಾಡಬೇಡ' ಎನ್ನುತ್ತದೆ. ತನಗಾದ ಅನ್ಯಾಯದ ವಿರುದ್ಧ ಸೊಲ್ಲನ್ನು ಎತ್ತುವುದಿಲ್ಲ. ತನ್ನ ಮಗನಿಗೆ ಆ ಅನ್ಯಾಯದ ಪರಿಚಯವನ್ನು ಮಾಡಿಕೊಡುವುದಿಲ್ಲ. ಈ ಸಂದರ್ಭದಲ್ಲಿ ಕೃತಿಯ ಅವಧಾರಣೆ ಭಾವನೆಗಳ ಮೇಲೆ ಮಾತ್ರ ಬೀಳುತ್ತದೆ. ಸತ್ಯ ಕಾಣುವುದೇ ಇಲ್ಲ. ನಾನಿಲ್ಲಿ ಗೋವು ಸಿಡಿದೇಳಬೇಕಿತ್ತು ಎಂದು ವಾದಿಸುತ್ತಿಲ್ಲ. ಏಕೆಂದರೆ ಸಿಡಿದೇಳದ ಸಂದರ್ಭಗಳೇ ಸತ್ಯವಾದವುಗಳು ಅಥವಾ ಘಟನೆಗಳು. ಹಾಗೇನಾದರೂ ಸಿಡಿದೆದ್ದಿದ್ದರೆ ಅದು ಕೇವಲ ಕನಸುಗಾರಿಕೆಯೋ, ಅವ್ಯವಹಾರಿಕವೋ ಆಗುತ್ತಿತ್ತೆಂದು ನನಗನ್ನಿಸುತ್ತದೆ.[1]

ನನ್ನ ಇರಾದೆ ಬೇರೆ. ತನಗಾದ ಅನ್ಯಾಯುವನ್ನೂ, ಶೋಷಣೆಯನ್ನೂ ಗುರುತಿಸಿಕೊಳ್ಳದ ಗೋವನ್ನು ಹಾಡಿ ಹೊಗಳುವುದರಲ್ಲಿ ಏನು ಅರ್ಥವಿದೆ? ಶುದ್ಧ ಬೋಳೆತನದ ಪುಣ್ಯಕೋಟಿಯನ್ನು ವೈಭವಿಸುವುದರ ಮೂಲಕ ಶೋಷಣೆಯ ಪರಿಣಾಮುವನ್ನು ಮುಚ್ಚಿಡಲು ಈ ಕೃತಿ ಬಯುಸುತ್ತದೆ. ಈ ಮೋಸವನ್ನು ಬಯಲಿಗೆಳೆಯುವುದರ ಬದಲು ನಮ್ಮ ಶಿಕ್ಷಣ ತನ್ನ ಆಶಯದಲ್ಲಿ ಗೋವನ್ನು ಆದರ್ಶವನ್ನಾಗಿ ಬೋಧಿಸುತ್ತದೆ.

ಈಗ ಇನ್ನೊಂದು ಉದಾಹರಣೆ : ಇದೊಂದು ಜನಪದ ತ್ರಿಪದಿ. ಈ ತ್ರಿಪದಿಯಲ್ಲಿ ಒಬ್ಬ ಮಕ್ಕಳಿಲ್ಲದವಳ–ಬಹುಶಃ ಗಂಡುಮಕ್ಕಳಿಲ್ಲದವಳ–ನ್ನು ಕುರಿತ ಸಹಾನುಭೂತಿಯ ಮಾತುಗಳಿವೆ. "ಮಕ್ಕಳಿಲ್ಲದ ಹೆಂಗಸಿನ ಜನ್ಮ ಏತಕ್ಕೆ ಬಂತು? ಅವಳ ಬದುಕು ಬಾಡಿಗೆ ಎತ್ತು ದುಡಿದ ಹಾಗೆ, ಉಂಡು ಎಸೆವ ಬಾಳೆ ಎಲೆಗೂ ಬಂಜೆಯ ಬದುಕಿಗೂ ಏನೂ ವ್ಯತ್ಯಾಸವಿಲ್ಲ". ಈ ತ್ರಿಪದಿ ಹುಟ್ಟಿದ ವ್ಯವಸ್ಥೆಯಲ್ಲಿ ಹೆಣ್ಣಿನ ಬದುಕಿನ ಸಾರ್ಥಕತೆಗೂ ಅವಳು ಮಕ್ಕಳನ್ನು ಹೆರುವುದಕ್ಕೂ ಸಂಬಂಧವಿದೆಯೆಂದು ನಂಬಲಾಗಿತ್ತು. ಆದ್ದರಿಂದ ಆ ವ್ಯವಸ್ಥೆಯಲ್ಲಿ ಬದುಕುವ ಹೆಣ್ಣು ತನ್ನ ಬಂಜೆತನ ಅಸಹನೀಯವೆಂದುಕೊಂಡಿದ್ದರೆ ಆಶ್ಚರ್ಯವಿಲ್ಲ. ತ್ರಿಪದಿಯ ಎರಡೂ ಹೋಲಿಕೆಗಳೂ ಬಂಜೆತನದ ವಿರುದ್ಧ ಸಾಮಾಜಿಕ ಪ್ರತಿಕ್ರಿಯೆಗಳೆಂದು ಗಮನಿಸಬೇಕು. ಇಲ್ಲಿನ ನೋವು ಮಕ್ಕಳಾಗದೇ ಇದ್ದುದರಿಂದ ಆದದ್ದಲ್ಲ. ಆಗದೇ ಇದ್ದುದರಿಂದ ಸಾಮಾಜಿಕವಾಗಿ ತಾನು ಎದುರಿಸಬೇಕಾದ ಪ್ರತಿಕ್ರಿಯೆಯಿಂದ ಉಂಟಾದದ್ದು.

ಈ ತ್ರಿಪದಿ ನಮ್ಮ ಶಿಕ್ಷಣ ಪದ್ಧತಿಯ ಪಠ್ಯಕ್ರಮದಲ್ಲಿದೆ. ಇದರ ಉದ್ದೇಶವೇನು? ಜನಪದ ಕವಿಗಳ ಉಪಮಾ ಕೌಶಲ್ಯವನ್ನು ವಿವರಿಸುವುದಷ್ಟೇ ಅಲ್ಲ, ಹೆಣ್ಣಿನ ಜನ್ಮದ ಸಾರ್ಥಕತೆಗೂ ಬಂಜೆತನಕ್ಕೂ ಸಂಬಂಧವಿಲ್ಲವೆಂದು ತಿಳಿಯಬೇಕಾದ ಈ ಕಾಲದಲ್ಲಿ ಈ ತ್ರಿಪದಿ ಹೇಳುವ ಪ್ರತಿಗಾಮಿತ್ವವನ್ನು ಗಮನಿಸಿ. ನಾನಿಲ್ಲಿ ಹೆಣ್ಣು ಮಕ್ಕಳಿಗಾಗಿ ಆಸೆ ಪಡುವ ಭಾವನಾತ್ಮಕ ಸಂಗತಿಯನ್ನು ಗೇಲಿ ಮಾಡುತ್ತಿದ್ದೇನೆಂದು ತಿಳಿಯಬೇಕಾಗಿಲ್ಲ. ಅದು ನನ್ನ ಉದ್ದೇಶವಲ್ಲ. ಬದಲಾದ ಸಾಮಾಜಿಕ ಪರಿಸರದಲ್ಲಿ ಬಂಜೆತನವನ್ನು ಇಷ್ಟೊಂದು ಕೀಳು ಮಾಡುವ ಈ ತ್ರಿಪದಿ ಹೊಂದುವುದಿಲ್ಲ; ಅಥವಾ ಅಪಾಯಕಾರಿ.

ನಾನು ಈ ಉದಾಹರಣೆಯನ್ನು ಕೊಡುವುದರಲ್ಲಿ ಇನ್ನೊಂದು ಉದ್ದೇಶವಿದೆ. ಯಾರಾದರೂ ಒಂದು ಪ್ರಶ್ನೆಯನ್ನು ಹೀಗೆ ಕೇಳಬಹುದು. "ಈ ತ್ರಿಪದಿ ಶಿಕ್ಷಣ ಪಠ್ಯದ

ಮೂಲಕವೇ ಜನರಿಗೆ ಬರಬೇಕೆಂದೇನೂ ಇಲ್ಲ. ಅದು ಅಶಿಕ್ಷಿತರಲ್ಲೂ ಇರುತ್ತದಲ್ಲ?"- ಉತ್ತರ : ಅದು ಶಿಕ್ಷಿತರಲ್ಲಿ ಇರಲಿ, ಅಶಿಕ್ಷಿತರಲ್ಲಿ ಇರಲಿ ಅದರ ಆಶಯ ಮಾತ್ರ ಅಕಾಲಿಕ. ಶಿಕ್ಷಣ ಅಕಾಲಿಕವಾದ ಆಶಯವನ್ನು ಮೌಲ್ಯವ್ಯವಸ್ಥೆಯನ್ನು ಪ್ರತಿಪಾದಿಸುವುದು, ಸಮರ್ಥಿಸುವುದು ಸಾಧುವೇ? ಹೀಗೆ ಮಾಡುವುದರ ಮೂಲಕ ಅಕಾಲಿಕ ಮೌಲ್ಯವ್ಯವಸ್ಥೆಯಲ್ಲಿ ನಂಬುಗೆಯನ್ನು ಬೆಳಸಿದ ಸಾಮಾಜಿಕ ಪಾಪಕ್ಕೆ ಶಿಕ್ಷಣ ವ್ಯವಸ್ಥೆ ಬದ್ಧವಾಗುತ್ತದೆ.

ಈಗ ಮೊದಲು ಬಿಟ್ಟಲ್ಲಿಗೆ ಬರೋಣ. ಅಕ್ಷರಜ್ಞಾನದ ಜತೆಗೆ ಬರುವ ಶಿಕ್ಷಣದ ಆಶಯ ಪ್ರಜೆಯ ಪ್ರಜ್ಞಾವಲಯವನ್ನು ಶುದ್ಧರೂಪದಲ್ಲಿ ಇರಗೊಡಿಸುವುದಿಲ್ಲ. ಆದ್ದರಿಂದ ಈ ಅಕ್ಷರಜ್ಞಾನ ಬರಬೇಕೆಂದು ಬಯಸುವಾಗ ಮರೆಯದೇ ಇರಬೇಕಾದ ಸಂಗತಿಯೆಂದರೆ ಶಿಕ್ಷಣದ ಆಶಯವನ್ನು ಮೊದಲು ಬದಲಾಯಿಸುವುದು. ಹಾಗೆ ಮಾಡದೇ ಇದ್ದಲ್ಲಿ ಶಿಕ್ಷಣ ಕೂಡ ಈ ದೇಶದಲ್ಲಿ ನಿಧಾನವಿಷವಾಗಬಹುದೆಂದು ನನಗೆ ಅನ್ನಿಸಿದೆ. ಏಕೆಂದರೆ ಶಿಕ್ಷಿತರು ಪಡೆಯುವ, ರೂಢಿಸಿಕೊಳ್ಳುವ ಮೌಲ್ಯವ್ಯವಸ್ಥೆ ಸದ್ಯದ ಶೋಷಣೆಯ ವ್ಯವಸ್ಥೆಯನ್ನು ಸಮರ್ಥಿಸುವುದರಿಂದ ಜನಾಂಗಗಳು ಬಂದರೂ ವ್ಯವಸ್ಥೆ ಮಾತ್ರ ಯಥಾಪ್ರಕಾರ ಮುಂದುವರಿಯುವ ಸಂಭವವಿದೆ.

**ಟಿಪ್ಪಣಿ**

1. ಹರಿಶ್ಚಂದ್ರನ ಕತೆಯನ್ನು ಹೇಳಿದ ಮಾಸ್ತರು ನೀತಿಯನ್ನು ವಿದ್ಯಾರ್ಥಿಗಳಿಂದ ಉತ್ತರವನ್ನಾಗಿ ಬಯಸಿದರಂತೆ. ಒಬ್ಬ ಎದ್ದು ನಿಂತು "ಸತ್ಯ ಹೇಳಿದರೆ ಸುಡುಗಾಡಿಗೆ ಹೋಗಬೇಕಾಗುತ್ತೆ" ಎಂದನಂತೆ. ಈ ಹಾಸ್ಯ ಚಟಾಕಿಯು ಕೂಡಾ ಕನಸುಗಾರಿಕೆಯ ಫಲ. ಭಾರೀ ಭಾಷಣಗಳ ನಡುವೆ ಉಪಸ್ಥಿತರಿದ್ದೂ ಆಗಾಗ ಬೇಸರದ ಚಿಹ್ನೆಯಾಗಿ ಚಪ್ಪಾಳೆ ತಟ್ಟುವಂತೆ. ಆದರೆ ಎದ್ದು ಹೋಗುವುದಿಲ್ಲ.

# ಜ್ಞಾನ ಪ್ರಸಾರ ಹಾಗೂ ಅಕ್ಷರ ಕಲಿಕೆ

ಜ್ಞಾನ ಎಂದರೆ ತಿಳಿದುಕೊಳ್ಳುವುದು. ನಾನು, ನನ್ನ ಸುತ್ತಲಿನವರು, ನನ್ನ ಸುತ್ತಲಿನ ಸಂಗತಿಗಳು–ಹೀಗೆ ಜಗತ್ತನ್ನು ಪ್ರತ್ಯೇಕ ಪ್ರತ್ಯೇಕ ನೆಲೆಗಳಲ್ಲಿ ಹಾಗೂ ಇವುಗಳಲ್ಲಿನ ಅಂತರ ಸಂಬಂಧಗಳನ್ನು ತಿಳಿಸುವ ವಿಶಿಷ್ಟ ನೆಲೆಗಳಲ್ಲಿ ಗ್ರಹಿಸಿ ಅರ್ಥಮಾಡಿಕೊಂಡದ್ದೆಲ್ಲವೂ ಜ್ಞಾನವೇ. ಇದನ್ನು ನಿರ್ವಹಿಸಬಲ್ಲ ಬುದ್ಧಿಶಕ್ತಿ ಮಾನವರ ಮೆದುಳಿಗಿದೆ. ಬೇರೆ ಪ್ರಾಣಿಗಳಿಗಿಂತ ಮಾನವರು ವಿಶಿಷ್ಟವೆನಿಸುವುದು ಅವರು ಇಂಥ ಬುದ್ಧಿಜೀವಿ ಎಂಬುದರಿಂದಲೇ. ಇನ್ನೂ ಸರಿಯಾಗಿ ಹೇಳಬೇಕೆಂದರೆ ಅವರು ಹಾಗೆ ಅದನ್ನು ತಿಳಿದುಕೊಂಡಿದ್ದಾರೆ. ಹೀಗೆ ಅವರು ನಂಬಲು ಇರುವ ಕಾರಣ ಹಾಗೂ ಆಧಾರವೆಂದರೆ ಅವರ ಗ್ರಹಿಕೆ ಮಾತ್ರವೇ. ಅಂದರೆ ತಾವು ಬುದ್ಧಿಜೀವಿ ಎಂದು ತಮ್ಮಷ್ಟಕ್ಕೇ ಒಂದು ಸರ್ಟಿಫಿಕೇಟನ್ನು ಕೊಟ್ಟುಕೊಂಡಿದ್ದಾರೆ. ತಮ್ಮಂತೆ ಬುದ್ಧಿ ಇರುವ ಜೀವಿಗಳು ಈ ಭೂಮಿಯ ಮೇಲಂತೂ ಇಲ್ಲ, ಇತರ ಗ್ರಹಗಳಲ್ಲಿಯಾದರೂ ಇರಬಹುದೇ ಎಂಬ ಹುಡುಕಾಟವನ್ನು ನಡೆಸಿದ್ದೇವೆ ಎಂದು ಹೇಳುತ್ತಿದ್ದಾರೆ. ಅಂದರೆ ಬುದ್ಧಿ ಹಾಗೂ ಜ್ಞಾನ ಎಂಬುದನ್ನು ತಮ್ಮ ನೇರಕ್ಕೆ ಅನುಗುಣವಾಗಿ ನಿರ್ವಚಿಸಿ ಕೊಳ್ಳುತ್ತಿದ್ದಾರೆ. ಹಾಗಿಲ್ಲದೆ ಈ ನಿರ್ವಚನ ವಿಧಾನವೇ ಪೊಳ್ಳಾಗಿದ್ದು, ಬೇರೆ ಜೀವಿಗಳು ಮಾನವರ ಬಗ್ಗೆ 'ಏನು' ಯೋಚಿಸುತ್ತಿರಬಹುದು' ಎಂಬ ಪ್ರಶ್ನೆ ಕಾಲ್ಪನಿಕವಾಗಿಯಾದರೂ ನಮ್ಮೆದುರು ನಿಂತರೆ, 'ನಾನು ಬುದ್ಧಿಜೀವಿ' ಎಂಬ ಮಾತು ಅಹಂಕಾರದ, ಧಾರ್ಷ್ಟ್ಯದ ಪ್ರತೀಕವಲ್ಲವೇ ಎನ್ನಿಸಿಬಿಡುತ್ತದೆ. ನಮ್ಮ ತತ್ವಶಾಸ್ತ್ರಜ್ಞರಂತೂ ಈ ಪ್ರಶ್ನೆಯನ್ನು ವಿವಿಧ ನೆಲೆಗಳಲ್ಲಿ ಎತ್ತಿದ್ದಾರೆ. ಬಹುಶಃ ಯಾರಿಗೂ ಸ್ಪಷ್ಟ ಉತ್ತರ ಸಿಗುವುದು ಅಸಾಧ್ಯವೇನೋ.

ಜ್ಞಾನ, ಬುದ್ಧಿ ಎಂಬ ಸಂಗತಿಗಳು ಸಾಪೇಕ್ಷ ಸಂಗತಿಗಳೆನಿಸುತ್ತವೆ. ಬೇರೆ ಗ್ರಹಗಳಲ್ಲಿ ಜೀವಿಗಳಿವೆಯೋ, ಅದರಲ್ಲೂ ಬುದ್ಧಿಜೀವಿಗಳಿವೆಯೋ ಎಂದು ನಾವು ಪ್ರಶ್ನಿಸುತ್ತಿದ್ದೇವೆಯಾದರೂ ಈ ಪ್ರಶ್ನೆಯನ್ನು ನಮಗೆ ನಾವೇ ಹಾಕಿಕೊಳ್ಳುತ್ತಿದ್ದೇವಷ್ಟೆ. ಒಂದು ವೇಳೆ ಈ ಪ್ರಶ್ನೆಗೆ 'ಇವೆ' ಎಂಬ ಉತ್ತರವೇ ಇರಬಹುದು. ಆದರೆ ಆ ಪ್ರಶ್ನೆಯನ್ನು ಸರಿಯಾಗಿ 'ತಲುಪಿಸುವ' ಹಾಗೂ ಉತ್ತರವನ್ನು 'ಪಡೆಯುವ' ಸಾಮರ್ಥ್ಯವೇ ಇಲ್ಲದಿರಬಹುದೇ? ಹೀಗೆಲ್ಲಾ ವಾದ ಮಾಡುತ್ತಾ, ಚಿಂತಿಸುತ್ತಾ ನಾವು ದೇವರು ಹಾಗೂ ಅಗೋಚರ ಶಕ್ತಿಗಳಿಗೆ ಬಂದು ನಿಲ್ಲಬೇಕಾಗುತ್ತದೆ. ದೇವರು ಅಥವಾ ಅಗೋಚರ ಶಕ್ತಿಗಳ ಬಳಿಗೆ ಹೋಗುವುದೆಂದರೆ ಶರಣಾಗತರಾದಂತೆಯೇ. ಜ್ಞಾನದ ವಿಸ್ತಾರ ಪರಿಧಿಯನ್ನು ನನ್ನ ದೃಷ್ಟಿ ಶಕ್ತಿಯ ಮಿತಿಯೊಳಗೆ ಹಿಡಿಯಲಾಗದು ಎಂಬ ಅರಿವು ಮೂಡುವುದು ಸಹ ಒಂದು ನೆಲೆಯ ಜ್ಞಾನಾರ್ಜನೆಯೇ. ಈ ನೆಲೆಯನ್ನು ನಿಜವಾಗಿ ತಲುಪಿದಾಗ ವ್ಯಕ್ತಿ ನಮ್ರನಾಗುತ್ತಾನೆ–ಇದು ಸೋಲಲ್ಲ. ನನ್ನನ್ನು ಸರಿಯಾಗಿ ಅರಿಯುವಲ್ಲಿ

ಏರಿದ ಗೆಲುವಿನ ಒಂದು ಮೆಟ್ಟಲು. ಈ ಏರುಪಿಕೆ ನಿರಂತರವಾಗಿ ನಡೆಯಬೇಕಾದದ್ದು. ಇಲ್ಲಿ ಎಲ್ಲರೂ ಸಹ ಪ್ರಯಾಣಿಕರು. ನಾಲ್ಕು ಮೆಟ್ಟಲು ಹಿಂದೆ ಅಥವಾ ಮುಂದೆ ಅಷ್ಟೆ. ಅಂದರೆ, 'ಪೂರ್ಣಜ್ಞಾನ' ಎಂಬುದು ಇಲ್ಲ. ಜ್ಞಾನದ ವಿವಿಧ ಹಂತಗಳಲ್ಲಿ ಎಷ್ಟನ್ನು ಏರಬಲ್ಲೆ ಎಂಬ ವಿನಮ್ರ ಪ್ರಯತ್ನ ಮಾತ್ರವೇ ನಿಜವಾದ 'ಜ್ಞಾನ'ದ ಹಾದಿ.

ಆದರೆ, ಇಂದು ಶಿಕ್ಷಿತರು, ವಿದ್ಯಾವಂತರು, ಬುದ್ಧಿಜೀವಿಗಳು ಎಂದು ತಮ್ಮನ್ನು ತಾವೇ ಕರೆದುಕೊಳ್ಳುತ್ತಿರುವ ಒಂದು ಗುಂಪು ಇದೆ. ಇವರೇ ಅಕ್ಷರ ಕಲಿತವರು, ಓದು ಬರಹ ಬಲ್ಲವರು ಹಾಗೂ ವ್ಯವಸ್ಥಿತವಾಗಿ ಈ ಕ್ರಮದಲ್ಲಿ ಶಾಲೆ ಕಾಲೇಜುಗಳಲ್ಲಿ ಓದಿ ಡಿಗ್ರಿಗಳನ್ನು ಪಡೆದವರು. ಇವರು ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುವುದಷ್ಟೇ ಅಲ್ಲದೆ, ತಮ್ಮಂತೆ ಓದು ಬರಹಗಳನ್ನು ತಿಳಿಯದ ಜನರನ್ನು ಅಶಿಕ್ಷಿತರು, ಅಜ್ಞಾನಿಗಳು, ಎಂದು ಪರಿಗಣಿಸಿ ಕೀಳುದೃಷ್ಟಿಯಿಂದ ಹೆಚ್ಚೆಂದರೆ ಕರುಣೆಯ ದೃಷ್ಟಿಯಿಂದ ಕಾಣುತ್ತಾರೆ. ವ್ಯವಸ್ಥೆಯಲ್ಲಿರುವ ಹಲವು ಕಾರಣಗಳಿಂದಾಗಿ ಈ ಮಾತು ನಿಜವೆಂದೇ ತೋರಿಬಿಡುತ್ತದೆ. ಆದರೆ, ಸ್ವಲ್ಪ ನಿಧಾನವಾಗಿ ಹಾಗೂ ವಸ್ತುನಿಷ್ಠವಾಗಿ ಈ ಮಾತನ್ನು ವಿಶ್ಲೇಷಿಸಿದರೂ ನಿಜವಾದ ಚಿತ್ರ ಬೇರೆಯೇ ಎಂಬುದು ತಿಳಿಯಲು ಸಾಧ್ಯ

ಇಲ್ಲಿ ಕೆಲವು ಪ್ರಶ್ನೆಗಳನ್ನು ಕೇಳಿಕೊಳ್ಳೋಣ. 'ಶಿಕ್ಷಿತ'ರೆಲ್ಲರೂ 'ತಿಳುವಳಿಕೆ' ಯುಳ್ಳವರೇ? ಇದ್ದರೂ, ಒಬ್ಬ ವ್ಯಕ್ತಿ ಪಡೆಯುವ 'ತಿಳುವಳಿಕೆ'ಗೆ ಮಿತಿಗಳಿಲ್ಲವೆ? ಒಂದಿಷ್ಟು ಪ್ರಾಮಾಣಿಕತೆಯಿಂದ ಈ ಪ್ರಶ್ನೆಗಳನ್ನು ಉತ್ತರಿಸಿದರೆ ಸಾಕು; ತಿಳುವಳಿಕೆ ಹಾಗೂ ಅಕ್ಷರಜ್ಞಾನಗಳನ್ನು ಸಮಾನಾರ್ಥಕಗಳೆಂದು ಬಳಸಲಾಗದೆಂಬುದು ತಿಳಿಯುತ್ತದೆ. ಅಕ್ಷರ ಜ್ಞಾನ ಎಂಬುದು ತಿಳುವಳಿಕೆಯ ಎಷ್ಟೋ ಬಗೆಗಳಲ್ಲಿ ಒಂದು ಅಷ್ಟೆ. ಆದರೆ, ಇಂದಿನ ವ್ಯವಸ್ಥೆಯಲ್ಲಿನ ಹಲವು ಕಾರಣಗಳಿಂದಾಗಿ ಇದು ಎಷ್ಟೊಂದು ಪ್ರಮುಖ ಸ್ಥಾನವನ್ನು ಪಡೆದಿದೆಯೆಂದರೆ, ತಿಳುವಳಿಕೆ ಎಂದರೆ 'ಅಕ್ಷರ ಜ್ಞಾನ ಮಾತ್ರವೇ' ಎಂಬಂತಾಗಿದೆ. ಮನುಷ್ಯರಿಗಿಂತ ಮನುಷ್ಯರ ಮಾತಿಗಿಂತ 'ಅಕ್ಷರ'ವೇ ಮುಖ್ಯವೆನಿಸಿಬಿಡುವ ಒಂದು ಸ್ಥಿತಿಯನ್ನು ಈ ವ್ಯವಸ್ಥೆ ಹುಟ್ಟುಹಾಕಿದೆ. ಮಾನವರ ನಾಗರಿಕತೆಯ ಬೆಳವಣಿಗೆಯ ಇತಿಹಾಸದಲ್ಲಿ ಮಾತನ್ನು ಕಲಿತದ್ದು ಒಂದು ಪ್ರಮುಖ ಘಟ್ಟವಾದರೆ, ಓದು ಬರಹದ ಘಟ್ಟ ತೀರಾ ಇತ್ತೀಚಿನದು. ಎಂದಮೇಲೆ ಈ ಘಟ್ಟವನ್ನು ತಲುಪುವ ಮುನ್ನ ಮಾನವ ಬುದ್ಧಿವಂತರಾಗಿರಲಿಲ್ಲವೆ? ಓದು ಬರಹದ ಈ ಘಟ್ಟವನ್ನು ತಲುಪಿದ್ದು ಈ 'ಬುದ್ಧಿ'ಯಿಂದಲೇ ಅಲ್ಲವೆ? ಅಂದರೆ, ಈ ಘಟ್ಟದವರೆಗೂ ಇಡೀ ನಿರ್ವಹಣೆ ಓದು ಬರಹದ ನೆರವಿಲ್ಲದೆಯೇ ನಡೆಯುತ್ತಿತ್ತಲ್ಲವೇ? ಈ ಅವಧಿಯಲ್ಲಿ ಎಷ್ಟೊಂದು ಜ್ಞಾನಕ್ಷೇತ್ರಗಳಲ್ಲಿ ಎಂತೆಂತಹ ಅವಿಷ್ಕಾರಗಳು ನಡೆದಿಲ್ಲ? ವಿಜ್ಞಾನ. ತಂತ್ರಜ್ಞಾನ ಯಾವೊಂದು ಕ್ಷೇತ್ರವೂ ವಿಕಸನವಾಗದೆ ಉಳಿದಿರಲಿಲ್ಲವಲ್ಲ.

ಆದರೂ. 'ಅಕ್ಷರ'ದ ಆವಿಷ್ಕಾರ ತೀರಾ ಪ್ರಮುಖವಾದ ಒಂದು ಘಟ್ಟವೇ ಹೌದು. ಅಕ್ಷರದ ಬಳಕೆಯ ನಂತರದಲ್ಲಿ ಮಾನವರ ಸಾಮಾಜಿಕ ಬದುಕು ಹೆಚ್ಚು ಹೆಚ್ಚು ಯಾಂತ್ರಿಕವಾಗುತ್ತಾ ನಡೆದಿದೆ. ಪ್ರತಿಯೊಂದನ್ನು ದಾಖಲಿಸುವ ಭರದಲ್ಲಿ ಸ್ವತಃ ಮನುಷ್ಯರಿಗೆ ಹಾಗೂ ಅವರ ಮಾತಿಗೇ ಬೇರೆ ಬೆಲೆ ಇಲ್ಲವಾಗುತ್ತಿದೆ ಎಂಬಂತಹ ಆರೋಪಗಳ ನಡುವೆಯೂ 'ಅಕ್ಷರ'ದ ಸಾಧನೆ ವಿಶಿಷ್ಟವೇ ಆಗಿದೆ. ಒಂದು ಸಮಾಜ ವ್ಯವಸ್ಥೆಯು ಕ್ರಮಬದ್ಧವಾಗಿ ನಡೆಯುವಲ್ಲಿ 'ಅಕ್ಷರ'ದ ಬಳಕೆ ಅನಿವಾರ್ಯ ಎಂಬುದು ಇಂದಿನ ವಾಸ್ತವ.

ಇದನ್ನು ಗಮನಕ್ಕೆ ತೆಗೆದುಕೊಂಡಾಗ ಅಕ್ಷರ ಕಲಿಕೆಯ ಅನಿವಾರ್ಯತೆಯನ್ನು ಎಲ್ಲ ವಾದವಿವಾದಗಳ ನಡುವೆಯೂ ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ, ಬಲು ಎಚ್ಚರದಿಂದ ಜ್ಞಾನ ಹಾಗು ಅಕ್ಷರ ಕಲಿಕೆಗಳನ್ನು ಪ್ರತ್ಯೇಕಿಸಿ, ಎರಡಕ್ಕೂ ಅವುಗಳಿಗೆ ಉಚಿತವಾದ ಮಹತ್ವವನ್ನು ಕೊಡಬೇಕಾಗುತ್ತದೆ. ಶಿಕ್ಷಣಕ್ರಮದಲ್ಲಿ ಇವೆರಡರ ಸಮನ್ವಯವನ್ನು ಸಾಧಿಸುವುದು ತೀರಾ ಅವಶ್ಯಕ. ಶಿಕ್ಷಣದಲ್ಲಿ 'ಅರಿವನ್ನು' ಮೂಡಿಸುವುದೇ ಮುಖ್ಯ ಗುರಿ. 'ಅಕ್ಷರ ಕಲಿಕೆ' ಇದಕ್ಕೆ ಒಂದು 'ಸಾಧನೆ' ಮಾತ್ರ ಎಂಬುದನ್ನು ತಿಳಿಯದಿದ್ದರೆ, ಶಿಕ್ಷಣಕ್ರಮವೊಂದರಲ್ಲಿ ಅನೇಕ ವರ್ಷಗಳನ್ನು ಕಳೆದು 'ಅಕ್ಷರಸ್ಥ'ರಾದ ಮೇಲೂ 'ದಡ್ಡ'ರಾಗಿಯೇ ಉಳಿಯುವ ಜನಾಂಗದ ಸೃಷ್ಟಿಯಾಗುತ್ತದೆ. ಈ ಕ್ರಮದಿಂದ ಕಲಿತವರಿಗೂ ಪ್ರಯೋಜನವಿಲ್ಲ. ಸಮಾಜಕ್ಕೂ ಪ್ರಯೋಜನವಿಲ್ಲ.

ಒಂದು ದೃಷ್ಟಿಯಿಂದ ನೋಡಿದಾಗ ಅಕ್ಷರ ಮಾಧ್ಯಮಕ್ಕೆ ಅತ್ಯಂತ ವಿಸ್ತಾರವಾದ ವ್ಯಾಪ್ತಿ ಇರುವಂತೆ ತೋರಿಬರುತ್ತದೆ. ಒಬ್ಬ ವ್ಯಕ್ತಿಯಲ್ಲಿನ ಅನಿಸಿಕೆಗಳು, ಆಲೋಚನೆಗಳು ಜಗತ್ತಿನ ಮೂಲೆಮೂಲೆಗಳಿಗೂ ತಲುಪಬಹುದಷ್ಟೇ ಅಲ್ಲದೆ, ಮುಂದೆ ಎಷ್ಟೋ ಶತಮಾನಗಳ ಕಾಲ ದಾಖಲೆಯಾಗಿ ಉಳಿಯುವುದೂ ಸಾಧ್ಯ. ವ್ಯವಸ್ಥೆಯೊಂದರಲ್ಲಿ ವ್ಯಾವಹಾರಿಕ ಚಟುವಟಿಕೆಗಳು ಕ್ರಮಬದ್ಧವಾಗಿ ನಡೆಯುವಲ್ಲಿ ಸಹ ಅಕ್ಷರ ಬಳಕೆಯ ಉಪಯುಕ್ತತೆಯನ್ನು ವಿವರಿಸುವ ಅಗತ್ಯವಿಲ್ಲ. ಇಷ್ಟಾದರೂ ಸರಿಯಾದ ರೀತಿಯಲ್ಲಿ ಅಕ್ಷರ ಬಳಕೆಯಾಗದಿದ್ದಾಗ ಅನರ್ಥಗಳಾಗುವುದು ಸುಳ್ಳಲ್ಲ. ಸುಳ್ಳು ಸಂಗತಿಗಳು, ತಪ್ಪು ಸಂಗತಿಗಳು, ಅಪಾರ್ಥದ ಸಂಗತಿಗಳು ದಾಖಲಾಗಿ ಅದೇ ಪ್ರಮಾಣವೆನಿಸುವುದರಿಂದಾಗಿ ಉಂಟಾಗಬಹುದಾದ ಅನರ್ಥಗಳು ಅನೇಕ.

ವ್ಯವಸ್ಥೆಯೊಂದರಲ್ಲಿ ಅಕ್ಷರದ ಬಳಕೆ ಅನಿವಾರ್ಯವೆಂಬ ವಾಸ್ತವದಿಂದಾಗಿ ಇಂದು ಪ್ರತಿಯೊಬ್ಬರೂ ಅಕ್ಷರಸ್ಥರಾಗಬೇಕಾದ್ದೂ ಅನಿವಾರ್ಯವೇ ಸರಿ. ದಿನನಿತ್ಯದ ಎಷ್ಟೋ ವ್ಯವಹಾರಗಳನ್ನು ಸಲೀಸುಗೊಳಿಸಿಕೊಳ್ಳಲು ಮಾತ್ರವಲ್ಲದೆ, ಇದೇ ಅಕ್ಷರ ಮಾಧ್ಯಮದಲ್ಲಿ ಹರಿದು ಬರುವ ಜ್ಞಾನವನ್ನು ಗ್ರಹಿಸಲೂಬಹುದು. ಅಂದರೆ, ಈ ಮುಖ್ಯ ಉದ್ದೇಶಕ್ಕೆ ಅನುಗುಣವಾಗಿಯೇ ನಮ್ಮ ಅಕ್ಷರ ಕಲಿಕೆಯ ಕಾರ್ಯಕ್ರಮಗಳು ರೂಪುಗೊಳ್ಳಬೇಕು. ಶಿಕ್ಷಣಕ್ರಮ ಔಪಚಾರಿಕದ್ದಿರಬಹುದು, ಅನೌಪಚಾರಿಕದ್ದಾಗಿರಬಹುದು. ಅದು ಮಕ್ಕಳಿಗಾಗಿ ಅಥವಾ ವಯಸ್ಕರಿಗಾಗಿ ಇರಬಹುದು. ಗಮನಿಸಬೇಕಾದ ಮುಖ್ಯ ಅಂಶವೆಂದರೆ 'ಸಾಕ್ಷರತೆ' ಎಂಬುದು ಅಕ್ಷರವನ್ನು ಕಲಿತ ಕೂಡಲೇ ಮುಗಿಯುವಂಥದ್ದಲ್ಲ. ವಾಸ್ತವವಾಗಿ ಜ್ಞಾನಸಾಧನೆಯ ಒಂದು 'ಸಾಧನ' ಕೈಗೆಟುಕಿದಂತೆ ಅಷ್ಟೆ. ಈ ಸಾಧನವನ್ನು ನಿರಂತರವಾಗಿ ಹಾಗೂ ಸೂಕ್ತವಾಗಿ ಬಳಸುವುದನ್ನು ಕಲಿಸುವುದು ಶಿಕ್ಷಣಕ್ರಮದಲ್ಲಿ ಅಳವಡಿಕೆಯಾಗಬೇಕಾದ ಸಂಗತಿ.

# ವಿಶ್ವವಿದ್ಯಾಲಯಗಳ ಶೈಕ್ಷಣಿಕ ಸನ್ನಿವೇಶ: ಏನು ಮಾಡಲು ಸಾಧ್ಯ?

ಇಡೀ ಸಮಾಜದ ರಚನೆಯಲ್ಲಿ ಶಿಕ್ಷಣದ ಪ್ರಸ್ತುತೆಯನ್ನು ಗುರುತಿಸುವವರು ಅದರ ಪ್ರಧಾನ ಗುರಿಗಳಲ್ಲಿ ಸಾಮಾಜೀಕರಣವೂ ಒಂದು ಎನ್ನುತ್ತಾರೆ. ಇದುವರೆಗಿನ ನಮ್ಮ ಶಿಕ್ಷಣದ ಚರಿತ್ರೆಯ ಪಾಠವೆಂದರೆ ಈ ಸಾಮಾಜೀಕರಣ ಹೇಗೆ ಸಂಭವಿಸುತ್ತದೆ ಹಾಗೂ ಇದು ಸಂಭವಿಸಲು ಅತ್ಯವಶ್ಯವಾದ ಕನಿಷ್ಠ ಅವಧಿ ಎಷ್ಟು ಎಂಬುದನ್ನು ನಾವಿನ್ನೂ ಕಂಡುಕೊಂಡಿಲ್ಲದಿರುವುದು. ವಿಶ್ವವಿದ್ಯಾಲಯಶಿಕ್ಷಣದ ಶೈಕ್ಷಣಿಕ ನೆಲೆಯ ಸಮಸ್ಯೆಗಳನ್ನು ಹಲವು ನಿಟ್ಟಿನಿಂದ ಚರ್ಚಿಸಲು ಸಾಧ್ಯವಿದೆಯಾದರೂ, ನಾನು ಈ ಮೇಲೆ ಹೇಳಿದ ಪ್ರಶ್ನೆಯ ನೆಲೆಯಲ್ಲಿ ಮುಂದುವರೆಯುತ್ತೇನೆ.

ಈ ಮುಂದೆ ಹೇಳಲಾಗುವ ಬಹುಪಾಲು ಮಾತುಗಳು ಉದ್ವಿಗ್ನನೊಬ್ಬನ ಹಳಹಳಿಕೆಗಳು ಎಂದು ಭಾವಿಸಲು ಕಾರಣವಿಲ್ಲ. ಏಕೆಂದರೆ ಭಾರತ ಸರಕಾರ ಪ್ರಕಟಿಸಿರುವ ಶಿಕ್ಷಣದ ಸವಾಲುಗಳ ದಾಖಲೆ ಕೂಡ ಇಂಥದೇ ಮಾತುಗಳನ್ನು ಬೇರೆ ನಿಟ್ಟಿನಲ್ಲಿ ಹೇಳಿರುವುದನ್ನು ಆ ದಾಖಲೆಯನ್ನು ಓದಿದವರೆಲ್ಲ ಅರಿಯಬಲ್ಲರು. ವಿಶ್ವವಿದ್ಯಾಲಯ ಶಿಕ್ಷಣವೆಂಬುದು ನಾವು ರೂಪಿಸಿ, ಒಪ್ಪಿಕೊಂಡು ಅನುಸರಿಸುತ್ತಿರುವ ಶಿಕ್ಷಣವ್ಯವಸ್ಥೆಯ ಕೊನೆಯ ಮಜಲು. ಇಲ್ಲಿಂದ ಮುಂದೆ ಶಿಕ್ಷಣವೆಂಬುದು ವ್ಯಕ್ತಿಯ ಆಯ್ಕೆ, ಹೊಣೆ. ಇಲ್ಲಿಯವರೆಗೆ ಏನು ಲಭಿಸಿದೆಯೋ ಅದನ್ನು ತನ್ನ ಉದ್ದೇಶಕ್ಕೆ ತಕ್ಕಂತೆ ಪರಿಷ್ಕರಿಸುವುದು ಈ ಮಜಲಿನ ಹೊಣೆ. ಒಂದು ಅಂದಾಜಿನಂತೆ ನಮ್ಮ ರಾಜ್ಯದಲ್ಲಿ ವಿಶ್ವವಿದ್ಯಾಲಯ ಶಿಕ್ಷಣವನ್ನು ಪಡೆಯಲು ತಕ್ಕ ವಯೋಮಾನದವರ ಸಂಖ್ಯೆ ಸರಿಸುಮಾರು ಅರ್ಧ ಕೋಟಿ. ಇವರಲ್ಲಿ ಇಪ್ಪತ್ತರಲ್ಲಿ ಒಬ್ಬರು ಕೂಡ ಈ ಮಜಲಿನ ಮಡಿಲಿಗೆ ಬಂದಿಲ್ಲ. ಹೊರಗುಳಿದವರನ್ನು ಸಮಾಜ ಹೇಗೋ ತನ್ನ ಉತ್ಪಾದನಾವ್ಯವಸ್ಥೆಯಲ್ಲಿ ಬಳಸುತ್ತಿದೆ. ಕಳೆದ ಒಂದು ದಶಕದ ಸಾಮಾಜಿಕ ಆರ್ಥಿಕ ನೀತಿಯಿಂದಾಗಿ ಈ ಶಿಕ್ಷಣವ್ಯವಸ್ಥೆಯ ಒಳಬಂದಿರುವ ಹತ್ತರಲ್ಲಿ ಆರರಿಂದ ಏಳು ಜನ ಮೊದಲ ತಲೆಮಾರಿನ ಶಿಕ್ಷಿತರು. ಈ ವಿವರಗಳನ್ನು ನಿಮ್ಮಲ್ಲಿ ಹೇಳಲು ಕಾರಣವಿದೆ. ಶಿಕ್ಷಿತಪರಿಸರದಿಂದ ವಿಶ್ವವಿದ್ಯಾಲಯಗಳೊಳಗೆ ಪ್ರವೇಶಿಸುವವರು ಈ ವ್ಯವಸ್ಥೆಯನ್ನು ಅನಿವಾರ್ಯವಾಗಿ ಹಾಯ್ದುಹೋಗಬೇಕಾಗಿ ಬಂದಿರುವ ಒಂದು ಸುರಂಗವೆಂದು ಭಾವಿಸುತ್ತಾರೆ. ಅವರ ಗುರಿ ಸುರಂಗದ ಆಚೆಗೆ ಕಾಣುವ ಬೆಳಕಿನ ಕಡೆಗೆ. ಎಂದರೆ ಅವರ ಮೇಲೆ ಈ ವ್ಯವಸ್ಥೆಯ ಪರಿಣಾಮ ಅತ್ಯಂತ ಕನಿಷ್ಠ. ಆದರೆ ಯಾರು ಶಿಕ್ಷಿತ ಪರಿಸರವಿಲ್ಲದೆ ಈಗ

ನಮ್ಮ ವಿದ್ಯಾರ್ಥಿ ಸಮೂಹದ ಭಾಗವಾಗಿದ್ದಾರೋ ಅವರಿಗೂ ಈ ಶಿಕ್ಷಣವ್ಯವಸ್ಥೆಗೂ ಮುಖಾಮುಖಿ ಈಗ ಮೊದಲಾಗಿದೆ.

ನಾನು ಮೊದಲಲ್ಲಿ ಸಾಮಾಜೀಕರಣದ ಮಾತನ್ನಾಡಿದೆ. ಈಗ ಈ ವ್ಯವಸ್ಥೆಯೊಳಗೆ ಕುದಿಯಲು ಪ್ರಾರಂಭಿಸಿರುವ ಮುಖಾಮುಖಿಯ ಬಗ್ಗೆ ಹೇಳಿದೆ. ಇವೆರಡಕ್ಕೂ ನಿಕಟವಾದ ಸಂಬಂಧವಿದೆ. ಸಾಮಾನ್ಯಶಿಕ್ಷಣದ ಸ್ವರೂಪ ಹಾಗೂ ಅವಧಿ ನಮ್ಮ ಬೆಳೆಯುವ ಮಕ್ಕಳ ಸಾಮಾಜೀಕರಣವನ್ನು ಪೂರ್ಣಪ್ರಮಾಣದಲ್ಲಿ ಸಾಧಿಸುತ್ತಿಲ್ಲ. ಅಥವಾ ಆ ಪ್ರತಿಕ್ರಿಯೆಯ ಕೆಲವು ನೆಲೆಗಳು ಈಗ ವಿಶ್ವವಿದ್ಯಾಲಯಶಿಕ್ಷಣಕ್ಕೂ ದಾಟಿ ಬಂದಿದೆ. ಇಂಥದೇ ಹೊರೆಯನ್ನು ಅಲ್ಪ ಪ್ರಮಾಣದಲ್ಲಿ ನಾಲ್ಕೈದು ದಶಕಗಳ ಹಿಂದೆ ವಿಶ್ವವಿದ್ಯಾಲಯಶಿಕ್ಷಣ ಹೊರಬೇಕಾಗಿ ಬಂದಿತ್ತೆಂದು ತಿಳಿಯಲು ಸಾಧ್ಯವಿದೆ. ಆದರೆ ಈಗ ಈ ಹೊಣೆಯ ಸ್ವರೂಪ, ಪ್ರಮಾಣ ಬೇರೆ ಬೇರೆಯಾಗಿದೆ. ವಿಶ್ವವಿದ್ಯಾಲಯಗಳಲ್ಲಿನ ಪರಿಸ್ಥಿತಿಯನ್ನು ನಿಕಟವಾಗಿ ಬಲ್ಲ ಯಾರಾದರೂ ವಿದ್ಯಾರ್ಥಿ ಸಮೂಹ ಪೂರ್ಣಗೊಳ್ಳದ ಸಾಮಾಜೀಕರಣ ಪ್ರಕ್ರಿಯೆಯಿಂದಾಗಿ ಅಥವಾ ಸರಿಯಾದ ದಿಕ್ಕನ್ನು ಹಿಡಿಯದ ಸಾಮಾಜೀಕರಣದಿಂದಾಗಿ ಎಂಥ ಸಂಕಷ್ಟವನ್ನು ಅನುಭವಿಸುತ್ತಿದೆ ಎಂಬುದನ್ನು ಬಲ್ಲರು.

ಪ್ರಸ್ತುತತೆ ಎಂದರೇನು? ಶಿಕ್ಷಣವ್ಯವಸ್ಥೆಯ ಪ್ರಸ್ತುತತೆಯನ್ನು ಗುರುತಿಸಲು ಸಾಮಾನ್ಯವಾಗಿ ಅನುಸರಿಸಲಾಗುವ ವಿಧಾನಗಳ ನೆಲೆಯಲ್ಲಿ ನೋಡಿದರೆ ಈಗ ನಮ್ಮ ವಿಶ್ವವಿದ್ಯಾಲಯಶಿಕ್ಷಣವೆಂಬುದು ಶಕ್ತಿ, ಕಾಲ ಹಾಗೂ ರಾಷ್ಟ್ರಸಂಪತ್ತು ಅನುಪಯುಕ್ತವಾಗಿ ವ್ಯಯವಾಗುತ್ತಿರುವ ವಲಯವೆಂದು ಯಾರಾದರೂ ತೀರ್ಮಾನಿಸಬಹುದು. ಉದಾಹರಣೆಗಾಗಿ ನಮ್ಮ ಸಾಮಾನ್ಯ ಪದವಿಶಿಕ್ಷಣವನ್ನು ನೋಡೋಣ. ಈ ಶಿಕ್ಷಣ ಒದಗಿಸುವ ಮಾಹಿತಿ ಹಾಗೂ ತರಬೇತಿಗಳಿಗೆ ಆ ಶಿಕ್ಷಣ ಪಡೆದವರು ಮುಂದೆ ಸಮಾಜದಲ್ಲಿ ನಿರ್ವಹಿಸುವ ಪಾತ್ರದೊಡನೆ ನೇರವಾದ ಸಂಬಂಧ ಕಡಿಮೆ ಎಂದು ಎಲ್ಲರೂ ಹೇಳುವ ಸಂಗತಿಯಾಗಿದೆ. ಅಥವಾ ಅಂಥದೊಂದು ಸಂಬಂಧವಿದೆಯೆಂದು ಹೇಳುವುದಾದರೆ, ಅಂಥ ವೃತ್ತಿಸಂದರ್ಭಗಳಲ್ಲಿ ಅವಶ್ಯ ಬೀಳುವಷ್ಟು ಮಾಹಿತಿ ಹಾಗೂ ತರಬೇತು ತೀವ್ರಗತಿಯಲ್ಲಿ ಕಡಿಮೆ ಕಾಲಾವಧಿಯೊಳಗೆ ಪಡೆಯುವುದು ಸಾಧ್ಯ. ಸಂಪತ್ತಿನ ಹೂಡಿಕೆಯೂ ಕಡಿಮೆ. ವಿಚಿತ್ರವೆಂದರೆ ಸಾಮಾನ್ಯ ಪದವಿಗೆ ಅನ್ವಯಿಸುವ ಈ ಮಾತು ವೃತ್ತಿಪರಶಿಕ್ಷಣ ನೀಡುವ ಪದವಿಗಳಿಗೂ ಅನ್ವಯವಾಗುತ್ತಿರುವುದು. ವೃತ್ತಿಪರಶಿಕ್ಷಣದ ಪದವಿ ಪಡೆದವರೂ ಸಮಾಜದಲ್ಲಿ ಪಡೆಯುವ ಕೆಲಸದ ಅವಕಾಶಗಳನ್ನು ಹಾಗೂ ಆ ಕೆಲಸದ ಅವಶ್ಯಕತೆಗಳನ್ನು ಗಮನಿಸಿದರೆ ಅವರು ಐದುವರ್ಷಗಲ್ಲಿ ಪಡೆಯುವ ತರಬೇತು ಹಾಗೂ ಕೂಡಿಸಿಕೊಳ್ಳುವ ಮಾಹಿತಿ ದಿನೇ ದಿನೇ ನಿರುಪಯುಕ್ತವಾಗುತ್ತಾ ಹೋಗುತ್ತದೆ. ವೈದ್ಯರೊಬ್ಬರು ಕೊನೆಗೆ ಸಾರ್ವಜನಿಕ ಆರೋಗ್ಯದ ಸಾಮಾನ್ಯ ಸಮಸ್ಯೆಗಳಿಗಷ್ಟೇ ತಮ್ಮ ವ್ಯವಹಾರವನ್ನು ಸೀಮಿತಗೊಳಿಸಿಕೊಳ್ಳಲೇ ಬೇಕಾದ ಪರಿಸ್ಥಿತಿ ಒದಗುತ್ತಿದೆ.

ಹಾಗಿದ್ದರೆ ಒಂದೆರಡು ಪ್ರಶ್ನೆಗಳು ನಮ್ಮೆದುರು ಬಂದು ನಿಲ್ಲುತ್ತವೆ. ಶಿಕ್ಷಣ ವ್ಯವಸ್ಥೆಯ ಈ ಹಂತವನ್ನು ನಾವು ಕೈ ಬಿಡುವುದು ಸಾಧ್ಯವೇ? ಸುಮಾರು ನೂರೈವತ್ತು

ವರ್ಷಗಳ ಈ ಪದ್ಧತಿ ನಮಗೆ ಮೈಗೂಡಿದೆಯೇ? ಅಥವಾ ಈಗಿರುವಂಥ ಈ ವ್ಯವಸ್ಥೆಯನ್ನು ನಮಗೆ ಉಪಯುಕ್ತವಾಗುವಂತೆ ಮಾಡುವುದು ಸಾಧ್ಯವೇ? ಇವುಗಳಲ್ಲಿ ಮೊದಲ ಪ್ರಶ್ನೆಯನ್ನು ಅರೆಹುಚ್ಚನ ಕನವರಿಕೆ ಎಂದು ತಳ್ಳಿಹಾಕಲು ಸಾಧ್ಯ. ಆದರೆ ನನ್ನ ಆಸಕ್ತಿ ಇರುವುದು ಬೇರೆ ಕಡೆಯಲ್ಲಿ. ಇಷ್ಟೆಲ್ಲ ಅನುಪಯುಕ್ತವೆನಿಸಿದರೂ ನಾವು ಈ ಹಂತವನ್ನು ಸಮಾಜದ ಭಾಗವಾಗಿ ಸ್ವೀಕರಿಸಲೇಬೇಕಾಗಿ ಬಂದಿರುವ ಕಾರಣಗಳನ್ನು ಗುರುತಿಸಲೇ ಬೇಕಾಗಿದೆ. ಇಂಥ ಕಾರಣಗಳು ಹಲವು ಇರಬಹುದು.

ಏಕೆ ಈ ವ್ಯವಸ್ಥೆಯನ್ನು ಕಾಯ್ದುಕೊಳ್ಳಲೇಬೇಕು ಎಂಬುದಕ್ಕೆ ಉತ್ತರ ಇಲ್ಲ. ಸಮಾಜದ ಸಂರಚನೆಯನ್ನು ಜೈವಿಕವಿಕಸನದ ವ್ಯಾಪ್ತಿಯಲ್ಲಿ ವಿವರಿಸುವವರ ಒಂದು ಗುಂಪು ಇದೆಯಷ್ಟೆ. ಅವರು ಈ ಪ್ರಶ್ನೆಗೆ ತಮ್ಮದೇ ಆದ ರೀತಿಯಲ್ಲಿ ಉತ್ತರ ಕೊಡಬಲ್ಲರು. ತನಗೆ ಅನವಶ್ಯಕವೆನಿಸಿದ, ಸೂಕ್ತ ಕಾರ್ಯನಿರ್ವಹಣೆ ಮಾಡದ ಅಂಗವನ್ನು ಸಂರಚನೆ ತನಗೆ ಬೇಕಾದ ರೀತಿಯಲ್ಲಿ ಪರಿವರ್ತಿಸಿ ಹೊಂದಿಸಿಕೊಳ್ಳುತ್ತದೆ ಎಂದಾರು. ಆದರೆ ಇದು ಹೀಗಿರುವುದೇ ಕೆಲವು ಕಾರಣಗಳಿಂದ ಕೆಲವರಿಗೆ ಸರಿ ಎನ್ನಿಸುತ್ತಿರಲೂಬಹುದು. ಇದೊಂದು ವಿಚಿತ್ರ ಎನಿಸಿದರೂ ಅಷ್ಟಿಷ್ಟು ಹುರುಳಿರುವ ಸಂಗತಿ. ಏಕೆ ನೋಡೋಣ. ವಿಶ್ವವಿದ್ಯಾಲಯದ ಶಿಕ್ಷಣದ ಅನಂತರದಲ್ಲಿ ಸಾಮಾಜಿಕವಾದ ಹಲವು ಉನ್ನತ ಸ್ಥಾನಮಾನಗಳು ಲಭಿಸುವುದನ್ನು ಹಾಗೂ ಅಂಥ ಸುಭದ್ರ ಸ್ಥಿತಿಗಳನ್ನು ಹೊಂದಲು ಈ ಶಿಕ್ಷಣದ ಪದವಿಗಳು ಪರವಾನಗಿಯಾಗಿರುವುದರಿಂದ, ಸುಲಭವಾಗಿ ಇಂಥದೊಂದು ನೋಂದಣಿ ಕೇಂದ್ರವನ್ನು ಸಮಾಜದ ಚಲನಶಕ್ತಿಗಳ ನಿಯಂತ್ರಣ ಹೊಂದಿರುವ ಜನರು ಬಿಟ್ಟುಕೊಟ್ಟಾರೆಂದು ಭಾವಿಸುವುದಾದರೂ ಹೇಗೆ? ಪರವಾನಗಿ ಕೇಂದ್ರಗಳು ಭ್ರಷ್ಟಗೊಂಡಷ್ಟೂ ಅಲ್ಲಿ ಪರವಾನಗಿ ಪಡೆಯುವುದು ಸುಲಭ ಹಾಗೂ ಸರಳ ಎಂಬ ಸಾಮಾನ್ಯ ನಿಯಮದ ಪ್ರಕಾರ ವಿಶ್ವವಿದ್ಯಾಲಯದ ಶಿಕ್ಷಣ ಹೀಗೆ ಚಹರೆ ಕಳಕೊಂಡ ಸ್ಥಿತಿಯಲ್ಲಿ ಉಳಿಯುವುದೂ ಕೂಡ ಒಂದು ನಿಟ್ಟಿನಿಂದ ಕೆಲವರಿಗೆ ಬೇಕಾಗಿದೆ.

ಇನ್ನು ಪರಿವರ್ತಿತ ರೂಪದ ಪ್ರಶ್ನೆಯನ್ನು ಎತ್ತಿಕೊಳ್ಳೋಣ. ಎರಡು ಮಾದರಿಗಳನ್ನು ಸಾಮಾನ್ಯವಾಗಿ ನಮ್ಮೆದುರು ಇಡಲಾಗುತ್ತಿದೆ. ಮೊದಲನೆಯದು ಸಂವೃತ ಮಾದರಿ. ಈಗಿರುವ ಪರಿಸ್ಥಿತಿಯನ್ನು ಅನಿವಾರ್ಯವೆಂಬಂತೆ ತಿಳಿದು ಅದನ್ನು ಹೆಚ್ಚು ಪರಿಷ್ಕರಣಕ್ಕೆ ಒಳಪಡಿಸುತ್ತ ಹೋಗುವುದು. ಮೊದಲ ಮಾದರಿಯನ್ನು ಪರಿಶೀಲಿಸೋಣ ಪದವಿಗೂ ಹುದ್ದೆಗಳಿಗೂ ಸಂಪರ್ಕ ಕಡಿದು ಹಾಕುವ ಸೂಚನೆ ಈಗಾಗಲೇ ಸಾರ್ವಜನಿಕ ಚರ್ಚೆಯ ವಸ್ತುವಾಗಿದೆ. ಈ ಮೂಲಕ ವಿಶ್ವವಿದ್ಯಾಲಯ ಶಿಕ್ಷಣದೊಳಗಿನ ಹೆಚ್ಚು ಜನರನ್ನು ಹೊರಗಿಟ್ಟು ಒತ್ತಡವನ್ನು ಕಡಿಮೆ ಮಾಡಿ ಆಸಕ್ತರು ಮಾತ್ರ ಉಳಿಯುವಂತೆ ಮಾಡುವ ಉದ್ದೇಶವಿದ್ದಂತಿದೆ. ಇದನ್ನೇ ಸಂವೃತ ವ್ಯವಸ್ಥೆ ಎಂದದ್ದು. ಒಂದು ಗುಂಪಿನ ಸಮಾಜ ಚಿಂತಕರು ಹೇಳುವಂತೆ ಇದು ಸಮಾಜದ ಶಿಕ್ಷಿತ ಪರಿಸರದಿಂದ ಬರುವ ಅಲ್ಪ ಸಂಖ್ಯಾತ ಮೇಲುವರ್ಗಕ್ಕೆ ಮಾತ್ರ ವಿಶ್ವವಿದ್ಯಾಲಯ ಶಿಕ್ಷಣವನ್ನು ಮೀಸಲಾಗಿರುವ ಹುನ್ನಾರ. ಈ ಮಾತಿನಲ್ಲಿ ತಥ್ಯವಿಲ್ಲದಿಲ್ಲ. ಬರಲಿರುವ ದಿನಗಳು ಈ ಊಹೆಯನ್ನು ನಿಜಮಾಡಲಿವೆ. ಈಗಾಗಲೇ ಪ್ರತಿ ಒಂದು ಸಾವಿರ ಜನರಲ್ಲಿ ಐದು ಜನರಿಗಷ್ಟೇ

ಪ್ರವೇಶ ಸಾಧ್ಯವಾಗಿರುವ ಈ ವಲಯ ಇನ್ನಷ್ಟು ಇಕ್ಕಟ್ಟುಗಳನ್ನು ರೂಪಿಸಿಕೊಳ್ಳುವಂತಾದರೆ ಅದರಲ್ಲಿ ಅಚ್ಚರಿಯೇನೂ ಇಲ್ಲ. ಆದರೆ ಸಂವೃತ ವ್ಯವಸ್ಥೆಯು ರೂಪಿಸುವ ಇಂತಹ ವಿಪರ್ಯಾಸವನ್ನು ಇಲ್ಲವಾಗಿಸುವ ಯೋಜನೆಗಳನ್ನು ಕೂಡ ಮಂಡಿಸಲಾಗಿದೆ. ಅವುಗಳಲ್ಲಿ ಒಂದು, ನಿರಂತರ ಶಿಕ್ಷಣ ವ್ಯವಸ್ಥೆ. ಸಾಮಾನ್ಯ ಶಿಕ್ಷಣದ ಅನಂತರದಲ್ಲಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಉತ್ಪಾದನೆಯಲ್ಲಿ ತೊಡಗಿರುವವರು ಹಾಗೂ ವಿಶ್ವವಿದ್ಯಾಲಯ ಶಿಕ್ಷಣ ಪಡೆದು ವಿವಿಧ ಕ್ಷೇತ್ರಗಳಲ್ಲಿ ಇರುವವರು ಮತ್ತೆ ತಮ್ಮ ಮಾಹಿತಿ ಹಾಗೂ ತರಬೇತನ್ನು ಉತ್ತಮಪಡಿಸಿಕೊಳ್ಳಲು ವಿಶ್ವವಿದ್ಯಾಲಯಗಳಿಗೆ ಹಿಂತಿರುಗುವ ಅವಕಾಶವನ್ನು ಅನಿವಾರ್ಯವೆಂಬ ನೆಲೆಗಳಲ್ಲಿ ರೂಪಿಸಬೇಕೆಂಬುದೇ ಈ ನಿರಂತರ ಶಿಕ್ಷಣದ ಆಶಯ. ಅನೌಪಚಾರಿಕವಾಗಿ ಹಾಗೂ ಸ್ಥಾನೀಯವಾಗಿ ಇಂಥ ವ್ಯವಸ್ಥೆಗಳು ಬೇರೆ ಬೇರೆ ಸಂಸ್ಥೆಗಳ ಮೂಲಕ ಜಾರಿಯಲ್ಲಿವೆಯಾದರೂ ವಿಶ್ವವಿದ್ಯಾಲಯಗಳನ್ನು ಈ ದಿಕ್ಕಿನತ್ತ ಮುಖ ಮಾಡುವಂತೆ ಮಾಡಿದರೆ ಅವುಗಳ ಸಂವೃತ ರೂಪದ ಅಪಾಯವನ್ನು ತಪ್ಪಿಸಹುದೆನ್ನಲಾಗಿದೆ. ಹೀಗಿದ್ದರೂ ಸಮಸ್ಯೆ ಬಗೆಹರಿದಂತೆ ಅಲ್ಲ. ಶಿಕ್ಷಣವು ಸಾಮಾಜಿಕವಾಗಿ ನಿರ್ವಹಿಸಬೇಕಾದ ಎಲ್ಲ ಹೊಣೆಗಳನ್ನೂ ಇದರಿಂದ ನಿರ್ವಹಿಸಿದಂತೆ ಆಗುವುದಿಲ್ಲ. ಈ ಬಗೆಗೆ ಪ್ರತ್ಯೇಕ ಹಾಗೂ ಪರ್ಯಾಯವಾದ ಮಾರ್ಗಗಳನ್ನು ರೂಪಿಸಬೇಕಾದ ಅವಶ್ಯಕತೆ ಇದೆ.

ಇನ್ನು ಎರಡನೆಯ ಸಾಧ್ಯತೆಯನ್ನು ನೋಡೋಣ. ಈಗಿರುವ ನಮ್ಮ ವ್ಯವಸ್ಥೆಯನ್ನು ಸುಧಾರಿಸುವ ಮೊದಲು ಅದರ ಸ್ವರೂಪವನ್ನು ಸರಿಯಾಗಿ ಅರಿಯಬೇಕಾಗುತ್ತದೆ. ನಮ್ಮ ಸದ್ಯದ ಶೈಕ್ಷಣಿಕ ಸನ್ನಿವೇಶ-ಇದರಲ್ಲಿ ಶಿಕ್ಷಣ ಪ್ರಣಾಳಿ, ಅಧ್ಯಯನ ವಿಧಾನ, ಬೋಧನಾ ವಿಧಾನ, ಅಧ್ಯಾಪಕ- ವಿದ್ಯಾರ್ಥಿ ಸಂಬಂಧ ಹಾಗೂ ಮೌಲ್ಯಮಾಪನ ಇವೆಲ್ಲವೂ ಸೇರುವುದು-ತನ್ನೆದುರು ನಿಂತಿರುವ ಹೊಸ ಸವಾಲುಗಳನ್ನು ಎದುರಿಸಲು ಸನ್ನದ್ಧವಾಗಿದೆಯೋ? ಇಲ್ಲಿನ ಸಮಸ್ಯೆಗಳನ್ನು ಲಘುವಾಗಿ ಹೊಣೆಗೇಡಿತನದ ವಿವರಣೆಗಳಿಂದ ಗ್ರಹಿಸುವುದು ಪರಿಪಾಠವಾಗಿಬಿಟ್ಟಿದೆ. ಉದಾಹರಣೆ: ವಿದ್ಯಾರ್ಥಿಗಳ ಬೌದ್ಧಿಕ ಮಟ್ಟದಲ್ಲಿ ಇಳಿತವಾಗುತ್ತಿದೆ. ಶಿಕ್ಷಣದಲ್ಲಿ ಆಸಕ್ತಿ ಕಡಿಮೆಯಾಗುತ್ತಿದೆ. ಶಿಕ್ಷಕರಲ್ಲಿ ಪ್ರಾಮಾಣಿಕತೆ ಕಡಿಮೆಯಾಗುತ್ತಿದೆ. ಸಮಾಜದ ಲಕ್ಷಣವಾದ ಭ್ರಷ್ಟತೆ ಇಲ್ಲಿಗೂ ಹಬ್ಬಿದೆ ಎಂಬಂಥವು. ಈ ವಿವರಣೆಗಳನ್ನು ಸುಳ್ಳು ಅಥವಾ ತಪ್ಪು ಎಂದು ವಾದಿಸಲು ಹೊರಡುವುದು ಬೇಡ. ಆದರೆ ಇಂಥ ವಿವರಣೆಗಳು ರೋಗಲಕ್ಷಣಗಳನ್ನು ರೋಗನಿದಾನ ಎಂದು ಗಮನಿಸಿದರೆ ಸಾಕು.

ಶಿಕ್ಷಣ ಪ್ರಣಾಲಿಯನ್ನು ಉನ್ನತೀಕರಿಸುವ, ಸಮಕಾಲೀನ ಸಂದರ್ಭಕ್ಕೆ ಹೊಂದಿಸುವ ಮಾತು ಹೊಸದೇನೂ ಅಲ್ಲ. ಆದರೆ ಈ ಪ್ರಕ್ರಿಯೆಯು ಜಾರಿಗೆ ಬಂದಿರುವುದು ಹಾಗೂ ಅದರ ಸಾಧನೆ ಮಾತ್ರ ಸರಿಯಾದ ದಿಕ್ಕಿನಲ್ಲಿ ಇರುವಂತಿಲ್ಲ. ಇಲ್ಲಿ ಸಮಸ್ಯೆಗಳು ಒಂದೊಂದು ಅಧ್ಯಯನ ಶಾಖೆಗೂ ಬೇರೆ ಬೇರೆಯಾಗುತ್ತವೆ. ವಿಜ್ಞಾನದ ವಿವಿಧ ವಿಭಾಗಗಳಲ್ಲಿ ಉನ್ನತೀಕರಣಗೊಂಡ ಶಿಕ್ಷಣಪ್ರಣಾಲಿ ಎಂದರೆ ಅತ್ಯಾಧುನಿಕ ಸಂಶೋಧನೆಗಳ ಫಲಿತಾಂಶವನ್ನು, ತಾತ್ವಿಕ ಚರ್ಚೆಗಳನ್ನು ಅಳವಡಿಸುವುದು ಎಂದಾಗುತ್ತದೆ. ಹಾಗೇ ನೂತನ ಪ್ರಯೋಗವಿಧಾನ ಮತ್ತು ಉಪಕರಣಗಳನ್ನು

ಬಳಸುವುದು ಎಂದಾಗುತ್ತದೆ. ಈ ಸಾಧ್ಯತೆ ಹಾಗೂ ಸೌಲಭ್ಯ ದೊರಕುವ ವಿಶ್ವವಿದ್ಯಾಲಯಗಳ ಸಂಖ್ಯೆ ಇಲ್ಲವೆನ್ನವಷ್ಟು ಕಡಿಮೆ. ಅದು ಬೇರೆ ಮಾತು. ಮಾನವಿಕ ವಿಭಾಗಗಳಲ್ಲಿ ಈ ಪ್ರಕ್ರಿಯೆಯ ದಿಕ್ಕು ಬೇರೆಯಾಗುವುದು ಸಹಜ. ಇಲ್ಲಿಯೇ ಸಮಕಾಲೀನ ಸಮಾಜದಲ್ಲಿನ ಚಲನಶೀಲತೆಯ ದಿಕ್ಕುಗಳನ್ನು ನಮ್ಮ ಮಾನವಿಕವಿಭಾಗಗಳು ಪೂರ್ಣವಾಗಿ ಗ್ರಹಿಸುತ್ತಿಲ್ಲ. ಪ್ರಬುದ್ಧ ಆಲೋಚಕರು, ಚಿಂತಕರು ಅಲ್ಲಲ್ಲಿ ಚಿಮುಕಿಸಿದಂತೆ ದೊರೆತಾರು. ಆದರೆ ನಮಗೆ ಅದು ಅಷ್ಟು ಮುಖ್ಯ ಅಲ್ಲ. ಇಡೀ ಅಧ್ಯಯನ ಶಾಖೆಯೇ ಹೇಗೆ ತನ್ನ ಕಾಲಕ್ಕೆ, ಕಾಲದ ಅವಶ್ಯಕತೆಗಳಿಗೆ ಸವಾಲುಗಳಿಗೆ ಸ್ಪಂದಿಸುತ್ತಿದೆ ಎಂಬುದು ನಮಗೆ ಮುಖ್ಯ. ಓಬೀರಾಯನ ಕಾಲದಂತೆ ಇಂದಿಗೂ ಒಂದೊಂದು ಅಧ್ಯಯನ ಶಾಖೆಗೂ ಇನ್ನೊಂದು ಅಧ್ಯಯನ ಶಾಖೆಗೂ ನಡುವೆ ಅಸ್ಪೃಶ್ಯತೆ ಗಾಢವಾಗಿ ಬಿಟ್ಟಿದೆ. ಎಲ್ಲರೂ ಸುರಕ್ಷಿತ ದ್ವೀಪಗಳೇ ಆಗಿದ್ದಾರೆ. ಇದು ಕೆಲವೊಮ್ಮೆ ನಮ್ಮ ಅಧ್ಯಯನದ ಕೊರತೆಗಳನ್ನು ಹಾಗೆಯೇ ಮುಚ್ಚಿಟ್ಟುಕೊಳ್ಳುವ ತಂತ್ರವೂ ಇದ್ದೀತು. ಹೀಗೆ ಮಾನವಿಕ ಜ್ಞಾನಶಾಖೆಗಳನ್ನು ಪ್ರತ್ಯೇಕವಾಗಿ ಉಳಿಸಿಕೊಳ್ಳಲು ಸಾಧ್ಯವಿಲ್ಲ ಎಂಬ ಅರಿವು ಹೊಸ ತಲೆಮಾರಿನವರಲ್ಲಿ ಮೂಡುತ್ತಿರುವ ಸೂಚನೆಗಳಿವೆ. ಇದು ಏನಾಗಿ ಬೆಳೆಯುವುದೆಂದು ಕಾಯ್ದು ನೋಡಬೇಕಾಗಿದೆ.

ಈ ಶಾಖೆಗಳ ಶಿಕ್ಷಣಪ್ರಣಾಳಿ ವಿದ್ಯಾರ್ಥಿಗೆ ಆ ಜ್ಞಾನಶಾಖೆಯ ಸೈದ್ಧಾಂತಿಕ ನೆಲೆಗಳನ್ನು ಪರಿಚಯಿಸುವ ಜೊತೆಗೆ, ಅವರು ಜೀವಿಸುತ್ತಿರುವ ಪರಿಸರದ ಬಗೆಗೂ ಜಾಗ್ರತರಾಗುವ ಹಾಗೆ ಮಾಡಬೇಕಾಗುತ್ತದೆ. ಈಗ ಅಂಥ ಜಾಗೃತಿ ಮೂಡುತ್ತಿದ್ದರೆ ಅದು ನಿರುದ್ದೇಶವಾಗಿಯೇ ಹೊರತು ಶಿಕ್ಷಣಕ್ರಮದ ಭಾಗವಾಗಿ ಅಲ್ಲ. ಈ ಬಗ್ಗೆ ತೀವ್ರವಾದ ಚರ್ಚೆಗಳು ನಡೆಯುತ್ತಿವೆ. ಆದರೆ ಮುಂಬರುವ ದಿನಗಳಲ್ಲಿ ದಿಟ್ಟ ಹೆಜ್ಜೆಗಳನ್ನು ಇಡುವವರು ಬರುವರೆಂದು ಆಶಿಸಬಹುದು ಅಷ್ಟೆ.

ಇನ್ನು ಶಿಕ್ಷಣದ ಕ್ರಮದ ಬಗ್ಗೆ: ಸುಮಾರು ವರ್ಷದಲ್ಲಿ ನೂರು ದಿನಗಳಷ್ಟು ಕಾಲ ಮಾತ್ರ ನಮ್ಮ ಉನ್ನತಶಿಕ್ಷಣ ಕೇಂದ್ರಗಳು ಬೋಧನಾ ಚಟುವಟಿಕೆಗಳಲ್ಲಿ ತೊಡಗುತ್ತವೆ. ಇಲ್ಲಿ ಸಂಭವಿಸುವಷ್ಟು ಮಾನವಸಂಪತ್ತಿನ ವ್ಯಯ ಗಣನೀಯವಾದುದು. ಪದವಿ ಕಾಲೇಜುಗಳು ಸರಾಸರಿ ಪ್ರಮಾಣದಲ್ಲಿ ಇದರ ಒಂದೂವರೆಯಷ್ಟು ಅವಧಿ ಕೆಲಸ ಮಾಡಬಹುದು ಅಷ್ಟೆ. ಈ ಸೀಮಿತ ಅವಧಿಯಲ್ಲಿ ನಾವು ಬಹುಮಂದಿ ಅನುಸರಿಸುವ ಮಾರ್ಗ ಕ್ರೂರವಾದುದು. ಇದಲ್ಲದೆ ಬೇರೆ ಏನನ್ನೂ ಮಾಡಲು ಸಾಧ್ಯವಿಲ್ಲವೆಂದೋ, ಇಷ್ಟಾದರೂ ನಡೆಯುತ್ತದಲ್ಲ ಎಂದೋ ನಿರಾಳವಾಗಿ ಬಿಡುತ್ತೇವೆ. ತೊಡಗುವಿಕೆಯೇ ಗೈರುಹಾಜರಾಗಿರುವ ಈ ತರಗತಿಗಳಿಂದ ದಿನೇ ದಿನೇ ವಿದ್ಯಾರ್ಥಿಗಳು ನಾಪತ್ತೆಯಾಗುತ್ತಿದ್ದರೆ ಅದರಲ್ಲಿ ಅಶ್ಚರ್ಯವೇನೂ ಇರಲಾರದು. ಅವರು ಈ ಅವಧಿಯಲ್ಲಿ ಹೊಂದಲೇ ಬೇಕಾದ ಸಾಮಾಜೀಕರಣ ಅವರಲ್ಲಿ ಒಂದು ತೀವ್ರವಾದ, ಆದರೆ ಅವರಿಗೇ ಅಸ್ಪಷ್ಟವಾದ ಒಂದು ಬಯಕೆಯಾಗಿ ರೂಪುಗೊಂಡಿರುತ್ತದೆ. ಇದು ತರಗತಿಗಳಲ್ಲಿ ಪೂರೈಕೆಯಾಗದ ಪರಿಸ್ಥಿತಿ ಇದೆ. ಶಿಕ್ಷಕರಿಗೆ ವೃತ್ತಿ ಎಂಬುದು ಒಂದು ಸವಾಲು ಆಗಿಲ್ಲ. ಹೀಗೆ ಜಡಗೊಳ್ಳುತ್ತಿರುವ ಸಂದರ್ಭದಲ್ಲಿ ಮತ್ತೆ ವ್ಯಕ್ತಿಗತ ಪ್ರಯತ್ನಗಳಿಂದ ಅದನ್ನು ಮೀರುವ ಉದಾಹರಣೆಗಳೂ ಇವೆ. ಆದರೆ ಶಿಕ್ಷಕರು ಮರಳಿ ಮರಳಿ ತಮ್ಮ

ಸಿದ್ಧತೆಯನ್ನು ದಿನಮಾನಗಳ ನೆಲೆಗೆ ತರಲೇ ಬೇಕಾದ ಒತ್ತಾಯಗಳು ಇಲ್ಲದೇ ಹೋದರೆ ಬೋಧನಾ ವಿಧಾನದಲ್ಲಿ ಮೂಲಭೂತ ಬದಲಾವಣೆಗಳು ಅಸಾಧ್ಯವಾಗುತ್ತವೆ. ಇಂದಿಗೂ ಶಿಕ್ಷಕರಲ್ಲಿ, ಪರಿಸ್ಥಿತಿಗೆ ಹೊಂದಿಕೊಳ್ಳುವುದು ಎಂದರೆ ಮಾಹಿತಿಯನ್ನು ಹೆಚ್ಚಾಗಿ ಪಡೆದುಕೊಳ್ಳುವುದು ಎಂದು ತಿಳಿಯಲಾಗುತ್ತಿದೆಯೇ ಹೊರತು, ಬೋಧನಾ ವಿಧಾನದಲ್ಲಿ, ವಿದ್ಯಾರ್ಥಿಗಳ ಜೊತೆಗಿನ ಸಂಬಂಧದಲ್ಲಿ ಪರಿವರ್ತನೆಯನ್ನು ತಂದುಕೊಳ್ಳುವುದು ಎಂದು ತಿಳಿಯುತ್ತಿಲ್ಲ. ಈ ಮೊದಲಲ್ಲಿ ಸೂಚಿಸಿದಂತೆ ನಿರಂತರ ಶಿಕ್ಷಣದ ಮಾದರಿಯಲ್ಲಿ, ಶಿಕ್ಷಕರಾದವರು ಮರಳಿಬರುವವರನ್ನು ಎದುರಿಸಬೇಕಾಗಿ ಬಂದಾಗ ಆಗಲು ಕೂಡ ಅಷ್ಟಿಷ್ಟು ಬದಲಾವಣೆ ಸಾಧ್ಯ. ಆದರೆ ಎಲ್ಲವೂ 'ಹೇಗೋ ಒಂದು ಆಗಬೇಕು... ಹೇಗಾದರೂ ಆಗಲಿ' ಎಂಬ ರೂಢಿಗೆ ಬಿದ್ದರೆ ಮತ್ತೆ ಬಿಡುಗಡೆ ಇಲ್ಲ.

ಭಾಷೆಯ ಅಧ್ಯಾಪಕನಾಗಿ ಒಂದು ಮಾತನ್ನು ಇಲ್ಲಿ ಹೆಚ್ಚಾಗಿ ಸೇರಿಸಬಯಸುತ್ತೇನೆ. ಇದು ಎಲ್ಲ ಶಾಖೆಗಳಿಗೂ ಹಬ್ಬುತ್ತಿರುವ ತೊಂದರೆಯಾಗಿರುವುದರಿಂದ ಇದನ್ನು ಗಮನಿಸಬೇಕೆಂದು ಕೋರುತ್ತೇನೆ. ನಮ್ಮ ಭಾಷಾಶಿಕ್ಷಣ ಮುಖ್ಯವಾಗಿ ವಿದ್ಯಾರ್ಥಿಯಲ್ಲಿ ಗ್ರಹಿಸುವ ಸಾಮರ್ಥ್ಯವನ್ನು ಬೆಳೆಯಿಸುತ್ತದೆ. ಆದರೆ ಅದೇ ಭಾಷೆಯ ಮೂಲಕ ತನ್ನನ್ನು ಅಭಿವ್ಯಕ್ತಿಸುವ ಸಾಮರ್ಥ್ಯವನ್ನು ಶಿಕ್ಷಣದ ಪರಿಸರದಲ್ಲಿ ನಮ್ಮ ವಿದ್ಯಾರ್ಥಿಗಳು ಪಡೆದುಕೊಳ್ಳುತ್ತಿಲ್ಲ, ಹಾಗಾಗಿ ಅದನ್ನು ಬಳಸುವ ಮಾತು ದೂರವೇ ಉಳಿಯಿತು. ಇದರ ಫಲಿತಾಂಶವಾಗಿ ವಿದ್ಯಾರ್ಥಿಗಳಲ್ಲಿ ಏನನ್ನಾದರೂ ಅರ್ಥಮಾಡಿಕೊಳ್ಳಬಲ್ಲ ಆದರೆ ಅದನ್ನು ತಾವೇ ಹೇಳಲು ಅಸಮರ್ಥರಾದವರು ನಮ್ಮೆದುರು ಇದ್ದಾರೆ. ಇದು ಎಂತಹ ಅನಾರೋಗ್ಯದ ಪರಿಸ್ಥಿತಿ ಎಂಬುದನ್ನು ಬಲ್ಲವರೇ ಬಲ್ಲರು. ಹೀಗೆ ಭಾಷೆಯನ್ನು ಬಳಸುವ ಕೌಶಲ್ಯವನ್ನು ಕಲಿಸುವ ಹೊಣೆ ನಮ್ಮದಲ್ಲ; ಅದು ಕೆಳಗಿನ ಸ್ತರದ ಶಿಕ್ಷಣ ವ್ಯವಸ್ಥೆಯದ್ದು ಎಂದು ಕೈಚೆಲ್ಲಿ ಕೂಡಬಹುದು. ಅಥವಾ ಇಲ್ಲಿಯೇ ಅದನ್ನು ಹೇಗಾದರೂ ಮಾಡಿ ಪರಿವರ್ತಿಸಲು ಸಾಧ್ಯವೇ ಎಂದೂ ಚಿಂತಿಸಬಹುದು. ಹೀಗೆ ತಮ್ಮನ್ನು ತಾವು ಅಧ್ಯಯನದ ವ್ಯಾಪ್ತಿಯಲ್ಲಿ ಭಾಷೆಯ ಮೂಲಕ ಮಂಡಿಸಿಕೊಳ್ಳಲಾಗದವರು ನಿಧಾನವಾಗಿ ನಮ್ಮೆದುರು ಸವಾಲುಗಳನ್ನು ಒಡ್ಡುತ್ತಾ ನಿಲ್ಲುತ್ತಿದ್ದಾರೆ. ಇದು ನಮ್ಮ ಬೋಧನಾಕ್ರಮ ಬದಲಾಗಬೇಕೆಂಬ ಒತ್ತಾಯ ಹೊರಗಿನಿಂದ ಬಾರದಿರುವುದಕ್ಕೆ ಒಂದು ಪ್ರಮುಖ ಕಾರಣ ಕೂಡ ಆಗಿದೆ.

ಮೌಲ್ಯಮಾಪನ: ಈ ಹಂತವನ್ನು ಕುರಿತು ಏನನ್ನು ಹೇಳುವುದು? ಇದು ಎಷ್ಟು ತಮಾಷೆಯ ಹಂತವನ್ನು ಮುಟ್ಟಿದೆಯೆಂದರೆ ಅವ್ಯವಸ್ಥೆಯ, ದಿಕ್ಕಿಲ್ಲದ ಅಲ್ಲಿನ ಪರಿಸ್ಥಿತಿಯ ಬಗೆಗೆ ಏನಾದರೂ ಹೇಳುವುದೇ ಬೇಸರದ ಕೆಲಸವಾಗಿದೆ. ಇಡೀ ಮೌಲ್ಯಮಾಪನ ಅರ್ಥ ಕಳೆದುಕೊಂಡ ಆದರೆ ಪ್ರತಿ ವರ್ಷವೂ ಆಚರಿಸಬೇಕಾದ ಯಾವುದಾದರೊಂದು ವಿಧಿ ಅಥವಾ ಆಚರಣೆಯಂತೆ ಚಹರೆ, ಚರ್ಯೆಗಳನ್ನು ಹೊಂದಿದೆ. ಯಾಕೆ ಹೀಗೆ ಎಂದು ಯೋಚಿಸಬಹುದು. ಇದಕ್ಕೆ ನಾವು ಇಡೀ ವ್ಯವಸ್ಥೆಯನ್ನು ಗ್ರಹಿಸುತ್ತಿರುವ ಕ್ರಮವೇ ಮುಖ್ಯ ಕಾರಣವಾಗಿದೆ. ಫಲಿತಾಂಶದಲ್ಲಿ ಕ್ರಮದ ಯಶಸ್ಸನ್ನು ನೋಡುತ್ತೇವೆಯಾದ್ದರಿಂದ ಈ ಹಂತ ಅತ್ಯಂತ ಮಹತ್ವವನ್ನು ಪಡೆದುಕೊಂಡುಬಿಟ್ಟಿದೆ.

ಹಾಗೂ ಹೊರಗಿನ ಜಗತ್ತಿನ ಹೀರಿಕೊಳ್ಳುವ ವಲಯಗಳು ಈ ಹಂತದ ಛಾಪುಗಳನ್ನು ಅವಲಂಬಿಸಿ ಹುದ್ದೆಗಳನ್ನು ಕೊಡುತ್ತವೆಯಾದ್ದರಿಂದ ಸಹಜವಾಗಿಯೇ ಅಪಮಾರ್ಗಗಳು ಬೆಳೆಯುತ್ತವೆ. ತರಗತಿಯ ಒಳಗಿನ ಮೌಲ್ಯಮಾಪನವೆಂಬುದೇ ಹುಸಿ. ಎಲ್ಲಿಯವರೆಗೆ ಶಿಕ್ಷಕರಾದವರು ತಮ್ಮ ಮೌಲ್ಯಮಾಪನಕ್ಕೆ ಸಿದ್ಧರಾಗುವುದಿಲ್ಲವೋ ಅಲ್ಲಿಯವರೆಗೆ ಅವರಿಗೆ ತಮ್ಮ ವಿದ್ಯಾರ್ಥಿ ವೃಂದದ ಮೌಲ್ಯಮಾಪನ ಮಾಡಲು ಯಾವ ನೈತಿಕ ಹಕ್ಕೂ ಇಲ್ಲ. ನಾವು ವಿಶ್ವವಿದ್ಯಾಲಯ ಶಿಕ್ಷಣವನ್ನು ಒಂದು ಬೆಳೆಯುವ ಪ್ರಕ್ರಿಯೆ ಎಂದು ಪರಿಗಣಿಸಿದ ಹೊರತು, ಅದಕ್ಕೆ ತಕ್ಕಂತೆ ವ್ಯವಹರಿಸಿದ ಹೊರತು ಮೌಲ್ಯಮಾಪನವೆಂಬುದು ಈಗಿರುವ ರೀತಿಗಿಂತ ಬೇರೆಯಾಗುವುದು ಸಾಧ್ಯವೇ ಇಲ್ಲ.

ಈ ಮೇಲಿನ ವಿಚಾರಗಳು ಹೊಸವೇನೂ ಅಲ್ಲ; ಅಥವಾ ಈ ಬಗ್ಗೆ ಹೇಳಲು ಸಾಧ್ಯವಿರುವುದು ಇಷ್ಟೇ ಎಂದೇನೂ ಅಲ್ಲ. ಚರ್ಚೆಗೆ ಒಂದು ಮೊದಲನ್ನು ಕಲ್ಪಿಸಲೆಂದು ಈ ಮಾತುಗಳನ್ನು ಹೀಗೆ ನಿರೂಪಿಸಲಾಗಿದೆ.

# ಹೊಸ ಶಿಕ್ಷಣ ನೀತಿಯ ಪರಿಣಾಮಗಳು

ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಇಲಾಖೆಯ ಸಚಿವರಾದ ಕಪಿಲ್ ಸಿಬಲ್ ಅವರು ನೂರು ದಿನಗಳಲ್ಲಿ ನಾಡಿನ ಶಿಕ್ಷಣ ಕ್ಷೇತ್ರದಲ್ಲಿ ಬುಡಸಹಿತ ಬದಲಾವಣೆ ತರುವ ಯೋಜನೆಗಳನ್ನು ಸಲಹೆ ರೂಪದಲ್ಲಿ ಮಂಡಿಸಿದ್ದಾರೆ. ಕೇಂದ್ರ ಸರಕಾರ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಪರಿಗಣಿಸುವ ಮಸೂದೆಯೊಂದನ್ನು ಲೋಕಸಭೆಯಲ್ಲಿ ಮಂಡಿಸಲು ಮುಂದಾಗುತ್ತಿರುವಾಗಲೇ ಸಚಿವರ ಯೋಜನೆಗಳು ಪ್ರಕಟವಾಗಿವೆ. ಹತ್ತನೆಯ ತರಗತಿಗೆ ಪಬ್ಲಿಕ್ ಪರೀಕ್ಷೆ ಬೇಡ ಮತ್ತು ಇಡೀ ದೇಶಕ್ಕೇ ಒಂದು ಶಾಲಾ ಶಿಕ್ಷಣ ಮಂಡಲಿ ಸಾಕು ಎನ್ನುವ ಸಲಹೆಗಳ ಬಗೆಗೆ ಈಗ ಚರ್ಚೆ ನಡೆಯುತ್ತಿದೆ. ಆದರೆ ಇದಕ್ಕೂ ಮಿಗಿಲಾಗಿ ಗಮನ ಸೆಳೆಯ ಬೇಕಾದ ಸಲಹೆಯೊಂದಿದೆ. ಶಿಕ್ಷಣ ಕ್ಷೇತ್ರಕ್ಕೆ ಆರ್ಥಿಕ ಬೆಂಬಲವನ್ನು ಪಡೆದುಕೊಳ್ಳಲು ವಿದೇಶೀ ಬಂಡವಾಳವನ್ನು ನೇರವಾಗಿ ತೊಡಗಿಸುವ ಅವಕಾಶವನ್ನು ಕಲ್ಪಿಸುವುದು ಮೊದಲ ಆದ್ಯತೆ ಎಂದು ಸಚಿವರು ಹೇಳಿದ್ದಾರೆ. ವಿದೇಶಿ ಬಂಡವಾಳ ಹೂಡಿಕೆಯ ಬಗೆಗೆ ಇರುವ ಸಾಮಾನ್ಯ ಚರ್ಚೆಯ ಹಿನ್ನೆಲೆಯಲ್ಲಿ ಈ ಸಲಹೆಯನ್ನು ಹೇಗೆ ಪರಿಗಣಿಸಬೇಕು ಎಂಬುದನ್ನು ಮುಂದೆ ನೋಡೋಣ. ಆದರೆ ಈಗ ಶಿಕ್ಷಣವನ್ನು ಮೂಲಭೂತ ಹಕ್ಕು ಎಂದು ಪರಿಗಣಿಸುವ ಮಸೂದೆಯ ಚೌಕಟ್ಟಿನಲ್ಲಿ ಇದರ ಪರಿಣಾಮವನ್ನು ನೋಡೋಣ.

ನಮಗೆಲ್ಲ ತಿಳಿದಿರುವಂತೆ ಸಂವಿಧಾನವನ್ನು ರಚಿಸಿದವರು ನಿರ್ದಿಷ್ಟ ಕಾರಣಗಳಿಗಾಗಿ ಶಿಕ್ಷಣವನ್ನು ಸಹವರ್ತಿ ಪಟ್ಟಿಯಲ್ಲಿರಿಸಿ, ರಾಜ್ಯ ನಿರ್ದೇಶಕ ನಿಯಮಗಳಲ್ಲಿ ಸಾರ್ವತ್ರಿಕ, ಉಚಿತ ಮತ್ತು ಗುಣಮಟ್ಟದ ಶಿಕ್ಷಣವನ್ನು ನೀಡುವ ಹೊಣೆಯನ್ನು ಸರಕಾರಗಳಿಗೆ ವಹಿಸಿದರು. ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಪರಿಗಣಿಸುವ ಪ್ರಸ್ತಾವ ರಾಜ್ಯಾಂಗ ರಚನೆಯ ಸಮಿತಿಯ ಮುಂದೆ ಇದ್ದಿತಾದರೂ ಕೊನೆಗೆ ಈಗಿರುವ ರೂಪವನ್ನು ಅವರು ಒಪ್ಪಿ ಜಾರಿಗೆ ನೀಡಿದರು. ಕಳೆದ ಆರು ದಶಕಗಳಲ್ಲಿ ಶಿಕ್ಷಣ ಸಾರ್ವತ್ರಿಕವಾಗಿ ದೊರಕುವಂತಾಗಲಿಲ್ಲ ಎಂಬುದು ಒಂದು ಕೊರತೆಯಾದರೆ ಅದಕ್ಕಿಂತ ಹೆಚ್ಚಾಗಿ, ದೊರಕುತ್ತಿರುವ ಶಿಕ್ಷಣ ಸಮಾಜದಲ್ಲಿರುವ ತಾರತಮ್ಯಗಳನ್ನು ಬಲಪಡಿಸುವ ಮಾದರಿಯಲ್ಲಿ ಇದೆ ಎಂಬುದು ಆತಂಕಕಾರಿಯಾಗಿದೆ. ಎಲ್ಲರಿಗೂ ಶಿಕ್ಷಣ ದೊರಕಬೇಕು ಎಂಬುದು ಸರಿ. ಆದರೆ ದೊರೆಯುವ ಶಿಕ್ಷಣ ಅಸಮಾನತೆಯನ್ನು ಗಟ್ಟಿಗೊಳಿಸುತ್ತಿದೆ. ಹೀಗಿರುವಾಗ ಶಿಕ್ಷಣವನ್ನು ಕುರಿತು ಚಿಂತಿಸುವಾಗ ಈ ಎರಡೂ ಸಂಗತಿಗಳನ್ನು ಒಟ್ಟಾಗಿ ಇರಿಸಿಕೊಂಡಿರುವುದು ಅಗತ್ಯ.

ಈ ಹಿನ್ನೆಲೆಯಲ್ಲಿ ಸಿಬಲ್ ಅವರ ವಿದೇಶೀ ಬಂಡವಾಳ ಹೂಡಿಕೆ ಯೋಜನೆ ಪ್ರಾಥಮಿಕ ಶಿಕ್ಷಣ ವಲಯದಲ್ಲಿ ಏನು ಮಾಡಬಹುದು ಎಂಬುದನ್ನು ನೋಡೋಣ. 6 ರಿಂದ 14 ನೆಯ ವಯಸ್ಸಿನ ಮಕ್ಕಳಿಗೆ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ನೀಡಲು ಭಾರತ ಸರಕಾರಕ್ಕೆ 12.5 ಬಿಲಿಯನ್ ಡಾಲರ್ ಗಳ ವೆಚ್ಚ ತಗುಲಲಿದೆಯೆಂದು ಬಲ್ಲವರು ಹೇಳುತ್ತಿದ್ದಾರೆ. (ಈ ಮೊತ್ತವನ್ನು ಡಾಲರ್ ಗಳಲ್ಲೇ ಏಕೆ ಹೇಳುತ್ತಿದ್ದಾರೆ ಎನ್ನುವುದು ಕುತೂಹಲದ ಸಂಗತಿ). ಈ ಪ್ರಮಾಣದ ಹೊಣೆಯನ್ನು ರಾಜ್ಯ ಸರಕಾರಗಳು ಹೊರಲು ಸಿದ್ಧವಿಲ್ಲವಾದ್ದರಿಂದ ಕೇಂದ್ರ ಸರಕಾರವೇ ಈ ಹಣವನ್ನು ಹೂಡಬೇಕಾಗುತ್ತದೆ ಎಂದೂ ಅದಕ್ಕಾಗಿ ವಿದೇಶಿ ಬಂಡವಾಳ ಬೇಕಾಗಿದೆ ಎಂದೂ ಹೇಳುತ್ತಿದ್ದಾರೆ. ಈ ವಿದೇಶಿ ಬಂಡವಾಳ 6ರಿಂದ 14 ವಯೋಮಾನದ ಮಕ್ಕಳೆಲ್ಲರಿಗೂ ಉಚಿತ ಮತ್ತು ಗುಣಮಟ್ಟದ ಶಿಕ್ಷಣವನ್ನು ನೀಡಲು ಸೊಂಟಕಟ್ಟಿ ನಿಲ್ಲುವುದೇ ಅಥವಾ ತಾರತಮ್ಯವನ್ನು ಸ್ಥಿರೀಕರಿಸಿ ಬಲಗೊಳಿಸುವ ಶಿಕ್ಷಣವನ್ನು ನೀಡಲು ಮುಂದಾಗುವುದೇ? ಈ ಬಂಡವಾಳ ಖಾಸಗಿ ವಲಯದಿಂದ ಬರುವುದಾದ್ದರಿಂದ ಅದರ ಗುರಿ ಏನಾಗುವುದೆಂಬ ಬಗೆಗೆ ಹೆಚ್ಚಿನ ಚರ್ಚೆ ಬೇಕಾಗಿಲ್ಲ. ಆಯ್ಕೆ ಮತ್ತು ನಿರಾಕರಣೆಗಳನ್ನೆ ಮೂಲ ತತ್ವವನ್ನಾಗಿ ಮಾಡಿಕೊಂಡ ನಮ್ಮ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಈ ವರೆಗೆ ದೇಶೀಯ ಬಂಡವಾಳದ ಹೂಡಿಕೆಯಿಂದ ತಯಾರಾದ ಮಾನವ ಸಂಪನ್ಮೂಲದ 'ತಿರುಳ'ನ್ನು ವೈದ್ಯರು, ಇಂಜಿನಿಯರ್ ಗಳು, ತಂತ್ರಜ್ಞರ ರೂಪದಲ್ಲಿ ಹೀರಿಕೊಂಡ ವಿದೇಶಿ ಮಾರುಕಟ್ಟೆ ಈಗ ತನ್ನ ಬಂಡವಾಳದ ಹೂಡಿಕೆಗೆ ಬೇರೇನು ಉದ್ದೇಶವನ್ನು ಹೊಂದಿರಲು ಸಾಧ್ಯ?

ಮತ್ತೆ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಮಾಡುತ್ತಿರುವ ಮಾತಿಗೆ ಬರೋಣ. 6ರಿಂದ 14 ವಯೋಮಾನದ ಮಕ್ಕಳಿಗೆ ಶಿಕ್ಷಣ ಮೂಲಭೂತ ಹಕ್ಕು ಎನ್ನುತ್ತಿರುವಾಗಲೇ ಆ ಶಿಕ್ಷಣವನ್ನು ನೀಡುವ ಹೊಣೆಯನ್ನು ಬಳಸು ಮಾರ್ಗದಿಂದ ವಿದೇಶಿ ಬಂಡವಾಳಕ್ಕೆ ವಹಿಸುತ್ತಿರುವುದರ ಪರಿಣಾಮ ಏನಾಗಬಲ್ಲುದು ಎಂಬುದನ್ನು ಯೋಚಿಸ ಬೇಕಲ್ಲವೇ? ರಾಜ್ಯ ನಿರ್ದೇಶಕ ತತ್ವಗಳಲ್ಲಿ ಶಿಕ್ಷಣ ನೀಡುವ ಹೊಣೆ ಸರಕಾರಗಳದ್ದಾಗಿದ್ದಾಗಲೇ ಕಡ್ಡಾಯ ಶಿಕ್ಷಣವನ್ನು ನೀಡಲು ಸೋತಿರುವಾಗ ಅದು ಮೂಲಭೂತ ಹಕ್ಕಾದಾಗ ಅದನ್ನು ಪಡೆದುಕೊಳ್ಳಲು ಮಕ್ಕಳು ಎಷ್ಟು ಕಷ್ಟ ಪಡಬೇಕಾಗುವುದೆಂದು ಊಹಿಸಲು ಸಾಧ್ಯವಾಗುತ್ತಿಲ್ಲ.

ಶಿಕ್ಷಣವನ್ನು ಮೂಲಭೂತ ಹಕ್ಕು ಎಂದು ಪರಿಗಣಿಸುವುದನ್ನು ಹೆಚ್ಚು ಜನರು ಒಳ್ಳೆಯ ನಡೆಯೆಂದು ಬಣ್ಣಿಸುತ್ತಿದ್ದಾರೆ. ಸುಪ್ರೀಂಕೋರ್ಟ್ ಉನ್ನಿಕೃಷ್ಣನ್ ವ್ಯಾಜ್ಯದಲ್ಲಿ ಶಿಕ್ಷಣವನ್ನು ಮೂಲಭೂತ ಹಕ್ಕು ಎಂದು ಪರಿಗಣಿಸಲು ನಿರ್ದೇಶನ ನೀಡಿದ್ದರಿಂದ ಈ ಬದಲಾವಣೆ ಜಾರಿಗೆ ಬರುತ್ತಿದೆ. ಉಳಿದ ಮೂಲಭೂತ ಹಕ್ಕುಗಳಿಗೂ ಶಿಕ್ಷಣವನ್ನು ಮೂಲಭೂತ ಹಕ್ಕು ಎಂದು ತಿಳಿಯುವುದಕ್ಕೂ ಇರುವ ವ್ಯತ್ಯಾಸಗಳನ್ನು ಗಮನಿಸಬೇಕು. ಅಭಿವ್ಯಕ್ತಿ ಸ್ವಾತಂತ್ರ್ಯ,ಧಾರ್ಮಿಕ ಹಕ್ಕು, ಆಸ್ತಿ ಹಕ್ಕು, ಸಮಾನತೆಯ ಹಕ್ಕು ಮುಂತಾದವುಗಳನ್ನು ದೊರಕಿಸಲು ಸರಕಾರ ವಿಶೇಷ ಪ್ರಯತ್ನವನ್ನು ಮಾಡಬೇಕಾಗಿಲ್ಲ. ಈ ಹಕ್ಕುಗಳಿಗೆ ಚ್ಯುತಿಯಾಗದಂತೆ ನೋಡಿಕೊಳ್ಳುವ ವ್ಯವಸ್ಥೆಯನ್ನು ರೂಪಿಸಿದರೆ ಸಾಕಾಗುತ್ತದೆ. ಏಕೆಂದರೆ ಈ ಹಕ್ಕುಗಳಿಗೆ ಅಡ್ಡಿಯಾದಾಗ ಮಾತ್ರ ಸಮಸ್ಯೆಗಳು ತಲೆ

ಎತ್ತುತ್ತವೆ. ಆದರೆ ಶಿಕ್ಷಣದ ವಿಷಯ ಹಾಗಲ್ಲ. ಅದು ದೊರಕುವಂತೆ ಮಾಡಲು ವ್ಯಾಪಕವಾದ ವ್ಯವಸ್ಥೆಯೊಂದನ್ನು ಮಾಡಬೇಕಾಗುತ್ತದೆ. ಈ ವ್ಯವಸ್ಥೆ ಉಳಿದ ಹಕ್ಕುಗಳ ಸಾಧನೆಗೆ ಅಡ್ಡಿಯುಂಟು ಮಾಡದಂತಿರಬೇಲು. ಪ್ರಮಾಣ ಮತ್ತು ಗುಣಮಟ್ಟದಲ್ಲಿ 6 ರಿಂದ 14 ವಯೋಮಾನದ ಎಲ್ಲ ಮಕ್ಕಳಿಗೂ ದೊರಕುವಂತಿರಬೇಕು. ನ್ಯಾಯಾಲಯದ ತೀರ್ಪು ಈ ಕುರಿತು ಏನನ್ನೂ ಹೇಳುತ್ತಿಲ್ಲ. ಈ ಹೊಣೆ ತನ್ನದೆಂದು ಹೇಳುವ ಸರಕಾರ ತನಗೆ ತೋರುವ ರೀತಿಯಲ್ಲಿ ಜಾರಿಗೆ ಕೊಟ್ಟರೆ ಅದರಿಂದ ಉಂಟಾಗುವ ಹಕ್ಕುಚ್ಯುತಿಯನ್ನು ಮಕ್ಕಳು ಮತ್ತು ಅವರ ಪೋಷಕರು ಸರಿಪಡಿಸಿಕೊಳ್ಳಲು ನ್ಯಾಯಾಲಯದ ಮೊರೆ ಹೋಗಬೇಕಾಗುತ್ತದೆ. ಇದು ಎಂತಹ ಪರಿಸ್ಥಿತಿಯನ್ನು ರೂಪಿಸಬಹುದೆಂದು ಊಹಿಸಲು ಆಗುತ್ತಿಲ್ಲ. ರಾಜ್ಯಾಂಗ ರಚನೆಯ ಸಮಿತಿಯಲ್ಲಿ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಪರಿಗಣಿಸಬೇಕೆಂಬ ಪ್ರಸ್ತಾವ ಬಂದಾಗ ಅದರ ಸದಸ್ಯರಲ್ಲಿ ಕೆಲವರು, ಈ ಹಕ್ಕಿನ ಉಲ್ಲಂಘನೆಯಾದಾಗ ಅದನ್ನು ಸರಿಪಡಿಸಲು ಯಾರನ್ನು ಕೋರಬೇಕು; ಯಾರು ಕೋರಬೇಕು; ಅದರ ಹೊಣೆಯನ್ನು ರಾಜ್ಯ ಸರಕಾರ ಹೊರಬೇಕೋ ಅಥವಾ ಕೇಂದ್ರ ಸರಕಾರವೋ; ತಪ್ಪಿಗೆ ಶಿಕ್ಷೆ ಏನು ಇವೆಲ್ಲವೂ ಬಗೆಹರಿಸಲಾಗದ ಪ್ರಶ್ನೆಗಳಾಗುತ್ತವೆ ಎಂದದ್ದನ್ನು ನೆನಪು ಮಾಡಿಕೊಳ್ಳುವುದು ಸೂಕ್ತ.

ಹಾಗಿದ್ದಲ್ಲಿ ಸುಮಾರು ಇಪ್ಪತ್ತು ಕೋಟಿ ಮಕ್ಕಳ ಶಿಕ್ಷಣಕ್ಕೆ ಬೇಕಾದ ಹಣವನ್ನು ಎಲ್ಲಿಂದ ತರುವುದು ಎಂದು ಮಾನವ ಸಂಪನ್ಮೂಲ ಇಲಾಖೆಯ ಸಚಿವರು ಕೇಳುತ್ತಾರೆ. ನಾವು ಶಿಕ್ಷಣ ವ್ಯವಸ್ಥೆಯೊಂದು ಅಗಾಧ ಪ್ರಮಾಣದ ಹಣ ಹೂಡಿಕೆ ಅಗತ್ಯವಿರುವ ವಲಯವೆಂದು ಪರಿಗಣಿಸಿರುವುದರಲ್ಲೇ ಏನೂ ತಪ್ಪಿರಬಹುದಲ್ಲವೇ? ಅಥವಾ ಹೀಗೆ ಹೇಳೋಣ. ಶಿಕ್ಷಣ ವಲಯವನ್ನು ಅಗಾಧ ಪ್ರಮಾಣದ ಹಣ ಹೂಡಿಕೆ ಆಗಬೇಕಾದ ಬಗೆಯಲ್ಲಿ ನಾವು ರೂಪಿಸಿ ಬಿಟ್ಟಿದ್ದೇವೆಯೇ?ಹೌದೆಂದು ತೋರುತ್ತದೆ. ಶಿಕ್ಷಣ ಎಂದರೆ ಕಟ್ಟಡ,ಆಡಳಿತ ವ್ಯವಸ್ಥೆ,ಪುಸ್ತಕ,ಪರೀಕ್ಷೆ,ಸಾಮಗ್ರಿಗಳು ಹೀಗೆ ನೂರೆಂಟು ಹಣ ಬೇಡುವ ನೆಲೆಗಳನ್ನು ಕಟ್ಟಿಕೊಂಡಿದ್ದೇವೆ. ಒಂದೆರಡು ಉದಾಹರಣೆಗಳ ಮೂಲಕ ಈ ವ್ಯವಸ್ಥೆಯಲ್ಲಿರುವ ತೊಡಕುಗಳನ್ನು ವಿವರಿಸಲಯ ಯತ್ನಿಸುತ್ತೇನೆ.

ಪ್ರಾಥಮಿಕ ಹಂತದಲ್ಲಿ ಈಗ ಕೋಟಿಗಟ್ಟಲೆ ಪಠ್ಯಪುಸ್ತಕಗಳು ಪ್ರತಿ ವರ್ಷ ಮುದ್ರಿತವಾಗಿ ಕೆಲವು ತಿಂಗಳುಗಳ ಬಳಿಕ ಅವುಗಳಲ್ಲಿ ಬಹುಪಾಲು ರದ್ದಿಯಾಗುತ್ತಿದೆ. ( ಗೈಡ್ ಗಳೆಂಬ ಹೆಸರಿನಲ್ಲಿ ಮತ್ತು ಕೈಪಿಡಿಗಳೆಂಬ ಹೆಸರಿನಲ್ಲಿ ಮುದ್ರಿತವಾಗುತ್ತಿರುವ ಪುಸ್ತಕ ಸಾಮಗ್ರಿಯನ್ನು ಸೇರಿಸಿದರೆ ಈ ಪ್ರಮಾಣ ಇನ್ನೂ ಹೆಚ್ಚಿದೆ) ಪಠ್ಯಪುಸ್ತಕಗಳ ಸಿದ್ಧತೆ,ಮುದ್ರಣ ಮತ್ತು ವಿತರಣೆಗಾಗಿ ಹಲವು ಕೋಟಿ ರೂಪಾಯಿಗಳು ವೆಚ್ಚವಾಗುತ್ತಿವೆ. ಆದರೆ ಇವುಗಳ ಬಳಕೆ ಹೇಗೆ ಆಗುತ್ತಿದೆ ಎಂಬುದನ್ನು ನಾವು ಇನ್ನೂ ನೋಡಿಲ್ಲ. ಭಾಷಾ ಕಲಿಕೆಯ ಪುಸ್ತಕಗಳನ್ನು ಬಿಟ್ಟರೆ ಉಳಿದ ಪುಸ್ತಕಗಳು ತರಗತಿಗಳಲ್ಲಿ ಅಥವಾ ಮನೆಯಲ್ಲಿ ಹೆಚ್ಚು ಬಳಕೆಯಾಗುವುದಿಲ್ಲ. ಅಧ್ಯಾಪಕರು ಕೆಲವೊಮ್ಮೆ ಮಾಹಿತಿಗಾಗಿ ಈ ಪುಸ್ತಕಗಳನ್ನು 'ಓದುವುದುಂಟು'. ಇದಲ್ಲದೆ ನೋಟ್ ಪುಸ್ತಕಗಳಿಗಾಗಿಯೂ ಹೆಚ್ಚಿನ ಪ್ರಮಾಣದ ಕಾಗದ ಬಳಕೆಯಾಗುತ್ತಿದೆ. ಇಲ್ಲಿಯೂ ಹಣ ಹೂಡಿಕೆ ಹೆಚ್ಚು. ನೋಟ್ ಪುಸ್ತಕಗಳನ್ನು ಮಕ್ಕಳು ಬರೆಯಲು ಬಳಸುತ್ತಾರೆ. ಬರವಣಿಗೆ ಮಕ್ಕಳು ಕಲಿಯ

ಬೇಕಾದ ಭಾಷಾ ಕೌಶಲ ಎಂಬುದು ನಾವು ಪ್ರಶ್ನಿಸದೇ ಒಪ್ಪಿಕೊಂಡಿರುವ ಮಾತಾಗಿದೆ. ಏಕೆಂದರೆ ಕೊನೆಯ ಪರೀಕ್ಷೆಯಲ್ಲಿ ಈ ಕೌಶಲದ ಮೂಲಕವೇ ಅವರ ತಿಳುವಳಿಕೆಯನ್ನು ಮೌಲ್ಯಮಾಪನ ಮಾಡುತ್ತಿದ್ದೇವೆ. ಕೇಳಿಸಿಕೊಳ್ಳುವುದು,ಓದುವುದು, ಮಾತಾಡುವುದು ಮತ್ತು ಬರೆಯುವುದು ಈ ನಾಲ್ಕು ಭಾಷಾ ಕೌಶಲಗಳ ನಡುವಣ ಸಂಬಂಧವನ್ನು ಸಮಾಜ ಹೇಗೆ ರೂಪಿಸಿಕೊಂಡಿದೆ ಎನ್ನುವುದನ್ನು ಗಮನಿಸದೆ ಇರುವುದರಿಂದ ನಮ್ಮ ಕಲಿಕೆ ಪದ್ಧತಿಯಲ್ಲಿ ಏರುಪೇರುಗಳಾಗಿವೆ. ಪಠ್ಯಪುಸ್ತಕಗಳಿಗಾಗಿ ಹಣ ವ್ಯಯವಾಗುತ್ತಿದೆ. ಬದಲಾಗಿರುವ ಪರಿಸರದಲ್ಲಿ ತಂತ್ರಜ್ಞಾನದ ಬಳಕೆಯಿಂದ ಓದುವ ಸಾಮಗ್ರಿಯನ್ನು ವಿದ್ಯಾರ್ಥಿಗೆ ಒದಗಿಸಲು ಈಗ ಬೇರೆ ದಾರಿಗಳಿವೆ. ಇವು ಕಡಿಮೆ ವೆಚ್ಚದ ಮತ್ತು ಹೆಚ್ಚು ಪರಿಣಾಮಕಾರಿಯಾದ ದಾರಿಗಳು. ನಮ್ಮ ಚಿಂತನಾ ಕ್ರಮದ ಚೌಕಟ್ಟುಗಳನ್ನು ಬದಲಿಸದಿದ್ದಲ್ಲಿ ಶಿಕ್ಷಣ ಎಂದರೆ ಹಣ ಎನ್ನುವ ಪರಿಸ್ಥಿತಿ ಬದಲಾಗುವುದಿಲ್ಲ.

ಇನ್ನೂ ಒಂದು ಉದಾಹರಣೆಯನ್ನು ನೋಡೋಣ. ಶಾಲೆ ಎಂಬುದು ಮನೆಯ ಮುಂದುವರಿಕೆಯೋ ಅಥವಾ ಅದೇ ಬೇರೆಯ ವ್ಯವಸ್ಥೆಯೋ ಎಂಬ ಬಗೆಗೆ ನಮಗ ಗೊಂದಲಗಳಿವೆ. ಆದರೆ ಈಗ ಶಾಲೆಗಳು ಸಮಾಜದಿಂದ ಬೇರೆಯಾದ (ಜೈಲುಗಳನ್ನು ನಾವು ಹೇಗೆ ಸಮಾಜದಿಂದ ಪ್ರತ್ಯೇಕಿಸಿದ್ದೇವೆಯೋ ಹಾಗೆಯೇ ಶಾಲೆಗಳನ್ನೂ ಬೇರೆ ಮಾಡಿದ್ದೇವೆ. ಹೋಲಿಕೆ ಒರಟಾಗಿದ್ದರೂ ಇದನ್ನು ಹೇಳದಿರಲು ಸಾಧ್ಯವಿಲ್ಲ) ಸುಮಾರು ಹತ್ತು ವರ್ಷಗಳ ಕಾಲಾವಧಿಯಲ್ಲಿ ಬೆಳೆಯುವ ಮಕ್ಕಳಿಗೂ ಸಮಾಜಕ್ಕೂ ಲಾಲನೆಯ ನೆಲೆಯನ್ನು ಬಿಟ್ಟರೆ ಬೇರೆ ಸಂಬಂಧಗಳೆ ಇಲ್ಲವೆಂದು ನಮ್ಮ ಶಿಕ್ಷಣ ಕ್ರಮ ಹೇಳುತ್ತಿದೆ. ಈ ಅವಧಿಯಲ್ಲಿ ದೇಹಶ್ರಮ ಎನ್ನುವ ನೆಲೆಯನ್ನು ಅಮಾನತ್ತಿನಲ್ಲಿಟ್ಟಿರುತ್ತೇವೆ. ಶಿಕ್ಷಣ ಎನ್ನುವುದು ಸಮಾಜೀಕರಣದ ಸಾಧನ ಎನ್ನುವುದಾದರೆ ಹೀಗೆ ದೇಹಶ್ರಮವನ್ನು ಒಳಗೊಳ್ಳದಂತೆ ಹತ್ತು ವರ್ಷಗಳನ್ನು ಕಳೆಯುವ ಬಗೆಯನ್ನು ಹೇಗೆ ಸಮರ್ಥಿಸುವುದು. ಹೀಗೆ ಬೆಳೆಯುವುದರಿಂದ ದೈಹಿಕ ಶ್ರಮಕ್ಕೆ ಬಗೆಗೆ ಮಕ್ಕಳು ಒಗ್ಗಿಕೊಳ್ಳದೇ ಹೋಗುತ್ತಾರೆ.ಅಲ್ಲದೆ ಆ ಬಗೆಯ ದುಡಿಮೆಯ ಬಗೆಗೂ ಅವರ ದೃಷ್ಟಿಕೋನ ಕೀಳರಿಮೆಯ ನೆಲೆಯಲ್ಲಿರುತ್ತದೆ.

ಒಂದು ವೇಳೆ ಈ ಅವಧಿಯಲ್ಲಿ ಆ ವಯೋಮಾನಕ್ಕೆ ತಕ್ಕ ಮತ್ತು ಸಮುದಾಯಕ್ಕೆ ಉಪಯುಕ್ತವಾದ ಚಟುವಟಿಕೆಗಳಲ್ಲಿ ತೊಡಗಿ ಮಕ್ಕಳು ಬೆಳೆಯುವುದು ಅಗತ್ಯ. ಅದರಿಂದ ಮಕ್ಕಳು ಸಮಾಜಕ್ಕೆ ಭಾರ ಎನಿಸುವ ಬದಲು ಅವರು ತಮ್ಮ ಕಲಿಕೆ ಅವಧಿಯಲ್ಲಿ ಸಮಾಜಕ್ಕೆ ಉಪಯುಕ್ತವೇ ಆಗಿರುತ್ತಾರೆ. ಇಂತಹ ಪ್ರಯೋಗಗಳನ್ನು ಯಶಸ್ವಿಯಾಗಿ ಬೇರೆ ಸಮಾಜಗಳಲ್ಲಿ ಜಾರಿಗೆ ತಂದಿರುವ ಉದಾಹರಣೆಗಳಿವೆ. ಇದರಿಂದ ಶಿಕ್ಷಣ ವಲಯ ಹಣ ಹೂಡಿಕೆಯ ವಲಯವೆಂಬ ನೆಲೆಯಿಂದ ನಾವು ದೂರ ಸರಿಯಬಹುದು.

ಈ ಉದಾಹರಣೆಗಳನ್ನು ನೀಡಿದ್ದರ ಉದ್ದೇಶವಿಷ್ಟೆ. ಶಿಕ್ಷಣ ಕ್ಷೇತ್ರವೆಂದರೆ ಅಲ್ಲಿ ಸರಕಾರವೂ ಹಣ ಹೂಡುತ್ತಿದೆ ಮತ್ತು ಪಾಲಕರು ತಮ್ಮ ಗಳಿಕೆಯ ದೊಡ್ಡ ಪಾಲನ್ನು ಹೂಡುತ್ತಿದ್ದಾರೆ. ಇದು ಅನಿವಾರ್ಯವೆಂಬ ಪರಿಸ್ಥಿತಿಯನ್ನು ನಾವು ಕಟ್ಟಿಕೊಂಡಿದ್ದೇವೆ. ಈ ಗ್ರಹಿಕೆಯನ್ನು ಬದಲಿಸದೇ ಹೋದರೆ ಉಳಿಗಾಲವಿಲ್ಲ. ಅಥವಾ ಈಗಿರುವಂತೆ

ಶಿಕ್ಷಣ ವ್ಯವಸ್ಥೆ ತಾರತಮ್ಯವನ್ನು ಬೆಳೆಸುತ್ತ ಕೆಲವರಿಗೆ ಅವಕಾಶಗಳ ಬಾಗಿಲನ್ನು ತೆರೆದು ಉಳಿದವರನ್ನು ನಿರಾಕರಿಸುತ್ತ ಮುಂದೆ ಸಾಗುತ್ತದೆ.

ಇನ್ನು ಕೇಂದ್ರ ಸಚಿವರು ಹೇಳಿರುವ ಪರೀಕ್ಷಾ ಪದ್ಧತಿಯ ಸುಧಾರಣೆಯ ಮಾತಿಗೆ ಬರೋಣ. ಹತ್ತನೆಯ ತರಗತಿಯ ಪಬ್ಲಿಕ್ ಪರೀಕ್ಷೆಯನ್ನು ತೆಗೆದು ಹಾಕುವ ಮಾತು ಸರಿಯೋ ತಪ್ಪೋ ಎಂಬ ಚರ್ಚೆ ಬಿರುಸಾಗಿ ನಡೆಯುತ್ತಿದೆ.ಈಗಿರುವ ಬಗೆಯ ಪರೀಕ್ಷೆಗಳು ಸರಿಯೋ ತಪ್ಪೋ ಎಂದು ನಾವು ಕೇಳಿಕೊಳ್ಳುತ್ತಿಲ್ಲ. ಈಗ ಪರೀಕ್ಷೆಗಳು ನೆನಪು ಮತ್ತು ಬರವಣಿಗೆ ಕೌಶಲಗಳಿಗೆ ಮಣೆ ಹಾಕುತ್ತಿವೆ. ಮೌಖಿಕತೆಯನ್ನು ಆಧರಿಸಿದ್ದ ಕಾಲಾವಧಿಯಲ್ಲಿ ಸಮುದಾಯಗಳು ನೆನಪಿಗೆ ಹೆಚ್ಚಿನ ಮನ್ನಣೆಯನ್ನು ನೀಡಿದ್ದವು. ಆದರೆ ಈಗ ಬದಲಾದ ಪರಿಸ್ಥಿತಿಯಲ್ಲಿ ಮಾಹಿತಿಯನ್ನು ಇಲ್ಲವೇ ಯಾವುದೇ ಸಾಮಗ್ರಿಯನ್ನು ನೆನಪಿಟ್ಟುಕೊಳ್ಳಬೇಕಾದ ಅಗತ್ಯವಿಲ್ಲ. ಅದು ಬೆಳೆಸಿಕೊಳ್ಳ ಬೇಕಾದ ಕೌಶಲವಾಗಿ ಈಗ ಉಳಿದಿಲ್ಲ. ಹಾಗೆಯೇ ಬರವಣಿಗೆಯ ಕೌಶಲ ಕೂಡ. ನಾಗರಿಕತೆಯ ಬೆಳವಣಿಗೆಯಲ್ಲಿ ಎಲ್ಲರೂ ಬರೆಯ ಬೇಕಾಗುವ ಪರಿಸ್ಥಿತಿ ಎಂದೂ ಒದಗಿ ಬಂದಿಲ್ಲ. ಎಲ್ಲರೂ ಓದಬೇಕಾದ ಅಗತ್ಯ ಇರಬಹುದು. ಓದುವ ಕೌಶಲಕ್ಕೂ ಬರೆಯುವ ಕೌಶಲಕ್ಕೂ ನೇರವಾದ ಸಂಬಂಧವಿಲ್ಲ. ಚೆನ್ನಾಗಿ ಓದುವ ನಾವು ಚೆನ್ನಾಗಿ (ಅಥವಾ ಸರಿಯಾಗಿ) ಬರೆಯದಿರಲೂ ಬಹುದು. ಅಲ್ಲದೆ ಬರೆಯುವ ಕೌಶಲವನ್ನು ಕಲಿತು ಶಿಕ್ಷಣ ವ್ಯವಸ್ಥೆಯಿಂದ ಹೊರಬಂದ ಬಹುಪಾಲು ಜನರು ಆ ಕೌಶಲವನ್ನು ಉಪಯುಕ್ತವಾಗಿ ಬಳಸುವ ಸಂದರ್ಭಗಳೇ ಇರುವುದಿಲ್ಲ. ಹಾಗೆ ಬರೆಯುವವರೂ ಕೂಡ ಶಾಲೆಯಲ್ಲಿ ಕಲಿತ ಬರೆಯುವ ಕೌಶಲಕ್ಕಿಂತ ಬೇರೆಯಾದ ಬಗೆಯಲ್ಲೇ ಅದನ್ನು ಬಳಸುತ್ತಾರೆ.(ಕೈ ಬೆರಳುಗಳನ್ನು ಬಳಸಿ ಬರೆಯಲು ಕಲಿತವರು ಕಂಪ್ಯೂಟರ್ ಬಳಸಿ ಬರೆಯುವುದನ್ನು ಹೋಲಿಸಿ ನೋಡಿ) ಹೀಗಾಗಿ ನಮ್ಮ ಪರೀಕ್ಷಾ ಪದ್ಧತಿಗಳ ಎರಡೂ ಗುರಿಗಳೂ ಅನಗತ್ಯವಾಗಿವೆ. ಹಾಗಿದ್ದರೆ ಪರೀಕ್ಷೆಗಳೇ ಬೇಡವೇ ಎಂದು ಕೆಲವರು ಹೌಹಾರಿ ಕೇಳಬಹುದು. ಇದಕ್ಕೇನು ಉತ್ತರ ನೋಡೋಣ.

ಈಗ ಎಸ್ಸೆಸ್ಸೆಲ್ಸಿ ಪರೀಕ್ಷೆಗಳಲ್ಲಿ ಸರಿಯಾದ ಉತ್ತರಗಳನ್ನು ಆಯ್ದು ಬರೆಯುವ ಪದ್ಧತಿಯೊಂದನ್ನು ಜಾರಿಗೆ ತಂದರು. ಅದರ ವಿರುದ್ಧ ತಗಾದೆ ಎತ್ತಿದವರು ಹೇಳಿದ್ದೇನು: 1. ಮಕ್ಕಳು ದೀರ್ಘವಾದ ಉತ್ತರಗಳನ್ನು ಬರೆಯ ಬಲ್ಲರೇ ಎಂಬುದನ್ನು ಇದರಿಂದ ತಿಳಿಯಲು ಆಗುತ್ತಿಲ್ಲ. 2. ನಕಲು ಮಾಡುವ ಪ್ರವೃತ್ತಿ ಹೆಚ್ಚುತ್ತಿದೆ. 3. ಮಕ್ಕಳು ಸುಲಭವಾಗಿ ಹೆಚ್ಚು ಅಂಕಗಳನ್ನು ಪಡೆಯುತ್ತಿದ್ದಾರೆ. ಅಂಕಗಳಿರುವುದು ಕೊಡುವುದಕ್ಕಲ್ಲ ತಡೆಹಿಡಿಯುವುದಕ್ಕೆ ಎಂದು ನಂಬಿರುವ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಮೂರನೆಯ ತಕರಾರನ್ನು ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ದೀರ್ಘ ಉತ್ತರದ ತಕರಾರು ಹಳೆಯ ಪದ್ಧತಿಯ ಗುಂಗಿನಿಂದ ಹೊರ ಬರಲಾರದವರು ಸಹಜವಾಗಿಯೇ ಮಂಡಿಸುತ್ತಾರೆ. ನಕಲು ಮಾಡುವ ಮಾತು ಪರೀಕ್ಷೆಯನ್ನು ನಡೆಸುತ್ತಿರುವ ಬಗೆಯಿಂದ ಉಂಟಾದುದು. ಸದ್ಯ ಇವೆಲ್ಲವನ್ನೂ ಬದಿಗಿಡೋಣ. ಮಕ್ಕಳ ತಿಳುವಳಿಕೆಯನ್ನು ಅರಿಯಲು ತಕ್ಕ ಪರೀಕ್ಷೆಯ ವಿಧಾನವನ್ನು ರೂಪಿಸ ಬೇಕು ಮತ್ತು ಅದನ್ನು ಜಾರಿಗೆ ಕೊಡುವಾಗ ಈಗಿರುವ ಕಾವಲಿನ ಪದ್ಧತಿಯನ್ನು ಬಿಟ್ಟುಕೊಡಬೇಕು. ಇವೆಲ್ಲವೂ

ದೊಡ್ಡ ಬಗೆಯ ಸುಧಾರಣೆಗಳನ್ನು ಬಯಸುತ್ತವೆ. ಅಂದರೆ ಸಚಿವರು ಹೇಳುತ್ತಿರುವಂತೆ ಪಬ್ಲಿಕ್ ಪರೀಕ್ಷೆಯನ್ನು ತೆಗೆದು ಹಾಕುವುದು ಅಂತಹ ಸುಧಾರಣೆಯಲ್ಲ.

ಎಲ್ಲ ರಾಜ್ಯಗಳಿಗೂ ಒಂದೇ ಕೇಂದ್ರೀಕೃತ ಶಿಕ್ಷಣ ಮಂಡಳಿ ಇರಬೇಕು ಎನ್ನುವ ಸಲಹೆ ಸಚಿವರು ಹೇಳುತ್ತಿರುವ ವಿದೇಶಿ ಬಂಡವಾಳ ಹೂಡಿಕೆಯ ಸಲಹೆಯೊಡನೆ ನಂಟನ್ನು ಹೊಂದಿದೆ. ಹೂಡಿಕೆದಾರರು ಪ್ರತಿ ರಾಜ್ಯದಲ್ಲೂ ಬೇರೆಬೇರೆ ಮಂಡಳಿಗಳೊಡನೆ 'ವ್ಯವಹರಿಸುವ' ಇಕ್ಕಟ್ಟಿನಿಂದ ಪಾರಾಗಲು ಇಂತಹ ಕೇಂದ್ರೀಕೃತ ಮಂಡಲಿ ನೆರವಾಗುತ್ತದೆಯಲ್ಲವೇ? ಇದೆಲ್ಲವೂ ಈ ಲೇಖನದಲ್ಲಿ ಮೊದಲಿನಿಂದಲೂ ಹೇಳುತ್ತ ಬಂದಿರುವಂತೆ ಶಿಕ್ಷಣವನ್ನು ಉಳ್ಳವರ ಸ್ವತ್ತನ್ನಾಗಿಸಿರುವ ಇಂದಿನ ಪದ್ಧತಿಯನ್ನು ಮತ್ತಷ್ಟು ಬಲಪಡಿಸುವ, ಇಲ್ಲದಿರುವವರಿಗೆ ಈಗ ದೊರೆಯುತ್ತಿರುವ ಅಲ್ಪಸ್ವಲ್ಪ ಅವಕಾಶಗಳನ್ನು ಕಿತ್ತುಕೊಳ್ಳುವ ಗುರಿಯನ್ನೇ ಹೊಂದಿರುವ ಸಲಹೆಗಳಾಗಿವೆ.

## ಶಾಲೆಗಳಲ್ಲಿ ಕನ್ನಡ: ಹೈಕೋರ್ಟ್ ತೀರ್ಪು

ಕರ್ನಾಟಕ ರಾಜ್ಯದ ಹೈಕೋರ್ಟ್ ಪ್ರಾಥಮಿಕ ಶಾಲೆಗಳಲ್ಲಿ ಕನ್ನಡ ಭಾಷಾಮಾಧ್ಯಮವನ್ನು ಜಾರಿಗೆ ಕೊಡುವ ಬಗೆಗೆ ರಾಜ್ಯ ಸರಕಾರ ನೀಡಿದ್ದ 1994 ರ ಆದೇಶವನ್ನು ಅನೂರ್ಜಿತಗೊಳಿಸಿದೆ. ಸರಕಾರ ಶೀಕ್ಷಣ ನೀತಿ ಮತ್ತು ಭಾಷಾನೀತಿಗಳಲ್ಲಿ ಇರುವ ಹೊಂದಾಣಿಕೆಯಿಲ್ಲದ ನೆಲೆಗಳಿಂದಾಗಿ ಈ ಬಗೆಯ ಕಾನೂನು ಕದನಗಳಿಗೆ ಕೊನೆಯೇ ಇಲ್ಲವೆಂದು ತೋರುತ್ತದೆ. ಹೈಕೋರ್ಟ್ ತೀರ್ಪಿನ ಒಟ್ಟು ಸಾರಾಂಶ ನಮಗೀಗ ಗೊತ್ತಿದೆ. ಆದರೆ ಸರಕಾರ ತನ್ನ ಆದೇಶದ ಸಮರ್ಥನೆಗೆ ಮಂಡಿಸಿದ ವಾದ ಮತ್ತು ನ್ಯಾಯಪೀಠ ಆ ವಾದವನ್ನು ಒಪ್ಪದೇ ಇರಲು ಇರುವ ಕಾರಣಗಳು ಇನ್ನೂ ಗೊತ್ತಾಗಿಲ್ಲ. ಗೊತ್ತಾದರೂ ಅದರಿಂದ ತೀರ್ಪಿನ ನೆಲೆಗಳನ್ನು ಬದಲಿಸಲು ಬರುವುದಿಲ್ಲ. ಆದರೆ ಒಂದು ಸಂಗತಿ ಗೊತ್ತಾಗುತ್ತಿದೆ. ಸರಕಾರ ತನ್ನ ಭಾಷಾನೀತಿಯನ್ನು ತನ್ನ ಶಾಲೆಗಳಲ್ಲಿ ಮತ್ತು ಸರಕಾರದ ಅನುದಾನ ಪಡೆಯುವ ಶಾಲೆಗಳಲ್ಲಿ ಜಾರಿಗೆ ತರಬಹುದೇ ಹೊರತು ಅನುದಾನ ಪಡೆಯದ ಶಾಲೆಗಳ ಮೇಲೆ ಭಾಷಾನೀತಿಯನ್ನು ಹೇರಲು ಬರುವುದಿಲ್ಲ ಎಂದು ಹೈಕೋರ್ಟ್ ತೀರ್ಮಾನ ಮಾಡಿದಂತಿದೆ. ಹೈಕೋರ್ಟ್‌ನ ಈ ತೀರ್ಪು ಸಂವಿಧಾನದ ಬೇರೆಬೇರೆ ಕಲಮುಗಳ ಹಿನ್ನೆಲೆಯಲ್ಲಿ ಸರಿಯಾದುದೋ ಇಲ್ಲವೊ ಎಂಬುದನ್ನು ಹೇಳುವುದು ಈಗ ಆಗದ ಮಾತು. ಮತ್ತೆ ಒಂದು ದಶಕ ಅದಕ್ಕಾಗಿ ಕಾನೂನಿನ ಕದನ ಮಾಡಬೇಕಾಗಬಹುದು.

ಮೊದಲೇ ಹೇಳಿದಂತೆ ಇದು ಸರಕಾರದ ಶಿಕ್ಷಣ ನೀತಿಯಲ್ಲಿರುವ ಕೊರತೆಗಳ ಫಲ. ಅನುದಾನರಹಿತ ಶಾಲೆಗಳು ಎಂಬ ಗುಂಪು ಬೆಳೆಯಲು ಅನುವು ಮಾಡಿಕೊಟ್ಟದ್ದರಲ್ಲಿ ಎಡವಟ್ಟಾಗಿದೆ. ಖಾಸಗಿಯವರಿಗೆ, ಧಾರ್ಮಿಕ ಇಲ್ಲವೇ ಭಾಷಿಕ ಅಲ್ಪಸಂಖ್ಯಾತರಿಗೆ ತಮ್ಮದೇ ಶಿಕ್ಷಣ ಸಂಸ್ಥೆಗಳನ್ನು ನಡೆಸುವ ಹಕ್ಕನ್ನು ಸಂವಿಧಾನ ನೀಡಿದ್ದರೂ ಅವು ಸರಕಾರದ ಅನುದಾನ ಪಡೆಯದೇ ನಡೆಯಬೇಕು ಎಂದು ಹೇಳಿಲ್ಲವಲ್ಲ. ರಾಜ್ಯದಲ್ಲಿ ಅನುದಾನ ಪಡೆಯುವ ಮತ್ತು ಸರಕಾರ ನಡೆಸುವ ಶಿಕ್ಷಣ ಸಂಸ್ಥೆಗಳ ಸಂಖ್ಯೆಯನ್ನು ಗಮನಿಸಿದರೆ ಅನುದಾನ ಪಡೆಯದ ಶಾಲೆಗಳ ಸಂಖ್ಯೆ ತೀರಾಕಡಿಮೆ. ಆದ್ದರಿಂದ ಇದು ಸರಕಾರದ ವೆಚ್ಚದಲ್ಲಿ ಹೆಚ್ಚಿನ ಉಳಿತಾಯವನ್ನೇನೂ ಮಾಡಿಲ್ಲ. ಈಗಲೂ ದೊರೆಯುವ ಅಂಕಿ ಅಂಶಗಳನ್ನು ನೋಡಿದರೆ 1994ರ ಆದೇಶವನ್ನು ಉಲ್ಲಂಘಿಸಿರುವ ಶಾಲೆಗಳ ಸಂಖ್ಯೆ ಎರಡು ಸಾವಿರದ ಒಳಗೆ ಇದೆ. ಅಂದರೆ ನೂರಕ್ಕೆ ಮೂರರಿಂದ ನಾಲ್ಕು ಶಾಲೆಗಳು. ಇವುಗಳಿಗೆ ಅನುದಾನವನ್ನು ನೀಡುವ ಮೂಲಕ ಇಲ್ಲವೇ ಅನುದಾನವನ್ನು ಪಡೆಯಲೇಬೇಕೆಂಬ ಶರತ್ತು ಹಾಕುವ ಮೂಲಕ

ಸರಕಾರ ತನ್ನ ಭಾಷಾನೀತಿಯನ್ನು ಜಾರಿಮಾಡಲು ಅವಕಾಶವನ್ನು ಪಡೆದುಕೊಳ್ಳಬಹುದು. ಜೊತೆಗೆ ಆ ಶಾಲೆಗಳ ಶೈಕ್ಷಣಿಕ ಮತ್ತು ಆಡಳಿತ ವ್ಯವಹಾರಗಳಲ್ಲಿ ಈಗ ಆಗುತ್ತಿರುವ ಮಾನವ ಹಕ್ಕುಗಳ ಉಲ್ಲಂಘನೆಯನ್ನೂ ತಪ್ಪಿಸಬಹುದು.

ಶಿಕ್ಷಣ ನೀತಿಯಲ್ಲಿರುವ ಇನ್ನೊಂದು ಕೊರತೆಯಿಂದಾಗಿ ರಾಜ್ಯದುದ್ದಕ್ಕೂ ಸಾಮಾಜಿಕ ಅಸಮಾನತೆಯನ್ನು ಎತ್ತಿಹಿಡಿಯುವ ಶಾಲೆಗಳು ಹೆಚ್ಚುತ್ತಿವೆ. ಈ ಅಪಾಯ ಮೊದಲಾದದ್ದು 1992ರ ಗೋಕಾಕ್ ಚಳುವಳಿಯ ಬಳಿಕ. ಆಗಲೂ ಕಲಿಸುವ ಭಾಷೆಯ ಸಮಸ್ಯೆ ಮುಂದಾಗಿತ್ತು. ಸಿಬಿಎಸ್‌ಸಿ ಮತ್ತು ಐಸಿಎಸ್‌ಸಿ ಪಠ್ಯಕ್ರಮವನ್ನು ಬಳಸುವ ಶಾಲೆಗಳು ರಾಜ್ಯ ಸರಕಾರದ ಶಿಕ್ಷಣನೀತಿ ಮತ್ತು ಭಾಷಾನೀತಿಗೆ ಸವಾಲು ಹಾಕುತ್ತಿವೆ. ಇದು ಅನುದಾನ ಪಡೆಯದ ಸಂಸ್ಥೆಗಳ ಆಯ್ಕೆಯಂತೆ ಬಿಂಬಿಸಲಾಗಿದೆ. ಆದರೆ ತನ್ನ ಶಿಕ್ಷಣ ನೀತಿಯನ್ನು ಮರುರೂಪಿಸುವ ಮೂಲಕ ಸರಕಾರ ಈ ಬಗೆಯ ಶಾಲೆಗಳನ್ನು ರಾಜ್ಯದ ಪಠ್ಯಕ್ರಮವನ್ನು ಪ್ರಾಥಮಿಕ ಹಂತದವರೆಗೂ ಪಾಲಿಸುವ ಶರತ್ತನ್ನು ಹಾಕಲು ಸಾಧ್ಯವಿದೆ. ಆಗ ಭಾಷಾನೀತಿಯನ್ನು ಜಾರಿಗೆ ನೀಡುವಲ್ಲಿ ಇರುವ ಅಡ್ಡಿಗಳು ಕಡಿಮೆಯಾಗುತ್ತವೆ. ಇಲ್ಲದಿದ್ದರೆ ದಿನಕಳೆದಂತೆ ಉಳ್ಳವರು ಕಟ್ಟಿಕೊಳ್ಳುವ ಈ ಕೋಟೆಶಾಲೆಗಳು ಜನರ ಬದುಕಿನಿಂದ ಹೊರಚ್ಚಾಗಿಯೇ ಉಳಿಯುತ್ತವೆ.

ಸರಕಾರದ ಭಾಷಾನೀತಿಯ ನಿರೂಪಣೆಯಲ್ಲಿ ಇರುವ ಅತಾರ್ಕಿಕ ನೆಲೆಗಳನ್ನು ಕೈಬಿಡಬೇಕು. ಮಗುವಿಗೆ ತಾಯ್ನುಡಿಯಲ್ಲಿ ಕಲಿಸಿದರೆ ಉತ್ತಮ ಕಲಿಕೆ ಸಾಧ್ಯ ಎನ್ನುವ ಎರಡು ಬಾಯಿ ಕತ್ತಿಯನ್ನು ಹಿಡಿದು ಕಸರತ್ತು ಮಾಡುವುದನ್ನು ನಿಲ್ಲಿಸಬೇಕು. ನಾಡಿನಲ್ಲಿರುವ ಆರುನೂರರ ಆಸುಪಾಸಿನ ತಾಯ್ನುಡಿಗಳಲ್ಲಿ ನಲವತ್ತರಷ್ಟು ಮಾತ್ರ ಈಗ ಶಾಲೆಗಳಲ್ಲಿ ಮಾಧ್ಯಮಗಳಾಗಿವೆ. ಆದ್ದರಿಂದ ಭಾಷಾನೀತಿಯು ಪ್ರಜಾಪ್ರಭುತ್ವದ ಮೌಲ್ಯಗಳ ನೆಲಗಟ್ಟನ್ನು ನೆಮ್ಮುವುದು ಒಳ್ಳೆಯದು. ಸಮಾನತೆಯನ್ನು ಸಾಧಿಸುವುದು ಮತ್ತು ಅಸಮಾನತೆಯನ್ನು ನಿವಾರಿಸುವುದು ನಮ್ಮ ಗುರಿಯಾದರೆ ಅದಕ್ಕೆ ಶಿಕ್ಷಣ ಸಾಧನವಾಗಬೇಕು. ಅಲ್ಲಿ ಭಾಷಾನೀತಿ ಕೂಡ ಈ ಸಮಾನತೆಯ ನೆಲೆಯಲ್ಲಿಯೇ ನಿರೂಪಿತವಾಗಬೇಕು. ಆಗ ಸಂವಿಧಾನ ದತ್ತವಾದ ಹಕ್ಕುಗಳ ಮರೆಯಲ್ಲಿ ನಡೆಯುತ್ತಿರುವ ನಕಲಿಯಾಟಗಳನ್ನು ನಿಲ್ಲಿಸಲು ಆಗಬಹುದೆಂದು ತೋರುತ್ತದೆ. ಇದು ಭಾವನಾತ್ಮಕ ನೆಲೆಯಲ್ಲಿ ಮಾತ್ರ ನಡೆಯುವ ವ್ಯವಹಾರವಾಗದೆ, ಆಗಲೇ ಹೇಳಿದಂತೆ ಮಾನವ ಹಕ್ಕುಗಳ ನೆಲೆಯಲ್ಲಿ ಬೇರೂರಬೇಕಾಗಿದೆ.

# ತರಗತಿಯಲ್ಲಿ ಹಳಗನ್ನಡ ಕೃತಿಗಳು

ಹಳಗನ್ನಡದ ಪರಿಚಯ ಕನ್ನಡದ ವಿದ್ಯಾರ್ಥಿಗಳಿಗೆ ಸುಮಾರಾಗಿ ಪ್ರೌಢಶಾಲೆಯಲ್ಲಿ ಓದುವಾಗಲೇ ಆಗಿರುತ್ತದೆ. ಅಲ್ಲಿಂದ ಮುಂದೆ ಕಾಲೇಜಿನಲ್ಲಿ ಕಡ್ಡಾಯ ಕನ್ನಡದ ತರಗತಿಗಳಲ್ಲೂ ಅವರು ಕೆಲವು ಆಯ್ದ ಭಾಗಗಳನ್ನು ಓದುತ್ತಾರೆ. ಅಂದರೆ ಸಾಮಾನ್ಯವಾಗಿ ಪದವಿ ಮುಗಿಸಿದ ಕನ್ನಡದ ಹುಡುಗರಿಗೆ ಹಳಗನ್ನಡದ ಕವಿಗಳು ಯಾರು ಯಾರು, ಅವರು ಏನು ಕೃತಿ ಬರೆದಿದ್ದಾರೆ ಎಂಬಷ್ಟು ತಿಳಿದಿರುತ್ತದೆ. ಅವರಿಗೆ ವಿಶೇಷವಾಗಿ ಆ ಕೃತಿಗಳನ್ನು ತಾವೇ ಓದಬೇಕೆಂಬ ಆಸೆ ಮೂಡುವುದೆಂದು ಹೇಳಲಾಗುವುದಿಲ್ಲ. ಅದು ಪಠ್ಯಕ್ರಮದ ಅಪೇಕ್ಷೆಯೂ ಇರಲಾರದು. ಆ ಹಂತದಲ್ಲಿ ಕನ್ನಡದ ಓದಿನ ಉದ್ದೇಶ ಭಾಷೆಯ ಪರಿಚಯವೋ ಅಥವಾ ಸಾಹಿತ್ಯದ ಆಸಕ್ತಿಯ ಬೆಳವಣಿಗೆಯೋ ಎಂಬುದು ಅಷ್ಟು ಸ್ಪಷ್ಟವಾಗಿ ಹೇಳಲಾಗುವುದಿಲ್ಲ. ಆದ್ದರಿಂದ ಅವೆರಡರಲ್ಲಿ ಯಾವುದು ಪೂರ್ಣವಾಗುತ್ತದೆ ಎಂಬುದು ಕೂಡ ಅಸ್ಪಷ್ಟ.

ಕನ್ನಡವನ್ನೇ ತಮ್ಮ ವಿಶೇಷ ಓದಿನ ವಿಷಯಗಳಲ್ಲಿ ಒಂದನ್ನಾಗಿ ಪದವಿ ತರಗತಿಗಳಲ್ಲಿ ಆಯ್ದುಕೊಳ್ಳುವ ವಿದ್ಯಾರ್ಥಿಗಳನ್ನು ಗಮನಿಸಿ ಇಲ್ಲಿ ಕೆಲವು ಸಂಗತಿಗಳನ್ನು ಮಂಡಿಸಲು ಇಚ್ಛಿಸುತ್ತೇನೆ. ಈ ವಿದ್ಯಾರ್ಥಿಗಳು ಪದವಿ ತರಗತಿಗಳಲ್ಲಿ ಹಳಗನ್ನಡದ ಕೆಲವಾದರೂ ಮಹತ್ವದ ಕೃತಿಗಳನ್ನು ಪೂರ್ಣವಾಗಿ ಓದುವ ಅವಕಾಶವನ್ನು ಪಡೆದಿರುತ್ತಾರೆ. ಜತೆಗೆ ಆ ಕೃತಿಗಳನ್ನು ಅರಿಯಲು ಬೇಕಾದ ಹಿನ್ನೆಲೆಯನ್ನು ಕೂಡ ಪಡೆಯುವ ಅವಕಾಶವಿದೆ. ಸಾಹಿತ್ಯ ಚರಿತ್ರೆ, ಕಾವ್ಯಮೀಮಾಂಸೆ, ವ್ಯಾಕರಣ, ಭಾಷಾಚರಿತ್ರೆ, ಛಂದಸ್ಸು ಮುಂತಾದ ಪಠ್ಯವಿಷಯಗಳಲ್ಲಿ ಈ ಅವಕಾಶವಿರುತ್ತದೆ. ಇದು ಸಾಧ್ಯತೆ ಮಾತ್ರ. ವಾಸ್ತವವಾಗಿ ಹೀಗೇನೂ ಆಗುವುದಿಲ್ಲ. ಅದಕ್ಕೆ ಕಾರಣಗಳು ಹಲವು. ಅವರು ಓದುವ ಇತರ ಪಠ್ಯವಿಷಯಗಳ ಜತೆ ಕನ್ನಡ ಯಾವ ಅರ್ಥಪೂರ್ಣ ಸಂಬಂಧವನ್ನೂ ಕೂಡ ಪಡೆಯದೇ ಹೋಗುವುದು ಆ ಕಾರಣಗಳಲ್ಲಿ ಒಂದು. ಆದ್ದರಿಂದ ಕನ್ನಡವನ್ನು ಕಡ್ಡಾಯ ತರಗತಿಗಳಲ್ಲಿ ಓದುವುದಕ್ಕೂ, ವಿಶೇಷ ವಿಷಯವನ್ನಾಗಿ ಓದುವುದಕ್ಕೂ ಅಷ್ಟೇನೂ ವ್ಯತ್ಯಾಸ ಇರುವುದಿಲ್ಲ. ಎಲ್ಲವನ್ನೂ ಅಡಕಗೊಳಿಸಿ ಪರೀಕ್ಷೆಗೆ ತಕ್ಕಷ್ಟು ಸಾಮಗ್ರಿಯನ್ನು ತಯಾರಿಸಿಕೊಳ್ಳುವುದು ವಿದ್ಯಾರ್ಥಿಯ ಮುಖ್ಯ ಆಸಕ್ತಿಯಾಗಿರುತ್ತದೆ. ಏಕೆಂದರೆ ಅವರ ಮುಖ್ಯ ಆಯ್ಕೆ ಕನ್ನಡವೊಂದೇ ಆಗಿರುವುದಿಲ್ಲ.

ಕನ್ನಡವನ್ನು ಸ್ನಾತಕೋತ್ತರ ಹಂತದಲ್ಲಿ ತಮ್ಮ ಅಧ್ಯಯನ ವಿಷಯವನ್ನಾಗಿ ತೆಗೆದುಕೊಳ್ಳುವವರ ಸಂಗತಿಯನ್ನೀಗ ನೋಡೋಣ. ಇಲ್ಲಿ ನಮ್ಮ ಸಮಸ್ಯೆಯ ನಿಜವಾದ ಸ್ವರೂಪ ತಿಳಿಯುತ್ತದೆ. ಹಳಗನ್ನಡದ ಕೃತಿಗಳ ಆಯ್ದ ಭಾಗಗಳನ್ನು ಪಠ್ಯವನ್ನಾಗಿ ಇಲ್ಲಿ

ಓದುವುದು ನಿಗದಿಯಾಗಿರುತ್ತದೆ. ಇಡೀ ಕೃತಿಯ ಪರಿಚಯ ವಿದ್ಯಾರ್ಥಿಗಳಿಗೆ ಆಗದೇ ಇರುವ ಸಂದರ್ಭವೇ ಹೆಚ್ಚು. ಅವರನ್ನು ಇಡೀ ಕೃತಿಯನ್ನು ಓದುವಂತೆ ಪ್ರೇರೇಪಿಸುವ ಅಂಶಗಳು ಮಾತ್ರ ಯಾವುದೂ ಕಾಣುತ್ತಿಲ್ಲ. ಅದಕ್ಕೆ ಬದಲಾಗಿ ನಿಗದಿತ ಪಠ್ಯವನ್ನಷ್ಟೇ ಓದಿದರೆ ಸಾಕೆನಿಸುವ ಬಗೆಯಿದೆ. ಇನ್ನೂ ಮುಂದೆ ಹೋಗಿ ಗಮನಿಸಿದರೆ ಅಷ್ಟನ್ನೂ ಕೂಡ ಓದಬೇಕಾಗಿಲ್ಲ. ಆ ಕೃತಿಯ ಬಗೆಗೆ ಇತರರು ಬರೆದಿರುವ ವಿಮರ್ಶೆಯನ್ನು ಓದಿದರೆ ಸಾಕಾಗುತ್ತದೆ. ಗ್ರಂಥಾಲಯದಲ್ಲಿ ಸಾಮಾನ್ಯವಾಗಿ ಬೇಡಿಕೆ ಇರುವುದು ಕೃತಿಗಳನ್ನು ಕುರಿತು ಬರೆದ ವಿಮರ್ಶಾಗ್ರಂಥಗಳಿಗೇ ಹೊರತು ಮೂಲಕೃತಿಗಳಿಗಲ್ಲ. ಇದರಿಂದ ಇಡೀ ಹಳಗನ್ನಡ ಸಾಹಿತ್ಯದ ಅಧ್ಯಯನ ಅಭಿಪ್ರಾಯಗಳನ್ನು ಅವಲಂಬಿಸಿ ನಡೆದಿದೆಯೇ ಹೊರತು ಬೇರೇನೂ ಅಲ್ಲ. ಈ ಮಾತಿಗೆ ಕೊಂಚ ವಿವರಣೆ ಬೇಕು. ನಮ್ಮ ಪ್ರಮುಖ ಕವಿಗಳ ಯಾವುದೇ ಒಂದು ಕೃತಿ ಪಠ್ಯವಾಗಿ ನಿಯಮಿತವಾದ ಸಂದರ್ಭದಲ್ಲೂ ವಿದ್ಯಾರ್ಥಿಗಳು ಆ ಕೃತಿಯನ್ನು ಕುರಿತು ಜಾರಿಯಲ್ಲಿರುವ ವಿಮರ್ಶಾ ಅಭಿಪ್ರಾಯಗಳ ಮೊರೆ ಹೋಗುತ್ತಾರೆ. ಅವುಗಳಲ್ಲಿ ಹೆಚ್ಚು ಮಾನ್ಯವಾದುದಕ್ಕೆ ಅವರ ಒಪ್ಪಿಗೆಯೂ ದೊರಕುತ್ತದೆ. ಹೀಗೆ ಮಾನ್ಯವಾಗುವುದು ಬಹುಜನಾಭಿಪ್ರಾಯದ ತತ್ವಕ್ಕೆ ಅನುಸಾರವಾಗಿ. ಎಂದರೆ ಹೆಚ್ಚು ವಿರೋಧವನ್ನು ಎದುರಿಸದ ನಿಲುವುಗಳು ಚಾಲ್ತಿಗೆ ಬರುತ್ತವೆ. ಇಡೀ ಅಧ್ಯಯನದ ಕ್ರಮವೇ ನಮ್ಮನ್ನು ಮತ್ತೊಂದು ಮುಖ್ಯ ವಿಚಾರದ ಕಡೆಗೆ ಒಯ್ಯುತ್ತದೆ.

ಮೂಲ ವಿಷಯ ಮತ್ತು ಅದನ್ನು ಕುರಿತ ಅಧ್ಯಯನ ಇವುಗಳಲ್ಲಿ ನಿಧಾನವಾಗಿ ಮನ್ನಣೆಯನ್ನು ಪಡೆಯುವುದು ಅದನ್ನು ಕುರಿತ ಅಧ್ಯಯನವೇ ಆಗಿರುವುದು ನಮ್ಮ ಸಂಸ್ಕೃತಿಯ ಒಂದು ಲಕ್ಷಣವಾಗಿದೆ. ಇದಕ್ಕೆ ನಿದರ್ಶನಗಳನ್ನು ನಮ್ಮ ಬದುಕಿನ ಯಾವುದೇ ಕ್ಷೇತ್ರದಿಂದ ಆಯ್ದುಕೊಡಬಹುದು. ಮನುಷ್ಯನರ ಪರಿಸ್ಥಿತಿಗಿಂತ ಅವರ ಬಗೆಗೆ ಮಾಡಿದ ವ್ಯಾಖ್ಯಾನವೇ ನಮ್ಮ ಆಸಕ್ತಿಯ ವಿಷಯವಾಗುತ್ತದೆ. ಅದನ್ನು ಆಧರಿಸಿಯೇ ನಾವು ನಮ್ಮ ಎಲ್ಲ ಚರ್ಚೆಗಳನ್ನೂ ಮುಂದುವರಿಸುತ್ತೇವೆ. ಮೂಲಗಾಮಿಯಲ್ಲದ ಈ ಚಿಂತನಾಕ್ರಮ ಒಂದು ರೀತಿಯಲ್ಲಿ ವಿಗ್ರಹಾರಾಧನೆಯ ಮನೋಭಾವವನ್ನು ಸೂಚಿಸುತ್ತದೆ. ನಮ್ಮ ಬೌದ್ಧಿಕ ಚಟುವಟಿಕೆಯಲ್ಲಿರುವ ಈ ವೈರುಧ್ಯ ವ್ಯಾಪಕವಾಗಿದ್ದು ಸಾಹಿತ್ಯದ ಅಧ್ಯಯನವನ್ನೂ ಕೂಡ ಆವರಿಸಿದೆ. ಹೀಗಾಗಿ ನಾವು ಕೇವಲ ಸೀಮಿತವಾದ ಪರಿಹಾರಗಳನ್ನು ಹುಡುಕುವುದರಲ್ಲಿ ಅರ್ಥವಿಲ್ಲವೆಂದು ನನ್ನ ಭಾವನೆ. ಆದ್ದರಿಂದ ಹಳಗನ್ನಡ ಸಾಹಿತ್ಯವನ್ನು ಓದುವುದೆಂದರೆ ಕೃತಿಯ ಜತೆಗೆ, ಕೃತಿಯನ್ನು ಕುರಿತ ವ್ಯಾಖ್ಯಾನ ಮತ್ತು ಪ್ರಚಲಿತ ಅಭಿಪ್ರಾಯಗಳನ್ನು ಓದುವುದೆಂದು ತಿಳಿಯುವುದು ಕೇವಲ ಅನಿವಾರ್ಯ.

ಇನ್ನೂ ಒಂದು ಸಮಸ್ಯೆಯ ಕಡೆಗೆ ನಾವೀಗ ಗಮನ ಹರಿಸಬಹುದು. ಹಳಗನ್ನಡ ಸಾಹಿತ್ಯದ ಅಧ್ಯಯನದ ವಿಷಯದಲ್ಲಂತೂ ಇದು ಬಹು ಮುಖ್ಯವಾಗಿದೆ. ಸಾಮಾನ್ಯವಾಗಿ ನಾವು ಸಾಹಿತ್ಯದ ವಿದ್ಯಾರ್ಥಿಯನ್ನು ಸಾಹಿತ್ಯದ ಓದುಗರಿಂದ ಬೇರ್ಪಡಿಸಿ ನೋಡುತ್ತೇವೆ. ಸಾಮಾನ್ಯ ಓದುಗರೊಬ್ಬ ಕೇವಲ ಕೃತಿಯನ್ನು ಮಾತ್ರ ಓದಿ ಸುಮ್ಮನಾಗುವವರೆಂದೂ, ಸಾಹಿತ್ಯದ ವಿದ್ಯಾರ್ಥಿ ಕೃತಿಯ ಮೂಲಕ ಸಾಹಿತ್ಯದ ಇನ್ನಿತರ ಕ್ಷೇತ್ರಗಳಿಗೆ ಪ್ರವೇಶವನ್ನು ಪಡೆಯುತ್ತಾರೆಂದೂ ತಿಳಿಯಲಾಗಿದೆ. ಎಂದರೆ ಸಾಹಿತ್ಯದ ವಿದ್ಯಾರ್ಥಿಗೆ ಕೃತಿಯು ಒಂದು ಮಾಧ್ಯಮ ಮಾತ್ರ, ಅದನ್ನು ಓದುವ ಮೂಲಕ ಅವರು ಸಾಹಿತ್ಯವನ್ನು ಕುರಿತ

ಸಿದ್ಧಾಂತ, ಸಾಹಿತ್ಯ ಚರಿತ್ರೆ, ಭಾಷಾಸಾಹಿತ್ಯ ಪರಂಪರೆ ಮುಂತಾದ ವಲಯಗಳನ್ನು ಪ್ರವೇಶಿಸುತ್ತಾರೆ. ಅಥವಾ ಹಾಗೆ ಮಾಡಬೇಕೆಂದು ಅವರಿಂದ ಅಪೇಕ್ಷಿಸಲಾಗಿದೆ. ಇದರಿಂದ ಉಂಟಾಗಿರುವ ಸಮಸ್ಯೆಯನ್ನು ನೋಡೋಣ. ಹಳಗನ್ನಡದ ಕೃತಿಗಳನ್ನು ಓದುವ ಬಗೆಯಲ್ಲಿ ಇದು ಮೂಲಭೂತ ಪರಿಣಾಮಗಳನ್ನು ಉಂಟುಮಾಡಿದೆ. ಎಂದರೆ ಏಕೆ ಆ ಕೃತಿಗಳನ್ನು ಓದಬೇಕೆಂಬ ಪ್ರಶ್ನೆಗೆ ಉತ್ತರವನ್ನು ಈ ಮಾತಿನ ಹಿನ್ನೆಲೆಯಲ್ಲಿ ಮಾತ್ರ ಗ್ರಹಿಸಲು ಸಾಧ್ಯವಾಗಿದೆ. ಕೃತಿಯೇ ಓದಿನ ಗುರಿಯಾಗಿಲ್ಲ. ಅದು ಕೇವಲ ಉಪಕರಣ ಮಾತ್ರ [ಅಷ್ಟೇನೂ ಪ್ರಖ್ಯಾತವಲ್ಲದ ಕಾವ್ಯಗಳನ್ನು ಮುಖ್ಯವಾಗಿ ಗಮನಿಸುವುದು ಯಾವುದೋ ಒಂದು ಪದವನ್ನು ಅದರಲ್ಲಿ ಬಳಸಲಾಗಿದೆ ಎಂಬುದನ್ನು ಗುರುತಿಸಲು ಮಾತ್ರ ಎಂಬಂತಾಗಿದೆ. ನಿಘಂಟುಗಳ ರಚನೆಗೆ ಮಾತ್ರ ಅವುಗಳ ಉಪಯೋಗ ಸೀಮಿತವಾಗಿದೆ] ಸಮಕಾಲೀನ ಕೃತಿಯೊಂದಕ್ಕೆ ಓದುಗರು ಹೇಗೆ ಪ್ರತಿಕ್ರಿಯಿಸಬಲ್ಲರೋ ಹಾಗೆ ಹಳಗನ್ನಡ ಕೃತಿಗಳಿಗೆ ಪ್ರತಿಕ್ರಿಯಿಸುವುದು ಅಸಾಧ್ಯವಾಗಿದೆ ಅಂದರೆ ವಿದ್ಯಾರ್ಥಿಗಳಿಗೆ ಹಳಗನ್ನಡ ಕೃತಿಗಳಲ್ಲಿ ಉಳಿದಿರುವುದು ಕೇವಲ ಪ್ರಾಕ್ತನ ಆಸಕ್ತಿ ಮಾತ್ರ. ಈ ಪರಿಸ್ಥಿತಿಯೇ ಹಳಗನ್ನಡ ಕೃತಿಗಳ ಹೊಸಗನ್ನಡ ಗದ್ಯಾನುವಾದದ ಸಮರ್ಥಕರನ್ನು ಹುಟ್ಟು ಹಾಕಿದೆ. ಇವುಗಳಿಂದಂತೂ ಓದುವವರು ಕವಿಯ ಮೂಲ ರಚನೆಯಿಂದ ಪೂರ್ಣಪ್ರಮಾಣದಲ್ಲಿ ಹೊರಗೆ ಉಳಿದು ಕೃತಿಯನ್ನು ಕುರಿತು ಮಾತನಾಡಬಹುದಾಗಿದೆ. ಈ ಪರಿಸ್ಥಿತಿಯ ನಿರ್ಮಾಣ, ಬಳಕೆ ಇವುಗಳಲ್ಲಿ ನಾವೆಲ್ಲರೂ ಭಾಗಿಗಳಾಗಿದ್ದೇವೆ. ಇದಕ್ಕೆ ಸಂವಾದಿಯಾಗಬಹುದಾದ ಒಂದು ಸಂದರ್ಭವನ್ನು ಕನ್ನಡ ಸಾಹಿತ್ಯದ ಸಂದರ್ಭದಿಂದಲೇ ಉಲ್ಲೇಖಿಸಬಹುದಾಗಿದೆ. ವಚನಗಳಿಗೆ ವ್ಯಾಖ್ಯಾನ, ಟೀಕುಗಳನ್ನು ರಚಿಸುವುದರ ಮೂಲಕ, ಮೂಲ ವಚನಗಳ ಪ್ರಕ್ರಿಯಾತ್ಮಕ ಮತ್ತು ಜೀವಂತ ನೆಲೆಗಳನ್ನು ಪೂರ್ಣವಾಗಿ ಸ್ಥಗಿತಗೊಳಿಸಿದ್ದು ಇಲ್ಲಿ ಗಮನಾರ್ಹ ಉದಾಹರಣೆಯಾಗುತ್ತದೆ. ಅದರಿಂದಾಗಿಯೇ ವಚನಗಳು ನಿರ್ದಿಷ್ಟವಾದ ಧಾರ್ಮಿಕ ಪರಿಭಾಷೆಯ ಚರ್ಚೆಯಲ್ಲಿ ಬಳಕೆಯಾಗುವುದು ಸಾಧ್ಯವಾಯಿತು. ಇದು ತರಗತಿಗಳಲ್ಲಿ ಹಳಗನ್ನಡ ಅಧ್ಯಯನವು ಎದುರಿಸುತ್ತಿರುವ ಸಮಸ್ಯೆಯಾಗಿದೆ.

ಇನ್ನು ಈ ಪ್ರಶ್ನೆಯ ಕೆಲವು ಹೊಸ ಮುಖಗಳನ್ನು ನೋಡಬಹುದು. ಹಳಗನ್ನಡದ ಕೃತಿಯೊಂದು ರಚಿತವಾಗಿರುವ ಪ್ರಕಾರ, ಅನುಸರಿಸುವ ಛಂಧೋವಿಧಾನ, ಬಳಸಿರುವ ಭಾಷೆ ಮುಂತಾದವು ಸಮಕಾಲೀನ ಓದುಗ ಮತ್ತು ವಿದ್ಯಾರ್ಥಿ ಇಬ್ಬರಿಗೂ ಚಲಾವಣೆಯಲ್ಲಿ ಇಲ್ಲದ ನಾಣ್ಯಗಳಾಗಿರುತ್ತವೆ. ಎಂದರೆ ಈ ಪರಿಕರಗಳನ್ನು ಬಳಸಿ ಸಮಕಾಲೀನ ಕೃತಿಗಳು ರಚನೆಯಾಗುವುದಿಲ್ಲ. ಈಗ ಉಂಟಾಗುವ ಸಮಸ್ಯೆ ಎಂದರೆ ಕ್ರಿಯಾಶೀಲತೆಯನ್ನು ಕಳೆದುಕೊಂಡ ಕೃತಿಯ ಪರಿಕರಗಳನ್ನು ವಿದ್ಯಾರ್ಥಿಯು ಹೇಗೆ ಸ್ವೀಕರಿಸುವುದು? ಕೇವಲ ಕೃತಿಯ ವಸ್ತುವಿನ್ಯಾಸ, ಧೋರಣೆ ಇವುಗಳನ್ನು ಮಾತ್ರ ಗಮನಿಸಿದರೆ ಸಾಕೇ? ಕೃತಿಯ ಪರಿಕರಗಳನ್ನು ಕುರಿತು ಪ್ರಾಸಂಗಿಕವಾಗಿ ನಡೆದಿರುವ ಚರ್ಚೆಗಳನ್ನು ಬಿಟ್ಟರೆ ನಮ್ಮ ಹಳಗನ್ನಡ ಸಾಹಿತ್ಯದ ಅಧ್ಯಯನವು ಮುಖ್ಯವಾಗಿ ವಸ್ತುವಿನ್ಯಾಸ, ಧೋರಣೆಗಳನ್ನು ಕುರಿತದ್ದಾಗಿದೆ. ಕೃತಿಯು ಉಂಟು ಮಾಡುವ ಪರಿಣಾಮಗಳನ್ನು ಕುರಿತ ಚರ್ಚೆಯಂತೂ ದೂರವೇ ಉಳಿದಿವೆ. ಏಕೆಂದರೆ ನಾವು ಬಹುಮಟ್ಟಿಗೆ ಕೃತಿಯ ಪರಿಣಾಮಗಳಿಂದ ಹೊರಗೆ ಉಳಿದಿದ್ದೇವೆಂದು ತಿಳಿದಿದ್ದೇವೆ. ಆ ವಲಯದಲ್ಲಿ ಖಚಿತವಾದ

ಮಾತನ್ನು ಹೇಳುವುದು ಅಸಾಧ್ಯವೆಂದು ಈ ನಿಲುವನ್ನು ತಾಳಲಾಯಿತೋ ಅಥವಾ ನಿಜವಾಗಿಯೂ ಕೃತಿಯು ಪರಿಣಾಮವನ್ನು ಉಂಟುಮಾಡುವುದೇ ಇಲ್ಲವೋ ಅದೂ ಕೂಡ ಚರ್ಚೆಯಾಗಿಲ್ಲ. ಒಟ್ಟಾರೆ ಒಂದು ಬಗೆಯ ಬೌದ್ಧಿಕ ನಿರಪೇಕ್ಷೆಯಿಂದ ಸಾಹಿತ್ಯ ಕೃತಿಯನ್ನು ನೋಡುವುದು ಸಾಧ್ಯವೆಂದು ತೋರಿಸಲು ನಾವು ಹೊರಟಂತಿದೆ. ಇದರ ಪರಿಣಾಮವಾಗಿ ಅಧ್ಯಯನದ ವಲಯವೇ ಸೀಮಿತಗೊಂಡು, ಒಂದೋ ಎಲ್ಲವೂ ಅಭಿಪ್ರಾಯಗಳ ಹಂತದಲ್ಲಿ ನಿಂತಿದೆ, ಅಥವಾ ವಿಮರ್ಶಕರು ತಮಗೆ ತಾವೇ ಡಿಕ್ಕಿ ಹೊಡೆದುಕೊಳ್ಳುವ ಇಕ್ಕಟ್ಟನ್ನು ಅನುಭವಿಸುತ್ತಿದ್ದಾರೆಂಬುದು ಕಾಣುತ್ತಿದೆ. ಎರಡನೆಯ ಪರಿಸ್ಥಿತಿಗೆ ಉದಾಹರಣೆಯಾಗಿ ಯಾವುದೇ ಹಳಗನ್ನಡ ಸಾಹಿತ್ಯದ ಅಧ್ಯಯನವನ್ನು ಕುರಿತ (ಪ್ರತ್ಯೇಕ ಕೃತಿಯನ್ನು ಕುರಿತದ್ದು) ವಿಮರ್ಶಾ ಲೇಖನಗಳ ಸಂಕಲನವನ್ನು ನೋಡಿದರೆ ಸಾಕು.

ಹಾಗಾದರೆ ಪರಿಕರಗಳನ್ನು ಕೂಡ ಕೃತಿಯ ಅವಿಭಾಜ್ಯ ಅಂಗವೆಂದು ಭಾವಿಸಲು ಬೇಕಾದ ನೆಲೆಗಳು ಇವೆಯೇ ಎಂಬ ಪ್ರಶ್ನೆಯೊಂದು ಎದುರಾಗುತ್ತದೆ. ಇತರ ಕಲೆಗಳ ವಿಷಯದಲ್ಲಿ ಇದು ಅಂಥ ಗಹನವಾದ ಸಮಸ್ಯೆಯಲ್ಲ. ಏಕೆಂದರೆ ಸಾಹಿತ್ಯದ ಮಾಧ್ಯಮವಾದ ಭಾಷೆಗೂ ಇತರ ಕಲಾಮಾಧ್ಯಮಗಳಿಗೂ ಮೂಲಭೂತವಾದ ವ್ಯತ್ಯಾಸವೊಂದಿದೆ. ಇತರ ಮಾಧ್ಯಮಗಳಿಗೆ ದೇಶಕಾಲ ವಿಶೇಷಾವೇಶವಿಲ್ಲ. ಆದರೆ ಭಾಷೆಗೆ ಮಾತ್ರ ಈ ಉಪಾದಿಯಿದೆ. ಆದ್ದರಿಂದ ಭಾಷಿಕರಚನೆಯಲ್ಲೇ ತನ್ನ ಭೌತಿಕ ಅಸ್ತಿತ್ವವನ್ನು ಸಾಬೀತುಮಾಡುವ ಸಾಹಿತ್ಯಕೃತಿಯು ಅನಿವಾರ್ಯವಾಗಿ ವಿಶಿಷ್ಟವಾದ ಪರಿಸ್ಥಿತಿಯೊಂದನ್ನು ಎದುರಿಸುತ್ತದೆ. ಅಂತಹ ಕೃತಿಗಳನ್ನು ನಾವು ಕೇವಲ ಆಶಯಗಳ ಮಟ್ಟಕ್ಕೆ ಇಳಿಸಿ ನೋಡುವುದು ಕೂಡದೆಂದು ನಾವೀಗ ತಿಳಿಯಬೇಕಾಗಿದೆ. ಯಾವುದೇ ಪ್ರಾಚೀನ ಕವಿ ತನಗೆ ದತ್ತವಾದ ಪರಿಕರಗಳನ್ನು ಬಳಸಿಕೊಂಡು ಅದರ ಮೂಲಕ ತನ್ನ ಅಭಿವ್ಯಕ್ತಿಯನ್ನು ಹೇಗೆ ರೂಪಿಸಿಕೊಂಡಿದ್ದಾನೆಂಬುದು ನಮ್ಮ ಮುಖ್ಯ ಆಸಕ್ತಿಯಾಗಬೇಕಾಗಿದೆ. ಇದರ ಮೂಲಕವಾಗಿಯೇ ನಾವು ಕನ್ನಡದ ಸೃಜನಶೀಲ ಅಭಿವ್ಯಕ್ತಿಯು ಒಂದು ಪರಂಪರೆಯನ್ನು ಹೊಂದಿರುವುದನ್ನು ಗುರುತಿಸಲು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಎಲ್ಲವೂ ಈಗ ತಾನೇ ಪ್ರಾರಂಭವಾಗುತ್ತಿದೆಯೆಂಬ ಭ್ರಮೆಯೊಂದರಲ್ಲಿ ಮುಳುಗಿರುತ್ತೇವೆ. ಈ ಬಗೆಯ ಅಧ್ಯಯನ ನಮ್ಮ ಶ್ರೇಷ್ಠ ಅಭಿವ್ಯಕ್ತಿಗೆ ಸಲ್ಲಬೇಕು. ಕೇವಲ ಪದ್ಯಕಾರರು ಮತ್ತು ಗ್ರಂಥನಕಲೆಯಲ್ಲಿ ಪಾರಂಗತವಾಗಿರುವವರ ಕೃತಿಗಳ ಬಗೆಗೆ ನಾವು ಇಷ್ಟು ಗಹನವಾದ ಆಸಕ್ತಿಯನ್ನು ಸೂಚಿಸಬೇಕಾಗಿಲ್ಲವೆನ್ನಬಹುದು. ಹಾಗಾದರೂ ಅವರೂ ಕೂಡ ಮತ್ತೊಂದು ಕಡೆಯಿಂದ ನಮ್ಮ ಗಮನವನ್ನು ಸೆಳೆಯುತ್ತಾರೆ. ತಮ್ಮ ಅನುಕರಣೆಯಿಂದಾಗಿ ಮುಖ್ಯ ಬರೆಹಗಾರರ ಪ್ರಭಾವವು ಎಷ್ಟು ಗಾಢವಾಗಿತ್ತೆಂಬುದನ್ನು ತೋರಿಸಬಲ್ಲರು. ಈ ನಿಟ್ಟಿನಲ್ಲಿ ಅವರ ಕೃತಿಗಳ ಅಧ್ಯಯನವೂ ಕೂಡ ಲಾಭದಾಯಕವೇ ಆಗಿರುತ್ತದೆ. ಹೇಗೇ ಆದರೂ ಕೃತಿಗಳನ್ನು ಅವುಗಳ ಭಾಷಿಕ ರಚನೆಯಲ್ಲಿ ಮಾತ್ರ ಓದುವುದು ಸರಿಯಾದ ಮಾರ್ಗವಾಗುತ್ತದೆಯೇ ಹೊರತು ಬೇರಾವ ಒಳಮಾರ್ಗಗಳೂ ಇಲ್ಲ. ಇದ್ದರೂ ಅವು ನಮ್ಮನ್ನು ಹಾದಿತಪ್ಪಿಸಬಲ್ಲವು ಅಷ್ಟೆ

# ಪದವಿ ಶಿಕ್ಷಣದಲ್ಲಿ ಕನ್ನಡ ಪಠ್ಯಕ್ರಮ ಹೇಗಿರಬೇಕು?

ಪದವಿ ತರಗತಿಗಳಲ್ಲಿ ಕನ್ನಡವನ್ನು ವಿಶೇಷ ವಿಷಯವನ್ನಾಗಿ ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ಭಾಷೆಯನ್ನು ಕುರಿತ ಪಠ್ಯಕ್ರಮವೊಂದನ್ನು ಕಳೆದ ಅರ್ಧ ಶತಮಾನದಿಂದಲೂ ಹೆಚ್ಚು ಕಡಿಮೆ ಒಂದೇ ರೀತಿಯಲ್ಲಿ ಇರಿಸಿಕೊಂಡಿದ್ದೇವೆ. ಕೆಲವು ವಿಷಯಗಳನ್ನು ವಿಸ್ತರಿಸುವ ಅಥವಾ ಕೆಲವನ್ನು ಹ್ರಸ್ವಗೊಳಿಸುವ ಕೆಲಸ ಮಾತ್ರ ಆಗಾಗ ನಡೆಯುತ್ತಿರುವಂತಿದೆ. ಒಂದೆರಡು ವಿಶ್ವವಿದ್ಯಾಲಯಗಳಲ್ಲಿ ಆಮೂಲಾಗ್ರವಾಗಿ ಬದಲಾವಣೆ ಮಾಡಬೇಕೆಂಬ ಚಿಂತನೆ ನಡೆದು ಕೆಲವು ಪ್ರಯೋಗಗಳು ಕೂಡ ನಡೆದಿವೆ. ಈ ಬದಲಾವಣೆಗಳಿಗೆ ಪಾಠ ಮಾಡುವ ಶಿಕ್ಷಕರೇ ಕೆಲವೊಮ್ಮೆ ಅಡ್ಡಿಯಾಗುತ್ತಾರೆ ಎಂಬ ಮಾತು ಕೇಳಬರುತ್ತಿದೆ. ತಾವು ಕಲಿತದ್ದನ್ನು ಮಾತ್ರ ವಿದ್ಯಾರ್ಥಿಗಳಿಗೆ ಹೇಳಿಕೊಡಲು ಅವರು ಸಿದ್ಧರಿರುತ್ತಾರೆ. ಹೊಸ ಚಿಂತನೆಗಳು ಹೊಸ ಓದನ್ನು, ಹೆಚ್ಚಿನ ಸಿದ್ಧತೆಯನ್ನು ಬಯಸುತ್ತವೆ. ಈ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ಹಳೆಯದನ್ನೇ ಸರಿಯೆಂದು ವಾದಿಸುವ ಬಗೆಯೊಂದು ಇದೆ. ಇದು ಸಹಜವೇ. ಅಲ್ಲದೆ ಬದಲಾವಣೆಗಳನ್ನು ಮಾಡಬೇಕೆಂದು ಬಯಸುವವರು ಏಕೆ ಬದಲಾವಣೆ ಬೇಕೆಂಬುದನ್ನು ಎಲ್ಲರಿಗೂ ತಿಳಿಹೇಳುವಲ್ಲಿ ವಿಫಲಾಗಿರಲೂಬಹುದು. ಇದು ಶಿಕ್ಷಕರನ್ನು ಕುರಿತ ಟೀಕೆಯಲ್ಲ. ಬದಲಾವಣೆಗಳನ್ನು ಬಯಸುವವರು ಅನುಸರಿಸಬೇಕಾದ ವಿಧಾನವನ್ನು ಕುರಿತು ಮರುಚಿಂತನೆ ಅಗತ್ಯವೆಂದು ಹೇಳುವುದು ನನ್ನ ಉದ್ದೇಶ. ಇಲ್ಲಿಂದ ಮುಂದೆ ಈಗಿರುವ ಪಠ್ಯಕ್ರಮದ ಬದಲಿಗೆ ಯಾವ ವಿಷಯಗಳನ್ನು ಪಾಠ ಹೇಳಬಹುದು ಎಂಬುದನ್ನು ಮೊದಲು ಸೂಚಿಸುತ್ತೇನೆ. ಅನಂತರ ಏಕೆ ಈ ಬದಲಾವಣೆ ಬೇಕೆಂಬುದನ್ನು ಕುರಿತು ಕೆಲವು ಮಾತುಗಳನ್ನು ಹೇಳುತ್ತೇನೆ.

ಮುಖ್ಯವಾಗಿ ಎರಡು ನೆಲೆಗಳಲ್ಲಿ ನಮ್ಮ ವಿಷಯಗಳನ್ನು ವಿಂಗಡಿಸಿಕೊಳ್ಳಬೇಕು. 1) ಭಾಷೆಯನ್ನು ಕುರಿತ ಸಾಮಾನ್ಯ ವಿಚಾರಗಳು 2) ಕನ್ನಡ ಭಾಷಾ ರಚನೆಯನ್ನು ಕುರಿತ ವಿಚಾರಗಳು. ಈಗಿರುವಂತೆ ಎರಡು ಚಾತುರ್ಮಾಸಗಳಲ್ಲಿ ಇವುಗಳನ್ನು ವಿಂಗಡಿಸಿಕೊಳ್ಳಬಹುದು. ಇದೇ ಅನುಕ್ರಮದಲ್ಲಿ ವಿಷಯಗಳನ್ನು ಇರಿಸಿಕೊಳ್ಳಬೇಕು.

**ಅ)ಭಾಷೆಯನ್ನು ಕುರಿತು ಸಾಮಾನ್ಯ ವಿಚಾರಗಳು**

1) ಭಾಷೆ ಎಂದರೇನು? ಪಾರಂಪರಿಕ ಚಿಂತನೆಗಳು, ಪರಿಚಿತ ಚಿಂತನೆಗಳು ಮತ್ತು ಆಧುನಿಕ ಸಿದ್ಧಾಂತಗಳು

2) ಭಾಷೆಯ ರಚನೆ, ಬಳಕೆ ಮತ್ತು ಬದಲಾವಣೆ - ಇವುಗಳ ಪರಿಚಯ
3) ಭಾಷೆ ಮತ್ತು ಸಮಾಜ; ಭಾಷೆ ಮತ್ತು ಮನಸ್ಸು
4) ಜಗತ್ತಿನ ಭಾಷೆಗಳು;ಭಾರತದ ಭಾಷೆಗಳು;ದ್ರಾವಿಡ ಭಾಷೆಗಳು;ಕನ್ನಡದ ಹಳಮೆ

ಆ)ಕನ್ನಡವನ್ನು ಕುರಿತ ವಿಚಾರಗಳು

1) ಕನ್ನಡ ಧ್ವನಿರಚನೆ
2) ಕನ್ನಡದ ಪದರಚನೆ
3) ಕನ್ನಡದ ವಾಕ್ಯ ರಚನೆ
4) ಕನ್ನಡ ಪದಕೋಶ: ಸ್ವರೂಪ
5) ಕನ್ನಡ ವಿವಿಧ ಪ್ರಭೇದಗಳು ಅ) ಚಾರಿತ್ರಿಕ ಆ) ಪ್ರಾದೇಶಿಕ ಇ)ಸಾಮಾಜಿಕ ಈ)ಸಾಂದರ್ಭಿಕ
6) ವಿವಿಧ ಸಂವಹನ ಮಾಧ್ಯಮಗಳಲ್ಲಿ ಕನ್ನಡ ಬಳಕೆಯಾಗುವ ಬಗೆ

ಪ್ರತಿ ಚಾತುರ್ಮಾಸದಲ್ಲಿ ಸರಾಸರಿ ಭಾಷಾ ವಿಷಯ ಬೋಧನೆಗೆ ಹದಿನಾರು ಅವಧಿಗಳ ಬೋಧನೆಯ ಅವಕಾಶ ಸಿಗುತ್ತದೆಯೆಂದು ಯೋಚಿಸಿ ಈ ವಿಷಯಗಳನ್ನು ಪಟ್ಟಿ ಮಾಡಲಾಗಿದೆ.

ಶಬ್ದಮಣಿದರ್ಪಣವನ್ನು ಪಠ್ಯವನ್ನಾಗಿ ಇರಿಸುವುದನ್ನು ಪೂರ್ಣವಾಗಿ ಕೈಬಿಡಬೇಕು. ಅದರಿಂದ ಏನೂ ಉಪಯೋಗವಿಲ್ಲ. ಇದು ಆ ಗ್ರಂಥಕ್ಕಾಗಲೀ ಅದರ ಕರ್ತೃವಿಗಾಗಲೀ ಮಾಡುತ್ತಿರುವ ಅಪಚಾರವೆಂದು ತಿಳಿಯಬಾರದು. ಈಗ ಕನ್ನಡವನ್ನು ಪದವಿ ತರಗತಿಗಳಲ್ಲಿ ವಿಶೇಷ ವಿಷಯವನ್ನಾಗಿ ಓದುವ ವಿದ್ಯಾರ್ಥಿಗಳಿಗೆ ಅದು ಅನಗತ್ಯ. ಹೆಚ್ಚಿನ ಓದಿಗೆ ಮುಂದೆ ಹೋಗುವವರು ತಮ್ಮ ಅಧ್ಯಯನದ ಯಾವುದಾದರೂ ಒಂದು ಹಂತದಲ್ಲಿ ಅಗತ್ಯ ಬಿದ್ದರೆ ಓದುತ್ತಾರೆ. ಶಬ್ದಮಣಿ ದರ್ಪಣ ಎಲ್ಲ ವಿದ್ಯಾರ್ಥಿಗಳೂ ಓದಲೇ ಬೇಕೆಂದು ಹೇಳುವುದರಲ್ಲಿ ಅರ್ಥವಿಲ್ಲ. ಅದನ್ನು ಓದದಿದ್ದರೆ ಹಳಗನ್ನಡ ಅರ್ಥವಾಗುವುದಿಲ್ಲ ಎಂಬ ಅಪಕಲ್ಪನೆಯನ್ನೂ ಬಿಡಬೇಕು. ಈಗಾಗಲೇ ಈ ಕುರಿತು ಡಾ.ಡಿ.ಎನ್.ಶಂಕರಭಟ್ಟರು ತಮ್ಮ ನಿಜಕ್ಕೂ 'ಹಳಗನ್ನಡ ವ್ಯಕರಣ ಎಂತಹುದು" ಎಂಬ ಗ್ರಂಥದಲ್ಲಿ ವಿವೇಚನೆ ಮಾಡಿದ್ದಾರೆ. ಹಳಗನ್ನಡ ನಮಗೆ ಗ್ರಹಿಕೆಯ ಭಾಷೆ ಬಳಕೆಯ ಭಾಷೆಯಲ್ಲ. ಅದನ್ನು ಓದಿ ತಿಳಿಯುವುದನ್ನು ಕಲಿಸುವ ಬೇರೆ ವಿಧಾನಗಳಿವೆ. ನಮ್ಮ ಶಿಕ್ಷಕರು ಅದನ್ನು ಯಶಸ್ವಿಯಾಗಿ ನಿರ್ವಹಿಸಬಲ್ಲರು. ಕನ್ನಡ ಕಾವ್ಯ ಪರಂಪರೆಯನ್ನು ಬಲ್ಲವರಿಗೆ ವ್ಯಾಕರಣಗಳ ಮೂಲಕ ಅವುಗಳನ್ನು ಪ್ರವೇಶ ಮಾಡುವುದು ಸಾಧ್ಯವಿಲ್ಲ ಎನ್ನುವುದು ಗೊತ್ತಿರುತ್ತದೆ.

ಮೂರನೆಯ ವರ್ಷದಲ್ಲಿ ಅಂದರೆ ಐದು ಮತ್ತು ಆರನೆಯ ಚಾತುರ್ಮಾಸಗಳಲ್ಲಿ ಭಾಷಾಧ್ಯಯನದ ಇನ್ನಿತರ ನೆಲೆಗಳನ್ನು ವಿದ್ಯಾರ್ಥಿಗಳಿಗೆ ಪರಿಚಯ ಮಾಡಿಕೊಡುವ ಪಠ್ಯಕ್ರಮವನ್ನು ರೂಪಿಸಬೇಕು. ಅದರ ಸ್ಥೂಲ ವಿವರವನ್ನು ಮುಂದೆ ಕೊಡಲು ಪ್ರಯತ್ನಿಸಿದ್ದೇನೆ.

**ಅ) ಕನ್ನಡ ಭಾಷೆಯಲ್ಲಿ ಆಗಿರುವ ಬದಲಾವಣೆಗಳು**

1) ಧ್ವನಿ ರಚನೆಯಲ್ಲಿ ಮತ್ತು ನಿಯಮಗಳಲ್ಲಿ ಅಗಿರುವ ಬದಲಾವಣೆಗಳು

2) ಪದರಚನೆಯ ನಯಮಗಳಲ್ಲಿ ಆಗಿರುವ ಬದಲಾವಣೆಗಳು

3) ವಾಕ್ಯ ರಚನೆಯ ಸ್ವರೂಪದಲ್ಲಿ ಆಗಿರುವ ಬದಲಾವಣೆಗಳು

4) ಕನ್ನಡ ಶಬ್ದಕೋಶದಲ್ಲಿ ಅಗಿರುವ ಬದಲಾವಣೆ;ಹೊಸ ಪ್ರವೃತ್ತಿಗಳು

5) ಶಬ್ದಾರ್ಥಗಳ ಸಂಬಂಧದ ವಿವಿಧ ನೆಲೆಗಳು: ನುಡಿಗಟ್ಟು, ವಾಗ್ರೂಢಿ, ಒಗಟು, ನಗೆಹನಿ

ಆ) ಕನ್ನಡ ಮಾತು ಮತ್ತು ಬರವಣಿಗೆ

1) ಮಾತು ಮತ್ತು ಬರವಣಿಗೆಗಳ ಸಂಬಂಧ

2) ಕನ್ನಡ ಬರವಣಿಗೆಯ ವಿವಿಧ ವಲಯಗಳು ಮತ್ತು ಬಗೆಗಳು

3) ಬರೆವಣಿಗೆಯ ಮೇಲೆ ತಂತ್ರಜ್ಞಾನದ ಪ್ರಭಾವ

4) ಕನ್ನಡ ಮಾತಿನ ವಲಯಗಳು: ನಿರೂಪಣೆ,ಸಂಭಾಷಣೆ,ಕಥನ

5) ಕನ್ನಡ ಸಾಹಿತ್ಯ ಭಾಷೆಯ ಕೆಲವು ಮುಖ್ಯ ಚಹರೆಗಳು

ಈ ಎಲ್ಲ ವಿಷಯಗಳನ್ನು ಏಕೆ ಪಾಠಮಾಡಬೇಕು?

ಈವರೆಗೆ ನಾವು ನಾವು ಕನ್ನಡದ ಚಾರಿತ್ರಿಕ ಸ್ವರೂಪವನ್ನು ಹಳೆಯ ಮಾದರಿಯಲ್ಲಿ ಹೇಳಿಕೊಡುತ್ತಿದ್ದೆವು. ಆದರೆ ಈಗ ಕನ್ನಡ ಹೇಗೆ ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿದೆ ಮತ್ತು ಅದರ ವಿವಿಧ ನೆಲೆಗಳೇನು ಎಂಬುದನ್ನು ಪರಿಚಯ ಮಾಡಿಕೊಡಬೇಕು. ಅದರಿಂದ ಅವರಿಗೆ ತಾವು ತಿಳಿದುಕೊಳ್ಳುತ್ತಿರುವುದು ಯಾವುದೋ ನಮಗೆ ಸಂಬಂಧಪಡದ ವಿಷಯ ಎನ್ನುವ ಭಾವನೆ ಮೂಡುವುದಿಲ್ಲ. ಬದಲಿಗೆ ಅವರು ತಮ್ಮ ನಿತ್ಯದ ವ್ಯವಹಾರದ ನೆಲೆಗಳನ್ನು ಇನ್ನಷ್ಟು ಚೆನ್ನಾಗಿ ತಿಳಿಯ ಬಲ್ಲರು.

ಬೋಧನೆಗಾಗಿ ಹೊಸ ವಿಧಾನಗಳನ್ನು ಅನುಸರಿಸಲು ಇದರಿಂದ ಅವಕಾಶಗಳು ದೊರೆಯುತ್ತವೆ. ಅಧ್ಯಾಪಕರು ತಾವು ಚರ್ಚಿಸುತ್ತಿರುವ ಹತ್ತಾರು ವಿಷಯಗಳಿಗೆ ನದರ್ಶನಗಳನ್ನು ನಿತ್ಯದ ಕನ್ನಡ ಭಾಷಾ ಬಳಕೆಯಿಂದ ಆಯ್ದುಕೊಳ್ಳಲು ಸಾಧ್ಯವಾಗುತ್ತದೆ. ಹಾಗೆ ಕನ್ನಡವನ್ನು ಕೇಳಿ ,ಓದಿ ಅದರ ವಿವಿಧ ಸಾಧ್ಯತೆಗಳನ್ನು ಗ್ರಹಿಸಲು ವಿದ್ಯಾರ್ಥಿಗಳಿಗೂ ಸೂಚನೆಯನ್ನು ಮಾಡುವುದು ಸಾಧ್ಯ. ಇದಕ್ಕಾಗಿ ಅಗತ್ಯವಾದ ವರ್ಕ್ ಬುಕ್‌ಅನ್ನು ಸಿದ್ಧಮಾಡಬೇಕಾಗುತ್ತದೆ.

ಈ ಎಲ್ಲ ವಿಷಯಗಳನ್ನು ಪಾಠ ಮಾಡಬೇಕು ಎನ್ನುವುದು ಒಂದು ನೆಲೆಯಾದರೆ ಇವೆಲ್ಲವನ್ನೂ ಹೇಳಲು ಅಗತ್ಯವಾದ ಸಾಮಗ್ರಿ ಒಂದೆಡೆ ದೊರೆಯುವುದಿಲ್ಲ ಎನ್ನುವುದು

ಇನ್ನೊಂದು ಮಾತು. ಈ ಕೊರತೆಯನ್ನು ನಿವಾರಣೆಮಾಡಲು ತಕ್ಕ ಪಠ್ಯವಸ್ತುವನ್ನು ಅಧ್ಯಾಪಕರ ಕಮ್ಮಟವನ್ನು ನಡೆಸಿ ಸಿದ್ಧಪಡಿಸಬೇಕಾಗುತ್ತದೆ. ಜೊತೆಗೆ ಪಾಠ ಮಾಡುವ ಅಧ್ಯಾಪಕರೂ ತಮ್ಮ ಅನುಭವದ ನೆರವಿನಿಂದ ಪೂರಕ ಸಾಮಗ್ರಿಯನ್ನು ರೂಪಿಸಿಕೊಳ್ಳಬಲ್ಲರು.

ಈ ಎಲ್ಲ ಬದಲಾವಣೆಯ ಹಿಂದೆ ಇರುವ ತರ್ಕ ಸರಳ. 1) ಈವರೆಗೆ ನಾವು ಹೇಳಿಕೊಡುತ್ತಿರುವ ವಿಷಯಗಳು ವಿದ್ಯಾರ್ಥಿಗಳಲ್ಲಿ ಆಸಕ್ತಿಯನ್ನು ಹುಟ್ಟಿಸುವಷ್ಟು ಪ್ರಸ್ತುತವಾಗಿರಲಿಲ್ಲ.ಅಲ್ಲದೆ ಭಾಷಾಶಾಸ್ತ್ರದಲ್ಲಿ ಈಚೆಗೆ ನಡೆದಿರುವ ಅಧ್ಯಯನಗಳನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ. 2) ಕನ್ನಡವೆಂದರೆ ನಮ್ಮಿಂದ ಬೇರೆಯಾದ ಸಂಗತಿಯಲ್ಲ. ನಮ್ಮೊಡನೆ ಇರುವ ನಮ್ಮ ವ್ಯಕ್ತಿತ್ವದ ಭಾಗವೇ ಅಗಿರುವ ಸಂಗತಿಯಾದ್ದರಿಂದ ಅದರ ಸ್ವರೂಪವನ್ನು ತಿಳಿಯಲು ಹೊಸ ದಾರಿಗಳನ್ನು ಹಿಡಿಯಬೇಕು. 3) ಇಂದಿನ ಕಾಲಮಾನದ ಅಗತ್ಯಗಳಿಗೆ ತಕ್ಕಂತೆ ವಿದ್ಯಾರ್ಥಿಗಳಿಗೆ ತಿಳಿವಿನ ಹೊಸ ದಾರಿಗಳನ್ನು ತೋರಿಸಿಕೊಡಬೇಕು. 4) ಮುಂದೆ ಇವುಗಳಲ್ಲಿ ಯಾವುದಾದರೊಂದು ನೆಲೆಯನ್ನಾದರೂ ವಿಸ್ತರಿಸಿಕೊಳ್ಳುತ್ತ ವಿದ್ಯಾರ್ಥಿಗಳು ತಮ್ಮ ಆಸಕ್ತಿಯನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ.

# ಯಾರೂ ತುಳಿಯದ ಹಾದಿ...

(ಪಠ್ಯಪುಸ್ತಕಗಳು ಮತ್ತು ಸಾಂಸ್ಕೃತಿಕ ರಾಜಕಾರಣ)

ಗೆಳೆಯ ಚಲಪತಿಯವರ ಈ ಹೊತ್ತಗೆಗೆ ಮೊದಲ ಕೆಲವು ಮಾತುಗಳನ್ನು ಬರೆಯುವ ಹೊಣೆ ನನ್ನದಾಗಿದೆ. ಇದು ಅವರು ತಮ್ಮ ಪಿಎಚ್.ಡಿ ಪದವಿಗಾಗಿ ಬರೆದ ಬರೆಹ. ಅದೀಗ ಅವರಿಗೆ ಪದವಿಯನ್ನು ದೊರಕಿಸಿಕೊಟ್ಟಿದೆ. ತಮ್ಮ ಬರೆಹ ಹೆಚ್ಚು ಓದುಗರ ನಡುವೆ ಚರ್ಚೆಗೆ ಒಳಗಾಗಬೇಕೆಂದು ಬಯಸಿ ಹೊತ್ತಗೆಯಾಗಿ ಹೊರತರುತ್ತಿದ್ದಾರೆ. ತಮ್ಮ ಓದಿಗೆ ಚಲಪತಿ, ಇಕ್ಕಟ್ಟಿನ ಆದರೆ ಯಾರೂ ತುಳಿಯದ ಹಾದಿಯನ್ನು ಆಯ್ದುಕೊಂಡಿದ್ದಾರೆ. ಎಲ್ಲರೂ ಹೆಚ್ಚೂ ಕಡಿಮೆ ಹೀಗೆ ಇರತಕ್ಕದ್ದು ಎಂತಲೋ ಇಲ್ಲವೇ ಇದನ್ನು ಬಿಟ್ಟರೆ ಬೇರೇನಿದೆ ಎಂತಲೋ ಒಪ್ಪಿಕೊಳ್ಳುವ ನೆಲೆಗಳನ್ನು ಮತ್ತೊಮ್ಮೆ ತೀಡಿ ನೋಡಿ ಅದರೊಳಗೆ ಹುದುಗಿರುವ ಸಾಂಸ್ಕೃತಿಕ ರಾಜಕಾರಣದ ಎಳೆಗಳನ್ನು ಬಿಡಿಸಿ ತೋರಿಸಲು ಹೊರಟಿದ್ದಾರೆ. ಈ ಓದಿನ ನೆಲೆಗಳನ್ನು ನಿಬಂಧದ ಮೌಲ್ಯಮಾಪನ ಮಾಡಿರುವ ಗೆಳೆಯರು ಸಮರ್ಥವಾಗಿಯೇ ಮಾಡಿದ್ದಾರೆ. ಅವರ ಮಾತಿಗೆ ನಾನು ದನಿಗೂಡಿಸುತ್ತಿದ್ದೇನೆ.

ಪಠ್ಯ ಪುಸ್ತಕಗಳು ಓದಿನ ಒಂದು ಕೊಂಡಿ. ಪಾಠ ಹೇಳುವವರು, ಪಾಠ ಹೇಳುವ ಬಗೆ, ಕಲಿಯುವವರು ಮತ್ತು ಕಲಿತದ್ದನ್ನು ಅಳೆಯುವ ಮಾಪುಗೋಲುಗಳು ಇವೆಲ್ಲ ಇನ್ನುಳಿದ ಕೆಲವು ಕೊಂಡಿಗಳು. ಕಲಿಕೆಯು ಹಲವರು ಒಟ್ಟಾಗಿ ನಡೆಸುವ ಕೆಲಸವಾದ್ದರಿಂದ ಎಲ್ಲರೂ ಕಲಿಯಬೇಕಾದ ಪಠ್ಯಗಳನ್ನು ನಗದಿಪಡಿಸಿಕೊಳ್ಳುವುದು ಅಗತ್ಯವೆಂದು ತಿಳಿಯಲಾಗಿದೆ. ಇಲ್ಲಿ ಕಲಿಸುವವರ ಮತ್ತು ಕಲಿಯುವವರ ಆಯ್ಕೆಗಳು ಕಡಿಮೆ. ಒಂದು ನೆಲೆಯಲ್ಲಿ ಇದು ನಮ್ಮ ಕಲಿಕೆಯ ಬಗೆ ನಮ್ಮಲ್ಲಿ ರೂಢಿಸಿರುವ ನಂಬಿಕೆ. ಇದಕ್ಕೆ ಬದಲಾದದ್ದು ಇರಬಹುದು ಎಂಬುದನ್ನು ನಾವು ಈಗ ನಂಬುವ ಸ್ಥಿತಿಯಲ್ಲಿ ಇಲ್ಲ.

ಕಲಿಕೆ ಎನ್ನುವುದು ಸಾಮಾಜಿಕ ನೆಲೆಯ ಬಯಕೆ ಆಗಿರುವುದರಿಂದ ಅಲ್ಲಿ ಆಳುವ ನೆಲೆಗಳ ಕೈವಾಡ ಯಾವಾಗಲೂ ಇದ್ದೇ ಇರುತ್ತದೆ. ಏನನ್ನು ಕಲಿಯಬೇಕು ಮತ್ತು ಏನನ್ನು ಕಲಿಯುವ ಅಗತ್ಯವಿಲ್ಲ ಮತ್ತು ಏನನ್ನು ಕಲಿಯಬಾರದು ಎಂಬುದನ್ನೆಲ್ಲಾ ಆಳುವವರು ನಿಗದಿ ಮಾಡುತ್ತಿರುತ್ತಾರೆ. ಆದರೆ ಜನರ ಪ್ರತಿನಿಧಿಗಳ ಸರಕಾರ ಈ ನಗದಿಪಡಿಸುವ ಬಗೆಯನ್ನು ಜನತಾಂತ್ರಿಕಗೊಳಿಸುವ ಹಾದಿಯನ್ನು ಆಯ್ದುಕೊಳ್ಳುತ್ತದೆ. ಆದರೆ ಈ ಆಡಳಿತವೂ ಕೂಡ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳುವ ತನ್ನ ಬೇರುಗುಣವನ್ನು ಬಿಟ್ಟುಕೊಡಲಾರದು. ಅದಕ್ಕಾಗಿ ತಕ್ಕ ಹುನ್ನಾರಗಳನ್ನು ಹುಡುಕುತ್ತಿರುತ್ತದೆ.

ಒಂದು ಎತ್ತುಗೆಯನ್ನು ನೋಡೋಣ. ಕನ್ನಡ ಮಾತಾಡುವ ಮಕ್ಕಳು ಬರವಣಿಗೆಯನ್ನು ಕಲಿಯುವಾಗ ತಾವು ಎಂದೂ ಬರೆಯುಲು ಬಳಸದ ಲಿಪಿಗುರುತುಗಳನ್ನು ಕಲಿಯಬೇಕೇಕೆ ಎಂಬ ಕೇಳ್ವಿಯೊಂದು ಸುಮಾರು ಹತ್ತು ವರುಷಗಳ ಹಿಂದೆ ಎದುರಾಗಿತ್ತು. ಋ ಎಂಬ ಲಿಪಿಗುರುತನ್ನು ಮಕ್ಕಳು ಬರೆಯುಲು ಕಲಿಯಬೇಕಿಲ್ಲವಾದ್ದರಿಂದ ಅದನ್ನು ಮಕ್ಕಳ ಓದಿನ ಹೊತ್ತಗೆಗಳಲ್ಲಿ ಸೇರಿಸಬೇಕಿಲ್ಲವೆಂದು ಹೇಳಲಾಯಿತು. ಕೂಡಲೇ ಕೇಳ್ವಿಬದಲುಗಳು ಮೊದಲಾದವು. ಮಕ್ಕಳು ಎಂದಿನಂತೆ ಒಂದು ಲಿಪಿಗುರುತನ್ನು ಹೆಚ್ಚಾಗಿ ಕಲಿತರೆ ಮುಳುಗಿಹೋಗುವುದೇನು ಎಂದು ಕೆಲವರು ಹೇಳಿದರೆ, ಮತ್ತೆ ಕೆಲವರು ಈವರೆಗೆ ಆ ಲಿಪಿ ಗುರುತನ್ನು ಬಳಸಿ ಬರೆದ ಬರಹಗಳನ್ನು ಬೆಂಕಿಗೆ ಹಾಕೋಣವೇ ಎಂದು ಕೇಳಿದರು. ಆ ಲಿಪಿ ಗುರುತಿನ ಕಲಿಕೆ ಬೇಕಿಲ್ಲವೆನ್ನುವವರು ಹಾಗೆ ಹೇಳಲು ಕಾರಣಗಳೇನು ಎಂಬುದನ್ನು ಯಾರೂ ತಲೆಗೆ ಹಚ್ಚಿಕೊಳ್ಳಲಿಲ್ಲ. ಆ ಲಿಪಿ ಗುರುತು ಬರವಣಿಗೆಯಲ್ಲಿ ಹೆಚ್ಚಾಗಿ ಬಳಕೆಯಾಗುವುದಿಲ್ಲ ಎನ್ನುವುದು ಅದನ್ನು ಕಲಿಯಬೇಕಿಲ್ಲ ಎಂದವರ ನಲುವಾಗಿರಲಿಲ್ಲ. ಋ ಲಿಪಿ ಗುರುತು ಕನ್ನಡವನ್ನು ಸಂಸ್ಕೃತದ ಮಾನದಂಡಗಳಿಂದ ನೋಡುವ ನೆಲೆಯನ್ನು ಗಟ್ಟಿಗೊಳಿಸುತ್ತದೆ. ನಾವೀಗ ಆ ನೆಲೆಯಿಂದ ಹೊರ ಬರಬೇಕೆಂದು ಹೇಳುತ್ತಿರುವುದರಿಂದ ನಮ್ಮ ನಲುವಿನ ಸೂಚನೆಯಾಗಿ ಋ ಎಂಬ ಲಿಪಿ ಗುರುತಿನ ಕಲಿಕೆಯನ್ನು ನಲ್ಲಿಸಬೇಕು ಎಂದು ಅವರು ಹೇಳುತ್ತಿದ್ದರು. ಆದರೆ ಎದುರು ವಾದಿಸಿದವರು ಏನೇ ಕಾರಣಗಳನ್ನು ನೀಡಿದರೂ ಅವರ ನಲುವಿನ ಹಿಂದಿನ ತಿಳಿವಿನ ಚೌಕಟ್ಟು ಅಂಗೈಮೇಲಿನ ನೆಲ್ಲಿಕಾಯಿಯಂತೆ ಕಾಣುವಂತಿತ್ತು. ಅವರು ಈಗಿರುವಂತೆ ಸಂಸ್ಕೃತದ ಯಜಮಾನಕೆಯನ್ನು ಮುಂದುವರೆಸುವ ಇರಾದೆಯನ್ನು ಹೊಂದಿದ್ದರು .ಸಂಸ್ಕೃತದ ಯಜಮಾನಕೆ ಎಂದರೇನು? ಅದು ನುಡಿಯ ಯಜಮಾನಕೆಯಲ್ಲ. ಅದರ ಮೂಲಕ ಜನರ ಒಂದು ಗುಂಪು ಉಳಿದವರನ್ನು ಹೊರಗಿಡುವ, ಅವರನ್ನು ತಾವೇ ಕೈ ಹಿಡಿದು ನಡೆಸಬೇಕೆನ್ನುವ ಹಟವನ್ನು ಮಾಡುತ್ತಿದ್ದರು. ಅಂದರೆ ಇದು ಕೇವಲ ಲಿಪಿ ಗುರುತಿನ ಮಾತಾಗಿ ಉಳಿಯಲಿಲ್ಲ. ನಾವು ಮತ್ತು ಬೇರೆಯವರು ಎಂದು ಒಡೆದು ನೋಡುವ ಬಗೆಯನ್ನು ಮುಂದುವರೆಸಬೇಕೆನ್ನುವವರು ಒಂದು ಕಡೆಯಾದರೆ, ಎಲ್ಲರನ್ನು ಒಳಗೊಳ್ಳುವ ನೆಲೆಯನ್ನು ತಲುಪಬೇಕಾದರೆ ಈಗಿರುವ ಯಜಮಾನಕೆಯ ನೆಲೆಗಳಿಗೆ ಪೆಟ್ಟುಕೊಡಬೇಕೆನ್ನುವವರು ಇನ್ನೊಂದು ಕಡೆ ಇದ್ದರು.

ಏನನ್ನು ಓದಬೇಕು ಎಂದು ನಗದಿ ಮಾಡುವಾಗ ಕೆಲವೊಮ್ಮೆ ಗೊತ್ತಿದ್ದೂ ಮತ್ತೆ ಕೆಲವೊಮ್ಮೆ ಗೊತ್ತಿಲ್ಲದೆಯೂ ಯಜಮಾನಕೆಯ ನೆಲೆಗಳು ತಮ್ಮ ಬೇರುಗಳನ್ನು ಗಟ್ಟಿ ಮಾಡಿಕೊಳ್ಳುತ್ತಿರುತ್ತವೆ. ಇವತ್ತು ಕಲಿಯುವವರು ಮೊದಲಿನಂತೆ, ತಲೆಮಾರುಗಳಿಂದ ಕಲಿಕೆ ಮತ್ತು ತಿಳಿವಿನ ಹಕ್ಕುಗಳನ್ನು ಪಡೆದುಕೊಂಡವರಷ್ಟೇ ಅಗಿಲ್ಲ. ಈಗ ಹಲವು ಮೂಲೆ ಮಡುಕುಗಳಿಂದ ಮಕ್ಕಳು ಕಲಿಯುವ ವಲಯಕ್ಕೆ ಬರುತ್ತಿದ್ದಾರೆ. ಆದರೆ ಅವರು ಏನನ್ನು ಕಲಿಯಬೇಕೆಂದು ಹೇಳುವವರು ಮಾತ್ರ ಈ ಬದಲಾವಣೆಗೆ ತಾವು ಸಜ್ಜುಗೊಳ್ಳಬೇಕೆಂದು ತಿಳಿದಿಲ್ಲ. ಇದು ತಿಳಿವಿನ ಕೊರತೆಯೆಂದು

ಹೇಳಲಾಗದು. ಬೇಕೆಂತಲೇ ಕಲಿಕೆಯಲ್ಲಿ ನಡೆಯಬೇಕಿದ್ದ ಬದಲಾವಣೆಗಳನ್ನು ಹತ್ತಿಕ್ಕುವುದು ಮತ್ತು ತಾರತಮ್ಯಗಳನ್ನು ಮುಂದುವರೆಸುವುದು ಗುರಿಗಳಾಗಿವೆ. ಇವು ಕೇವಲ ಹೇಳಿಕೆಗಳಲ್ಲ. ಈ ನಿಬಂಧ ಅದಕ್ಕೆ ತಕ್ಕ ಪುರಾವೆಗಳನ್ನು ನಮ್ಮೆದುರು ತೆರೆದಿಡುತ್ತದೆ.

ಚಲಪತಿಯವರು ಯಾರೂ ತುಳಿಯದ ಹಾದಿಯನ್ನು ಹಿಡಿದಿದ್ದಾರೆ ಎಂದು ಹೇಳಿದೆ. ಹಾಗಾಗಿಯೇ ಅವರು ಸವೆದ ಹಾದಿಯಲ್ಲಿ ಸಾಗುವವರ ಸಲೀಸುತನವನ್ನು ತೋರಿಸುವುದು ಇಲ್ಲಿ ಆಗಿಲ್ಲ. ಈ ನಿಬಂಧ ತನ್ನ ಹಾದಿಯನ್ನು ಹುಡುಕಿಕೊಳ್ಳುವಾಗ ಏನೆಲ್ಲ ಪಡಿಪಾಟಲುಗಳನ್ನು ಪಟ್ಟಿರಬಹುದು ಎಂಬುದನ್ನು ಇದನ್ನು ಓದಿದಾಗ ಗೊತ್ತಾಗುತ್ತದೆ. ಹಾಗಾಗಿ ಈ ನಿಬಂಧದ ನಿಲುವುಗಳನ್ನು ಸರಿಯಲ್ಲ ಎಂದು ತಗಾದೆ ಎತ್ತುವವರೂ ಕೂಡ ಇದು ಎತ್ತುವ ಕೇಳ್ವಿಗಳಿಗೆ ಬೇರೆ ಬದಲುಗಳನ್ನು ಕೊಡಲು ಕೈಚೆಲ್ಲಿ ಕೂರಬೇಕಾಗುತ್ತದೆ. ಅಂದರೆ ಈ ಚರ್ಚೆಯನ್ನು ಮುಂದುವರೆಸಬೇಕೇ ಹೊರತು ತಳ್ಳಿ ಹಾಕುವುದು ಸರಿಯಾಗಲಾರದು.

ಚಲಪತಿಯವರು ಆಕರಗಳನ್ನು ಕೂಡಿಹಾಕಲು, ಅವುಗಳನ್ನು ತಕ್ಕಂತೆ ಜೋಡಿಸಿಕೊಂಡು ಅಳವಡಿಸಲು, ಬಲ್ಲವರ ಮಾತುಗಳನ್ನು ಓದಿನ ಚೌಕಟ್ಟಿಗೆ ತಂದುಕೊಳ್ಳಲು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಇಂದಿನ ದಿನಗಳಲ್ಲಿ ಕೇಳಲೇಬೇಕಾದ ಕೇಳ್ವಿಗಳನ್ನು ಕಟ್ಟಲು ಏನೆಲ್ಲ ಕಷ್ಟಪಟ್ಟಿದ್ದಾರೆ ಎನ್ನುವುದನ್ನು ಈ ನಿಬಂಧ ತೋರಿಸಿಕೊಟ್ಟಿದೆ. ಇಂತಹ ಓದಿನ ಹೊಣೆಯನ್ನು ಹೊತ್ತು ನಿಭಾಯಿಸಿದ ಗೆಳೆಯ ಚಲಪತಿಯವರ ಬೆನ್ನು ತಟ್ಟುತ್ತೇನೆ.

# ಬಾಪು ಚಿಂತನೆ

ಇಪ್ಪತ್ತನೆಯ ಶತಮಾನ ಕಂಡ ಎರಡು ಮುಖ ಚಹರೆಗಳನ್ನು ಮೊದಲು ಗಮನಿಸೋಣ. ಚಾರ್ಲಿ ಚಾಪ್ಲಿನ್ ಮತ್ತು ಅಡಾಲ್ಫ್ ಹಿಟ್ಲರ್ ಇವರು ಆ ಮುಖ ಚಹರೆಗಳು. ಮಾನವರ ಆಂಗಿಕ ಚಹರೆಗಳನ್ನು ಮತ್ತು ಚಿಂತನಾ ಕ್ರಮವನ್ನು ಜೋಡಿಸುವ ಬಗೆಗೆ ಇವರಿಬ್ಬರೂ ಎರಡು ಮಾದರಿಗಳಾಗಿ ದೊರಕಿದ್ದಾರೆ. ಆಂಗಿಕಗಳು ಕೇವಲ ಸೂಚಕಗಳಾಗುವ ಬದಲು ಸೂಚಿತ ಅರ್ಥಗಳೇ ಆಗಿಬಿಟ್ಟರೆ ಚಾಪ್ಲಿನ್, ಹಿಟ್ಲರ್ ಆಗಿ ಬದಲಾಗುವುದು ಚಿಟಕಿ ಹೊಡೆಯುವಷ್ಟೆ ಸುಲಭವಾಗಿಬಿಡುತ್ತದೆ. ಈ ಎಚ್ಚರ ಚಾಪ್ಲಿನ್‌ಗೆ ಇದ್ದಂತೆ ತೋರುತ್ತದೆ. ಅಲ್ಲದೆ ಚರಿತ್ರೆ ಆತನಿಗೆ ಒದಗಿಸಿದ ಅವಕಾಶ ಅವನ ಮಿತಿಯನ್ನು ಮೀರದಂತೆ ಕಟ್ಟುಪಾಡನ್ನೂ ವಿಧಿಸಿತ್ತು. ಹಿಟ್ಲರ್ ಕೂಡ ತನ್ನ ಆಂಗಿಕಗಳನ್ನು ಸೂಚಕಗಳನ್ನಾಗಿ ಮಿತಿಗೊಳಿಸಿಕೊಂಡಿದ್ದರೆ ಅವನೂ ಚಾಪ್ಲಿನ್‌ನಂತೆಯೇ ಕಾಣುತ್ತಿದ್ದನೋ ಏನೋ.

ಅದಿರಲಿ. ಈಗ ನಾವು ಈ ಎರಡು ಚಹರೆಗಳಿಗಿಂತ ಬೇರೆಯದೇ ಆದ ಮತ್ತೊಂದು ಚಹರೆಯ ಬಗೆಗೆ ಮಾತನಾಡಲಿಕ್ಕಿದೆ. ಇದು ಗಾಂಧಿ ಚಹರೆ. ಮೊದಲು ಹೇಳಿದ ಇಬ್ಬರೂ ತಮ್ಮ ಬಗೆಬಗೆಯ ಕೆಲಸಗಳಿಂದ, ಯೋಜನೆಗಳಿಂದ ಚರಿತ್ರೆಯಲ್ಲಿ ಮತ್ತು ಅದನ್ನು ನಾವು ತಿಳಿಯುವ ಬಗೆಯಲ್ಲಿ ಬದಲಾವಣೆಯನ್ನು ತಂದವರು. ಆದರೆ ಅವರು ಬರೆದದ್ದು ಇಲ್ಲವೆನ್ನುವಷ್ಟು ಕಡಿಮೆ. ಆದರೆ ಗಾಂಧಿಯಷ್ಟು ಬರೆದವರು ಕೂಡ ಇಲ್ಲವೆನ್ನುವಷ್ಟು ಕಡಿಮೆ. ಕ್ರಿಯಾಶೀಲತೆಯ ಜೊತೆಗೆ ಬರೆವಣಿಗೆಯಲ್ಲೂ ತೊಡಗಿಸಿಕೊಂಡವರಂತೂ ಇನ್ನೂ ಕಡಿಮೆ. ಹೆಸರಿಸ ಹೊರಟರೆ ಲೆನಿನ್, ಮಾವೋ ಹೆಸರುಗಳು ನೆನಪಿಗೆ ಬಂದಾವು. ತಮ್ಮ ಬರಹ ಮತ್ತು ಕಾರ್ಯವಿಧಾನಗಳ ನಡುವೆ ತಾಳಮೇಳಗಳು ಇರಬೇಕೆಂದುಕೊಂಡವರಲ್ಲಿ ಗಾಂಧಿ ಕೂಡ ಒಬ್ಬರು. ನಡೆನುಡಿಗಳಲ್ಲಿ ಒಂದಾಗಿರಬೇಕೆಂಬುದು ಸಂತರ ದಾರಿಯಲ್ಲವೇ? ಅದರಲ್ಲೇನು ಹೊಸತು ಎಂದು ಕೇಳಬಹುದು. ನಡೆ ನುಡಿಗಳಲ್ಲಿ ಯಾವುದು ಯಾವುದನ್ನು ನಿಯಂತ್ರಿಸುತ್ತಿರುತ್ತದೆ ಎಂಬುದೂ ಮುಖ್ಯ ಅಥವಾ ಒಂದು ಇನ್ನೊಂದನ್ನು ನಿಯಂತ್ರಿಸುತ್ತಲೇ ತನ್ನನ್ನು ತಾನು ಬಿಡುಗಡೆ ಮಾಡಿಕೊಳ್ಳುತ್ತಿರುತ್ತದೋ ಎನ್ನುವುದೂ ಕೂಡ ಅಷ್ಟೇ ಮುಖ್ಯ. ಗಾಂಧಿ ಈ ನಿರಂತರ ಮುಖಾಮುಖಿಗೆ ನಡೆ ನುಡಿಗಳನ್ನು ಒಡ್ಡಿದವರೆಂದು ತೋರುತ್ತದೆ.

ಗಾಂಧಿಯವರನ್ನು ಅರಿಯಲು ಎಲ್ಲಿಂದ ಮೊದಲು ಮಾಡುವುದು? ಅವರ ಭಾಷೇತರ ಚಹರೆಗಳಾದ ಸತ್ಯಾಗ್ರಹ, ಉಪವಾಸ, ಬ್ರಹ್ಮಚರ್ಯ, ನೂಲುವ ಚರಕ, ತುಂಡುಡಿಗೆ, ಆಶ್ರಮ ಜೀವನ ಹೀಗೆ ಇವುಗಳಿಂದಲೇ ಇಲ್ಲವೇ ಅವರ ಅಗಾಧ

ಪ್ರಮಾಣದ ಬರವಣಿಗೆಯ ಮೂಲಕವೇ. ಯಾವೊಂದು ಹಾದಿ ಹಿಡಿದರೂ ದಾರಿ ತಪ್ಪುವುದಂತೂ ದಿಟ. ಏಕೆಂದರೆ ಗಾಂಧಿಯವರ ಈ ಎರಡೂ ಚಹರೆಗಳೂ ಒಂದನ್ನೊಂದು ಬಿಟ್ಟಿರದಂತಹವು. ಒಂದು ಇನ್ನೊಂದಕ್ಕೆ ಪೂರಕವೆಂದಲ್ಲ. ಒಂದು ಇನ್ನೊಂದರೊಡನೆ ಹೊಂದಿರುವ ಸಂಬಂಧದ ವಿಶಿಷ್ಟತೆಯಿಂದಾಗಿ ಇವುಗಳಲ್ಲಿ ಯಾವೊಂದೂ ಇನ್ನೊಂದನ್ನು ಬಿಟ್ಟು, ತನ್ನ ಗುಟ್ಟು ಬಿಟ್ಟುಕೊಡುವುದಿಲ್ಲ.

ಗಾಂಧಿಯವರ ಬರಹಗಳ ರಚನೆಯ ಕಾಲಾವಧಿ ಸುಮಾರು ಐದು ದಶಕಗಳು. ಅಷ್ಟು ಕಾಲ ಬರೆದ ಯಾರಾದರೂ ಒಂದೆ ಚೌಕಟ್ಟಿಗೆ ಜೋತು ಬೀಳುತ್ತಾರೆಂದು ತಿಳಿಯುವುದು ಸಲ್ಲದ ಮಾತು. ಅಲ್ಲದೆ ಯಾವಾಗಲೂ, ತಾನು ತಿಳಿದದ್ದು ಮತ್ತು ಮಾಡುತ್ತಿರುವುದು ಸರಿಯೋ ತಪ್ಪೋ ಎಂಬ ಬಗ್ಗೆ ಎಡೆಬಿಡದೆ ಎಚ್ಚರವಹಿಸುತ್ತಿರುವವರ ಮಟ್ಟಿಗಂತೂ ಈ ಮಾತು ಇನ್ನಷ್ಟು ದಿಟ. ಅಲ್ಲದೆ ಈ ಐದು ದಶಕಗಳು ನಾಡಿನ ಚರಿತ್ರೆಯಲ್ಲಿ ತರುತ್ತಿದ್ದ ಬದಲಾವಣೆಗೆ ಕಾರಣವಾಗುತ್ತಲೇ ಸಾಕ್ಷಿಯೂ ಆಗುತ್ತಿದ್ದ ವ್ಯಕ್ತಿ ಗಾಂಧಿ. ಅಂದರೆ ಅವರ ಬರಹಗಳ ಸ್ವರೂಪವನ್ನು ಒಂದು ಚೌಕಟ್ಟಿಗೆ ತರುವುದು ಆಗದ ಮಾತು.

ಗಾಂಧಿಯವರ ಬರವಣಿಗೆ ಚಿಂತನೆಗಳ ಫಲಿತವಲ್ಲ; ವೈಚಾರಿಕ ನೆಲೆಯಲ್ಲಿ ಹುಟ್ಟಿ ಬೆಳೆದು ಆಕಾರ ಪಡೆಯುವ ಬಗೆಯದ್ದಲ್ಲ. ಅದು ಕಾರ್ಯಕ್ರಮಗಳನ್ನು ರೂಪಿಸುವ ಗುರಿಯನ್ನು ಹೊಂದಿದೆ. ಪ್ರಯೋಗಕ್ಕೆ ಒಳಗಾಗದ ವಿಚಾರಗಳಲ್ಲಿ ಗಾಂಧಿಯವರಿಗೆ ನಂಬಿಕೆ ಇದ್ದಂತಿರಲಿಲ್ಲ. ಹಾಗೆಯೇ ಅರಿವಿಗಾಗಿ ಅರಿವು ಎಂಬುದೂ ಅವರಿಗೆ ಒಪ್ಪಿಗೆಯಾಗದ ಮಾತು. ಯಾವುದೇ ತಿಳುವಳಿಕೆಯಾದರೂ ನಮ್ಮ ನಡೆಯಲ್ಲಿ ನೆಲೆಗೊಳ್ಳದಿದ್ದರೆ ಅದಕ್ಕೆ ಕಿಮ್ಮತ್ತಿರಲಾರದು ಎನ್ನುವ ನಿಟ್ಟಿನಲ್ಲೇ ಅವರ ವಿಚಾರಗಳನ್ನು ನಾವು ನೋಡಬೇಕಾಗಿದೆ. ಹಾಗಾಗಿ ನಿರಂತರವಾಗಿ ಪ್ರಯೋಗಗಳಲ್ಲಿ ತೊಡಗಿದ್ದ ವ್ಯಕ್ತಿಯ ತಾಕಲಾಟಗಳು ಆ ಬರಹಗಳಲ್ಲಿ ಅಡಕಗೊಂಡಿವೆ. ತನ್ನ ನಡೆ ಮತ್ತು ನುಡಿಗಳ ಬಗೆಗೆ ಬೇರೆಯವರು ನೀಡುತ್ತಿದ್ದ ಪ್ರತಿಕ್ರಿಯೆಗಳ ಬಗೆಗೆ ಒಂದು ಎಚ್ಚರವನ್ನು ಯಾವಾಗಲೂ ಕಾಯ್ದುಕೊಂಡಿರುವ ವ್ರತವನ್ನೂ ತೊಟ್ಟಿದೆ. ಇಂತಹ ಬರವಣಿಗೆಗಳನ್ನು ಬಿಡಿಯಾಗಿ ಓದುವುದು ಮತ್ತು ಇಡಿಯಾಗಿ ಓದುವುದು ಬೇರೆ ಬೇರೆ ಬಗೆಯ ಪ್ರತಿಕ್ರಿಯೆಗಳನ್ನು ಬಯಸುತ್ತದೆ. ಹಾಗೆ ನೋಡಿದರೆ ಗಾಂಧಿಯವರ ಬರಹಗಳ ನಡುವೆ ಇದ್ದಿರಬಹುದಾದ ಸಾಮಾನ್ಯ ಎಳೆಯನ್ನು ಆ ಬರಹಗಳ ಮೂಲಕವೇ ಗೊತ್ತುಮಾಡಲು ಸಾಧ್ಯವೆ ಎನ್ನುವುದನ್ನೂ ಕೂಡ ಸಂದೇಹದಿಂದಲೇ ನೋಡಬೇಕಾಗುತ್ತದೆ. ಇದು ಆ ಬರಹಗಳ ಹಿಂದಿನ ಪ್ರಮಾಣಿಕತೆಯ ಪ್ರಶ್ನೆಯಲ್ಲ; ಬದಲಿಗೆ ಆ ಬರಹಗಳ ಸ್ವರೂಪ ಮತ್ತು ಅವುಗಳ ಹಿಂದೆ ಇದ್ದ ಮನಸ್ಸಿನ ಸ್ವರೂಪವನ್ನು ಕುರಿತ ಒಂದು ವಿವರಣೆ ಮಾತ್ರ

ಹೀಗಿರುವಾಗ ಗೆಳೆಯರಾದ ಪ್ರೊ. ಶ್ರೀಧರ ಅವರು ಸಂಕಲಿಸಿರುವ ಗಾಂಧಿಯವರ ಬರವಣಿಗೆಯ ಈ ಸಂಕಲನವನ್ನು ಹೇಗೆ ಓದಬೇಕು ಎನ್ನುವ ಪ್ರಶ್ನೆ ಎದುರಾಗುತ್ತದೆ. ಇದು ಪತ್ರಿಕೆಯೊಂದಕ್ಕೆ ಪ್ರತಿವಾರವೂ ಬರೆದ ಅಂಕಣ. ಬರಹಗಳ ಸಂಕಲನ. ವಾರಕ್ಕೊಮ್ಮೆ ಪ್ರಕಟಗೊಳ್ಳುತ್ತಿದ್ದ ಈ ಅಂಕಣ ಬರಹವನ್ನು ಆಗ ಓದುತ್ತಿದ್ದವರು ಎಲ್ಲ ಬರಹಗಳನ್ನೂ ಒಟ್ಟಾಗಿ ಓದಬೇಕಾದ ಅಥವಾ ಒಂದು ಬರಹವನ್ನು ಅದರ ಜೊತೆ ಬರಹದೊಡನೆ ನೋಡಿ ಅರಿಯಬೇಕಾದ ಪ್ರಮೇಯವೇ ಇರುತ್ತಿರಲಿಲ್ಲ. ಆಯಾ ವಾರ ಬರುತ್ತಿದ್ದ

ಬರಹವನ್ನು ಅಂದಂದಿಗೆ ಓದುವುದು: ಮತ್ತು ಆ ಪತ್ರಿಕೆಯ ಇತರ ಬರಹಗಳ ಜೊತೆಗೆ ಓದುವುದು ಇದಿಷ್ಟೇ ಆಗ ಸಾಧ್ಯವಿದ್ದದ್ದು. ಆದರೆ ಆ ಅಂಕಣ ಬರಹಗಳನ್ನೆಲ್ಲಾ ಒಂದೆಡೆಗೆ ತಂದು ಅವುಗಳನ್ನು ಬೇರೆ ಬೇರೆ ವಿಷಯಗಳ ಅಡಿಯಲ್ಲಿ ಜೋಡಿಸಿ ಪ್ರಕಟಿಸಲಾಗುತ್ತಿದೆ. (ಈ ವಿಂಗಡಣೆಯಲ್ಲೂ ಯಾವ ವಿಂಗಡಣೆಗೂ ಸಿಗದೆ ಹೋಗಿ ಸಂಕೀರ್ಣವೆಂಬ ತಲೆಬರಹದ ಅಡಿಯಲ್ಲಿ ಸೇರಿಹೋದ ಟಿಪ್ಪಣಿಗಳ ಸಂಖ್ಯೆಯೇ ಹೆಚ್ಚಾಗಿದೆ ಎನ್ನುವುದು ಕೂಡ ಗಮನಿಸಬೇಕಾದ ಸಂಗತಿ.)

ಶ್ರೀಧರ್ ಕೂಡ ತಮ್ಮ ಅಂಕಣಗಳಿಗೆ ಇದೇ ವಿಷಯವನ್ನು ಕುರಿತು ಟಿಪ್ಪಣಿ ಮಾಡಬೇಕೆಂಬ ಹಠವನ್ನು ಮಾಡಿ ಆಯ್ಕೆ ಮಾಡಿಕೊಂಡಂತೆ ತೋರುವುದಿಲ್ಲ. ಆಕಾಶವಾಣಿಯು ಪ್ರತಿ ಶುಕ್ರವಾರ ಬೆಳಗ್ಗೆ ಏಳೂ ಕಾಲು ಗಂಟೆಯಿಂದ ಏಳೂವರೆ ಗಂಟೆಯವರೆಗೆ ಪ್ರಸಾರ ಮಾಡುತ್ತಿರುವ ಗಾಂಧಿ ಸ್ಮೃತಿ ಕಾರ್ಯಕ್ರಮದಲ್ಲಿ ಬಾಪೂ ವಿಚಾರಗಳನ್ನು ಮಂಡಿಸುತ್ತ ಬಂದಿರುವ ಬಗೆಯೂ ಇದೇ ರೀತಿಯಲ್ಲಿದೆ. ಆ ಕಾರ್ಯಕ್ರಮಕ್ಕೂ ನಲವತ್ತು ವರ್ಷಗಳು ತುಂಬುತ್ತ ಬಂದಂತೆ ತೋರುತ್ತದೆ. ಅಲ್ಲಿನ ಟಿಪ್ಪಣಿಗಳನ್ನು ಕೇಳಿಸಿಕೊಳ್ಳುವವರದ್ದೂ ಮೇಲೆ ಹೇಳಿದ ಅಂಕಣವನ್ನು ಓದುತ್ತಿದ್ದವರ ಪರಿಸ್ಥಿತಿಯನ್ನೇ ಹೋಲುತ್ತದೆ.

ಇಲ್ಲಿನ ಬರಹಗಳಿಗೆ ಎರಡು ನೆಲೆಗಳಿವೆ. ಒಂದು: ಗಾಂಧಿಯವರ ಚಿಂತನೆಗಳ ಮಂಡನೆ, ಎರಡು: ಅವರ ಚಿಂತನೆಗಳನ್ನು ಮಂಡಿಸಲು ಬೇಕಾದ ಚೌಕಟ್ಟೊಂದನ್ನು ಅಂಕಣಕಾರರು ಆಯ್ದುಕೊಂಡಿರುವುದು. ಬಹಳ ಸಂದರ್ಭದಲ್ಲಿ ಆಯಾ ಚಿಂತನೆಗಳು ಯಾವ ಚಾರಿತ್ರಿಕ ಸಂದರ್ಭದಲ್ಲಿ ಮಂಡನೆಯಾದವು ಎನ್ನುವುದನ್ನು ತಮ್ಮ ಅಂಕಣದ ಭಾಗವಾಗಿಯೇ ಹೇಳಿದ್ದಾರೆ. ಜೊತೆಗೆ ಕೆಲವು ಕಡೆಗಳಲ್ಲಿ ಈಗ ಆ ವಿಚಾರಗಳನ್ನು ಮತ್ತೆ ಹೇಳುತ್ತಿರುವುದರ ಉದ್ದೇಶವನ್ನೂ ಸೂಕ್ಷ್ಮವಾಗಿ ಪ್ರಸ್ತಾಪಿಸಲು ಯತ್ನಿಸುತ್ತಾರೆ. ಅಂದರೆ ಗಾಂಧಿಯವರ ಚಿಂತನೆಗಳು ಈಗ ನಮಗೇಕೆ ಬೇಕು ಎಂಬುದನ್ನು ಮನದಟ್ಟು ಮಾಡಿಕೊಡುತ್ತಾರೆ. ಆ ಚಿಂತನೆಗಳು ಈಗಲೂ ನಮಗೆ ಬೇಕಾಗಿವೆ ಎನ್ನುವ ಬಗೆಗೆ ಅಂಕಣಕಾರರಲ್ಲಿ ಯಾವ ಸಂದೇಹಗಳೂ ಇಲ್ಲವಾದರೂ ಓದುವವರಿಗೆ ಅದು ತಿಳಿಯಬೇಕಾಗಿದೆ ಎನ್ನುವುದು ಅವರಿಗೆ ಗೊತ್ತಿದೆ.

ಹಾಗೆ ನೋಡಿದರೆ ಈ ಅಂಕಣ ಬರಹಗಳು ಪ್ರಕಟವಾಗುತ್ತಿದ್ದ ಹೊತ್ತಿಗೆ ಗಾಂಧಿಯವರ ಮಾತುಗಳಿಗೆ ಮತ್ತು ಕ್ರಿಯೆಗಳಿಗೆ ಒಂದು ಬಗೆಯ ವಿರೋಧ ಮತ್ತು ನಿರಾಕರಣೆ ಎರಡು ನೆಲೆಗಳಲ್ಲಿ ಪ್ರಕಟವಾಗತೊಡಗಿತ್ತು ಎನ್ನುವುದನ್ನು ನೆನಪು ಮಾಡಿಕೊಳ್ಳುವುದು ಒಳ್ಳೆಯದು. ಬದಲಾಗುತ್ತಿದ್ದ ಚಾರಿತ್ರಿಕ ಸನ್ನಿವೇಶದಲ್ಲಿ ಗಾಂಧಿಯವರ ಕಾರ್ಯಕ್ರಮಗಳು ಅನುಪಾಲನೆಗೆ ಮತ್ತು ಅನುಷ್ಠಾನಕ್ಕೆ ತಕ್ಕಂತಿಲ್ಲ ಎನ್ನುವುದು ಚಿಕ್ಕವರ ಮನಸ್ಸಿನಲ್ಲಿ ಬೇರೂರತೊಡಗಿದೆ ಎನ್ನುವುದಕ್ಕೆ ದೊಡ್ಡ ಪುರಾವೆಗಳನ್ನು ಹುಡುಕಬೇಕಿಲ್ಲ. ಇದು ಒಂದು ಬಗೆಯ ನಿರಾಕರಣೆಯಾದರೆ ಇನ್ನೊಂದು ಕಡೆಯಲ್ಲಿ ಗಾಂಧಿಯವರ ಮಾತು ಮತ್ತು ಕೆಲಸಗಳ ಕೊರತೆಯನ್ನು ಹೊರತೆಗೆದು ತೋರಿಸುವ ಪ್ರಯತ್ನಗಳೂ ಮೊದಲಾದವು. ಅಂಬೇಡ್ಕರ್ ಅವರ ಚಿಂತನೆಗಳನ್ನು ಗಾಂಧಿಯವರ ಮಾತು–ಕೃತಿಗಳಿಗೆ ಎದುರಾಗಿರಿಸಿಕೊಂಡು ಗಾಂಧಿಯವರ ಕೊರತೆ ಮತ್ತು ಅಸಮಂಜಸತೆಗಳನ್ನು ಎತ್ತಿಹೇಳುವ ಪ್ರಯತ್ನಗಳು

ಮೊದಲಾದವು. ಇದರ ಜೊತೆಗೆ ಗಾಂಧಿ ಒಬ್ಬ ವ್ಯಕ್ತಿಯಾಗಿ ಹೇಗೆ ಅರೆಕೊರೆಗಳಿಂದ ತುಂಬಿದ್ದರು ಎನ್ನುವುದನ್ನು ತೋರಿಸುವ ಬರಹಗಳು ಪ್ರಕಟವಾಗತೊಡಗಿದವು. ಕೌಟುಂಬಿಕ ನೆಲೆಯಲ್ಲಿ ಗಾಂಧಿಯವರ ಅಸಫಲ ಜೀವನವನ್ನು ತೆರೆದು ತೋರಿಸುವ ಹಲವು ಬರವಣಿಗೆಗಳು ಈಗಲೂ ಕಾಣಿಸಿಕೊಳ್ಳುತ್ತಿವೆ. ಈ ಗಾಂಧಿ ನಿರಾಕರಣೆಗೆ ಪ್ರತಿಯಾಗಿ ಗಾಂಧಿ-ಮಂಡನೆಯ ಯತ್ನಗಳು ಕೂಡ ನಡೆಯುತ್ತಿದ್ದು. ಅಟೆನ್ ಬರೋ ತಯಾರಿಸಿದ ಗಾಂಧಿ ಚಲನ ಚಿತ್ರವೇ ಮೊದಲಾಗಿ ಹಲವು ಗಾಂಧಿ ಮರುಸ್ಥಾಪನೆ ಇಲ್ಲವೆ ಮರುಖನನ ಯತ್ನಗಳು ಕೂಡ ನಡೆಯುತ್ತ ಬಂದಿವೆ ಎನ್ನುವುದನ್ನು ಮರೆಯುವಂತಿಲ್ಲ. ಕಳೆದ ಎರಡು ದಶಕಗಳಲ್ಲಿ ಹೀಗೆ ಗಾಂಧಿ ವಿವಾದಾಸ್ಪದ ವ್ಯಕ್ತಿಯಾಗಿ ಚಹರೆ ಪಡೆದುಕೊಳ್ಳುತ್ತಿದ್ದಾರೆ. ಈ ಹೊತ್ತಿನಲ್ಲಿ ಈ ಅಂಕಣ ಬರಹಗಳು ಪ್ರಕಟವಾಗುತ್ತಿವೆ. ಈ ಬರಹಗಳನ್ನು ಓದುವವರು ಇರುವ ವಿಶಿಷ್ಟ ಸಂದರ್ಭವನ್ನು ನಾವು ಗಮನಿಸಿದರೆ ಇವುಗಳ ಓದಿಗೆ ಬೇಕಾದ ಹಿನ್ನೆಲೆಯನ್ನು ಕಟ್ಟಿಕೊಡುವ ಅಗತ್ಯ ತಿಳಿಯುತ್ತದೆ.

ಈಗ ಈ ಟಿಪ್ಪಣಿಯ ಮೊದಲಲ್ಲಿ ಹೇಳಿದ ಮಾತಿಗೆ ಹಿಂದಿರುಗೋಣ. ಗಾಂಧಿಯವರ ಬರಹ ಇಲ್ಲವೇ ಮಾತುಗಳನ್ನು ತಿಳಿಯ ಹೊರಡುವುದೆಂದರೆ ಅದು ಸುಭಾಷಿತವನ್ನು ಓದಿದಂತಲ್ಲ; ಇಲ್ಲವೇ ಮಾರ್ಗದರ್ಶಿ ಸೂತ್ರಗಳನ್ನು ಹುಡುಕಿದಂತಲ್ಲ. ಇಪ್ಪತ್ತನೆಯ ಶತಮಾನ ಹುಟ್ಟಿ ಹಾಕಿದ ಒಂದು ವಿಶಿಷ್ಟ ಪ್ರಯೋಗವನ್ನು ಅರಿಯುವ ತವಕವಿದ್ದರೆ ಮಾತ್ರ ಈ ಬರಹಗಳನ್ನು ಓದಲು ಸಾಧ್ಯ. ಈ ಬರಹಗಳ ಹಿಂದಿದ್ದ ವ್ಯಕ್ತಿಯ ಕೆಲಸಗಳು, ಆ ಕೆಲಸಗಳಿಗೂ ಈ ಮಾತುಗಳಿಗೂ ಇರುವ ಮುಖಾಮುಖಿ ಇವೆಲ್ಲವನ್ನೂ ತಿಳಿಯುವ ಹೊರೆಯನ್ನು ಹೊರಬೇಕಾಗುತ್ತದೆ. ಮಾತು ಮತ್ತು ಕೆಲಸಗಳಲ್ಲಿ ಯಾವುದು ಯಾವುದಕ್ಕೆ ಜವಾಬ್ದಾರವಾಗಬೇಕು ಎಂಬ ನೈತಿಕ ಪ್ರಶ್ನೆಯನ್ನು ಬೇರೊಂದು ರೀತಿಯಲ್ಲಿ ಹಾಕಿಕೊಂಡು ಹುಡುಕುವ ಛಲ ಬೇಕಾಗುತ್ತದೆ. ಇಲ್ಲದಿದ್ದಲ್ಲಿ ಇಲ್ಲಿನ ಬರಹಗಳು ಕೇವಲ ಚಡಪಡಿಕೆ, ಹಂಬಲ, ಹಳಹಳಿಕೆಗಾಗಿ ಮಾತ್ರ ಕಾಣತೊಡಗುತ್ತವೆ.

ಶ್ರೀಧರ ಈ ಅಂಕಣ ಬರಹಕ್ಕೆ ಬೇಕಾದ ಭಾಷೆಯೊಂದನ್ನು ರೂಪಿಸಿಕೊಂಡಿದ್ದಾರೆ. ಅಂಕಣಕಾರರನ್ನ ಮರೆ ಮಾಡಿ, ಗಾಂಧಿಯವರನ್ನು ಮತ್ತು ಅವರ ಚಿಂತನೆಗಳನ್ನು ಮುಂಚೂಣಿಯಲ್ಲಿ ಇರಿಸುವ ಭಾಷೆ ಇದು. ಹೀಗೆ ತನ್ನ ಕಡೆಗೆ ಓದುಗರ ಗಮನ ಸೆಳೆಯದಂತಹ ಭಾಷಾ ರೂಪವನ್ನು ರೂಢಿಸಿಕೊಳ್ಳುವುದು ಸುಲಭವಲ್ಲ. ಇಲ್ಲಿನ ಬರಹಗಳು ಈ ನಿಟ್ಟಿನಲ್ಲಿ ಗಣನೀಯವಾದ ಸಾಧನೆಯನ್ನು ಮಾಡಿವೆ. ಈ ಎಲ್ಲ ಸಂಗತಿಗಳಿಂದಾಗಿ ಶ್ರೀಧರ ಅಭಿನಂದನೆಗೆ ಅರ್ಹರಾಗಿದ್ದಾರೆ. ಈ ಚಿಂತನೆಗಳ ಸಂಕಲನ ಓದುಗರನ್ನು ತೊಡಗುವಂತೆ ಮಾಡಿದರೆ ಶ್ರೀಧರ್ ಯತ್ನ ಇನ್ನಷ್ಟು ಫಲಕಾರಿಯಾಗುತ್ತದೆ. ಸಂಕಲನ ಬೆಳಕು ಕಾಣುವ ಹೊತ್ತಿನಲ್ಲಿ ಕೆಲವು ಮಾತುಗಳನ್ನು ಬರೆಯಲು ಅನುವು ಮಾಡಿಕೊಟ್ಟದ್ದಕ್ಕಾಗಿ ಗೆಳೆಯರಿಗೆ ನನ್ನ ವಂದನೆಗಳು.

# ಮತಾಂತರ: ಚರ್ಚೆಗೆ ನೆರವಾಗಲು ಒಂದು ಟಿಪ್ಪಣಿ

## 1. ಮತಾಂತರ ಯಾರ ಪ್ರಶ್ನೆ?

ಈಗ ಮತಾಂತರವನ್ನು ಕುರಿತು ಬರೆಯುತ್ತಿರುವವರು ಮಾತನಾಡುತ್ತಿರುವವರು 'ಸಂಚಿ'ನ ಮಾದರಿಯಲ್ಲಿ ತಮ್ಮ ಗ್ರಹಿಕೆಗಳನ್ನು ಮಂಡಿಸುತ್ತಿದ್ದಾರೆ. ಅಂತಾರಾಷ್ಟ್ರೀಯ ನೆಲೆಯ ಸಂಚಿನ ಭಾಗವಾಗಿ 'ನಮ್ಮ' ಸಮಾಜವನ್ನು 'ಒಡೆದು' ಆಳಲು ಮತಾಂತರವನ್ನು ಒಂದು ತಂತ್ರವಾಗಿ ಬಳಸಲಾಗುತ್ತಿದೆ ಎಂದು ವಿವರಿಸುತ್ತಿದ್ದಾರೆ.

ಈ ವಾದವನ್ನು ಮಂಡಿಸುತ್ತಿರುವವರ ಗ್ರಹಿಕೆಯಂತೆಯೇ ನೋಡಿದರೆ ಯಾರು ಮತಾಂತರಗೊಳ್ಳುತ್ತಿದ್ದಾರೆ ಎಂಬ ಪ್ರಶ್ನೆ ಕುತೂಹಲಕಾರಿಯಾದುದು. ವೈಯುಕ್ತಿಕ ನೆಲೆಯ ಪಲ್ಲಟಗಳನ್ನು ಹೊರತು ಪಡಿಸಿದರೆ ಸಾಮೂಹಿಕವಾಗಿ 'ನಡೆಯುತ್ತಿರುವ' ಮತಾಂತರಗಳಲ್ಲಿ 'ಭಾಗಿ'ಯಾಗುತ್ತಿರುವವರು ಸಮಾಜದ ಅಂಚಿನಲ್ಲಿರುವವರು. ಇವರು ಅ). ಮತಾಂತರವನ್ನು ತಮ್ಮ ಆಯ್ಕೆ ಎಂದು ತಿಳಿದವರಾಗಿರಬಹುದು; ಇಲ್ಲವೇ ಆ) ಇತರರು ಹೇಳುವಂತೆ 'ಬಲಿಪಶು'ಗಳಾಗಿರಬಹುದು. ಇವರಲ್ಲಿ ಮೊದಲಿನವರು ಮತಾಂತರ ಏಕೆ ತಮ್ಮ ಆಯ್ಕೆ ಎಂಬ ಬಗೆಗೆ ತಮ್ಮ ನಿಲುವನ್ನು ಮಂಡಿಸುತ್ತಿದ್ದಾರೆ. ಎರಡನೆಯ ಗುಂಪಿನವರ ಬಗೆಗೆ ಇತರರು ತಮ್ಮ ನಿಲುವನ್ನು ಮಂಡಿಸುತ್ತಿದ್ದಾರೆ.

ಯಾವುದೇ ಸಾಮೂಹಿಕ ಆಯ್ಕೆಯ ಹಿಂದೆ ವ್ಯಕ್ತಿಗತ ನಿರ್ಧಾರಗಳು ಮುಖ್ಯವಾಗುವುದಿಲ್ಲ. ಅಂತಹ ಸಾಮೂಹಿಕ ಚಲನೆಯ ಹಿಂದೆ ಹಲವು ಒತ್ತಡಗಳು ಇದ್ದೇ ಇರುತ್ತವೆ. ಅದು ಪ್ರಚಾರವಿರಬಹುದು; ಪ್ರೇರಣೆ ಇರಬಹುದು. ಇಲ್ಲವೇ ಮತ್ತಾವುದೇ ಕಟ್ಟು ಇರಬಹುದು. ಸಮುದಾಯ ಇಲ್ಲವೇ ಅದರ ಭಾಗ ಇಂತಹ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಅದಕ್ಕೆ ಕೊಡುವ ಕಾರಣಗಳಿಗೂ ಆ ನಿರ್ಧಾರದ ಪರಿಣಾಮಗಳಿಗೂ ನೇರವಾದ ಸಂಬಂಧ ಇರಲೇಬೇಕೆಂಬ ನಿಯಮಗಳಿಲ್ಲ. ಉದಾಹರಣೆಗೆ ಇಂಡಿಯಾದ ದಲಿತರು ಇಲ್ಲವೇ ಅವರಲ್ಲಿನ ಒಂದು ಗುಂಪು ಬೌದ್ಧಧರ್ಮಕ್ಕೆ ಸೇರ್ಪಡೆಯಾಗುವ ನಿರ್ಣಯವನ್ನು ತೆಗೆದುಕೊಂಡರೆ ಆ ನಿರ್ಣಯದ ಹಿಂದೆ ತಮ್ಮ ಸಾಮಾಜಿಕ ಪರಿಸ್ಥಿತಿಯಿಂದ ಹೊರಬರುವ ಇರಾದೆ ಕೆಲಸ ಮಾಡುತ್ತಿರುತ್ತದೆ. ಇದನ್ನವರು ಸ್ಪಷ್ಟವಾದ ಮಾತುಗಳಲ್ಲಿ ಹೇಳುತ್ತಿರುತ್ತಾರೆ ಕೂಡ. ಆದರೆ ಈ ಪರಿವರ್ತನೆಯ ಪರಿಣಾಮ ಅವರು ಬೌದ್ಧರಾಗಿ ತಮ್ಮ ಜೀವನ ಕ್ರಮವನ್ನು ಬದಲಾಯಿಸಿಕೊಂಡಿದ್ದಾರೆ ಎಂದಲ್ಲ. ಇಂತಹ ಪರಿವರ್ತನೆಗಳ ಪರಿಣಾಮ ಬೇರೇನೋ ಆಗಿರಲು ಸಾಧ್ಯವಿದೆ.

ಇದೇ ಪರಿಸ್ಥಿತಿ 'ಗೊತ್ತಿಲ್ಲದೆ' ಮತಾಂತರಗೊಳ್ಳುವವರಲ್ಲೂ ಕಾಣುತ್ತದೆ. ಅವರು 'ಇನ್ನೊಂದು' ಧರ್ಮಕ್ಕೆ ಬದಲಾಗಲು ಇರುವ ಕಾರಣಗಳನ್ನು ಕೇವಲ ಅವರ ಮೇಲೆ ಮಂಕುಬೂದಿ ಎರಚುವವರಲ್ಲಿ ಹುಡುಕುವ ಯತ್ನ ಸರಿಯಲ್ಲ. ಹೀಗೆ 'ಮಂಕುಬೂದಿ' ಎರಚುವ ಪರಿಸ್ಥಿತಿ ಏಕೆ ಉಂಟಾಗಿದೆ ಎಂಬುದನ್ನು ತಿಳಿದುಕೊಳ್ಳುವುದು ಮುಖ್ಯ. ಬದುಕಿನ 'ಬೇಕು'ಗಳಿಂದ ಹೊರಗುಳಿದವರಿಗೆ ಅದು ಸಿಗುವ ಯಾವ ಹಾದಿಯಾದರೂ ಒಂದು ಸೆಳೆತವಾಗಿಯೇ ಕಾಣುತ್ತದೆ. ಅದರಲ್ಲೂ ಆಹಾರ, ಆರೋಗ್ಯ, ವಸತಿ ಇವುಗಳ ಹುಡುಕಾಟದಲ್ಲಿರುವವರಿಗೆ ಅದು ಸಿಗುತ್ತದೆ ಎಂಬ ನಂಬಿಕೆ ಒಂದು ಸೆಳೆತವೇ ಆಗಿಬಿಡುತ್ತದೆ. ಅವರ ನಿರ್ಗತಿಕತೆಯನ್ನು 'ಪ್ರಚಾರಕರು' ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ ಎಂಬ ತರ್ಕ ಹೂಡುವವರು ಈ ನಿರ್ಗತಿಕತೆಗೆ ಕಾರಣಗಳನ್ನು ಮತ್ತು ಅದರ ಪರಿಹಾರಕ್ಕೆ ಹೂಡಿದ ಕಾರ್ಯಯೋಜನೆಗಳನ್ನು ಕುರಿತು ಚಿಂತಿಸುವುದು ಅಗತ್ಯವಲ್ಲವೇ?

2. ಮತಾಂತರ ಒಂದು ಆರ್ಥಿಕ ಸಾಮಾಜಿಕ ನೆಲೆಯ ಪ್ರಕ್ರಿಯೆ. ಇದು ನಾವು ಆಯ್ದುಕೊಂಡ ಅಭಿವೃದ್ಧಿಯ ಮಾದರಿಯ ಪರಿಣಾಮವೂ ಹೌದು. ನಮ್ಮ ಅಭಿವೃದ್ಧಿಯ ಮಾದರಿಯಲ್ಲಿ 'ಒಳಗೊಳ್ಳುವ' ನೆಲೆಗಳಿಗಿಂತ 'ಹೊರಗಿಡುವ' ನೆಲೆಗಳು ಬಲಶಾಲಿಯಾಗಿವೆ. ರಾಜಕೀಯ ಸಮಾನತೆಯನ್ನು ಒಬ್ಬರಿಗೆ ಒಂದು ಓಟು ಎಂಬುದರಿಂದ ನಿರ್ಧರಿಸಿದ್ದೇವೆ. ಆದರೆ ಆರ್ಥಿಕ ಮತ್ತು ಸಾಮಾಜಿಕ ಸಮಾನತೆಗಳು 'ಸಾಧಿಸ'ಬೇಕಾದ ಗುರಿಗಳಾಗಿವೆ. ಈ ಹಾದಿಯಲ್ಲಿ ಸಮಬಲಗಳ ನಡುವೆ ಓಟ ಏರ್ಪಟ್ಟಿಲ್ಲ; ಅಸಮಾನತೆಯನ್ನು ಬಳಸುದಾರಿಯಿಂದ ಕಾಯ್ದುಕೊಂಡು ಹೋಗುವ ಮಾದರಿಯೇ ನೆಲೆಗೊಂಡಿದೆ. ಇದರಲ್ಲಿ ಪಾರಂಪರಿಕವಾಗಿ 'ಹೊರಗುಳಿದಿದ್ದವರ' ಜೊತೆಗೆ ಈ ಪ್ರಕ್ರಿಯೆಯಿಂದಾಗಿ 'ಹೊರಗುಳಿಯಬೇಕಾಗಿ'ಬಂದವರು ಸೇರಿಕೊಂಡಿದ್ದಾರೆ.

ಮೊದಲಗುಂಪಿನಲ್ಲಿ ಬುಡಕಟ್ಟುಜನರು, ದಲಿತರು ಇದ್ದರೆ ಎರಡನೆಯ ಗುಂಪಿನಲ್ಲಿ ತಮ್ಮ ಪಾರಂಪರಿಕ ಕೌಶಲ್ಯಗಳು ಹೊಸ ಜಗತ್ತಿನಲ್ಲಿ ನಿರುಪಯುಕ್ತಗೊಂಡದ್ದರಿಂದಲೇ ಅಸಹಾಯಕರಾದ ಜನ ಸಮುದಾಯವಿದೆ. ಮತಾಂತರವೆಂಬುದು ಈ ಕಾರಣಗಳಿಂದ ಬೆಳೆದು ನಿಂತ ಸಮುದಾಯದಲ್ಲಿ ನಡೆಯುತ್ತಿರುವ ಚಟುವಟಿಕೆಯಾಗಿದೆ. ಇದು ತಮ್ಮ 'ಅಂಚಿನ ಸಮಾಜದ' ನಿರ್ಗತಿಕತೆಯಿಂದ ಹೊರಬರಲು ನಡೆಸುತ್ತಿರುವ ಯತ್ನವಾಗಿ ತೋರುತ್ತಿದೆ. ಇದು ಫಲಕಾರಿಯೋ ಅಲ್ಲವೋ ಎನ್ನುವುದು ಮುಖ್ಯವಲ್ಲ. ಹೀಗಾಗಲು ಕಾರಣಗಳೇನು ಎಂಬುದನ್ನು ನಾವು ಮೊದಲು ಗ್ರಹಿಸದಿದ್ದಲ್ಲಿ ತಪ್ಪು ವಿಶ್ಲೇಷಣೆಯಲ್ಲಿ ಮಗ್ನರಾಗುತ್ತೇವೆ.

**3. ಈ ಚರ್ಚೆ ಈಗ ನಡೆಯುತ್ತಿರುವ ಬಗೆ ಏನನ್ನು ಸೂಚಿಸುತ್ತಿದೆ?**

ಮತಾಂತರದ ಪ್ರಶ್ನೆಯನ್ನು ಚಾರಿತ್ರಿಕವಾಗಿ ನೋಡಬಹುದು; ಜಾಗತಿಕವಾಗಿ ನೋಡಬಹುದು ಮತ್ತು ಸಮಕಾಲೀನ ವಿದ್ಯಮಾನವಾಗಿಯೂ ನೊಡಬಹುದು. ಯಾವ ನಿಟ್ಟಿನಲ್ಲಿ ಈ ಪ್ರಶ್ನೆಯನ್ನು ಚರ್ಚಿಸುತ್ತಿದ್ದೇವೆ ಎಂಬುದನ್ನು

ಖಚಿತಪಡಿಸಿಕೊಳ್ಳುವುದು ಆಗತ್ಯ. ಏಕೆಂದರೆ ಒಂದು ನೆಲೆಯಲ್ಲಿ ಬಳಸುವ ಪರಿಕರಗಳನ್ನು ಇನ್ನೊಂದು ನೆಲೆಯಲ್ಲಿ ಬಳಸುವುದು ತಪ್ಪಾಗುತ್ತದೆ. ಉದಾ.ಗೆ. ಸ್ವಾತಂತ್ರ್ಯ ಪೂರ್ವದಲ್ಲಿ ನಡೆಯುತ್ತಿದ್ದ ಮತಾಂತರಗಳ ಒಂದು ಲಕ್ಷಣ ಈಗಿನ ಮತಾಂತರಗಳಲ್ಲಿ ಕಾಣುವುದಿಲ್ಲ. ಊಳಿಗಮಾನ್ಯ ವ್ಯವಸ್ಥೆಯಲ್ಲಿ ಯಜಮಾನನ ಮತಾಂತರದ ಮೂಲಕ ಇಡೀ ಸಮುದಾಯವನ್ನು ಬದಲಿಸುವ ತಂತ್ರವನ್ನು ಬಳಸಿದ್ದನ್ನು ನೋಡುತ್ತೇವೆ. ಮಧ್ಯಕಾಲೀನ ಕರ್ನಾಟಕದಲ್ಲಿ ಈ ಬಗೆ ಇದ್ದುದಕ್ಕೆ ಪುರಾವೆಗಳು ದೊರಕುತ್ತವೆ. ಆದರೆ ಈಗ ಈ ಮಾದರಿ ಕಾಣಸಿಗುತ್ತಿಲ್ಲ. ಆದ್ದರಿಂದ ಇಂದಿನ ಪ್ರಕ್ರಿಯೆಯನ್ನು ಚಾರಿತ್ರಿಕ ನೆಲೆಯ ನಿದರ್ಶನಗಳಿಂದ ವಿವರಿಸಲು ಆಗುವುದಿಲ್ಲ.

ಈಗ ಈ ಪ್ರಶ್ನೆಯನ್ನು ಮುಂಚೂಣಿಗೆ ತರುತ್ತಿರುವವರು ಯಾರು? ಮೊದಲೇ ಹೇಳಿದಂತೆ ಮತಾಂತರದ 'ಖೆಡ್ಡ'ಕ್ಕೆ ಬಿದ್ದವರೂ ಅಲ್ಲ; ಅದನ್ನು ಒಂದು ಹೊರದಾರಿ ಎಂದು ಕಂಡುಕೊಂಡವರೂ ಅಲ್ಲ. ಹೊಸ ಆರ್ಥಿಕ ವ್ಯವಸ್ಥೆಯ ಬಿಕ್ಕಟ್ಟುಗಳಿಂದಾಗಿ ಸಾಂಪ್ರದಾಯಿಕ ಯಾಜಮಾನ್ಯಕ್ಕೆ ಕೊಡಲಿಯೇಟು ಬಿದ್ದಿರುವುದಂತೂ ನಿಜ. ಅಂದರೆ ಹೊಸ ಗುರುತುಗಳು ಈಗ ಮುಂಚೂಣಿಗೆ ಬಂದಿವೆ. ಉಳ್ಳವರು ಜಾಗತಿಕ ಮಟ್ಟದ ಸಂಪರ್ಕ ಜಾಲದಲ್ಲಿ ತಮ್ಮ ಗುರುತುಗಳನ್ನು ಕಂಡುಕೊಳ್ಳತೊಡಗಿರುವುದು ಎದ್ದು ಕಾಣುತ್ತಿರುವ ಸಂಗತಿ. ಇದರ ಪ್ರತಿರೋಧವಾಗಿ 'ಅಂಚಿನ ಸಮುದಾಯ'ಗಳು ಕೂಡ ಜಾಗತಿಕ ನೆಲೆಯ ಸಂಪರ್ಕಜಾಲದೊಳಗೆ ತಮ್ಮನ್ನು ತಾವು ಸೇರಿಸಿಕೊಳ್ಳುವುದು ಅನಿವಾರ್ಯವಾಗಿದೆ. ದಲಿತರ ಪ್ರಶ್ನೆಯನ್ನು ವರ್ಣಭೇದ ಪ್ರಶ್ನೆಯೊಂದಿಗೆ ಜೋಡಿಸಿ ಅದನ್ನು ಮಾನವ ಹಕ್ಕುಗಳ ಭಾಗವಾಗಿ ಚರ್ಚಿಸಬೇಕೆಂಬ ಕರೆ ಇಂತಹ ಪ್ರಕ್ರಿಯೆಯ ಪರಿಣಾಮವೇ ಆಗಿದೆ. ಇದು ವೈರುಧ್ಯ ಪ್ರಕಟಗೊಳ್ಳುವ ರೀತಿಯೇ ಹೊರತು ವೈರುಧ್ಯ ಪರಿಹಾರಗೊಳ್ಳುವ ಬಗೆಯಲ್ಲ. ಆದರೂ ಈ ಹೊಸ ಗುರುತಿಗಾಗಿ ನಡೆಸಿರುವ ಪ್ರಯತ್ನಗಳು ಸಾಂಪ್ರದಾಯಿಕ ನೆಲೆಗಳಿಗೆ ಆತಂಕವನ್ನು ತಂದಿವೆ. ಈ ಸಂಪರ್ಕ ಜಾಲ ನಿರ್ಮಾಣ ತರಬಹುದಾದ ಹೊಸ ಸವಾಲುಗಳನ್ನು ನಿವಾರಿಸಿಕೊಳ್ಳಲು ಮತಾಂತರವನ್ನು ಕುರಿತ ಇಂತಹ ಚರ್ಚೆಗಳನ್ನು ಹುಟ್ಟುಹಾಕಲಾಗುತ್ತಿದೆ.

4. ಮತಾಂತರದ ಪರ ಇಲ್ಲವೇ ವಿರುದ್ಧ ಎಂಬ ನಿಲುವು ಸರಿಯಲ್ಲ. ಇವೆರಡೂ ನಮ್ಮನ್ನು ದಿಟವನ್ನು ಅರಿಯಲು ನೆರವಾಗುವುದಿಲ್ಲ. ಬುದ್ಧಿಯನ್ನು ಬಳಸಿ ಯಾವುದೇ ಪಕ್ಷದ ವಾದವನ್ನು ಸಮರ್ಥಿಸಲೂಬಹುದು ಹಾಗೆಯೇ ಖಂಡಿಸಲೂ ಬಹುದು. ಆದರೆ ಇದು ಕುರುಹುಗಳನ್ನು ಹಿಡಿದು ನಡೆಸುವ ವಾಗ್ವಾದವಾಗಿದೆ. ಇಲ್ಲಿ ಮಾತಿಗೆ ಪ್ರಾಧಾನ್ಯ ಒದಗಿಬಿಡುತ್ತದೆ. ಕಾಣುವ ಕುರುಹುಗಳನ್ನು ಬೆಳೆಸಿದ ಮೂಲವನ್ನು ಹುಡುಕಿ ಅಲ್ಲಿಂದ ಮೊದಲು ಮಾಡಬೇಕಿದೆ. ಇಂತಹ ಚರ್ಚೆಗಳಿಗೆ ಇನ್ನೊಂದು ಉದ್ದೇಶವೂ ಇರುತ್ತದೆ. ಅದು ದುರ್ಬಲರಲ್ಲಿ ಅಭದ್ರತೆಯ ಭಾವನೆಯನ್ನು ಮೂಡಿಸುವುದು. ಸ್ವಲ್ಪ ಮಟ್ಟಿಗೆ ಈ ಉದ್ದೇಶವನ್ನು ಸಾಧಿಸುವಲ್ಲಿ ಈ ವಾಗ್ವಾದಗಳು ಗೆಲುವನ್ನು ಪಡೆಯಲೂಬಹುದು. ಆದರೆ ಪರಿಸ್ಥಿತಿಯಲ್ಲಿ ಬದಲಾವಣೆಯನ್ನು ತರಲಾರದು.

5. ಇನ್ನೂ ಒಂದು ದಿಕ್ಕಿನಿಂದ ಈ ಪ್ರಶ್ನೆಯನ್ನು ಅರಿತುಕೊಳ್ಳಲು ಸಾಧ್ಯವಿದೆ. ಗತಿತಾರ್ಕಿಕತೆಯ ನೆಲೆಯಿಂದ ನೋಡಿದರೆ ಈಗ ಮತಾಂತರ ಒಂದು ಕಿರು ವೈರುಧ್ಯ. ಇದಕ್ಕೂ ಮುಖ್ಯವಾದ ಹಿರಿ ವೈರುಧ್ಯಗಳಿವೆ. ಅಧಿಕಾರಸ್ಥರು ಕೆಲವೊಮ್ಮೆ ಬೇಕೆಂತಲೇ ತಮ್ಮ ವಿಶ್ಲೇಷಣೆಯಲ್ಲಿ ಈ ವೈರುಧ್ಯಗಳ ಶ್ರೇಣಿಯಲ್ಲಿ ಅದಲು ಬದಲು ಮಾಡುತ್ತಾರೆ. ಆಗ ಕಿರು ವೈರುಧ್ಯವೇ ಮುಂಚೂಣಿಯಲ್ಲಿದೆಯೆಂಬ ಭ್ರಮೆಯನ್ನು ಮೂಡಿಸಲು ಸಾಧ್ಯ. ಆಗ ಸಮಾಜ ರಚನೆಯೊಳಗೆ ಇರುವ ವೈರುಧ್ಯಗಳ ನಡುವಣ ಶತ್ರುತ್ವವನ್ನು ಮರೆಮಾಚಲು ಸಾಧ್ಯವಾಗುತ್ತದೆ. ಕಳೆದ ಐದಾರು ದಶಕಗಳಿಂದ, ಜಾತಿ ವ್ಯವಸ್ಥೆಯ ಸ್ವರೂಪವನ್ನು ಗಮನಿಸಿದವರು ಈ ಸಮಾಜದ ಹಿರಿ ವೈರುಧ್ಯ ಇದೇ ಆಗಿದೆ ಎಂದು ಗುರುತಿಸಿದ್ದರು. ಈ ವಿಶ್ಲೇಷಣೆ ಸರಿಯೋ ತಪ್ಪೋ ಎಂಬುದು ಸದ್ಯ ಮುಖ್ಯವಲ್ಲ. ಆದರೆ ಇದರಿಂದ ಜಾತಿಗಳ ನಡುವೆ ಶ್ರೇಣೀಕರಣಕ್ಕಾಗಿ ಹೋರಾಟ ನಡೆಯುತ್ತಿದೆ ಎಂಬುದಂತೂ ನಿಜ. ಈಗ ಅಧಿಕಾರದ ಹಸ್ತಾಂತರ ಸನ್ನಿಹಿತವಾಗುತ್ತಿದೆ ಎಂಬ ಎಚ್ಚರಿಕೆಯ ಗಂಟೆ ಮೊಳಗತೊಡಗಿದೆ. ಇದನ್ನು ನಿವಾರಿಸಲು ಹೊರಗಿನ ಶತ್ರುವನ್ನು ಕಲ್ಪಿಸಿ ಮುಂದಿಡಲಾಗುತ್ತಿದೆ. ಇದರಿಂದ 'ನಾವೆಲ್ಲರೂ ಒಂದು' ಎಂಬ ಭಾವನೆಯನ್ನು ಗಟ್ಟಿಗೊಳಿಸಿ, ಯಾರೋ ಇದನ್ನು ಒಡೆಯಲು ಪ್ರಯತ್ನಿಸುತ್ತಿದ್ದಾರೆ ಎಂಬ ಭಯದ ವಾತಾವರಣವನ್ನು ಮೂಡಿಸುವುದು ಅಧಿಕಾರವುಳ್ಳವರ ಗುರಿಯಾಗಿದೆ. ಈಗ ಕಿರು ವೈರುಧ್ಯವನ್ನು ಮುಂಚೂಣಿಗೆ ತಂದು ಇರುವ ಶತ್ರುತ್ವಭಾವವನ್ನು ಮರೆಮಾಚುವುದೂ ಇಂತಹ ಚರ್ಚೆಗಳ ಗುರಿಯಾಗಿದೆ.

# ತಂತ್ರಜ್ಞಾನ ತಂದೊಡ್ಡುವ ಸವಾಲುಗಳು

ಕಂಪ್ಯೂಟರಿನಲ್ಲಿ ಕನ್ನಡ ಬಳಸಲು ಹೊರಡುವವರಿಗೆ ಎದುರಾಗುವ ಸಮಸ್ಯೆಗಳು ಹಲವು. ಈ ಸಮಸ್ಯೆಗಳಿಗೆ ತಂತ್ರಾಂಶವನ್ನು ತಯಾರಿಸುತ್ತಿರುವವರ ನಡುವಣ ಒಳಜಗಳಗಳು ಒಂದು ಕಾರಣವಾದರೆ ಬಳಸುವವರಿಗೆ ಏನು ಬೇಕಾಗಿದೆ ಎಂದು ತಿಳಿದುಕೊಳ್ಳದಿರುವುದು ಇನ್ನೊಂದು ಕಾರಣ. ಇದರ ಜೊತೆಗೆ ಕನ್ನಡ ಮಾರುಕಟ್ಟೆಯನ್ನು ಹಿಡಿತಕ್ಕೆ ತೆಗೆದುಕೊಳ್ಳಲು ದೈತ್ಯ ಸಂಸ್ಥೆಗಳು ಯಾರನ್ನೂ ಕೇಳದೆ ತಮ್ಮ ಪಾಡಿಗೆ ತಾವು ಒದಗಿಸುತ್ತಿರುವ ಕನ್ನಡ ತಂತ್ರಾಂಶಗಳ ಕೊರತೆಗಳನ್ನು ತಿದ್ದುವ ಅವಕಾಶ ಯಾರಿಗೂ ಇಲ್ಲವಾಗಿದೆ. ಮೈಕ್ರೋಸಾಫ್ಟ್ ಸಂಸ್ಥೆ ತನ್ನ ಆಪರೇಟಿಂಗ್ ಸಿಸ್ಟಮ್ ನಲ್ಲಿ ಭಾರತೀಯ ಭಾಷೆಗಳ ಅಕ್ಷರಗಳು ತೆರೆಯ ಮೇಲೆ ಕಾಣಿಸುವಂತೆ ಮಾಡಲು ನಡೆಸುತ್ತಿರುವ ಯತ್ನ ಮತ್ತು ಗೂಗಲ್ ಮೇಲ್ ನಲ್ಲಿ ನೇರವಾಗಿ ಕನ್ನಡವನ್ನು ಅಚ್ಚಿಸಲು ಒದಗಿಸಿರುವ ತಂತ್ರಾಂಶ ಇವುಗಳನ್ನು ಉದಾಹರಣೆಗಳನ್ನಾಗಿ ಗಮನಿಸಬಹುದು. ಇವೆಲ್ಲದರ ಜೊತೆಗೆ ಕಂಪ್ಯೂಟರ್ ಬಳಸುವವರಿಗೆ ತಮಗೆ ಏನೇನು ತಂತ್ರಾಂಶ ಸೌಲಭ್ಯಗಳು ಲಭ್ಯವಿವೆ ಎಂಬುದು ಕೂಡ ಗೊತ್ತಿರುವುದಿಲ್ಲ. ಕೆಲವರು ತಿಳಿದುಕೊಳ್ಳಲು ಮುಂದಾಗುವುದೂ ಇಲ್ಲ. ತಂತ್ರಜ್ಞಾನ ಅತಿ ವೇಗವಾಗಿ ಬದಲಾಗುತ್ತಿರುವುದರಿಂದ ಬಳಕೆದಾರರ ಮೇಲೆ ಹೆಚ್ಚಿನ ಒತ್ತಡ ಬೀಳುತ್ತಿದೆ. ಐದು ವರುಷಗಳ ಹಿಂದೆ ಕನ್ನಡವನ್ನು ಕಂಪ್ಯೂಟರಿನಲ್ಲಿ ಬಳಸಲು ಮೊದಲು ಮಾಡಿದವರು ಕೂಡ ಈ ದಿನಗಳಲ್ಲಿ ಹೊಸ ತೊಡಕುಗಳನ್ನು ಎದುರಿಸುತ್ತಿರುತ್ತಾರೆ. ಹಾಗಾಗಿ ಬಳಸುವವರೂ ಕೂಡ ಯಾವಾಗಲೂ ಸನ್ನದ್ಧರಾಗಿಯೇ ಇರಬೇಕಾಗುವುದು.

ಕಂಪ್ಯೂಟರ್ ಬಳಸುವವರು ತಮ್ಮ ಎಲ್ಲ ಸಮಸ್ಯೆಗಳಿಗೂ ಕಂಪ್ಯೂಟರಿನಲ್ಲೇ ಉತ್ತರವಿರುತ್ತದೆ ಎಂದು ತಿಳಿದುಬಿಡುತ್ತಾರೆ. ಆದರೆ ಅದು ಹಾಗಲ್ಲ. ನನಗೆ ಕನ್ನಡ ಓದಲು ಗೊತ್ತಿದೆ ಎಂದ ಕೂಡಲೇ ನನಗೆ ಶಾಸನ ಬರಹವನ್ನು ತಾಳೆಯೋಲೆ ಬರಹವನ್ನು ಓದಲು ಬರುವುದೆಂದಲ್ಲ. ಅದನ್ನು ಓದುವ ತಜ್ಞರು ನಮಗೆ ಗೊತ್ತಾಗುವ ಹಾಗೆ ಮರಳಿ ಬರೆದುಕೊಟ್ಟರೆ ಆಗ ನಾವು ಓದುತ್ತೇವೆ. ಈ ಬಗೆಯ ತಜ್ಞ ವ್ಯಕ್ತಿಗಳಿದ್ದಾಗ ತಿಳುವಳಿಕೆಯು ಎಲ್ಲರ ಸ್ವತ್ತಾಗುತ್ತಿರಲಿಲ್ಲ. ಇಂದಿನ ದಿನಗಳಲ್ಲಿ ನಾವು ಅರಿವು ಹೀಗೆ ಯಾರೋ ಕೆಲವರಲ್ಲಿ ಅಡಗಿ ಕುಳಿತಿರುವುದನ್ನು ಒಪ್ಪುವುದು ಆಗದು. ಹಾಗಾಗಬೇಕಾದರೆ ಭಾಷೆಯನ್ನು ಬಳಸುವ ಎಲ್ಲರೂ ಒಂದಲ್ಲ ಒಂದು ಬಗೆಯಲ್ಲಿ ಅರಿವನ್ನು ಪಡೆದುಕೊಳ್ಳಲು ಸಿದ್ಧರಾಗಿರಬೇಕು. ಉದಾಹರಣೆಗಾಗಿ ಈಗ ಅಂತರ್ಜಾಲದಲ್ಲಿ ಕನ್ನಡವನ್ನು ಬರೆಯಬೇಕಾದರೆ (ಬ್ಲಾಗುಗಳು,ಇ-ಮೈಲ್ ಚಾಟ್ ಮುಂತಾದವು) ಬರವಣಿಗೆ

ಯೂನಿಕೋಡ್‌ನಲ್ಲಿ ಇರಬೇಕು. ಈಗ ಲಭ್ಯವಿರುವ ಕನ್ನಡ ಬರವಣಿಗೆಯ ಹಲವು ತಂತ್ರಾಂಶಗಳು ಹೀಗೆ ಯೂನಿಕೋಡ್ ಬರವಣಿಗೆಗೆ ನೆರವಾಗುವುದಿಲ್ಲ. ಆದರೆ ನೀವು ಹೇಗೆ ಬರೆದಿದ್ದರೂ ಅದನ್ನು ಯೂನಿಕೋಡ್‌ಗೆ ಬದಲಿಸಿಕೊಡಬಲ್ಲ ತಂತ್ರಾಂಶ ಸಿದ್ಧವಿದೆ. ಹೀಗಿರುವಾಗ ಸಮಸ್ಯೆ ಕಡಿಮೆಯಾಗುತ್ತದೆಯಲ್ಲವೇ? ಹಲವರಿಗೆ ಈ ಸೌಲಭ್ಯವನ್ನು ಬಳಸಲು ಗೊತ್ತಿಲ್ಲ. ಗೊತ್ತಿದ್ದರೂ ಅದೆಲ್ಲ ರೇಜಿಗೆ ಎಂದು ಸುಮ್ಮನಾಗುತ್ತಾರೆ.

ಅಂದರೆ ಎಲ್ಲ ಹೊಣೆಯನ್ನೂ ಬಳಕೆದಾರರ ಮೇಲೆ ಹಾಕಬೇಕೆಂದಲ್ಲ. ನಡುವೆ ಅವರಿಗೆ ನೆರವಾಗಲು ಒಂದು ವ್ಯವಸ್ಥೆಯನ್ನು ರೂಪಿಸಬೇಕಿದೆ. ಕಂಪ್ಯೂಟರಿನಲ್ಲಿ ಕನ್ನಡವನ್ನು ಬಳಸುವವರು, ಬಳಸಬೇಕೆನ್ನುವವರು ಎದುರಿಸುವ ಸಮಸ್ಯೆಗಳಿಗೆ ಪರಿಹಾರಗಳನ್ನು ಒದಗಿಸುವ ಅಂತರ್ಜಾಲ ತಾಣವನ್ನು ರೂಪಿಸಬೇಕು. ಇಲ್ಲವೇ ಈ ಸಮಸ್ಯೆಗಳನ್ನು ಇ-ಮೇಲ್ ಮೂಲಕ ಬರೆದುಕೊಂಡವರಿಗೆ ಕೂಡಲೇ ಪರಿಹಾರಗಳನ್ನು ವಿವರವಾಗಿ ಬರೆದು ತಿಳಿಸುವ ನೆಲೆಯೊಂದನ್ನು ನಿರ್ವಹಿಸಲು ಸರಕಾರ ಕ್ರಮವಹಿಸಬೇಕು. ಕನ್ನಡದ ಬೆಳವಣಿಗೆಯ ಹೊಣೆ ಹೊತ್ತ ಅಭಿವೃದ್ಧಿ ಪ್ರಾಧಿಕಾರ ಈ ನಿಟ್ಟಿನಲ್ಲಿ ಮುಂದಾಗಬೇಕು. ಕನ್ನಡದ ಈ ಗೋಜಲುಗಳನ್ನು ನಿವಾರಿಸಲು ನೆರವಾಗುವ ಯುವತಜ್ಞರು ಹಲವರು ಇದ್ದಾರೆ. ಅವರನ್ನು ಒಳಗೊಳ್ಳುವ ಕೆಲಸವನ್ನು ಮೊದಲುಮಾಡಬೇಕು. ಇದರ ಜೊತೆಗೆ ಒಟ್ಟಾರೆಯಾಗಿ ಮಾಹಿತಿ ತಂತ್ರಜ್ಞಾನ ವಲಯದಲ್ಲಿ ಕನ್ನಡಕ್ಕೆ ಸಂಬಂಧಿಸಿದಂತೆ ಆಗಬೇಕಿರುವ ಕೆಲಸಗಳನ್ನು ಗುರುತಿಸಿ ಆ ನಿಟ್ಟಿನಲ್ಲಿ ಕಾರ್ಯನಿರ್ವಹಿಸುವ ಸಂಶೋಧನ ಸಂಸ್ಥೆಯೊಂದನ್ನು ಸರಕಾರವೇ ಆರಂಭಿಸಬೇಕು. ಇದು ಇಂದು ಬಂದು ನಾಳೆ ಹೋಗುವ ಸಮಿತಿಗಳಿಂದ ಆಗುವ ಕೆಲಸವಲ್ಲ. ನಿರ್ದಿಷ್ಟ ಕಾರ್ಯಸೂಚಿಯಿರುವ ಈ ಸಂಸ್ಥೆ ಕಂಪ್ಯೂಟರ್ ಮಾತ್ರವಲ್ಲದೆ ಇನ್ನಿತರ ಮಾಹಿತಿ ತಂತ್ರಜ್ಞಾನ ವಲಯದಲ್ಲಿ ಕನ್ನಡ ಬಳಕೆಗೆ ಇರುವ ಅಡ್ಡಿಗಳನ್ನು ನಿವಾರಿಸುವ ಕೆಲಸ ಮಾಡಬೇಕು. ಹೀಗಾಗದಿದ್ದಲ್ಲಿ ಸಮಸ್ಯೆಗಳನ್ನು ತಮಗೆ ಬೇಕಾದ ಬಗೆಯಲ್ಲಿ ಪರಿಹರಿಸಿಕೊಳ್ಳುವ ಅಂತಾರಾಷ್ಟ್ರೀಯ ಸಂಸ್ಥೆಗಳು ಕೊಟ್ಟದಕ್ಕೆ ಹೇಗೋ ಹೊಂದಿಕೊಂಡು ಹೋಗುವ ಗತಿ ನಮ್ಮದಾಗುತ್ತದೆ. ಜಾಹೀರಾತುಗಳಲ್ಲಿ ಕನ್ನಡ ಹೇಗೆ ಬಳಕೆಯಾಗುತ್ತದೆ (ಮಾತು ಮತ್ತು ಬರಹ ಎರಡೂ) ಎಂಬುದನ್ನು ಕಂಡವರಿಗೆ ಮುಂದಿನ ದಿನಗಳಲ್ಲಿ ಮಾಹಿತಿ ತಂತ್ರಜ್ಞಾನ ವಲಯದಲ್ಲೂ ಇದೇ ಅವಸ್ಥೆ ಕಾದಿದೆ.

# ತಂತ್ರಜ್ಞಾನ ಮತ್ತು ಮಾನವೀಯ ಘನತೆ

ಈಚಿನ ದಿನಗಳಲ್ಲಿ 'ಭಾರತೀಯ ಚಿಂತನೆ', 'ಭಾರತೀಯತೆ', 'ಈ ನೆಲದ ವಿಚಾರಗಳು' ಮುಂತಾದ ಮಾತುಗಳನ್ನು ಕೇಳುತ್ತಿದ್ದೇವೆ. ಹಲವು ನೆಲೆಗಳಲ್ಲಿ ಈ ಮಾತುಗಳನ್ನು ಕುರಿತು ಚರ್ಚೆ ನಡೆಯುತ್ತಿದೆ. ಪ್ರಗತಿಯ ಮಾದರಿಗಳನ್ನು ಆಯ್ದುಕೊಳ್ಳುವಾಗ ಪಾಶ್ಚಾತ್ಯ ಚಿಂತನೆಗಳಿಂದ ಪ್ರೇರಿತರಾದುದರಿಂದ ಉಂಟಾಗಿರುವ ಪರಿಣಾಮಗಳೇ ಈ ಎಲ್ಲ ಚರ್ಚೆಗಳಿಗೂ ಭಿತ್ತಿಯಾಗಿರುವುದು ಕಾಣುತ್ತದೆ. ಈ ಸಂಗತಿಗಳನ್ನೆಲ್ಲಾ ಇಲ್ಲಿ ವಿವರಿಸುವುದು ಅಸಾಧ್ಯ. 'ಭಾರತೀಯ ಮಾದರಿ' ಎಂಬ ಚಿಂತನೆಯ ಪ್ರಾಯೋಗಿಕ ನೆಲೆಗಳಲ್ಲಿ ತಳೆಯುವ ಆಕಾರಗಳನ್ನು ಗಮನಿಸುವುದು ಈ ಟಿಪ್ಪಣಿಯ ಉದ್ದೇಶ.

ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ 'ಜ್ಞಾನ'ವನ್ನು ಆಮದು ಮಾಡಿಕೊಂಡು ಬೆಳೆಯುವುದರಿಂದ ಎಂದಿಗೂ ನಾವು ಪಾಶ್ಚಾತ್ಯ ಜಗತ್ತಿಗೆ ಹೆಗಲೇಣಿಯಾಗಲಾರೆವೆಂಬ ಅಭಿಪ್ರಾಯ ಸಾಧುವಾದುದೇ ಸರಿ. ಹಾಗಾದರೆ ನಮಗಿರುವ ಪರ್ಯಾಯವಾದರೂ ಯಾವುದು? ಶತಮಾನಗಳಿಂದ ಭಾರತೀಯ ಜನಜೀವನದಲ್ಲಿ ಅಂತಸ್ಥವಾಗಿರುವ 'ಜ್ಞಾನ'ವನ್ನು 'ಬಳಸಿ' ನಮ್ಮದೇ ಆದ ಮಾದರಿಗಳನ್ನು ರಚಿಸುವ ನೆಲೆಯನ್ನು ಆಯ್ಕೆ ಮಾಡಿಕೊಳ್ಳಬೇಕೆಂಬ ವಾದವನ್ನು ಮಂಡಿಸಲಾಗಿದೆ; ಹಾಗೂ ಸಾಕಷ್ಟು ವಲಯಗಳಲ್ಲಿ ಈ ಬಗ್ಗೆ ಪ್ರಯೋಗಗಳು ನಡೆದಿವೆ. ಫಲಿತಾಂಶಗಳನ್ನು ಅಳವಡಿಸಿಕೊಳ್ಳುವುದೂ ಸಾಧ್ಯವಾಗಿದೆ. ಆದರೆ ಈ ಸಮಸ್ಯೆಗೆ ಇನ್ನೊಂದು ಮುಖವಿರುವುದೂ ಸಾಧ್ಯ ಅದನ್ನು ನಾವೀಗ ಗಮನಿಸಬೇಕಾಗಿದೆ.

ಭಾರತೀಯವೆಂದು ಕರೆಯಬಹುದಾದ ತಂತ್ರಜ್ಞಾನಕ್ಕೆ ಇನ್ನೂ ಮಧ್ಯಯುಗದ ಲಕ್ಷಣಗಳಿವೆ. ಇಲ್ಲಿಯ ಕುಶಲಕರ್ಮಿಯೊಬ್ಬ ತನ್ನ ಕೌಶಲ್ಯವನ್ನೂ ಉತ್ಪಾದನೆಯಲ್ಲಿ ಮಾತ್ರ ಪ್ರಕಟಿಸಬಲ್ಲ. ಉತ್ಪಾದನೆಯ ಹೊರತಾಗಿ ಕೌಶಲ್ಯವನ್ನು ಕೇವಲ ಜ್ಞಾನವನ್ನಾಗಿ ಪರಿವರ್ತಿಸುವುದು ಆಗದು. ಎತ್ತಿನ ಬಂಡಿಯ ಉದಾಹರಣೆ ನೋಡೋಣ. ಚಕ್ರ, ಅದರ ಗುಂಬ, ಅರೆ, ಪಟ್ಟೆ, ಗಾಡಿಯ ದೂರಿ, ಮೂಕಿ ಮುಂತಾದ ಭಾಗಗಳನ್ನು ಮಾಡುವವನೊಬ್ಬ ಅಂಥದೊಂದು ಗಾಡಿಯನ್ನು ತಯಾರಿಸುವಲ್ಲಿ ಮಾತ್ರ ತನಗಿರುವ ಜ್ಞಾನವನ್ನು ಪ್ರಕಟಿಸಬಲ್ಲ. ಅವನಿಂದ ಕಲಿಯುವಾತನೂ ಹೀಗೆಯೇ ಗಾಡಿಯೊಂದರ ತಯಾರಿಕೆಯಲ್ಲಿ ಭಾಗಿಯಾಗಿಯೇ ಕಲಿಯಬೇಕು. ಸಂಗೀತಗಾರನಿಂದ ರಾಗಗಳನ್ನು ಕಲಿಯುವವನು ಹೇಗೆ ಆ ರಾಗಗಳನ್ನು ಹಾಡಿದಾಗ ಕೇಳಿ ತಾನೂ ಅದನ್ನು ಮತ್ತೆ ಹಾಡಿ ಕಲಿಯುವನೋ ಹಾಗೆ ಕುಶಲಕರ್ಮಿಯ ಜ್ಞಾನದ ಬಳಕೆ ಹಾಗೂ ರವಾನೆಗಳು ಇರುತ್ತವೆ. ಅಲ್ಲದೆ ಈ ಕುಶಲಕರ್ಮಿಯ ಉತ್ಪಾದನಾ ಕ್ರಿಯೆಯ ಉಪಕರಣಗಳು,

ಮೂಲವಸ್ತುಗಳು ಹಾಗೂ ತಯಾರಾದ ವಸ್ತುಗಳು ಆಯಾ ಪ್ರದೇಶದ ಸಾಧ್ಯತೆ ಮತ್ತು ಅವಶ್ಯಕತೆಗಳನ್ನು ಅವಲಂಬಿಸಿ ರೂಪಗೊಂಡಿರುತ್ತವೆ. ಈ ಎಲ್ಲ ಸಂಗತಿಗಳೂ ಹೊಸವೇನಲ್ಲ; ಆದರೆ ನಮ್ಮ ಚರ್ಚೆಗೆ ಅವಶ್ಯಕ.

ಇಂಥದೊಂದು ಪರಿಸ್ಥಿತಿಯಲ್ಲಿ ಈ 'ಭಾರತೀಯ ತಂತ್ರಜ್ಞಾನ'ದ ಬಳಕೆಯನ್ನು ಕುರಿತ ಚಿಂತನೆಗಳು ಪ್ರವೇಶಿಸುತ್ತವೆ ಎನ್ನೋಣ. ಆಗೇನಾಗುತ್ತದೆ? ಉತ್ಪಾದನಾ ರಹಿತವಾದ ಶುದ್ಧತಂತ್ರಜ್ಞಾನವೊಂದನ್ನು ಮೂಲ ಮಾದರಿಗಳಿಂದ ಗ್ರಹಿಸಲು ತೊಡಗುತ್ತಾರೆ. ಇದರ ನೆರವಿನಿಂದ ವಸ್ತುವಿನ ಸ್ವರೂಪವನ್ನು ನಿಖರಗೊಳಿಸಿಕೊಳ್ಳಲು ಸಾಧ್ಯವಾಗುತ್ತದೆ. ಯಾವಾಗ ಮಾದರಿಯ ಸ್ವರೂಪ ನಿಖರಗೊಂಡಿತೋ ಆಗ ಭಾರಿ ಪ್ರಮಾಣದ ಯಾಂತ್ರೀಕೃತ ಹಾಗೂ ಕೇಂದ್ರೀಕೃತ ಉತ್ಪಾದನೆಗೆ ನೆರವಾದಂತೆ. ಈ ಮೂಲಕ ಬಂಡವಾಳಶಾಹಿಗೆ ಬಾಗಿಲು ತೆರೆದಿಡುವುದು ಕೂಡ ನಡೆಯುತ್ತದೆ, ಭಾರತದಲ್ಲೇ ಕಳೆದ 100–125 ವರ್ಷಗಳಿಂದ ಇಂಥ ಹಲವು ಪ್ರಸಂಗಗಳು ನಡೆದಿವೆ. 'ಔದ್ಯಮೀಕರಣ'ವೆಂಬ ಪಾರಿಭಾಷಿಕ ಪದವನ್ನು ಬಳಸಿ 'ಮನುಷ್ಯನ ಕೌಶಲ್ಯಕ್ಕೆ ಒದಗಿದ ಆಘಾತ'ವನ್ನು ವರ್ಣಿಸಲಾಗಿದೆ. ಚರ್ಮ ಹದ ಮಾಡುವುದು ಹಾಗೂ ನೂಲಿನಿಂದ ಬಟ್ಟೆ ನೇಯುವುದು ಇವೆರಡು ಕೌಶಲ್ಯಗಳನ್ನೇ ಗಮನಿಸೋಣ. ಯಾಂತ್ರೀಕೃತ ಉತ್ಪಾದನೆಯ ಬೆಳವಣಿಗೆಯೊಡನೆ ಇನ್ನೂ ಈ ಕುಶಲಿಗಳು ಈ ನಾಡಿನಲ್ಲಿ ಜೀವನದ ಹೋರಾಟವನ್ನು ಮುಂದುವರಿಸಿದ್ದಾರೆ. ಇಲ್ಲಿ ಪಾಶ್ಚಾತ್ಯ ತಂತ್ರಜ್ಞಾನ ಮತ್ತು ಭಾರತೀಯ ಮೂಲವಸ್ತುಗಳ ಸಂಯೋಗವನ್ನು ಕಾಣುತ್ತೇವೆ. ಈ ಪ್ರಸಂಗವನ್ನು ಕೇವಲ ನಿದರ್ಶನವನ್ನಾಗಿ ಮಾತ್ರ ಹೇಳಲಾಯಿತು. ಇನ್ನು ಈಗ ಹೇಳಲಾಗುತ್ತಿರುವ ಭಾರತೀಯ ತಂತ್ರಜ್ಞಾನದ ವಿಚಾರಕ್ಕೆ ಬರುವುದಾದರೆ ಒಂದು ಉದಾಹರಣೆಯು ಅವಶ್ಯಕವಾಗುತ್ತದೆ.

ಈ ಮೊದಲೇ ಹೇಳಿದ ಎತ್ತಿನ ಗಾಡಿಯನ್ನೇ ನೋಡಿ: ಒಂದು ಅಂದಾಜಿನಂತೆ ರೇಲುವೆಯನ್ನು ಬಿಟ್ಟರೆ ಭಾರತದಲ್ಲಿ ಅತ್ಯಂತ ಹೆಚ್ಚು ಬಂಡವಾಳವನ್ನು ಹೂಡಲಾಗಿರುವ ಕೈಗಾರಿಕೆ ಎಂದರೆ ಗಾಡಿ ತಯಾರಿಕೆಯ ಉದ್ಯಮ. ಆದರೆ ಇದು ಗೃಹ ಕೈಗಾರಿಕೆ: ವಿಕೇಂದ್ರೀಕೃತ ಹಾಗೂ ಇಡೀ ಬಂಡವಾಳ ಏಕಸ್ವಾಮ್ಯದ್ದಲ್ಲ. ಅಲ್ಲದೆ ಉತ್ಪಾದಕನೇ ಬಂಡವಾಳ ಹೂಡಿದವನೂ ಆಗಿದ್ದಾನೆ. ಈ ಎತ್ತಿನ ಗಾಡಿಯು ನಿಮ್ಮ ಸರಕು ಸಾಗಾಣಿಕೆ ಹಾಗೂ ಸಂಚಾರ ಸಂವಹನದಲ್ಲಿ ಮಹತ್ವದ ಪಾತ್ರ ವಹಿಸುತ್ತಿರುವುದನ್ನು ಗುರುತಿಸಿ ಶತಮಾನಗಳಷ್ಟು ಹಳೆಯದಾದ 'ಭಾರತೀಯ ತಂತ್ರಜ್ಞಾನವನ್ನು' ಉಪಯುಕ್ತವಾಗಿ ಬಳಸಲು ಕಳೆದ ಹತ್ತು ವರ್ಷಗಳಲ್ಲಿ ಯೋಜಿಸಲಾಗಿದೆ. ಹಲವಾರು ಹಂತಗಳ ಈ ಯೋಜನೆಯಲ್ಲಿ ವಿಜ್ಞಾನಿಗಳು, ತಂತ್ರಜ್ಞರು, ಸಮಾಜ ವಿಜ್ಞಾನಿಗಳು, ಪ್ರವೃತ್ತರಾದರು. ಯೋಗ್ಯವೆನಿಸಿದ ಮಾದರಿಗಳನ್ನು ರೂಪಿಸಲು ಕರೆಕೊಡಲಾಯಿತು. 'ಸುಧಾರಿತ ಮಾದರಿ'ಗಳನ್ನು ಸಿದ್ಧ ಪಡಿಸಲಾಯಿತು. ಎಂದರೆ ಎತ್ತಿನ ಗಾಡಿಯ 'ಶುದ್ಧ ತಂತ್ರಜ್ಞಾನ'ವನ್ನು ರೂಪಿಸಲು ಯತ್ನಿಸಿದರು. ಇಂಥ ಮಾದರಿಗಳ ಬಗ್ಗೆ ಪ್ರಚಾರ ಮಾಧ್ಯಮ, ಸರಕಾರಿ ಪ್ರಸಾರ ಮಾಧ್ಯಮ, ಆರ್ಥಿಕ ವ್ಯವಸ್ಥೆ ಎಲ್ಲವೂ ಪ್ರೋತ್ಸಾಹದಾಯಕ ವಾತಾವರಣ ನಿರ್ಮಿಸಿದವು. ನಿಖರಗೊಳಿಸಲಾದ ಈ ಗಾಡಿಯ ಮಾದರಿಗಳನ್ನು ಅವಲಂಬಿಸಿ ಭಾರಿ ಪ್ರಮಾಣದ ಯಾಂತ್ರಿಕೃತ ಉತ್ಪಾದನೆ ಈಗ ಸಾಧ್ಯ. ನಾಡಿನ ಉದ್ದಗಲಕ್ಕೂ ಹರಡಿ ಹೋಗಿದ್ದ ಈ ಗೃಹ ಕೈಗಾರಿಕೆಯಲ್ಲಿ ತೊಡಗಿದ್ದ ಬಂಡವಾಳ, ಮಾನವಶಕ್ತಿ, ಕೌಶಲ್ಯ ಇವೆಲ್ಲವುಗಳ ಗತಿ ಏನಾಗುತ್ತದೆ ಎಂಬುದೇ ನಮ್ಮ ಸಮಸ್ಯೆ. ಪ್ರಗತಿಯ ದಾರಿಯಲ್ಲಿ ಇವೆಲ್ಲವೂ ಅನಿವಾರ್ಯವೆಂದು ವಾದಿಸುವುದೂ ಸಾಧ್ಯ; ಹಾಗೂ

ತಾರ್ಕಿತವಾಗಿ ಇದನ್ನು ಸಮರ್ಥಿಸಲೂಬಹುದು. ಆದರೆ ಭಾರತೀಯ ತಂತ್ರಜ್ಞಾನದ ಬಳಕೆಯ ಹೆಸರಿನಲ್ಲಿ ಕುಶಲಕರ್ಮಿಗಳ ಅವನತಿಯ ಪ್ರಶ್ನೆ ಮಾನವೀಯ ನೆಲೆಯಿಂದ ಹುಟ್ಟಿದ್ದು. ಅಲ್ಲದೆ ಇತಿಹಾಸವೇ ತಿಳಿಸುವಂತೆ ಹೀಗೆ ಯಾಂತ್ರೀಕೃತಗೊಂಡ ಉತ್ಪಾದನಾ ವ್ಯವಸ್ಥೆಯ ಎದುರು ಈ ಕುಶಲಕರ್ಮಿಗಳು ತಮ್ಮ ಬವಣೆ ತುಂಬಿದ ಹೋರಾಟವನ್ನು ನಮ್ಮ ನಾಡಿನಲ್ಲಿ ಮುಂದುವರಿಸುವುದು ಅನಿವಾರ್ಯವಾಗುತ್ತದೆ. ಏಕೆಂದರೆ ಈ ಕೇಂದ್ರೀಕೃತ ವ್ಯವಸ್ಥೆ ಬೇಡಿಕೆಗಳನ್ನೆಲ್ಲಾ ಪೂರೈಸಲಾರದು. ಹಾಗೂ ಪ್ರಾದೇಶಿಕ ಅವಶ್ಯಕತೆಗಳನ್ನು ಪೂರ್ಣವಾಗಿ ನಿರ್ವಹಿಸಲಾರದು. ಕೆಲವು ತಲೆಮಾರುಗಳವರೆಗಾದರೂ ಗಾಡಿ ಮಾಡುವ ವ್ಯಕ್ತಿ ಹಳ್ಳಿಗಳಲ್ಲಿ ತನ್ನ ಉದ್ಯಮದ ಅವನತಿಯ ಕ್ಷಣಗಳಿಗೆ ಸಾಕ್ಷಿಯಾಗುತ್ತಾನೆ. ಇದು ಸಮಸ್ಯೆಯಲ್ಲವೆ?

ಇಡೀ ವಾದ ಹಿನ್ನೆಡೆಯ, ಯಥಾಸ್ಥಿತಿವಾದದ ರಂಗುಗಳಿಂದ ತುಂಬಿದಂತೆ ಅನ್ನಿಸುವುದು ಸಹಜ. ಏಕೆಂದರೆ ಚಿಂತಿಸಲು ಶಕ್ತರಾದ ನಾವು ಎಷ್ಟರ ಮಟ್ಟಿಗೆ ವಸ್ತು ಮತ್ತು ವಸ್ತುವನ್ನು ಕುರಿತು ಜ್ಞಾನದ ವಿಘಟನೆಗೆ ಒಗ್ಗಿ ಹೋಗಿದ್ದೇವೆ ಎಂದರೆ ಅವೆರಡರ ಸಮ್ಮಿಲತದಲ್ಲಿರುವ ಮಾನವೀಯ ಘನತೆ ನಮಗೆ ಕೇವಲ ಭ್ರಮೆ ಎಂದು ತೋರುತ್ತದೆ. ಹಾಗಿದ್ದಲ್ಲಿ ಇದಕ್ಕೆ ಉತ್ತರವಿಲ್ಲವೇ? ಹಳಹಳಿಸುವಿಕೆಯ ದಾಟಿಯಲ್ಲಿ ಮಾತನಾಡುವುದು ಬಿಟ್ಟರೆ ಮತ್ತೇನು ಸಾಧ್ಯವಿಲ್ಲವೆ? ಇನ್ನೂ ಒಂದು ವಾದದ ಪ್ರಕಾರ ಹೀಗೆ ಭಾರತೀಯ ತಂತ್ರಜ್ಞಾನ ವ್ಯಕ್ತಿಯ ಕೌಶಲ್ಯದ ಅವಿಷ್ಕಾರದಲ್ಲಿ ಉಳಿದದ್ದು. ಕಾರಣವಾಗಿ ಶ್ರೇಣಿಕೃತವಾದ ಜಾತಿಗಳಿಂದ ತುಂಬಿದ ಸಮಾಜ ಸೃಷ್ಟಿಯಾಯಿತು. ಈ ವಾದವನ್ನು ವಿವರಿಸುವುದಾಗಲೀ, ಚರ್ಚಿಸುವುದಾಗಲೀ ಇಲ್ಲಿ ಅಸಾಧ್ಯ. ಆದರೆ ಶ್ರೇಣಿಕೃತ ಸಮಾಜವು ಕೌಶಲ್ಯವಿದ್ದೂ ಉತ್ಪಾದನಾ ವ್ಯವಸ್ಥೆಯ ಮೇಲೆ ಹಿಡಿತವಿಲ್ಲದುದರಿಂದ ಹಾಗೂ ಪರ್ಯಾಯವಾಗಿ ಕೌಶಲ್ಯವಿಲ್ಲದಿದ್ದರೂ ಉತ್ಪಾದನಾ ವ್ಯವಸ್ಥೆಯ ಮೇಲೆ ಹಿಡಿತವಿದ್ದುದರಿಂದ ಉಂಟಾದುದೆಂದು ನಾವು ಈಗಲೂ ಕಾಣಬಹುದಾಗಿದೆ. ಅಂದರೆ ಮೇಲೆ ವಿವರಿಸಿದ ವಸ್ತು ಮತ್ತು ವಸ್ತುವನ್ನು ಕುರಿತು ಜ್ಞಾನದ ವಿಘಡನೆಯ ಪರಿಣಾಮ ನಮ್ಮನ್ನು ಎತ್ತ ಒಯ್ಯಬಹುದೆಂಬುದನ್ನು ಊಹಿಸಬಹುದಾಗಿದೆ. ಕೇಂದ್ರೀಕೃತ ಹಾಗೂ ಯಾಂತ್ರೀಕೃತ ಉತ್ಪಾದನಾ ಕ್ರಮಗಳು ಕುಶಲಿಗಳ ಉದ್ಯೋಗ ಕುಸಿದು ಅವರನ್ನು ಪರಾವಲಂಬಿಗಳನ್ನಾಗಿ ಮಾಡುವುದೇ ಅಲ್ಲದೆ ಉತ್ಪಾದನಾ ವ್ಯವಸ್ಥೆಯಲ್ಲಿ ತಬ್ಬಲಿತನವನ್ನು ಅನುಭವಿಸುವಂತೆ ಮಾಡುತ್ತವೆ.

ನಾನಿಲ್ಲಿ ವಿವರಿಸಿದ ಸಂಗತಿಗಳು ಅಪೂರ್ವವಾದವುಗಳಲ್ಲ. ಆದರೆ ಪರ್ಯಾಯ ಜೀವನ ಯೋಜನೆಯನ್ನು ಚಿಂತಿಸುವ ಮೊದಲು ಆಯ್ದ ಮಾದರಿಯ ಪರಿಣಾಮಗಳನ್ನು ಮತ್ತೊಮ್ಮೆ ಗ್ರಹಿಸುವುದು ಅವಶ್ಯವೆಂದುಕೊಂಡು ಹೇಳಿದ್ದೇನೆ. ವಾದಕ್ಕೊಂದು ಭಿತ್ತಿ ನಿರ್ಮಿಸುವುದಷ್ಟೇ ಈ ಟಿಪ್ಪಣಿಯ ಮುಖ್ಯ ಉದ್ದೇಶ.

# ಲೋಹಿಯಾ ಚಿಂತನೆ : ಒಂದು ಟಿಪ್ಪಣಿ

ಕನ್ನಡ ಚಿಂತನೆಯನ್ನು ಒಂದು ಹಂತದಲ್ಲಿ ಹಿಡಿದಿಟ್ಟಿದ್ದ ಕಟ್ಟಾ ಮಾರ್ಕ್ಸ್‌ವಾದಿ ವಿಚಾರಗಳು, ಬರಹಗಾರರನ್ನು ಯಾವ ಇಕ್ಕಟ್ಟಿಗೆ ತಳ್ಳಬಹುದೆಂಬುದನ್ನು ಅರಿತು ಆತಂಕದಲ್ಲಿದ್ದ ಕನ್ನಡ ಸಾಹಿತ್ಯ ಲೋಕಕ್ಕೆ ಲೋಹಿಯಾ ಚಿಂತನೆಗಳು ಬಿಡುಗಡೆಯ ಹಾದಿಯನ್ನು ತೋರಿಸಿದಂತೆ ಈಗ ಅನಸುತ್ತಿದೆ. ಲೋಹಿಯಾ ಹೇಳಿದ ಸಮಾಜವಾದಿ ಚಿಂತನೆಗಳಲ್ಲಿ ಬರಹಗಾರರು ಕಲಾವಿದರು ಸಿದ್ಧಾಂತದ ಕುರುಡು ಅನುಯಾಯಿಗಳಾಗಿ ಇರಬೇಕಿಲ್ಲ ಎನ್ನುವ ಅರಿವು ನಮ್ಮ ಹಲವು ಬರಹಗಾರರಿಗೆ ಹೊಸ ಹಾದಿ ದೊರೆತಂತಾಯ್ತು. ಅಲ್ಲದೆ ಕರ್ನಾಟಕದ ರಾಜಕಾರಣದಲ್ಲಿ ಮತ್ತು ಸಾಮಾಜಿಕ ಬೆಳವಣಿಗೆಯ ವಿನ್ಯಾಸದಲ್ಲಿ ಆ ಹೊತ್ತಿಗೆ ತಲೆ ಎತ್ತ ತೊಡಗಿದ್ದ, ನೆಲೆ ಕಂಡುಕೊಳ್ಳ ತೊಡಗಿದ್ದ ಅವೈದಿಕ ಚಿಂತನೆಗಳನ್ನು ಒಂದು ಚೌಕಟ್ಟಿಗೆ ತಂದುಕೊಳ್ಳಲು ಲೋಹಿಯಾ ವಿಚಾರಗಳು ನೆರವಿಗೆ ಬಂದವೆಂದು ತೋರುತ್ತದೆ.

1975ರ ತುರ್ತು ಪರಿಸ್ಥಿತಿಯ ವಾತಾವರಣ ಕಟ್ಟಿಕೊಳ್ಳುವ ಹೊತ್ತಿಗೆ ಕರ್ನಾಟಕದಲ್ಲಿ ಏನೆಲ್ಲ ಬದಲಾವಣೆಗಳು ನಡೆದುಹೋಗಿದ್ದವೆಂಬುದನ್ನು ಈಗ ನೋಡಬೇಕಿದೆ. ಭೂ ಹಿಡುವಳಿಗಳ ಸಮಸ್ಯೆ, ಮೀಸಲಾತಿಯ ಸಮಸ್ಯೆ, ಹಿಂದುಳಿದ ವರ್ಗಗಳಿಗೆ ದೊರೆಯ ಬೇಕಾದ ಪ್ರಾತಿನಿಧ್ಯದ ಪ್ರಶ್ನೆ, ಶಿಕ್ಷಣ ವಲಯದ ವಿಸ್ತರಣೆ ಇವೆಲ್ಲವೂ ಇಡಿಯಾಗಿ ಲೋಹಿಯ ವಿಚಾರಗಳನ್ನು ಕರ್ನಾಟಕದಲ್ಲಿ ಮತ್ತೊಮ್ಮೆ ಪರಿಶಿಲಿಸಲು ಬೇಕಾದ ಅವಕಾಶಗಳನ್ನು 1975ರ ಹೊತ್ತಿಗೆ ತೆರೆದಿಟ್ಟಿದ್ದವು. ಇದರ ಅರ್ಥ ಲೋಹಿಯಾ ಚಿಂತನೆಗಳು ಆ ವೇಳೆಗೆ ಇಲ್ಲಿ ನಿರುಪಯುಕ್ತವಾಗಿದ್ದವು ಎಂದಲ್ಲ.ಆದರೆ ಹೊಸ ಪ್ರಶ್ನೆಗಳು ಹೊಸ ಉತ್ತರಗಳನ್ನು ಬಯಸುತ್ತವೆ ಎಂಬುದನ್ನು ಮರೆಯಬಾರದಲ್ಲ.

ಲೋಹಿಯಾ ಕೆಂಪು ಪುಸ್ತಕ ಕನ್ನಡದಲ್ಲಿ ಪ್ರಕಟಗೊಂಡ ಮೇಲೆಯೂ ಹೊಸ ತಲೆಮಾರಿನ ಎಳೆಯರು ಲೋಹಿಯಾ ಚಿಂತನೆಗಳ ಸೆಳವಿಗೆ ಸಿಗುವುದು ಕಡಿಮೆಯಾದುದೇಕೆ ಎನ್ನುವುದನ್ನು ಕುರಿತು ಈಗ ಯೋಚಿಸಬೇಕಿದೆ. ಈ ಮಾತನ್ನು ಎಲ್ಲರೂ ಒಪ್ಪದೆಯೂ ಇರಬಹುದು. 1980ರ ಬಳಿಕ ಲಂಕೇಶ್ ಪತ್ರಿಕೆಯ ಮೂಲಕ ಬಳಸುದಾರಿಯಿಂದ ಲೋಹಿಯಾ ವಿಚಾರಗಳಿಗೆ ತೆರೆದುಕೊಂಡ ಹೊಸ ತಲೆಮಾರೊಂದು ಸಿದ್ಧಗೊಂಡಿತು ಎಂದು ವಾದಿಸಲೂ ಬಹುದು. ಆದರೆ ಈ ಹೊಸ ತಲೆಮಾರಿನ ರಾಜಕೀಯ ಚಿಂತನೆಗಳು ಅಧಿಕಾರ ಹಂಚಿಕೆಯ ನೆಲೆಗಳಲ್ಲಿ ಬೇರುಬಿಟ್ಟಷ್ಟು ಪ್ರಜಾಪ್ರಭುತ್ವದ

ನೆಲೆಗಟ್ಟನ್ನು ಲೋಹಿಯಾ ಮಂಡಿಸಿದ ರೀತಿಯಲ್ಲಿ ನೆಲೆಗೊಳಿಸುವ ಕಡೆಗೆ ಹೋಗಲಿಲ್ಲ ಎನ್ನುವುದನ್ನು ಕೂಡ ಮರೆಯಬಾರದು. ಇದೆಲ್ಲವೂ ಆಗಿ ಹೋದ ಕತೆಗಳು.

ಕಳೆದ ಶತಮಾನದ ಕೊನೆ ದಶಕದಿಂದ ಈಚೆಗೆ ಗಾಂಧಿಯಾಗಲೀ ಲೋಹಿಯಾ ಆಗಲೀ ಕನವರಿಕೆಗಳ ಹಂತವನ್ನು ದಾಟುತ್ತಿಲ್ಲ. ಮರಳಿ ಆ ಚಿಂತನೆಗಳ ಪ್ರಸ್ತುತತೆಯನ್ನು ನೆಲೆಗೊಳಿಸಲು ಆಗುತ್ತಿಲ್ಲ. ಇದಕ್ಕೆ ನಮ್ಮ ಪ್ರತಿಭಟನೆಯ ರಾಜಕಾರಣವೂ ಕಾರಣವಾಗಿದೆ. ನಾವೀಗ ಭಿನ್ನಾಭಿಪ್ರಾಯಗಳನ್ನು ಹೊಂದುವುದರಲ್ಲಿ ತೋರುವಷ್ಟು ಆಸಕ್ತಿಯನ್ನು ತಾತ್ವಿಕ ಚರ್ಚೆಗಳ ವಿನ್ಯಾಸವನ್ನು ರೂಪಿಸುವುದರಲ್ಲಿ ತೋರುತ್ತಿಲ್ಲ.ಹೀಗಾಗಿ ದೂರಗಾಮಿಯಾದ ಪರಿಣಾಮವನ್ನು ಬೀರಲು ಶಕ್ತವಾಗಿರುವ ಲೋಹಿಯಾ ಚಿಂತನೆಗಳನ್ನು ಕಾರ್ಯಕ್ರಮಗಳನ್ನಾಗಿ ರೂಪಿಸುವ ಕಡೆಗೆ ಹೆಚ್ಚು ಯತ್ನಗಳು ನಡೆಯುತ್ತಿಲ್ಲ.

ಯಾವ ಕಾರಣದಿಂದ ಲೋಹಿಯಾ ಮೊದಲು ಕನ್ನಡ ಬರಹಗಾರರಿಗೆ ಹೊಸ ದಿಕ್ಕನ್ನು ತೆರದು ತೋರಿಸಿದರೋ ಆ ಕಾರಣವೀಗ ನಮ್ಮ ಬರಹಗಾರರ ಮುಖ್ಯ ಕಾಳಜಿ ಆಗಿಯೇ ಇಲ್ಲ. ತಾತ್ವಿಕ ಚೌಕಟ್ಟುಗಳು ಎನ್ನುವುದನ್ನೇ ದೂರ ಒಗೆಯಲು ಮುಂದಾಗುತ್ತಿರುವ ಹೊಸ ತಲೆಮಾರಿನ ಬರಹಗಾರರಿಗೆ ಲೋಹಿಯಾ ಆಗಲೀ ಯಾರೇ ಆಗಲೀ ಕೇವಲ ಭಾಷಿಕ ಆಕರಗಳು ಮಾತ್ರ. ಇದೊಂದು ಹತಾಶೆಯ ಮಾತೆಂದು ತೋರಬಹುದು. ಆದರೆ ಹಾಗನ್ನಸುತ್ತಿರುವುದಂತೂ ದಿಟ.

# ವಿಜ್ಞಾನ ಮತ್ತು ಸ್ವಾತಂತ್ರ್ಯ

1949ರಲ್ಲಿ ಅಮೆರಿಕದ ವಿಜ್ಞಾನಿಗಳು ಮತ್ತು ಬುದ್ಧಿಜೀವಿಗಳು ವೈಜ್ಞಾನಿಕ ಕ್ಷೇತ್ರದಲ್ಲಿನ ಸ್ವಾತಂತ್ರ್ಯ ಕುರಿತು ತುಂಬಾ ಚಿಂತಿತರಾಗಿದ್ದರು. ಎಂದರೆ ದೊಡ್ಡ ಬಂಡವಾಳಗಾರರಿಂದ, ಯುದ್ಧ ಇಲಾಖೆಯಿಂದ ಅಥವಾ ಇಂಥವೆ ಮೂಲಗಳಿಂದ ಪೋಷಿತವಾದ ವಿಶ್ವವಿದ್ಯಾಲಯಗಳಿಂದ ಸಂಬಳ ಪಡೆಯುತ್ತಿದ್ದೂ ತಮಗೆ ಬೇಕೆನಿಸಿದ್ದನ್ನು ಮಾಡುವ ಸ್ವಾತಂತ್ರ್ಯವನ್ನು ಅವರು ಅಪೇಕ್ಷಿಸುತ್ತಿದ್ದರು. ಓಲಗೆದವನಿಗೆ ಕಾಸಂಕೊಟ್ಟು ತನಗೆ ಬೇಕೆಂದ ರಾಗ ನುಡಿಸು ಎಂದು ಕೇಳುವವರ ಸಮಾಜದಲ್ಲಿ ಜೀವಿಸುತ್ತಿದ್ದ ಈ ಜನರು ವಿಜ್ಞಾನವು ಈಗ "ಮುಕ್ತ"ವಾಗಿ ಉಳಿದಿಲ್ಲವೆಂಬುದನ್ನು ತಿಳಿದುಕೊಂಡಿರಲಿಲ್ಲ. ಹೊಸ ಬಗೆಯ ಯಂತ್ರೋಪಕರಣಗಳ ಉತ್ಪಾದನೆಯು ಇನ್ನೂ ತಾಂತ್ರಿಕ ಅಭಿವೃದ್ಧಿಯ ಕೆಳಹಂತದಲ್ಲೇ ಇದ್ದಾಗ, ಅತ್ಯಂತ ಮೂಲಭೂತ ಸಂಶೋದನೆಗಳನ್ನು ಮಾಡಿದ ವಿಜ್ಞಾನಿಯನ್ನೂ ಕೂಡ ತಂತಿ, ರಸಾಯನಿಕ ವಸ್ತು ಮುಂತಾದವುಗಳೊಡನೆ ಚಿನ್ನಾಟವಾಡುವ, ಹಲವು ಕಡೆಗಳಲ್ಲಿ ಪಳೆಯುಳಿಕೆಗಳನ್ನು ಸಂಗ್ರಹಿಸುವ ನಿರಪಾಯಕಾರಿ ವ್ಯಕ್ತಿಯೆಂದು ತಿಳಿದಿದ್ದ ಆ ಕಾಲದಲ್ಲಿ ವಿಜ್ಞಾನ ಮುಕ್ತವಾಗಿತ್ತು. ವಿಜ್ಞಾನಿ ಈಗ ಇನ್ನೂ ಹೆಚ್ಚು ಸಂಘಟಿತವಾದ, ಬಲವಾಗಿ ಶೋಷಿತವಾದ ಸಾಮಾಜಿಕ ವ್ಯವಸ್ಥೆಯ ಭಾಗವಾಗಿದ್ದಾನೆ. ಫ್ಯಾರಡೆಯ ಹಾಗೆ ಕಷ್ಟಪಡಬೇಕಾಗಿಲ್ಲ. ಸುಖವಾಗಿ ಈತ ಜೀವಿಸಬಲ್ಲ. ಆದರೆ ಅದೇ ವೇಳೆಗೆ ಉತ್ಪಾದನೆಯ ಹಕ್ಕನ್ನು ತಂದು ಕೊಡುವ ಇಲ್ಲವೇ ಜಾಹೀರಾತಿನ ಬೆಲೆಯುನ್ನು (ಮೌಲ್ಯವನ್ನು) ಪಡೆದಿರುವ ವಸ್ತುಗಳನ್ನೇ ಒಂದೇ ಸಮನೆ ತಯಾರಿಸಬೇಕಾಗಿದೆ; ಜತೆಗೆ ಅಪಾಯಕಾರಿ ಎನಿಸುವ ಸಾಮಾಜಿಕ ಹಾಗೂ ತಾತ್ವಿಕ ವಿಚಾರಗಳಿಂದ ದೂರವಿರಬೇಕಾಗಿದೆ. ಆದ್ದರಿಂದ ಮೇಲೆ ಹೇಳಿದಂತೆ ವಿಜ್ಞಾನಿಗಳು ಈ ಯೋಜಿತ ಸಮಾಜದಲ್ಲಿ ವಿಜ್ಞಾನಿಗೆ ಸ್ವಾತಂತ್ರ್ಯವಿಲ್ಲವೆಂದು ಕೊರಗಿದರೂ ಪರೋಕ್ಷವಾಗಿ ಅಥವಾ ಅವರಿಗೇ ತಿಳಿಯದಂತೆ ಸುಪ್ತವಾಗಿ ಅವರ ಕೊರಗು ಬೇರೆಯೇ ಆಗಿದೆ. ಇದು ಬೆನ್ನಲ್ಲಿ ಕಣ್ಣಿಟ್ಟು ತರದೂದು ನಡೆಸಿ ಹಿಂಸೆಗೆ ಒಳಪಡಿಸುವ ಕಾಲದಲ್ಲಿ ಮೋಸಮಾಡುವಾಗ ದರೋಡೆ ಮಾಡುವಾಗ ಸಿಕ್ಕಿ ಬೀಳುವುದಕ್ಕಿಂತಲೂ 'ಪ್ರಗತಿಪರ' ಎಂದು ಕರೆಸಿಕೊಳ್ಳುವುದು ಹೆಚ್ಚು ಅಪಾಯಕಾರಿಯಾಗಿರುವ ಈ ಕಾಲದಲ್ಲಿ ತಮ್ಮ ಸ್ವಂತ ಸ್ವಾತಂತ್ರ್ಯಕ್ಕೆ ಬಂದೊದಗಿರುವ ಗತಿಯ ಬಗೆಗೆ, ಅವರ ನಿಜವಾದ ಕೊರಗಿತ್ತು.

ಈ ಸಂಗತಿಗಳನ್ನೆಲ್ಲಾ ಹೇಳಿದ್ದು ಏಕೆಂದರೆ ಇವು ಮುಖ್ಯ ವಿಷಯದಿಂದ ನಮ್ಮನ್ನು ದೂರಕ್ಕೆ ಒಯ್ಯಬಲ್ಲವು. ವಿಜ್ಞಾನ ಮತ್ತು ಸ್ವಾತಂತ್ರ್ಯಗಳ ನಡುವೆ ಅತ್ಯಂತ ನಿಕಟವಾದ ಸಂಬಂಧವಿದೆ. ವಿಜ್ಞಾನಿಯ ವ್ಯಕ್ತಿ ಸ್ವಾತಂತ್ರ್ಯವೆಂಬುದು ಈ ಮುಖ್ಯ

ಸಂಬಂಧದ ಒಂದು ಅನುಮೇಯ ಮಾತ್ರವಾಗಿದೆ. ಸ್ವಾತಂತ್ರ್ಯವೆಂದರೆ ಅವಶ್ಯಕತೆಯನ್ನು ಕಂಡುಕೊಳ್ಳುವುದು. ವಿಜ್ಞಾನವೆಂದರೆ ಅವಶ್ಯಕತೆಯನ್ನು ಪೂರೈಸಿಕೊಳ್ಳುವುದು. ಮೊದಲ ಮಾತು ಸ್ವಾತಂತ್ರ್ಯವನ್ನು ಕುರಿತ ಮಾರ್ಕ್ಸ್‌ವಾದದ ವ್ಯಾಖ್ಯಾನ. ಅದಕ್ಕೆ ನಾನು ವಿಜ್ಞಾನವನ್ನು ಕುರಿತ ನನ್ನ ವ್ಯಾಖ್ಯಾನವನ್ನು ಸೇರಿಸಿದ್ದೇನೆ. ಇದರ ಪರಿಣಾಮ ವೇನೆಂಬುದನ್ನು ನೋಡೋಣ.

ನಿದರ್ಶನವಾಗಿ ಹಾರುವಿಕೆಯಂಥ ಸರಳ ವಿಚಾರವನ್ನು ತೆಗೆದುಕೊಳ್ಳೋಣ. ಭಾರತದಲ್ಲಿ ನಮ್ಮ ಪೂರ್ವಿಕರು ಯಾವುದೋ ಯೋಗದ ರಹಸ್ಯವನ್ನು ಸಂಪಾದಿಸಿಕೊಂಡು ಒಂದು ಗಳಿಗೆಯಲ್ಲಿ ನೂರಾರು ಮೈಲಿಗಳನ್ನು ಹಾರಿಹೋಗ ಬಲ್ಲವರಾಗಿದ್ದರೆಂದು ಹೇಳಲಾಗಿದೆ. ನಾನದನ್ನು ನಂಬುವುದಿಲ್ಲ. ಇದು ಕಲ್ಪನೆಯ ಹಾರಟವೇ ಹೊರತು ದೇಹದ್ದಲ್ಲ. ಹಕ್ಕಿಯನ್ನು ಅನಂಕರಿಸುವ ಯತ್ನಗಳಿಗೆ ಸಾಕಷ್ಟು ಯಶ ಸಿಗಲಿಲ್ಲವಾದರೂ ಗಾಳಿಹಡಗು(gliders)ಗಳು ಹೆಚ್ಚು ಯಶಸ್ವಿಯಾಗಿದ್ದವು. ಆ ನಂತರ ಬಂದದ್ದು ಎಲ್ಲಕ್ಕಿಂತ ಮೂಲಭೂತ ಸಮಸ್ಯೆಗಳು. ಹಾರಾಡಲು ಬೇಕಾದ ಶಕ್ತಿಯ ಮೂಲ, ಮುಂಭಾಗ ಗಿರಗಿಟ್ಟೆಯನ್ನು ತಿರುಗಿಸುವ ವಿಧಾನ, (Aerodynamics) ವಾಯುಚಲನೆಯ ನಿಯಮ ಮುಂತಾದ ವೈಜ್ಞಾನಿಕ ಮತ್ತು ಪ್ರಯೋಗಸಿದ್ಧ ಸಂಗತಿಗಳು ಮುಖ್ಯವಾದವು. ಮಾನವ ಜನಾಂಗವು ಹಾರುವ ಯಂತ್ರಗಳನ್ನು ಆವಿಷ್ಕಾರಗೊಳಿಸುವವರೆಗೆ ಹಾರುವ ಸ್ವಾತಂತ್ರ್ಯವನ್ನು ಪಡೆದಿರಲಿಲ್ಲ. ಇಂದು ಯಾವೊಬ್ಬನಾದರೂ ತನಗೆ ಸಾಧ್ಯವಿದ್ದರೆ ವಿಮಾನದಲ್ಲಿ ಕುಳಿತು, ಯೋಗದ ನೆರವಿಲ್ಲದೆ ಹಾರಬಲ್ಲ. 'ಸಾಧ್ಯವಿದ್ದರೆ' ಎಂದೆನಲ್ಲವೇ? ಎಂದರೆ ಸಮಾಜ ಮತ್ತು ಅದರೊಳಗಿನ ಆಸ್ತಿ ಸಂಬಂಧಗಳೆಲ್ಲವೂ ಒಳಗೊಂಡಿರುವುದರಿಂದ ಆತ ಸ್ವಂತ ವಿಮಾನವನ್ನು ಹೊಂದಿರಬೇಕು. ಇಲ್ಲವೇ ಅವನಿಗೆ ವಿಮಾನದಲ್ಲಿ ಪ್ರವೇಶಕೊಡಿಸುವವನೊಬ್ಬ ಇರಬೇಕು. ಕೊನೆಗೆ ಹೇಳಬೇಕೆಂದರೆ ಹಾರಬೇಕೆನ್ನುವ ಮನುಷ್ಯನಲ್ಲಿ ಹಣವಿದೆಯೋ ಇಲ್ಲವೋ ಎಂಬುದು ಮುಖ್ಯವಾಗುತ್ತದೆ; ಉತ್ಪಾದನೆಯ ಸಾಧನಗಳ ಮೇಲೆ ಅವಶ್ಯಕ ಹಿಡಿತವಿದೆಯೋ ಇಲ್ಲವೋ ಎನ್ನುವುದು ಮೂಲ ಪ್ರಶ್ನೆಯಾಗುತ್ತದೆ. ಒಟ್ಟಾರೆ ಆತ ಎರಡು ರೆಕ್ಕೆ ಕಟ್ಟಿಕೊಂಡು ಹಕ್ಕಿಯಂತೆ ಹಾರುವುದನ್ನೂ ಯಾರು ತಡೆಯಲಾರರು; ಯೋಗಿಯಾಗಿ ಮನಸ್ಸಿನ ಶಕ್ತಿಯ ಸಹಾಯದಿಂದ ವಾಯುಮಂಡಲದೊಳಗೆ ತೇಲುವುದನ್ನೂ ಕೂಡ ಯಾರು ಬೇಡವೆನ್ನಲಾರರು. ಆದರೆ ಇಂಥ ಸ್ವಾತಂತ್ರ್ಯಗಳು ಭ್ರಮಾತ್ಮಕ. ಅವಶ್ಯಕತೆ ಮನುಷ್ಯನನ್ನು ಹೆಚ್ಚು ಉಪಯುಕ್ತವಾದ ತಾಂತ್ರಿಕ ವಿಧಾನಗಳನ್ನು ಕಂಡುಕೊಳ್ಳಲು ಪ್ರೇರೇಪಿಸುತ್ತದೆ.

ಇನ್ನೂ ಸಾಮಾನ್ಯವಾದ ಉದಾಹರಣೆಯಾದ ಕಣ್ಣಿನ ದೃಷ್ಟಿಯನ್ನೇ ಕುರಿತು ನೋಡೋಣ. ಐನೂರು ವರ್ಷಗಳ ಹಿಂದೆ ಅತಿ ಹತ್ತಿರ ದೃಷ್ಟಿದೋಷ ಅಥವಾ ಅತಿ ದೂರ ದೃಷ್ಟಿದೋಷಗಳನ್ನು ಕುರುಡುತನದ ಬೇರೆ ಬಗೆಗಳೆಂದು ತಿಳಿಯಲಾಗುತ್ತಿತ್ತು. ಈ ದೋಷಗಳು ಇನ್ನಾವುದೋ ಲೋಕದ ಶಕ್ತಿಯ ಶಾಪವೆಂದೋ ಮುದಿವಯಸ್ಸಿನಲ್ಲಿ ಸಹಜವಾಗಿ ಅಡರುವ ಸ್ಥಿತಿಯೆಂದೋ ತಿಳಿಯಲಾಗುತ್ತಿತ್ತು. ಇಂಥ ಜನರಿಗಾಗಿ ದೃಷ್ಟಿಯನ್ನು ಸರಿಪಡಿಸಲು ಕನ್ನಡಕಗಳನ್ನು ಆವಿಷ್ಕಾರಗೊಳಿಸಬೇಕಾಯಿತು. ಇದರಿಂದ ದೃಷ್ಟಿಯನ್ನು

ಕುರಿತ ವೈಜ್ಞಾನಿಕ ವಿಚಾರ, ಕಣ್ಣಿನ ರಚನೆ, ಗಾಜಿನ ಸ್ವರೂಪ ಮತ್ತು ಅದರ ರಾಸಾಯನಿಕ ಗುಣ, ಮಸೂರ ತಯಾರಿಕೆಯ ತಂತ್ರ ಮುಂತಾದ ಎಷ್ಟೋ ಸಂಗತಿಗಳು ತಿಳುವಳಿಕೆಗೆ ಬಂದಿವೆ. ತಕ್ಕ ಕಾರ್ಖಾನೆಗಳು ಕಾರ್ಯಗಾರಗಳು ಬೆಳೆದಿವೆ. ಹೀಗಿದ್ದರೂ ಕನ್ನಡಕಗಳ ನೆರವಿನಿಂದ ಸರಿಪಡಿಸಬಹುದಾದ ದೃಷ್ಟಿದೋಷಗಳಿಂದ ಎಷ್ಟೋ ಜನರು ಹಿಂಸೆ ಪಡುತ್ತಿದ್ದಾರೆ. ಅವರು ಕನ್ನಡಕಗಳನ್ನು ಧರಿಸಲು ಕಾನೂನಿನ ಪ್ರಕಾರ ಸ್ವತಂತ್ರರಾಗಿದ್ದಾರೆ. ಆದರೆ ಹಣವಿಲ್ಲದ ಅವರ ಸ್ಥಿತಿಯು ಕನ್ನಡಕ ಬಳಸಲು ಅನುವು ಮಾಡಿಕೊಟ್ಟಿಲ್ಲ. ಭಾರತದಲ್ಲೇ ಅವಶ್ಯಕವಿದ್ದರೂ ಪಡೆಯಲಾಗದಿರುವ ಕನ್ನಡಕಗಳ ಸಂಖ್ಯೆ ಎಷ್ಟೋ ಲಕ್ಷಗಳನ್ನು ದಾಟಬಹುದಾಗಿದೆ.

ಅವಶ್ಯಕತೆಯನ್ನೂ ಗ್ರಹಿಸಿಕೊಳ್ಳುವುದಕ್ಕೆ ವೈಜ್ಞಾನಿಕ ಪ್ರಯೋಗಗಳು ನಡೆಯ ಬೇಕಾಗುತ್ತದೆ; ಜತೆಗೆ ಪ್ರಾಯೋಗಿಕ ಹಂತದಿಂದ ಬೇರ್ಪಡಿಸಲಾಗದ ತಾಂತ್ರಿಕ ಹಂತವೂ ಒಂದಿದೆ. ಕೊನೆಗೆ ಈ ತಾಂತ್ರಿಕ ಹಂತದ ಜತೆ ನಿಕಟ ಸಂಬಂಧ ಪಡೆದಿರುವ ಸಾಮಾಜಿಕ ರಚನೆಯೂ ಒಂದಿದೆ. ಈ ಸಾಮಾಜಿಕ ರಚನೆಯು ಸಾಮಾಜಿಕ ಅವಶ್ಯಕತೆಯನ್ನು ರೂಪಿಸುವ ಮೂಲಕ ಸ್ವಾತಂತ್ರ್ಯವನ್ನೂ ನಿಯಂತ್ರಿಸುತ್ತದೆ. ಈ ಸಾಮಾಜಿಕ ಅವಶ್ಯಕತೆ ಎಂಬುದು ಅನಾವಶ್ಯಕವೆಂದು ಹೇಳಿದರೂ ಜಾರಿಯಲ್ಲಂತೂ ಇದೆ.

ವಿಜ್ಞಾನವನ್ನು ಕುರಿತು ನಾನು ಹೇಳುವ ಕೆಲವು ನಿರ್ಣಯಗಳ ಬಗೆಗೆ ವಾದವಿವಾದಗಳೇನೂ ಇರಲಾರವು; ವಿಜ್ಞಾನಕ್ಕೆ ತಿಳಿದಿರುವುದು ಒಂದೇ ಪರೀಕ್ಷೆ; ತಾನು ತಿಳಿದದ್ದು ಸುಳ್ಳೋ ನಿಜವೋ, ಅದಕ್ಕೆ ವಸ್ತು ಜಗತ್ತಿನಲ್ಲಿ ಪುರಾವೆಗಳಿವೆಯೋ ಇಲ್ಲವೋ ಎಂಬ ಪರೀಕ್ಷೆ. ಪ್ರಾಯೋಗಿಕವಾಗಿ ಸಿದ್ಧವಾಗದೇ ಹೋದಲ್ಲಿ ವೈಜ್ಞಾನಿಕ ಫಲಿತಾಂಶವೆಂಬುದಕ್ಕೆ ಏನೇನೂ ಬೆಲೆಯಿಲ್ಲ. ವಿಜ್ಞಾನ ವಸ್ತುವಿನ ಲಕ್ಷಣಗಳನ್ನು ಕುರಿತು ನೇರವಾಗಿ ಪರೀಕ್ಷೆ ನಡೆಸುವುದರಿಂದಾಗಿ ಅದು ವಸ್ತು ಮೂಲವಾದಿ (Materialistic). ಯಾರೇ ಪ್ರಯೋಗ ನಡೆಸಲಿ ಆತನಿಗೂ ವೈಜ್ಞಾನಿಕ ಫಲಿತಾಂಶಗಳಿಗೂ ಯಾವ ವ್ಯಕ್ತಿಗತ ಸಂಬಂಧಗಳೂ ಇರುವುದಿಲ್ಲ. ಎಂದರೆ ಎಲ್ಲರ ಪ್ರಯೋಗಗಳಿಂದಲೂ ಅದೇ ಫಲಿತಾಂಶ ದೊರಕುತ್ತದೆ. ಕೊನೆಯದಾಗಿ ಕಾರ್ಯಕಾರಣ ಸಂಬಂಧಗಳನ್ನು ಅನ್ವೇಷಿಸುವಲ್ಲಿ ವಿಜ್ಞಾನವು ಒಂದೊಂದು ಹಂತದಲ್ಲಿ ನಿಂತು ತನ್ನ ಎಲ್ಲ ತಿಳುವಳಿಕೆಗಳನ್ನು ಸಂಚಯಿಸಿಕೊಂಡು ಮುಂದುವರೆಯುತ್ತದೆ; ವಿಜ್ಞಾನವೆಂದರೆ ವಿಜ್ಞಾನ ಚರಿತ್ರೆಯೇ ಆಗಿದೆ. ಪ್ರತಿಯೊಂದು ಪ್ರಮುಖ ವೈಜ್ಞಾನಿಕ ಸಂಶೋಧನೆಯನ್ನು ಮನುಷ್ಯನ ಜ್ಞಾನಕೋಶದೊಳಕ್ಕೆ ಸೇರಿಸಿಕೊಂಡು ಮುಂದಿನವರು ಬಳಸುವುದಕ್ಕೆಂದು ನೀಡಲಾಗುತ್ತದೆ. ಶಾಲೆಯ ಹುಡುಗರು ಗೆಲಿಲಿಯೋನ ಪ್ರಯೋಗಗಳನ್ನು ತಾವೇ ಮಾಡಬಲ್ಲರು, ಕಾಲೇಜಿನ ಮೊದಲ ವರ್ಷದ ವಿದ್ಯಾರ್ಥಿಗೆ ನ್ಯೂಟನ್ನನಿಗೆ ತಿಳಿದಿದ್ದುದಕ್ಕಿಂತ ಹೆಚ್ಚಿನ ಗಣಿತಜ್ಞಾನವಿರಬಹುದು. ಯುವ ವಿದ್ಯಾರ್ಥಿಗಳು ತಾವು ಕಲಿಯುವಾಗ ಆಧುನಿಕ ದೃಷ್ಟಿಕೋನಗಳಿಗೆ ತಕ್ಕಂತೆ ಅಳವಡಿಸಲಾದ ಮತ್ತು ಅನುಪಯುಕ್ತ ವಿವರಗಳನ್ನು ಕೈಬಿಟ್ಟ ಆಲೋಚನಾ ವಿಧಾನವೊಂದರ ಮೂಲಕವೇ ಜ್ಞಾನದ ಪರಿಚಯವನ್ನು ಪಡೆಯಬಹುದಾಗಿದೆ. ಆದರೆ ಅದಕ್ಕಾಗಿ ಅವರೇನೂ ಗೆಲಿಲಿಯೋನ

ಸಂವಾದಗಳನ್ನಾಗಲೀ ಪ್ರಿನ್ಸಿಪೀಯ(PRINCIPIA)ವನ್ನಾಗಲೀ ಓದಬೇಕಾಗಿಲ್ಲ. ಇಲ್ಲೇ ವಿಜ್ಞಾನವು ಮೂಲಭೂತವಾಗಿ ಕಲೆಗಳಿಂದ ಬೇರೆಯಾಗಿ ನಿಲ್ಲುತ್ತದೆ. ಚಿತ್ರಕಲೆಯನ್ನು ಗಮನಿಸಿ, ಆಧುನಿಕ ಚಿತ್ರಕಾರನೊಬ್ಬ ಅಲ್ಟಾಮಿರದ ಗುಹೆಗಳಲ್ಲಿರುವ ಇತಿಹಾಸಪೂರ್ವಕಾಲದ ಕಾಡುಕೋಣಗಳ ಚಿತ್ರವನ್ನು ಅಭ್ಯಾಸಮಾಡಬೇಕಿಲ್ಲ. ಕವಿಯಾದವನು ಕಾಳಿದಾಸನನ್ನು ಓದಿರಬೇಕಿಲ್ಲ. ಒಂದು ವೈಜ್ಞಾನಿಕ ಸಂಶೋಧನೆಯು ಅದರ ಮುಂದಿನ ಸಂಶೋಧನೆಯೊಳಗೆ ಸೇರಿಹೋಗುವ ಬಗೆಯಲ್ಲಿ ಕಲಾಕೃತಿಗಳು ಸಾಹಿತ್ಯಕೃತಿಗಳು ತಮ್ಮ ಮುಂದಿನ ಕಾಲದ ಕೃತಿಗಳೊಳಗೆ ಸೇರಿಹೋಗುವುದಿಲ್ಲವಾದ್ದರಿಂದ ನಾವು ಎಲ್ಲ ಕಾಲದ ಕಲಾಕೃತಿಗಳನ್ನು, ಸಾಹಿತ್ಯಕೃತಿಗಳನ್ನು ಮೆಚ್ಚಬಲ್ಲೆವು. ಸೌಂದರ್ಯಾತ್ಮಕ ದೃಷ್ಟಿಯಿಂದ ಕಲಾಕೃತಿಗಳಿಗೆ ಚಿರಂತನತೆ ಇದೆ. ಅವು ಅಳಿಯುವುದಿಲ್ಲ. ಆದರೆ ವೈಜ್ಞಾನಿಕ ಸಂಶೋಧನೆಯ ದಾಖಲೆಗಳಿಗೆ ಈ ಗುಣವಿಲ್ಲ. ಆದರೂ ಸೌಂದರ್ಯಾನುಭವವನ್ನು ನೀಡುವ ಪ್ರತಿಯೊಂದು ವಸ್ತುವಿಗೂ ಚಿರಂತನತೆ ಇರುತ್ತದೆ ಎನ್ನಲಾಗುವುದಿಲ್ಲ. ಆಳುವ ವರ್ಗವು ತನ್ನ ಉಡುಪಿನಲ್ಲಿ, ಅವಶ್ಯಕವೆಂದು ತಿಳಿದು, ಶರವೇಗದಲ್ಲಿ ತೆರುವ ಫ್ಯಾಷನ್ನಿನ ಹೊಸ ರೂಪಗಳು ಅಷ್ಟೇ ವೇಗದಲ್ಲಿ ನಗೆಪಾಟಲಿಗೂ ಈಡಾಗುತ್ತವೆ.

ಇನ್ನೂ ಕೆಲವು ನಿರ್ಣಯಗಳನ್ನು ಕೂಡ ಉದಾಹರಣೆಗಳಿಂದ ವಿವರಿಸಬಹುದು. ಒಂದೇ ದೃಶ್ಯವನ್ನು ಚಿತ್ರಿಸುವ ಇಬ್ಬರು ಚಿತ್ರಕಾರರು ಪರಸ್ಪರ ಸಾಕಷ್ಟು ವ್ಯತ್ಯಾಸಗಳನ್ನುಳ್ಳ ಚಿತ್ರಗಳನ್ನು ರಚಿಸುತ್ತಾರೆ. ಆದರೆ ಒಂದೇ ವಸ್ತುವಿನ ಮೇಲೆ ಕೇಂದ್ರೀಕರಿಸಿ, ಸಮಾನ ತೆರಪುವೇಗದಲ್ಲಿ (Shut Speed) ಕ್ಯಾಮರಾವನ್ನು ಕ್ಲಿಕ್ ಎನಿಸುವ ಇಬ್ಬರು ತೆಗೆಯುವ ಫೋಟೋಗಳು ಹೀಗೆ ಬೇರೆ ಬೇರೆಯಾಗಿರುವುದಿಲ್ಲ. ಒಂದು ಆಚರಣೆಯ ಫಲ ಏನೆಂಬುದು ಆಚರಿಸುತ್ತಿರುವವನ ಸ್ಥಾನವನ್ನು ಅವಲಂಬಿಸಿ ನಿರ್ಧಾರವಾಗುತ್ತದೆ. ರಾಜ, ವೈದ್ಯ, ಕಣಿಗಾರ ಅಥವಾ ಬ್ರಾಹ್ಮಣ ಇವರಿಗೆ ಮಾತ್ರ ಮಾನವ ಜನಾಂಗಕ್ಕೆ ಸುಖ, ಕಲ್ಯಾಣಗಳನ್ನು ತಂದೀಯುವ ಶಕ್ತಿ ಮತ್ತು ಹಕ್ಕುಗಳಿರುತ್ತವೆ. ಆದರೆ ಹೀಗೆ ತಂದು ನೀಡಲಾಗುವುದೆಂದು ತಿಳಿಯಲಾದ ಸೌಲಭ್ಯಗಳೆಲ್ಲವೂ ಕೂಡ ಕೇವಲ ಊಹಾತ್ಮಕವಾದವುಗಳೆಂದು ವಿಜ್ಞಾನವು ನಮಗೆ ತಿಳಿಸಿಕೊಡುತ್ತದೆ. ನೆಲದಲ್ಲಿ ಬೆಳೆಯುವ ಸಾಮರ್ಥ್ಯವು ಸುಫಲೀಕರಣ ಆಚರಣೆ (Fertility rites)ಗಳಿಗಿಂತ, ವಿಶೇಷ ಬೆಳವಣಿಗೆಯ ತಂತ್ರಗಳಿಂದ, ರಾಸಾಯನಿಕ ಗೊಬ್ಬರಗಳಿಂದ ಹೆಚ್ಚುವುದೆಂಬುದು ಕೂಡ ನಮಗೆ ವಿಜ್ಞಾನದಿಂದ ತಿಳಿಯುತ್ತದೆ. ಅದೂ ಅಲ್ಲದೆ ಹೀಗೆ ಬೆಳೆಯುವ ಹೊಸವಿಧಾನಗಳನ್ನು ಯಾರೇ ಅನುಸರಿಸಲಿ, ರಾಸಾಯನಿಕಗಳನ್ನು ಯಾರೇ ಉಪಯೋಗಿಸಲಿ ಉಂಟಾಗುವ ಫಲಿತಾಂಶ ಮಾತ್ರ ಒಂದೇ ಆಗಿರುತ್ತದೆ; ವ್ಯಕ್ತಿಯನ್ನ ಅವಲಂಬಿಸಿ ಬದಲಾಗುವುದಿಲ್ಲ.

ನಾನು ಈ ಉದಾಹರಣೆಗಳನ್ನು ಬೇಕೆಂದೇ ನೀಡುತ್ತಿದ್ದೇನೆ. ಏಕೆಂದರೆ ಕಲೆ ಮತ್ತು ಆಚರಣೆಗಳು ಒಂದು ಕಾಲದಲ್ಲಿ ಕೆಲವು ಕಾರ್ಯಗಳನ್ನು ನಿರ್ವಹಿಸುತ್ತಿದ್ದವು. ಈಗ ಅವುಗಳ ಸ್ಥಾನವನ್ನು ವೈಜ್ಞಾನಿಕ ನಿರೀಕ್ಷಣಾವಿಧಾನವು ಆಕ್ರಮಿಸಿದೆ. ಈಗ ನಾವು ಯಾವುದನ್ನು ವೈಜ್ಞಾನಿಕ ಸಿದ್ಧಾಂತಗಳೆಂದು ತಿಳಿಯುತ್ತೇವೆಯೋ ಅವುಗಳಿಗೆ

ಪರ್ಯಾಯವಾಗಿ ಆದಿಮಜನಾಂಗದ ಆಚರಣೆಗಳು ಅವರಲ್ಲಿ ಪ್ರವೃತ್ತವಾಗಿದ್ದವು; ಅಲ್ಲದೆ ಅಲ್ಲಿ ಅವು ಸರಿಯಾಗಿಯೂ ಇದ್ದವು. ಭಾರತದಲ್ಲಿ ಮುಟ್ಟಿನ ಬಗೆಯ ನಿಷೇಧವನ್ನು ಈಗಲೂ ಆಚರಿಸಲಾಗುತ್ತಿದೆಯಾದರೂ, ತಲೆಕೆಡಿಸುವ ವೇಗದ, ಕೈಗಾರಕೀಕೃತ ಬದುಕಿನ ನಗರಗಳಲ್ಲಿ ಅದು ಅರ್ಥಹೀನವಾಗಿದೆ. ನಮ್ಮ ಕುಶಲ ಕೆಲಸಗಾರರು ವರ್ಷದಲ್ಲಿ ಒಂದು ದಿನ ತಮ್ಮ ಉಪಕರಣಗಳನ್ನು ಪೂಜಿಸುತ್ತಾರೆ. ಬಹು ಆಕರ್ಷಕವಾದ ಈ ಆಚರಣೆಯ ಮೂಲವನ್ನು ಅತ್ಯಂತ ಪ್ರಾಚೀನ ಕಾಲಕ್ಕೆ ಒಯ್ಯಬಹುದು. ಆದರೆ ಯಂತ್ರೋತ್ಪಾದಕ ಸ್ಥಾವರಗಳು, ಟರ್ಬೈನುಗಳು, ವಿದ್ಯುತ್ ಯಂತ್ರಗಳು ಮತ್ತು ಉಗಿಬಂಡಿಗಳು, ಯಾವುದೇ ಉಪಕರಣದಲ್ಲಿ ಅವುಗಳನ್ನ ಬಳಸಿ ದುಡಿಯುವವನ ವೈಯುಕ್ತಿಕ ಪರ್ಯಾಯ ಶಕ್ತಿ (MANA) ಅಡಗಿ ಕುಳಿತಿರುವುದಿಲ್ಲವೆಂಬುದನ್ನು ತಿಳಿಸಿಕೊಟ್ಟಿವೆ. ಮಾರುಕಟ್ಟೆಯ ಸಾಮಾನ್ಯ ತರಕಾರಿ ವ್ಯಾಪಾರಿಯು ದಿನದ ಮೊದಲ ವ್ಯಾಪಾರಕ್ಕೆ ಮೊದಲು ತಕ್ಕಡಿಗೆ ನಮ್ರನಾಗಿ ನಮಸ್ಕಾರ ಮಾಡುತ್ತಾನೆ; ಯಾವುದೋ (ತಾಯಿಭವಾನಿಯನ್ನು) ದೇವಿಯನ್ನು ನಮಿಸುತ್ತಾನೆ. ಷೇರು ಮಾರುಕಟ್ಟೆಯ ವ್ಯವಹಾರಸ್ಥ ಜೋತಿಷ್ಯ ಹೇಳುವವರೆಗೆ ಸಾಕಷ್ಟು ಹಣವನ್ನು ವ್ಯಯ ಮಾಡಬಹುದಾದರೂ, ಷೇರುಮಾರುಕಟ್ಟೆಯ ಉಲ್ಲೇಖಗಳನ್ನು, ತೇಜಿ ಇಲ್ಲವೇ ಇಳಿಕೆಯ ಪ್ರವೃತ್ತಿಗಳನ್ನು ಗಮನಿಸದೆ ಸುಮ್ಮನೆ ಕುಳಿತಿರುವುದಿಲ್ಲ. ಅವನ ಜ್ಯೋತಿಷಿಯ ಪಂಚಾಂಗದಲ್ಲಿ ಹೊಸ ಜಗತ್ತಿನ ಆರ್ಥಿಕ ವ್ಯವಹಾರದ ದೊಂಬರಾಟದ ಶಬ್ದಗಳಾದ ಷೇರು, ಸ್ಟಾಕಂ, ಬಾಂಡು ಮುಂತಾದವುಗಳು ಇರುವುದಿಲ್ಲ. ಈಗಲೂ ಸೂರ್ಯಗ್ರಹಣದ ಕಾಲದಲ್ಲಿ ಪುಣ್ಯಸ್ನಾನ ಮಾಡುವ ಲಕ್ಷಾಂತರ ಜನರು ತಮ್ಮ ಪ್ರಾರ್ಥನೆಯು ಫಲಕಾರಿ ಯಾಯಿತೆಂದೂ, ಸೂರ್ಯನು ತನ್ನನ್ನು ನುಂಗಲು ಬಂದ ರಾಹುಕೇತುಗಳಿಂದ ಬಿಡುಗಡೆ ಪಡೆದನೆಂದು ಹೆಮ್ಮೆಯಿಂದ ಹೇಳಿಕೊಳ್ಳಬಹುದು. ಆದರೆ ಪಾಶ್ಚಾತ್ಯ ಕಾಲಚಲನಾ ಸೂಚಕ (EPHEMERIDES)ಗಳ ಮುಖಾಂತರ ಖಗೋಲ ಕಾಯದ ಸಿದ್ಧಾಂತಗಳು ನಮ್ಮ ಸಾಂಪ್ರದಾಯಿಕ ಪಂಚಾಂಗಗಳಿಗೆ ಪ್ರವೇಶಪಡೆದಿವೆ. ಹೀಗಾಗಿ ಜನರು ಹಿಂದಿನಿಂದ ನಡೆದುಬಂದ ಅರ್ಥಹೀನ ನಡಾವಳಿಗಳನ್ನು ನಿಜವಾಗಿ ನಂಬದಿರುವ ಸ್ಥಿತಿಯನ್ನು ತಲುಪಿದ್ದಾರೆ. ವಿಜ್ಞಾನದಲ್ಲಿ ಸಿದ್ಧಾಂತ ಮತ್ತು ಪ್ರಯೋಗ (Theory and Practice)ಗಳನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಹೀಗೆಂದ ಮಾತ್ರಕ್ಕೆ ವಿಜ್ಞಾನಿಗಳು ಎಂದೆಂದಿಗೂ ತಪ್ಪಾದ ಸಿದ್ಧಾಂತಗಳನ್ನು ರೂಪಿಸಿರಲಿಲ್ಲವೆಂದಲ್ಲ. ಆದರೆ ಸತ್ಯಕ್ಕೆ ಹತ್ತಿರವಾದ ಸ್ಥಾನದ ಕಡೆಗೆ ಸದಾ ಚಲಿಸುತ್ತಿರುತ್ತಾರೆ. ಆದರೆ ವಸ್ತುವಿನ ಗುಣ ಅನಂತ ಮತ್ತು ಅನೂಹ್ಯವಾದುದರಿಂದ ಪರಮ ಸತ್ಯವೆಂಬುದು ಯಾವುದೂ ಇಲ್ಲವೆಂಬುದನ್ನು ಅವರು ಅರಿತಿದ್ದಾರೆ. 'ಆಚರಣೆ'ಯಲ್ಲಿಯಾದರೋ, ಯಾವೊಬ್ಬನೂ ಒಂದು ಹೊಸ ಪ್ರಯೋಗವನ್ನು ಮಾಡಲು ಧೈರ್ಯವಹಿಸಲಾರ; ಆಚರಣೆಯ ವಿವರ ಎಷ್ಟೆಷ್ಟು ಹಳೆಯದಾಗಿರುತ್ತದೋ ಅಷ್ಟಷ್ಟು ಅದು ಬಲಶಾಲಿ ಹಿಡಿತವನ್ನು ಹೊಂದಿರುತ್ತದೆ.

ಆದಿಮ ಜನಾಂಗದ ಸಾಮಾಜಿಕ ವ್ಯವಸ್ಥೆಯಲ್ಲಿ ವರ್ಗಗಳು ರೂಪುಗೊಂಡಾಗ ಆಚರಣೆಗಳು ಧರ್ಮವಾಗಿ ಪರಿವರ್ತಿತವಾಗುತ್ತವೆ. ಈ ಹೊಸ ವ್ಯವಸ್ಥೆಯಲ್ಲಿ ಮೊದಲಿದ್ದ ಬೇರೆಬೇರೆ ಅಂಗಗಳು ಪುನರ್ವ್ಯವಸ್ಥೆಗೊಂಡು ಇಕ್ಕಟ್ಟಿನ ಸ್ತರಗಳು ರೂಪುಗೊಳ್ಳುತ್ತವೆ. ನಾವು ಹಲವರು ಗಮನಿಸದೇ ಹೋಗುವ ವಿಷಯವೆಂದರೆ ವಿಜ್ಞಾನವೂ ಕೂಡ

ಒಂದು ಸಾಮಾಜಿಕ ಬೆಳವಣಿಗೆ ಎಂಬುದು. ವೈಜ್ಞಾನಿಕ ವಿಧಾನವೆಂಬುದು ಚಿರಂತನವಲ್ಲ ಹಾಗೂ ಸಮಾಜದ ಹೊಸ ವರ್ಗವ್ಯವಸ್ಥೆಯ ಅವಶ್ಯಕತೆಯಾಗಿ ವಿಜ್ಞಾನ ಬೆಳೆದುಬಂತು ಎಂಬುದನ್ನೂ ಗಮನಿಸುವುದಿಲ್ಲ. ಯಂತ್ರಯುಗದಲ್ಲಿ ವಿಜ್ಞಾನದ ಸ್ವರೂಪ ಖಚಿತವಾಯಿತು. ಯಂತ್ರಯುಗವು ವಿಜ್ಞಾನದ ನೆರವಿಲ್ಲದೆ ಬೆಳೆಯಲಾರದಾದರೂ, ವೈಜ್ಞಾನಿಕ ಆವಿಷ್ಕಾರಗಳಿಗೆ ಬೇಕಾದ ತಾಂತ್ರಿಕ ನೆರವನು ತಾನು ಒದಗಿಸಬಲ್ಲದು. ಇವೆರಡರ ನಡುವೆ ಇರುವ ಮೂಲಭೂತ ಸಂಬಂಧವೆಂದರೆ ವಿಜ್ಞಾನದಂತೆ ಯಂತ್ರೋತ್ಪಾದನೆ ಕೂಡ ನಿರಂತರ ಮುಂದುವರಿಕೆಯ ಸಂಚಯವನ್ನ ಲಕ್ಷಣವನ್ನು ಹೊಂದಿದೆ. ಮಾನವನ ನಿರ್ದಿಷ್ಟ ಉದ್ದೇಶವನ್ನು ನೆರವೇರಿಸುವುದಕ್ಕೆಂದು ಯಂತ್ರವು ಅವನ ಶ್ರಮದ ಕಾಲವನ್ನು ತಾನು ಕೂಡಿಟ್ಟುಕೊಳ್ಳುತ್ತದೆ. ಹೀಗಿದ್ದರೂ ನಮಗೆ ತಿಳಿದಿರುವಂತೆ ಆಧುನಿಕ ವಿಜ್ಞಾನವು ಯಂತ್ರಯುಗಕ್ಕಿಂತಲೂ ಮೊದಲೇ ಅಸ್ತಿತ್ವ ಪಡೆದಿತ್ತು. ಹೊಸ ಸಾಮಾಜಿಕ ಗುರಿಯೊಂದರ ಸಾಧನೆಗೆ ನೆರವಾಗುವುದೇ ಅವೆರಡರ ಉದ್ದೇಶವಾಗಿತ್ತು. ಆಧುನಿಕ ವಿಜ್ಞಾನವು ಬೂರ್ಜ್ವಾಸಿಯ ಸೃಷ್ಟಿಯಾಗಿದೆ.

ವಿಜ್ಞಾನದ ಅತ್ಯಂತ ಮುಖ್ಯ ಕೊಡುಗೆ ಎಂದರೆ ಅದು ಸಿದ್ಧಾಂತ ಮತ್ತು ತಂತ್ರ ಅದರೆಲ್ಲರೂ ಮುಖ್ಯವಾಗಿ ಉತ್ಪಾದನಾ ತಂತ್ರ, ಇವೆರಡನ್ನು ಬೇರ್ಪಡಿಸಿತು. ನಮ್ಮ ಹಳ್ಳಿಯ ಕುಶಲ ಕರ್ಮಿಗಳನ್ನು ನೋಡಿ. ಅವರು ಸಾಕಷ್ಟು ಒರಟಾದ ಉಪಕರಣಗಳನ್ನು ಬಳಸಿದರೂ ಅತ್ಯುತ್ತಮ ವಸ್ತುಗಳನ್ನೇ ಉತ್ಪಾದಿಸಬಲ್ಲವರಾಗಿದ್ದಾರೆ. ಕಾರಣ ಉಪಕರಣಗಳನ್ನು ಅವುಗಳನ್ನು ಬಳಸುತ್ತಿರುವ ವ್ಯಕ್ತಿತ್ವದ ಮುಂದುವರಿದ ಭಾಗಗಳೇ ಎಂಬಂತಿರುತ್ತವೆ. ಕುಶಲಿಗಳು ತಮ್ಮ ಉಪಕರಣಗಳ ಮೇಲೆ ಅಷ್ಟೊಂದು ಪ್ರಭುತ ಪಡೆದಿರುತ್ತಾರೆ. ಆತ ಮಾತ್ರ ತಕ್ಕಮಟ್ಟಿನ ಪರಿಣಾಮವನ್ನು ಪಡೆಯಲು ಆ ಉಪಕರಣವನ್ನು ಬಳಸಬಲ್ಲ. ಆದರೆ ಅವನ ಉತ್ಪಾದನೆಗೆ ಯಾವುದೇ ನಿರ್ದಿಷ್ಟ ಮಾದರಿ ಸಾಧನೆ (Standard) ಇರುವುದಿಲ್ಲ. ಕೊಂಚಮಟ್ಟಿಗೆ ಸಂಕೀರ್ಣವಾದ ರಚನೆಯ ಆದರೆ ಒಂದೇ ಬಗೆಯ ಎರಡು ವಸ್ತುಗಳನ್ನು ಉತ್ಪಾದಿಸಿದರೆ, ಆ ಎರಡೂ ವಸ್ತುಗಳ ಭಾಗಗಳನ್ನು ಪರಸ್ಪರ ಬದಲಾಯಿಸಲು ಸಾಧ್ಯವಿರುವುದಿಲ್ಲ. ಆ ಎರಡೂ ವಸ್ತುಗಳಿಗೆ ಒಂದೇ ರಚನಾಮಾದರಿ ಇದ್ದರೂ ಅಥವಾ ಅವೆರಡೂ ವಸ್ತುಗಳು ಒಂದೇ ಬಗೆಯ ಕೆಲಸಗಳನ್ನು ಮಾಡುವಂತಿದ್ದರೂ ಈ ಮೇಲಿನ ಮಾತು ನಿಜ. ಆಧುನಿಕ ಕಾರ್ಖಾನೆಯಲ್ಲಾದರೋ, ಯಂತ್ರಸ್ಥಾವರಗಳು ಅವುಗಳನ್ನು ನಿಯಂತ್ರಿಸುವ ವ್ಯಕ್ತಿಯಿಂದ ಮುಕ್ತವಾಗಿರುತ್ತವೆ. ವೈಜ್ಞಾನಿಕ ಪ್ರಯೋಗಗಳು ಅವುಗಳನ್ನು ಮಾಡುತ್ತಿರುವ ಪ್ರಯೋಗಕರ್ತೃವಿನಿಂದ ಬೇರ್ಪಟ್ಟಿರುವಂತೆಯೇ ಇಲ್ಲೂ ಕೂಡ. ಆದರೆ ಒಂದು ಷರತ್ತಿರುತ್ತದೆ. ಅದೆಂದರೆ ಬಳಸುತ್ತಿರುವ ಕಾರ್ಮಿಕನು ಸ್ಥಾವರಕ್ಕೆ ಜಖಂ ಆಗದಂತೆ ಅದನ್ನು ಬಳಸುವಷ್ಟು ಸಮರ್ಥನಾಗಿರಬೇಕು. ಹಳ್ಳಿಯ ನೇಕಾರ ಎಷ್ಟೋ ಶತಮಾನಗಳಿಂದ ಹಳ್ಳಿಯ ಕುಂಬಾರನಿಂದ ಪ್ರತ್ಯೇಕವಾಗಿಯೇ ಉಳಿದಿದ್ದಾನೆ. ಯಂತ್ರ ಜೋಡಣೆಯನ್ನು ಕಲಿತ ಕಾರ್ಮಿಕನಾದರೆ ಒಂದು ಬಗೆಯ ಕಾರ್ಖಾನೆಯಿಂದ ಇನ್ನೊಂದಕ್ಕೆ ಸುಲಭವಾಗಿ ವರ್ಗಾವಣೆ ಹೊಂದಬಲ್ಲ. ಕರಕುಶಲಿಯಲ್ಲಿ ಉಪಕರಣ ಮತ್ತು ಅದರ ಬಳಕೆಯ ಹಿಂದಿನ ತತ್ವ ಇವೆರಡೂ ಬೇರ್ಪಡಲಾರವು. ಅವನಲ್ಲಿ ಜ್ಞಾನವನ್ನು ಗಳಿಸುವ ಕ್ರಿಯೆ ಮತ್ತು ಬೆರಳುಗಳ ಮೂಲಕ ಆ ಜ್ಞಾನವನ್ನು ಬಳಸುವ ಕ್ರಿಯೆ ಒಟ್ಟಾಗಿಯೇ

ನಡೆಯುತ್ತಿರುತ್ತದೆ. ಪರಿಣಾಮವಾಗಿ ಇಂಥ ಜ್ಞಾನದ ವರ್ಗಾವಣೆಯು ಅತಿನಿಧಾನವಾಗಿ ನಡೆಯುತ್ತದೆ; ಕುಶಲಕಲಾಕರ್ಮಿಗಳು ತಮ್ಮೊಳಗೆ ಒಂದು ಗುಂಪಾಗಿ (guilds) (ಭಾರತದಲ್ಲಿ ಒಂದು ಒಳಜಾತಿಯಾಗಿ) ಬಿಡುತ್ತಾರೆ. ಇಂಥ ಕುಶಲ ಕರ್ಮಿಗಳ ಸಂಖ್ಯೆ ಮತ್ತು ಇವರಿಂದ ನಡೆಯುವ ಉತ್ಪಾದನೆ ಎರಡೂ ತುಂಬಾ ಕಡಿಮೆ ಪ್ರಮಾಣದ್ದಾಗಿದೆ. ಹೆಚ್ಚು ಜನ ದುಡಿಮೆಗಾರರು ಬೇಕೆಂದರೆ ಹೆಚ್ಚು ಕಾಲದವರೆಗೆ ಕಲಿಯುವುದರಲ್ಲೇ ತೊಡಗಬೇಕಾಗಿರುವುದೇ ಈ ಪರಿಸ್ಥಿತಿಗೆ ಕಾರಣವಾಗಿದೆ. ಉದಾಹರಣೆಗೆ ನೋಡಿದರೆ ಜ್ಞಾನೋದಯ (Renaissance) ಕಾಲದ ಯುರೋಪಿನಲ್ಲೂ ಇಂಥದೇ ಪರಿಸ್ಥಿತಿ ಇದ್ದುದನ್ನು ಕಾಣುತ್ತೇವೆ. ವ್ಯಾಪಾರಿ ರಾಜರುಗಳಲ್ಲಿ ಸಾಕಷ್ಟು ಹಣ ಸಂಗ್ರಹಗೊಂಡುದೇ ಅಲ್ಲದೇ ಚೆಲ್ಲಿ ಹರಿಯುವುದಕ್ಕೆ ಪ್ರಾರಂಭವಾಗಿತ್ತಾದ್ದರಿಂದ ಈ ಹಣ ಮತ್ತಷ್ಟು ಬೆಳೆಯುವ ಹೊಸಬಗೆಗಳು ಬೇಕಾದವು ಹಳೆಯ ಲೇವಾದೇವಿ ವಿಧಾನಗಳಲ್ಲಿ ಅವಕಾಶಗಳು ಮಿತಗೊಂಡಿದ್ದವು. ಇನ್ನೂ ಹಳೆಯ ಬಗೆಯ ಉತ್ಪಾದನಾ ವಿಧಾನದಲ್ಲೇ ನಿರತರಾಗಿದ್ದ ಇವರ ಸಾಲಗಾರರಿಂದ ನಿಗದಿಯಾದ ಪ್ರಮಾಣಕ್ಕಿಂತ ಅಧಿಕವಾಗಿ ಹಣವನ್ನು ಪಡೆಯುವುದೂ ಅಸಾಧ್ಯವಾಗಿತ್ತು. ಕುಶಲಕರ್ಮಿಗಳು ಸಾಹಾಕಾರರಲ್ಲಿ ತಮ್ಮ ಹತಾರಗಳನ್ನು ಅಡವಿಟ್ಟು ಸಾಲಪಡೆದು ಅದನ್ನು ಹಿಂತಿರುಗಿಸಲು ಅಸಮರ್ಥರಾದರೆ, ಆ ಹತಾರಗಳನ್ನು ಮುಟ್ಟುಗೋಲು ಹಾಕಿಕೊಳ್ಳಬಹುದಾಗಿತ್ತು. ಆದರೆ ಅದರಿಂದ ಕೆಲಸಗಾರ ಮತ್ತು ಅವನ ಕುಟುಂಬ ಹಸಿವಿಗೆ ತುತ್ತಾಗುತ್ತಿದ್ದರೇ ಹೊರತು, ಅವುಗಳನ್ನು ಇಟ್ಟುಕೊಂಡವರಿಗೆ ಬಳಸಲು ಸಾಧ್ಯವಿಲ್ಲದ್ದರಿಂದ, ಅವು ಕೇವಲ ಕೆಲಸಕ್ಕೆ ಬಾರದ ಲೋಹ ಇಲ್ಲವೇ ಮರದ ವಸ್ತುಗಳಾಗಿರುತ್ತಿದ್ದವು. ಹೆಚ್ಚು ಕಾಲ ತರಬೇತು ಇಲ್ಲದೆಯೂ ವಸ್ತುಗಳನ್ನು ಸಮರ್ಥವಾಗಿ ಉತ್ಪಾದಿಸಬಲ್ಲ ಹೊಸ ವರ್ಗವೊಂದರ ಅವಶ್ಯಕತೆ ಇತ್ತು. ಆಗ ಅವರನ್ನು ಕೆಲಸಕ್ಕೆ ಇಟ್ಟುಕೊಳ್ಳುವಾತ ಅವರ ದುಡಿಮೆಯ ಹೆಚ್ಚುವರಿಯನ್ನು ತಾನು ಹಿಡಿತದಲ್ಲಿಟ್ಟುಕೊಳ್ಳಬಹುದಿತ್ತು. ಎಂದರೇ ವಾದೇವಿಗಾರನೀಗ ಬಂಡವಾಳಗಾರ ನಾಗುತ್ತಾನೆ. ಕುಶಲಕರ್ಮಿಯು ದುಡಿಮೆಗಾರನಾಗುತ್ತಾನೆ. ಆದರೆ ಇಂಥ ವ್ಯವಸ್ಥೆಯೊಂದನ್ನು ನಿರ್ವಹಿಸಲು ಹೊಸ ತತ್ವಗಳು ಬೇಕಾದವು. ಆ ಪ್ರಕಾರ ಜಾರಿಯಲ್ಲಿ ಬರಬಹುದಾದ ಉತ್ಪಾದನಾ ವಿಧಾನವೊಂದನ್ನು ರೂಪಿಸುವುದೇ ಅಲ್ಲದೇ, ಉತ್ಪಾದನೆಯ ಹತಾರಗಳನ್ನು ಬಳಸದೇ ಕೇವಲ ನಿರ್ವಹಣೆಯ ಕೆಲಸವನ್ನು ಮಾಡುವವರ ಹಿಡಿತದಲ್ಲಿ ಆ ಉತ್ಪಾದನಾ ವಿಧಾನವು ಉಳಿಯಬೇಕಿತ್ತು. ಇಲ್ಲಿ ವಿಜ್ಞಾನ ತನ್ನ ಪಾತ್ರವನ್ನು ನಿರ್ವಹಿಸಿದ್ದು, ಉದಾಹರಣೆಗೆ ಗೆಲಿಲಿಯೋನ ಸಂಶೋಧನೆಗಳನ್ನೇ ನೋಡಿ; ಅಲ್ಲಿ ಪಂಪುಗಳು ಏಕೆ ನಿರ್ದಿಷ್ಟಕ್ಕಿಂತ ಹೆಚ್ಚು ಎತ್ತರದವರೆಗೆ ನೀರನ್ನು ಎತ್ತುವುದಿಲ್ಲವೆಂಬ ಪ್ರಶ್ನೆಯಿಂದ ಜಲಚಲನಶಾಸ್ತ್ರ (Hydrostatics) ರೂಪುಗೊಂಡುದೇ ಅಲ್ಲದೇ ಇನ್ನೂ ಉತ್ತಮಗೊಂಡ ಪಂಪುಗಳು ತಯಾರಾದುದನ್ನು ಕಾಣುತ್ತೇವೆ. ಪೆಂಡ್ಯೂಲಂ ಬಗ್ಗೆ ಆತನ ಸಂಶೋಧನೆಯಿಂದ ಕಾಲವನ್ನು ಅಳೆಯುವ ಖಚಿತವಿಧಾನಗಳು ಸಾಧ್ಯವಾದವು. ಹೆಚ್ಚು ಜನ ದುಡಿಮೆಗಾರರನ್ನು ಒಳಗೊಂಡು ಅವರನ್ನು ಒಂದು ಹೊಂದಾಣಿಕೆಯಲ್ಲಿ ದುಡಿಯುವಂತೆ ಮಾಡುವ ಕಾರ್ಖಾನೆಯ ಕೆಲಸದಲ್ಲಿ ಖಚಿತವಾಗಿ ಕಾಲವನ್ನು ತಿಳಿಯುವ ಅವಶ್ಯಕತೆ ಹೆಚ್ಚಾಗಿತ್ತು; ಅಲ್ಲಿ ಬಳಕೆಯಾಯಿತು. ಆದರೆ ಗೃಹಕೈಗಾರಿಕೆಗೆ ಅದು ಬೇಕಾಗಿರಲಿಲ್ಲ. ಆಕಾಶಕಾಯಗಳ ಚಲನೆಯನ್ನು ಲೆಕ್ಕಾಚಾರದ ಮೂಲಕ

ತಿಳಿಸುವ ನಕ್ಷೆಗಳನ್ನು ಗೆಲಿಲಿಯೋ ತಿದ್ದಿ ಬರೆದರೂ ಪ್ರಯೋಜನವಾಗಲಿಲ್ಲ. ಆದರೆ ಆತ ತನ್ನ ದೂರದರ್ಶಕವನ್ನು ಆಕಾಶದ ಕಡೆ ತಿರುಗಿಸಿ ತಾನು ಕಂಡದ್ದನ್ನು ನೇರವಾಗಿ ನಿರೂಪಿಸಲು ತೊಡಗಿದಾಗ ಅವನ ಖಗೋಳ ವಿಜ್ಞಾನ ಕ್ರಾಂತಿಕಾರಿಯಾಯಿತು. ಚಂದ್ರನ ಮೇಲಿದ್ದ ಮನುಷ್ಯ ಮಾಯವಾಗಿ ಅಲ್ಲಿ ಪರ್ವತಗಳು ಬಂದವು. ಆದರೆ ಆಳುವವರ್ಗ ಮತ್ತು ಚರ್ಚು ಅವರೆಗೆ ತಾವು ನಂಬಿದ್ದ ವಿಶ್ವರಚನಾ ವಿಧಾನವು ತಲೆ ಕೆಳಗಾದುದನ್ನು ಕಂಡುಕೊಂಡದ್ದರಿಂದ ಅವನ ಖಗೋಳ ವಿಜ್ಞಾನ ಅಪಾಯಕಾರಿಯಾಗಿ ಕಂಡಿತು. ಪರಿಣಾಮವಾಗಿ ಸುತ್ತಲಿನ ಸಮಾಜ ವ್ಯವಸ್ಥೆಯನ್ನೂ ಕೂಡ ಪ್ರಶ್ನಿಸುವುದು ಸಾಧ್ಯವಾಯಿತು. ಇದು ಕೇವಲ ಮನುಷ್ಯನಿಂದ ಮಾತ್ರವಾಗಿದ್ದರೆ ದುಸ್ಸಾಧ್ಯವಾಗುತ್ತಿತ್ತು.

ವಿಜ್ಞಾನ ಕೇವಲ ಪ್ರಯೋಗಗಳ ಮಾಹಿತಿಯ ಸಂಗ್ರಹವಲ್ಲ. ವಿವಾದಕ್ಕೆ ಒಳಗಾಗಿರುವ ಸಿದ್ಧಾಂತವನ್ನು ಸರಿಗೊಳಿಸದ ಯಾವುದೇ ಪ್ರಯೋಗವಾಗಲೀ ಅದು ಮಹತ್ವದ್ದಲ್ಲ. ಹಾಗೆಯೇ ಗೊಂದಲ ಹುಟ್ಟಿಸುವ ಪ್ರಾಯೋಗಿಕ ಮಾಹಿತಿಯನ್ನು ವಿವರಿಸದ ಸಿದ್ಧಾಂತವೂ ಪ್ರಗತಿಯನ್ನು ಹೊಂದುವುದಿಲ್ಲ. (ಅಥವಾ ಇನ್ನೂ ನಡೆಯಬೇಕಾಗಿರುವ ಪ್ರಯೋಗಗಳ ಫಲಿತಾಂಶವನ್ನು ಮುಂದಾಗಿ ಹೇಳಲಾಗದ) ಯೂರೋಪಿನ ವೈಜ್ಞಾನಿಕ ಕೇಂದ್ರವು, ವಿಜ್ಞಾನ ಮತ್ತು ಉತ್ಪಾದನೆ, ಹೊಸ ಬೂರ್ಜ್ವಾಸಿಯ ಅಧಿಕಾರಕ್ಕೆ ಬರುವುದು ಮತ್ತು ಅಲ್ಲಿಯ ಸಂಶೋಧನೆಯಲ್ಲಿ ನವಚೈತನ್ಯ ಮೂಡುವುದು ಇವುಗಳ ನಡುವೆ ಸಂಬಂಧವಿರುವುದನ್ನು ಗುರುತಿಸಿದೆಯೆಂಬುದು ಸ್ಪಷ್ಟವಾಗಿದೆ. ಲಿವ್‌ವೆನ್ ಹೋಕ್ (Leeu wen hoak) ತನ್ನ ಪಾಡಿಗೆ ತಾನೇ ಮಸೂರಗಳನ್ನು ತಯಾರಿಸಿ ಒಳ್ಳೆಯ ಸೂಕ್ಷ್ಮದರ್ಶಕವನ್ನು ತಯಾರಿಸಿದ. ಅದನ್ನಾತ ನೀರಿನ ಹನಿಗಳನ್ನು ನೋಡಲು, ಕೀಟಗಳನ್ನು ನೋಡಲು ಬಳಸಿದ. ಲಂಡನ್ನಿನ ರಾಯಲ್ ಸೊಸೈಟಿಯು ತನ್ನ ಕಾರ್ಯದರ್ಶಿಯನ್ನು ಅವನ ಬಳಿಗೆ ಕಳುಹಿಸಿತು. ಅವನ ಸಂಪ್ರಬಂಧಗಳನ್ನು ಪ್ರಕಟಿಸಿತು. ಅದೇ ಬಗೆಯಲ್ಲಿ ಆ ಸಂಸ್ಥೆಯು ಆಹಾರ ಸಂಗ್ರಹಣೆಯಂಥ ದೈನಂದಿನ ಸಮಸ್ಯೆಗಳನ್ನು ನಿರ್ಮೂಲನ ಮಾಡಲು ನೆರವಾದ ತತ್ವವೊಂದನ್ನು ಪ್ರತಿಪಾದಿಸಿದ ರೆಡಿ (Redi)ಯ ಸಂಪ್ರಬಂಧವನ್ನು ಪ್ರಕಟಿಸಿತು. ಯಾರು ತಮ್ಮ ಸಂಪ್ರಬಂಧಗಳನ್ನು ಪ್ರಕಟಿಸುವರೋ ಅವರಿಗೆ ಮನ್ನಣೆ ನೀಡುವ ಸಂಗತಿ ಮಾತ್ರ ಹೊಸದು. ನ್ಯೂಟನ್ನನು ಕೂಡ ತನ್ನ ಸಂಶೋಧನೆಗಳನ್ನು ಸುಲಭವಾಗಿ ಹೊರಗೆಹಾಕಲು ಆಶಿಸುತ್ತಿರಲಿಲ್ಲ. ಇನ್ನೂ ಹಿಂದಿನ ಕಾಲಕ್ಕೆ ಹೋದರೆ ಜ್ಞಾನವನ್ನು ರಹಸ್ಯವೆಂಬಂತೆ ಬಚ್ಚಿಟ್ಟುಕೊಳ್ಳುವ ಪ್ರವೃತ್ತಿ ಬಲವಾಗಿದ್ದುದನ್ನು ಕಾಣುತ್ತೇವೆ. ಉತ್ಪಾದನಾ ಸಾಧನಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳುವ ಖಾಸಗಿ ವ್ಯವಸ್ಥೆಯು ತಂತ್ರ ಮತ್ತು ಉತ್ಪಾದನೆಯ ಹಂತದಲ್ಲಿ ಹಕ್ಕು, ಸ್ವಂತಿಕೆ, ಸ್ವತ್ತೀಕರಿಸುವ ಬಗೆಗೆ ಯೋಚಿಸಿದರೂ, ಜನರ ಆಸಕ್ತಿಯನ್ನು ನಿಯಂತ್ರಿಸುವ ಶಕ್ತಿ ಮಾತ್ರ ಉತ್ಪಾದನೆಯ ಸಾಮಾಜಿಕ ಸ್ವರೂಪದಲ್ಲಿರುತ್ತದೆ. ಇಂಗ್ಲೆಂಡ್‌ನಲ್ಲಿ ಬೂರ್ಜ್ವಾಸಿಯನ್ನು ಅಧಿಕಾರಕ್ಕೆ ತಂದ ಎರಡು ಕ್ರಾಂತಿಗಳು ನಡೆದ ಶತಮಾನದಲ್ಲೇ ನ್ಯೂಟನ್ ಅಂಥ ವಿಜ್ಞಾನಿಯೂ ಇದ್ದುದು ಕೇವಲ ಆಕಸ್ಮಿಕವೇನು? ಫ್ರಾನ್ಸ್‌ನಲ್ಲಿ ಊಳಿಗಮಾನ್ಯ ಪದ್ಧತಿಯ ಪಳೆಯುಳಿಕೆಗಳನ್ನು ನಿರ್ಮೂಲಮಾಡಿದ ಫ್ರಾನ್ಸಿನ ಮಹಾಕ್ರಾಂತಿಯ ನೆರಳಲ್ಲೇ ಫ್ರಾನ್ಸ್ ಮತ್ತು ಯುರೋಪಿನ ಶ್ರೇಷ್ಠ ವಿಜ್ಞಾನಿಗಳಾದ ಲ್ಯಾಗ್‌ರೇನ್ಸ್, ಲ್ಯಾಪ್‌ಲೇಸ್, ಆಂಪಿಯರ್, ಭ್ರೆಫ್ಲೊ ಮುಂತಾದವರು ಇದ್ದುದು ಹೇಗೆ

ಸಾಧ್ಯವಾಯ್ತು? ಅವರೆಲ್ಲ ಬೂರ್ಜ್ವಾಸಿಯ ಜತೆ ರೂಪುಗೊಂಡು ನೆಪೋಲಿಯನ್ನನ್ನು ಮೀರಿ ನಿಂತರು. ಜರ್ಮನಿಯಲ್ಲಿ ಜರ್ಮನ್ ಬೂರ್ಜ್ವಾಸಿಯು ತನ್ನ ದೇಶದ ನಿಜವಾದ ಶಕ್ತಿಯಾಗಿ ರೂಪುಗೊಂಡ ಸಮಯದಲ್ಲಿ ಗಾಸ್‌ನಂಥ ಜರ್ಮನಿಯ ಶ್ರೇಷ್ಠ ವಿಜ್ಞಾನಿಯು ಮೂಡಿಬಂದ; ಅಲ್ಲದೆ ಅಂಥ ಹಲವರಲ್ಲಿ ಗಾಸ್‌ನದು ಒಂದು ಹೆಸರು. ಇದೆಲ್ಲವೂ ಆಕಸ್ಮಿಕವೆಂದು ಹೇಳುವುದಾದರೆ ನಾವು ವಿಜ್ಞಾನದ ಮೂಲದಲ್ಲೇ ಇರುವ ವೈಜ್ಞಾನಿಕ ನೆಲೆಯನ್ನು ಅಲ್ಲಗಳೆಯುವ ಹಾಸ್ಯಾಸ್ಪದ ಸ್ಥಿತಿಯಲ್ಲಿರುತ್ತೇವೆ. ಏಕೆಂದರೆ ಆಗ ನಾವು ವಿಜ್ಞಾನದ ಚರಿತ್ರೆಯನ್ನು ಅದೃಷ್ಟಶಾಲಿ ಆಕಸ್ಮಿಕಗಳ ಸರಣಿ ಎಂದು ಭಾವಿಸುತ್ತೇವೆ. ತಾನೇ ತನ್ನ ಚರಿತ್ರೆ ಎಂಬಂತೆ ಬೆಳೆದಿರುವ ವಿಜ್ಞಾನವು ಸಂದೇಹಾಸ್ಪದವಾದ ಹೊಂದಾಣಿಕೆಗಳ ಹಿಂದಿರುವ ತರ್ಕವನ್ನು, ಕಾರಣವನ್ನು ಅನ್ವೇಷಿಸುತ್ತಲೇ ಬೆಳೆದಿದೆ ಎಂಬುದು ಸ್ಪಷ್ಟವಿದೆ. ಇನ್ನೂ ಮುಂದುವರಿದು ಹೇಳುವುದಾದರೆ ನಾನು ಗ್ರೀಕ್ ವಿಜ್ಞಾನವನ್ನೂ (ಅದು ಎಷ್ಟೇ ಹೊಗಳಿಕೆಗೆ ಅರ್ಹವಾಗಿರಲಿ ಅಥವಾ ನವೋದಯ ಕಾಲದಲ್ಲಿ ಅದರ ತಾರ್ಕಿಕ ವಿಧಾನದ ನೆರವು ದೊರಕಿದ್ದು ಮುಖ್ಯವೆಂದು ಹೇಳಲಿ) ಆಧುನಿಕ ಅರ್ಥದಲ್ಲಿ ವಿಜ್ಞಾನವೆನ್ನಲಾರೆ. ಅದು ಹುಸಿ ವಿಜ್ಞಾನ. ಆಧುನಿಕ ಸಾಮ್ರಾಜ್ಯಶಾಹಿ ಸ್ವರೂಪ, ಚಟುವಟಿಕೆಗಳು ನಡೆಯುತ್ತಿದ್ದರೂ ಗ್ರೀಕ್ ಮತ್ತು ರೋಮನ್ ರಾಜಧಾನಿಗಳು ಹುಸಿರಾಜಧಾನಿಗಳಾಗಿದ್ದವು. ಎಲ್ಲ ಗ್ರೀಕ್ ವಿಜ್ಞಾನದ ಉದ್ದೇಶವೂ ಕೂಡ ಕಣ್ಣಿಗೆ ಕಾಣುವುದನ್ನೆಲ್ಲಾ ತರ್ಕಕ್ಕೆ ಒಳಪಡಿಸುವುದಾಗಿತ್ತು. ಗುಲಾಮರು ಮಾತ್ರ ದುಡಿಯುತಿದ್ದ ಪ್ರಾಚೀನ ಸಮಾಜದಲ್ಲಿ ಈ ಬಗೆಯ ಆಲೋಚನೆ ಕೂಡ ಅವಶ್ಯವೇ ಆಗಿತ್ತು. ಏಕೆಂದರೆ ಮನುಷ್ಯರು ಗುಲಾಮರಾಗಿರುವುದನ್ನು ಅವರು ಪ್ರಕೃತಿ ಸಹಜ ಎಂದು ನಂಬಿದ್ದರಿಂದ, ಅವರ ಈ ಅಪೇಕ್ಷೆಗಳು ಆ ಕಾಲದ ವೈಜ್ಞಾನಿಕ ದೃಷ್ಟಿಕೋನದಲ್ಲಿ ಮೈದಳೆದಿವೆ.

ಮನಸ್ಸಿನ ಯಾವುದೋ ಆಳದಿಂದ ಮೂಡಿಬಂದ ಸಮಸ್ಯೆಗಳ ಬಗೆಗೆ, 'ಕೇವಲ' ವೈಜ್ಞಾನಿಕ ಉದ್ದೇಶಗಳ ನೆಲೆಯಲ್ಲಿ ಚಿಂತಿಸುವ ಕೆಲವು ಆಜನ್ಮ ಪ್ರತಿಭಾಶಾಲಿಗಳ ಸೃಷ್ಟಿ ಎಂಬ ವಿಚಾರವನ್ನೀಗ ಕೈಬಿಡಬಹುದು. ಪ್ರತಿಯೊಂದು ಕಾಲದಲ್ಲಿ, ದೇಶದಲ್ಲಿ ಕೆಲವು ಆಜನ್ಮ ಪ್ರತಿಭಾಶಾಲಿಗಳಿರುತ್ತಾರೆ. ಆದರೆ ಅವರ ಪ್ರತಿಭೆಯು ಚಿಂತನೆಗಾಗಿ ಅವರು ಆಯ್ದುಕೊಂಡ ಭಾಷೆಯಿಂದ ನಿಯಂತ್ರಿತವಾಗುವಂತೆ, ಅವರು ಜೀವಿಸುತ್ತಿರುವ ವಾತಾವರಣ (ಪರಿಸರ)ದಿಂದಲೂ ನಿಯಂತ್ರಿತವಾಗುತ್ತದೆ. ಚಲನೆ ಇಲ್ಲದೆ ದೇಹ ಹೇಗೆ ಇರಲಾರದೋ ಹಾಗೆ ಆಲೋಚನೆ ಇಲ್ಲದೆ ಮನಸ್ಸು ಇರುವುದು ಅಸಾಧ್ಯ. ಈಗಲೂ ಈ ದೇಶದಲ್ಲಿ ಶಂಕರ ಮತ್ತು ರಾಮಾನುಜ ಇವರ ಸಿದ್ಧಾಂತಗಳ ಪರಸ್ಪರ ವಿವೇಚನೆಯನ್ನು ಮಾಡುವವರಿದ್ದಾರೆ. ಅಂಥ ಚರ್ಚೆಯಿಂದ ಅವರಿಗೆ ಆ ಒಬ್ಬರು ಚಿಂತಕರಷ್ಟು ಮಹತ್ವವೇನೂ ಸಿಗುವುದಿಲ್ಲ. ನಾನು ಪಟ್ಟಕದ(ಪ್ರಿಸಂ) ನೆರವಿನಿಂದ ನ್ಯೂಟನ್ ಮಾಡಿದ ಪ್ರಯೋಗವನ್ನೇ ಮತ್ತೆ ಮಾಡಿದರೆ ಅವನಿಗೆ ಸಿಕ್ಕ ಫಲಿತಾಂಶವೇ ನನಗೂ ಸಿಗುತ್ತದೆ. ಆದರೆ ನಾನು ವಿಜ್ಞಾನಿಯಾಗಲೀ, ದೃಶ್ಯವಿಜ್ಞಾನದ(ಆಪ್ಟಿಕ್ಸ್) ಪ್ರವರ್ತಕನಾಗಲೀ ಆಗುವುದಿಲ್ಲ. ಒಂದು ವೈಜ್ಞಾನಿಕ ಸಂಶೋಧನೆಯ ಮಹತ್ವವು, ಗಹನೆಯು ಸಮಾಜಕ್ಕೆ ಅದೆಷ್ಟು ಉಪಯುಕ್ತವೆಂಬುದನ್ನು ಅವಲಂಬಿಸಿದೆ. ಆ

ಕಾರಣದಿಂದಲೇ ನ್ಯೂಟನ್ ಮತ್ತವನ ಸಮಕಾಲೀನರಿಗಿಂತ ಹೆಚ್ಚು ಗಣಿತವನ್ನು ತಿಳಿದಿರುವ ಕಾಲೇಜ್ ವಿದ್ಯಾರ್ಥಿಯನ್ನು ಮಹಾಪ್ರತಿಭಾಶಾಲಿ ಎಂದು ತಿಳಿಯುವುದಿಲ್ಲ. ಜ್ಞಾನಕೋಶದೊಳಗೆ ಸೇರಿಹೋದ ಒಂದು ಸಂಶೋಧನೆಯು ಮುಂದೆ ಕೇವಲ ಒಂದು ತಾಂತ್ರಿಕ ವಿವರವಾಗಿ ಮಾತ್ರ ಉಳಿಯುತ್ತದೆ. ಸಾಮಾಜಿಕವಾಗಿ ಆವಶ್ಯಕವಿಲ್ಲದ ಸಂಶೋಧನೆ ಯಾವ ಬೆಲೆಯೂ ಸಿಗಲಾರದು. ಸಾಮಾಜಿಕವಾಗಿ ಅವಶ್ಯಕವಾದುದೇನೆಂಬುದನ್ನು ಅಧಿಕಾರದಲ್ಲಿರುವ ವರ್ಗವು ಗುರುತಿಸಿ ನಿರ್ಧರಿಸುತ್ತದೆ. ಲಿಯೋನಾರ್ಡ್‌ಡ ವಿಂಚಿ ಇದಕ್ಕೊಂದು ನಿದರ್ಶನ. ಆತ ಊಳಿಗಮಾನ್ಯ ವ್ಯವಸ್ಥೆಯ ಯಜಮಾನರನ್ನು ಓಲೈಸಬೇಕಿತ್ತು. ಆತನು ಪಿನ್ನುಗಳ ತಯಾರಿಕೆಯಲ್ಲಿ ಆಸಕ್ತನಾಗಿದ್ದರೆ ಯಜಮಾನರು ನಿರಾಸಕ್ತರಾಗಿದ್ದರು. ನೂರು ವರ್ಷಗಳ ನಂತರ ಆತನಿಗೆ ಕಲೆಗಾರ ಎಂಬುದಕ್ಕಿಂತ ವಿಜ್ಞಾನಿ ಎಂದು ಮನ್ನಣೆ ನೀಡಲಾಗಿತ್ತು. ಉತ್ಪಾದನಾ ತಂತ್ರ ಮತ್ತು ಆವಶ್ಯಕತೆಯ ಹಂತದಲ್ಲಾಗುವ ಸಾಮಾಜಿಕ ಪ್ರಗತಿಯು ವೈಜ್ಞಾನಿಕ ಸಂಶೋಧನೆಗಳಿಗೆ ಪ್ರೇರಕವಾಗುವುದು. ವಿಜ್ಞಾನದ ಚರಿತ್ರೆಯಲ್ಲಿ ಎಷ್ಟೋ ವೇಳೆ ಬೇರೆಬೇರೆ ಕಡೆ ಒಂದೇ ಬಗೆಯ ಸಂಶೋಧನೆಗಳು ನಡೆದಿರುವುದನ್ನು ಗಮನಿಸಿದರೆ ಮೇಲಿನ ಮಾತು ಸ್ಪಷ್ಟವಾಗುತ್ತದೆ. ವ್ಯವಸ್ಥಿತವಾದ ಸಂಶೋಧನ ಕ್ರಮಗಳು ಬಳಕೆಗೆ ಬರುವುದಕ್ಕೂ ಮೊದಲಿನಿಂದಲೂ ಇಂಥ ಆಕಸ್ಮಿಕ ಹೊಂದಾಣಿಕೆಗಳು ಕಂಡು ಬಂದಿವೆ. ಉದಾಹರಣೆಗೆ ಬಹುಕಾಲದಿಂದ ಅಸಾಧ್ಯವೆಂದು ತಿಳಿಯಲಾಗಿದ್ದ ಅನಿಲವನ್ನು ದ್ರವರೂಪಕ್ಕೆ ಪರಿವರ್ತಿಸುವ ಕ್ರಿಯೆಯ ಫ್ರಾನ್ಸ್‌ನಲ್ಲಿ ಒಂದೇ ಕಾಲದಲ್ಲಿ ಇಬ್ಬರಿಂದ ಸಾಧಿತವಾಯ್ತು. ಸೈದ್ಧಾಂತಿಕವಾಗಿ ಇನ್ನೂ ಖಚಿತಗೊಳ್ಳದ ರಾಮನ್ ಪರಿಣಾಮವು ಭಾರತ ಮತ್ತು ರಷಿಯಾಗಳಲ್ಲಿ ಏಕಕಾಲದಲ್ಲಿ ನಿರೂಪಿತವಾಯಿತು. ಇದರ ಖ್ಯಾತಿಯು ರಾಮನ್‌ಗೆ ಸೇರಬೇಕು. ಏಕೆಂದರೆ ಅವರು ನಮಗೆ, ವಸ್ತುವಿನ ಸ್ವರೂಪವನ್ನು ಬದಲಿಸದೇ ಅದನ್ನು ವಿಶ್ಲೇಷಿಸುವ ವಿಧಾನವೊಂದನ್ನು ರೂಪಿಸಿ, ಪ್ರಾಯೋಗಿಕವಾಗಿ ಸಾಧಿಸಿ ನೀಡಿದ್ದಾರೆ.

ಆದರೆ ಆಗಾಗ ವಿಜ್ಞಾನಿ ಮತ್ತು ಸಮಾಜವನ್ನು ಆಳುವ ವರ್ಗ ಇವರ ನಡುವಣ ಘರ್ಷಣೆ ತೀವ್ರಗೊಂಡು ವ್ಯಕ್ತಿಯು ತನ್ನ ಸಂಶೋಧನೆಗಳಿಗೆ ತಕ್ಕ ಮನ್ನಣೆಯನ್ನು ಪಡೆಯುವಲ್ಲಿ ತೊಡರಾಗುತ್ತದೆ. ಇದು ಕೇವಲ ಬೂರ್ಜ್ವಾಸಿಯ ಸಮಸ್ಯೆ ಮಾತ್ರವಲ್ಲ. ಮಧ್ಯಯುಗದಲ್ಲಿ ಯುರೋಪಿನವರು ಧ್ಯಾನ, ಏಕಾಂತವಾಸ, ಧಾರ್ಮಿಕ ವಿಚಾರಮಥನ ಇವುಗಳ ಕಡೆಗೆ ಮುಖಮಾಡಿದರು. ಹೀಗಿದ್ದರೂ ಸಮಕಾಲೀನ ಸಮಾಜದ ವರ್ಗರಚನೆಯಿಂದ ಧಾರ್ಮಿಕ ಚಿಂತನೆಯು ಮುಕ್ತವಾಗಿರಲಿಲ್ಲ. ಅಪಾಯ ಕಾರಿಯಾದ ವಿಚಾರಗಳ, ಚಿಂತನೆಗಳ ಮನುಷ್ಯ ಜೀವಪಣವಿಡಬೇಕಿತ್ತು. ಊಳಿಗ ಮಾನ್ಯ ವ್ಯವಸ್ಥೆಯ ಯಜಮಾನರು ಮತ್ತು ಮುಂದಿನ ವರ್ತಕವರ್ಗ ಧಾರ್ಮಿಕ ವಿಚಾರಗಳನ್ನು ಬಳಸಿದರು, ವರ್ತಕರು ಪ್ರಾಟೆಸ್ಟೆಂಟ್ ಮತವನ್ನು ಬಳಸಿದರು. ಮೊದಮೊದಲಿನ ಸಂತರು ಮತ್ತು ಹುತಾತ್ಮರು ಇವರ ಹೆಸರಿನ ಬಲದ ಮೇಲೆ ನಿರ್ಮಾಣಗೊಂಡ ಚರ್ಚ್ ಮುಂದಿನ ಅವಧಿಯಲ್ಲಿ ಅಸಮರ್ಥವಾಯಿತು. ಚರ್ಚ್ ಸ್ವತಃ ಊಳಿಗಮಾನ್ಯ ವ್ಯವಸ್ಥೆಯ ಆಸ್ತಿಗೆ ತಾನೇ ಹಕ್ಕು ಸಂಪಾದಿಸಿತು. ಆಗ ಚರ್ಚಿನ ಪುರೋಹಿತ ವರ್ಗ ಶ್ರೀಮಂತರಾದರು.

ಬರ್ಮಾದಲ್ಲಿ ಮತ್ತು ಟಿಬೆಟ್‌ನಲ್ಲಿ ಬೌದ್ಧ ಧರ್ಮದ ವಿಚಾರದಲ್ಲಿ ಹೀಗೆ ಆಗಿದೆ. ಶ್ರೀಲಂಕಾದಲ್ಲೂ ಕೂಡ ಶ್ರೀಮಂತ ಧಾರ್ಮಿಕ (ಮಠ) ವಿಹಾರಗಳಿವೆ. ಶಂಕರ, ರಾಮಾನುಜ ಅಷ್ಟೇಕೆ ನಿಜವಾಗಿ ಜನತೆಯ ಸಂತನೆನ್ನಬಹುದಾದ ತುಕಾರಾಮ ಇವರೆಲ್ಲರ ವಿಚಾರಗಳನ್ನು ಸ್ಥಾಪಿಸುವ ವೇದಿಕೆಗಳು ಆಸ್ತಿಯನ್ನು ಬೆಳೆಸಲು, ಕೆಲಸಕ್ಕೆ ಸಂಪ್ರದಾಯಗಳನ್ನು ಉಳಿಸಲು, ತೆರಿಗೆಗಳನ್ನು ತಪ್ಪಿಸಿಕೊಳ್ಳುವಲ್ಲಿ ನಿರತವಾಗಿವೆ. ಯುರೋಪಿನ ಶ್ರೀಮಂತ ಚರ್ಚ್ ತನ್ನ ಸಾಮರ್ಥ್ಯವನ್ನು ಪ್ರಕಟಿಸಲು 'ವಿಚಾರಣೆ' (( (ಇನ್ಕ್ವಿಶ್ಶನ್)ಯಂಥ ವ್ಯವಸ್ಥೆಯನ್ನು ಹೊಂದಿತ್ತು. ಆ ವ್ಯವಸ್ಥೆಗೆ ಗೆಲಿಲಿಯೋನ ಆಲೋಚನೆಗಳು ಅಪಾಯಕಾರಿಯಾಗಿ ಕಂಡವು. ಹೋರಾಟದ ದಿಕ್ಕುಗಳನ್ನು ವಿಚಿತ್ರ ಗುರಿಯ ಕಡೆಗೆ ತಿರುಗಿಸಲಾಗುತ್ತದೆ. ಚರ್ಚ್, ಪ್ರಗತಿ ಶೀಲ ಚಿಂತನೆಗಳ ಬಗೆಗೆ ತಳೆಯುವ ಧೋರಣೆಯು ಅದು ಗ್ರಂಥಗಳನ್ನು ನಿರ್ನಾಮ ಮಾಡಿರುವಲ್ಲಿ ಸ್ಪಷ್ಟವಾಗಿದೆ. ಸ್ಪೇನಿನ ಅತ್ಯಂತ ಶ್ರೀಮಂತ ಖಾಸಗಿ ಆಸ್ತಿಯ ಯಜಮಾನ್ಯವನ್ನು ಪಡೆದಿರುವ ಚರ್ಚ್ ಪ್ರಜಾಪ್ರಭುತ್ವವಾದಿ ಸರ್ಕಾರದ ವಿರುದ್ಧ ಯಾವ ಹೆಜ್ಜೆ ಇಡಬಹುದು ಎಂಬುದು ಸ್ಪೇನಿನ ಈಚಿನ ಜನಸಂಗ್ರಾಮದಲ್ಲಿ ಪ್ರಕಟಗೊಂಡಿದೆ.

ವಿಜ್ಞಾನವು ಬೂರ್ಜ್ವಾಸಿಯ ಧರ್ಮವ್ಯವಸ್ಥೆ ಎಂಬ ಸಿದ್ಧಾಂತಕ್ಕೆ ಸಮಾನಾಂತರ ವಿರುವ ಕೆಲವು ವಿವರಗಳನ್ನು ನಿರೂಪಿಸಬಹುದು. ಊಳಿಗಮಾನ್ಯ ಪದ್ಧತಿಯ ಬದಲು ಬೂರ್ಜ್ವಾಸಿ-ಬಂಡವಾಳಷಾಹಿ ಉತ್ಪಾದನಾ ವಿಧಾನಗಳು ಜಾರಿಗೆ ಬಂದಾಗ ವಿಜ್ಞಾನವು ಧರ್ಮವ್ಯವಸ್ಥೆಯ ಸ್ಥಾನವನ್ನು ಆಕ್ರಮಿಸುತ್ತದೆ. ವಿಜ್ಞಾನಿಯೂ ಬಡಸನ್ಯಾಸಿಯಂತೆ ಜೀವಿಸಬೇಕು, ಆತ ಹಾಗೆ ಜೀವಿಸುವುದನ್ನು ಶ್ಲಾಘಿಸಲಾಗುತ್ತದೆ. ಊಳಿಗಮಾನ್ಯ ಪದ್ಧತಿಯ ಯಜಮಾನನ ಆಪ್ತವರ್ಗದಲ್ಲಿ ಪುರೋಹಿತನಿಗೆ ಸ್ಥಾನವಿರುವಂತೆ ಬಂಡವಾಳಗಾರನ ಆಡಳಿತ ನಿರ್ವಹಣಾವ್ಯವಸ್ಥೆಯಲ್ಲಿ ವಿಜ್ಞಾನಿಗೂ ಸ್ಥಾನವಿರುತ್ತದೆ. ಆತನ ಸಂಶೋಧನೆಗಳ ಮೇಲೆ ಆತನಿಗೆ ಹಕ್ಕು ಇರುವುದಾದರೂ, ಅದರಿಂದ ಆತ ಲಕ್ಷಾಂತರ ರೂಪಾಯಿಗಳನ್ನು ಸಂಪಾದಿಸಲಾರ. ಪಾಶ್ಚರ್ ಮತ್ತು ಫ್ಯಾರಡೇ ಇವರ ಸಂಶೋಧನೆಗಳಿಂದ ಸಂಪಾದಿಸಿದ ಲಾಭದಲ್ಲಿ ಅವರಿಗೆ ಕಿಂಚಿತ್ತು ಮಾತ್ರ ದೊರಕಿತು. ಅದೂ ಭಿಕ್ಷುಕರಿಗೆ ದೊರಕಿದಂತೆ. ಪತ್ರಿಕಾ ವರದಿಗಾರನೊಬ್ಬ ವಿಜ್ಞಾನಿಯ ಅಭೂತ ಪೂರ್ವ ಸಾಧನೆಗಳನ್ನು ಎಲ್ಲರಿಗೂ ತಿಳಿಸಬಲ್ಲ. ಆದರೆ ಆ ಸಾಧನೆಗಳ ಬಗ್ಗೆ ಆತನ ಪತ್ರಿಕೆಯ ಮಾಲಿಕ, ಹಾಗೂ ಆಳುವವರ್ಗಕ್ಕೆ ಮೆಚ್ಚುಗೆ ಇದ್ದರೆ ಮಾತ್ರ ಇದು ಸಾಧ್ಯ. ಎಲ್ಲಕ್ಕಿಂತ ಮಿಗಿಲಾಗಿ, ಊಳಿಗಮಾನ್ಯ ಪದ್ಧತಿಯ ಇಳಿಗಾಲದಲ್ಲಿ ನಡೆಯುವಂತೆ ಈ ವ್ಯವಸ್ಥೆಯು ಅವನತಿಯ ಕಾಲದಲ್ಲೂ ವಿಜ್ಞಾನಿಯನ್ನು ಬೆನ್ನು ಹತ್ತಿ ಕಾಡಲಾಗುತ್ತದೆ. ಹೀಗೆ ಕಣ್ಣಿಟ್ಟು ಚಲನವಲನಗಳನ್ನು ನೋಡುವುದು ಪ್ರಧಾನವಾಗಿಬಿಡುತ್ತದೆ. ವಿಜ್ಞಾನವು ಬೂರ್ಜ್ವಾಸಿಯ ಸೃಷ್ಟಿಯೇ ಆಗಿದ್ದರೂ, ಬೂರ್ಜ್ವಾಸಿಗೆ ಅದರ ಮೇಲೆ ಸರ್ವಸ್ವಾಮ್ಯವೇನೂ ಇಲ್ಲ. ಆದ್ದರಿಂದ ಬೂರ್ಜ್ವಾಸಿಯ ಪತನದೊಡನೆ ವಿಜ್ಞಾನವೂ ನಾಶವಾಗಬೇಕಿಲ್ಲ. ನರ್ತನವು ಆರಾಧನೆಯ ಭಾಗವಾಗಿ ಪ್ರಾರಂಭವಾಯಿತು. ಹೀಗೆ ನರ್ತನವನ್ನು ಪ್ರಾರಂಭಿಸಿದ ಮಾಂತ್ರಿಕ-ವೈದ್ಯಗಳು ಈಗಿಲ್ಲವಾದರೂ ನರ್ತನ ಮಾತ್ರ ಸಮಾಜದ

ಕಲಾನುಭವಕ್ಕೆ ವಸ್ತುವಾಗಿ ಉಳಿದುಕೊಂಡಿದೆ. ಸಂಗೀತವೀಗ ಸಸ್ಯಗಳ ಬೆಳವಣಿಗೆಯನ್ನು ಹೆಚ್ಚಿಸಲೆಂದು ಬಳಕೆಯಾಗಬೇಕಿಲ್ಲ. ನಾನು ಈ ಬರವಣಿಗೆಯಲ್ಲಿ ತೊಡಗಿರುವಾಗಲೇ ಮಧ್ಯರಾತ್ರಿಯಲ್ಲಿ ಪ್ರಾಚೀನ ಮಂತ್ರಗಳನ್ನು ಉಚ್ಚರಿಸುವುದನ್ನು, ತಮಟೆಗಳ ಆದಿಮ ಲಯಗಳನ್ನು ಕೇಳುತ್ತಿದ್ದೇನೆ. ಆದರೆ ಈ ಸದ್ದು ಬೆಳೆಯ ವೃದ್ಧಿಗಾಗಿ ಅಲ್ಲ; ಆದರೆ ಹಾಲು ಮಾರುವವರು, ಕಾರ್ಖಾನೆಯ ದುಡಿಮೆಗಾರರು, ಮನೆಕೆಲಸದವರು ತಮ್ಮ ನಿತ್ಯದ ಜೀವನ ಒತ್ತಡಗಳನ್ನು ಕಡಿಮೆ ಮಾಡಿಕೊಳ್ಳಲೆಂದು ಈ ಲಯಗಳಲ್ಲಿಯು ರಹಸ್ಯವೆಂದು ಅರ್ಥವಾಗದು. ಬ್ರಿಟಿಷ್ ಮ್ಯೂಸಿಯಂನಲ್ಲಿ ಮಗ್ನರಾಗಿದ್ದಾರೆ. ಶಿಲ್ಪವೆಂದರೆ ಇತಿಹಾಸಪೂರ್ವ ಕಾಲೀನ ಪ್ರೆಂಚ್ ಗುಹಾಂತರಗಳ ಪಾರ್ಥೆನಾನ್‌ನ ಶಿಲ್ಪವನ್ನು ಮೆಚ್ಚಲಾಗುತ್ತದೆ; ಆದರೆ ಈಗ ಅವುಗಳಿಗೆ ಪೂಜೆ ಸಲ್ಲುವುದಿಲ್ಲ. ವಿಜ್ಞಾನವು ನಾಲ್ಕು ಶತಮಾನಗಳ ಹಿಂದೆ ಯಾವ ವ್ಯವಸ್ಥೆಯು ತನ್ನ ಸೃಷ್ಟಿಗೆ ಕಾರಣವಾಯಿತೋ ಆ ವ್ಯವಸ್ಥೆಯು ನಿರ್ನಾಮವಾದಂತೆ ತಾನೂ ನಿರ್ನಾಮವಾಗಬೇಕಿಲ್ಲ. ವಿಜ್ಞಾನಿಯು ಯಾವುದೇ ವರ್ಗದ ಅಡಿಯಾಳಾಗಿ ಬಾಳದಿರುವಂಥ ಸ್ವಾತಂತ್ರ್ಯವು ಅವನಿಗೆ ಇರಬೇಕು. ಕೇವಲ ಬ್ಯಾಕ್ಟೀರಿಯಾಗಳ ಬಗ್ಗೆ, ಅಣುವಿನ ಬಗ್ಗೆ, ಮನೋವಿಜ್ಞಾನದ ಬಗ್ಗೆ ಅಥವಾ ಮತ್ತಿತರ ಸಾಮೂಹಿಕ ಯುದ್ಧತಂತ್ರಗಳ ಬಗ್ಗೆ ಮಾತ್ರ ಗಮನಹರಿಸುವ ಬದಲು ಇಡೀ ಮಾನವ ಜನಾಂಗದ ಒಳಿತಿಗಾಗಿ ವ್ಯವಸ್ಥಿತವಾಗಿ ಯೋಜಿಸಿದ ವಿಜ್ಞಾನ ಮಾತ್ರ ವಿಜ್ಞಾನಿಗೆ ಸ್ವಾತಂತ್ರ್ಯವನ್ನು ನೀಡಬಲ್ಲದು. ಮಾನವ ಜನಾಂಗ ಪ್ರಾಣಿಗಳ ಹಂತದಿಂದ ನಿಧಾನವಾಗಿ ಪ್ರಗತಿಹೊಂದಿ ಆಹಾರಸಂಗ್ರಹಣೆ ಮತ್ತು ಶೇಖರಣೆಯಲ್ಲಿ ತೊಡಗಿತು; ಆ ನಂತರ ತನಗೆ ಬೇಕಾದ ಆಹಾರವನ್ನು ತಾನೇ ಬೆಳೆಯುವಂತಾಯಿತು ಬೆಂಕಿಯನ್ನುಮಣಿಸುವುದರ ಮೂಲಕ ತನ್ನ ದೈಹಿಕ ಶಕ್ತಿಯನ್ನು ಮೀರಿದ ಶಕ್ತಿಮೂಲವೊಂದನ್ನು ತನ್ನ ಹಿಡಿತದಲ್ಲಿರಿಸಿಕೊಂಡಾಯ್ತು: ಪ್ರಾಣಿಗಳನ್ನು ಪಳಗಿಸಿ, ಗಾಳಿ, ನೀರು, ವಿದ್ಯುತ್‌ಗಳನ್ನು ತನ್ನ ನಿರ್ದೇಶನಕ್ಕೆ ತಂದು ಈಗ ಅಣುವಿನ ಕೇಂದ್ರದ ಮೇಲೂ ಪ್ರಭುತ್ವ ಸ್ಥಾಪಿಸಿದಂತಾಯಿತು. ಈ ಮಹಾ ಪರಂಪರೆಯ ಮುಂಚೂಣಿಯಲ್ಲಿ ವಿಜ್ಞಾನಿಯೂ ಇದ್ದಾನೆ. ಇದರ ಬದಲು ಆತ, ವೈಜ್ಞಾನಿಕವಾಗಿ ಅಧಿಕ ಬೆಳೆಯನ್ನು ತೆಗೆದು ಪ್ರಪಂಚದ ಕೋಟ್ಯಾಂತರ ಜನರು ಹಸಿವಿನಿಂದ ನರಳುತ್ತಿರುವಾಗ ಆ ಬೆಳೆಯ ಹೆಚ್ಚುವರಿಯನ್ನು ಸಾಗರಕ್ಕೆ ಸುರಿಯುವ ವರ್ಗದ ಅಡಿಯಾಳಾದರೆ, ಅಣುಬಾಂಬಿನ ವಿನಾಶಕಾರಿ ಶಕ್ತಿಯಿಂದ ಜನಸಂಖ್ಯೆಯ ಆಧಿಕ್ಯವು ತಪ್ಪಿ ಒಳ್ಳೆಯದೇ ಆಗುವುದೆಂದು ತಿಳಿದರೆ ಆತ ಪ್ರತಿಗಾಮಿಯ ಹಾದಿ ಹಿಡಿದಿದ್ದಾನೆ ಎನ್ನಬೇಕು. ಅಂಥ ಹಂತವನ್ನು ತಲುಪಿದಾಗ ಆತ ಆದಿಮ ಜನಾಂಗದ ಮಾಂತ್ರಿಕ-ವೈದ್ಯನಿಗಿಂತಲೂ ಹೀನಾಯವಾದ, ಪ್ರಾಣಿಗಳಿಗೂ ಸಾಧಿಸಲು ಆಗದಷ್ಟು ಕೀಳಾದ ಸ್ಥಾನವನ್ನು ತಲುಪುತ್ತಾನೆ.

ಇಷ್ಟಕ್ಕೂ ಆವಶ್ಯಕತೆಗಳನ್ನು ವಿಜ್ಞಾನವು ವಿಶ್ಲೇಷಿಸುವ ಕ್ರಮ ಯಾವುದು? ವಿಜ್ಞಾನದ ಶಾಖೆಗಳಲ್ಲಿ ಅವು ಗಣಿತವನ್ನು ಬಳಸುವುದನ್ನು ಅನುಸರಿಸಿ ಖಚಿತ ವಿಜ್ಞಾನ ಮತ್ತು ವಿವರಣಾತ್ಮಕ ವಿಜ್ಞಾನ ಎಂದು ಎರಡು ಗುಂಪುಗಳಿವೆ. ಈ ಗುಂಪುಗಳ ನಡುವಣ

ಗೆರೆಯೀಗ ಕಲೆಸಿಹೋಗಿದೆ. ಜೀವ ವಿಜ್ಞಾನವು ಸಂಖ್ಯೆಗಳನ್ನು ಅವಲಂಬಿಸಿ ಖಚಿತ ಮುನ್ಸೂಚನೆಗಳನ್ನು ಪಡೆವತ್ತ ನಡೆದಿದೆ. ಇತ್ತ ಭೌತ ಮತ್ತು ರಸಾಯನ ಶಾಸ್ತ್ರಗಳು, ಸೌರವ್ಯೂಹದ ಚಲನೆಯನ್ನು ನಿಖರವಾಗಿ ಹೇಳಿದಷ್ಟು, ಅಣುವಿನ ಕಣ ಚಲನೆಯ ಬಗೆಗೆ ಏನನ್ನೂ ಖಚಿತವಾಗಿ ತಿಳಿಯುಲು ಅಸಾಧ್ಯವೆಂದಿದ್ದಾರೆ. ಸಾಧ್ಯಮಾನ ಸಿದ್ಧಾಂತವನ್ನು (ಥಿಯರಿ ಆಫ್ ಪ್ರಾಬಬಲಿಟಿ) ಆಧರಿಸಿ ಇವರಿಬ್ಬರು ತಮಗೆ ಬೇಕಾದ ಗಣಿತಶಾಸ್ತ್ರದ ತಂತ್ರಗಳನ್ನು ರೂಪಿಸಿಕೊಂಡಿದ್ದಾರೆ. ಖಗೋಳ ವಿಜ್ಞಾನವು ಗ್ರಹತಾರೆಗಳ ಸ್ಥಾನಮಾನವನ್ನೇನೂ ಬದಲಿಸುವುದಿಲ್ಲವಲ್ಲ; ಅದು ಹೇಗೆ ಜೀವಂತ ವಿಜ್ಞಾನ ಎನ್ನುವ ತಕರಾರನ್ನು ಎತ್ತಬಹುದು. ಆದರೆ ಖಗೋಳ ವಿಜ್ಞಾನವು ಪರಿವೀಕ್ಷಣೆಯ ವಿಜ್ಞಾನವಲ್ಲವೇ? ವ್ಯೋಮದಲ್ಲಿರುವ ಆಕಾಶಕಾಯಗಳ ಚಲನವಲನಗಳನ್ನು ಗುರುತಿಸಲು, ವೀಕ್ಷಿಸುವ ಹಂತದಲ್ಲಿ ಖಗೋಳ ವಿಜ್ಞಾನವು ರೂಪುಗೊಂಡಿತು ಈ ಆಕಾಶಕಾಯಗಳಿಂದ ಬರುವ ಬೆಳಕನ್ನು ದೂರದರ್ಶಕಗಳ ಮೂಲಕ ಪಡೆದು, ರೋಹಿತ ಮಾಪಕಗಳ ಮೂಲಕ ಹಾಯಿಸಿ ಅಥವಾ ಧೃವೀಕರಣಮಾಪಕ (ಪೊಲಾರಿ ಮೀಟರ್)ಗಳ ಮೂಲಕ ವಕ್ರೀಭವನಕ್ಕೆ ಒಳಗಾಗುವಂತೆ ಮಾಡಿದಾಗ ಖಗೋಳ ವಿಜ್ಞಾನದಲ್ಲಿ ಬದಲಾವಣೆಗಳಾದವು. ಪ್ರಯೋಗಶಾಲೆಗಳಲ್ಲಿ ಲೋಹಗಳ ಅವಿಕಣಗಳ ಪರಿವರ್ತನೆಯನ್ನು ಕುರಿತು ನಡೆಸಿದ ಸಂಶೋಧನೆಗಳಿಂದ ನಕ್ಷತ್ರಗಳ ರಚನೆಯನ್ನು ಕುರಿತು ಅಧ್ಯಯನ ಸಾಧ್ಯವಾಯಿತು. ಹೀಗಾಗಿ ಬದಲಾವಣೆ ಇಲ್ಲದ ವಿಜ್ಞಾನವೆಂಬುದಿಲ್ಲ.

ಇದಿಷ್ಟನ್ನೂ ಒಪ್ಪುವುದಾದರೆ ನಾವೀಗ ನಮ್ಮ ಚರ್ಚೆಯ ಕೊನೆಯ ಹಂತಕ್ಕೆ ಬಂದಿದ್ದೇವೆ ಎಂದರ್ಥ. ಇಡೀ ಜಗತ್ತಿನಲ್ಲಿ ಈಗಾಗಲೇ ನಡೆದಿರುವ ಬದಲಾವಣೆಯ ಬಗೆಗೆ, ಅದರ ಪರಿಣಾಮಗಳ ಬಗೆಗೆ ಆಳುವ ವರ್ಗವು ಭಯಪಡುತ್ತದೆ (ಈ ಆಳುವ ವರ್ಗದ ಹಿತಾಸಕ್ತಿಗಳಿಗೆ ಅಡಿಯಾಳಾಗಿರುವ ವಿಜ್ಞಾನಿಯ) ಅದರಿಂದಾಗಿ ಸೀಮಿತ ಗೊಂಡಂತೆ, ಬಂಧನಕ್ಕೊಳಗಾದವನಂತೆ ಭಾವಿಸುತ್ತಾನೆ. ತಾನು 'ಮುಕ್ತ'ನಾಗಿದ್ದೇನೆಂದು ಭಾವಿಸುವ ವಿಜ್ಞಾನಿಯಿಂದ ಈ ಬದಲಾವಣೆಗಳು ಅಪೇಕ್ಷಣೀಯವೋ ಅಲ್ಲವೋ ಎಂಬ ಪ್ರಶ್ನೆಯನ್ನು ನಿರ್ಮಮಭಾವದಿಂದ, ವೈಜ್ಞಾನಿಕವಾಗಿ ಚರ್ಚಿಸುವುದು ಅಸಾಧ್ಯ. ಉಳಿದಿರುವ ಒಂದೇ ಪರೀಕ್ಷೆ ಎಂದರೆ ಈಗ ಜಾರಿಯಲ್ಲಿರುವ ಎರಡು ಬಗೆಯ ವ್ಯವಸ್ಥೆಗಳಲ್ಲಿ ಇರುವ ಶಾಂತಿಯುತ ಪೈಪೋಟಿಯಲ್ಲಿ ಯಾವುದು ತನ್ನ ಭಾರಕ್ಕೆ ತಾನೇ ಕುಸಿಯುವುದು, ಯಾವುದು ತನ್ನ ಒಳಗಿನ ವೈರುದ್ಧ್ಯಗಳಿಂದ ತಾನೇ ನಾಶ ಹೊಂದುವುದು ಎಂಬುದನ್ನು ಗಮನಿಸುವುದು. ಹೀಗೆ ನಡೆಯಲೆಂದು ಹೇಳುವ ವಿಜ್ಞಾನಿಗೆ ಬಂಡವಾಳಷಾಹಿ ವ್ಯವಸ್ಥೆಯಲ್ಲಿ ಉದ್ಯೋಗ ಸಿಗುವುದಿಲ್ಲ. ಆದ್ದರಿಂದ ನಿಜವಾದ ಜವಾಬ್ದಾರಿಯೆಂದರೆ ಸಮಾಜವನ್ನು ಬದಲಾಯಿಸುವುದು: ಸಮಾಜದ ರಚನೆಯ ನೆಲೆಗಟ್ಟು ಯಾವುದೆಂದರೆ ವೈಜ್ಞಾನಿಕ ದೃಷ್ಟಿಯಿಂದ ಅನ್ವೇಷಿಸಲು ಯತ್ನಿಸುವುದು. ವರ್ಗಗಳು ಅದರಲ್ಲೂ ಬೂರ್ಜ್ವಾಸಿಯು ಈಗ ಆವಶ್ಯಕವೇ? ದೇಶದ ಒಂದು ಅಲ್ಪ ಸಂಖ್ಯಾತ ವರ್ಗದ ಹಿಡಿತದಲ್ಲಿ ಆಳ್ವಿಕೆ ಇದ್ದಾಗ ವಿಜ್ಞಾನಿಯು ಈ ಮೇಲಿನ ಸಮಸ್ಯೆಯನ್ನು ಗ್ರಹಿಸುವುದನ್ನೂ ನಿಷೇಧಿಸಲಾಗುತ್ತದೆ. ಬೂರ್ಜ್ವಾಸಿಯು ಇನ್ನೂ ರೂಪುಗೊಳ್ಳುತ್ತಿರುವ ವರ್ಗವಾಗಿರುವ ಭಾರತದಂಥ ದೇಶದಲ್ಲಿ ಇದು ಅತ್ಯಂತ

ಮುಖ್ಯ ಸಮಸ್ಯೆಯಲ್ಲ ಅನ್ನಬಹುದೇ? ಇಲ್ಲ. ಹಾಗೆ ಭಾವಿಸುವುದು ತಪ್ಪು. ರೂಪುಗೊಳ್ಳುತ್ತಿರುವ ಈ ವರ್ಗ ತನ್ನದೇ ಆದ ವಿಜ್ಞಾನವನ್ನೇನೂ ಬೆಳೆಸಲಿಲ್ಲ; ಈ ವರ್ಗ ಉಗಿಬಂಡಿ ಮತ್ತು ಮೋಟಾರು ಕಾರುಗಳನ್ನು ರೂಪಿಸಿದ 'ಭಾರತೀಯ ವಿಜ್ಞಾನ'ವನ್ನು ಸೃಷ್ಟಿಸಿಲ್ಲ. ತಮಗೆ ಹಣತರುವ ಯಂತ್ರಗಳನ್ನು ಆಮದು ಮಾಡಿಕೊಂಡಂತೆ ತಮಗೆ ಬೇಕಾದ ವಿಜ್ಞಾನವನ್ನು ಕರೆತರುತ್ತಾರೆ. ತಮ್ಮ ಗುರಿಗೆ ತಕ್ಕ ರಾಜಕೀಯ ಸಿದ್ಧಾಂತಗಳನ್ನು ಹೊರಗಿನಿಂದ ತರಲು ಸಿದ್ಧ. ಭಾರತದಲ್ಲಿ ಹೊಸದಾಗಿ ರೂಪುಗೊಳ್ಳುತ್ತಿರುವ ಬೂರ್ಜ್ವಾಸಿಯು ತನ್ನ ವಸಾಹತುಷಾಹಿ ಮನೋಭಾವವನ್ನು ಕೈಬಿಡದೆ ಪುನಾರಚನೆಗೊಂಡಿದೆಯಷ್ಟೆ. ಈ ವರ್ಗದ ನೇತೃತ್ವದಲ್ಲಿ, ಯುರೋಪು ಮಧ್ಯಯುಗದಿಂದ ಆಧುನಿಕ ಕಾಲದವರೆಗೆ ಶತಮಾನಗಳ ಕಾಲ ಸಾಧಿಸಿದ್ದನ್ನು ಭಾರತದಲ್ಲೇ ಕೆಲವೇ ದಶಕಗಳಲ್ಲಿ ಸಾಧಿಸಲು ಸಾಧ್ಯವಾಗುತ್ತದೆ.

ಮೂಲ : ಡಿ.ಡಿ. ಕೌಸಾಂಬಿ

## ಪದವಿ ತರಗತಿಗಳಲ್ಲಿ  ಕನ್ನಡ ಪಠ್ಯ ಬದಲಾವಣೆ ಕುರಿತು

ಕನ್ನಡ ಅಧ್ಯಾಪಕರು ಯಾವಾಗಲೂ ಕೂಡಾ ರಿಸಿವಿಂಗ್ ಎಂಡ್‌ನಲ್ಲಿದ್ದಾರೆ, ಅವರು ತಮ್ಮ ದೃಷ್ಟಿಕೋನಗಳನ್ನ, ತಮ್ಮ ವಿಚಾರಗಳನ್ನ ಮಂಡಿಸುವ ಅಧಿಕಾರಕ್ಕಾಗಿ ಕೋರಿಕೊಳ್ಳುವಂತಹ ಪರಿಸ್ಥಿತಿ ಬಂದಿದೆ. ಸ್ವಲ್ಪ ಹೊತ್ತಿನ ಮುಂಚೆ ಪ್ರೊಫೆಸರ್ ಒಬ್ಬರು ಹೇಳಿದ ಒಂದು ಸಂಗತಿಯನ್ನು ಗಮನಿಸಿದೆ. ಕಾಮರ್ಸ್ ವಿದ್ಯಾರ್ಥಿಗಳಿಗೆ ಕನ್ನಡ ಎಷ್ಟು ಬೇಕು, ಎಷ್ಟು ಬೇಡ, ಅಂತ ಹೇಳೋರು ಕಾಮರ್ಸ್ ಅಧ್ಯಾಪಕರು. ಕನ್ನಡ ಅಧ್ಯಾಪಕರು ಯಾವತ್ತಾದರೂ ಹೇಳಿದ್ದರಾ ಕಾಮರ್ಸ್ ಎಷ್ಟು ಓದಬೇಕು ಅಂತ. ಕನ್ನಡ ಎಷ್ಟು ಓದಬೇಕು, ಯಾವ ಕನ್ನಡ ಓದಬೇಕು ಅಂತ ಹೇಳುವುದು ಕನ್ನಡ ಅಧ್ಯಾಪಕರ ನಿರ್ಧಾರ. ಅದು ಕಾಮರ್ಸ್ ಅಧ್ಯಾಪಕರ ನಿರ್ಧಾರವಲ್ಲ. ಕಂಪ್ಯೂಟರ್ ಸೈನ್ಸ್ ಅಧ್ಯಾಪಕರ ನಿರ್ಧಾರವಲ್ಲ. ಕಂಪ್ಯೂಟರ್ ಸೈನ್ಸ್ ಓದುವಂತಹ ವಿದ್ಯಾರ್ಥಿಗಳು ಏಷ್ಟು ಕಂಪ್ಯೂಟರ್ ಸೈನ್ಸ್ ಓದಬೇಕು ಅಂತ ಹೇಳುವ ಸಿಲೆಬಸ್ ಅನ್ನು ಅವರು ಮಾಡಬಹುದು. ಪದವಿ ತರಗತಿಯಲ್ಲಿರುವ ಒಟ್ಟು ಶಿಕ್ಷಣ ಕ್ರಮವನ್ನು ನಿರ್ದೇಶಿಸುವ ವಿಧಾನ ಬೇರೆಯವರದು. ಅದರಲ್ಲಿ ಎಷ್ಟು ಭಾಷೆಗಳನ್ನ ಓದಬೇಕು, ಯಾವ ಯಾವ ವಿಚಾರಗಳನ್ನ ಓದಬೇಕು, ಎಷ್ಟು ಪೇಪರ್ ಇರಬೇಕು, ಎಷ್ಟು ಪಾಠ ಇರಬೇಕು ಇತ್ಯಾದಿಗಳನ್ನು ನಿರ್ಧಾರ ಮಾಡುವಂತವರು ಜನರಲ್ ಆಗಿರುವಂತಹ ಒಂದು ಪ್ಯಾಟ್ರನ್ನನ್ನು ಇವಾಲ್ವ್ ಮಾಡಬೇಕಾಗುತ್ತದೆ. ನಾವು ಸ್ವಲ್ಪ ಹೊತ್ತಿಗೆ ಮುಂಚೆ ನಾನು ನನ್ನ ಮಿತ್ರರೊಡನೆ ಮಾತನಾಡುತ್ತಿದ್ದಾಗ ಕೇಳುತ್ತಿದ್ದೆ, ಪದವಿ ತರಗತಿಗಳಲ್ಲಿ ಭಾಷೆಗಳನ್ನು ಓದಬೇಕು ಅಂತ ಹೇಳಿದ್ರೆ, ನಮ್ಮ ಇನ್ನೊಂದು ವಿಶ್ವ ವಿದ್ಯಾಲಯದಲ್ಲಿ ಇಂಗ್ಲಿಶ್ ಮಾತ್ರ ಓದಿದರೆ ಸಾಕು ಕನ್ನಡ ಓದುವುದು ಬೇಡ ಅಂತ ತೀರ್ಮಾನ ಮಾಡಿದಾರೆ. ಈಗ ಲಾ ಐದು ವರ್ಷದ ಕೋರ್ಸ್ ಇದೆ. ಈ ಕೋರ್ಸಿನಲ್ಲಿ ಎಲ್ಲಾ ಪದವಿ ತರಗತಿಳಲ್ಲೂ ಎರಡು ಭಾಷೆ, ಎಲ್ಲಾ ತರಗತಿಗಳಲ್ಲೂ ಓದುತ್ತಾರೆ ಎಂದರೆ ಲಾ ವಿದ್ಯಾರ್ಥಿಗಳು ಯಾಕೆ ಓದಬಾರದು. ಅವರು ಕೂಡಾ ಪಿಯುಸಿ ಓದಿಕೊಂಡು ಬಂದಿರೋರು ತಾನೆ. ಅವರು ಎರಡು ವರ್ಷ ಕನ್ನಡ ಯಾಕೆ ಓದಬಾರದು. ಈಗ ಒಂದು ವರ್ಷ ಓದಿದರೆ ಅದಕ್ಕೆ ಇಂಗ್ಲಿಶ್ ಮಾತ್ರ ಸಾಧ್ಯ. ಮತ್ತೆ ಅಲ್ಲಿನ ಕನ್ನಡ ಅಧ್ಯಾಪಕರು ತಮ್ಮ ಹಕ್ಕುಗಳನ್ನು ಸಾಧಿಸಲು ಹೋರಾಟ ಮಾಡುತ್ತಿದ್ದಾರೆ. ಆಮೇಲೆ ಬಿಸಿಎ ಗಳಲ್ಲಿ ಒಂದು ವರ್ಷ ಓದಿದರೆ ಸಾಕು, ಬಿಬಿಎಮ್ ಗಳಲ್ಲಿ ಒಂದು ವರ್ಷ ಓದಿದರೆ ಸಾಕು, ಎರಡು ಸೆಮಿಸ್ಟರ್ ಓದಿದರೆ ಸಾಕು. ಅಂದರೆ ಪ್ರತಿಯೊಂದು ಕಡೆನೂ ಕೂಡಾ ವಿಷಯ ಪ್ರಧಾನವಾಗಿರುವಂತಹ ಅಧ್ಯಾಪಕರುಗಳು ತಾವು ಪದವಿ ತರಗತಿಗಳ

ಸ್ವರೂಪವನ್ನು ನಿರ್ದರಿಸುವಂತವರು ಅನ್ನೊ ವಿಚಿತ್ರವಾದ ಹಕ್ಕನ್ನು ಸ್ಥಾಪಿಸುತ್ತಿದ್ದಾರೆ. ಪದವಿ ತರಗತಿಗಳಲ್ಲಿ ಪಾಠ ಮಾಡ್ತಾ ಇರತಕ್ಕಂತ ಅಧ್ಯಾಪಕರುಗಳು, ಇಂಗ್ಲಿಶ್ ಅಧ್ಯಾಪಕರಿಗೆ ಸ್ವಲ್ಪ ವಿಚಿತ್ರವಾದ ಸ್ಪೇಸ್ ಇದೆ. ಅವರು ಹೇಗೋ ಅದುನ್ನಾ ಸಮರ್ಥಿಸಿಕೊಳ್ಳುತ್ತಾರೆ. ಆದರೆ ಕನ್ನಡ ಅಧ್ಯಾಪಕರುಗಳು ಮತ್ತು ಇತರೆ ಭಾಷಾ ಅಧ್ಯಾಪಕರುಗಳು ಯಾವಾಗಲೂ ಕೂಡಾ ಅಸಹಾಯಕ ಸ್ಥಿತಿಯಲ್ಲಿದ್ದಾರೆ.

ಇದಕ್ಕೆ ಏನ್ ಕಾರಣ ಅಂತ ಸ್ವಲ್ಪ ಯೋಚನೆ ಮಾಡೋಣ.ಆಡಳಿತಾತ್ಮಕ ಸಮಸ್ಯೆಗಳಿವೆ ಸದ್ಯಕ್ಕೆ ನಾನು ಅದಕ್ಕೆ ತಲೆ ಹಾಕಲ್ಲ. ಅದಕ್ಕಿಂತ ಮೊದಲು ನಾವು ಕೂಡಾ ಕೆಲವು ಪ್ರಶ್ನೆಗಳನ್ನು ಹಾಕಿಕೊಂಡು ಪದವಿ ತರಗತಿಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ, ಕನ್ನಡ ಒಂದು ವಿಷಯವಾಗಿ ಯಾಕೆ ಓದಬೇಕು ಅಂತ ಅನ್ನೋದಕ್ಕೆ ನಾವು ನಮ್ಮದೇ ತರ್ಕಗಳನ್ನು ರೂಪಿಸಿಕೊಂಡಿದ್ದೀವಾ, ಮತ್ತು ಆ ತರ್ಕಗಳು ಅಕ್ರಾಸ್ ದ ಬಾರ್ಡರ್ ಏನಾಗಿವೆ?. ಅಂದರೆ ಎಲ್ಲಾ ಅಧ್ಯಾಪಕರುಗಳೆಲ್ಲ ಅದನ್ನು ಒಪ್ಪಿದ್ದಾರಾ,ಅದರ ತಿಳುವಳಿಕೆಯನ್ನ ಪಡೆದಿದ್ದಾರಾ, ಅಂತ ಆಲೋಚನೆ ಮಾಡಿದ್ರೆ ಆಗ ಉತ್ತರ ಬಹುಶ ಇಲ್ಲಾ ಅಂತ ಅನ್ನಿಸುತ್ತೆ. ಹಲವಾರು ದಶಕಗಳಿಂದ ಕನ್ನಡವನ್ನು ಪದವಿ ತರಗತಿಗಳಲ್ಲಿ ಪಾಠ ಮಾಡಿಕೊಂಡು ಬಂದಿದ್ದಾರೆ, ಹಾಗಾಗಿ ಮುಂದೆಯೂ ಅದನ್ನು ಪಾಠ ಮಾಡಬೇಕು ಅನ್ನೋದು ಒಂದೇ ಕಾರಣವಾಗಿದೆಯೇ ಹೊರತು ಪದವಿ ತರಗತಿಗಳಲ್ಲಿ ಕನ್ನಡವನ್ನು ಯಾಕೆ ಓದಿಸಬೇಕು ಅನ್ನುವ ಪ್ರಶ್ನೆಯನ್ನು ನಾವು ಇನ್ನೂ ಹಾಕಿಕೊಂಡಿಲ್ಲ. ಹಾಗಂತ ನಾವು ಪದವಿ ತರಗತಿಗಳಲ್ಲಿ ಓದಿಸಬೇಕಾಗಿಲ್ಲ ಅನ್ನುವ ನಿರ್ಣಯಕ್ಕೆ ಯಾರೂ ಬರಬೇಕಾಗಿಲ್ಲ. ಓದಿಸಬೇಕು ಅಂತ ಹೇಳೋದಾದ್ರೆ, ಕಲಿಯಬೇಕು ಅಂತ ಹೇಳೋದಾದ್ರೆ, ಕಲಿಯೋದಕ್ಕೆ ಇರೋ ಅಂತ ತರ್ಕ ಏನು,ಯಾಕೆ ಕಲಿಬೇಕು ಅದನ್ನು ನಾವು ಮೊದಲು ನಿಶ್ಚಯ ಮಾಡಬೇಕು. ಆಮೇಲೆ ನಮ್ಮ ಹಕ್ಕನ್ನು ಸ್ಥಾಪಿಸುವುದಕ್ಕೆ ಒಂದು ಸ್ಪೇಸ್ ಕ್ರಿಯೇಟ್ ಆಗುತ್ತೆ. ಈ ಪ್ರಶ್ನೆಯನ್ನು ನಾವು ಹಾಕಿಕೊಳ್ಳದೇ ಇರೋಂತಹುದು ಒಂದು ದೊಡ್ಡ ಸಮಸ್ಯೆ ಅಂತ ನನಗನ್ನಿಸುತ್ತೆ.

ಮೊದಲು ತಾತ್ವಿಕವಾಗಿ ಕೆಲವು ಸಂಗತಿಗಳನ್ನು ನಾನು ನಿಮ್ಮ ಮುಂದಿಡುತ್ತೇನೆ, ಆಮೇಲೆ ಕೆಲವು ಪ್ರಾಯೋಗಿಕ ಸಂಗತಿಗಳನ್ನು ನಿಮ್ಮ ಮುಂದಿಡೋಕೆ ಇಷ್ಟ ಪಡುತ್ತೇನೆ. ನಮಗೆ ಗೊತ್ತಿರುವ ಹಾಗೆ ಒಂದು ನಾಲ್ಕು ಹಂತಗಳಿವೆ ಇದರಲ್ಲಿ.

ಮೊದಲನೆಯದು ಕರಿಕ್ಯುಲಮ್ ಮತ್ತು ಪಠ್ಯ ಕ್ರಮ, ಸಿಲೆಬಸ್ ಅಥವಾ ಪಾಠ್ಯ ವಸ್ತು : ಎರಡನೆಯದು ಬೋಧನೆಯ ವಿಧಾನ ಮತ್ತು ಮೂರನೆಯದು ಕಲಿಕೆಯ ವಿಧಾನ : ಎರಡು ಕಡೆ ಕೂಡಾ ಒಂದೇ ಹಂತದಲ್ಲಿ ಹರಿದಾಡುವಂತವು, ಪಾಠ ಮಾಡೋರು ಅಧ್ಯಾಪಕರಾಗಿರುತ್ತಾರೆ. ಕಲಿಯೋರು ವಿದ್ಯಾರ್ಥಿಗಳಾಗಿರುತ್ತಾರೆ. ಬೋಧನೆ ಮತ್ತು ಕಲಿಕೆಯ ಹಂತ.ನಾಲ್ಕನೆಯದು ಪರೀಕ್ಷಾ ವಿಧಾನ ಅಥವಾ ಮೌಲ್ಯ ಮಾಪನ ವಿಧಾನದ ಹಂತ.ಈ ನಾಲ್ಕು ಹಂತಗಳಲ್ಲಿ ನಾವು ನಮ್ಮ ಆಲೋಚನಾ ಕ್ರಮವನ್ನು ಸ್ಪಷ್ಟಪಡಿಸಿಕೊಳ್ಳಬೇಕಾಗುತ್ತದೆ. ನಾವು ಸಾಮಾನ್ಯವಾಗಿ ಏನ್ ತಿಳಿದುಕೊಂಡಿದ್ದೀವಿ ಅಂದರೆ ಇಲ್ಲಿವರೆಗೂ ಪಠ್ಯ ಕ್ರಮದ ಪ್ರಶ್ನೆಯನ್ನು ಎದುರಿಸಿಯೇ ಇಲ್ಲ. ಅಂದ್ರೆ ನಾವು ಯಾಕೆ ಕಲಿಸಬೇಕು ಅನ್ನೋ ಪ್ರಶ್ನೆಯನ್ನು ಹಾಕೊಳ್ದೆ ಇರೋದ್ರಿಂದ ಏನನ್ನ ಕಲಿಸಬೇಕು,

ಯಾಕೆ, ಅನ್ನುವ ಪ್ರಶ್ನೆಯನ್ನು ನಾವು ಎದುರಿಸಲಿಲ್ಲ. ಏನನ್ನ ಕಲಿಸಬೇಕು ಅಂದ್ರೆ ಪಠ್ಯ ವಿಷಯ ಇದೆಯಲ್ಲ, ಇದರಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳುತ್ತಾ ಬಂದಿದ್ದೀವಿ. ಕಾಲದಿಂದ ಕಾಲಕ್ಕೆ ನೀವು ನೋಡ್ತಾ ಬಂದರೆ ಈ ಪಠ್ಯ ವಸ್ತುವಿನಲ್ಲಿ ಬದಲಾವಣೆಯಾಗ್ತಾ ಬಂದಿದೆ. ಪಠ್ಯ ವಸ್ತುವಿನಲ್ಲಿ ಬದಲಾವಣೆ ಮಾಡೋಕೆ ನಮಗಿದ್ದ ತರ್ಕಗಳು ಎರಡೇ ಎರಡು:ಒಂದೇ ಪಾಠವನ್ನು ಎಷ್ಟು ವರ್ಷ ಪಾಠ ಮಾಡೋದು. ಅಧ್ಯಾಪಕರಿಗೆ ಪಾಠ ಮಾಡಿದ್ದೇ ಮಾಡುವುದು ಬೇಜಾರಾಗುತ್ತದೆ, ಅದರಲ್ಲಿ ಕೆಲವು ಹೊಸ ಪಠ್ಯ ಕ್ರಮವನ್ನು ನಿಗದಿಪಡಿಸೋಣ ಅನ್ನುವುದು ಒಂದು.ಎರಡನೆಯದಾಗಿ ಸ್ವಲ್ಪ ಮಟ್ಟಿಗೆ ಹೆಚ್ಚು ವಿಶ್ವ ವಿದ್ಯಾಲಯಗಳಾದ ಮೇಲೆ ಆ ವಿಶ್ವ ವಿದ್ಯಾಲಯಗಳಲ್ಲಿ ನಿಗದಿಗೊಳ್ಳುವ ಪಠ್ಯ ವಿಷಯಗಳು ಅಥವಾ ಪಠ್ಯ ವಸ್ತುಗಳು ಪ್ರಾದೇಶಿಕವಾದಂತಹ ಪ್ರಾತಿನಿಧ್ಯ ಪಡೆದುಕೊಳ್ಳಬೇಕು ಅಂತ ಅನ್ನುವುದು. ಇದು ಹೆಚ್ಚು ಕಂಡದ್ದು ಉತ್ತರ ಕರ್ನಾಟಕದ ಕಡೆಗಳಲ್ಲಿ. ಮೈಸೂರ್‌ನವರ ಪುಸ್ತಕಗಳನ್ನು ನಾನ್ಯಾಕೆ ಓದಬೇಕು, ಹಳೇ ಮೈಸೂರು ಕವಿಗಳ ಕಥೆ ಕಾದಂಬರಿಗಳನ್ನು ಯಾಕೆ ಓದಬೇಕು, ನಮ್ಮ ಕಾದಂಬರಿಕಾರರಿಲ್ಲವೇ ಅಂತ ಕೇಳಿಕೊಳ್ಳೋಕೆ ಮೊದಲು ಮಾಡಿದ್ರು. ಸೋ ಎಲ್ಲಿಯವರೆಗೂ ಹೋಗಿದೆ ಎಂದರೆ, ಗುಲ್ಬರ್ಗಾ ವಿಶ್ವ ವಿದ್ಯಾಲಯದಲ್ಲಿ ಅಂದರೆ ಹೈದರಾಬಾದ್ ಕರ್ನಾಟಕ ಅಥವಾ ಕಲ್ಯಾಣ ಕರ್ನಾಟಕ. ಆ ಕಲ್ಯಾಣ ಕರ್ನಾಟಕದ ಕಾಲೇಜುಗಳಲ್ಲಿ ಪಠ್ಯ ಪುಸ್ತಕಗಳಾಗಿ ನಿಗದಿಗೊಳ್ಳಬೇಕಾದ ಟೆಕ್ಸ್ಟ್‌ಗಳು ಆಯಾ ಏರಿಯಾದಲ್ಲಿ ಬರೆದವರದ್ದು ಆಗಬೇಕು ಎನ್ನುವುದೊಂದು ಅನ್ ರಿಟನ್ ರೂಲ್ ಫಾಲೋ ಮಾಡ್ತಾ ಇದಾರೆ ಅವರು. ಬೇರೆಯವರು ಯಾರು ಬರ್ದಿರೋದಲ್ಲ, ಆದರೆ ಅವರು ಅಕಾಮಡೇಟ್ ಮಾಡಿಕೊಳ್ಳೋ ಕೆಲವು ಕೃತಿಕಾರರು ಇರ್ತಾರೆ. ಪಂಪನ್ನು ಅಕಾಮಿಡೇಟ್ ಮಾಡಿಕೊಳ್ಳಬಹುದು. ಅವರ ಪ್ರಕಾರ ಪಂಪ ಹೈದರಾಬಾದ್ ಕರ್ನಾಟಕದ ಬರಹಗಾರ. ಯಾಕಂದ್ರೆ ಅವನಲ್ಲಿ ಕರೀಂ ನಗರದಲ್ಲಿದ್ದೊನಾದ್ದರಿಂದ. ಅಂದರೆ ಈ ಪ್ರಾದೇಶಿಕತೆಯ ಚಿಂತೆಯ ಜೊತೆಗೆ ಕೆಲವು ಸಾಮಾಜಿಕ ನ್ಯಾಯದ ಪರಿಕಲ್ಪನೆಗಳು ಒಳಗಡೆ ಬಂದಿವೆ. ಅಂದರೆ ಯಾವುದೇ ಒಂದು ವರ್ಗದ ಅಥವಾ ವರ್ಣದ ಬರಹಗಾರರ ಕೃತಿಗಳು ಹೆಚ್ಚು ಕಾಣಿಸಿಕೊಳ್ಳುತ್ತಿವೆ. ಈ ಹೊಸ ಬರಹಗಾರರು ಸಾಮಾಜಿಕವಾದ ಒಂದು ವೈಡರ್ ಬೇಸ್‌ನಲ್ಲಿ ಬರುತ್ತಾ ಇರೋದರಿಂದಾಗಿ ಅವರ ಬರಹಗಳು, ಅಲ್ಪಸಂಖ್ಯಾತ ಬರಹಗಳು, ಹೆಂಗಸರ ಬರಹಗಳು, ದಲಿತರ ಬರಹಗಳು, ಓದುವುದಕ್ಕೆ ಸಿಗಬೇಕು ಅದಕ್ಕೋಸ್ಕರ ಅವುಗಳನ್ನು ಇನ್‌ಕ್ಲೂಡ್ ಮಾಡಬೇಕು, ಇನ್‌ಕ್ಲೂಸೀವ್ ಆಗಿರಬೇಕು ಅನ್ನುವ ತರ್ಕಗಳಿಂದಾಗಿ ಪಠ್ಯ ವಸ್ತುವನ್ನು ನಾವು ಬದಲಾವಣೆ ಮಾಡಿಕೊಳ್ಳಬೇಕು. ಆದರೆ ಎಲ್ಲಾ ಅಧ್ಯಾಪಕರನ್ನು ಒಂದೆಡೆ ಕೂಡಿಸೋಣ. ನೀವು ಬೀದರ್‌ನಿಂದ ಚಾಮರಾಜನಗರ ಎಲ್ಲ ಕಡೆಯಿಂದ ಬೇಕಾದರೂ ಬಂದಿರಲಿ. ಆ ಅಧ್ಯಾಪಕರುಗಳಿಗೆ ಮೂರು ಹಂತದ ಬಗ್ಗೆ ಹೆಚ್ಚು ಪ್ರಶ್ನೆಗಳಿಲ್ಲ. ಬೋಧನೆ ಮತ್ತು ಕಲಿಕೆ ಹಂತದ ಬಗ್ಗೆ ಪ್ರಶ್ನೆ ಇಲ್ಲಾ. ಯಾಕೆ ಅಂತಂದ್ರೆ ಅಧ್ಯಾಪಕರು ಎಷ್ಟರ ಮಟ್ಟಿಗೆ ಕಾನ್ಫಿಡೆಂಟಾಗಿ ಇದಾರೆ ಅಂದರೆ, ಸಮರ್ಥ ಅಧ್ಯಾಪಕ ಅಥವಾ ಅಧ್ಯಾಪಕಿ ಆಗಿದ್ದರೆಎಂತಾ ಟೆಕ್ಸ್ಟ್‌ನ್ನಾದ್ರು ಕೂಡಾ ಅವರು ನಿರ್ವಹಿಸಬಹುದು ಅನ್ನುವ ನಂಬಿಕೆಯೊಂದು ಹೆಚ್ಚು ಜನರ ಒಳಗಡೆ ಸೇರಿ ಬಿಟ್ಟಿದೆ. ಅಂದರೆ ಟೆಕ್ಸ್ಟ್ ಅನ್ನೋದು ಒಂದು ನೆಪ ಅಷ್ಟೆ. ಒಂದು ಗಂಟೆ ಕಾಲ ನಾವು ಪಾಠ ಮಾಡುವಾಗ ಸರ್ವತಂತ್ರ

ಸ್ವತಂತ್ರ, ಸಾರ್ವಭೌಮತ್ವವನ್ನು ಕ್ಲಾಸ್‌ನ ಒಳಗಡೆ ಅನುಸರಿಸುತ್ತಾ ಇರುತ್ತೀವಿ. ಅಲ್ಲಿ ನಾವಿ ಕೇಳುವ ವಿದ್ಯಾರ್ಥಿಗಳನ್ನು ಮಂತ್ರಮುಗ್ಧರನ್ನಾಗಿ ಮಾಡಬಹುದು, ಆದ್ದರಿಂದ ಒಳ್ಳೆಯ ಅಧ್ಯಾಪಕ ಮತ್ತು ಅಧ್ಯಾಪಕಿಯ ಲಕ್ಷಣ ಏನು ಅಂತಂದ್ರೆ, ಒಳ್ಳೆಯ ಮಾತುಗಾರಿಕೆ. ಯಾರು ಚೆನ್ನಾಗಿ ಮಾತನಾಡಬಲ್ಲರೋ ನಿರರ್ಗಳವಾಗಿ ಮಾತನಾಡಬಲ್ಲರೋ, ಪದಗಳಿಗಾಗಿ ತಡಕಾಡುವುದಿಲ್ಲವೋ, ಹೆಚ್ಚು ಅಲಂಕಾರಿಕ ಶೈಲಿಯಲ್ಲಿ ಮಾತನಾಡಬಲ್ಲರೋ, ಹೆಚ್ಚು ರೆಟ್ರಿಕ್ ಆಗಿ ಮಾತನಾಡಬಲ್ಲರೋ, ಒಪ್ಪಿಸುವ ಧಾಟಿಯಲ್ಲಿ ಮಾತನಾಡಬಲ್ಲರೋ, ಅವರು ಒಳ್ಳೆಯ ಅಧ್ಯಾಪಕರು. ನೀವು ಬಹಳ ಕುತೂಹಲಕರ ಸಂಗತಿಗಳನ್ನು ಗಮನಿಸಬಹುದು, ಕೆಲವು ಬಹಳ ದೊಡ್ಡ ದೊಡ್ಡವರಿದಾರಲ್ಲಾ, ಈಗ ಓದಿ ಸೆಂಟ್ರಲ್ ಕಾಲೇಜಿನಲ್ಲಿ, ಅಲ್ಲಿ ಇಲ್ಲಿ, ಕರ್ನಾಟಕ ಕಾಲೇಜಿನಲ್ಲಿ ಓದಿ ದೊಡ್ಡ ದೊಡ್ಡ ಹುದ್ದೆಗಳಲ್ಲಿ ಇರುವಂತವರ ನೆನಪುಗಳನ್ನು ಬರೆದಿರುತ್ತಾರೆ ಅಥವಾ ಮಾತನಾಡುತ್ತಿರುತ್ತಾರೆ ಕೇಳಿಸಿಕೊಳ್ಳಿ. ಅವರೆಲ್ಲರೂ ನೆನಪು ಮಾಡಿಕೊಳ್ಳುವುದು ಯಾರನ್ನಾ, ಏನನ್ನಾ ಎಂದರೆ, ಅಧ್ಯಾಪಕರ ನೆನಪುಗಳನ್ನು ಮಾಡಿಕೊಳ್ಳುತ್ತಾರೆ. ಅಂದರೆ ನಮಗೆ ವಿ. ಸೀತಾರಾಮಯ್ಯನವರು ಪಾಠ ಮಾಡ್ತಾ ಇದ್ರು ಹೇಗಿತ್ತು ಅಂತಂದ್ರೆ, ನಮಗೆ ಬಿಎಂಶ್ರೀ ಯವರು ಪಾಠ ಮಾಡ್ತಾ ಇದ್ರು ಹೇಗಿತ್ತು ಅಂತಂದ್ರೆ, ನಮಗೆ ರಾಜರತ್ನಂ ಪಾಠ ಮಾಡ್ತಾ ಇದ್ರು ಹೇಗಿತ್ತು ಅಂತಂದರೆ ಎಂದೆಲ್ಲ ಬರೆಯುತ್ತಾರೆ. ನೆಕ್ಸ್ಟ್ ಪ್ರಶ್ನೆ ಹಾಕಿ ಅವರಿಗೆ, ನೀವು ರಾಜರತ್ನಂ ಏನ್ ಪಾಠ ಮಾಡ್ತಾ ಇದ್ರು, ಟೆಕ್ಸ್ಟ್ ಯಾವುದಾಗಿತ್ತು, ಸ್ವಲ್ಪ ಕಷ್ಟ ಪಡ್ತಾರೆ ಆಗ. ಆ ಟೆಕ್ಸ್ಟ್ ಯಾವುದು ನೆನಪು ಮಾಡಿಕೊಳ್ಳುವುದಕ್ಕೆ ಕಷ್ಟ ಪಡುತ್ತಿರುತ್ತಾರೆ. ಎಲ್ಲರೂ ಒಂದು ಲೆಕ್ಕದಲ್ಲಿ ಬಹಳ ಕಷ್ಟ ಪಡ್ತಾರೆ, ಅಂದರೆ ಪ್ರಿಟೆಕ್ಸ್ಟ್ ಮುಖ್ಯ. ಟೆಕ್ಸ್ಟ್ ಅಷ್ಟು ಇಂಪಾರ್ಟೆಂಟ್ ಆಗಿರೋಲ್ಲ. ಎಷ್ಟು ಚೆನ್ನಾಗಿ ಪಾಠ ಮಾಡಿದ್ರು, ನಾನು ಬೇರೆ ತರಗತಿಗಳಿಗೆ ಚಕ್ಕರ್ ಹೊಡೆದು ವಿಸೀ ಕ್ಲಾಸಿಗೆ ಹೋಗಿ ಕುಳಿತುಕೊಳ್ಳುತ್ತಿದ್ದೆ. ಆದ್ದರಿಂದ ವಿಸೀಯವರು ಬಹಳ ಒಳ್ಳೆ ಅಧ್ಯಾಪಕರು. ಅಧ್ಯಾಪಕರು ನಾವಿನ್ನೂ ಆ ಭ್ರಮೆಯ ಅವಸ್ಥೆಯಿಂದ ಹೊರಗಡೆ ಬಂದಿಲ್ಲ. ಟೀಚರ್ ಒಬ್ಬ ಕೇವಲ ಮಧ್ಯವರ್ತಿ ಅಂತ ಮಾತ್ರ ಒಪ್ಪೋಕೆ ಸಿದ್ಧವಾಗಿಲ್ಲ. ಇಡೀ ಕಲಿಕೆಯ ಹಂತದಲ್ಲಿ ಅಧ್ಯಾಪಕರ ಸಾರ್ವಭೌಮತ್ವವನ್ನ ನಾವು ಬಿಟ್ಟುಕೊಡಬೇಕಾಗುತ್ತದೆ. ಬಿಟ್ಟುಕೊಡದೆ ಹೋದರೆ ನಮ್ಮ ಕನ್ನಡ ಕಲಿಕೆಯ ಉದ್ದೇಶಗಳನ್ನ ಪರಿಪೂರ್ಣಗೊಳಿಸುವುದು ಆಗುವುದಿಲ್ಲ. ಇದು ಸ್ವಲ್ಪ ಚುಚ್ಚುತ್ತೆ ನಮಗೆ, ನಮಗಿರುವ ಈ ಸೌಲಭ್ಯವನ್ನು ಬಿಟ್ಟುಕೊಡಬೇಕಲ್ಲ ಅಂತ. ವಾಸ್ತವವಾಗಿ ಯಾರ್‍ಯಾರು ಸಮರ್ಥ ಅಧ್ಯಾಪಕರಾಗಿದ್ದಾರೆ ಅವರು ಅಸಮರ್ಥ ಅಧ್ಯಾಪಕರುಗಳ ಬಗ್ಗೆ ಮಾಡುವ ಟೀಕೆಗಳನ್ನು ಗಮನಿಸಿ, ಒಳ್ಳೆ ಅಧ್ಯಾಪಕರಲ್ಲಾ ಅಂತ ಹೇಳ್ತಾರಲ್ಲ ಅವರ ಬಗ್ಗೆ ಮಾಡುವ ಟೀಕೆಗಳನ್ನು ಗಮನಿಸಿ, ಅವರ ಬಗ್ಗೆ ಮಾಡೋ ಟೀಕೆ ಸಾಮಾನ್ಯವಾಗಿ ಅವರು ಒಳ್ಳೆಯ ಮಾತುಗಾರರಲ್ಲ, ಒಂದು ಗಂಟೆ ವಿದ್ಯಾರ್ಥಿಗಳ ಮುಂದೆ ನಿಂತುಕೊಂಡು ಮಾತನಾಡುವುದಕ್ಕೆ ಬರುವುದಿಲ್ಲ ಅಂದರೆ 'ಇವರು ಇನ್ನೆಂತಾ ಅಧ್ಯಾಪಕರುಗಳು ರೀ' ಅಂತಾರೆ. ಜೂನಿಯರ್ಸ್ ಬಗ್ಗೆ ನಮ್ಮ ಟೀಚರ್ಸ್ ಎಲ್ಲಾ ಸಾಮಾನ್ಯವಾದ ಕಾಮೆಂಟ್‌ಗಳಿವು, ಒಂದು ಗಂಟೆ ವಿದ್ಯಾರ್ಥಿಗಳ ಮುಂದೆ ಮಾತನಾಡುವುದಕ್ಕೆ ಬರುವುದಿಲ್ಲ ಎಂದರೆ ಇವರು ಎಂತಾ ಅಧ್ಯಾಪಕರು. ಅವರಿಗೆ ಒಳ್ಳೆಯ ಲಾಂಗ್ವೇಜ್ ಇಲ್ಲಾ, ಅಂದರೆ ಅವರು ಭಾಷೆಯಲ್ಲಿ ಮಾತನಾಡುತ್ತಿರ

ಬೇಕಾದರೆ ತಮ್ಮ ಪ್ರಾದೇಶಿಕತೆಯನ್ನು ತಮ್ಮ ಸಾಮಾಜಿಕ ಹಿನ್ನೆಲೆಯನ್ನು ಸೂಚಿಸುವ ರೀತಿಯ ಭಾಷೆಯನ್ನು ಬಳಸುತ್ತಾರೆ ಅಂತ ಅನ್ನುವುದು. ನಿರರ್ಗಳವಾಗಿ ಮಾತನಾಡುವುದಿಲ್ಲ ಅನ್ನುವುದು, ಆದ್ದರಿಂದ ಅವರು ಒಳ್ಳೆ ಅಧ್ಯಾಪಕರಾಗೋದಿಕ್ಕೆ ಇರುವ ಅಸಾಮರ್ಥ್ಯವನ್ನ ಸಾಧಿಸುತ್ತಾರೆ. ಅಧ್ಯಾಪಕರಿಗಿರುವ ಈ ಕೊರತೆಗಳಿಂದ ಬಹುಶಃ ಈ ಹಂತದಲ್ಲಿ ತಪ್ಪು ದಾರಿಯಲ್ಲಿ ಯೋಚನೆ ಮಾಡುತ್ತಿದ್ದೀವಿ ಅಂತ ನನಗನ್ನಿಸುತ್ತೆ.

ನಾಲ್ಕನೇ ಹಂತ ಇದೆಯಲ್ಲಾ ಇದರ ಬಗ್ಗೆ ನಾವು ಇದುವರೆಗೂ ಯಾರು ತಲೆ ಕೆಡಿಸಿಕೊಂಡಿಲ್ಲ, ಪರೀಕ್ಷೆಯ ವಿಧಾನದ ಬಗೆಗೆ, ಅದು ಪಠ್ಯ ಕ್ರಮದ ಬಗೆಗಿನ ಒಂದು ಸಂಬಂಧವನ್ನು ಇಟ್ಟುಕೊಂಡಿಲ್ಲ. ಯಾಕೆ ಕಲಿಸಬೇಕು ಅನ್ನೋದನ್ನಾ ನಾವು ಮೊದಲು ನಿರ್ಧಾರ ಮಾಡಿದ್ರೆ, ಹಾಗೆ ಕಲಿಸೋದಿಕ್ಕೆ ಸಾಧ್ಯವಾಗಿದೆಯೇ ಅನ್ನುವುದನ್ನು ಪರೀಕ್ಷಾ ವಿಧಾನದಲ್ಲಿ ನೀವು ಟೆಸ್ಟ್ ಮಾಡಬೇಕಾಗುತ್ತದೆ. ಆಗ ನಾವು ಪರೀಕ್ಷಾ ವಿಧಾನಗಳೆಲ್ಲವನ್ನು ಟೆಸ್ಟ್ ಮಾಡುತ್ತಿರುವುದು ಕೇವಲ ನೆನಪುಗಳನ್ನು ಮಾತ್ರ, ಇದೊಂದು ಡೆಡ್ ಲೋಡ್ ನಾವು ಕ್ಯಾರಿ ಮಾಡ್ತಾ ಇರತಕ್ಕಂತದ್ದು. ನಮ್ಮ ಭಾರತೀಯ ಶಿಕ್ಷಣ ಕ್ರಮದ ದೊಡ್ಡ ತೊಂದರೆ. ಇದು ಒಂದು ಕಾಲಕ್ಕೆ ಯಾವುದೋ ಒಂದು ಓರಲ್ ಟ್ರಡಿಷನ್ ಅಂತ ಇರುತ್ತಿತ್ತು. ಓರಲ್ ಟ್ರಡಿಷನ್ ಕಾಲದಲ್ಲಿ ನೆನಪಿನ ಆಗಾಧವಾದ ಶಕ್ತಿಯ ಮೇಲೆ ಡಿಪೆಂಡ್ ಆಗತಕ್ಕಂತದ್ದು ಸಕಾರಣವಾಗಿತ್ತು. ಯಾಕಂದ್ರೆ ನೀವು ಏನ್ ಕಲಿತಿದೀರಾ ಅಂತ ಟೆಸ್ಟ್ ಮಾಡೋದಿಕ್ಕೆ ನೀವೇನ್ ನೆನಪಿಟ್ಟುಕೊಂಡಿದ್ದೀರಾ ಎನ್ನುವುದು ಒಂದು ಆಧಾರವಾಗಿತ್ತು. ಅದು ಬರಹ ಇಲ್ಲದೇ ಇರುವಂತಹ ಕಾಲದಲ್ಲಿ. ಆದರೆ ಬರಹದ ಆವಿಷ್ಕಾರವಾದ ಮೇಲೆ ನನ್ನ ಪ್ರಕಾರ ನೆನಪಿಗೆ ಹೆಚ್ಚು ಪ್ರಾಧಾನ್ಯವನ್ನಾಗಲಿ, ಪ್ರಾಮಾಣ್ಯವನ್ನಾಗಲಿ, ಕೊಡಬೇಕಾಗಿಲ್ಲ. ಯಾಕಂತಂದ್ರೆ ಇವತ್ತಿಗೂ ಜ್ಞಾನ ತಿಳುವಳಿಕೆ ಅಂತನ್ನೊದು ನೆನಪಿನಲ್ಲಿ ಉಳಿದಿಲ್ಲ. ವೈಯುಕ್ತಿಕ ನೆನಪು ಯಾವಾಗಲೂ ಕೂಡಾ 'ಅನ್ ಡೆಮಾಕ್ರಟಿಕ್'. ವೈಯುಕ್ತಿಕ ನೆನಪಿದೆಯಲ್ಲಾ ಅದು ಪ್ರಜಾಪ್ರಭುತ್ವ ವಿರೋಧಿ. ಯಾಕಂದ್ರೆ ಒಬ್ಬ ವ್ಯಕ್ತಿಗೆ ಅವನ ತುದಿ ಬೆರಳಲ್ಲಿ ಪ್ರತಿಯೊಂದು ಹೇಳಬಲ್ಲ ಅಂತಂದ್ರೆ ಆತನಿಗೆ/ಆಕೆಗೆ ಒಂದು ಹೆಮ್ಮೆಯ ವಿಚಾರವಾದ್ರೂ ಕೂಡಾ ನನ್ನ ಪ್ರಕಾರ ಅದು ನಾವು ಹೆಮ್ಮೆ ಪಡಬೇಕಾದಂತಹ ವಿಚಾರ ಅಲ್ಲಾ. ಯಾಕೆ ಅಂದರೆ ಪ್ರತಿಯೊಬ್ಬರಿಗೂ ಪ್ರತಿಯೊಂದು ವಿಚಾರವೂ ದೊರಕಬೇಕು ಅಂತ ನೀವು ತಿಳಿಯೋದಾದ್ರೆ, ಯಾರೋ ಒಬ್ರಲ್ಲಿ ಅವರಲ್ಲಿ ಕೇಂದ್ರಿಕೃತವಾಗಿದೆ ಅನ್ನೋದು ಪ್ರಜಾಪ್ರಭುತ್ವಕ್ಕೆ ತಕ್ಕ ವಿಚಾರ ಅಲ್ಲ. ಆದ್ದರಿಂದ ನೆನಪನ್ನು ವೃದ್ಧಿಗೊಳಿಸುವ, ನೆನಪನ್ನು ಟೆಸ್ಟ್ ಮಾಡುವಂತಹ ಪರೀಕ್ಷಾ ವಿಧಾನವನ್ನು ನಾವು ಬಿಟ್ಟುಕೊಡಬೇಕಾಗಿದೆ. ಇದು ಕೇವಲ ಕನ್ನಡ ಅಧ್ಯಾಪಕರ ಸಮಸ್ಯೆ ಅಲ್ಲಾ, ಇಡೀ ನಮ್ಮ ಶಿಕ್ಷಣ ಕ್ಷೇತ್ರದ ಸಮಸ್ಯೆ. ನೀವು ಸೈನ್ಸ್ ವಿದ್ಯಾರ್ಥಿಗಳನ್ನು ನೋಡ್ರಿ, ಹಿಸ್ಟರಿ ವಿದ್ಯಾರ್ಥಿಗಳನ್ನು ನೊಡ್ರಿ, ಪ್ರತಿಯೊಂದರಲ್ಲೂ ನಾವು ಟೆಸ್ಟ್ ಮಾಡ್ತಾ ಇರೋದು ನೀವು ಎಷ್ಟು ನೆನಪಿಟ್ಟುಕೊಳ್ಳಬಲ್ಲಿರಿ ಎಂಬುದನ್ನ. ಅಧ್ಯಾಪಕರ ಮಾತುಗಾರಿಕೆಯನ್ನ, ವಿದ್ಯಾರ್ಥಿಗಳ ನೆನಪಿನ ಶಕ್ತಿಯನ್ನ, ಇವೆರಡನೂ ಕೂಡಾ ಶಿಕ್ಷಣ ಕ್ರಮದಲ್ಲಿ ಅಗಾಧವಾಗಿ ನಂಬಿದ್ದೇವೆ. ಇವೆರಡು ಇಕ್ಕಟ್ಟುಗಳಿಂದ ಹೊರ ಬರದೇ ಹೋದರೆ ನಾವು ಪಠ್ಯ ಕ್ರಮದಲ್ಲಿ ಮತ್ತು ಪಠ್ಯ ವಸ್ತುವಿನಲ್ಲಿ ಮಾಡುವಂತಹ ಯಾವುದೇ ಬದಲಾವಣೆಗಳು ಪ್ರಭಾವ ಬೀರಲಾರವು.

ನಾನು ಮುಂದೆ ಬರ್‍ತೀನಿ ಪರೀಕ್ಷಾ ವಿಧಾನದಲ್ಲಿ ಯಾವ ಬದಲಾವಣೆಗಳು ಆಗಬೇಕು ಎಂದು ನೋಡೋಣ , ಕಲಿಕೆ ಮತ್ತು ಬೋಧನೆ ಹಂತದಲ್ಲಿ ಯಾವ ಬದಲಾವಣೆ ಆಗಬೇಕು ಅನ್ನೋದನ್ನಾ ನಾನು ಪ್ರಾಸಂಗಿಕವಾಗಿ ಮಾತನಾಡುತ್ತೇನೆ.— ಈ ನಾಲ್ಕು ಹಂತಗಳಲ್ಲಿ ಏಕ ಕ್ರಮದಲ್ಲಿ ಬದಲಾವಣೆಯಾಗಬೇಕು. ನೀವು ಕೇವಲ ಪಠ್ಯ ವಸ್ತುವಿನಲ್ಲಿ ಬದಲಾವಣೆ ಮಾಡ್ತಾ ಇದೀರಾ ಅಂತಂದ್ರೆ ಆಗೋದಿಲ್ಲಾ ಅದು. ಅದು ಪಠ್ಯ ಕ್ರಮದಲ್ಲಿ ಬದಲಾವಣೆಯಾಗಿರಬೇಕು. ಯಕೆ ಕಲಿಸಬೇಕು ಅನ್ನೋ ಪ್ರಶ್ನೆಗೆ, ಏನನ್ನು ಕಲಿಸಬೇಕು ಅನ್ನೋ ಉತ್ತರ ಇರಬೇಕು. ಏನನ್ನು ಕಲಿಸಬೇಕು ಅನ್ನುವುದು ನಿರ್ಣಯವಾದ್ರೆ, ಕಲಿಕೆ ಬೋಧನೆಯ ವಿಧಾನ ಹೇಗಿರಬೇಕು ಅನ್ನುವ ನಿರ್ಣಯ ಆಗಬೇಕು. ಕಲಿಕೆ ಮತ್ತು ಬೋಧನೆ ಹಂತ ಹೇಗೆ ಅಂತ ನಿರ್ಣಯ ಆದ್ರೆ ಆಗ ಪರೀಕ್ಷೆ ಮಾಡುವ ವಿಧಾನ ಹೇಗೆ ಇರಬೇಕು ಅಂತ ಅನ್ನುವುದು ಕೂಡಾ ನಿರ್ಣಯವಾಗುತ್ತದೆ. ಈಚೆಗೆ ಬೆಂಗಳೂರು ವಿಶ್ವ ವಿದ್ಯಾಲಯದಲ್ಲಿ ಈ ಪಠ್ಯ ಪುಸ್ತಕಗಳನ್ನ ಪರಿಷ್ಕರಿಸಿದ ಎರಡು ವರ್ಷದ ಹಿಂದೆ ಬಹಳ ಸ್ಪಷ್ಟವಾದ ಮಾತುಗಳಲ್ಲಿ ಇದನ್ನಾ ಗಮನಿಸಿದ್ದೆವು. ನೀವು ಇವಾಲ್ಯುಯೇಷನ್ ಪ್ರೊಸೆಸ್ಸನ್ನು ಛೇಂಜ್ ಮಾಡದ ಹೊರತು, ಟೆಕ್ಸ್ಟ್ ಬುಕ್‌ಗಳಲ್ಲಿ ನೀವು ಮಾಡೋ ಛೇಂಜ್‌ಗಳು ಎಫೆಕ್ಟೀವ್ ಆಗೋದಿಲ್ಲ. ನೀವು ಗೈಡ್‌ಗಳನ್ನು ತಪ್ಪಿಸಬೇಕು,ಅವು ಇರಬಾರದು ಅಂತ ಹೇಳುತ್ತೀರಾ ಅಲ್ಲವೇ? ಗೈಡ್‌ಗಳನ್ನು ನಿರಾಕರಿಸುವಂತಾಗಬೇಕು ಅವು ನಿರುಪಯುಕ್ತವಾಗುವಂತೆ ಮಾಡಬೇಕು ಅಂತ ಯಾಕೆ ಅಧ್ಯಾಪಕರು ಕೂಗುತ್ತಾರೆ ಅಂದ್ರೆ, ಟೀಚರ್‍ಸ್‌ನ ಇಂಪಾರ್ಟೆನ್ಸ್ ಹೋಗುತ್ತದೆ ಅಂತ. ತರಗತಿಗಳಲ್ಲಿ ನಾವು ಏನು ಹೇಳುತ್ತೀವಿ ಅನ್ನೋದು ಇಂಪಾರ್ಟೆಂಟ್ ಅಲ್ಲಾ, ಗೈಡ್‌ನಲ್ಲಿ ಪರೀಕ್ಷೆಗೆ ಬೇಕಾದ ಉತ್ತರಗಳು ಸಿಗುತ್ತವೆ ಅದನ್ನು ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಬರೆಯುತ್ತಾರೆ ಅಂತ. ನೀವು ಪರೀಕ್ಷಾ ವಿಧಾನವನ್ನು ಇರುವಹಾಗೆಯೇ ಇಂಟ್ಯಾಕ್ಟ್ ಆಗಿ ಇಟ್ಟುಕೊಂಡಿರುವುದರಿಂದ, ಮಾರುಕಟ್ಟೆಗಳಲ್ಲಿ ಬರುವ ಗೈಡ್‌ಗಳನ್ನು ನಿರಾಕರಿಸುವುದಕ್ಕೆ ಬರುವುದಿಲ್ಲ. ಮತ್ತೆ ಇವತ್ತಿನ ಶಿಕ್ಷಣ ಕ್ರಮದಲ್ಲಿ ನಾವು ಒಳಗೊಳ್ಳುವ ನೆಲೆಯ ಪರವಾಗಿರಬೇಕಾಗಿದೆ. ಯಾಕಂದ್ರೆ ನಮ್ಮ ಶಿಕ್ಷಣ ಕ್ರಮ ಹೆಚ್ಚು ಉಪಯುಕ್ತ ಆಗಬೇಕು ಅಂದ್ರೆ ಯಾವ ವಿದ್ಯಾರ್ಥಿಗಳು ಕಾಲೇಜಿಗೆ ಬರ್‍ತಾ ಇಲ್ಲವೋ, ಬರೋಕಾಗ್ತಾ ಇಲ್ಲವೋ ಅವರಲ್ಲಿ ಹೆಚ್ಚು ಜನ ಇಲ್ಲಿಗೆ ಬರುವ ಹಾಗೆ ಆಗಬೇಕು.ಈವರೆಗೆ ಉನ್ನತ ಶಿಕ್ಷಣ ಶೇಕಡಾ 6 ಜನಕ್ಕೆ ಮಾತ್ರ ಲಭ್ಯವಾಗಿದೆ. ಕಲಿಕೆಯ ಸಾಧ್ಯತೆ ಇರುವುದು 21 ಪರ್ಸೆಂಟ್‌ಗೆ.ಅಲ್ಲಿಗೆ ತಗೋಂಡು ಹೋಗಬೇಕಾಗಿದೆ ಅದನ್ನಾ, ಅದು ಅಂತರರಾಷ್ಟ್ರೀಯ ಮಟ್ಟದ ಯಾವುದೊ ಒಂದು ಲೆವಲ್‌ಗೆ ಹೋಗಬೇಕಾಗಿದೆ. 21 ಕೂಡಾ ಬಹಳ ಕಡಿಮೆ ಹಂತದ ಎಸ್ಟಿಮೇಷನ್ ಅಂತ ಹೇಳ್ತಾ ಇದ್ದೀನಿ ನಾನು. 11ನೇ ಪ್ಲಾನ್‌ನ ಕೊನೆಗೆ ಭಾರತ ಸರ್ಕಾರ 15 ಪರ್ಸೆಂಟ್‌ನ ಹೇಳೊಕೆ ಪ್ರಯತ್ನ ಪಡುತ್ತಿದೆ. ಅಂತರರಾಷ್ಟ್ರೀಯ ಮಟ್ಟದ ಮಾತು ದೂರ ಉಳೀತು. ಆದರೆ ಭಾರತದಲ್ಲಿ ಇವತ್ತಿಗೂ ಲಭ್ಯವಾಗಿರತಕ್ಕಂತದ್ದು ಕೇವಲ 6 ಪರ್ಸೆಂಟ್. ನೀವು ಎಷ್ಟೇ ಕಾಲೇಜುಗಳನ್ನು ತೆರೆಯಿರಿ, ಎಷ್ಟೇ ಪದವಿ ಅಧ್ಯಾಪಕರುಗಳನ್ನು ನೇಮಿಸಿಕೊಳ್ಳಿ 6 ರಿಂದ 7,8, ಪರ್ಸೆಂಟ್ ವಿದ್ಯಾರ್ಥಿಗಳನ್ನು ಒಳಗಡೆ ತೆಗೆದುಕೊಳ್ಳುವುದಕ್ಕೆ ಸಾಧ್ಯ ಆಗುತ್ತಿಲ್ಲ. ಹಾಗಾದ್ರೆ ಉಳಿದವರು ಏನ್ ಮಾಡಬೇಕಾಗುತ್ತದೆ. ಆಗ ವಿದ್ಯಾರ್ಥಿಗಳು ಹೆಚ್ಚು ಡಿಪೆಂಡ್ ಆಗೋದು ಯಾವುದರ

ಮೇಲೆ ಅಂದ್ರೆ ಸಿಮ್‌ಗಳ ಮೇಲೆ. ಸಿಮ್ ಅಂದ್ರೆ ಸಿಮ್ ಕಾರ್ಡ್ ಅಲ್ಲಾ ಅದು ಸೆಲ್ಫ್ ಇನಸ್ಟ್ರಕ್ಶನ್ ಮೇಟಿರಿಯಲ್ ಅಂತ ಯಾವದನ್ನ ಓಪನ್ ಯುನಿವರ್ಸಿಟಿಯಂತ ಕರೆಯುತ್ತಾರೆ ಅದರ ಮೇಲೆ ಡಿಪೆಂಡ್ ಆಗುತ್ತಾರೆ. ಹಾಗಾದರೆ ಅಧ್ಯಾಪಕರಿಲ್ಲ ಅಲ್ಲಿ, ಮಧ್ಯವರ್ತಿ ಆಗಲು ಅಧ್ಯಾಪಕರಿಗೆ 3ನೇ ಹಂತ ಇಲ್ವೇ ಇಲ್ಲಾ ಅಲ್ಲಿ. ಕಲಿಕೆ ಇದೆ ಬೋಧನೆ ಇಲ್ಲಾ, ಉನ್ನತ ಶಿಕ್ಷಣದಲ್ಲಿ ನಾವು ಅದನ್ನು ಅಕಾಮಡೆಟ್ ಮಾಡಬೇಕಾಗುತ್ತದೆ. ಕುವೆಂಪು ವಿಶ್ವ ವಿದ್ಯಾಲಯ ದೂರ ಶಿಕ್ಷಣ ಕೇಂದ್ರವನ್ನು ತೆರೆದಿದೆ, ಅಲ್ಲಿ ಕನ್ನಡ ಪಠ್ಯ ಪುಸ್ತಕಗಳನ್ನು ಪದವಿ ತರಗತಿಗಳಲ್ಲಿ ಆಫರ್ ಮಾಡ್ತಾ ಇದಾರೆ. ವಿದ್ಯಾರ್ಥಿಗಳು ಅದನ್ನಾ ಓದುತ್ತಾ ಇದ್ದಾರೆ. ಹಾಗಾದ್ರೆ ನಿಮ್ಮ ಪಠ್ಯ ಪುಸ್ತಕಗಳು ಯಾವ ರೀತಿ ಇರಬೇಕು, ಯಾವ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡಿರಬೇಕು, ಕೇವಲ ತರಗತಿಗಳಿಗೆ ಬರುವ ವಿದ್ಯಾರ್ಥಿಗಳನ್ನು ನೆನಪಿಟ್ಟುಕೊಂಡಿರಬೇಕಾ ಅಥವಾ ನೀವು ಇನ್‌ಕ್ಲೂಡ್ ಮಾಡಬೇಕು ಅಂತ ಪ್ರಯತ್ನಪಡುತ್ತಿದೀರಲ್ಲಾ ಹೆಚ್ಚಿನ 6–7 ಪರ್ಸೆಂಟ್ ಜನರು, ಕೊನೆ ಪಕ್ಷ ಆ ವಿದ್ಯಾರ್ಥಿಗಳನ್ನು ಗಮನಿದಲ್ಲಿಟ್ಟುಕೊಂಡಿರಬೇಕಾ? ಈ ಪ್ರಶ್ನೆಯನ್ನು ಕೂಡಾ ನಾವು ಈ ಪಠ್ಯ ಪುಸ್ತಕಗಳನ್ನು ಪರಿಷ್ಕರಣೆ ಮಾಡುವಾಗ ಗಮನದಲ್ಲಿಟ್ಟುಕೊಂಡಿರಬೇಕು.

ನಮ್ಮ ಟೆಕ್ಸ್ಟ್ ಬುಕ್‌ಗಳು ಹೇಗಿರಬೇಕು ಅಂತಂದ್ರೆ ಅದು ಅಧ್ಯಾಪಕರನ್ನು ನಿರಾಕರಿಸಬೇಕು ಅಂತ ಅಲ್ಲಾ, ಅಧ್ಯಾಪಕರನ್ನು ಒಳಗೊಂಡರು ಕೂಡಾ ಸ್ವಲ್ಪ ಮಟ್ಟಿಗೆ ಓದುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ತಮಗೆ ತಾವೇ ಕಲಿತುಕೊಳ್ಳುವ ಒಂದು ಪ್ರೊಸೆಸ್‌ಗೆ ನೆರವು ನೀಡುವ ಹಾಗಿರಬೇಕಾಗುತ್ತದೆ.. ನಾನಿದನ್ನಾ ದೊಡ್ಡ ಕ್ಯಾನ್ವಾಸ್ ಹಿಂದೆ ಮಾತನಾಡುತ್ತಿದ್ದೇನೆ, ನಮ್ಮ ಗಮನದಲ್ಲಿ ಉನ್ನತ ಶಿಕ್ಷಣ ಅದರ ವಿಸ್ತಾರ ಪ್ರಜಾಪ್ರಭುತ್ವದ ಮೌಲ್ಯಗಳು ಇವುನ್ನೆಲ್ಲಾ ನಾವು ಗಮನದಲ್ಲಿಟ್ಟುಕೊಂಡು ಮಾತನಾಡಬೇಕಾಗುತ್ತದೆ. ಕೇವಲ ಕನ್ನಡ ಅಧ್ಯಾಪಕರು, ಕೇವಲ ಕನ್ನಡ ಭಾಷೆ ಸಮಸ್ಯೆಯನ್ನಾಗಿ ಈ ಪ್ರಶ್ನೆಯನ್ನಾ ಎದುರಿಸುವುದಕ್ಕೆ ಬರೋದಿಲ್ಲ. ಅವಾಗ ನಾವು ಸಣ್ಣ ಪುಟ್ಟ ಕಾಸ್ಮೆಟಿಕ್ ಛೇಂಜ್‌ಗಳಿಗೆ ನಾವು ಸಿದ್ಧರಾಗುತ್ತೇವೆ. ಆ ಟೆಕ್ಸ್ಟ್ ಬುಕ್ ಚೆನ್ನಾಗಿಲ್ಲ, ಈ ಟೆಕ್ಸ್ಟ್ ಬುಕ್ ಮಾಡೋಣ, ಆ ಪದ್ಯ ಬೇಡ ಈ ಪದ್ಯ ಮಾತ್ರ ಸಾಕು, ಆ ಹಂತಕ್ಕೆ ಮಾತ್ರ ಬಂದಿದೀವಿ ನಾವು.

ಹಾಗಾದ್ರೆ ಮೊದಲನೆ ಪ್ರಶ್ನೆಯನ್ನು ತೆಗೆದುಕೊಳ್ಳೋಣ, ಯಾಕೆ ಕನ್ನಡವನ್ನು ಕಲಿಸಬೇಕು, ಪದವಿ ತರಗತಿಗಳಲ್ಲಿ ಕನ್ನಡವನ್ನು ಯಾಕೆ ಕಲಿಸಬೇಕು, ಪದವಿ ತರಗತಿಗಳು ಬರೋ ಹೊತ್ತಿಗೆ 12 ವರ್ಷ ಭಾಷೆಯನ್ನು ಕಲಿತಿರುತ್ತಾರೆ ಅವರು. ಹಾಗೇ ಕಲಿತಿರುವವರಿಗೆ ಪದವಿ ತರಗತಿಗಳಲ್ಲಿ ಕೊಡುತ್ತಿರುವಂತ ವಿಶೇಷತೆಗಳೇನು. ಏನನ್ನು ಹೊಸದಾಗಿ ಅವರಲ್ಲಿ ಬೆಳೆಸೋದಿಕ್ಕೆ ಪ್ರಯತ್ನ ಪಡುತ್ತಿದ್ದೀವಿ, ಆದ್ದರಿಂದ ಇದುನ್ನಾ ನಾವು ಡಿಫೈನ್ ಮಾಡಿಕೊಳ್ಳಬೇಕು. 10ನೇ ತರಗತಿವರೆಗಿನ ಅಧ್ಯಾಪಕರು ಏನನ್ನಾ ತಮ್ಮ ಪಠ್ಯ ಕ್ರಮದಲ್ಲಿ ಉದ್ದೇಶ ಇಟ್ಟುಕೊಂಡಿರುತ್ತಾರೆ, ಕಲಿಕೆ ಅಥವಾ ಬೋಧನೆಯನ್ನು ಉದ್ದೇಶ ಇಟ್ಟುಕೊಂಡಿರುತ್ತಾರೆ, ಪಿಯುಸಿಯಲ್ಲೇನು ಗಮನದಲ್ಲಿಟ್ಟುಕೊಂಡಿರುತ್ತಾರೆ, ಅದನ್ನೇ ನಾವು ಕಂಟಿನ್ಯೂ ಮಾಡ್ತಾ ಇದ್ದೀವಾ? ಅಥವಾ ಇನ್ನೇನಾದರೂ ಹೆಚ್ಚಿನ ಸಂಗತಿಗಳನ್ನು

ನಾವು ಅದರಲ್ಲಿ ಇನ್‌ಕ್ಲೂಡ್ ಮಾಡಿಕೊಳ್ಳುತ್ತಾ ಇದ್ದೀವಾ. ಸಾಮಾನ್ಯವಾಗಿ ಕನ್ನಡ ಅಧ್ಯಾಪಕರಲ್ಲಿ ಒಂದು ನಂಬಿಕೆಯಿದೆ ಆ ನಂಬಿಕೆ ತಪ್ಪಲ್ಲ, ಹಾಗಾಗಿ ಅದು ಡಿಫೈನ್ ಆಗಿಲ್ಲ. ನಂಬಿಕೆ ಏನು ಅಂತ ಅಂದರೆ ಸಾಂಸ್ಕೃತಿಕವಾದ ಚೌಕಟ್ಟನ್ನು ವಿದ್ಯಾರ್ಥಿಗಳಿಗೆ ಒದಗಿಸುವುದು, ಅವರು ಯಾವುದೇ ವಿಷಯದ ವಿದ್ಯಾರ್ಥಿಗಳಾಗಿರಲಿ, ಕಂಪ್ಯೂಟರ್ ಸೈನ್ಸ್ ಓದುತ್ತಿರಲಿ, ಕಾಮರ್ಸ್ ಓದುತ್ತಿರಲಿ, ಸೈನ್ಸ್ ಓದುತ್ತಿರಲಿ, ಹೋಟೆಲ್ ಮ್ಯಾನೇಜ್‌ಮೆಂಟ್ ಓದುತ್ತಿರಲಿ, ಏನಾದರೂ ಓದುತ್ತಿರಲಿ, ಅವರ ವಯೋಮಾನದ ದೃಷ್ಟಿಯಿಂದ ಅವರಿಗೊಂದು ಸಾಂಸ್ಕೃತಿಕವಾದ ಹಿನ್ನೆಲೆಯನ್ನು ಸೃಷ್ಟಿಸಿ ಕೊಡಬೇಕು. ಸಾಂಸ್ಕೃತಿಕವಾದ ಹಿನ್ನೆಲೆಯನ್ನು ರೂಪಿಸುವ ಜವಾಬ್ದಾರಿಯನ್ನು ಕೊಡಬೇಕು, ಹಾಗೇ ಮಾಡುವುದಕ್ಕೆ ನಿಮಗಿರುವ ಮಾರ್ಗ ಏನಂದರೆ, ಅದನ್ನಾ ಭಾಷೆಯ ಅಧ್ಯಯನದ ಮುಖಾಂತರ ಮಾಡಿಕೊಳ್ಳಬೇಕು. ಸಾಂಸ್ಕೃತಿಕ ಚೌಕಟ್ಟಿಗೆ ಅವರನ್ನು ತೆರೆಯುವ ಹೊಣೆಗಾರಿಕೆಯನ್ನ ನಾವು ಅವರ ವಯೋಮಾನದ ದೃಷ್ಟಿಯಿಂದ ಚಿಕ್ಕ ವಯಸ್ಸಿನಲ್ಲಿ ಮಾಡೋಕೆ ಆಗಿರುವುದಿಲ್ಲ. ಈ ವಯೋಮಾನದಲ್ಲಿ ಅದನ್ನು ಮಾಡಬಹುದು, ಹೆಚ್ಚು ಕಡಿಮೆ ನಮ್ಮ ಪ್ರಕಾರ 18 ರಿಂದ 21 ಅಂತ ಇಟ್ಟುಕೊಳ್ಳೋಣ. ಇವತ್ತಿನ ಶಿಕ್ಷಣ ಕ್ರಮದಲ್ಲಿ ಪದವಿ ತರಗತಿಗಳ ವಯೋಮಾನ 18 ರಿಂರ 21 ಅಂದುಕೊಳ್ಳೋಣ, ಆ ಬಗೆಯ ಚೌಕಟ್ಟಿಗೆ ಸಿದ್ಧಪಡಿಸುವುದಕ್ಕೆ ಸರಿಯಾದ ವಯೋಮಾನ, ಅದರಿಂದಾಗಿ ನಾವು ಅವರನ್ನು ಆ ಚೌಕಟ್ಟಿಗೆ ತೆರೆಯಬೇಕಾಗುತ್ತದೆ. ಹಾಗೇ ತೆರೆಯುವದಕ್ಕೆ ನಿಮಗೆ ಹತ್ತಾರು ಮಾರ್ಗಗಳಿರಬಹುದು ನಿಮಗೆ ಈ ಸಮಾಜದಲ್ಲಿ. ಆದರೆ ಭಾಷೆಯ ಅಧ್ಯಾಪಕರಾಗಿ ನೀವು ಭಾಷಿಕವಾದ ಸಾಮಗ್ರಿಗಳ ಮುಖಾಂತರವೇ ಅವರನ್ನು ಆ ಬಗೆಯ ಚಿಂತನಾ ಕ್ರಮಕ್ಕೆ ಕರೆದುಕೊಂಡು ಹೋಗಬೇಕಾಗುತ್ತದೆ. ಇದು ಒಂದು ಎಂಡ್ ಪ್ರಾಡಕ್ಟ್ ಅಲ್ಲಾ. ಅಂದ್ರೆ ಸಾಂಸ್ಕೃತಿಕ ಚಿಂತನೆಗಳ ಒಂದು ಸಿದ್ಧ ವಸ್ತುಗಳ ಪ್ಯಾಕೇಜಿನ ನೀವು ನಿಮ್ಮಿಂದ ವಿದ್ಯಾರ್ಥಿಗಳಿಗೆ ಟ್ರಾನ್ಸ್‌ಫಾರ್ ಮಾಡುವುದಕ್ಕೆ ಆಗುವುದಿಲ್ಲ. ತುಂಬಾ ಜನ ಅಧ್ಯಾಪಕರು ಈಗಲೂ ಹಾಗೇ ತಿಳಿದುಕೊಂಡಿರುತ್ತಾರೆ, ಅಂದರೆ ತಮ್ಮಲ್ಲಿ ಈಗಾಗಲೇ ಪೂರ್ವ ಸಿದ್ಧವಾದ ಸಾಂಸ್ಕೃತಿಕವಾದ ಚಿಂತನೆಗಳಿವೆ, ಇವುಗಳನ್ನು ನಾನೇನಿದ್ದರು ಕೂಡಾ ವಿದ್ಯಾರ್ಥಿಗಳಿಗೆ ರವಾನೆ ಮಾಡಬೇಕು ಅಷ್ಟೆ ಆ ರವಾನೆ ಮಾಡೋ ಕೆಲಸವನ್ನು ಮಾಡುತ್ತೀವಿ, ನೋ. ಅದರ ಬದಲು ಅದನ್ನೊಂದು ಪ್ರಾಸೆಸ್ ಆಗಿ ಪರಿಗಣಿಸಬೇಕು, ಅಂದ್ರೆ ಪ್ರಕ್ರಿಯೆಯನ್ನಾಗಿ ಪರಿಗಣಿಸಬೇಕು, ಅಂದ್ರೆ ಭಾಷೆಯನ್ನು ನೆಪವಾಗಿಟ್ಟುಕೊಂಡು ಭಾಷಿಕ ಅಧ್ಯಯನವನ್ನು ಮಾಡ್ತಾ ಇರುವಾಗ ಅಥವಾ ಭಾಷಿಕ ಪಠ್ಯಗಳನ್ನು ನಾವು ಆಧಾರವಾಗಿಟ್ಟುಕೊಂಡು ನಾವು ಪಾಠ ಮಾಡ್ತಾ ಇದ್ರೆ, ಎರಡು ವರ್ಷದಲ್ಲಿ ಏನ್ ಮಾಡ್ತಾ ಇರುತ್ತೀವಿ ಅಂತಂದ್ರೆ ವಿದ್ಯಾರ್ಥಿಗಳನ್ನ ಒಂದು ಸಾಂಸ್ಕೃತಿಕ ಚೌಕಟ್ಟಿಗೆ ಅವರು ತೆರೆದುಕೊಳ್ಳುವ ಹಾಗೆ ಮಾಡ್ತಾ ಇರುತ್ತೀವಿ, ಮತ್ತು ಅಲ್ಲಿ ಅವರು ಸ್ವತಂತ್ರವಾಗಿ ಚಿಂತನೆ ಮಾಡುವುದಕ್ಕೆ ಅನುಕೂಲಕರವಾದ ಒಂದು ಪ್ರಕ್ರಿಯೆಗೆ ತೆರೆದಿರುತ್ತೇವೆ. ನಾನು ಮತ್ತೇ ಇದನ್ನಾ ಸ್ಪಷ್ಟ ಪಡಿಸುತ್ತೀನಿ, ಸಿದ್ಧ ವಸ್ತುಗಳನ್ನು ಅವರಿಗೆ ರವಾನೆ ಮಾಡುವುದಿಲ್ಲ, ಚಿಂತನಾ ಕ್ರಮಕ್ಕೆ ಅವರನ್ನು ತೆರೆದುಕೊಳ್ಳುವ ಹಾಗೆ ಮಾಡುತ್ತಾ ಇರುತ್ತೀವಿ. ಸಾಂಸ್ಕೃತಿಕ ಅಂತ ಅಂದಾಗ ಹಲವಾರು ವಿಚಾರಗಳು ಬರುತ್ತವೆ. ನೀವದನ್ನಾ ಮುಂದೆ ಗುಂಪು ಚರ್ಚೆಗಳಲ್ಲಿ ತೆಗೆದುಕೊಂಡು ನೋಡಬಹುದು

ಅದೆಲ್ಲವನ್ನು. ಏನೆಲ್ಲಾ ಬರುತ್ತದೆ ಅದರೊಳಗಡೆ ಅಂತ. ಇಲ್ಲಿ ಇನ್ನೊಂದು ಪಾಯಿಂಟ್ ಇದೆ. ಏನು ಅಂತಂದ್ರೆ ಈ ಸಾಂಸ್ಕೃತಿಕ ಚೌಕಟ್ಟಿಗೆ ತೆರೆದುಕೊಳ್ಳುವ ಪ್ರಕ್ರಿಯೆ ಈ ವಯೋಮಾನದ ವಿದ್ಯಾರ್ಥಿಗಳಿಗೆ ತರಗತಿಗಳಲ್ಲಿ ಮಾತ್ರ ನಡೆಯುತ್ತಿರುವುದಿಲ್ಲ. ನಾನು 20–30 ವರ್ಷಗಳ ಹಿಂದಿನ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡರೆ ಅವರು ಎದುರಿಸುತ್ತಿದ್ದಂತ ಚಾಲೆಂಜ್ ಈಗಿನ ವಿದ್ಯಾರ್ಥಿಗಳು ಎದುರಿಸುತ್ತಿರುವಂತಹ ಚಾಲೆಂಜ್‌ಗಳಿಗೆ ವ್ಯತ್ಯಾಸ ಇದೆ. ಕೇವಲ ಕ್ವಾಂಟಿಟೇಟೀವ್ ಮಾತ್ರ ಅಲ್ಲ, ಕ್ವಾಲಿಟೇಟೀವಾಗಿ ಕೂಡಾ ಛೇಂಜ್ ಆಗಿದೆ. ಯಾಕಂದ್ರೆ ಇವತ್ತಿಗೂ ಅವರು ಎಕ್ಸ್‌ಪೋಸ್ ಆಗುತ್ತಾ ಇರುವ ಬೇರೆ ಬೇರೆ ಮಾಧ್ಯಮಗಳು ಯಾವ ತರ ಇವೆ ಎಂದರೆ ಅವು ಒಂದು ರೀತಿಯಲ್ಲಿ ಅವರನ್ನು ಸಾಂಸ್ಕೃತಿಕ ಚಿಂತನೆಗಳಿಗೆ ಅಥವಾ ಪ್ಯಾಕೇಜುಗಳಿಗೆ ಎಳೆದುಕೊಂಡು ಹೋಗುತ್ತಿವೆ. ಉದಾಹರಣೆಗೆ ಟೆಲಿವಿಷನ್ ಇರಬಹುದು, ಅಥವಾ ಇಂಟರ್‌ನೆಟ್ ಇರಬಹುದು, ನಮ್ಮ ತರಗತಿಗಳಿಗೆ ಬರುವ ವಿದ್ಯಾರ್ಥಿಗಳು ಅಲ್ಲೂ ಕೂಡಾ ಒಂದು ಬಗೆಯ ಅನ್‌ಸ್ಲಾಟಿಗೆ ಒಳಗಾಗುತ್ತಿರುತ್ತಾರೆ. ಆ ಅನ್‌ಸ್ಲಾಟಿಗೆ ಒಳಗಾಗುವಂತಹ ವಿದ್ಯಾರ್ಥಿಗಳನ್ನು ನೀವು ತರಗತಿಗಳ ಚೌಕಟ್ಟಿನಲ್ಲಿ ಒಂದು ಭಾಷಿಕ ಪಠ್ಯಗಳ ಮುಖಾಂತರ ಪರ್ಯಾಯವಾದ ಚಿಂತನಾ ಕ್ರಮಕ್ಕೆ ಗುರಿ ಪಡಿಸುವ ಒಂದು ಹೊಸ ಹೊಣೆಗಾರಿಕೆಯನ್ನು 21ನೆ ಶತಮಾನದ ಈ ದಶಕಗಳಲ್ಲಿ ಅಧ್ಯಾಪಕರುಗಳು ಎದುರಿಸುತ್ತಾ ಬರ್ತಿದ್ದಾರೆ. ಇದನ್ನಾ ನಿಮಗೆ ಪಾಠ ಮಾಡಿದ ಅಧ್ಯಾಪಕರು ಎದುರಿಸುತ್ತಿರಲಿಲ್ಲ. ಯಾಕಂದ್ರೆ ಆ ವಿದ್ಯಾರ್ಥಿಗಳಿಗೆ ಈ ಬಗೆಯ ಸಮಸ್ಯೆಗಳಿರಲಿಲ್ಲ, ನಮಗೂ ಇರಲಿಲ್ಲ, ನನಗೆ ಪಾಠ ಮಾಡುತ್ತಿರುವಾಗ, ನಾನು ತರಗತಿಗಳಲ್ಲಿ ಇರುವಾಗ ನನಗಿದ್ದ ಏಕೈಕ ಮಾಧ್ಯಮ ರೇಡಿಯೋ ಮಾತ್ರ,ಬಿಟ್ಟರೆ ಪತ್ರಿಕೆಗಳು. ಅದು ದುರ್ಲಬವಾಗಿತ್ತು. ರೇಡಿಯೋವನ್ನು ಕೂಡಾ ಸಾರ್ವಜನಿಕವಾಗಿ ಎಲ್ಲೋ ಕೇಳುತ್ತಿದ್ದೆವೆ ಹೊರತು ಮನೆಗಳಲ್ಲೂ ಕೂಡಾ ರೇಡಿಯೋ ಇಲ್ಲದ ಕಾಲ ಅದು. ಪತ್ರಿಕೆಗಳು ಕೂಡಾ ಲಕ್ಷುರಿಯಾಗಿತ್ತು, ಯಾವುದೋ ಒಂದು ಪಬ್ಲಿಕ್ ರೀಡಿಂಗ್ ರೂಮ್‌ನಲ್ಲಿ ಓದಬೇಕಾದಂತಹ ಒಂದು ವಸ್ತುವಾಗಿತ್ತು. ಆದರೆ ನಾವು ಅಥವಾ ನಮ್ಮ ಅನಂತರದಲ್ಲಿ ನೀವು ಎದುರಿಸುತ್ತಾ ಇರುವಂತಹ ಇಕ್ಕಟ್ಟುಗಳಿಗಿಂತಲೂ ಭಿನ್ನವಾದ ಇಕ್ಕಟ್ಟುಗಳನ್ನು ಇವತ್ತಿನ ಪದವಿ ತರಗತಿಗಳಲ್ಲಿ ಬರೋ ವಿದ್ಯಾರ್ಥಿಗಳು ಎದುರಿಸುತ್ತಿದ್ದಾರೆ. ಆದರೆ ನಮ್ಮ ಪಠ್ಯ ಕ್ರಮ ಈ ಹೊಸ ಚಾಲೆಂಜನ್ನು ಕೂಡಾ ಎದುರಿಸುತ್ತಿದೆ. ಹಾಗಾಗಿ ಇವೆಲ್ಲ ಮೊದಲನೆಯದಾಗಿ ಸಂಸ್ಕೃತಿಗೆ ಸಂಬಂಧಪಟ್ಟ ಸಮಸ್ಯೆಗಳು.

ಎರಡನೆಯದು ತಿಳಿವಿಗೆ ಸಂಬಂಧಪಟ್ಟದ್ದು, ಇದು ಬಹಳ ಮುಖ್ಯವಾದದ್ದು. ಅದು ಕನ್ನಡಕ್ಕೆ ಸಂಬಂಧಪಟ್ಟಂತೆ ಮಾತನಾಡುತ್ತಿರುವುದು ನಾನು, ಯಾವುದೇ ಬಗೆಯ ತಿಳುವಳಿಕೆಯಾಗಲಿ ಆ ತಿಳುವಳಿಕೆಗೆ ನನ್ನ ಭಾಷೆಯ ಮೂಲಕ ತಿಳಿದುಕೊಳ್ಳುವುದಕ್ಕೆ ಮತ್ತು ನನ್ನ ಭಾಷೆಯ ಮೂಲಕ ಹೇಳುವುದಕ್ಕೆ ಕೊಳ್ಳುವುದಕ್ಕೆ ಸಾಧ್ಯವಿದೆ ಅನ್ನುವ ಒಂದು ನಂಬಿಕೆ ವಿದ್ಯಾರ್ಥಿಗಳಲ್ಲಿ ಮೂಡಬೇಕು. ಇದು ಇನ್ನೊಂದು ಸಿದ್ಧತೆ. ಇಂಗ್ಲಿಶ್ ಪಾಠ ಮಾಡುವಂತಹ ಅಧ್ಯಾಪಕರಿಗೆ ಈ ಸಮಸ್ಯೆಯಿಲ್ಲ. ಕಲ್ಚರಲ್ ಆದ ಪ್ರಾಬ್ಲಮ್ ಅವರಿಗೂ ಇರಬಹುದು, ಆದರೆ ಈ ಬಗೆಯ ಲಾಂಗ್ವೇಜ್ ಮತ್ತು ನಾಲೆಡ್ಜ್ ಇವುಗಳ ನಡುವಣ ಸಂಬಂಧದ ಪ್ರಶ್ನೆ ಅವರ ಪ್ರಕಾರ ಇಂಟರ್‌ನ್ಯಾಷನಲ್

ಲೆವೆಲ್ ನಲ್ಲಿ ರಿಸಾಲ್ವ್ ಆಗಿಬಿಟ್ಟಿದೆ, ಯಾಕಂದ್ರೆ ಇಂಗ್ಲಿಶ್ ಬಿಟ್ಟರೆ ತಿಳುವಳಿಕೆ ಸಾಧ್ಯವೇ ಇಲ್ಲ, ಬಿಟ್ಟರೆ ತುಂಬ ಕಷ್ಟ ಅಂತ. ಇದು ನಿಜವೋ ಸುಳ್ಳೊ ಬಿಟ್ಟು ಬಿಡೋಣ. ಅದು ಆಮೇಲೆ. ಆದರೆ ಕನ್ನಡಂದತಹ ಚಿಕ್ಕ ಭಾಷೆ, ಚಿಕ್ಕ ಚಿಕ್ಕ ಪ್ರದೇಶಗಳಿರುವಂತಹ ಭಾಷೆಗಳು, ಇಂತಹ ಒಂದು ತೀವ್ರವಾದ ಚಾಲೆಂಜನ್ನು ಎದುರಿಸುತ್ತಿವೆ. ಅಂದರೆ ನಮ್ಮ ಎಳೆಯ ತಲೆಮಾರಿಗೆ ಹೊಸದನ್ನು ತಿಳಿದುಕೊಳ್ಳುವುದಕ್ಕೆ ಒಂದು ಆಕರ ಆಗಬಲ್ಲದು, ಹೊಸದನ್ನು ಹೇಳುವುದಕ್ಕೆ ಕನ್ನಡ ಒಂದು ಸಮರ್ಥ ಭಾಷೆ ಅನ್ನುವ ಕಾನ್ಫಿಡೆನ್ಸ್ ಕಡಿಮೆಯಾಗುತ್ತಿದೆ. ನಂಬಿಕೆ ಕಡಿಮೆಯಾಗಿತ್ತಿದೆ. ಅದ್ರಿಂದ ನಾವೇನಿದ್ರು ಕೂಡಾ ಇಂಗ್ಲಿಶ್ ಮುಖಾಂತರ ತೆಗೆದುಕೊಳ್ಳಬೇಕಾಗಿದೆ, ಈಗಲೂ ತುಂಬಾ ಜನ ಅಪಾಲಿಜಿಟಿಕ್ ಆಗಿ ಮಾತನಾಡುತ್ತಾರೆ, ಇಂಗ್ಲಿಶ್ ಬೇಡಾ ಅಂತ ಅಲ್ಲಾ, ಇಂಗ್ಲಿಶ್ ನಮಗೆ ಹೊಸ ಜಗತ್ತಿಗೆ ಕಿಟಕಿಯಾಗುವುದಕ್ಕೆ ಬೇಕು, ಆದರೆ ಕನ್ನಡ ಬಿಡೋಕಾಗೊದಿಲ್ಲ. ಕನ್ನಡ ಒಂದು ಸ್ವಲ್ಪ ಜಾಗ ಕೊಡಿ ಅಂತ ಬೇಡಿಕೊಳ್ಳುವುದು ಯಾಕೆ ? ಕನ್ನಡಕ್ಕೆ ಆ ಸಾಮರ್ಥ್ಯ ಇದೆ, ಆ ನಂಬಿಕೆ ನಮ್ಮಲ್ಲಿ ಯಾಕೆ ಕಳೆದು ಹೋಗಿದೆ, ರಾಮ್ ಮನೋಹರ್ ಲೋಹಿಯಾವರವರು ಒಂದು ಮಾತು ಹೇಳಿದ್ದರು, 60 ರ ದಶಕದಲ್ಲಿ ಹೇಳಿದ ಮಾತದು, ಏನು ಅಂತಂದ್ರೆ ಈ ದೇಶದಲ್ಲಿ ಸ್ವತಂತ್ರ ಚಿಂತನೆ ನಿಂತು ಹೋಗಿ ಬಹಳ ದಿನಗಳಾಗಿ ಹೋಗಿವೆ. ಕೊನೆಯ ಸ್ವತಂತ್ರ ಚಿಂತನೆ ಅಂತ ಬಂದದ್ದು ಕ್ರಿಸ್ತ ಶಕ 8 ನೇ ಶತಮಾನದಲ್ಲಿ ಅಂತ. ಅವರ ಪ್ರಕಾರ ಆದಿಶಂಕರ, ಆದಿಶಂಕರನೇ ಈ ದೇಶದ ಕೊನೆಯ ಸ್ವತಂತ್ರ ಚಿಂತಕ. ರಾಮ್ ಮನೋಹರ್ ಲೋಹಿಯಾ ಹೇಳಿದ್ದು ಸರಿಯೋ ತಪ್ಪೋ ಅನ್ನೋ ಪ್ರಶ್ನೆ ನಾನಿಲ್ಲಿ ಹಾಕುತ್ತಿಲ್ಲ, ನನ್ನ ಪ್ರಶ್ನೆ ಇರುವುದು 8 ನೇ ಶತಮಾನದ ನಂತರ ಭಾರತದ ಸ್ವತಂತ್ರ ಚಿಂತನೆಯ ಚಿಂತಕರು ಬರಲಿಲ್ಲ ಅಂತ ಹೇಳುತ್ತಾ ಹೇಳುತ್ತಾ ಆ ಮುಂದಿನ ಐವತ್ತು ಅರವತ್ತು ವರ್ಷ ಆದ ಮೇಲೆ ನಾವು ಎಲ್ಲಿಗೆ ಬಂದು ನಿಂತಿದ್ದೀವಿ ಎಂದರೆ, ನಮ್ಮಲ್ಲಿ ಸ್ವತಂತ್ರ ಚಿಂತಕರು ಬರಲಿಲ್ಲ, ಸ್ವತಂತ್ರ ಚಿಂತನೆಗಳು ಬರಲಿಲ್ಲ, ಅಂತ ಹೇಳಿಕೊಳ್ಳುತ್ತಾ , ಕನ್ನಡದಲ್ಲಿ ಸ್ವತಂತ್ರ ಚಿಂತನೆಗಳು ಬರುವುದಕ್ಕೆ ಸಾಧ್ಯವೇ ಇಲ್ಲಾ, ಎಲ್ಲವೂ ಕೂಡಾ ನಮಗೆ ಪಶ್ಚಿಮದ ಮುಖಾಂತರವೇ ದೊರೆಯಬೇಕು, ನಮ್ಮ ಜೀವನ ವಿಶ್ಲೇಷಣೆ ಪ್ರತಿಯೊಂದು ವಿಧಾನವು ಕೂಡಾ ಪಶ್ಚಿಮದ ಮುಖಾಂತರವೇ ದೊರೆಯಬೇಕು ಎಂದು ನಂಬೋದಕ್ಕೆ ಮೊದಲು ಮಾಡಿ ಬಿಟ್ಟಿದ್ದೀವಿ. ಸ್ವತಂತ್ರವಾಗಿ ನಾವು ನಮ್ಮ ಚಿಂತನಾ ಕ್ರಮಗಳನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯವಿಲ್ಲವೇ? ಕೊನೆ ಪಕ್ಷ ನಾವು ಮಾಡ ಬಲ್ಲೆವು, ಮಾಡ್ತೀವಿ ಅನ್ನುವ ನಂಬಿಕೆ ಇಟ್ಟುಕೊಂಡ್ರೆ ಇಪ್ಪತ್ತು ವರ್ಷ ಆಗಬಹುದು, ನಲವತ್ತು ವರ್ಷ ಆಗಬಹುದು, ನೂರು ವರ್ಷ ಆಗಬಹುದು,ಆದರೆ ಸಾಧ್ಯ ಆಗುತ್ತೆ. ಆದರೆ ಇವತ್ತು ಖಿನ್ನತೆಯ ಸ್ಥಿತಿಯಲ್ಲಿದ್ದೀವಿ ನಾವು, ಗ್ಲಾನಿಯ ಸ್ಥಿತಿಯಲ್ಲಿದ್ದೀವಿ. ಸಮುದ್ರ ಲಂಘನಕ್ಕೆ ಮೊದಲು ದಡದಲ್ಲಿ ಕುಳಿತ ಹನುಮಂತನಲ್ಲಿ ನಾನೇ ಸಮುದ್ರ ಹಾರುವುದಕ್ಕೆ ಸಾಧ್ಯವಿದೆಯೇ ಅನ್ನುವ ಗ್ಲಾನಿಯ ಉಂಟಾಗುವುದಷ್ಟೆ., ಆಗ ಒಳಗಡೆ ಹೇಳಬೇಕಾಗಿ ಬರುತ್ತದೆ, ಇಲ್ಲ ನೀನು ಹಾರಬಲ್ಲೆ ಅಂತ. ಇದನ್ನು ನಮಗೆ ನಾವೇ ಒಳಗಡೆ ಹೇಳಿಕೊಳ್ಳ ಬೇಕಾಗಿ ಬರುತ್ತದೆ, ಕನ್ನಡದಲ್ಲಿ ಈ ಬಗೆಯ ಈ ಗ್ಲಾನಿಯ ಸ್ಥಿತಿಯಿಂದ ಹೊರ ಬರಬೇಕಾದರೆ ನಾವು ಪದವಿ ತರಗತಿಗಳಲ್ಲಿ ತಿಳಿವಿನ ಆಕರವಾಗಬಲ್ಲದು ಈ ಭಾಷೆ, ಪಡೆದು ಕೊಳ್ಳುವುದಕ್ಕೆ ಒಂದು

ಮಾರ್ಗವಾಗಬಲ್ಲದು, ಮತ್ತು ಹೇಳುವುದಕ್ಕೆ ಕೂಡಾ ಒಂದು ಆಕರವಾಗಬಲ್ಲದು, ಅನ್ನುವ ಹೊಸ ತಿಳುವಳಿಕೆಗಳನ್ನ ನಾವು ಮೂಡಿಸಬೇಕಾಗುತ್ತದೆ. ನಾವು ತುಂಬಾ ಉತ್ಸಾಹದಿಂದ ಭಾವುಕವಾಗಿ ಮಾತನಾಡುತ್ತಿರುವಾಗ, ವಿಜ್ಞಾನಿಗಳನ್ನು ಕುರಿತು ಮಾತನಾಡುವಾಗ, ಈಗ ಸಿಎನ್‌ಆರ್ ರಾವ್ ಅಂತವರನ್ನು ಅಥವಾ ಇನ್ನೂ ದೊಡ್ಡ ದೊಡ್ಡ ವಿಜ್ಞಾನಿಗಳ ಬಗ್ಗೆ ಮಾತನಾಡುವಾಗ, ಅಂದ್ರೆ ಅವರೆಲ್ಲಾ ಕನ್ನಡ ಮಾಧ್ಯಮದಲ್ಲಿ ಓದಿದವರು. ಅವರೆಲ್ಲಾ ಅಂತರರಾಷ್ಟ್ರೀಯ ಮಟ್ಟದ ವಿಜ್ಞಾನಿಗಳಾಗಲಿಲ್ಲವೇ, ನಾನು ಸಿಎನ್‌ಆರ್ ರಾವ್ ಅಂತವ್ರಲ್ಲಿ ಒಂದು ಸಣ್ಣ ಪ್ರಶ್ನೆಯನ್ನು ಕೇಳುವುದೇನೆಂದರೆ, 'ಹಾಗಾದರೆ ನೀವು ಕನ್ನಡದಲ್ಲಿ ಯಾಕೆ ಜ್ಞಾನವನ್ನು ಬೆಳೆಸಲಿಲ್ಲ? ಕನ್ನಡದಲ್ಲಿ ಯಾಕೆ ತಿಳುವಳಿಕೆಯನ್ನು ಬೆಳೆಸಲಿಲ್ಲ ?' ಅಂತ. ನಾನವರ ಮೇಲೆ ಆರೋಪ ಮಾಡ್ತಾ ಇಲ್ಲಾ, ನಾವು ಈ ಪ್ರಶ್ನೆಯನ್ನ ಕೇವಲ ಕನ್ನಡದಲ್ಲಿ ಓದುವುದಕ್ಕೆ ಸಾಧ್ಯವಿದೆ ಅಂತ ಹೇಳಿದರೆ ಸಾಲದು ಇದಕ್ಕೊಂದು ದೊಡ್ಡ ಅಂಜೆಂಡಾವನ್ನು ರೂಪಿಸಬೇಕಾಗಿ ಬರುತ್ತದೆ. ಅದು ಪದವಿ ತರಗತಿಯಲ್ಲಿ, ಅದಕ್ಕಿಂತ ಹಿಂದಿನ ತರಗತಿಗಳಲ್ಲಿ ಸಾಧ್ಯವಾಗದೇ ಇರುವ ಮತ್ತು ಈ ಹಂತದಲ್ಲಿ ಸಾಧ್ಯವಾಗಬೇಕಾಗಿ ಇರುವಂತಹ ಕೆಲಸ.

ನಾವು ಪಠ್ಯ ಕ್ರಮಗಳಲ್ಲಿ ಈ ಬಗೆಯ ಎರಡು ಮುಖ್ಯ ಗುರಿಗಳನ್ನು ಇಟ್ಟುಕೊಳ್ಳದೇ ಹೋದರೆ ಆಗ ನಮ್ಮ ಉದ್ದೇಶವನ್ನ ಪರಿಪೂರ್ಣವಾಗಿ ಅಂದರೆ ನಾವು ಈಗ ಯಾವುದನ್ನ ಬೇಡಿಕೊಳ್ಳುವ ಸ್ಥಿಯಲ್ಲಿದ್ದೀವಿ, ಆ ಬೇಡಿಕೊಳ್ಳುವ ಸ್ಥಿತಿಯಿಂದ ಹೊರಬರುವುದಕ್ಕೆ ಸಾಧ್ಯವಾಗುವುದಿಲ್ಲ. ನಮ್ಮ ಹಕ್ಕಿದು. ಈ ದೇಶದಲ್ಲಿ ಪದವಿ ತರಗತಿಗಳಲ್ಲಿ ಓದತಕ್ಕಂತ ವಿದ್ಯಾರ್ಥಿಗಳಿಗೆ ಈ ಕಾರಣದಿಂದಾಗಿ ಕನ್ನಡ ಅನ್ನುವುದು ಅನಿವಾರ್ಯವಾಗಿದೆ ಅನ್ನುವ ಒಂದು ರೀತಿಯಲ್ಲಿ ಇದನ್ನು ಮಂಡಿಸಬೇಕಾಗಿ ಬರುತ್ತದೆ. ಆಗ ವಿದ್ಯಾರ್ಥಿಗಳಲ್ಲಿ ಅವರಿಗಿರುವಂತಹ ಭಾಷೆಯ ಸಾಮಾರ್ಥ್ಯವನ್ನು ಹೆಚ್ಚಿಸಬೇಕಾಗಿ ಬರುತ್ತದೆ. ಒಂದು ಸಂಸ್ಕೃತಿಗೆ ಅವರನ್ನು ತೆರೆಯುವಂತಹ ವಿಧಾನ ಇರಬಹುದು, ಪ್ರಾಸೆಸ್‌ಗೆ ಅವರನ್ನು ಓರಿಯೆಂಟ್ ಮಾಡುವುದು, ಎರಡನೆಯದು ನಾಲೆಡ್ಜ್‌ಗೆ ಸಂಬಂಧಪಟ್ಟಂತಹ ಕಾನ್ಫಿಡೆನ್ಸನ್ನು ಬೆಳೆಸತಕ್ಕಂತದ್ದು. ಎರಡನೆ ಹಂತಕ್ಕೆ ಬಂದಾಗ ಪಠ್ಯ ವಸ್ತುವನ್ನು ಅದಕ್ಕೆ ತಕ್ಕಾಗಿ ನಾವು ಆಯ್ಕೆ ಮಾಡಬೇಕಾಗುತ್ತದೆ ಅಂತ ಅನ್ನುವುದು, ನಾವು ಸಾಮಾನ್ಯವಾಗಿ ಏನ್ ತಿಳಿದುಕೊಳ್ತೀವಿ ಎಂದರೆ ಪಠ್ಯ ವಸ್ತು ಇರ್ತದೆ ಅಂತ. ಇದುವರೆಗೂ ನಾನು ಪಠ್ಯ ವಸ್ತುವನ್ನು ಅಥವಾ ಸಿಲೆಬಸ್ಸನ್ನು ತಯಾರು ಮಾಡಿದವರು ಏನ್ ಮಾಡಿದಾರೆ ಅಂದ್ರೆ ಪಠ್ಯ ಪುಸ್ಕವನ್ನು ಸಿದ್ಧಪಡಿಸಿದವರು ಅದು ಈಗಾಗಲೇ ಇರುತ್ತದೆ ಅಂತ ತಿಳಿದು ಬಿಟ್ಟಿರುತ್ತಾರೆ. ಸಿದ್ಧವಾಗಿರುವಂತ ಒಂದು ಕಥೆ, ಆ ಕಥೆಯನ್ನು ಪ್ರಿಸ್ಕ್ರೈಬ್ ಮಾಡಿದರೆ ಆಯ್ತು ನಾವು, ಒಂದು ಕಾದಂಬರಿ ಅದನ್ನು ಪ್ರಿಸ್ಕ್ರೈಬ್ ಮಾಡಿದರೆ ಆಯ್ತು ನಾವು, ಪಠ್ಯ ಅಂತ ಅನ್ನೊದು ಈಗಾಗಲೆ ಬರೆದು ಸಿದ್ಧ ಇರುವುದಿಲ್ಲ, ವಿ ಹ್ಯಾವ್ ಟು ಕ್ರಿಯೇಟ್ ಇಟ್. ಪಠ್ಯವನ್ನು ನೀವು ಕ್ರಿಯೇಟ್ ಮಾಡಬೇಕಾಗಿಬರುತ್ತದೆ. ಅದಕ್ಕೆ ಬೇಕಾಗಿರುವಂತಹ ಸಾಮಗ್ರಿ ನಿಮಗೆ ಬರವಣಿಗೆಯಲ್ಲಿರಬಹುದು ಅಷ್ಟೆ ಅದು ಕುವೆಂಪು ಬರೆದಿದ್ದಿರಲಿ, ಬೇಂದ್ರೆ ಬರೆದಿದ್ದಿರಲಿ, ತೇಜಸ್ವಿ ಬರೆದಿದ್ದಿರಲಿ, ಮಾಸ್ತಿ ಬರೆದಿದ್ದಿರಲಿ, ಯಾರಾದ್ರೂ ಬರೆದಿದ್ದಿರಲಿ, ಅದು ಕಥೆಯಿರಲಿ, ನಾಟಕವಿರಲಿ, ಪ್ರಬಂಧವಿರಲಿ, ಯಾವ ವೈಚಾರಿಕ ಪ್ರಬಂಧವಿರಲಿ,

ಅನುವಾದ ಇರಲಿ ಏನೇ ಇರಲಿ, ಅದ್ಯಾವುದು ಕೂಡಾ ಈಗ ಮುದ್ರಿತವಾದ ಪಠ್ಯ ಆಗಲಾರವು. ಅವುಗಳನ್ನು ನಮ್ಮ ಈ ಉದ್ದೇಶಗಳಿಗನುಸಾರವಾಗಿ ಪರಿವರ್ತಿಸಬೇಕು. ಪಠ್ಯ ಪುಸ್ತಕಗಳ ರಚನೆಕಾರರ ಅತ್ಯಂತ ದೊಡ್ಡ ಜವಾಬ್ದಾರಿ ಇಲ್ಲಿದೆ. ನಿಮಗೆ ಲಭ್ಯವಿರುವಂತಹ ಪಠ್ಯ ಪುಸ್ತಕಗಳನ್ನ ಅಥವಾ ಪಠ್ಯ ಸಾಮಗ್ರಿಯನ್ನ ಅದನ್ನ ಓದುವ ಪಠ್ಯವನ್ನಾಗಿ ಹೇಗೆ ಪರಿವರ್ತಿಸಬೇಕು; ಅದಕ್ಕೆ ಬೇಕಾಗಿರುವ ಸಾಮಗ್ರಿಯನ್ನ ಹೇಗೆ ಜೋಡಿಸಬೇಕಾಗುತ್ತದೆ ಅಂತ ಚಿಂತಿಸಬೇಕು. ಹಾಗೆ ಜೋಡಿಸುವುದು ಎರಡು ದೃಷ್ಟಿಯಿಂದ ಆಗಬೇಕಾಗುತ್ತದೆ, ಒಂದು ಕಲಿಯುವವರ ದೃಷ್ಟಿಯಿಂದ, ಇನ್ನೊಂದು ಪಾಠ ಮಾಡುವವರ ದೃಷ್ಟಿಯಿಂದ. ಪಾಠ ಮಾಡುವವರ ದೃಷ್ಟಿಯಿಂದ ಬಹಳ ಮುಖ್ಯವಾದ್ದು ಯಾಕಂದ್ರೆ ಮತ್ತೆ ಬೆಳಿಗ್ಗೆ ನಾನು ನನ್ನ ಮಿತ್ರರ ಜೊತೆ ಮಾತನಾಡುತ್ತಿದ್ದೆ. ಅವರು ಇತ್ತೀಚಿನ ಹೊಸ ಪಠ್ಯ ಪುಸ್ತಕಗಳನ್ನ ನಿರ್ಮಾಣ ಮಾಡಿದ ಅನುಭವದ ಹಿನ್ನೆಲೆ ಮಾತನಾಡುತ್ತಿದ್ದರು, ನಾವು ಯಾವ್ಯಾವ ಪಠ್ಯ ಪುಸ್ತಕಗಳನ್ನ ನಿಗದಿಗೊಳಿಸುವುದಿಲ್ಲವೊ ಅದನ್ನು ತೆಗೆದುಕೊಂಡೊ ಹೋಗಿ ಅಧ್ಯಾಪಕರು ಪಾಠ ಮಾಡಬೇಗಿದೆ. ಪಾಠ ಮಾಡಬೇಕಾಗುತ್ತಿರುವಾಗ ಅಲ್ಲಿ ನಾನು ನಿಗದಿಗೊಳಿಸಿರುವಂತಹ ಪಠ್ಯ ವಸ್ತುವನ್ನ ಅಧ್ಯಾಪಕರೆ ಗ್ರಹಿಸುವುದಕ್ಕೆ ಕಷ್ಟ ಪಡುತ್ತಿದ್ದರೆ, ಒಳಗಡೆ ಇರುವಂತಹ ಸಾಮಗ್ರಿಯನ್ನು ಗ್ರಹಿಸುವುದಕ್ಕೆ ಅವರೇ ಕಷ್ಟ ಪಡುತ್ತಾ ಇದ್ದರೆ ವಿದ್ಯಾರ್ಥಿಗಳ ಜೊತೆ ಏನ್ ಚರ್ಚೆ ಬೆಳೆಸುವುದಕ್ಕೆ ಸಾಧ್ಯ ? ಆದರೆ ಅಲ್ಲಿ ಎರಡು ತೊಂದರೆ ಇರಬಹುದು, ಒಂದು ಅಧ್ಯಾಪಕರ ಓದಿನ ಕೊರತೆಯಿಂದ ಉಂಟಾದ ತೊಂದರೆ ಇರಬಹುದು, ಎರಡನೆಯದು ನಾವು ಯಾವುದನ್ನ ಪಠ್ಯ ಪುಸ್ತಕವನ್ನಾಗಿ ನಿಗದಿ ಮಾಡ್ತಾ ಇದ್ದೀವಿ ಅದನ್ನ ಅಧ್ಯಾಪಕರಿಗೆ ನೆರವಾಗುವ ಹಾಗೆ ಪರಿವರ್ತಿಸಿಲ್ಲ. ಕನ್ವರ್ಟ್ ಮಾಡಿಲ್ಲ ಅದನ್ನ. ಅವರು ಕೂಡಾ ಓದಿ ಅರ್ಥ ಮಾಡಿಕೊಳ್ಳುವ ಹಾಗೆ ಪರಿವರ್ತಿಸಿಲ್ಲ. ಹಾಗಾಗಿ ಐಡಿಯಲಿ ನೀವು ಎರಡು ಪಠ್ಯ ಪುಸ್ತಕಗಳನ್ನು ಸಿದ್ಧಪಡಿಸಬೇಕು, ಅಧ್ಯಾಪಕರನ್ನು ಓರಿಯೆಂಟ್ ಮಾಡುವಂತಹ ಪಠ್ಯ. ಇನ್ನೊಂದು ವಿದ್ಯಾರ್ಥಿಗಳಿಗೆ ಕೊಡುವಂತಹ ಪಠ್ಯ. ಮೊದಲನೆಯದು ಮಾರುಕಟ್ಟೆಗೆ ಬರುವುದಿಲ್ಲ, ಅದು ವಿಶ್ವ ವಿದ್ಯಾಲಯ ಸಿದ್ಧಪಡಿಸಿ ಪ್ರತಿಯೊಬ್ಬ ಅಧ್ಯಾಪಕರಿಗೂ ಕೊಡಬೇಕಾಗಿದೆ ಅದನ್ನು. ಅದು ತಾನು ಪಾಠ ಮಾಡಬೇಕಾಗಿರುವಂತಹ ಪಠ್ಯಕ್ಕೆ ಪೂರ್ವಸಿದ್ಧತೆಯನ್ನು ನಾನು ಹೇಗೆ ಮಾಡಿಕೊಳ್ಳಬೇಕು, ಹೇಗೆ ಓದಬೇಕು, ಯಾಕೆ ಇದನ್ನು ಪಠ್ಯವನ್ನಾಗಿ ಓದ ಬೇಕು, ಪಾಠಮ ಮಾಡುವಾಗ ವಿದ್ಯಾರ್ಥಿಗಳೊಡನೆ ನಾನು ಯಾವ ಬಗೆಯ ಸಂವಾದ ಇಟ್ಟುಕೊಳ್ಳಬೇಕು, ಇದೆಲ್ಲದಕ್ಕೂ ಓರಿಯೆಂಟ್ ಮಾಡ್ತಕ್ಕಂತ ಒಂದು ಕೈಪಿಡಿಯನ್ನು ಸಿದ್ಧಪಡಿಸಬೇಕಾಗಿ ಬರುತ್ತದೆ ಅಧ್ಯಾಪಕರಿಗೆ. ಬೆಂಗಳೂರು ವಿಶ್ವ ವಿದ್ಯಾಲಯದ ಹೊಸ ಪಠ್ಯ ಕ್ರಮಗಳನ್ನು ಮಾಡಿದಾಗ ಇದು ದೊಡ್ಡ ಸಮಸ್ಯೆಯಾಯಿತು. ಯಾಕಂದ್ರೆ ಉತ್ಸಾಹವಿದೆ ಅಧ್ಯಾಪಕರಲ್ಲಿ ಹೊಸದನ್ನ ಮಾಡಬೇಕು ಅಂತ ಅಂದುಕೊಂಡು, ಆದರೆ ಓರಿಯೆಂಟೇಷನ್ ಇಲ್ಲದೆ ಇದ್ದರೆ ಕೊನೆಗೂ ಕೂಡಾ ಸಾಮಾನ್ಯ ಅಧ್ಯಾಪಕ ಮತ್ತು ಬುದ್ಧಿವಂತ ಅಧ್ಯಾಪಕ ನಡುವಣ ತಾರತಮ್ಯವೇ ಗಟ್ಟಿಯಾಗಿ ಉಳಿದು ಬಿಡುತ್ತದೆ. ಜಾಣ ಅಧ್ಯಾಪಕ ಅಥವಾ ಅಧ್ಯಾಪಕಿ ಹೇಗೊ ನಿರ್ವಹಿಸುತ್ತಾರೆ. ಸಾಮಾನ್ಯ ಅಧ್ಯಾಪಕರು ಸೋಲುತ್ತಾರೆ. ನಾನು ಅಧ್ಯಾಪಕರನ್ನ ಈ ಸ್ಕೀಕ್ರಮ್‌ನೊಳಗೆ ಇಡಲು ಇಷ್ಟಪಡುವುದಿಲ್ಲ, ಎಲ್ಲರೂ ಸಮಾನರೆ. ಪ್ರತಿಯೊಬ್ಬ ಅಧ್ಯಾಪಕ, 30 ವರ್ಷ ಪಾಠ

ಮಾಡಿರುವ ಅಧ್ಯಾಪಕ, ನಗರದಲ್ಲಿರುವ ಅಧ್ಯಾಪಕ, ಹಳ್ಳಿಯಲ್ಲಿರುವಂತ ಅಧ್ಯಾಪಕ, ಯಾಕಂದ್ರೆ ನನಗೆ ಗೊತ್ತು ಎಷ್ಟೋ ಜನ ಅಧ್ಯಾಪಕ/ಅಧ್ಯಾಪಕಿಯರಿಗೆ ಅವರ ಕಾಲೇಜುಗಳಲ್ಲಿ ತಮ್ಮ ಪಠ್ಯ ಪುಸ್ತಕಗಳನ್ನು ಹೊರತು ಪಡಿಸಿ ಓದುವುದಕ್ಕೆ ಮತ್ತೊಂದು ಪುಸ್ತಕಾನೇ ಸಿಗುವುದಿಲ್ಲ. ಅವರ ಕಾಲೇಜುಗಳ ಲೈಬ್ರರಿಗಳಲ್ಲಿ ಇರುವುದಿಲ್ಲ ಇದ್ದರೂ ಕೊಡುವುದಿಲ್ಲ. ಇಂತಹ ಇಕ್ಕಟ್ಟುಗಳಲ್ಲಿದ್ದಾರೆ ಅವರು. ಅಕಸ್ಮಾತ್ ಏನಾದ್ರೂ ಅವರು ಗೆಸ್ಟ್ ಲೆಕ್ಚರರ್ ಆಗಿದ್ರಂತು ಅವರಿಗೆ ಕುಳಿತುಕೊಳ್ಳುವುದಕ್ಕೆ ಜಾಗಾನೆ ಕೊಡುವುದಿಲ್ಲ ಕಾಲೇಜುಗಳಲ್ಲಿ ಇನ್ನೂ ಲೈಬರ್ರಿಗಳಲ್ಲಿ ಪುಸ್ತಕಗಳನ್ನ ಎಲ್ಲಿ ಕೊಡುತ್ತಾರೆ ಅವರು. ಇವರನ್ನೆಲ್ಲಾ ಗಮನದಲ್ಲಿಟ್ಟುಕೊಳ್ಳಬೇಕು ನಾವು. ಎಲ್ಲರಲ್ಲೂ ಹೊಸದನ್ನು ಮಾಡಬೇಕೆನ್ನುವ ಉಮೇದು ತೀವ್ರವಾಗಿರ ಬೇಕು ಆ ಉಮೇದು ತೀವ್ರವಾಗಿರುವ ಅಧ್ಯಾಪಕರನ್ನು ಟ್ಯಾಪ್ ಮಾಡದೇ ಹೋದರೆ, ಸರಿಯಾಗಿ ಅವರಿಗೆ ಮಾರ್ಗದರ್ಶನ ಮಾಡದೇ ಹೋದರೆ ಮತ್ತೆ ಹಳೆಯ ಪದ್ಧತಿಯನ್ನು ಮುಂದುವರೆಸುತ್ತಿರುತ್ತೀವಿ. ಜಾಣ ಅಧ್ಯಾಪಕರಿಗೆ ಒಂದು ಹೆಚ್ಚು ಸ್ಕೋಪ್ ಕೊಡುತ್ತಿರುತ್ತೀವಿ, ಸಾಮಾನ್ಯ ಎಂದು ಹಣೆಪಟ್ಟಿ ಪಡೆದ ಅಧ್ಯಾಪಕರುಗಳನ್ನು ಹಿಂದಕ್ಕೆ ಉರುಳಿಸುತ್ತಿರುತ್ತೇವೆ. ಮತ್ತೆ ಅನ್ ಡೆಮಾಕ್ರಟಿಕ್ ಪ್ರಾಸೆಸ್. ಯಾಕಂದ್ರೆ ತಾರತಮ್ಯವನ್ನ ಮುಂದುವರೆಸುವುದೇ ಶಿಕ್ಷಣದ ಉದ್ದೇಶವಾದ್ರೆ ಶಿಕ್ಷಣ ಯಾಕೆ ಬೇಕು. ಅನ್‌ಫಾರ್ಚುನೆಟ್ಲಿ ಭಾರತದಲ್ಲಿ ಶಿಕ್ಷಣ ಅನ್ನೊದು ಸಾಮಾಜಿಕ ಬದಲಾವಣೆಯ ಸಾಧನವಾಗಿ ಉಳಿದಿಲ್ಲ. ಹಾಗೆ ಬೆಳೆಯಲೂ ಇಲ್ಲ. ಬದಲಾಗಿ ಸಾಮಾಜಿಕ ಸ್ಥಿತಿಯನ್ನು, ಏಣಿಶ್ರೇಣಿಯ ವ್ಯವಸ್ಥೆಯನ್ನು ಉಳಿಸಿಕೊಳ್ಳುವುದಕ್ಕೆ ಅಗತ್ಯವಾದ ಸಾಧನವಾಗಿ ಬಿಟ್ಟಿದೆ. ಇದರ ಬಗ್ಗೆ ಎಚ್ಚರವನ್ನು ಕಾಯ್ದುಕೊಳ್ಳಬೇಕಾದ ನಾವು, ಕನ್ನಡ ಅಧ್ಯಾಪಕರು ಈ ನಿಟ್ಟಿನಲ್ಲಿ ನಾವು ಹೋಸ ರೀತಿಯಲ್ಲಿ ಯೋಚನೆ ಮಾಡಬೇಕಾಗುತ್ತದೆ. ಅದ್ದರಿಂದ ಈ ಕಾರಣದಿಂದಾಗಿ ಪಠ್ಯ ಅನ್ನೊದು ನಮಗೆ ಎಲ್ಲೋ ಒಂದು ಕಡೆಗೆ ಯಾರೋ ಬರೆದು ಸಿದ್ಧಪಡಿಸಿ ಕೊಟ್ಟಿರುತ್ತಾರೆ; ನಾವು ಅದನ್ನು ತೆಗೆದುಕೊಂಡು ಇಲ್ಲಿ ನಿಗದಿಗೊಳಿಸಿಬಿಟ್ಟರೆ ಸಾಕು ಅನ್ನುವ ಪದ್ಧತಿಯನ್ನು ಬಿಡಬೇಕು. ಇಷ್ಟು ನನ್ನ ಪೂರ್ವಭಾವಿ ಮಾತುಗಳನ್ನು ನಿಮ್ಮೆದುರು ನಾನು ಮಂಡಿಸಿದ್ದೀನಿ. ಇನ್ನು ಮುಂದೆ ಇದರ ಬಗ್ಗೆ ಚರ್ಚೆಗಳು ಮತ್ತು ಮಾತುಕಥೆಗಳು ಮುಂದುವರೆಯಲಿ. ನಮಸ್ಕಾರ.

# ಪದವಿ ತರಗತಿಗಳ ಕನ್ನಡ ಭಾಷಾ ಕಲಿಕೆಯ ವಿದ್ಯಾಮಾನಗಳ ಕುರಿತು ಸಂದರ್ಶನ

**ಚಲಪತಿ:** ಟೆಕ್ಸ್ಟ್ ಬುಕ್ಕುಗಳ ನಿರ್ಧಾರ, ಪ್ರಕಟಣೆ ಈ ವಿದ್ಯಾಮಾನಗಳನ್ನು ಕುರಿತ ವಿವರಗಳಿಂದಲೇ ಶುರುಮಾಡಿ ಸಾರ್..

**ಕೆ.ವಿಎನ್:** ಈ ಪದವಿ ತರಗತಿಗಳ ಪಠ್ಯ ಪುಸ್ತಕಗಳ ನಿಗದಿ ಹೇಗಾಗ್ತದೆ, ಏನು ಅನ್ನುವದರ ಬಗ್ಗೆ ಫಸ್ಟ್ ಹ್ಯಾಂಡ್ ಇನ್ಫರ್ಮೇಶನ್ ನನಗೆ ಕಡಿಮೆ. ನಾನು ಪದವಿ ತರಗತಿಯಲ್ಲಿ ಪಾಠ ಮಾಡಿರೋದು ಬಹಳ ಕಡಿಮೆ. ಮತ್ತೆ ಆ ಅಡ್ಮಿನಿಸ್ಟ್ರೇಷನ್ ವಿಚಾರಗಳ ಬಗ್ಗೆ ಕೂಡ ನನಗೇನು ಅಷ್ಟಾಗಿ ತಿಳಿದಿಲ್ಲ. ಇದರ ಬಗ್ಗೆ ನನ್ ಜೊತೆಯಲ್ಲಿದ್ದೋರು, ಸ್ನೇಹಿತರು ಹೇಳ್ತಿದ್ದ ವಿವರಗಳಷ್ಟೆ ನನಗೆ ಗೊತ್ತು. ಅದನ್ನಷ್ಟೆ ಗಮನಿಸ್ಸೊದಾದರೆ. ಫೇರಾಗಿರ್ತಿರಲಿಲ್ಲ ತುಂಬಾ ಸಂದರ್ಭದಲ್ಲಿ. ತುಂಬಾ ಸಂದರ್ಭಗಳಲ್ಲಿ ಅವುಗಳನ್ನ ವೈಯುಕ್ತಿಕ ಹಿತಾಸಕ್ತಿಗಳಿಂದ, ಪ್ರಕಾಶಕರ ಹಿತಾಸಕ್ತಿಗಳಿಂದ, ಲೇಖಕರ ಅಗತ್ಯಗಳಿಂದ ಪುಸ್ತಕಗಳು ನಿಗದಿಗೊಳ್ತಾ ಇದ್ವು ಅನ್ನೋದು ಸಾಮಾನ್ಯವಾದ ಒಂದು ತಿಳುವಳಿಕೆ, ಬಾಳ ವರ್ಷಗಳವರೆಗೂ ಇತ್ತದು. ಬೆಂಗಳೂರು ವಿಶ್ವವಿದ್ಯಾಲಯವನ್ನು ಗಮನಿಸೋದಾದರೆ, ಇದು, ಜಿಎಸ್ ಎಸ್ ಅವ್ರು ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾದ ಮೇಲೆ ಅದನ್ನ ಬದಲಾಯಿಸೋಕೆ ಪ್ರಯತ್ನಪಟ್ರು, ಎರಡು ರೀತಿ ಪ್ರಯತ್ನ ಪಟ್ರು ಅವ್ರು. ಒಂದು; ಪುಸ್ತಕಗಳ ಪಬ್ಲಿಕೇಷನ್ನು ಪ್ರಸಾರಾಂಗಕ್ಕೆ ರವಾನಿಸಿದ್ದರಿಂದ ಪ್ರಕಾಶಕರ ಪಾತ್ರವನ್ನು ಬಹಳ ಕಡಿಮೆ ಮಾಡಿದ್ರು. ಎರಡನೇದು; ಏಕ ವ್ಯಕ್ತಿಕೇಂದ್ರಿತವಾದ ಟೆಕ್ಸ್ಟ್ ಬುಕ್ಕುಗಳನ್ನ ಬಿಟ್ಟು ಸ್ವಲ್ಪ ಆಂಥಾಲಜಿಸ್ಸುಗಳನ್ನ-ಸಂಕಲನಗಳನ್ನ-ತಂದ್ರು. ಮತ್ತು ಪಠ್ಯಪುಸ್ತಕಗಳಿಗೋಸ್ಕರವೇ ಸಿದ್ಧಪಡಿಸಿದ ಸಂಕಲನಗಳು ಅವು. ಅಧ್ಯಯನ ಮಂಡಳಿಗೆ ಸ್ವಲ್ಪ ಹೆಚ್ಚು ಜವಾಬ್ದಾರಿ ಬಿತ್ತು. ಹಾಗೆ ಮಾಡಿದ್ದರಿಂದ ಪಾಠ ಮಾಡ್ತಾ ಇದ್ದ ಅಧ್ಯಾಪಕರು ಬೇರೆ ಬೇರೆ ತರದಲ್ಲಿ ಪಠ್ಯ ನಿರ್ಮಾಣದಲ್ಲಿ ಭಾಗವಹಿಸಲು ಸಾಧ್ಯವಾಯಿತು ಅದರಿಂದ. ಅವರ ಓದು ಮತ್ತು ಅವರ ಅಪೇಕ್ಷೆಗಳೇನಿದ್ವು

ಇವುಗಳನ್ನ ಅಲ್ಲಿ ಜಾರಿಗೆ ಕೊಡೋದಿಕ್ಕೆ ಸಾಧ್ಯ ಆಯ್ತು. ಸೀಮಿತ ಚೌಕಟ್ನಲ್ಲಿ ಒಳ್ಳೆ ಪ್ರಯೋಗಾನೆ ಇದು. ಆದ್ರು ಕೂಡ ಕೆಲವು ಸಂದರ್ಭಗಳಲ್ಲಿ, ಕೆಲವು ಸ್ಲಾಟುಗಳಲ್ಲಿ ಉದಾಹರಣೆಗೆ ಒಂದು ಕಾದಂಬರಿ ಒಂದು ನಾಟಕ ನಿಗದಿಯಾಗ್ತಿದ್ದವು. ಇಂಥ ಸಂದರ್ಭದಲ್ಲಿ ಲೇಖಕರ ಒತ್ತಾಯಕ್ಕೆ, ಪ್ರಕಾಶಕರ ಒತ್ತಾಯಕ್ಕೆ ನಿಗದಿಪಡಿಸೋದು ಇದ್ದೇ ಇತ್ತು. ಆದ್ರೂ ಬಹುಮಟ್ಟಿಗೆ ವಿಮರ್ಶೆಯ ಚೌಕಟ್ನಲ್ಲಿ ಮಾನ್ಯಗೊಂಡಿರತ್ತಕ್ಕ ಪುಸ್ತಕಗಳನ್ನೆ ನಿಗದಿ ಮಾಡ್ತಾ ಇದ್ರು. ಅದರಿಂದಾಗಿ ಬೆಂಗಳೂರು ವಿಶ್ವವಿದ್ಯಾಲಯಕ್ಕಷ್ಟೆ ಗಮನ್ಸೋದಾದ್ರೆ, ಸ್ವಲ್ಪ ಫೇರಾಗಿರ್ಬೇಕು ಅನ್ನೋ ಪ್ರಯತ್ನಗಳು ನಡೆದಿವೆ. ಪಠ್ಯ ಪುಸ್ತಕಗಳ ನಿಗದೀಕರಣಕ್ಕೆ ಸಂಬಂಧಿಸಿದ ಹಾಗೆ.

**ಚಲಪತಿ:** ಅದೂ ಕೂಡ ಲೇಟರ್ ಸ್ಟೇಜಲ್ಲೆ ...

**ಕೆ.ವಿ.ಎನ್:** ಆ ಬಳಿಕ ಅಂದರೆ ಲೇಟ್ ಸೆವೆಂಟೀಸಲ್ಲಿ ಪ್ರಾರಂಭ ಆಯ್ತು. ಜಿ ಎಸ್ ಎಸ್ ಎಪ್ಪತ್ತರ ದಶಕದಲ್ಲಿ ಅಧ್ಯಯನ ಕೇಂದ್ರದ ನಿರ್ದೇಶಕರಾದ್ರು. ಅಲ್ಲಿ ಮೊದಲೊಂದು ಹಂತದಲ್ಲಿ ಅವರೇನು ಮಾಡಿದ್ರು ಅಂದ್ರೆ, ಏಕ ಕವಿಕೇಂದ್ರಿತವಾದ, ವ್ಯಕ್ತಿಕೇಂದ್ರಿತವಾದ ಟೆಕ್ಸ್ಟ್ ಬುಕ್ಕುಗಳನ್ನೆ ಮಾಡ್ತಾ ಇದ್ರು. ಆದ್ರೂ ಅದನ್ನ ಮಾಡೊ ಹೊಣೆಗಾರಿಕೆಯನ್ನ ಅಧ್ಯಯನ ಮಂಡಳಿಗೆ ಕೊಟ್ರು. ಉದಾಹರಣೆಗೆ ಬೇಂದ್ರೆಯವರ ಕವಿತೆಗಳ ಒಂದು ಸಂಕಲನವನ್ನ ಮಾಡ್ದಾಗ, ಈಗಾಗ್ಲೆ ಸಿದ್ಧಗೊಂಡ ಸಂಕಲನಗಳ ಮಾದರಿಗೆ ಬದಲಾಗಿ ಆಯ್ದ ಕವನಗಳನ್ನ ಇಡಬೇಕು ಅನ್ನೊ ಒತ್ತಾಯ ಮಾಡಿದ್ರು. ಕೆ ಎಸ್ ಎನ್ ಆಯ್ದ ಕವನಗಳು, ಬೇಂದ್ರೆಯವರ ಆಯ್ದ ಕವನಗಳು, ಅಡಿಗರ ಆಯ್ದ ಕವನಗಳು, ಕುವೆಂಪು ಅವರ ಆಯ್ದ ಕವನಗಳು ಇವೆಲ್ಲ ಮೂರ್ನಾಲ್ಕು ವರ್ಷ ಟೆಕ್ಸ್ಟ್ ಬುಕ್ಕುಗಳಾಗಿವೆ. ಪದವಿಯ ಬೇರೆ ಬೇರೆ ಹಂತಗಳಲ್ಲಿ ಆಗಿವೆ. ಅಂದ್ರೆ ಇದು ಒಂದು ಮೊದಲನೆ ಹಂತದ ಚಿಂತನೆ. ಆಮೇಲೆ ಏನ್ಮಾಡಿದ್ರು ಆ ಏಕವ್ಯಕ್ತಿಗಳನ್ನ ಬಿಟ್ಬಿಟ್ಟಿದ್ದೂನೆ ಸಂಕಲನಗಳನ್ನ ಸಂಗ್ರಹಗಳನ್ನ ಪ್ರಾಚೀನ, ನಡುಗನ್ನಡ, ವಚನಗಳ, ಕೀರ್ತನೆಗಳ, ಹೊಸಗನ್ನಡಕ್ಕೆ ಸಂಬಂಧಿಸಿದ ಬೇರೆ ಬೇರೆ ಸಂಕಲನಗಳನ್ನ ಮಾಡ್ಲೊ ಪ್ರಯತ್ನಗಳನ್ನ ಮಾಡಿದ್ರು. ಇಲ್ಲಿ ಪದವಿ ತರಗತಿಯ ಅಧ್ಯಾಪಕರು ಹೆಚ್ಚಿರ್ತಿದ್ರು ಮತ್ತು ಸ್ನಾತಕೋತ್ತರ ಪಾಠ ಮಾಡ್ತಾ ಇದ್ದಂತ ಅಧ್ಯಾಪಕರು ಇರ್ತಿದ್ರು. ಸುಮಾರು ಎಯ್ಟೀಸ್ ವರೆಗೆ ಹೀಗೆ ಇತ್ತು. ಆಮೇಲೆ ಮತ್ತೆ ಬದಲಾವಣೆಗಳಾಗ್ತ ಬಂದ್ವು. ನೈಂಟೀಸ್ ನಲ್ಲ ಜಿ ಎಸ್ ಎಸ್ ಅವ್ರ ಅಧಿಕಾರವದಿ ಮುಗಿದ್ಮೇಲೆ ಮತ್ತೆ ಬೇರೆ ಬೇರೆ ರಿತಿ ಪ್ರಯೋಗಗಳು ನಡದ್ವು. ತುಂಬಾ ಜನ

ಪದವಿ ಅಧ್ಯಾಪಕರು ಅದರ ಒಳಗಡೆ ಬರೋಕೆ ಶುರುವಾದ್ರು.

**ಚಲಪತಿ:** ಸಾರ್, ಈ ಅಂಥಾಲಜಿಗಳಲ್ಲೂ ಕೂಡ ಈಗ ಸುಮಾರು ಒಂದು ನಲವತ್ತು ಐವತ್ತು ಪದ್ಯಗಳಿರ್‍ತಾವೆ ಅಂಥ ಇಟ್ಕೊಳ್ಳೋಣ. ಮತ್ತೆ ಎಗೈನ್ ಅದರಲ್ಲಿ ಆಯ್ಕೆ ಮಾಡಲಾಗ್ತದೆ. ಮತ್ತೆ ಅಲ್ಲೂ ಕೂಡ ಈ ಹಿಂದೆ ಇದ್ದ ಅದೇ ಕವಿಗಳ–ಕವಿತೆಗಳು ಡಿಫರೆಂಟಾಗಿ ಇರಬೌದು–ಆ ತರದ್ದು ರಿಪೀಟಾಗಿರೋದು ಸಹ ಹೆಚ್ಚಿಗೆ ಕಾಣಿಸುತ್ತೆ ಅಲ್ವ.

**ಕೆ.ವಿ.ಎನ್:** ಸಹಜ ಅದು. ಯಾಕೇಂದ್ರೆ ಅಧ್ಯಾಪಕರ ಸಿದ್ಧತೆ ಬಹಳ ಕಡಿಮೆ ಇತ್ತು. ಅಧ್ಯಾಪಕರು ಪಾಠ ಮಾಡೋದಕ್ಕೆ ಎರಡು ಬಗೆ ಇಕ್ಕಟ್ಟುಗಳಲ್ಲಿ ಸಿಕ್ಕಾಕ್ಕೊಂಡ ಹಾಗ್ ಕಾಣಿಸುತ್ತೆ. ಒಂದು; ಸಮಯದ್ದು, ಅವರೆ ಹಾಕ್ಕೊಂಡ ಸಮಯದ್ದು. ಎರಡನೇದು; ಅವರ ಓದು. ಇವರೆಡೂ ಬಹಳ ಇಕ್ಕಟ್ಟುಗಳನ್ನ–ಕನ್ ಸ್ಟ್ರೈನುಗಳನ್ನ್–ಸೃಷ್ಟಿ ಮಾಡ್ತಾ ಇದ್ದಿದ್ದರಿಂದ ಅವರೇನು ಮಾಡ್ತಾ ಇದ್ರು ಅಂದ್ರೆ, ಈಗಾಗ್ಲೆ ಎಲ್ಲೊ ಒಂದು ಕವಿತೆ ಬಗ್ಗೆ ಯಾರೋ ಒಂದು ವಿಮರ್ಶೆ ಬರೆದಿರ್ಬೇಕು, ಚರ್ಚಿತವಾಗಿರ್ಬೇಕು, ರೂಢಿಗೊಂಡ ಅಭಿಪ್ರಾಯವಿರಬೇಕು ಅಂತ ಕವಿತೆಗಳಾದ್ರೆ ಪಾಠ ಮಾಡೋದು ಸುಲಭ ಅಂತ. ಎರಡನೇದು; ಕವಿಯ ಬಗೆಗೆ ಸ್ವಲ್ಪ ಮಾಹಿತಿ ಇದ್ರೆ, ಅದರ ಹಿನ್ನೆಲೆನೇಲಿ ಕವಿತೆ ಚರ್ಚೆ ಮಾಡಬಹುದು ಅಂತ. ಹಾಗಾಗಿ ಹೊಸ ಕವಿಗಳನ್ನ, ಹೊಸ ಕವಿತೆಗಳನ್ನ ಇಟ್ರೆ ಪಾಠ ಮಾಡಕ್ಕಾಗಲ್ಲ ಅನ್ನೊದು ಅಧ್ಯಾಪಕರುಗಳ ಸಾಮನ್ಯ ಅಭಿಪ್ರಾಯ. ಅದರಲ್ಲೂ ಹಿರಿಯ ಅಧ್ಯಾಪಕರಲ್ಲಿ ಇದು ರೂಢಗೊಂಡ ಅಭಿಪ್ರಾಯುಗಳಾಗಿವೆ. ಅದರಿಂದಾಗಿ ಈ ತರದ ಕೆಲವೇ ಕವಿತೆಗಳನ್ನ, ಕೆಲವೇ ಕವಿಗಳನ್ನ ಚರ್ಚೆ ಮಾಡತಕ್ಕಂತ ಪದ್ಧತಿ ಬಂತು. ಅಧ್ಯಾಪಕರೆಲ್ಲ ಆ ಹೊತ್ತಿಗೆ ಅರ್ಲಿ ಎಯ್ಟೀಸ್ ಅಥವಾ ಲೇಟ್ ಎಯ್ಟೀಸ್ ಹೊತ್ತಿಗೆ ಇವರೆಲ್ಲ ಬಹಳ ವರ್ಷಗಳಿಂದ ಅಧ್ಯಾಪಕರಾಗಿದ್ದೋರು. ಹೊಸ ತಲೆಮಾರಿನ ಅಧ್ಯಾಪಕರು ಬಂದಿದ್ದಿಲ್ಲ. ಅಮೇಲೆ ಯಾವಾಗ ಕಾಲೇಜುಗಳ ಸಂಖ್ಯೆ ಜಾಸ್ತಿ ಆದ್ವು ಹೊಸ ಅಧ್ಯಾಪಕರು ಬಂದ್ರು, ಅಧ್ಯಾಪಕರ ಸೋಶಿಯಲ್ ಬ್ಯಾಗ್ರಂಡುಗಳ ಚೇಂಜ್ ಆದ್ವು, ಕನ್ನಡ ಸಾಹಿತ್ಯದ ಚಳುವಳಿಗಳು, ಬೇರೆ ಬೇರೆ ತರದ ವಿಮರ್ಶಾ ಚಿಂತನೆಗಳು ಬಂದ್ವು, ಇದರಿಂದ ಈ ಬಗೆಯ ಆಯ್ಕೆಗಳನ್ನ ಪ್ರಶ್ನೆ ಮಾಡ್ತಕ್ಕಂತ ಒಂದು ಪ್ರವೃತ್ತಿ ಕೂಡ ಶುರುವಾಯ್ತು.

**ಚಲಪತಿ:** ಬಹುಮಟ್ಟಿಗೆ ಇದಕ್ಕೆ ಸಂಬಂಧಪಟ್ಟ ಹಾಗೆ, ಸಾಮಾನ್ಯವಾಗಿ ಕನ್ನಡ ಕವಿಗಳು ಯಾರು ಅನ್ನೋವಾಗ ಪಂಪನಿಂದ ಶುರುಮಾಡಿ.

ಆಮೇಲೆ ಕುವೆಂಪುಗೆ ಬಂದು ನಂತರ ಪುತಿನ ಬೇಂದ್ರೆ... ಹೀಗೆ ಕೆಲವು ಹೆಸರುಗಳು ಮಾತ್ರ ಬಹಳ ಮತ್ತೆ ಮತ್ತೆ ರಿಪೀಟ್ ಆಗ್ತಾರೆ. ಸುಮಾರು ಐವತ್ತು ಅರವತ್ತರ ದಶಕದ ನಂತರ ಬಂದಂತ ಕವಿಗಳು ಹೆಚ್ಚು ಜನಗಳ ಬಾಯಲ್ಲಿ ಬರಲ್ಲ. ಇದಕ್ಕೆ ಈ ಬಗೆಯ ಟೆಕ್ಸ್ಟ್ ಬುಕ್ಕುಗಳೂ ಕಾರಣ ಇದ್ದಿರಬೌದ..?

ಕೆ.ವಿ.ಎನ್: ಟೆಕ್ಸ್ಟ್ ಬುಕ್ಕುಗಳೂ ಒಂದು ರೀತಿ ಕಾರಣಾನೆ. ಯಾಕೆಂದ್ರೆ, ನಾನು ಹೇಳಿದ ಹಾಗೆ ನಿಮಗೆ ನವೋದಯ ಕಾಲದ ವಿಮರ್ಶೆ ಒಂದು ರೀತಿ ಕನ್ನಡ ಸಾಹಿತ್ಯ ಪರಂಪರೆಯನ್ನ ತನ್ನ ದೃಷ್ಟಿಯಿಂದ ರಚಿಸಬೇಕಿತ್ತು. ಒಂದು ಹೈರಾರ್ಕಿಯನ್ನ, ಏಣಿಶ್ರೇಣಿಯನ್ನ ,ಒಂದು ಚೌಕಟ್ಟನ್ನ ರಚಿಸ್ಬೇಕಿತ್ತು. ಇದನ್ನೆ ಬಹುಮಟ್ಟಿಗೆ ತರಗತಿಗಳಲ್ಲಿ ವಿದ್ಯಾರ್ಥಿಗಳಿಗೆ ರವಾನೆ ಮಾಡ್ತಾ ಇದ್ರು, ಅದನ್ನ ಪ್ರಶ್ನಿಸ್ಬೇಕು, ಪುನಾರಚನೆ ಮಾಡ್ಬೇಕು, ಮರು ವ್ಯಾಖ್ಯಾನ ಮಾಡ್ಬೇಕು ಅನ್ನೋದು ಅಧ್ಯಾಪಕರ ಆಸಕ್ತಿಯಾಗಿರ್ಲಿಲ್ಲ. ಅದಕ್ಕೇ ಬಹಳ ಸಂದರ್ಭದಲ್ಲಿ ಹೇಳ್ತ ಇರೋದು ಏನೂಂತಂದ್ರೆ, ಕನ್ನಡ ವಿಮರ್ಶೆಯ ಲೋಕ ಕನ್ನಡ ಬೋಧನಾ ಲೋಕವನ್ನ ಪದವಿ ತರಗತಿಗಳಲ್ಲಿ ಬಹಳ ಕಂಟ್ರೋಲ್ ಮಾಡಿದೆ ಅಂತ. ಬಹಳ ಕಂಟ್ರೋಲ್ ಮಾಡಿದೆ. ಆ ಬೋಧನಾ ಲೋಕವೆ ಪರೋಕ್ಷವಾಗಿ ವಿಮರ್ಶಾ ಲೋಕವನ್ನ ಪ್ರಭಾವಿಸಿದೆಯೇ ಅಂದ್ರೆ, ಇಲ್ಲ. ಆ ತರ ಪ್ರಭಾವಿಸ್ಲಿಲ್ಲ. ಅಂದ್ರೆ, ಪ್ರಭಾವಿಸ್ಲಿಲ್ಲ ಅಂತಂದ್ರೆ, ಆ ವಿಮರ್ಶಾ ಲೋಕದ ಚಿಂತನಾ ಕ್ರಮವನ್ನೆ ಪಲ್ಲಟಗೊಳಿಸ್ಲಿಲ್ಲ. ಅದನ್ನ ಪುಷ್ಟಿಗೊಳಿಸಿರಬೌದು, ಸಮರ್ಥಿಸಿರಬೌದು ಅಷ್ಟೆ. ವಿಮರ್ಶಾ ಲೋಕದಲ್ಲಿ ಏನು ತೀರ್ಮಾನ ಆಗಿತ್ತೊ ಮತ್ತೆ ಅದನ್ನೇ ಸಮರ್ಥಿಸುವ ಬರವಣಿಗೆಗಳು ಮತ್ತೆ ಬಂದಿರೋವು. ಅಷ್ಟೆ ಹೊರ್ತು, ಇಲ್ಲ ಅದು ಬೇರೆ ರೀತಿಯಲ್ಲಿ ವಿದ್ಯಾರ್ಥಿಗಳೊಡನೆ ಸಂವಾದಿಸ್ತಾ ಇರೋವಾಗ ಕನ್ನಡ ಸಾಹಿತ್ಯ ಪರಂಪರೆಯನ್ನ ಪುನಾರಚಿಸಬೇಕು ಅನ್ನೊ ಹೊಣೆಗಾರಿಕೆಯನ್ನ ತರಗತಿಗಳಲ್ಲಿ ತಗೊಳ್ಳಲೇ ಇಲ್ಲ. ಪಠ್ಯ ಪುಸ್ತಕಗಳೂ ತಗೊಳ್ಳಿಲ್ಲ, ತರಗತಿಗಳೂ ತಗೊಳ್ಳಿಲ್ಲ. ಅಧ್ಯಾಪಕರು ಆ ಮಧ್ಯದಲ್ಲಿ ತಮ್ಮ ರವಾನೆ ಮಾಡೊ ಕೆಲಸಗಳನ್ನ ಮಾಡ್ತ ಇದ್ರು.

ಚಲಪತಿ: ವಿದ್ಯಾರ್ಥಿಗಳನ್ನ ಸಂಪೂರ್ಣ ನಗಣ್ಯಗೊಳಿಸಲಾಗಿತ್ತು ಈ ಪ್ರೋಸೆಸ್ ಒಳಗಡೆ..

ಕೆ.ವಿ.ಎನ್: ಹೌದು, ಇವತ್ತಿನವರೆಗೂ ಕೂಡ ಪದವಿ ತರಗತಿಗಳ ಪಾಠ ಇಂಟರ್ಯಾಕ್ಟೀವ್ ಮೋಡಲ್ಲಿ ಇರೋದೆ ಇಲ್ಲ. ವಿದ್ಯಾರ್ಥಿಗಳನ್ನ ರಿಸೀವ್ ಮೋಡಲ್ಲೆ ಇಟ್ಟಿರ್ತಾರೆ. ಯಾರು ಚಂದಾಗಿ ಮಾತಾಡ್ತಾರೆ, ನಿರರ್ಗಳವಾಗಿ ಒಳ್ಳೆ ಪದಕೋಶ ಇಟ್ಕೊಂಡು ಮಾತಾಡ್ತಾ ಇರ್ತಾರೆ

ಅವರೆ ಒಳ್ಳೆ ಅಧ್ಯಾಪಕರು. ಹಾಗಾಗಿ ಅಧ್ಯಾಪಕರು ಹೇಳ್ತಾರೆ, ವಿದ್ಯಾರ್ಥಿಗಳು ಎಷ್ಟನ್ನೊ ಹೀರಿಕೊಳ್ತಾರೆ. ಎಲ್ಲಾನು ತಗೊಳ್ತಾರೆ ಅಂತಲ್ಲ. ಹಾಗೆ ಹೀರಿಕೊಳ್ಳೋದೇನೆ ಸರಿಯಾದ ಬೋಧನೆ ಅನ್ನೋದೆ ಇವತ್ತಿನವರೆಗೂ ಬಲವಾಗಿ ರೂಢಗೊಂಡಿರುವ ಬೋಧನಾ ವಿಧಾನ. ಇದನ್ನ ಯಾರೂ ಪ್ರಶ್ನೆ ಮಾಡೇ ಇಲ್ಲ. ಅದರಲ್ಲಿ ವಿದ್ಯಾರ್ಥಿಗಳ ಪಾತ್ರ ಆಲ್ಮೋಸ್ಟ್ ನಿಲ್. ಪದವಿ ತರಗತಿಗಳ ಸಾಮಾನ್ಯ ಕನ್ನಡ ವಿದ್ಯಾರ್ಥಿಗಳು–ಐಚ್ಛಿಕದಲ್ಲಿ ಆ ರೀತಿ ಆಗಿದೆಯೊ ಇಲ್ವೊ ಗೊತ್ತಿಲ್ಲ ನಂಗೆ–ಬಹಳ ಒಳ್ಳೆಯ ವಿದ್ಯಾರ್ಥಿಗಳು ಅನ್ಕೊಂಡೋರು ಏನ್ಮಾಡಿದಾರೆ ಅಂದ್ರೆ, ಅಧ್ಯಾಪಕರಿಂದ ಹೀರಿಕೊಂಡಿದ್ದೇನಿದೆ ಅದನ್ನೆ ಅಧಿಕೃತ ಅಂತ ತಿಳಿದು ಪ್ರಕಟಿಸಿದೋರು ಒಳ್ಳೆ ವಿದ್ಯಾರ್ಥಿಗಳಾಗಿದಾರೆ.

**ಚಲಪತಿ:** ಸರಿಯಾಗಿ ಹೀರಿಕೊಳ್ಳುವವರು ಮತ್ತು ಹೀರಿಕೊಂಡದ್ದನ್ನ ಅಭಿವ್ಯಕ್ತಿಸುವವರು..

**ಕೆ.ವಿ.ಎನ್:** ಅದರಿಂದ ಒಂದು ರೀತಿ ಮೊಹರು ಒತ್ತುವ ಕೆಲಸ, ಅಧಿಕೃತಗೊಳಿಸುವ ಕೆಲಸ ತರಗತಿಗಳಲ್ಲಿ ನಡೆದಿದೆ.

**ಚಲಪತಿ:** ಇದನ್ನ ಸಂಪೂರ್ಣವಾಗಿ ಕಂಟ್ರೋಲ್ ಮಾಡಿರೋದು ಅಂದ್ರೆ, ಕನ್ನಡ ಸಾಹಿತ್ಯ ಚರಿತ್ರೆ ಮತ್ತು ವಿಮರ್ಶೆ ಅಂತ..

**ಕೆ.ವಿ.ಎನ್:** ವಿಮರ್ಶೆ. ಸಾಹಿತ್ಯ ಚರಿತ್ರೆ ಅಂತ ನಮ್ಮಲ್ಲಿ ಇಲ್ವೆ ಇಲ್ವಲ್ಲ, ಸಾಹಿತ್ಯ ವಿಮರ್ಶೇನೆ ಅದು. ಕನ್ನಡ ಸಾಹಿತ್ಯ ಚರಿತ್ರೆ ಅಂತ ಹೆಸರು ಹೇಳ್ತಾರೆ.ಅಷ್ಟೆ. ಅಲ್ಲಿರೋದು ವಿಮರ್ಶೇನೆ. ಇಟ್ಸ್ ಎ ಕ್ರಾನಿಕಲ್ ಅಷ್ಟೇನೆ. ಪಂಪನ ನಂತರ ರನ್ನನ್ನ ಓದ್ಬೇಕು, ರನ್ನನ ನಂತರ ಕುಮಾರವ್ಯಾಸನನ್ನ ಓದ್ಬೇಕು ಅಂತನ್ನೋದು ಟೆಕ್ಸ್ಟ್ ಬುಕ್ಕಲ್ಲಿ ಮುದ್ರಿತವಾದ ಕ್ರಮದಲ್ಲಿ ಅದು ಕಾಣಿಸ್ತದೆ. ಬಟ್ ನಮ್ಮ ಓದು ಯಾವತ್ತೂ ಆ ತರದಲ್ಲಿರೊದಿಲ್ಲವಲ್ಲ. ನೀವು ಕುವೆಂಪೂನ ಓದ್ಬಿಟ್ಟು ಆಮೇಲೆ ಕುಮಾರವ್ಯಾಸನನ್ನ ಓದ್ತೀರಿ, ಕುಮಾರವ್ಯಾಸನನ್ನ ಓದ್ಬಿಟ್ಟು ನಂತರ ಹರಿಹರನನ್ನ ಓದ್ತೀರಿ. ಆದ್ದರಿಂದ ಯಾರ ಓದು ಯಾರ್ಮೇಲೆ ಪ್ರಭಾವ ಬೀರ್ತದೆ ಅಂತ ಹೇಳಾಕಾಗಲ್ಲ. ಬಟ್ ವಿಮರ್ಶಾ ಲೋಕ ಏನನ್ನ ನಂಬ್ಕೊಂಡಿತ್ತು ಅಂತಂದ್ರೆ, ಈ ಪರಂಪರೆ ಈ ತರಾನೆ ಬಂದಿದೆ ಅಂತ. ಪಂಪನಿಂದ ರನ್ನ ಪ್ರಭಾವಿತನಾಗ್ತಾನೆ, ರನ್ನನಿಂದ ಕುಮಾರವ್ಯಾಸ ಪ್ರಭಾವಿತನಾಗ್ತಾನೆ, ಅವರಿಂದ ಮುಂದಿನ ನಮ್ಮ ನವೋದಯ ಕವಿಗಳು ಪ್ರಭಾವಿತರಾಗ್ತಾರೆ ಅಂತ. ಏಕಮುಖಿಯಾದ ಕಾಲಾನುಕ್ರಮಣಿಯ ಚಿಂತನೆ ಇದು. ನನ್ನ ಪ್ರಕಾರ, ನಮ್ಮ ವಿಮರ್ಶೆಯಾಗ್ಲಿ, ತರಗತಿಯ ಬೋಧನೆಯಾಗ್ಲಿ

ಈ ಕಲ್ಪನೇನ ಎಲ್ಲೂ ಟೆಸ್ಟ್ ಮಾಡಕ್ಕೋಗ್ಲಿಲ್ಲ. ಅದು ತನ್ನ ಸಾಮರ್ಥ್ಯವನ್ನು ಕಳ್ಕೊಂಡಿತ್ತು, ಅದರಿಂದಾಗಿ ಹೊಸದಾಗೇನೊ ಹುಡುಕ್ತಾ ಇದ್ರು, ಚಂಪೂ ತನ್ನ ಎಲ್ಲಾ ಸಾಮಥ್ಯವನ್ನು ಮುಗಿಸಿತ್ತು, ಅದಕ್ಕಾಗಿ ದೇಸಿ ಛಂದಸ್ಸುಗಳು ಬಂದ್ವು ಅಂತ, ಇದು ಅದಕ್ಕೆ ಪ್ರತಿಭಟನೆಯಾಗಿ ಬಂತು ಅನ್ನೊದೆಲ್ಲ ಜನರಲೈಸ್ ಸ್ಟೇಟ್ ಮೆಂಟಿ ಹೊರತು, ನೋಬಡಿ ಟ್ರೈಟು ಕ್ವಸ್ಚನ್ ಇಟ್ ಏನದು ಅಂತ?..

**ಚಲಪತಿ:** ಈ ಹಿನ್ನೆಲೆಯೊಳಗಡೆ ಪದವಿ ಹಂತದ ಭಾಷಾ ತಿಳುವಳಿಕೆಯ ಪಠ್ಯಗಳ ಉದ್ದೇಶವೇನಾಗಿರಬೇಕು.. ಅಂತ..ನಿಮ್ಮ..

**ಕೆ.ವಿ.ಎನ್:** ನೊ.. ಏನಾಗಿದೆ ಅಂದ್ರೆ, ಪದವಿ ತರಗತಿಯಲ್ಲಿ ಭಾಷೆಯನ್ನ ಒಂದು ವಿಷಯವನ್ನಾಗಿ ಯಾಕೆ ಬೋಧಿಸಬೇಕು ಅನ್ನೋದನ್ನ ಯಾರೂ ಎಲ್ಲು ಡಿಫೈನ್ ಮಾಡ್ಲೇ ಇಲ್ಲ. ಸೊ, ಅದು ಇದೆ, ಅದಕ್ಕೋಸ್ಕರ ಮುಂದುವರಿಸಬೇಕು ಅನ್ನೊ ತರದಲ್ಲಿ ಯೋಚನೆ ಮಾಡ್ತಾ ಇರೋದ್ರಿಂದಾಗಿ ಏನನ್ನಾದರೂ ಪ್ರಿಸ್ಕೈಬ್ ಮಾಡ್ಬೇಕು, ಪ್ರಿಸ್ಕೈಬ್ ಮಾಡಿದ್ದನ್ನ ವಿದ್ಯಾರ್ಥಿಗಳು ಓದಬೇಕು. ಮತ್ತೆ ಅದನ್ನ ಟೆಸ್ಟ್ ಮಾಡ್ಬೇಕು, ಮಾಡಿ ಅದನ್ನ ಅವು ಪಾಸಾಗ್ಬೇಕು. ಇದಿಷ್ಟು ಮಾತ್ರ ನಡೀತಾ ಇದೆ. ಯಾಕೆ, ಏನನ್ನ ಅಚೀವ್ ಮಾಡೋದಕ್ಕೋಸ್ಕರ ಓದಿಸ್ಬೇಕು? ತುಂಬಾ ಸಂದರ್ಭದಲ್ಲಿ ಬೈ ಡಿಫಾಲ್ಟ್ ಅಧ್ಯಾಪಕರು ಏನು ಹೇಳ್ತಾರೆ ಅಂದ್ರೆ, ಅವರಿಗೆ ಕನ್ನಡ ಸಾಹಿತ್ಯ ಪರಂಪರೆ ಅಥವಾ ಸಂಸ್ಕೃತಿಯ ಪರಂಪರೆಯ ಪರಿಚಯ ಮಾಡಿಸ್ಬೇಕು, ವೈಚಾರಿಕತೆಯನ್ನ ಬೆಳೆಸ್ಬೇಕು ಮತ್ತು ಇನ್ನು ಕೆಲವು ಕಲೆಯ ಪರ್ಸೆಪ್ಶನ್ ಅಂದ್ರೆ, ಸಾಹಿತ್ಯದ ಮೂಲಕ ಕಲಾತ್ಮಕವಾದದ್ದನ್ನ ಗ್ರಹಿಸೋದನ್ನ, ಅಪ್ರಿಶಿಯೇಟ್ ಮಾಡೋದನ್ನ ಹೇಳ್ಕೊಡಬೇಕು ಅಂತೆಲ್ಲ ಹೇಳ್ತಾರೆ.' ತಾವೇನ್ ಮಾಡ್ತಾ ಇದ್ದೇವೆ ಅನ್ನೋದರ ಬಗೆಗೆ ಪ್ರಶ್ನೆಗಳು ಕೇಳ್ದಾಗ ತಾವೆ ಕಲ್ಪಿಸಿಕೊಂಡು ಹೇಳ್ತಾ ಇರೊ ಅಂತ ಉತ್ತರಗಳಿವು. ಯಾರೂ ಅವ್ರಿಗೆ ಆ ರೀತಿ ಹೇಳಿಲ್ಲ. ಟೆಕ್ಸ್ಟ್ ಬುಕ್ಕುಗಳಲ್ಲಿ ಎಲ್ಲೂ ಆ ರೀತಿ ಸೂಚಿಸಿಲ್ಲ. ಸೊ, ಇದು ಯಾಕೆ ಅನ್ನೊದು ಯಾರೂ ಪ್ರಶ್ನೆ ಮಾಡಿಲ್ಲ. ಈಗ ಹೈಸ್ಕೂಲ್ ಲೆವೆಲ್ ತಗೊಳ್ಳಿ, ಹೈಸ್ಕೂಲಲ್ಲಿ ಒಂದು ಇಂಟೆರೆಸ್ಟಿಂಗ್ ಪ್ಯಾಟರ್ನ್ ಇದೆ. ಕನ್ನಡ ಮಾಧ್ಯಮದಲ್ಲಿ ವಿದ್ಯಾರ್ಥಿಗಳು ಓದ್ತಾ ಇದ್ರೆ, ಎಲ್ಲ ವಿಷಯಗಳನ್ನ ಕನ್ನಡ ಮಾಧ್ಯಮದಲ್ಲೂ ಓದ್ತಾ ಇರ್ತಾರೆ, ಕನ್ನಡವನ್ನೂ ಓದ್ತಾ ಇರ್ತಾರೆ. ಕನ್ನಡ ಎಲ್ಲ ತರಗತಿಗಳಲ್ಲು ಇರ್ತದೆ. ಇಂಗ್ಲಿಷ್ ತರಗತಿ ಬಿಟ್ರೆ ಕನ್ನಡ ತಗತಿಯಲ್ಲೂ ಇರ್ತದೆ, ಸೈನ್ಸ್ ತರಗತಿಯಲ್ಲು ಇರ್ತದೆ, ಸೋಸಿಯಲ್ ಸೈನ್ಸ್ ತರಗತಿಯಲ್ಲು ಇರ್ತದೆ. ಆದ್ದರಿಂದ ಕನ್ನಡ ಎಲ್ಲ ಕಡೇನೂ ಹರಡಿ

ಕೊಂಡಿರೋದ್ರಿಂದಾಗಿ ಆ ಭಾಷೆ ಅನ್ನೋದು ವಿದ್ಯಾರ್ಥಿಯ ಗ್ರಹಿಕೆ ಮತ್ತು ಅಭಿವ್ಯಕ್ತಿಯ ನೆಲೆಗಳನ್ನ ಒಂದು ರೀತಿಯಲ್ಲಿ ರೂಪಿಸ್ತಾ ಇರ್ತದೆ. ಈಗ ಸಾಮಾನ್ಯವಾಗಿ ನಾವು ವಿದ್ಯಾರ್ಥಿಗಳನ್ನ, ಯಾವುದೊ ಅವರ ಭಾಷಿಕ ಸ್ಕಿಲ್ಸ್ ಗಳು ಡೆವಲಪ್ ಆಗಿಲ್ಲ ಅಂತ ಮಾತಾಡುವಾಗ ಮರೆಯೋದೇನು ಅಂತಂದ್ರೆ, ಅದೇ ವಿದ್ಯಾರ್ಥಿಗಳು ಸೈನ್ಸಿನಲ್ಲಿ ಅಥವಾ ಸೋಸಿಯಲ್ ಸ್ಟಡೀಸ್ ಪೇಪರ್ರುಗಳಲ್ಲಿ ಉತ್ತರಗಳನ್ನು ಬರೀಬಲ್ಲವರಾಗಿರ್ತಾರೆ. ಅಲ್ಲಿ ಕನ್ನಡವನ್ನು ಬರಿದಿರ್ತಾರೆ ಅವ್ರು. ಸ್ವತಂತ್ರವಾದ ಉತ್ತರಗಳೊ ಅಲ್ವೊ ಗೊತ್ತಿಲ್ಲ ನನಗೆ, ಬರೀತಾರೆ ಅವ್ರು ಕನ್ನಡವನ್ನ. ಬರೆಯೊಲ್ಲ ಅಂತಲ್ಲ. ಅಂದ್ರೆ ಸ್ಕಿಲ್ಸ್ ಆಗಿ ಡೆವಲಪ್ ಮಾಡೋದನ್ನ ನಾವು ಅಲ್ಲಿ ಯೋಚ್ನೆ ಮಾಡೋದಿಲ್ಲ.

ಪದವಿ ತರಗತಿಗಳಿಗೆ ಬಂದಾಗ್ಲು ಕೂಡ ಇದರ ಬಗ್ಗೆ ನಾವು ಏನೂ ಯೋಚ್ನೆ ಮಾಡಿಲ್ಲ, ಭಾಷೆಯನ್ನ ನಾವು ಯಾಕೆ ಪಾಠ ಮಾಡ್ಬೇಕು ಅಂತ ಅನ್ನೋದು. ಈ ಹೊಸ ಇಪ್ಪತ್ತೊಂದನೆ ಶತಮಾನದ ಈ ಘಟ್ಟದಲ್ಲಿ ಇನ್ನೂ ಹೆಚ್ಚು ಕ್ರೈಸಿಸ್ ಇದೆ ಈಗ. ಯಾಕೆಂತಂದ್ರೆ ಭಾಷೆ ಅನ್ನೋದು ಒಂದು ವ್ಯಕ್ತಿಯಲ್ಲಿ ಈಗಾಗ್ಲೆ ಇರುವ, ಅಕ್ವೈರ್ ಮಾಡ್ಕೊಂಡಿರುವ ಒಂದು ಸಾಮರ್ಥ್ಯ. ಅದನ್ನ ಆಕೆ ಅಥವಾ ಆತ ಯಾವಾಗ, ಯಾವ ರೀತಿ ಬೇಕಾದ್ರು ಬಳಸ್ಕೋಬಹುದು. ಅದರಿಂದ ಅದನ್ನ ಮರಳೀ ರೀಇನ್ಫೋರ್ಸ್ ಮಾಡೋದು ಅನಗತ್ಯ ವೇಸ್ಟ್ ಆಫ್ ಟೈಮ್ ಅನ್ನೊ ತರದಲ್ಲಿ ತಿಳಿಲಾಗ್ತಿದೆ. ನಮ್ಮ ಪಠ್ಯ ನಿರ್ಮಾಣ, ಪಠ್ಯ ಬೋಧನೆ ಮತ್ತು ಮೌಲ್ಯಮಾಪನ ಕೂಡ ಅವರ ಚಿಂತನೆಗಳನ್ನ ರೀಇನ್ಫೋರ್ಸ್ ಮಾಡೋದು, ವೇಸ್ಟ್ ಅನ್ನೋದನ್ನೆ ಹೇಳ್ತಾ ಇದೆ ಅದು. ಇವ್ರು ಕೂಡ, ಇಲ್ಲ ಅದು ವೇಸ್ಟಲ್ಲ ಅನ್ನೋ ರೀತಿಯಲ್ಲಿ ಹೊಸದನ್ನ ಯೋಚ್ನೆ ಮಾಡ್ತಾ ಇಲ್ಲ. ಪಠ್ಯ ಪುಸ್ತಕಗಳನ್ನ ಮಾಡ್ದೆ ಇರೋದ್ರಿಂದಾಗಿ ಯಾರಾದ್ರು ಇದನ್ನ ಕ್ವಶ್ಚನ್ ಮಾಡಿದ್ರೆ, ಸರಿಯಾದ ಉತ್ತರವನ್ನ ಕೋಡೋಕಾಗ್ತ ಇಲ್ಲ. ಯಾಕೆ.. ಉದಾಹರಣೆಗೆ, ಕಾಮರ್ಸ್ ವಿದ್ಯಾರ್ಥಿಗಳಿಗೆ ಯಾಕ್ಬೇಕು ಕನ್ನಡ, ಯಾಕವರು ಕುವೆಂಪೂನ ಓದ್ಬೇಕು, ಯಾಕವ್ರು ತೇಜಸ್ವೀನ ಓದ್ಬೇಕು, ಯಾಕೆ ಅನಂತ್ಮೂರ್ತೀನ ಓದ್ಬೇಕು? ನೀವು ಓದ್ಬೇಕು ಅಂತ ಹೇಳ್ತೀರೆ ಹೊರತು, ಯಾಕೆ ಓದಬೇಕು ಅನ್ನೊ ಪ್ರಶ್ನೆಗೆ ಉತ್ತರ ಕೊಡೋಕಾಗ್ತಾ ಇಲ್ಲ. ಬಹಳ ಜನರಲ್ಲಾದ ಉತ್ತರಗಳನ್ನ ಕೊಡ್ತಾ ಇದ್ದೀವಿ. ಇವೆಲ್ಲ ನಮ್ಮ ಕನ್ನಡದ ಹೆಮ್ಮೆ, ಸಂಸ್ಕೃತಿಯ ಗುರುತುಗಳು ಇದನ್ನೆಲ್ಲ ಹೇಳ್ತಾ ಇದ್ದೀವಿ. ಅದು ಯಾಕೆ ಅಗತ್ಯ ಅಂತ ಕೂಡ ಹೇಳ್ತಾ ಇಲ್ಲ. ಯಾರೊ ಒಬ್ಬ ಹುಚ್ಚನ ತರ ಪ್ರಶ್ನೆ ಮಾಡ್ತಾನೆ. ಅದು ತಿಳ್ಕೊಂಡು ನನಗೇನಾಗ್ಬೇಕು.

ಕುವೆಂಪುಗೆ ಜ್ಞಾನಪೀಠ ಬಂದಿರಬೌದು ಅನಂತ್ಮೂರ್ತಿಗೆ ಜ್ಞಾನಪೀಠ ಬಂದಿರಬೌದು ನನಗೇನದರಿಂದ? ಅಂತ ಯಾರೊ ವಿದ್ಯಾರ್ಥಿ ಕೇಳಿದ್ರೆ ಅಥವಾ ಯಾರೊ ಕೇಳಿದ್ರೆ ನಾವು ಅದಕ್ಕೆ ಉತ್ತರ ಕೊಡೋಕಾಗ್ತಿಲ್ಲ. ನಮ್ಮ ಅಸರ್ಟೀವ್‌ನೆಸ್ ಎಲ್ಲಿವರೆಗೆ ವೀಕಾಗ್ಬಿಟ್ಟಿದೆ ಅಂದ್ರೆ, ಮೊನ್ನೆ ಕುವೆಂಪು ವಿಶ್ವವಿದ್ಯಾಲಯದಲಿ, ಕಾಮರ್ಸ್ ವಿದ್ಯಾರ್ಥಿಗಳಿಗೆ ಕನ್ನಡ ಬೇಡ, ಬಿಬಿಎಂನೋರಿಗೆ ಕನ್ನಡ ಬೇಡ ಅಂತ ಹೇಳ್ತೋರು ಯಾರು ಅಂದ್ರೆ ಕಾಮರ್ಸ್ ಅಧ್ಯಾಪಕ್ರು, ಕಾಮರ್ಸ್ ಅಧ್ಯಾಪಕರು ಅಷ್ಟು ದಾರ್ಷ್ಟ್ಯದಿಂದ ಮಾತಾಡ್ತಾ ಇದಾರೆ. ಅಂದ್ರೆ ಅವರ ವಿಷಯದ ಬಗೆಗೆ ಹೇಳ್ಬೇಕು ಅವರು ಏನ್ ಪಾಠ ಮಾಡ್ಬೇಕು, ಏನ್ ಪಾಠ ಮಾಡಬಾರದು ಅಂತ. ವಿದ್ಯಾರ್ಥಿಗಳು ಏನೆಲ್ಲ ಕಲೀಬೇಕು ಅನ್ನೋದು ಅವರ ಹೊಣೆಗಾರಿಕೆಯಲ್ಲ. ಇದನ್ನ ನಾವು ಕನ್ನಡ ಅಧ್ಯಾಪಕರು ಹೇಳ್ತಾ ಇಲ್ಲ. ನಿಮ್ಮ ಕೆಲಸ ಏನು ಕಾಮರ್ಸ್ ಏನು ಓದ್ಬೇಕು, ಬ್ಯುಸಿನೆಸ್ ಮ್ಯಾನೇಜ್ ಮೆಂಟೇನು ಓದ್ಬೇಕು ಅಂತ ಹೇಳೋದೆ ಹೊರತು, ವಿದ್ಯಾರ್ಥಿ ಪದವಿ ತರಗತಿಯಲ್ಲಿ ಏನೆಲ್ಲಾ ಓದ್ಬೇಕು ಅಂತ ಹೇಳೊದಲ್ಲ ನಿಮ್ಮ ಕೆಲಸ. ಆದ್ರೆ ಇದಕ್ಕೆ ಗಟ್ಟಿಯಾಗಿ ಹೇಳೊ ಸಾಮರ್ಥ್ಯ ಕನ್ನಡ ಅಧ್ಯಾಪಕರಿಗೆ ಯಾಕಿಲ್ಲ ಅಂತಾಂದ್ರೆ, ಇವರಲ್ಲಿ ಯಾಕೆ ನಾವು ಪದವಿ ತರಗತಿಯಲ್ಲಿ ಕನ್ನಡ ಪಾಠ ಮಾಡ್ತಾ ಇದೀವಿ ಅನ್ನೋದರ ಬಗ್ಗೆ ಚಿಂತನೇನೆ ನಡೆದಿಲ್ಲ. ಇವರಿಗೆ ಸಶಸ್ತ್ರರಾಗಿ ಹೋದ್ರೆ ಮಾತ್ರ ಹೋರಾಡೋಕೆ ಸಾಧ್ಯ. ಸುಮ್ಮನೆ ಮೈ ಪರಚಿಕೊಂಡ್ರೆ ಏನ್ ಪ್ರಯೋಜನ. ಇದು ನಾವು ಎದುರಿಸ್ತಿರೋ ಇಕ್ಕಟ್ಟು ಅಂತ ಕಾಣ್ತದೆ. ನಾವಿದನ್ನ ಬ್ರೈನ್ ಸ್ಟಾರ್ಮಿಂಗ್ ಮಾಡಿ ನೋಡೆ ಇಲ್ಲ.

**ಚಲಪತಿ:** ಈವನ್.. ಯೂನಿವರ್ಸಿಟಿಗಳ ಆರಂಭದ ಕಾಲದಿಂದ್ಲು ಈ ತರದ್ದೇ ಬೆಳ್ಕೊಂಡ್ ಬಂದಿದೆ..

**ಕೆ.ವಿ.ಎನ್:** ಹೌದೌದು.. ಅನ್‌ಡೌಟೆಡ್ಲಿ. ಯಾಕೆಂದ್ರೆ, ಅದು ಏನಾಯ್ತಂದ್ರೆ, ಪದವಿ ತರಗತಿಗಳಿಗೆ ಬರ್ತಾ ಇದ್ದ ವಿದ್ಯಾರ್ಥಿಗಳು ಕಡಿಮೆ ಇರ್ತಿದ್ರು, ಯಾರೂ ಕೂಡ ಸಾಂಸ್ಕೃತಿಕವಾದ ಬಿಕ್ಕಟ್ಟುಗಳನ್ನ ಎದುರಿಸ್ತಾ ಇರ್ಲಿಲ್ಲ. ಮತ್ತು ಈ ಪದವಿಯನ್ನ ಮುಗಿಸಿದ್ಮೇಲೆ ಒಂದು ಜಾಬ್ ಕ್ರೈಸಿಸ್ ಅಂತ ಏನಿತ್ತು, ಅದನ್ನ ಬಹಳ ತೀವ್ರವಾಗಿ ಎದುರಿಸ್ತಾ ಇರ್ಲಿಲ್ಲ. ಆದರೆ ದಿನ ಕಳೆದ್ಮೇಲೆ ಆ ತರದ್ದಾಗ್ಲಿಲ್ಲ. ಅದರಿಂದ ಏನಾಯ್ತಂದ್ರೆ, ವಕೇಷನಲೈಸೇಷನ್ ಆಫ್ ಎಜುಕೇಶನ್ ಅಂತ ಆಗ್ಲಿಕ್ಕೆ ಯಾವಾಗ ಶುರುವಾಯ್ತು ಆಗ ಆಬ್ವಿಯಸ್ಸಾಗಿ ಹೊಸದಾಗಿ ಇಂಥ ಪ್ರಶ್ನೆಗಳೆಲ್ಲ ಹುಟ್ಟಿಕೊಂಡ್ವು. ಯಾರೂ ಅದನ್ನ ತಿಳ್ಕೊಂಡಿರಲಿಲ್ಲ ಇಂಥ ಪ್ರಶ್ನೆಗಳೆಲ್ಲ ಬರಬಹುದು ಅಂತನ್ಕೊಂಡು. ಯಾರೂ ಯೋಚ್ನೆ ಮಾಡಿರ್ಲಿಲ್ಲ.

**ಚಲಪತಿ:** ಅಂಥ ಪ್ರಶ್ನೆಗಳು ಬಂದ ಮೇಲೂ ಕೂಡ ಇದನ್ನ ನಿರ್ವಹಿಸಿಕೊಳ್ಳುವ ಪ್ರಶ್ನೆ ಹಾಗೆ...

**ಕೆ.ವಿ.ಎನ್:** ಅಧ್ಯಾಪಕರು ಖಂಡಿತ ಮಾಡಿಲ್ಲ. ಉದಾರಣೆಗೆ, ಶೇಕ್ಸ್ ಪಿಯರನ ಅನುವಾದಗಳನ್ನ ಕನ್ನಡ ಪದವಿ ತರಗತಿಗಳಲ್ಲಿ ಒಂದಿಪ್ಪತ್ತು ಮೂವತ್ತು ವರ್ಷ ಪಾಠ ಮಾಡಿದ್ದಾರೆ. ಈ ನಾಟಕಗಳನ್ನ ಇಂಗ್ಲಿಷ್ ಪಾಠದ ಭಾಗವಾಗಿ ಕೂಡ ವಿದ್ಯಾರ್ಥಿಗಳು ಕೇಳ್ತಾ ಇರ್ತಾರೆ. ಕನ್ನಡ ಅನುವಾದದಲ್ಲೂ ಓದ್ತಾ ಇರ್ತಾರೆ. ವಿದ್ಯಾರ್ಥಿಗಳ ದೃಷ್ಟಿಯಿಂದ ಇವೆರಡು ಹೇಗೆ ಡಿಫ಼ರೆಂಟು ಅನ್ನೋದನ್ನೆ ಯಾರಾದ್ರು ಪ್ರಶ್ನೆ ಕೇಳಿದ್ರೆ ಅದಕ್ಕೆ ಉತ್ತರ ಇಲ್ಲ ನಮ್ಮತ್ರ. ನಾನು ಊಹಾತ್ಮಕವಾದ ಕೇಸಲ್ಲ ಹೇಳ್ತಾ ಇರೋದು. ಬೆಂಗಳೂರು ಯೂನಿವರ್ಸಿಟಿಯಲ್ಲಿ ಒಂದ್ಸಾರಿ ಹಾಗಾಯ್ತು. ಗೆಲಿಲಿಯೋ ಕನ್ನಡ ಅನುವಾದವು ಇತ್ತು. ಅದರ ಇಂಗ್ಲಿಷ್ ವರ್ಷನ್ ಕೂಡ ಪಾಠ ಮಾಡ್ತಾ ಇದ್ರು, ಅದೇ ವಿದ್ಯಾರ್ಥಿಗಳಿಗೆ. ವಿದ್ಯಾರ್ಥಿಗಳಿಗೆ ಹ್ಯಾಗೆ ಡಿಫ಼ರೆಂಟ್ ಎಕ್ಸ್‌ಪೀರಿಯೆನ್ಸು ಇವೆರಡೂ..? ಡಿಫ಼ರೆಂಟ್ ಹೌದು, ಹೇಗೆ? ಅದನ್ನ ಯಾರು ಹೇಳ್ಬೇಕು..? ಹೇಗೆ ಅದನ್ನ ರಿಸಾಲ್ವ್ ಮಾಡ್ಬೇಕು.. ಕ್ರೈಸಿಸ್ಸನ್ನ? ಇದನ್ನ ನಾವಿನ್ನು ಯೋಚ್ನೆ ಮಾಡಿಲ್ಲ. ಬೆಕಾದಷ್ಟು ಸಂಗತಿಗಳಿವೆ.

**ಚಲಪತಿ:** ಶೇಕ್ಸ್‌ಪಿಯರನ ನಾಟಕಗಳ ಸಂದರ್ಭದಲ್ಲಿ ಇದು ಬೇಕಾದಷ್ಟು ಸಾರಿ ಆಗಿದೆ.. ಆ ಮೂಲಕ ಇಂಗ್ಲಿಷಾಗ್ಲಿ, ಕನ್ನಡವಾಗ್ಲಿ ಸಾಹಿತ್ಯ ಹೇಳೋದೆ ಗುರಿ ಅನ್ನೊ ನೆಲೆಗಟ್ಟಲ್ಲಿ ಪಾಠ ಮಾಡ್ಕೊಂಡು ಬರ್ತಿದ್ದೀವಿ..

**ಕೆ.ವಿ.ಎನ್:** ಅದೆ ಅದೆ.., ಸಾಹಿತ್ಯವನ್ನೆ. ಬಹುಶಃ ಅದು ನಾವು ತಿಳ್ಕೊಂಡಷ್ಟು ಮೇಜರ್ ರೋಲನ್ನ ಅದು ತಗೊಬಾರ್ದು ಅಂತಾ ಅನಿಸ್ತಾ ಇದೆ. ಸಾಹಿತ್ಯ ಬೋಧನೆ, ಅದರ ಮುಖಾಂತರ ಸಾಂಸ್ಕೃತಿಕ ನೆಲೆಗಳ ಬೋಧನೆ ಅನ್ನೋದಿದೆಯಲ್ಲ ಇದು ಒಂದರ್ಥದಲ್ಲಿ ಇಪ್ಪತ್ತು ಮುವತ್ತು ವರ್ಷದ ಹಿಂದೆ ಸ್ವಲ್ಪ ಸಮರ್ಥನೀಯುವಾದ ಚಿಂತನೆಯಾಗಿತ್ತು. ಬಟ್ ಇವತ್ತು ಅದಲ್ಲ ಅಂತ ಕಾಣುತ್ತೆ. ಯಾಕೆಂದ್ರೆ, ವಿದ್ಯಾರ್ಥಿಗಳಿಗೆ ಸಾಂಸ್ಕೃತಿಕ ನೆಲೆಯ ಎಕ್ ಪೋಷರ್ಗ್ಗಳು ಹಲವು ಕಡೆಗಳಲ್ಲಿ ಆಗ್ತಾ ಇರ್ತದೆ. ಅಂದ್ರೆ ಎಕ್ಸ್ಲೂಸಿವಾಗಿ ತರಗತಿಗಳಲ್ಲಿ ಮಾತ್ರ ನಡೀತಾ ಇರುವ ಇಂಟರಾಕ್ಶನ್ ಅಲ್ಲ ಇದು. ವಿದ್ಯಾರ್ಥಿಗಳು ಇವತ್ತು ಹಲವು ಮೂಲಗಳಿಂದ ಈ ತರದ ಎಕ್ಸ್ ಪೋಶರುಗಳನ್ನ ಪಡೀತಾ ಇರ್ತಾರೆ. ಇದನ್ನ ಸಪ್ಲಿಮೆಂಟ್ ಮಾಡ್ಬೇಕೊ, ಕಾಂಪ್ಲಿಮೆಂಟ್ ಮಾಡ್ಬೇಕೊ ಕೌಂಟರ್ ಮಾಡ್ಬೇಕೊ, ಕ್ವೆಶ್ಚನ್ ಮಾಡ್ಬೇಕೊ, ರೀಇನ್‌ಪೋರ್ಸ್ ಮಾಡ್ಬೇಕೊ ಏನೂ ಗೊತ್ತಿಲ್ಲ

ನಮಗೀಗ. ಸಾಂಸ್ಕೃತಿಕ ನೆಲೇನೆ ಅಂತ ಹೇಳೋದಾದ್ರೂನು ಅದರಿಂದ ಬಹಳ ಕೇರ್‌ಫುಲ್ಲಾಗಿ ಇರ್ಬೇಕಾಗ್ಬರ್ತದೆ. ಆದರ್ ವೈಸ್ ವೇಸ್ಟ್ ಆಫ್ ಟೈಮ್, ಎನರ್ಜಿ ಎಲ್ಲ ಆಗ್ತಾ ಇರ್ತದೆ.

**ಚಲಪತಿ:** ಆ ಮೂಲಕ ಮೀಡಿಯಾ ಇಂದ ಹಿಡಿದು ಎಲ್ಲವೂ ಕೂಡಾ ಕಲ್ಚರ್ ನ ಬೇರೆ ಬೇರೆ ಮಾಡಲ್ ಗಳನ್ನ ಎದುರೀಗೆ ಇಡ್ತಾ ಇರೊದು ಕೂಡ ನಮಗೆ ಸವಾಲಾಗಿದೆ..ಅಂತ..

**ಕೆ.ವಿ.ಎನ್:** ಹೌದು...ಹೌದು.. ಟೀವಿ ನೋಡ್ತಾ ಇರ್ತಾರೆ. ಚಲನಚಿತ್ರ ನೋಡ್ತಾ ಇರ್ತಾರೆ..ಮ್ಯೂಸಿಕ್ ಕೇಳ್ತಾ ಇರ್ತಾರೆ.. ಈಗಂತೂನು ಮ್ಯೂಸ್ಸಿಕ್ ಕೇಳೋಕೆ ಟೆಕ್ನಾಲಜಿಯ ಹಲವಾರು ವಿಧಾನಗಳಿದಾವೆ. ತರಗತಿಯಲ್ಲಿ ಪಾಠ ಕೇಳ್ತಾನೂ ಮ್ಯೂಸಿಕ್ ಕೇಳ್ಬಹುದು. ಕಿವಿಗೆ ಇಯರ್ ಫೋನ್ ಹಾಕ್ಕೊಂಡು ಮ್ಯೂಸಿಕ್ಕೂ ಕೇಳ್ತಾ ಇರ್ಬೌದು, ನಿಮ್ಮ ಪಾಠಾನೂ ಕೇಳ್ತಿರ್ಬೌದು. ಆದ್ದರಿಂದ ನಮ್ಮ ಪರ್ಸೆಪ್ಶನ್ ನ ಸ್ವರೂಪಾನೆ ಬೇರೆ ಆಗ್ಬಿಟ್ಟಿರೋದ್ರಿಂದ, ಲೋಕವನ್ನ ಪರ್ಸೀವ್ ಮಾಡೊ ಕ್ರಮಾನೆ ಪಲ್ಲಟ ಆಗಿರೋದ್ರಿಂದಾಗಿ ಈಗ ನಿಮ್ಮ ಚಾಲೆಂಜುಗಳು ಬೇರೆ ತರದವಾಗಿರ್ತವೆ. ಅಂದ್ರೆ ಕನ್ನಡ ಅಧ್ಯಾಪಕರುಗಳು ಎಲ್ಲೂ ಮೈಮೇಲೆ ಹಾಕ್ಕೊಳ್ಳಿಲ್ಲ ಈ ಪ್ರಶ್ನೇನ.

**ಚಲಪತಿ:** ಇದು ಭಾಷಿಕವಾದ ಇಕ್ಕಟ್ಟುಗಳನ್ನ ಕ್ರಿಯೇಟ್ ಮಾಡಿರೋದು ಕೂಡ ಬೇರೆ ತರದ್ದೇನೆ...

**ಕೆ.ವಿ.ಎನ್:** ಹೌದು. ಆಬ್ವಿಯಸ್ಸಾಗಿ, ವಿಶ್ವವಿದ್ಯಾಲಯ ಮಟ್ಟಕ್ಕೆ ಏನಾಗ್ತದೆ ಅಂದ್ರೆ, ಕೊನೆಪಕ್ಷ ಒಂದೊಂದು ವಿಶ್ವವಿದ್ಯಾಲಯವೂ ಒಂದು ಸೀಮಿತ ಭೌಗೋಳಿಕ ವಲಯದಲ್ಲಿ ಆಪರೇಟ್ ಆಗ್ತಾ ಇರೋದ್ರಿಂದ ಈಗ, ಒಂದು ಸ್ವಲ್ಪಮಟ್ಟಿಗೆ ಪ್ರಾದೇಶಿಕ ಪ್ರಭೇದಗಳು, ವಿದ್ಯಾರ್ಥಿಗಳ ಸಿದ್ಧತೆಗಳು ಇವೆಲ್ಲ ಒಂದು ರೀತಿಯಲ್ಲಿ ಹೈಲೈಟ್ ಆಗ್ಬಿಟ್ಟಿರ್ತವೆ ಪದವಿ ತರಗತಿಗಳಲ್ಲಿ. ಅದರೆ ಹಿಂದೆ ಹೀಗೆ ಹಾಗ್ತಾ ಇರ್ಲಿಲ್ಲ, ನಾನೆ ಡಿಗ್ರಿ ಓದ್ತಾ ಇದ್ದಾಗ ಮೈಸೂರು ವಿಶ್ವ ವಿದ್ಯಾಲಯದಲ್ಲಿ, ಅದು ಮೈಸೂರು ಮತ್ತು ಚಾಮರಾಜನಗರದ ಇವತ್ತಿನ ಜಿಲ್ಲೆ, ಮಂಡ್ಯ, ಹಾಸನ, ಚಿತ್ರದುರ್ಗ. ತುಮಕೂರು ಇವೆಲ್ಲವನ್ನೂ ಒಳಗೊಂಡಂತ ವಿಶ್ವವಿದ್ಯಾಲಯ ಆಗಿತ್ತು. ಅಂದ್ರೆ ಮಂಡ್ಯಾದ ವಿದ್ಯಾರ್ಥಿಗಳು ಮಾತಾಡ್ತಿದ್ದ ಕನ್ನಡ ನಮ್ಮ ಕ್ಲಾಸ್ ಮೇಟ್ಸು, ಕೊಡಗಿನ ವಿದ್ಯಾರ್ಥಿಗಳು ಮಾತಾಡಿದ್ದ ಕನ್ನಡ, ಹಾಸನದೋರು ಮಾತಾಡ್ತಿದ್ದ ಕನ್ನಡ, ಕೊಳ್ಳೆಗಾಲ್ದೋರು ಮಾಟಾಡ್ತಿದ್ದ ಕನ್ನಡ ಇವೆಲ್ಲವೂ ಬೇರೆ ಬೇರೆ ಇರ್ತಿತ್ತು. ಆಗ ಅಧ್ಯಾಪಕರುಗಳು ಇದೆಲ್ಲವನ್ನೂ ಒಳಗೊಳ್ಳುವ ರೀತಿಯ ಪಠ್ಯಕ್ರಮವನ್ನಾಗಲಿ,

ಬೋಧನಾಕ್ರಮವನ್ನಾಗ್ಲಿ ಮಾಡ್ತ ಇರ್ಲಿಲ್ಲ. ಅದರಿಂದ ಭಾಷಿಕ ಇಕ್ಕಟ್ಟುಗಳು ಸಾಮಾಜಿಕ ಪ್ರಭೇದದ್ದು ಮತ್ತು ಭಾಷೆಯ ಬೇರೆ ಬೇರೆ ಸಾಧ್ಯತೆಗಳೇನಿವೆ ಇವುಗಳನ್ನ ದೊಡ್ಡ ಪ್ರಶ್ನೆಯನ್ನಾಗಿ ಹಾಕ್ಕೊಳ್ಳಲೇ ಇಲ್ಲ. ಹಾಕ್ಕೊಂಡು ಪಾಠ ಮಾಡಲೇ ಇಲ್ಲ.

**ಚಲಪತಿ:** ಇದೇ ಇವತ್ತಿನ ಇಂಥ ಇಕ್ಕಟ್ಟುಗ್ಳಿಗೆ ಕಾರಣ ಅಂತೀರ ಸಾರ್..

**ಕೆ.ವಿ.ಎನ್:** ಯಾವ ತರದ ಇಕ್ಕಟ್ಟುಗಳು?..

**ಚಲಪತಿ:** ಅದೇ, ಆಗ್ಲೆ ಹೇಳಿದ ಹಾಗೆ, ಏನು ಹೇಳಬೇಕಾಗಿದೆ, ಯಾಕೆ ಹೇಳಬೇಕಾಗಿದೆ ಮತ್ತು ಹೇಗೆ ಹೇಳಬೇಕಾಗಿದೆ ಅನ್ನೊ ಪ್ರಶ್ನೆಗಳನ್ನ ಹಾಕ್ಕೊಳ್ಳದೆ ಇರೋದರಿಂದ ಆಗಿರುವ, ಪದವಿಯಲ್ಲಿ ಕನ್ನಡ ಬೇಕಾಗಿಲ್ಲ ಅನ್ನುವ ಮಾದರಿಯ ಇಕ್ಕಟ್ಟುಗಳು.. ಹುಟ್ಕೊಂಡಿವೆ ಅಂತ...

**ಕೆ.ವಿ.ಎನ್:** ಕರೆಕ್ಟ್, ಈಗ ನಾನು ಸ್ವಲ್ಪ ಲೌಡ್ ಥಿಂಕಿಂಗ್ ಮಾಡ್ತಾ ಇದ್ದೆ. ಈ ತರ ಯೋಚನೆ ಮಾಡಿದ್ದಿದ್ರೆ ಬಹುಶಃ ನಮ್ಮ ಅಲೋಚನ ಕ್ರಮ ಬೇರೆಯಾಗೊದೊ ಏನೊ. ಲಾಂಗ್ವೇಜ್ ನ ಎರಡು ವಿಷಯಗಳಾಗಿ ಬೋಧಿಸ್ತಾ ಇದೀವಿ ಅಂದ್ರೆ, ಮೂರು ಸಬ್ಜೆಕ್ಟುಗಳನ್ನ ಎಲೆಕ್ಟೀವ್ ಗಳನ್ನಾಗಿ ಮಾಡ್ತಾರೆ. ಇದರ ಬದಲು ಐದೂ ವಿಷಯಗಳು ಅಂತ ಹೇಳಿದ್ರೆ ಏನು? ಐದೂ ವಿಷಯಗಳೇ. ಕನ್ನಡ ಮತ್ತು ಇಂಗ್ಲಿಷ್ ಅನ್ನೋದು ಕಂಪಲ್ಸರಿ. ಉಳಿದ ಮೂರು ಸಬ್ಜೆಕ್ಟುಗಳೂ ನಿಮಗೆ ಆಪ್ಷನಲ್ಲು. ಮೇಜರ್ ಆಗಿರೋದು ಕಂಟೆಂಟ್ ಕೋರ್ಸುಗಳು, ಇವು ಅಪೆಂಡೇಜ್ ಅನ್ನೊ ತರದಲ್ಲಿ. ಅಂದ್ರೆ ಪದವಿ ತರಗತಿಯ ಪಠ್ಯಕ್ರಮವನ್ನೇನೆ ಬೇರೊಂದು ರೀತಿಯಲ್ಲಿ ಆಲೊಚನೆ ಮಾಡೋಕೆ ಶುರು ಮಾಡಿದ್ರೆ, ಆವಾಗ ವಿದ್ಯಾರ್ಥಿಗಳಿಗೂ ಒಂದವಕಾಶ ಜಾಸ್ತಿ ಸಿಗುತ್ತೆ. ಅಧ್ಯಾಪಕರುಗಳಿಗೂ ಸಮರ್ಥನೆ ಮಾಡ್ಕೊಳ್ಳೋಕೆ ಹೆಚ್ಚು ಅವಕಾಶಗಳು ಸಿಗುತ್ತೆ. ಇದರ ಬಗ್ಗೆ ಯೋಚನೆ ಮಾಡಬೇಕಾಗಿದೆ ನೀವು.

**ಚಲಪತಿ:** ಹೇಗೆ ಸಾರ್..

**ಕೆ.ವಿ.ಎನ್:** ಫಾರ್ ಎಕ್ಸಾಂಪಲ್ ಈಗ ಪದವಿ ತರಗತಿಗಳಿಗೆ ಬರುವಂತ ವಿದ್ಯಾರ್ಥಿಗಳಿಗೆ, ಓದಬಹುದಾದ ವಿಷಯಗಳು ಇಂತಿಷ್ಟು, ಅದರಲ್ಲಿ ಲಾಂಗ್ವೇಜ್ ಕಂಟೆಂಟುಗಳು ಇರತಕ್ಕಂತ ಲಾಂಗ್ವೇಜ್ ಕೋರ್ಸುಗಳನ್ನು ನೀವು ಇಷ್ಟು ಮಾಡ್ಲೇಬೇಕು. ಅದನ್ನ ಮೊದಲನೆ ವರ್ಷದಲ್ಲಿ, ಎರಡನೆ ವರ್ಷದಲ್ಲಿ ಅಥವಾ ಮೂರನೆ ವರ್ಷದಲ್ಲಿ ಓದ್ತೀರೋ. ನೀವು ಫಿಸಿಕ್ಸ್ ತಗೋಳೊದಾದ್ರೆ ಫಿಸಿಕ್ಸು, ಕೆಮಿಸ್ಟ್ರಿ ತಗೊಳೊದಾದ್ರೆ

ಕೆಮಿಸ್ಟ್ರಿ, ಕಾಮರ್ಸ್ ತಗೊಳೊದಾದ್ರೆ ಕಾಮರ್ಸ್ ಇಷ್ಟು ಓದ್ಬೇಕು. ಅಂದ್ರೆ ಅವೆಲ್ಲವನ್ನೂ ಸೇರ್ಸಿ ನೀವು ಎಷ್ಟು ಪೇಪರ್ರುಗಳನ್ನ ತಗೋತಿರೊ, ಅದು ನಿಮ್ಮ ಡಿಗ್ರಿಯ ಟೋಟಲ್ ಅಚೀವ್ ಮೆಂಟ್. ಅದಾಗ್ಬೇಕಾದ್ರೆ ಇದಿಷ್ಟು ಲಾಂಗ್ವೇಜ್ ಕೋಶೆಂಟನ್ನ ಮುಗಿಸಿರ್ಬೇಕು. ಅವಾಗ ವಿದ್ಯಾರ್ಥಿಗಳಿಗೆ ನಾನು ಬೇರೆ ಏನೊ ಮಾಡ್ತಾ ಇದ್ದೀನಿ ಅನಿಸ್ತಾ ಇರ್ತದೆ. ನಮಗೆ ಬೇಡದೆ ಇರೋದೇನೊ ಮಾಡ್ತಿರಲ್ಲ. ಪದವಿ ತರಗತಿಗಳ ಮುಖ್ಯವಾದ ಅಗತ್ಯಗಳನ್ನ ಪುರೈಸ್ತಾ ಇರ್ತೀವಿ ಅಂತ ಅನ್ನಿಸ್ತದೆ. ಆದ್ರೆ ನಾವು ಆ ರೀತಿ ಮಾಡ್ಲೆ ಇಲ್ಲ. ಆವಾಗ ನಾವು ಐಚ್ಛಿಕ ಕನ್ನಡ ಮತ್ತು ಕನ್ನಡ ಅನ್ನೊ ಈ ಡಿಫರೆನ್ಸನ್ನೆ ಕಿತ್ತಾಕಬೌದೇನೊ. ಟೆಕ್ನಿಕಲಿ ಅವೆರಡರಲ್ಲು ಡಿಫರೆನ್ಸ್ ಇಲ್ಲವೇ ಇಲ್ಲ. ಇರಕೂಡದು.

**ಚಲಪತಿ:** ಇರಕೂಡದು ಅಂತೀರಾ ಸಾರ್..

**ಕೆ.ವಿ.ಎನ್:** ಹೌದು, ಇರಕೂಡದು. ಯಾಕೇಂದ್ರೆ, ಟೆಕ್ನಿಕಲಿ ಅವೆರಡೂ ಸಬ್ಜೆಕ್ಟುಗಳಲ್ಲಿ ವ್ಯತ್ಯಾಸ ಮಾಡೊಕಾಗಲ್ಲ. ಈಗಂತೂ ವ್ಯತ್ಯಾಸ ಇಲ್ಲ. ಅಂದ್ರೆ ಎಲ್ಲವನ್ನೂ ಸೇರಿಸಿಕೊಳ್ಳಬೇಕಾಗಿ ಬರ್ತದೆ. ಲಾಂಗ್ವೇಜಿನ, ಸಾಹಿತ್ಯದ ಕಂಟೆಂಟು ಮತ್ತು ಅದರ ಸ್ಕಿಲ್ಲುಗಳ ಡೆವಲಪ್ ಮೇಂಟ್ ನ ಕೋಶೆಂಟ್ ಇದೆಯಲ್ಲ, ಆ ಎಲ್ಲಾನೂನು ಒಪೆನಪ್ ಮಾಡ್ಬೇಕಾಗ್ಬರ್ತದೆ.

**ಚಲಪತಿ:** ಆಗ ಸಾಹಿತ್ಯ ಒಂದೆ ಅಲ್ಲ, ಕನ್ನಡ ಅಂದ್ರೆ ಕನ್ನಡ ಬಳಕೆಯ ಎಲ್ಲ ನೆಲೆಗಳೂ, ಕನ್ನಡ ಕೌಶಲ್ಯದ ಎಲ್ಲ ನೆಲೆಗಳೂ ಪಠ್ಯಕ್ರಮದೊಳಗೆ ಬರ್ತವೆ ...

**ಕೆ.ವಿ.ಎನ್:** ರೈಟ್.. ರೈಟ್. ಅದರೊಳಗಡೆ ವಿದ್ಯಾರ್ಥಿಗಳು ಡೆವಲಪ್ ಮಾಡ್ಕೊಬೌದು. ಅಪ್ಲಿಕೇಷನ್ ನೆಲೆಗಳು ಯಾವುದನ್ನ ನಿಜ ಜೀವನದಲ್ಲಿ ಅನ್ವಯಿಸಿಕೊಳ್ಳೋದಿಕ್ಕೆ ಸಾಧ್ಯ ಅನ್ನೋದರ ಅರಿವನ್ನ ವಿದ್ಯಾರ್ತಿಗಳಿಗೆ ಮೂಡಿಸೋದಕ್ಕೆ ಸಾಧ್ಯ. ಕನ್ನಡ ಅಂದ್ರೆ ಅದು ಒಂದೇ ಕೋರ್ಸ್ ಆಗ್ಬೇಕಾಗಿಲ್ಲ. ಕನ್ನಡ ಹತ್ತು ಹದಿನೈದು ಕೋರ್ಸುಗಳ ಗ್ರಂಥಿ ಆಗ್ಬಹುದು ಅದು. ಉದಾಹರಣೆಗೆ ಟ್ರಾನ್ಸ್‌ಲೇಶನ್ನು ಒಂದು ಭಾಗ ಆಗಿರ್ಬೌದು ಅದರೊಳಗಡೆ ಅಥವಾ ಕನ್ನಡ ರೈಟಿಂಗ್ ಕೋರ್ಸ್, ಕನ್ನಡ ಒರಾಲಿಟಗೆ ಸಂಬಂಧಪಟ್ಟ ಒಂದು ಭಾಗ– ಹೇಗೆ ಮಾತಾಡ್ಬೇಕು ಕನ್ನಡವನ್ನ ಅಂತ. ಈ ರೀತಿ ಕನ್ನಡ ಕೋರ್ಸುಗಳನ್ನೇನೆ ಹಲವು ನೆಲೆಗಳಲ್ಲಿ ಸ್ಟ್ರ್ಯಾಟಿಫೈ ಮಾಡಿ ಅವುಗಳೆಲ್ಲರ ಟೊಟಾಲಿಟಿಯನ್ನ ವಿದ್ಯಾರ್ತಿಗೆ ಆಫರ್ ಮಾಡಿದ್ರೆ, ಆಗ ನಾನು ಬೇರೆ ಏನೊ ಮಾಡ್ತಾ ಇದ್ದೀನಿ ಅನ್ನೋದು ಗೊತ್ತಾಗ್ತದೆ. ಮೊದಲ

ಸೆಮಿಸ್ಟೆರಲ್ಲಿ ಕನ್ನಡ ಓದತ್ತಕ್ಕಂತ ವಿದ್ಯಾರ್ತಿಗಳಿಗೂ, ನಾಲ್ಕನೆ ಸೆಮಿಸ್ಟೆರಲ್ಲಿ ಓದತಕ್ಕ ವಿದ್ಯಾರ್ತಗಳಿಗೂ ವರ್ಚಿವಲೀ ಅವುಗಳನ್ನ ತಲಕೆಳಗು ಮಾಡಿದರೂ ಏನೂ ವ್ಯತ್ಯಾಸ ಆಗಲ್ಲ.

**ಚಲಪತಿ:** ಇಂಥ ಸಂದರ್ಭದಲ್ಲಿ ಇನ್ನೊಂದು ಪ್ರಶ್ನೆ ಶುರುವಾಗೊದಿಲ್ವ ಸಾರ್.. ಏನಂದ್ರೆ, ಆಪ್ಷನಲ್ಲು ಮತ್ತೆ ಲಾಂಗ್ವೇಜು ಅನ್ನೋದನ್ನ ನಾವೀಗ ಏನನ್ನ ಇಟ್ಕೊಂಡಿದೇವೆ ಇವುಗಳ ನಡುವೆ ಭೇದವೊಂದನ್ನ ಕಟ್ಕೊಂಡೆ ಬಂದಿದೀವಿ ನಾವು. ಆದರೆ, ನೀವು ಮುಂದಿನ ಕೋರ್ಸುಗಳಿಗೆ ಹೋಗುವಾಗ ನಿಮಗೆ ಲಾಂಗ್ವೇಜ್ ಇಂಪಾರ್ಟೆಂಟಲ್ಲ, ಆಪ್ಷನಲ್ ಮಾತ್ರ, ಆ ಮಾರ್ಕ್ಸ್ ಕನ್ಸಿಡರ್ ಮಾಡಿದ್ರೆ ಸಾಕು ಅನ್ನೊದು. ನೀವು ಹೇಳ್ತಾ ಇರೊ ಸಂದರ್ಭದಲ್ಲಿ ಈ ತರ ಫ್ರೇಮ್ ಮಾಡೋವಾಗ ಆ ಇದು ಕೂಡ ಕನ್ಸಿಡರ್ ಆಗ್ಬೇಕು ಅಲ್ವ

**ಕೆ.ವಿ.ಎನ್:** ವರ್ಚುಯಲೀ ಅದು ಆಗ್ತಾ ಇದೆ ಅಂತ. ನನ್ನ ಕೇಸ್ ತಗೊಳ್ಳಿ, ಶ್ರೀಮತಿ ತಗೊಳ್ಳಿ ನಾವ್ಯಾರೂ ಆಪ್ಷನಲ್ ಓದಿದೋರೆ ಅಲ್ಲ ಡಿಗ್ರಿನಲ್ಲಿ. ಬಟ್ ನಾವು ಕನ್ನಡ ಎಂ ಎ ಮಾಡೋಕೆ ಸಾಧ್ಯ ಆಯ್ತು. ಅಂದ್ರೆ ಕನ್ನಡ ಎಂ ಎ ಮಾಡೋರು ಕನ್ನಡ ಆಪ್ಷನಲ್ಸ್ ತಗೊಂಡಿರಬೇಕು ಡಿಗ್ರಿಯಲ್ಲಿ ಅನ್ನೋದೇನಿಲ್ಲ. ಲಾಂಗ್ವೇಜ್ ಕನ್ನಡದಲ್ಲಿ ಸ್ವಲ್ಪ ಜಾಸ್ತಿ ಮಾರ್ಕ್ಸ್ ತಗೊಂಡಿರ್ಬೇಕು, 60 ಪರ್ಸೆಂಟ್ ಇರಬೇಕು ಅನ್ನೋದಿದೆಯೆ ಹೊರ್ತು. ಅದರಿಂದಾಗಿ ಕನ್ನಡ ಎಂ ಎ ಓದುವಿಕೆಗೆ ಅಡ್ಡಿಯೇನಾಗೊದಿಲ್ಲ. ಇಡೀ ಕೋರ್ಸನ್ನೇನೆ ಐದು ಸಬ್ಜೆಕ್ಟುಗಳಾಗಿ ಕನ್ಸಿಡರ್ ಮಾಡಿದ್ರಿ ಅಂತಂದ್ರೆ, ಸಿಕ್ಸ್ ಆರ್ ಸೆವೆನ್ ಅಂತಂದ್ರೆ ಅದರಲ್ಲಿ ಲಾಂಗ್ವೇಜ್ ಕೋಶೆಂಟ್ ಇಷ್ಟಿರ್ಲೆಬೇಕು ಅನ್ನೊದಿರಬೇಕು.

**ಚಲಪತಿ:** ಕನ್ಸಿಡರೇಬಲ್ ಅನ್ನೊ ಕ್ವಸ್ಚನ್ನೆ ಇಲ್ಲ.

**ಕೆ.ವಿ.ಎನ್:** ಇಲ್ಲ. ಇರಕೂಡದು. ವಿದ್ಯಾರ್ತಿಗಳಿಗೆ ಟೋಟಲ್ ಮೂರು ವರ್ಷದ ಪ್ಯಾಕೇಜ್ನಲ್ಲಿ ಅಥವಾ ಆರು ಸೆಮಿಸ್ಟೆರ್ ಗಳ ಪ್ಯಾಕೇಜ್ನಲ್ಲಿ ಇಷ್ಟು ಪರ್ಸೆಂಟ್ ಲಾಂಗ್ವೇಜನ್ನ ಕೋಶೆಂಟಾಗಿ ತಗೊಳ್ಳಲೆಬೇಕು. ಕೋರ್ಸುಗಳನ್ನ ಹೀಗೆ ಮುಗಿಸಬೇಕು. ಆ ಕೋರ್ಸುಗಳನ್ನ ಯಾವಾಗ್ಲೂನು ನಾನು ಆಗ್ಲೆ ಹೇಳಿದ ಹಾಗೆ ಒಂದು ಗುಚ್ಚದ ಹಾಗೆ. ಹಲವು ಸಂಗತಿಗಳನ್ನ ಒಳಗೊಂಡಿರಬೇಕು ಅದು. ಅಂದ್ರೆ ಇದು ರೈಟಿಂಗ್ ಸ್ಕಿಲ್ಲನ್ನ ಡೆವಲಪ್ ಮಾಡೊ ಕೋರ್ಸು. ಆಯ್ತ ಇದು ನೋಡಿ ಇದು, ನನ್ನ ಕ್ರಿಯೇಟೀವ್ ರೈಟಿಂಗನ್ನ ಆಸಕ್ತಿ ಇರೋರಿಗೆ ಅದನ್ನ ಡೆವಲಪ್ ಮಾಡೋದು, ಇದು ಲಿಟರರಿ

ಅಪ್ರಿಸಿಯೇಷನ್ನನ ಕೋರ್ಸು ಇದು. ಇದು ನನ್ನ ಮಾತುಗಾರಿಕೆಯನ್ನ, ಸಂಭಾಷಣೆ ಮಾಡತಕ್ಕಂತ, ಡೈಲಾಗನ್ನ ಹೇಗೆ ಡೆವಲಪ್ ಮಾಡ್ಕೊಬೇಕು, ರೆಟೆರಿಕ್ಸ್ ನ ಹೇಗೆ ಡೆವಲಪ್ ಮಾಡ್ಕೊಬೇಕು ಅನ್ನತಕ್ಕಂತ ಕೋರ್ಸು. ಆಮೇಲೆ ಇನ್ನೊಂದು ಬೇರೆ ಬೇರೆ ರಿಜಿಸ್ಟರುಗಳ ಪರಿಚಯ ಮಾಡ್ಕೊಡತಕ್ಕಂತದು. ಬೇರೆ ಬೇರೆ ಡೈಲೆಕ್ಟುಗಳನ್ನ ಪರಿಚಯ ಮಾಡಿಕೊಡತಕ್ಕಂತದ್ದು–ಸುಮ್ನೆ ಊಹೆಯಿಂದ ಮಾತಾಡ್ತಾ ಇದ್ದೀನಿ–ಅದಕ್ಕೆ ಸಂಬಂಧಪಟ್ಟ ಎಲ್ಲ ಬಗೆಯ ಪಠ್ಯ ಪುಸ್ತಕ ಕೂಡ ಸಿದ್ಧವಾಗಬೇಕು. ಆಗೇನಾಗ್ತದೆ ಅಂತಂದ್ರೆ, ಬೇರೆಯವರು ಏನ್ಮಾತಾಡ್ಬೇಕು–ಕಾಮರ್ಸಿನವರು ಏನು ಪಾಠ ಮಾಡಬೇಕು, ಫಿಸಿಕ್ಸಿನವರು ಏನು ಮಾಡ್ಬೇಕು ಅನ್ನೋದು ಖಚಿವಾಗಿರುತ್ತೆ. ಪಠ್ಯಪುಸ್ತಕಗಳ ಬಗ್ಗೆ ಅವೆಲ್ಲ ಪ್ರಶ್ನೆ ಬರೋದೆ ಇಲ್ಲ ಈಗ. ಯಾಕೆ ಅಂದ್ರೆ ನಾವು ಪದವಿ ತರಗತಿಯನ್ನ ಆಫರ್ ಮಾಡ್ತಾ ಇರೋದು ಹೀಗೆ. ಆದರೆ ವಿದ್ಯಾರ್ಥಿಗಳಿಗೆ ಒಂದು ಇದೇನಿರ್ತದೆ ಅಂದ್ರೆ, ಬೊಕೇನಾ ಯಾವಾಗ ಯಾವ ಸೆಮಿಸ್ಟರಿನಲ್ಲಿ ತಗೋಬೇಕು ಅನ್ನೋದರ ಬಗ್ಗೆ ಕೆಲವು ಚಾಯ್ಸುಗಳಿರ್ತವೆ. ಫಸ್ಟ್ ಸೆಮಿಸ್ಟರ್ ತಕೊಳ್ಬಹುದಾದ್ದು, ಸೆಕೆಂಡ್ ಸೆಮಿಸ್ಟರ್ ತಕೊಳ್ಬಹುದಾದ್ದು ಅಥವಾ ಸಿಕ್ಸ್ತ್ ಸೆಮಿಸ್ಟರ್ ತಕೊಳ್ಬಹುದಾದ್ದು. ಬಟ್ ಅಷ್ಟರಮಟ್ಟಿಗೆ ಫ್ಲೆಕ್ಸಿಬಲಿಟಿಯನ್ನ ಡೆವಲಪ್ ಮಾಡ್ಬಹುದು ವಿದ್ಯಾರ್ಥಿಗಳಿಗೆ. ಮಾಡೋಕೆ ಸಾಧ್ಯ. ಗೊತ್ತಿಲ್ಲ... ಇವೆಲ್ಲ ಯಾವ ತರ ಆಗುತ್ತೆ ಅಂತ. ಹಾಗೆ ಮಾಡದೆ ಇದ್ರೆ, ಮುಂದಿನ ಹತ್ತದಿನ್ನೈದು ವರ್ಷಗಳಲ್ಲಿ–ಹತ್ತದಿನ್ನೈದು ಅಂತ ಬಹಳ ದೂರದ ಮಾತಾಡ್ತಾ ಇದ್ದೀನಿ, ಅದಕ್ಕಿಂತ ಬೇಗಾನೆ ಆದ್ರೂ ಆಗಬಹುದು–ದೊಡ್ಡ ಕ್ರೈಸಿಸ್ ಪದವಿ ತರಗತಿಗಳಲ್ಲಿ ಉಂಟಾಗೊದಿದೆ ಅಂತ ಕಾಣುತ್ತೆ. ಕನ್ನಡಾನ ಕತ್ತು ಹಿಡಿದು ಆಚೆಗೆ ತಳ್ಬಿಡ್ತಾರೆ.

**ಚಲಪತಿ:** ಕನ್ನಡ ಭಾಷೆಯ ಬೆಳವಣಿಗೆಗೆ ಒಂದು ಇಂಪಾರ್ಟೆನ್ಸ್ ಬರದೆ ಇರೋದಕ್ಕೆ ಕಾರಣ ಈ ತರದ ಒಂದು ಅಟಿಟ್ಯೂಡ್ ಅನ್ನೋದನ್ನ ನೀವು ಬಹಳ ಸ್ಪಷ್ಟವಾಗಿ ಹೇಳ್ತಾ ಇದೀರಿ..

**ಕೆ.ವಿ.ಎನ್:** ಹೌದೌದು. ಎರಡೂ ನೋಡ್ಬೇಕು ನಾವು. ಯಾಕೆ ಹೀಗಾಯ್ತು ಅಂತ ನೋಡ್ಬಹುದು. ಸಾಲ್ವು ಮಾಡೊದಕ್ಕೆ ನೋಡ್ಬಹುದು. ಎರಡು ವಿಧಾನ ಇದೆ. ಕನ್ನಡ ಅಧ್ಯಾಪಕರು ಹೊಸದಾಗಿ ಆಲೋಚನೆ ಮಾಡೋಕೆ ಶುರುಮಾಡಬೇಕು ಅಂತ–ಪ್ರಾರಂಭ ಮಾಡಿದಾರೆ ಅಧ್ಯಾಪಕರು. ಎರಡನೇಯದು ಏನೂಂತಂದ್ರೆ ಕನ್ನಡವನ್ನ ನಾವು ಆಫರ್ ಮಾಡ್ತಾ ಇರೊ ವಿಧಾನವನ್ನ ಬದಲಾಯಿಸ್ಬಿಡ್ಬೇಕು. ಬದಲಾಯಿಸಿದ್ರೆ ಆಗ ಜಸ್ಟಿಫಿಕೇಷನ್ನು

ಜೋರಾಗ್ಬಹುದು. ಅಧ್ಯಾಪಕರಿಗೆ ಅದನ್ನ ಹ್ಯಾಂಡ್ಲ್ ಮಾಡೋಕೆ ಸಿದ್ಧತೆಗಳು ಬೇರೆ ಬೇಕಾಗಬಹುದು. ಅದು ನನ್ನ ಸಮಸ್ಯೆಯಲ್ಲ. ಮಾಡ್ಕೊಳ್ಳಲೇಬೇಕು, ಅದರ್‌ವೈಸ್ ನಾವು ಜಸ್ಟಿಫಿಕೇಷನ್ ಪಡ್ಕೊಳ್ಳಕಾಗಲ್ಲ. ಫ್ಯಾಟ್‌ಸ್ಯಾಲರಿ ತಗೊಂಡು ನಾನು ಅವೆಲ್ಲ ಮಾಡೋಕಾಗೊದಿಲ್ಲ ಅಂತ ಹೇಳೋಕಾಗಲ್ಲ. ಸೊಸೈಟಿ ಅಕೌಂಟೆಬಲಿಟಿ ಕೇಳುತ್ತೆ. ಏನ್ ಮಾಡ್ತಾ ಇದೀರಿ, ಯಾಕ್ ಮಾಡ್ತಾ ಇದೀರಿ ನೀವು ಅಂತ.

**ಚಲಪತಿ:** ಕನ್ನಡದ ಬಗೆಗಿನ ಇವತ್ತಿನ ಸೋಶಿಯಲ್ ರೆಸ್ಪಾನ್ಸಿಬಲಿಟಿ ಏನು ಅನ್ನೋದನ್ನ ಬಹಳ ಖಚಿತವಾಗಿ ಹೇಳ್ತಾ ಇದೀರಿ ನೀವು..

**ಕೆ.ವಿ.ಎನ್:** ಡೆಫ಼ನೇಟ್ಲಿ.. ಅದರ್‌ವೈಸ್ ಸಾಧ್ಯ ಇಲ್ಲ. ಇನ್ನು ಬಹಳ ವಿಸ್ತಾರವಾಗಿದೆ ಇದು. ಉದಾಹರಣೆಗೆ ಇವತ್ತು ಯು.ಜಿ.ಸಿ ಕೆಫ಼ೆಟೇರಿಯ ಅಪ್ರೋಚ್ ಅಂತ ಮಾಡ್ತಾ ಇದೆ. ಕೆಫ಼ೆಟೇರಿಯ ಅಪ್ರೋಚ್ನಲ್ಲಿ ಏನ್ಮಾಡುತ್ತೆ ಅಂದ್ರೆ ಒಬ್ಬ ವಿದ್ಯಾರ್ತ್ಥೀನ ಪದವಿ ತರಗತಿಗಳಲ್ಲಿ ಓದ್ತಾ ಇರುವಾಗ್ಲೇನೆ ಬೇರೆ ಬೇರೆ ರೀತಿ ಕೋರ್ಸುಗಳನ್ನ ಹೇಗೆ ತಗೊಳ್ಬಹುದು ಅಂತ. ಕೆಫ಼ೆಟೇರಿಯಾಗೆ ಹೋದ್ರೆ ನೀವು ಹೇಗೆ ಬೇಕುಬೇಕಾದ್ದನ್ನ ಸೆಲೆಕ್ಟ್ ಮಾಡ್ಕೊಂಡು ತಿಂತೀರಿ ಹಾಗೆ. ಇಲ್ಲೂ ಕೂಡ ಹಾಗೇನೆ ಐದು ಕೋರ್ಸುಗಳನ್ನ ಕಂಪಲ್ಸರಿಯಾಗಿ ಓದಬೇಕು ಅಂತ ಹೇಳ್ತಾರವರು. ಯಾರೊ ವಿದ್ಯಾರ್ತ್ಥಿಗೆ ಹೊಸ ಕೋರ್ಸ್ ತಗೊಬೇಕು ನಂಗೆ ಅಂತನ್ಸಿದ್ರೆ, ಲಾಂಗ್ವೇಜಲ್ಲಿ ನಾವು ಏನು ಆಫ಼ರ್ ಮಾಡ್ತಾ ಇದ್ದೀವಿ. ಏನೂ ಮಾಡ್ತಾ ಇಲ್ಲ. ಫ಼ಾರ್ ಎಕ್ಸಾಂಪಲ್ ಕನ್ನಡ ರೈಟಿಂಗ್ ಕೋರ್ಸ್- ಕಳೆದ ಎರಡು ಮೂರು ತಿಂಗಳಿಂದ ಬಹಳ ತಲೆ ಕೆಡಿಸಿಕೊಳ್ತ ಇದೀನಿ ರೈಟಿಂಗ್ ಕೋರ್ಸ್ ಯಾಕ್ಮಾಡ್ತಾ ಇಲ್ಲ ನಾವು? ಬರೆಯೋದನ್ನ-ಬರೆಯೊದು ಅಂದ್ರೆ ಅಕ್ಷರ ತಿದ್ದೋದಲ್ಲ-ತಾವೆ ಸ್ವತಹ ಬರವಣಿಗೆ ಮಾಡ್ತಕ್ಕಂತಹ ಕೋರ್ಸುಗಳನ್ನ ಯಾಕ್ಮಾಡ್ತಾ ಇಲ್ಲ. ಅಂದ್ರೆ, ಇವತ್ತು ಬರವಣಿಗೆ ಮಾಡೋದಿಕ್ಕೆ ಅಗಾಧವಾದ ಅವಕಾಶಗಳಿವೆ. ಜರ್ನಲಿಸಂ, ಮೀಡಿಯಾದಲ್ಲಿರಬೌದು- ಮೀಡಿಯಾದಲ್ಲಿ ಹಲವು ರೀತಿ ಇದೆ, ನಂಗೊತ್ತಿದ್ದಂಗೆ. ಕೆಲವು ರೀತಿಯಲ್ಲಿ ಅವು ವಿಕೃತ ರೂಪದಲ್ಲಿ ಕಾಣಿಸಿಕೊಳ್ಳೋವು ಇರ್ತವೆ. ಇನ್ನು ಕೆಲವು ಇನ್ನೇನೊ. ಉದಾಹರಣೆಗೆ ಟಿವಿಯಲ್ಲಿ ನಾವೊಂದು ಪ್ರೊಗ್ರಾಮನ್ನ ಪ್ರೊಡ್ಯೂಸ್ ಮಾಡ್ಬೇಕಾದ್ರೆ ಅದಕ್ಕೊಂದು ಸ್ಕ್ರಿಪ್ಟ್ ಅಂತ ಮಾಡ್ತಾರೆ. ಸ್ಕ್ರಿಪ್ಟ್ ರೈಟಿಂಗನ್ನ ನಾವು ಎಲ್ಲೂ ನೋಡ್ದೋದೆ ಇಲ್ಲ. ಅದು ಯೂಸ್ ಮಾಡಿದ್ಮೇಲೆ ವಿಶುಯೆಲ್ಲಾಗಿ ಕಾಣಿಸ್ತಿರದೆ. ಬಟ್, ಹೇಗೆ ಸ್ಕ್ರಿಪ್ಟ್ ಬರೀಬೇಕು ಅದನ್ನ.. ಕನ್ನಡದಲ್ಲಿದ್ರೆ ಅದು ಹೇಗಿರ್ಬೇಕು ಅಂತ ಆ ಸ್ಕಿಲ್ಲನ್ನ ಯಾರು ಹೇಳ್ಕೊಡ್ಬೇಕು. ಅವು,

ಡಿಫಾಲ್ಟಿಂದ ಕಲ್ತಕೊತಿದಾರೆ, ಇನ್ನೊಬ್ಬರ ಜೊತೆ ಕೆಲಸ ಮಾಡಿ ಮಾಡಿ ಕಲತ್ಕೊತಿದಾರೆ ಅಷ್ಟೇನೆ. ಆ ಸ್ಕಿಲ್ಲನ್ನ ನೀವು ಟ್ರೈನಿಂಗ್ ಮಾಡಿ ಕೊಟ್ಟಿದ್ರೆ ಅವ್ರು ಈಸಿಯಾಗಿ ಹೋಗಿ ಟ್ಯೂನ್ ಆಗ್ತಾ ಇದ್ರು. ಜರ್ನಲಿಸಂ ಕೋರ್ಸಲ್ಲು ಕೂಡ ಅದ್ನ ಹೇಳ್ಕೊಡ್ತ ಇಲ್ಲ. ಜರ್ನಲಿಸಮ್ನಲ್ಲಿ ಲಾಂಗ್ವೇಜ್ ಯೂಸೇಜ್ ಬಗೆಗೆ ಹೇಳೊ ಮಾತುಗಳೆಲ್ಲ ಥಿಯರಿಟಿಕಲ್ಲೆ ಹೊರ್ರು, ಕನ್ನಡವನ್ನಾಗ್ಲಿ, ಇಂಗ್ಲಿಷನ್ನಾಗ್ಲಿ ಹೇಗೆ ಯೂಸ್ ಮಾಡ್ಬೇಕು ಅಂತ ಹೇಳ್ಕೊಡ್ತ ಇಲ್ಲ. ಅಂದ್ರೆ ನಾನೇನು ಹೇಳ್ತೀನಿ ಅಂದ್ರೆ, ಬಿಎ ಜರ್ನಲಿಸಂ ಆಫರ್ ಮಾಡಿದ್ರೆ, ಒಬ್ಬ ವಿದ್ಯಾರ್ತಿ ಆ್ಯಡ್ ಆನ್ ಕೋರ್ಸಲ್ಲಿ ಕನ್ನಡ ರೈಟಿಂಗ್ ಕೋರ್ಸ್ ತಗೊಳೋದು ಸಾಧ್ಯ ಆಗೋದಾದ್ರೆ, ಅದರಿಂದ ನಾವು ವಿದ್ಯಾರ್ತಿಗೆ ಕಾನ್ಫಿಡೆನ್ಸ್ ಸೃಷ್ಟಿ ಮಾಡೋಕೆ ಸಾಧ್ಯ ಆಗ್ತದೆ. ಆಗ ಕನ್ನಡ ಭಾಶೆಯ ಕೋರ್ಸುಗಳನ್ನ ಪದವಿ ತರಗತಿಯಲ್ಲಿ 21 ನೇ ಶತಮಾನಕ್ಕನುಗುಣವಾಗಿ ಮರು ಹೊಂದಾಣಿಕೆ ಮಾಡ್ದೆ ಹೋದ್ರೆ ಕಷ್ಟ ಆಗ್ತದೆ.

**ಚಲಪತಿ:** ಸಾರ್ ಇದು ಬಯೊಟೆಕ್ನಾಲಜಿಯಂತ ಕೋರ್ಸುಗಳಲ್ಲಿ, ಬಿಬಿಎಂ ನಂತ ಮ್ಯಾನೆಜ್ ಮೇಂಟ್ ಕೋರ್ಸುಗಳಲ್ಲಿ ಯಾವ ರೀತಿ ಇದನ್ನ ಪೂರಕವಾಗಿ ಕೆಲಸ ಮಾಡೊ ಹಾಗೆ ಯೋಜಿಸಬಹುದು...

**ಕೆ.ವಿ.ಎನ್:** ಈಗೇನಾಗಿದೆ ಅಂದ್ರೆ, ನಾವು ತುಂಬಾ ಸಂದರ್ಭ್ದಲ್ಲಿ ಬಯೊಟೆಕ್ನಾಲಜಿ ಕೋರ್ಸ್ ಅಥವಾ ಕಂಪ್ಯೂಟರ ಸೈನ್ಸು ಇಂಥ ಕೋರ್ಸುಗಳನ್ನ ಪಾಠ ಮಾಡ್ತ ಇರ್ಬೇಕಾದಾಗ, ವಿದ್ಯಾರ್ತಿ- ಉದಾಹರಣೆಗೆ ಕನ್ನಡ ಮೊದಲ ಭಾಷೆಯಾಗಿ ಓದ್ತಾ ಇರೊ ವಿದ್ಯಾರ್ತಿ ಅಂತಿಟ್ಕೊಳ್ಳೋಣ, ಟೇಕನ್ ಫಾರ್ ಗ್ರಾಂಟೆಡ್ ಅವ್ರಿಗೆ ನಾವು ಇಂಗ್ಲಿಷಲ್ಲೆ ಪಾಠ ಮಾಡ್ತಿದ್ದೀವಿ ಅಂತಿಟ್ಕೊಳ್ಳೋಣ, ಇಂಗ್ಲಿಷನ್ನ ಎರಡನೆ ಭಾಷೆಯಾಗಿ ವಿದ್ಯಾರ್ತಿ ಕಲ್ತಿದ್ದಾನೆ/ಳೆ ಅಂತಿಟ್ಕೊಳ್ಳಿ, ಬಟ್ ಮೆದುಳಲ್ಲಿ ಏನ್ ನಡೀತಾ ಇರ್ತದೆ ಅನ್ನೋದರ ಬಗ್ಗೆ ರಿಸರ್ಚ್ ನಡ್ದಿದೆ. ಮೆದುಳಿಗೆ ಏನಾಗ್ತದೆ ಅನ್ನೋದರ ಬಗ್ಗೆ ರಿಸರ್ಚ್ ನಡ್ದಿದೆ. ಸೊ, ನೀವು ಏನನ್ನ ಯಾವ ಭಾಷೆ ಮುಖಾಂತರ ಕೇಳಿದ್ರೂನು ನಿಮ್ಮ ಮೊದಲ ಭಾಷೆಗೆ ಅನುವಾದ ಮಾಡ್ತದೆ. ಉದಾ; ನೀವು ವರ್ಡ್ಸ್‌ವರ್ತ್ ಕವಿತೆಯನ್ನ ಕೇಳ್ತಾ ಇದ್ರೆ, ಆ ಕವಿತೆಯ ಅನುವಾದ ನಿಮ್ಮ ಮನಸಲ್ಲಿ ನಡೀತಾ ಇರ್ತದೆ. ಆದರೆ ಒಂದು ಸಮಸ್ಯೆ ಏನೂ ಅಂತಂದ್ರೆ, ನಿಮ್ಮ ಪ್ರಥಮ ಭಾಷೆಯ ಸ್ಕಿಲ್ಲುಗಳು ಸರಿಯಾಗಿ ಡೆವಲಪ್ ಆಗ್ದೆ ಇದ್ರೆ ಅನುವಾದ ಪ್ರಕ್ರಿಯೆ ಅಷ್ಟರಮಟ್ಟಿಗೆ ಕುಂಟಿತವಾಗ್ಬಿಡ್ತದೆ. ತಿಳುಕೊಳ್ಳೋದೆ ಕಡಿಮೆ. ಅವಾಗ ನೀವು ನೋಟ್ಸುಗಳಿಗೆ ಹೋಗ್ತೀರಿ. ವಿದ್ಯಾರ್ತಿಗಳಾಗಿ ಬಯೊಟೆಕ್ನಾಲಜಿ

ಕ್ಲಾಸಲ್ಲಿ ಪಾಠ ಕೇಳಿದ್ರೂನು ನೋಟ್ಸ್ ಗೆ ಹೋಗ್ತಾರೆ ಅಂತಂದ್ರೆ ಪ್ರಥಮ ಲಾಂಗ್ವೇಜ್ ಸ್ಕಿಲ್ಲು ವೀಕಾಗಿರೋದ್ರಿಂದ ಅವರು ತರಗತಿಯಲ್ಲಿ ಕೇಳಿದ ಪಾಠಗಳನ್ನ ಗ್ರ್ಯಾಸ್ಪ್ ಮಾಡೋಕಾಗ್ತ ಇಲ್ಲ ಅಂತ. ಅದು ಇಂಗ್ಲಿಷ್ ಸಮಸ್ಯೆ ಆಗಿರಬಹುದು, ಇಂಗ್ಲಿಷ್ ಸಮಸ್ಯೆ ಮಾತ್ರ ಅಲ್ಲ ಅದು. ಅವರ ಕನ್ನಡದ ಸಮಸ್ಯೆ ಅದು.

ಚಲಪತಿ: ಇಂಥ ಸಂದರ್ಭಗಳಲ್ಲೆಲ್ಲ ನಾವು ಮೇಸ್ಟ್ರುಗಳು ಇಂಥವರನ್ನ ಅಸಮರ್ಥರು ಅಂತ ಡಿಸೈಡ್ ಮಾಡ್ಬಿಡ್ತೀವಿ..

ಕೆ.ವಿ.ಎನ್: ಡಿಸೈಡ್ ಮಾಡ್ತಿರ್ತೀವಿ. ಅವರ ಡಿಪೆಂಡೆನ್ಸನ್ನ–ನೋಟ್ಸಿಗೆ–ಟೀಕೆ ಮಾಡ್ತಾ ಇದೀವಿ. ನಾನು ಮೊನ್ನೆ ಬೆಂಗ್ಳೂರಲ್ಲಿ ಬಿ ಎಂ ಎಸ್ ಎಂಜನಿರಿಂಗ್ ಕಾಲೇಜು ಮುಂದೆ ಆಟೋದಲ್ಲಿ ಹೋಗ್ತಾ ಇದ್ದೆ. ಅಲ್ಲಿ ಒಂದ್ಕಡೆ ಈ ಸೆಮಿಸ್ಟರ್ ಎಕ್ಸಾಮಿನೊತ್ಗೆ ಲಾರಿಲೋಡು ನೋಟ್ಸುಗಳ ಕಂತೆ ಬಂದು ಬಿದ್ಬಿಡುತ್ತೆ. ವಿದ್ಯಾರ್ಥಿಗಳು ಮುಗಿಬಿದ್ದು ಕೊಂಡ್ಕೊಳ್ತಾರೆ. ಅವರು ತರಗತಿಗೆ ಹೋದ್ರೂ ಒಂದೆ ಹೋಗ್ದೆ ಹೋದ್ರೂ ಒಂದೆ. ಯಾಕೆ ಆ ರೀತಿ ಆಗ್ತದೆ?.. ನಾವು ತಿಳ್ಕೊಳ್ತೀವಿ ಇದು ವಿದ್ಯಾರ್ತಿಗಳ ತಪ್ಪು ಇದು ಅಂತ. ನಾನೇಳ್ತಿದೀನಿ, ಬಯೊಟೆಕ್ನಾಲಜಿ ಓದಿ, ಕಂಪ್ಯೂಟರ್ ಸೈನ್ಸ್ ಓದಿ, ಹಿಸ್ಟರಿ ಕ್ಲಾಸಲ್ಲಿ ಕುತ್ಕೊಳಿ, ಪೊಲಿಟಿಕಲ್ ಸೈನ್ಸ್ ಕ್ಲಾಸಲ್ಲಿ ಕುತ್ಕೊಳಿ ನಿಮ್ಮ ಪ್ರಥಮ ಭಾಷೆಯ ಸ್ಕಿಲ್ಲುಗಳು ಕರೆಕ್ಟಾಗಿದ್ರೆ ನೀವು ತರಗತಿಯ ಪಾಠವನ್ನ ಗ್ರ್ಯಾಸ್ಪ್ ಮಾಡ್ತೀರಿ. ಇದು ಬಹಳ ಇಂಪಾರ್ಟೆಂಟ್, ಆದರೆ ಇದು ಈ ರೀತಿ ಆಗ್ತಾ ಇರೋದು ನಿಮಗೆ ಗೊತ್ತಿರೋದಿಲ್ಲ. ಈಗ ತುಂಬಾ ಸಂದರ್ಭದಲ್ಲಿ ಇಂಗ್ಲಿಷ್ ಪಾಠವನ್ನ ಕನ್ನಡಕ್ಕೆ ಅನುವಾದ ಮಾಡ್ಕೊಳ್ತಾ ಇದೀರಿ ಅಂದ್ರೆ ಯಾರೂ ನಂಬೋದಿಲ್ಲ. ಆದರೆ ಅದು ಆಗ್ತಾ ಇರ್ತದೆ. ಅದನ್ನ ಟೆಸ್ಟ್ ಮಾಡ್ಬಹುದು, ಆಗ್ತಾ ಇದೆ ಅನ್ನೋದನ್ನ. ಮತ್ತೆ ನೀವು ಅದನ್ನ ಕೇಳಿದ್ರೆ ಯಾವ ಭಾಷೆಯಲ್ಲಿ ಉತ್ತರ ಕೊಡ್ತಾರೆ ಅಂತ ನೋಡಿ ಅದನ್ನ. ನೀವು ಇಂಗ್ಲಿಷ್ ನ್ಯೂಸ್ ಪೇಪರ್ ಓದ್ತಾ ಇರ್ತೀರಿ ಅಂತ ತಿಳ್ಕೊಳ್ಳೋಣ, ನ್ಯೂಸ್ ಪೇಪರ ಓದ್ತಾ ಇದ್ದಾಗ ಏನಾಗ್ತ ಇರ್ತದೆ, ಮೆದುಳಿನಲ್ಲಿ ಎರಡು ಭಾಗ ಇಲ್ಲ. ಇಂಗ್ಲಿಷಿಗೆ ಒಂದು ಭಾಗ, ಕನ್ನಡಕ್ಕೆ ಒಂದು ಭಾಗ ಅಂತ ಇಲ್ಲ. ಫಸ್ಟ್ ಲಾಂಗ್ವೇಜ್ ಗ್ರಾಮರ್ ಏನಿದೆ ಅದು ಬಹಳ ಸ್ಟಬರ್ನ್ ಆಗಿರುತ್ತೆ. ಅದು ಗ್ರ್ಯಾಸ್ಪ್ ಮಾಡ್ತಕ್ಕಂತಹ ವಿಧಾನವನ್ನ ಎಸ್ಪೆಷಲಿ ಇಂಗ್ಲಿಷ್ಗೆ ಸಂಬಂಧಪಟ್ಟ ಹಾಗೆ–ಕೆಲವರು ಚಿಕ್ಕವಯಸಲ್ಲೆ ಎರಡು ಭಾಷೆ ಕಲ್ತಿರ್ತಾರಲ್ಲ ಅವರಲ್ಲಿ ಬೇರೆ ಒಂತರ ಆಗುತ್ತೆ–ಬಹಳ ಸಮಸ್ಯೆ ಇಂಗ್ಲಿಷ್ ಬಗ್ಗೆ ತಾನೆ. ಯಾರೂ ಇಂಗ್ಲಿಷನ್ನ ಅವರು ಪ್ರಥಮಭಾಷೆಯಾಗಿ ಕಲ್ತಿರಲ್ಲ. ಎರಡನೆ ಭಾಷೆಯಾಗಿ

ಕಲ್ತುಕೊಂಡಿರ್ತಾರೆ. ಲೇಟಾಗಿ ಕಲ್ತುಕೊಂಡಿರ್ತಾರೆ. ತರಗತಿಯಲ್ಲಿ ಮತ್ತೆ ಫಾರ್ಮಲ್ಲಾಗಿ ಕಲ್ತುಕೊಂಡಿರ್ತಾರೆ. ಅದರಿಂದ ಅವರು ಇಂಗ್ಲಿಷಲ್ಲಿ ಏನ್ ಕೇಳಿದ್ರೂನು ಅರ್ಥ ಮಾಡ್ಕೊಳ್ಳತಕ್ಕದ್ದದ್ದು ಕನ್ನಡದಲ್ಲೆ. ಇದು 'ಆಫ್ಟರ್ ಬ್ಯಾಬಲ್' ಅಂತೇಳಿ ಒಂದು ಪುಸ್ತಕ ಬರೆದ ಜಾರ್ಜ್ ಸ್ಟೀನರ್ ಅಂತ . ಬಹಳ ಅದ್ಭುತವಾಗಿ ಬರೀತಾನೆ. ಟ್ರಾನ್ಸಲೇಶನ್ ಪ್ರೋಸೆಸ್ ಮೈಂಡಲ್ಲಿ ಹೇಗೆ ನಡೀತದೆ ಅನ್ನೋದನ್ನ. ಸೊ, ಇವತ್ತು ಇದು ನಮಗೆ ಗೊತ್ತಿರುವ ಸತ್ಯ. ಅದರಿಂದಾಗಿ ಕಂಪ್ಯೂಟರ್ ಸೈನ್ಸಿನವರು ಕನ್ನಡ ಬೇಡಾಂತಂದ್ರೆ, ಕನ್ನಡದಲ್ಲಿ ಪಾಠ ಮಾಡಿ ಮಾಡದೆ ಹೋಗಿ ದಟ್ಸ್ ಎನ್ ಇಮ್ಮೆಟಿರಿಯಲ್ ಥಿಂಗ್. ಕನ್ನಡ ಮೀಡಿಯಂ ಬರಬೇಕು ಅಂತಲ್ಲ ಅಲ್ಲಿ, ಕನ್ನಡ ಇರ್ತದೆ ತರಗತಿಯಲ್ಲಿ.

**ಚಲಪತಿ:** ಸಾರ್ ಈ ಪ್ರಶ್ನೆಯನ್ನ ಈಗ ಭಾಷಿಕವಾದಂತ ಆಯ್ಕೆಗಳಿದಾವಲ್ಲ, ಕನ್ನಡಕ್ಕೆ ಬದಲಾಗಿ ಹಿಂದಿ, ಸಂಸ್ಕೃತ ತಗೋಬಹುದು ಅಂತ. ಇಂಥ ಸಂದರ್ಭದಲ್ಲಿ ಹ್ಯಾಗೆ ಪರಿಗಣಿಸಬಹುದು ಇದನ್ನ...

**ಕೆ.ವಿ.ಎನ್:** ನೊ.. ಎರಡು ತರ ಉತ್ತರ ಕೊಡಬಹುದು ಇದಕ್ಕೆ. ಒಂದು; ಯಾವುದಾದ್ರು ಒಂದು ಲಾಂಗ್ವೇಜ್ ಸ್ಕಿಲ್ಲನ್ನ ವಿದ್ಯಾರ್ತಿ ತರಗತಿಯಲ್ಲಿ ಬಳಸಲೇ ಬೇಕು ಅನ್ನೋದು. ಮತ್ತು ಆ ಭಾಷೆ ಇಂಗ್ಲಿಶ್ ಅಥವಾ ಸಂಸ್ಕೃತ ಆದ್ರೆ ಬಳಸಕಾಗಲ್ಲ ಅನ್ನೋದೂ ಅಷ್ಟೇ ನಿಜ. ಯಾಕೆಂದ್ರೆ ಅವೆರಡೂ ಯಾರಿಗೂ ಮಾತೃಭಾಷೆ ಅಲ್ಲ. ಸಂಸ್ಕೃತದಲ್ಲಿ ನೀವು ಒಂದು ವಿಚಾರವನ್ನ ಅರ್ಥ ಮಾಡ್ಕೊಳ್ಳಾಕಾಗಲ್ಲ. ಸಂಸ್ಕೃತದಲ್ಲಿ ನೀವು ಕೇಳಿಸಿಕೊಳ್ಳಬಹುದು. ಅರ್ಥ ಮಾಡ್ಕೊಳ್ಳೋದು ಕನ್ನಡದಲ್ಲೇನೆ. ಹಿಂದಿ, ಇಂಗ್ಲಿಶಲ್ಲಿ ಯಾರು ಬೇಕಾದ್ರು ಮಾತಾಡ್ಬಹುದು ಉದಾ; ಅಟಲ್ ಬಿಹಾರಿ ವಾಜಪೇಯಿ ಹಿಂದಿಯಲ್ಲಿ ಭಾಶಣ ಮಾಡ್ತಾ ಇದ್ರೆ, ನನಗೆ ಹಿಂದಿ ಅರ್ಥ ಆಗ್ತಾ ಇರಲ್ಲ ಅಲ್ಲಿ. ನಾನು ಅದನ್ನ ಕನ್ನಡಕ್ಕೆ ಅನುವಾದ ಮಾಡ್ಕೊಳ್ತಾ ಇರ್ತೀನಿ.

**ಚಲಪತಿ:** ನೀವು ಹೇಳ್ತಾ ಇದ್ದ ಹಾಗೆ ನನಗೊಂದು ಹೊಳಿತಾ ಇದೆ. ಏನೂಂತಂದ್ರೆ, ಕನ್ನಡದಲ್ಲಿ ಈ ಸ್ಕಿಲ್ಲುಗಳನ್ನ ಡೆವಲಪ್ ಮಾಡ್ದೆ ಇರೋದ್ರಿಂದ ಅದನ್ನ ಬಿಟ್ಟು ಸುಲಭವಾಗಿ ಪಾಸಾಗಬಹುದು ಅನ್ನೊ ಕಾರಣಕ್ಕೆ ಮಾತ್ರಾನೆ ಆ ಭಾಷೆಗಳನ್ನ ಆಯ್ಕೆ ಮಾಡ್ತಿದಾರೆ ಅಂತ.

**ಕೆ.ವಿ.ಎನ್:** ಹೌದೌದೌದು.. ಆಬ್ವಿಯಸ್ಸಾಗಿ ಇರಬಹುದು. ಯಾಕೆಂದ್ರೆ, ಹಲವು ರೀತಿಯ ಸೌಲಭ್ಯಗಳನ್ನ ಅಲ್ಲಿ ಕಲ್ಪಿಸಿಕೊಟ್ಟಿರ್ತಾರೆ ಆದ್ರಿಂದ. ಬಟ್

ಅವ್ರೆಲ್ಲರೂ ನನ್ನ ಪ್ರಕಾರ ವಿಕಲಾಂಗರೆ. ಯಾಕೆಂದ್ರೆ, ಭಾಷೆಯು ಒದಗಿಸಿಕೊಡಬಹುದಾದ ಒಂದು ನೆಗೆತ-ಒಂದು ಲೀಪ್-ಇದೆಯಲ್ಲ, ಆ ಲೀಪ್‌ನಿಂದ ವಂಚಿತರಾಗಿರೋರು ಅವರೆಲ್ಲ. ಅದನ್ನ ಕ್ರಿಪಲ್ ಮಾಡ್ತಾ ಇದ್ದೀವಿ. ಸರಿಯಾಗಿ ನಡಕೊಂಡು ಹೋಗೊ ವಿದ್ಯಾರ್ತಿಗಳನ್ನ ಕ್ಲಾಸಲ್ಲಿ ಸೇರಿಸ್ಕೊಂಬಿಟ್ಟು ಅವರ ಕೈಕಾಲು ಕಟ್ಟಾಕ್ಬಿಟ್ಟು ಕುಂಟೊ ಹುಡುಗರನ್ನಾಗಿ, ತೆವಳಿಕೊಂಡು ಹೋಗೊ ಹಾಗೆ ಪರಿವರ್ತಿಸ್ತಿದ್ದೀವಿ. ಬಿಕಾಸ್ ಆ ಸ್ಕಿಲ್ಸುಗಳನ್ನ ಸರಿಯಾಗಿ ಡೆವಲಪ್ ಮಾಡ್ದೆ ಇರೊ ಕಾರಣ. ಪಾರಿವಾಳ ಬೆಳೆದಿದ್ರೆ ತನ್ನ ಪಾಡಿಗೆ ತಾನು ಹಾರೋಗುತ್ತೆ. ನಾವು ಗೂಡಲ್ಲಿ ಹಾಕಿ ಸಾಕೋಕೆ ಶುರುಮಾಡಿ ನಮ್ಮ ಹತ್ರಾನೆ ಇರೊಹಾಗೆ ಮಾಡ್ಕೊತೀವಿ ಆ ತರ ಮಾಡ್ತಾ ಇದೀವಿ. ಅದರಿಂದ ತರಗತಿಗಳ ಬೇರೆ ವಿಷಯಗಳಲ್ಲಿ ಕನ್ನಡದ ಸಿಗ್ನಿಫಿಕೆನ್ಸ್ ಏನೂಂತಂದ್ರೆ, ನಾವು ಅದನ್ನ ಅರ್ಥ ಮಾಡ್ಕೊಳ್ಳೊ ಚೌಕಟ್ಟನ್ನೆ ಬದಲಾಯಿಸ್ಬೇಕು.

**ಚಲಪತಿ:** ಬಹುಷ ಈ ಮೂಲಕ ಏಕೀಕೃತವಾದ ಭಾಷೆಯ ಕಲ್ಪನೆಯನ್ನೂ ಕೂಡ ಹೊಡಿಬೇಕಾಗ್ತದೆ.

**ಕೆ.ವಿ.ಎನ್:** ಅಂದ್ರೆ?

**ಚಲಪತಿ:** ಅಂದ್ರೆ, ಒಂದೇ ರೀತಿಯ ಕನ್ನಡ ಇರಬೇಕು ಅನ್ನೊ ಒಂದು ಪ್ರಾಕ್ಟೀಸ್ ಇದೆಯಲ್ಲ...

**ಕೆ.ವಿ.ಎನ್:** ಎರಡಿದೆ ಈ ವಿಚಾರಗಳು. ಅಂದ್ರೆ, ಕನ್ನಡ ಅನ್ನುವ ಮೆಂಟಲ್ ಸ್ಟ್ರಕ್ಚರ್ ಇದೆಯಲ್ಲ ಅದು ಒಂದೆ. ಪರ್‌ಫಾರ್ಮೆನ್ಸ್ ಬೇರೆ ಬೇರೆ ಇರಬಹುದು. ಈಗ ಬೀದರ್ನೋರು ಕನ್ನಡ ಮಾತನಾಡಿದ್ರೆ, ನಾನು ನನ್ನ ಕನ್ನಡದಿಂದಾನೆ ಅರ್ಥ ಮಾಡ್ಕೊಳ್ಳೋದು. ನಾನು ಅವರ ತರ ಮಾತಾಡೋಕಾಗ್ದೆ ಇದ್ರೂನು ಅವರು ಮಾತಾಡಿದ್ದು ನನಗೆ ಅರ್ಥ ಆಗ್ತಾ ಇರ್ತದೆ. ಸಮಸ್ಯೆಯಲ್ಲ. ಅದರಿಂದ ಏಕೀಕೃತವಾದ ಕನ್ನಡ ಅನ್ನೋದೊಂದು ಇರ್ತದೆ ಅನ್ನೋದು ನಿಜ. ಮೆಂಟಲಿ. ಬಟ್ ಪರ್‌ಫಾರ್ಮೆನ್ಸಲ್ಲಿ ಹಾಗಿರಬೇಕಾಗಿಲ್ಲ.

**ಚಲಪತಿ:** ಬಟ್ ನಾವು ಕಟ್ಟಾಕಿರೋದು ಪರ್‌ಫಾರ್ಮೆನ್ಸಲ್ಲೆ ತಾನೆ..

**ಕೆ.ವಿ.ಎನ್:** ಹೌದು.. ಪರ್‌ಫಾರ್ಮೆನ್ಸಲ್ಲಿ ಕಟ್ಟಾಕ್ಬಿಟ್ಟಿದ್ದೀವಿ ನಾವು. ಪರ್‌ಫಾರನ್ನೋದು ಇಲ್ವೇ ಇಲ್ಲ ಅಂತ ನಾನು ಹೇಳೋದು.

**ಚಲಪತಿ:** ಅದನ್ನ ಕೀಳರಿಮೆ ಮೇಲರಿಮೆಗಳಾಗಿ ಡೆವಲಪ್ ಮಾಡ್ತಾ ಇದೀವಿ..

**ಕೆ.ವಿ.ಎನ್:** ಡೆವಲಪ್ ಮಾಡ್ತಾ ಇದೀವಿ..

**ಚಲಪತಿ:** ಇದನ್ನ ಟೆಕ್ಸ್ಟ್ ಬುಕ್ಕುಗಳ ಸಂದರ್ಭದಲ್ಲಿ ಹ್ಯಾಗೆ ಪರಿಹರಿಸ್ಕೊಳ್ಳ ಬಹುದು ಸಾರ್..

**ಕೆ.ವಿ.ಎನ್:** ಪದವಿ ತರಗತಿಗಳ ಸಂದರ್ಭದಲ್ಲಿ ಇದು ದೊಡ್ಡ ಸಮಸ್ಯೆಯಲ್ಲ ಅನ್ನೋದು ನನ್ನ ಅಭಿಪ್ರಾಯ. ಯಾಕೆಂದ್ರೆ ವಯಸ್ಸಿನ ದೃಷ್ಟಿಯಿಂದ, ಪದವಿ ತರಗತಿಗಳಿಗೆ ಬರುವ ವಿದ್ಯಾರ್ಥಿಗಳ ಭೌಗೋಳಿಕ ಹಿನ್ನೆಲೆಯ ದೃಷ್ಟಿಯಿಂದ ಈಗ ಬಹಳ ದೊಡ್ಡಾ ಸಮಸ್ಯೆಯಲ್ಲ. ಒಂದು ಇಪ್ಪತ್ತು ಮೂವತ್ತು ವರ್ಷದ ಹಿಂದೆ ಇದ್ದಷ್ಟು ಸಮಸ್ಯೆಯಲ್ಲ ಅದು. ಪ್ರೈಮರಿ ಸ್ಕೂಲ್, ಹೈಸ್ಕೂಲ್ ಲೆವೆಲ್ಲಲ್ಲಿ ಬಹಳ ದೊಡ್ಡ ಸಮಸ್ಯೆ. ಆ ಸಮಸ್ಯೆ ನನ್ನ ಪ್ರಕಾರ ಪದವಿ ತರಗತಿಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಅಡ್ರೆಸ್ ಮಾಡ್ಬೇಕಾಗಿಲ್ಲ. ಆದ್ರೆ ಇನ್ ಕೆಲವು ಹಿಡನ್ನಾಗಿರತಕ್ಕಂತ ವಿಷಯಗಳು ಕೆಲವು ಇವೆ, ಉದಾಹರಣೆಗೆ, ಜಂಡರ್‌ಗೆ ಸಂಬಂಧಪಟ್ಟಂತೆ, ಡಿಸ್ಕೋರ್ಸ್‌ಗಳಿಗೆ ಸಂಬಂಧಪಟ್ಟಂತೆ ಸಮಸ್ಯೆಗಳಿವೆ ಇವುಗಳು ಇನ್ನೂ ಪದವಿ ತರಗತಿಗಳಿಗೆ ಅಡ್ರೆಸ್ ಮಾಡಬೇಕಾದ ಸಮಸ್ಯೆಗಳೆ. ಯಾಕೆಂದ್ರೆ ಎಲ್ಲೂ ಅವು ಫೋರ್‌ಫ್ರಂಟ್‌ಗೆ ಬಂದಿಲ್ಲ. ಮುಂಚೂಣಿಗೆ ಬಂದಿಲ್ಲ. ಅಂತ ಪ್ರಶ್ನೆಗಳನ್ನ ಮರಳಿ ಪದವಿ ತರಗತಿಗಳಲ್ಲಿ ಎತ್ಕೊಳ್ಳೇ ಬೇಕಾಗಿದೆ.

**ಚಲಪತಿ:** ಎಲ್ಲೊ ಒಂದ್ಕಡೆಗೆ ನೀವು ಮಾತಾಡಿದ್ದೀರಿ. ಭಾಷಿಕವಾದ ಈ ನೆಲೆಗಳನ್ನ ಹಾಸ್ಯಾಸ್ಪದವಾಗಿ ಗಮನಿಸಲಾಗ್ತದೆ ಅಂತ..

**ಕೆ.ವಿ.ಎನ್:** ಹೌದು.. ಡೈಲೆಕ್ಟುಗಳನ್ನ ಮೀಡಿಯಾಗಳು ಅದೇ ಮಾಡೋದು. ಮೀಡಿಯಾಗಳು ಡೈಲೆಕ್ಟುಗಳನ್ನ ಯಾವ ತರ ಬಳಸೋದು ಅಂದ್ರೆ, ಸ್ಟೀರಿಯೊ ಟೈಪಾಗಿ ಬಳಸುತ್ವೆ ಅಡಿಗೆಭಟ್ಟ ಅಂದ್ರೆ ಅವ್ನು ಮಂಗಳೂರ್ ಕನ್ನಡ ಮಾತಾಡೋನು, ಸ್ವಲ್ಪ ವಿಲನಿಶಾಗಿ ಕನ್ನಡ ಮಾತಾಡೋನು ಮಂಡ್ಯ ಕನ್ನಡ ಮಾತಾಡೋನು. ಹಾಸ್ಯ-ತಮಾಷೆಯಾಗಿ ಮಾತಾಡೋದು ಅಂದ್ರೆ, ಧಾರವಾಡದ ಕನ್ನಡ ಮಾತಾಡೋದು, ಈತರದ್ದು ಸ್ಟೀರಿಯೊ ಟೈಪಿಂಗ್ ಬಹಳ ಇದೆ. ಮತ್ತೆ ಹೆಂಗಸರ ಭಾಷೆ ಗಂಡಸರ ಭಾಷೆ ಅನ್ನೋದು ನಮಗೆ ಹೀಗೇನೇನೆ. ಯಾರಾದ್ರು ಸಿನಿಮಾ ನಟ ಹೆಂಗಸಿನ ವೇಷ ಹಾಕ್ಕೊಂಡು ಬಂದ್ರೆ-ನಕಲಿ, ಹೇಗ್ ಮಾತಾಡ್ತಾನೆ ಅಂತ ನೋಡಿದ್ರೆ ಗೊತ್ತಾಗ್ತದೆ. ಯಾವ ರೀತಿ ಪದಗಳನ್ನ ಬಳಸ್ತಾರೆ ಅಂತ ಗಮನ್ಸಿದರೆ ಗೊತ್ತಾಗ್ತದೆ, ಸ್ಟೀರಿಯೊ ಟೈಪಿಂಗ್ ಯಾವತರ ನಡೀತಾ ಇರ್ತದೆ ಅಂತ. ಅದರಿಂದ ಆ ಮೀಡಿಯಾಗಳ ಇದರಲ್ಲು, ಸಾಹಿತ್ಯದಲ್ಲು ಇದೆ ಅದು. ಪಠ್ಯ ಪುಸ್ತಕ ಬೋಧನೆಯ ಇದರಲ್ಲು ಕಾಣಿಸಿಕೊಳ್ತದೆ ಅದು.

**ಚಲಪತಿ:** ಈ ತರದ್ದನ್ನ, ಅಂದ್ರೆ, ಭಾಷಿಕವಾದ ಡಿಫ್ಟರೆಂಟ್ ಎಕ್ಸ್‌ಪ್ರೆಷನ್ಸುಗಳನ್ನ ಯಾವ ರೀತಿ ನಿಭಾಯಿಸ್ಕೊಬಹುದು ಸಾರ್..

**ಕೆ.ವಿ.ಎನ್:** ಅದು ಜನರಲ್ಲಾಗಿನೆ ನಡೀಬೇಕಾಗಿರೊಂತದು, ಪದವಿ ತರಗತಿಗಳಲ್ಲೇ ನಡೀಬೇಕಾಗಿರೋದು ಅಂತೇನಲ್ಲ. ಜನರಲ್ಲಾಗೆ ಒಂದು ಬಗೆಯ ಅಸಹನೆ ಇದೆಯಲ್ಲ-ಸಾಮಾಜಿಕವಾದ, ಪ್ರಾದೇಶಿಕವಾದ ಭಾಷಿಕ ಪ್ರಭೇದಗಳ ಬಗೆಗಿನ ಅಸಹನೆ ಇದೆಯಲ್ಲ, ಈ ಅಸಹನೆಯನ್ನ ಹೋಗಲಾಡಿಸೊ ಪ್ರಯತ್ನ ಸಾಂಸ್ಕೃತಿಕವಾಗಿ ನಡೀಬೇಕಾಗಿದೆ. ಅದು ಆಮೇಲೆ ಪದವಿ ತರಗತಿಗಳಿಗೆ ರಿಫ್ಲೆಕ್ಟ್ ಆಗುತ್ತೆ. ಪದವಿ ತರಗತಿಗಳಿಂದ ಪ್ರಾರಂಭ ಆಗೋಕೆ ಸಾಧ್ಯ ಇಲ್ಲ. ಹೆಚ್ಚಂದ್ರೆ ಪದವಿ ತರಗತಿಗಳು ಒಟ್ಟು ಚರ್ಚೆಯ ಭಾಗವಾಗಿ ಕೆಲಸ ಮಾಡಬಹುದು ಅಷ್ಟೆ. ನೇರವಾಗಿ ಆ ಪ್ರಶ್ನೇನ ಅಡ್ರೆಸ್ ಮಾಡೋದು ಕಷ್ಟ. ನಾನೇಳ್ತಿರೋದು, ಈ ಬೊಕೆ ತರದ ಕೋರ್ಸುಗಳನ್ನ ಯೋಚನೆ ಮಾಡ್ದಾಗ ಅಲ್ಲಿ ನೀವು ಸಾಮಾಜಿಕ ಪ್ರಭೇದಗಳನ್ನ ಕುರಿತ ಹಾಗೆ ಒಂದು ಲಾಂಗ್ವೇಜ್ ಆಟಿಟ್ಯೂಡನ್ನ ಡೆವಲಪ್ ಮಾಡೋಕೆ ಪ್ರಯತ್ನ ಮಾಡಬಹುದು.

**ಚಲಪತಿ:** ಮತ್ತೆ ಸಾರ್ ಈ ತರ ಬೆಳೆದಿರೊಂತದಕ್ಕೆ, ಭಾಷೆಯ ಬಗೆಗಿನ ಆಲೋಚನೆಗಳು ಇಷ್ಟೊಂದು ನಗಣ್ಯಗೊಂಡಿರೋದಕ್ಕೆ ಯಾವುದೊ 'ಒಂದು ಸಮುದಾಯ' 'ಒಂದು ಬಗೆ'ಯಲ್ಲಿ ಮಾತ್ರ ಅದನ್ನ ಕಟ್ಕೊಂಡು ಬಂದಿರೋದು ಕಾರಣ ಇರಬಹುದಾ...

**ಕೆ.ವಿ.ಎನ್:** ಹೌದು, ಅದೂ ನಿಜ. ಯಾಕೆಂದ್ರೆ ಯಜಮಾನ್ಯವನ್ನ ಯಾವ್ದೂ ಬಿಟ್ಕೊಡೋದಕ್ಕೆ ಸಾಧ್ಯ ಇಲ್ಲದೆ ಇರೋದ್ರಿಂದ, ಕಲ್ಚರಲ್ ಹೆಜಮೊನಿ ಬಿಟ್ಕೊಡೋಕೆ ಇಷ್ಟ ಇಲ್ಲದೆ ಇರೋದ್ರಿಂದ-ಕಲ್ಚರಲ್ ಹೆಜಮೊನಿಯ ದೊಡ್ಡ ಪ್ರಶ್ನೆ ಇದು. ಕನ್ನಡದಲ್ಲಿ ಯಾವಾಗ್ಲು ಅದು ಪ್ರಶ್ನೆಗೆ ಒಳಗಾಗುತ್ತಲೇದೆ. ಇಪ್ಪತ್ತೈದು ಮೂವತ್ತು ವರ್ಷಗಳಿಂದನೂನು ಯಜಮಾನ್ಯವನ್ನ ಪ್ರಶ್ನೆ ಮಾಡ್ತಂಕ್ಕಂತದು ದೊಡ್ಡ ಚಳುವಳಿಯಾಗಿ ಬಂದಿದೆ. ಬಟ್ ಪ್ರಶ್ನೆ ಮಾಡ್ದೋರು ಆಲ್ಟರ್ನೇಟನ್ನ ಸೃಷ್ಟಿ ಮಾಡಿದಾರೆ ಅಂತ ಹೇಳಲಾರೆ. ಪ್ರಶ್ನೆ ಮಾಡಿದಾರೆ ಅಷ್ಟೆ. ಅದು ನಿಜ ನೀವು ಹೇಳ್ತಾ ಇರೋದು. ಶಿಷ್ಟ ಪ್ರಭೇದಗಳ ಪ್ರಶ್ನೆ ಇರಬಹುದು, ಶುದ್ಧ ಅಶುದ್ಧತೆಗಳ ಕಲ್ಪನೆ ಇರಬಹುದು, ಸಾಹಿತ್ಯದಲ್ಲಿ ಶೀಲ-ಅಶ್ಲೀಲತೆಯ ಪ್ರಶ್ನೆಯಿರಬಹುದು, ಉತ್ತಮ ಸಾಹಿತ್ಯ ಉತ್ತಮವಲ್ಲದ ಸಾಹಿತ್ಯ, ಇದು ಪ್ರಚಾರ ಸಾಹಿತ್ಯ ಇದು ನಕಲಿ ಸಾಹಿತ್ಯ ಅನ್ನೊ ವ್ಯತ್ಯಾಸಗಳಿರಬಹುದು. ನಾನು ಹೇಳಿದ್ನಲ್ಲ ಕಂಟೆಂಟ್ ಓರಿಯೆಂಟೆಡ್ ಟೀಚಿಂಗ್ ಎಷ್ಟರಮಟ್ಟಿಗೆ ನಾವು ಇದ್ಮಾಡ್ತಿದ್ದೀವಿ ಅಂದ್ರೆ, ಕುವೆಂಪು ಎಲ್ಲೊ ಒಂದ್ಕಡೆಗೆ ಹೇಳ್ತಾರೆ, ಜನ ದಿನನಿತ್ಯ ಬದುಕ್ತ ಇರೊ ಹಳ್ಳಿ ಒಳಗಡೆಗೆ ರಸ್ತೆಯಲ್ಲಿ ವೇಗವಾಗಿ ಹೋಗುವ ವಾಹನದಲ್ಲಿ ಎರಡು ಮೂರು ಕ್ಷಣದಲ್ಲಿ ನಾವೇನು ನೋಡ್ತೀವಿ-ಹಳ್ಳಿ ನಾವು ನೋಡಿದ್ದೀವಿ

ಅಂತ ಹೇಳ್ದಾಗೆ. ಸಾಹಿತ್ಯ ಕೃತಿಯನ್ನ ನಾವು ಓದುವ ಕ್ರಮ ಹೇಗಿದೆ ಅಂತಂದ್ರೆ, ಗೊತ್ತು ಅದು ಅಲ್ಲಿತ್ತಲ್ಲ, ಬಾವಿ ಕಾಣಿಸ್ತಾ ಇತ್ತು, ಅಲ್ಲೊಂದು ಮರ ಕಾಣಿಸ್ತಾ ಇತ್ತು, ಆ ಸ್ಕೂಲ್ ಕಾಣಿಸ್ತಾ ಇತ್ತು ಅಲ್ಲೊಂದು, ಆ ತರ ಲ್ಯಾಂಡ್ ಮಾರ್ಕುಗಳನ್ನ ನೋಡ್ಬಿಟ್ಟಿದ್ದು ನಾವು ಹಳ್ಳಿ ಗೊತ್ತು ಅಂತ ಹೇಳೊ ಹಾಗೆ, ಸಾಹಿತ್ಯವನ್ನ ಕುರಿತೂ ಮಾತಾಡ್ತ ಇರ್ತೀವಿ. ಡಿಟೈಲುಗಳನ್ನ ನೋಡೋದಿಲ್ಲ ನಾವು. ನಾನು ಇವತ್ತು ಬೆಳಿಗ್ಗೆ, ಗೋರ ಕಾದಂಬರಿಯನ್ನ ಓದ್ತಾ ಇದ್ದೆ-ಹಿಂದೆ ಓದಿದ್ದೆ ಅದನ್ನ ಮತ್ತೊಮ್ಮೆ ಓದ್ತಾ ಇದ್ದೆ. ಆ ಓದ್ತಾ ಇದ್ದಾಗ ಆ ಲಾಂಗ್ವೇಜನ್ನ-ಅನುವಾದ ಅದು-ನೋಡಿದ್ರೆ ರವೀಂದ್ರನಾಥ ಠಾಗೂರು ಯಾವ ರೀತಿ ಅದ್ಭುತವಾದ ಭಾಷೆಯನ್ನ ಬಳಸ್ತ ಇದಾರೆ ಅಂತ ಅನ್ಸುತ್ತೆ ನನಗೆ. ಅಂದ್ರೆ ನೀವು ನಿಧಾನವಾಗಿ ಓದ್ತಾಹೊದ್ರೆ ಮಾತ್ರ, ಯಾಕೆ ಆ ರೀತಿ ವರ್ಣನೆಗಳನ್ನ ಮಾಡ್ತಾ ಇದಾರೆ, ಯಾಕೆ ವಿವರಗಳನ್ನ ಅಲ್ಲಿ ಕೊಡ್ತಾ ಇದಾರೆ-ಸಾಮನ್ಯವಾಗಿ ತರಗತಿಯಲ್ಲಿ ಪಾಠ ಮಾಡುವಾಗ ನಮ್ಮ ಓದಿನ ಕ್ರಮ ಹ್ಯಾಗಿರ್ತದೆ ಅಂದ್ರೆ, ಒಟ್ಟಾರೆ ಸಾರಾಂಶವನ್ನ ಗ್ರಹಿಸೋದು, ತಾತ್ಪರ್ಯವನ್ನ ಗ್ರಹಿಸೋದು.

**ಚಲಪತಿ:** ಸಾರ್ ಈಗ ಹೊಸದಾಗಿ ಬೆಂಗಳೂರು ಯೂನಿವರ್ಸಿಟಿಯ ಟೆಕ್ಸ್ಟ್‌ಗಳೇನು ತಯಾರದ್ವು, ಅದರಲ್ಲಿ ಮುಖ್ಯವಾದ ಪಾತ್ರ ನಿಮ್ದು, ನಾವೆಲ್ಲ ಒಳಗೊಂಡ ಹಾಗೆ. ಅವುಗಳ ಸಂದರ್ಭದಲ್ಲಿ ಈ ತರದ್ದಕ್ಕೆ ಎಲ್ಲಾದ್ರು ಒಂದು ಸಣ್ಣ ಪ್ರಮಾಣದಲ್ಲಾದ್ರು ಉತ್ತರ ಸಿಕ್ಕಿದೆ ಅಂತ ಅನ್ಸಿದೆಯ ಸಾರ್..

**ಕೆ.ವಿ.ಎನ್:** ಓ..ಡೆಫ಼ನೇಟ್ಲಿ. ಉತ್ತರ ಯಾಕೆ ಸಿಕ್ಕಿದೆ, ಎರಡು ಕಾರಣಕ್ಕೆ. ಟೀಚರ್ಸ್ ಪಾರ್ಟಿಸಿಪೇಶನ್ ದೃಷ್ಟಿಯಿಂದ-ಪ್ರಿಪರೇಷನ್ನಲ್ಲಿ, ತರಗತಿಯಲ್ಲಿ ಅವರ ಇನ್ವಾಲ್ವ್ ಮೆಂಟ್ ದೃಷ್ಟಿಯಿಂದ. ಇವೆರಡೂನು ಮುಖ್ಯವಾದ ಪಲ್ಲಟವನ್ನ ಉಂಟುಮಾಡುವ ಉದ್ದೇಶವನ್ನ ಹೊಂದಿವೆ ಅನ್ನೋದು ಗ್ಯಾರಂಟಿ. ಅವೆರಡು ಪಾಸಿಟೀವ್ ಆದ ಡೆವಲಪ್ಮೆಂಟ್ ಅಂತ ನಾನ್ತಿಳ್ಕೊಡ್ದೀನಿ. ಆದ್ರೂ ಇನ್ನೂ ಕರಿಕ್ಯುಲಮ್ ಅಂತ ನಾವೇನೇಳ್ತೀವಿ, ಸಿಲಬಸ್‌ಗಿಂತ ಯಾಕೆ, ಯಾಕೆ ಅದನ್ನ ತರಗತಿಯಲ್ಲಿ ಇಂಟ್ರಡ್ಯೂಸ್ ಮಾಡ್ತಾ ಇದ್ದೀವಿ ಅಂದ್ರೆ, ಇಂಟ್ರಾಸ್ಪೆಕ್ಷನ್ ಜಾಸ್ತಿ ಆಗ್ಬೇಕು ವಿದ್ಯಾರ್ಥಿಗಳ ಜೊತೆಗೆ ಅಧ್ಯಾಪಕರಿಗೆ. ಅವಾಗ ಇನ್ನಷ್ಟು ರಿಇನ್ಫೋರ್ಸ್ ಮೆಂಟ್ ಸಾಧ್ಯ ಅಂತ ಕಾಣ್ಸುತ್ತೆ. ಅಥವಾ ಕ್ವಾಲಿಟಿ ಆಫ಼್ ದ ಟೆಕ್ಸ್ಟ್ ಬುಕ್ಕುಗಳನ್ನೆ ಇಂಪ್ರೂ ಮಾಡೋದಿಕ್ಕೆ ಸಾಧ್ಯ ಅದರಿಂದ ಇದು ಸ್ಟೆಪ್ ಇನ್ ದ ರೈಟ್ ಡೈರೆಕ್ಷನ್ ಅಂತ ನಾನು ಅನ್ಕೊಂಡಿದೀನಿ. ಗೊತ್ತಿಲ್ಲ. ಇದನ್ನ ಅಸೆಸ್ ಮಾಡ್ಬೇಕಾಗಿದೆ ಇದನ್ನ. ಬಟ್ ದೊಡ್ಡ ಪ್ರಾಬ್ಲಮ್ ಇರೋದು

ಅಗೈನ್ ಮೌಲ್ಯಮಾಪನದಲ್ಲಿ. ಏನೆ ಚೇಂಜ್ ಮಾಡಿದ್ರೂ ಮೌಲ್ಯಮಾಪನದಲ್ಲಿ ಚೇಂಜ್ ಮಾಡ್ದೆ ಹೋದ್ರೆ ಇದರ ಪರಿಣಾಮಗಳು ಇರೋದಿಲ್ಲ. ಯಾಕೆಂದ್ರೆ, ನಮ್ಮ ಬೆನ್ನು ಮೇಲೆ ಹೊರೆ ಹೊತ್ಕೊಂಡು ತಿರಗ್ತಾ ಇರೋದು ಇಡೀ ಇಂಡಿಯನ್ ಎಜುಕೇಶನ್ ಸಿಸ್ಟಮ್ ಲಕ್ಷಣ ಅಗಿಬಿಟ್ಟಿದೆ. ಈ ಓರಲ್ ಕಲ್ಚರ್ ಇದ್ದಾಗ ನೆನಪಿಗೆ ಯಾವ ಪ್ರಾಶಸ್ತ್ಯ ಇತ್ತು, ರಿಟನ್ ಕಲ್ಚರ್ ಬಂದ್ಮೇಲೂ ನಾವು ಅದಕ್ಕೆ ಡಿಪೆಂಡ್ ಆಗಿದ್ದೀವಿ. ಬಟ್ ನೆನಪು ಅಷ್ಟು ಇಂಪಾರ್ಟೆಂಟ್ ಅಲ್ಲ ಈಗ. ಯಾಕೆಂದ್ರೆ ನೆನಪಿಟ್ಕೊಳ್ಳಬೇಕಾಗಿಲ್ಲ ಈಗ. ಮೊದಲಾಗಿದ್ರೆ ರಿಟನ್ ಡಾಕ್ಯೂಮೆಂಟ್ ಇಲ್ಲದೆ ಇದ್ದಾಗ ನೀವು ಓದಿದ್ದೆಲ್ಲ ನೆನಪಿಟ್ಕೊಳ್ಳಬೇಕಿತ್ತು. ಡಿಕ್ಷನರಿ ನೆನಪಿಟ್ಕೊಬೇಕಿತ್ತು ಇಡಿಯಾಗಿ. ಇವತ್ತು ನೆನಪಿಟ್ಕೊಬೇಕಿಲ್ಲ. ಇಟ್ಸ್ ಅಕ್ಸೆಸಬಲ್, ತಡ ಆಗ್ಬಹುದು. ಆದ್ರೂ ಸಿಗುತ್ತೆ ನಿಮ್ಗದು.

**ಚಲಪತಿ:** ನೆನಪಿಟ್ಕೊಳ್ಳೋದೂ ಸಮಸ್ಯೆಯಾಗಿಯೂ ಕ್ರಿಯೇಟ್ ಆಗಬಹುದು...

**ಕೆ.ವಿ.ಎನ್:** ಹೌದು. ಅದೂ ಸಮಸ್ಯೆ, ಯಾಕೆಂದ್ರೆ ಅಗಾದವಾದ ಪ್ರಮಾಣದ ತಿಳುವಳಿಕೆ ಇರೋದ್ರಿಂದಾಗಿ ಇವತ್ತು ನೆನಪಿಟ್ಕೊಳ್ಳೋದು ಕಷ್ಟ ಹೋಗ್ಲಿ ಮೆದುಳಲ್ಲಿ ಅಗಾಧವಾದ ಅವಕಾಶ ಇದೆ, ಎಷ್ಟು ಬೇಕಾದ್ರು ನೆನಪಿಟ್ಕೊಳ್ಳಬಹುದು ಅಂದ್ರೆ, ಅದನ್ನ ಮರಳಿ ಪಡೆಯೊಂದು ದೊಡ್ಡ ಕಷ್ಟ. ರೀಕ್ಯಾಪ್ಚರ್ ಮಾಡೋದು ಇದೆಯಲ್ಲ ಅದನ್ನ-ಮತ್ತೆ ಸಾಪ್ಟ್ ಮಾಡಿ, ಬೇಕಾದ ಸಮಯಕ್ಕೆ ಬೇಕಾದ್ದನ್ನ ತೆಗೆಯೋದಿದೆಯಲ್ಲ, ಇದು ಬಹಳ ಕಷ್ಟ ಇದು. ವಿದ್ಯಾರ್ಥಿಗಳನ್ನ ನಾವು ಏನ್ಮಾಡ್ತಾ ಇದ್ದೀವಿ ಅಂದ್ರೆ, ಬೇಡದೆ ಇರೊ ಪ್ರೆಷರನ್ನ ಹಾಕ್ತಾ ಇದೀವಿ. ಇವತ್ತೂ ನಮ್ಮ ಟೆಸ್ಟುಗಳು, ಮೌಲ್ಯಮಾಪನ ಡಿಪೆಂಡಾಗಿರೋದು ನೆನಪಿನ ಮೇಲೇನೆ. ಮತ್ತು ಯಾರು ಚನ್ನಾಗಿ ನೆನಪಿಟ್ಕೊಂಡಿರ್ತಾರೊ, ಸಕಾಲಕ್ಕೆ ಅದನ್ನ ನೆನಪು ಮಾಡ್ಕೊಳ್ತಾರೊ ಅವರನ್ನು ಬುದ್ಧಿವಂತರು ಅಂತ ತೀರ್ಮಾನಿಸ್ತಾ ಇದ್ದೇವೆ.

**ಚಲಪತಿ:** ಪರೀಕ್ಷಿಸುವ ಮಾದರಿಗಳಲ್ಲೇ ಬದಲಾಗಬೇಕು..

**ಕೆ.ವಿ.ಎನ್:** ಹೌದು. ಬೋಧನೆಯ ಜೊತೆಗೆ ಪರೀಕ್ಷೆ ಆಗಬೇಕು, ನನ್ಕೇಳಿದ್ರೆ ಎರಡು ಪರೀಕ್ಷೆ ಆಗ್ಬೇಕು. ವಿದ್ಯಾರ್ಥಿ ಏನು ಗ್ರಹಿಸಿದಾರೆ ಅನ್ನೋದು ಪರೀಕ್ಷೆ ಆಗ್ಬೇಕು, ಇವರು ಏನು ಮಾಡಿದ್ರು ಅನ್ನೊ ಪರೀಕ್ಷೇನೂ ಆಗ್ಬೇಕು.

**ಚಲಪತಿ:** ಹ್ಯಾಗೆ ಸಾರ್..

**ಕೆ.ವಿ.ಎನ್:** ಹ್ಯಾಗೆ ಅಂದ್ರೆ, ಪಠ್ಯಪುಸ್ತಕದ ಸ್ವರೂಪದಲ್ಲೇನೆ ಇವೆರಡು ಕಂಟಿನ್ಯೇಸ್ ಆಗಿ ಅಸೆಸ್ ಮಾಡೊ ಹಾಗೆ ಮಾಡ್ಬಹುದು. ನಮ್ಮ ವಾರ್ಷಿಕ ಪರೀಕ್ಷೆ ಅನ್ನೋ ಕಲ್ಪನೇನೆ ವಿಚಿತ್ರವಾದದ್ದು. ಯಾಕೆಂದ್ರೆ ಅದು ಎಷ್ಟು ಭಾರ ಕ್ರಿಯೇಟ್ ಮಾಡಿದೆ ಮತ್ತು ರಿಡಂಡೆನ್ಸನ್ನ ಕ್ರಿಯೇಟ್ ಮಾಡಿದೆ ಅಂದ್ರೆ, ನನ್ನ ಪ್ರಕಾರ ಅದು ವೇಸ್ಟ್ ಆಫ್ ಟೈಮ್, ಎನರ್ಜಿ ಎವೆರಿಥಿಂಗ್. ನಿಮಗೆ ವಿದ್ಯಾರ್ಥಿಗಳಿಗೆ ಪಾಠ ಮಾಡ್ತಾ ಇರೋವಾಗೇನೆ–ಪ್ರತಿ ತರಗತಿಯಲ್ಲಿ ಅಲ್ಲದೆ ಇದ್ರೂನು–ಒಂದೊಂದು ಯೂನಿಟ್ಟುಗಳೊ, ಒಂದೊಂದು ಭಾಗ ಕಂಪ್ಲೀಟ್ ಆದ್ಮೇಲೆ ಯಾವ ಸ್ಕಿಲ್ಸುಗಳನ್ನ ನೀವು ಅವರಿಗೆ ಟ್ರಾನ್ಸ್‌ಪರ್ ಮಾಡಿದೀರಿ ಅಥವಾ ಅವರು ಪಡ್ಕೊಂಡಿದಾರೆ ಅದನ್ನ ನೀವು ಟೆಸ್ಟ್ ಮಾಡಿ, ಇದು ಆಗಿದೆಯೊ ಇಲ್ವೊ ಅನ್ನೋದನ್ನ ಪತ್ತೆ ಮಾಡ್ಕೊಳ್ಳಬೇಕಾಗಿ ಬರ್ತದೆ. ಪತ್ತೆ ಮಾಡಿದ್ರೆ ಓಕೆ, ಮುಗಿದೋಯ್ತು ಕೆಲಸ. ಅದರಾಚೆಗೆ ಮತ್ತೇನೂ ಬೇಕಾಗಿಲ್ಲ. ಮತ್ತೆ ಇವು ಯಾವುದೇ ಪದವಿ ಕನ್ನಡ ತರಗತಿಯಲ್ಲಿ 70 ಮಾರ್ಕ್ಸ್ ತಗೊಂಡಿದಾರೆ, 68 ಮಾರ್ಕ್ಸ್ ತಗೊಂಡಿದಾರೆ ಅನ್ನೋದು ಇಟ್ಸ್ ನಾಟ್ ಕೌಂಟ್ ಎಲ್ಲೀನೂವೆ.

**ಚಲಪತಿ:** ಕೌಂಟ್ ಆಗಲೂ ಕೂಡದು ಅನ್ನೋದನ್ನ ನೀವು ಹೇಳ್ತ ಇದೀರ..

**ಕೆ.ವಿ.ಎನ್:** ರೈಟ್. ಅದರಿಂದ ಇಷ್ಟೆಲ್ಲ ಶ್ರಮ ಯಾಕೆ. ಹೇಳಿದ್ರೆ ಹುಚ್ಚುಚ್ಚಾಗಿ ಕಾಣಿಸಬಹುದು. ನನಗನ್ನುಸ್ತೆ ಇದು–ಯಾರೋ ಎಕ್ಸಾಮಿನೇಶನ್ ಬೋರ್ಡ್ನಂತೆ, ಪೇಪರ್ ಸೆಟ್ ಮಾಡೋರಂತೆ–ಪೇಪರ್ ಇರ್‌ರೆಸ್ಪಾನ್ಸಿಬಲ್ಲಾಗಿ ಸೆಟ್ ಮಾಡ್ತಾ ಇರ್ತಾರೆ..ಪಾಠ ಮಾಡದೆ ಇದ್ದವರು ಸೆಟ್ ಮಾಡ್ತಾ ಇರ್ತಾರೆ...ವ್ಯಾಲ್ಯುಯೇಶನ್‌ಗೆ ಹೋಗಿರೋರು ಪಾಠಾನೆ ಮಾಡಿರೊಲ್ಲ... ಟೆಕ್ಸ್ಟ್ ಬುಕ್ಕುಗಳನ್ನ ನೋಡಿರೊದಿಲ್ಲ ಎಷ್ಟೊ ಸಂಧ್ಬಗಳಲ್ಲಿ.. ವ್ಯಾಲ್ಯು ಮಾಡ್ತಾ ಇರ್ತಾರೆ... ಇಂತವೆಲ್ಲ ನಾವು ಕೇಳಿರೊ ಕತೆಗಳು..

**ಚಲಪತಿ:** ನಾವು ನೋಡ್ತಾ ಇರೊ ಕತೆಗಳು..

**ಕೆ.ವಿ.ಎನ್:** ನೀವು ನೋಡ್ತಾ ಇರೊ ಕತೆಗಳು. ಅದರಿಂದ ಈ ಫ್ಲಾಲ್ಸ್ ಆಟಿಟ್ಯೂಡ್ ಯಾಕೆ ಅಂತ.. ನಾಟಕ ಯಾಕೆ ಅಂತ. ನಿಮಗೆ ಇವ್ಯಾಲ್ಯುಯೇಶನ್ ಅನ್ನೋದು ನೀವು ಪಾಠ ಮಾಡ್ತಾ ಇರೊವಾಗ್ಲೆ ಆಗ್ತಿರ್ತದೆ. ಅದು ಆರು ತಿಂಗಳಾದ್ಮೇಲೆ ಆಗೊದಿಲ್ಲ ಅದು. ಮತ್ತೆ ನೀವದನ್ನ ಇಡೀ ಕೋರ್ಸ್ ಮುಗಿದ ಮೇಲೆ ಅವ್ರಿಂದ ತರಗತಿ ಒಳಗಡೇನೆ ಒಂದು ಚಿಕ್ಕ ಟೆಸ್ಟ್ ಮುಖಾಂತರನೇನೆ–ಅಂದ್ರೆ ನಮ್ಮ ಅಧ್ಯಾಪಕರು ಅದಕ್ಕೆಲ್ಲ ಸಿದ್ಧ ಆಗ್ಬೇಕು ಮೊದ್ಲು.

ಚಲಪತಿ: ಹಾಗೆ ಯೋಚನೆ ಮಾಡಿದ್ರೆ, ಈಗ ಬದಲಾಗಿರೊಂತ ಪಠ್ಯಗಳೇನಿದಾವೆ ಬೆಂಗಳೂರು ಯೂನಿವರ್ಸಿಟಿಯಲ್ಲಿ ಅದನ್ನ ಪಾಠ ಮಾಡೊ ವಿಧಾನಗಳಲ್ಲು ಕೂಡ ಸಮಸ್ಯೆಗಳನ್ನ ಎದುರಿಸ್ತಾ ಇದಾರೆ ಅನ್ಸುತ್ತೆ.. ಯಾಕೆಂದ್ರೆ ಹಳೆ ಪ್ಯಾಟರ್ನ್ ಗಳಿದಾವಲ್ಲ ಅವುಗಳ ಕಾರಣಕ್ಕಾಗಿ. ಆದ್ದರಿಂದಾಗಿ ಪೂರ್ವ ಪಠ್ಯ, ಪೂರಕ ಪಠ್ಯಾನ ಹ್ಯಾಗೆ ಕನೆಕ್ಟ್ ಮಾಡ್ಕೊಬೇಕು.. ಅಥವಾ ಮಾಡ್ಬೇಕಾ ಬ್ಯಾಡ್ವ... ಅವುಗಳಿಂದ ಪ್ರಶ್ನೆಗಳು ಬರ್ತವ ಇಲ್ವ. ಈ ಡಿಲೆಮ ಕೂಡ ಹಾಗೆ ಉಳ್ಕೊಂಡಿದೆ. ಕೊನೆಯಲ್ಲಿ ನಾವು ಕೊಟ್ಟಿರೊ ಮಾಡಲ್ ಕ್ವೆಸ್ಚನ್ ಪೇಪರ್ ಕೂಡ ಅದನ್ನೆಲ್ಲ ಪೂರಕವಾಗಿ ಒಳಗೊಳ್ಳುವ ಹಾಗೆ ರೆಡಿಯಾಗಿದ್ದಿದ್ರೆ ಹಾಗನ್ನಿಸ್ತಿರಲಿಲ್ಲ. ಅದರ ಬಗ್ಗೆ ಒಂದು ದೊಡ್ಡ ಚರ್ಚೆಯಾಗಬೇಕಾಗಿತ್ತು..

ಕೆ.ವಿ.ಎನ್: ಮಾಡಿಲ್ಲ..ಮಾಡಿಲ್ಲ ಹಾಗೆ. ಚರ್ಚೆ ಆಗ್ಬೇಕಿತ್ತು. ಮೊದಲ ಕಮ್ಮಟದಲ್ಲೆ ಇದರ ಬಗೆಗೆ ನಾನು ಹೇಳ್ದೆ, ನೀವು ಅನ್ಲೆಸ್ ಯು ಚೇಂಜ್ ದ ಇವ್ಯಾಲ್ಯೂಯೇಶನ್ ಪ್ಯಾಟ್ರನ್ ಇವೆಲ್ಲವೂ ಫುಟೇಲಾಗ್ತವೆ ಅಂತ. ಆದರೆ ಇದರ ಬಗ್ಗೆ ತಲೆ ಕೆಡಿಸಿಕೊಳ್ಳಲೇ ಇಲ್ಲ, ಬೇರೆ ಬೇರೆ ಅಡ್ಮಿನಿಸ್ಟ್ರೇಟಿವ್ ಕಾರಣಗಳಿಂದ. ಐ ಥಿಂಕ್ ಅದು ದೊಡ್ಡ ಡ್ರಾಬ್ಯಾಕ್.. ನನ್ನ ಪ್ರಕಾರ. ಒಂದೆ ಸಾರಿ ಬದಲಾವಣೆ ಮಾಡೋಕು ಆಗೋದಿಲ್ಲ... ಇರೊ ವ್ಯವಸ್ಥೇಲಿ ಏನು ಲೋಪಗಳಿವೆ ಅಂತ ತಿಳ್ಕೊಬೇಕು, ಒಪ್ಕೊಬೇಕು, ಅದರಿಂದ ಯಾರಿಗೊ ಪ್ರಯೋಜನ ಇರ್ತದಲ್ಲ ಆ ಪ್ರಯೋಜನ ಇರೋರನ್ನು ಒಪ್ಪಿಸ್ಬೆಕು..ವ್ಯಾಲ್ಯುಯೇಶನ್ ಮಾಡೊದ್ರಿಂದ ಅಷ್ಟು ಸಾವಿರ ರೂಪಾಯಿ ಹಣ ಬರ್ತದೆ ನಮ್ಗೆ, ಪೇಪರ್ ಸೆಟ್ ಮಾಡೊದ್ರಿಂದ ಎಷ್ಟೊ ರೂಪಾಯಿ ಬರ್ತದೆ, ಅದಕ್ಯಾಕೆ ಕಲ್ಲಾಕ್ಬೇಕು ನೀವು ಈ ತರನೂ ಯೋಚನೆಗಳಿವೆ. ಹಣದ ಪ್ರಶ್ನೆ ಇಂಪಾರ್ಟೆಂಟೆ. ನಾನು ಇಲ್ಲ ಅಂತ ಹೇಳೋದಿಲ್ಲ. ಆದ್ರೆ ಅದನ್ನ ಅವ್ರಿಗೆ ತಲುಪಿಸೊ ವ್ಯವಸ್ಥೆ ಸಾಧ್ಯ ಇದೆ ನನ್ನ ಪ್ರಕಾರ. ಇಡೀ ಎಕ್ಸಾಮಿನೇಶನ್ ಸಿಸ್ಟಂ, ಯೂನಿವರ್ಸಿಟಿ–ಬೆಂಗಳೂರು ಯೂನಿವರ್ಸಿಟಿ– ತನ್ನ ಆದಾಯದ 60 ಪರ್ಸೆಂಟ್ ಖರ್ಚು ಮಾಡುತ್ತೆ ಅಂತ ಕೇಳಿದೀನಿ. ಅದರಲ್ಲಿ ಏನೆಲ್ಲಾ ಇದೆ ಅಂತಂದ್ರೆ, ಪೇಪರ್ ಸೆಟ್ಟಿಂಗಿಂದ ಹಿಡಿದು ಪ್ರಿಂಟಿಂಗು ಎಕ್ಸಾಮಿನೇಶನ್ ಕಂಡಕ್ಟ್ ಮಾಡೋದು ಮತ್ತು ಕಸ್ಟೋದಿಯನ್ನು, ವ್ಯಾಲ್ಯೂಯೇಶನ್ನು, ರಿಸಲ್ಟ್ ಅನೌನ್ಸ್ ಮಾಡೋದು ಎಲ್ಲಾ ಸೇರಿ ಹಲವು ಲಕ್ಷಗಳೊಳಗಿನ ಹಣ ಇದು. ನಾನು ಹೇಳ್ತೀನಿ, ನೀವು ಅಷ್ಟು ಹಣಾನ ಖರ್ಚು ಮಾಡೋದೆ ಆದ್ರೆ, ಎಲ್ಲಾ ಅಧ್ಯಾಪಕರಿಗೂನು ಆ ವ್ಯಾಲ್ಯೂಯೇಶನ್ಗೆ ಹೋಗ್ತಾ ಇದ್ದ ಹಣಾನ ಟ್ರಾನ್ಸ್‌ಫರ್ ಮಾಡ್ಬಹುದು, ತರಗತಿಯಲ್ಲಿ ಮಾಡಿರೊ ಇವ್ಯಾಲ್ಯುಯೇಶನ್‌ಗೆ ಅಂತ. ಇನ್ಸೆಂಟೀವ್ ಅದು.

ಶ್ರಮ ಇಲ್ಲ, ವಿಶ್ವವಿದ್ಯಾಲಯ ಪೇಪರ್ ಲೀಕಾಯ್ತಂತೆ, ವ್ಯಾಲ್ಯುಯೇಶನ್ ಡಿಲೆ ಆಯ್ತಂತೆ ಈ ತರದ ಇವೆಲ್ಲ ಇಲ್ಲವೇ ಇಲ್ಲ. ಹಣ ಉಳಿಸಿಕೊಳ್ಳ ಬೇಕು ಅಂತ ನಾನು ಹೇಳ್ತಾ ಇಲ್ಲ.

**ಚಲಪತಿ:** ನೀವು ಹೇಳ್ತಾ ಇರೋದು ಇಡೀ ಕಾಂಪಿಟೇಟಿವ್ ಅಟ್ಮಾಸ್ಪಿಯರ್ರೆ ಕರಗಹೋಗುತ್ತೆ ಇದರಿಂದ ಅನ್ನೋದು..

**ಕೆ.ವಿ.ಎನ್:** ಹೌದು..! ವರ್ಚುಯಲಿ ಕಾಂಪಿಟೇಶನ್ನಿಂದ ಪ್ರಯೋಜನ ಇದ್ರೆ ಕಾಂಪಿಟೇಶನ್ ಮಾಡ್ಬಹುದು. ನೀವು ಏನನ್ನೂ ಮಾಡ್ತಾ ಇಲ್ಲ ಅಲ್ಲಿ ಅಂತ ನಾನು ಹೇಳೋದು. ಫಾರ್ ದಟ್ ಮ್ಯಾಟರ್ ಬಿಬಿಎಂ ವ್ಯಾಲ್ಯುಯೇಶನ್ ಕೂಡ ಆ ತರದ್ದೇ ಅದು. ಮೈಕ್ರೊ ಬಯಾಲಜಿ, ಬಯೊಟೆಕ್, ಕೆಮಿಸ್ಟ್ರಿ ಯಾವುದೆ ವ್ಯಾಲ್ಯುಯೇಶನ್ ಆ ತರದ್ದೆ. ಎಲ್ಲಾ ಕಡೇನೂ ನಡೀತಾ ಇರತಕ್ಕಂತದ್ದು ಇದು. ಬಹಳ ರ್‍ಯಾಂಪೆಂಟ್ ಆಗಿ ಕಾಣಿಸ್ತಾ ಇರೋದು ಟೆಕ್ನಿಕಲ್ ಕೋರ್ಸುಗಳಲ್ಲಿ. ಫಾರ್ ಎಕ್ಸಾಂಪಲ್ ಮೆಡಿಕಲ್ಲಲ್ಲಿ ಇರೊ ಕತೆಗಳನ್ನ ಕೇಳಿದ್ರೆ ಬಹಳ ಮೈಲ್ಡಾಗಿ ಕಾಣ್ಸುತ್ತೆ ಪದವಿ ತರಗತಿಗಳ ಕತೆ. ಯಾಕೆಂದ್ರೆ ಲಕ್ಷಾಂತರ ವ್ಯವಹಾರ ನಡೆದೋಗುತ್ತೆ ಎಕ್ಸಾಮಿನೇಷನ್ನಲ್ಲಿ. ವ್ಯಾಲ್ಯುಯೇಶನ್ ಇರೋದ್ರಿಂದಾಗಿ. ಇಂಥ ಅವ್ಯವಹಾರಗಳು, ಭ್ರಷ್ಟರಾಗೊದಕ್ಕೆ ಇರೊ ಅವಕಾಶಗಳನ್ನೆಲ್ಲ ಕಲ್ಪಿಸಿಕೊಬಹುದು. ಅದರಿಂದಾಗಿ ವಿದ್ಯಾರ್ತಿಗಳಿಗೆ ಏನೂ ಪ್ರಯೋಜನ ಇಲ್ಲ. ಇದು ಬೇರೆ ವಿಚಾರ ಆಯ್ತು. ತಕ್ಷಣ ಬದಲಾವಣೆ ಬರ್ತದೆ ಅಂತ ಹೇಳಾಕಾಗಲ್ಲ. ಬಟ್ ಒಂದಲ್ಲ ಒಂದು ದಿವಸ ಬರಬೇಕಾಗ್ತದೆ. ಬರದೆ ಇದ್ರೆ...!?

**ಚಲಪತಿ:** ನಾವು ಒಂದು ಚರ್ಚೆ ಮಾಡ್ತ ಇದ್ವಿ ಪಠ್ಯಪುಸ್ತಕಗಳನ್ನ ಮಾಡುವಾಗ, ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆ ಕುರಿತು ಸಣ್ಣದಾಗಿ.. ನಾವು ಯಾವ ಸ್ವರೂಪದಲ್ಲಿ ಇದನ್ನ ಯೋಚ್ನೆ ಮಾಡಬಹುದು ಸಾರ್..

**ಕೆ.ವಿ.ಎನ್:** ನಾನು ಸ್ಕಿಲ್ಲುಗಳನ್ನು ಕುರಿತು ಮಾತಾಡ್ತಾ ಇದ್ದೆ, ಈಗ ಮೊದ್ಲು ನೀವು ಕ್ಲಿಯರ್ ಇರ್ಬೆಕು. ಇದನ್ನ ನಾನೀಗ ಪಾಠ ಮಾಡ್ತಾ ಇರೋದ್ರಿಂದ ಇದರ ಉದ್ದೇಶ ಏನು ಅಂತ. ವಿದ್ಯಾರ್ತಿಗಳಿಗೆ ಏನನ್ನ ನಾನು ಟ್ರಾನ್ಸ್ ಫಾರ್ಮ್ ಮಾಡ್ತ ಇದ್ದೀನಿ. ಅಥವಾ ಅವರಲ್ಲಿ ಇರೋದನ್ನ ಜಾಗ್ರತಗೊಳಿಸ್ತಾ ಇರ್ತೀನಿ ಅಂತ. ಅದಕ್ಕೆ ಅನುಗುಣವಾಗಿ ಅವರ ಪಾಲ್ಗೊಳ್ಳುವಿಕೆಯನ್ನ–ಉದಾಹರಣೆಗೆ ಕಾನ್ವರ್ಜೇಶನ್, ಸಂಭಾಷಣೆಗೆ ತೊಡಗೋದು, ಸ್ಕಿಲ್ಲನ್ನ ಡೆವಲಪ್ ಮಾಡ್ತಾ ಇದೀನಿ– ಆಗ ವಿದ್ಯಾರ್ತಿಗಳ ತೊಡಗುವಿಕೆಯನ್ನ ಹೇಗೆ ಡೆವಲಪ್ ಮಾಡ್ಬೇಕು ಅನ್ನೊ ಟೀಚಿಂಗ್ ಮೆಥಡಾಲಜಿಯನ್ನ

ರೂಪಿಸಿಕೊಬೇಕು. ಅದಕ್ಕೆ ಟ್ರೈನಿಂಗ್ ಕೊಡಬೇಕು ಅಧ್ಯಾಪಕರಿಗೆ. ಅಥವಾ ಇದು ರೈಟಿಂಗ್ ಸ್ಕಿಲ್ಲನ್ನ ಡವಲಪ್ ಮಾಡೋದಾಗಿರಬಹುದು. ಅದನ್ನ ಕಾಂಪ್ರೆಹೆಂಡ್ ಮಾಡಿ ತಿಳ್ಕೊಂಡು ಬರೆಯೋದು. ಅಥವಾ ಅಪ್ಲೈ ಮಾಡಿ ಇನ್ಯಾವುದೊ ಎಕ್ಸ್‌ಪೀರಿಯ್ನ್ಸ್ನ್ನ ತರಗತಿಯ ಎಕ್ಸ್‌ಪೀರಿಯನ್ಸ್ ಜೊತೆಗೆ ಸೇರ್ಸಿ ಬರವಣಿಗೆಯನ್ನ ಹೇಳ್ಕೊಡೊ ಉದ್ದೇಶವಿರಬೇಕು. ಅದನ್ನ ನಾವು ಬೆಳೆಸುವ ರೀತಿಯಲ್ಲಿ ವಿದ್ಯಾರ್ಥಿಗಳನ್ನ ಇನ್ವಾಲ್ವ್ ಮಾಡ್ಬಹುದು.

**ಚಲಪತಿ:** ಆ ಮೂಲಕ ಪಠ್ಯಗಳು ಏನಿರ್ಬೇಕು ಅನ್ನೋದು ಕೂಡ ನಿರ್ಧಾರ ಆಗ್ತಾ ಇರ್ತದೆ. ಇದು ಬಹಳ ಅಗಾಧವಾಗಿ ಮತ್ತು ಸೂಕ್ಷ್ಮ ನೆಲೆಗಳಲ್ಲಿ ಆಗ್ಬೇಕಾಗಿರುವ ಕೆಲಸ ಇದು...

**ಕೆ.ವಿ.ಎನ್:** ಅಲ್ಲದೆ ಇದ್ರೆ ಮುಂದಿನ ದಶಕಗಳನ್ನ ಎದುರಿಸೊಕ್ಕಾಗಲ್ಲ ನಾವು. ಮುಂದಿನ ದಶಕಗಳಲ್ಲಿ ಈಸಿಯಾಗಿ ಕನ್ನಡವನ್ನ ಪದವಿ ತರಗತಿಗಳಿಂದ ಹೊರಗಡೆ ಇಡ್ಬಿಡಬಹುದು...!? ನನ್ನ ಪ್ರಕಾರ ಕೆಲವು ವಿಶ್ವವಿದ್ಯಾಲಯಗಳಲ್ಲಿ ಇಟ್ಸ್ ಎ ಮ್ಯೂಸಿಯಂ ಪ್ಯಾಟ್ರನ್.

**ಚಲಪತಿ:** ವಿಶ್ವವಿದ್ಯಾಲಯದಿಂದಾನೆ ಕನ್ನಡ ಲಾಂಗ್ವೇಜ್ ಹೊರದಬ್ಬಲ್ಪಡಬಹುದು...?

**ಕೆ.ವಿ.ಎನ್:** ನಿಮಗೆ ಹಾಗನ್ನಿಸೋದಿಲ್ವ.. ಅಲ್ಲ ನಿಮಗೇನನ್ಸುತ್ತೆ.

**ಚಲಪತಿ:** ಬೆಳಿಗ್ಗೆ ನಾನು ಮೇಡಂ ಜೊತೆ ಮಾತಾಡ್ತ ಇದನ್ನೆ ಹೇಳ್ತಾ ಇದ್ದೆ. ಇಡೀ ಇದನ್ನ ನಿಭಾಯಿಸುವಂತ ಜವಾಬ್ದಾರಿ ಟೀಚರ್‍ರುಗಳ ಮೇಲೇನೆ ಇದೆ ಅಂತ. ಯಾಕೆಂದ್ರೆ ಪಠ್ಯ ನಿರ್ಧಾರ ಇರಬಹುದು, ಪರೀಕ್ಷೆಗಳಿರಬಹುದು, ಮೌಲ್ಯಮಾಪನ ಎಲ್ಲವೂ ಟೀಚರ್‍ರುಗಳ ಕೈಬಿಟ್ಟು ಹೊರಗೆ ಇನ್ನೆಲ್ಲೂ ಹೋಗಿಲ್ಲ ಇದು. ಇದನ್ನ ನಿಭಾಯಿಸಿಕೊಳ್ಳೊವಂತ ಒಂದು ಮಾರ್ಗವನ್ನ ನಾವು ಎಲ್ಲೊ ಹುಡ್ಕೊಳ್ಳಿಲ್ಲ ಅಂತ ಅನ್ಸುತ್ತೆ. ಬಹುಶ ನೀವೇಳಿದ ಹಾಗೆ ಆ ಜವಾಬ್ದಾರಿಯನ್ನ ನಿರ್ವಹಿಸಿಕೊಳ್ದೆ ಹೋದ್ರೆ ನೀವು ಹೇಳ್ತಾ ಇರೋದು ನಿಜ ಅಂತಾನೆ ನನಗೂ ಕೂಡ ಅನ್ಸಿದೆ.

**ಕೆ.ವಿ.ಎನ್:** ಗ್ಯಾರಂಟಿ..ಗ್ಯಾರಂಟಿ.. ನಿದಾನಕ್ಕೆ ಅದರ ವೇಗ ಕೂಡ ಜಾಸ್ತಿಯಾಗ್ತಾ ಇದೆ. ಹೊರಗಡೆ ತಳ್ಳುವ ವೇಗ ಇದೆಯಲ್ಲ ಅದು ಜಾಸ್ತಿಯಾಗ್ತಾ ಇದೆ.

**ಚಲಪತಿ:** ಬಹುಶ ಈ ನೆಲೆಗಳಲ್ಲಿ ನಾವು ಎಲ್ಲೂ ಯೋಚ್ನೆ ಮಾಡೋದಕ್ಕೆ ಆಗ್ತಾ ಇಲ್ಲ ಅಂತ ಹೇಳಿ. ಯಾಕೆಂದ್ರೆ ಅದರ ಮೇಲೆ ಇರೋವಂತ ಫೋರ್ಸುಗಳು ಬೇರೆ ಬೇರೆ ತರದ್ದೇ ಇದೆಯಲ್ಲ! ಎಲ್ಲೊ ಒಂದ್ಕಡೆಗೆ

ಪಾಸ್ಟ್ ಓರಿಯೆಂಟೆಡ್ ಆದದ್ದು ಇವೆಲ್ಲ ಎಲ್ಲೊ ಒಂದ್ಕಡ್ಗೆ ಇದು ಬೇಡ ಇದು ಬೇಕು ಅಂತ ಪರೋಕ್ಷವಾಗಿ ಆದ್ರೂ ಕೆಲಸ ಮಾಡ್ತಾ ಇವೆಯೇನೊ. ಈಗ ಹೊಸ ಟೆಕ್ಸ್ಟ್‌ಗಳು ಆದ ಕೂಡ್ಲೇನೆ ನಾನು ಫ್ಲೀಡ್ ಬ್ಯಾಕ್ ತಗೊಂಡಾಗ ಟೀಚರ್ ಗಳ ಒಂದು ಸಮುದಾಯ ಆಲ್ಮೋಸ್ಟ್ ಆಲ್ ಸಂಪೂರ್ಣವಾಗಿ, ಹಿಂದೆ ಇದ್ದಂತ ಟೆಕ್ಸ್ಟ್‌ಗಳೆ ಚನ್ನಾಗಿದ್ವು ಅನ್ನೊಂತ ಅಭಿಪ್ರಾಯವನ್ನ ಕೊಟ್ರು...

**ಕೆ.ವಿ.ಎನ್:** ಇಲ್ಲ.. ಈ ಕಾಂಟ್ರಡಿಕ್ಷನ್ನುಗಳನ್ನ ರಿಸಾಲ್ವ್ ಮಾಡಬಹುದು. ಅಂದ್ರೆ ಅಧ್ಯಾಪಕರ ಒಳಗೇ ಇರುವ ಕಾಂಟ್ರಡಿಕ್ಶನ್ನುಗಳು, ದೆ ಆರ್ ನಾಟ್ ಮೇಜರ್ ಕಾಂಟ್ರಡಿಕ್ಷನ್ಸ್. ಯಾಕೆಂದ್ರೆ ಅವುಗಳ ಸೋಶಿಯಲ್ಲಾದ, ಹಿಸ್ಟಾರಿಕಲ್ಲಾದ ಕಾರಣಗಳು ಏನು ಅಂತ ಗೊತ್ತಿದೆ. ಆದ್ರೆ, ನಾನೇಳ್ತಿರೋದು ಅಧ್ಯಾಪಕರ ಸಮುದಾಯವೆ ಇಡಿಯಾಗಿ ಎದುರಿಸ್ತಾ ಇರುವ ಕಾಂಟ್ರಡಿಕ್ಷನ್ ಇದೆಯಲ್ಲ, ಬೇರೆ ಸಬ್ಜೆಕ್ಟ್‌ಗಳ ಜೊತೆಗೆ, ಇಡೀ ಪದವಿ ತರಗತಿಗಳೊಳಗೆ ಅದನ್ನ ರಿಸಾಲ್ವ್ ಮಾಡ್ಬೇಕಾದ್ರೆ ಒಂದು ಡಿಟರ್ಮಿನೇಶನ್ ಬೇಕು.

**ಚಲಪತಿ:** ಅಂದ್ರೆ, ಈಗ ಅದನ್ನ ನಾವು ಚರ್ಚೆಗಳ ಮೂಲಕ ಮುನ್ನೆಲೆಗೆ ತರ್ಬೇಕಾಗಿದೆ ನಾವು. ಹೀಗಾಗ್ತ ಇದೆ ಅಂತೇಳಿ...

**ಕೆ.ವಿ.ಎನ್:** ಹೌದೌದು.. ಅಂದ್ರೆ, ಹಿಂದೆ ಇದ್ದ ಟೆಕ್ಸ್ಟ್ ಬುಕ್ಕುಗಳು ಚನ್ನಾಗಿದ್ವು, ಯಾರ ದೃಷ್ಟಿಯಿಂದ ಯಾಕೆ ಚನ್ನಾಗಿದ್ವು? ಅದು ಡಿಬೇಟ್ ಮಾಡ್ಬೇಕಾಗಿ ಬರ್ತದೆ. ನಿಜವಾಗ್ಲು ಚನ್ನಾಗಿದ್ವು ಅಂತಂದ್ರೆ, ಅಧ್ಯಾಪಕರಿಗೆ ಚನ್ನಾಗಿದ್ವು ಅಂತಾನ..!?

**ಚಲಪತಿ:** ಬಹುಶಃ ಹಾಗೆ ಕಾಣ್ತದೆ. ಮಾತಾಡ್ತ, ನನಗೆ ಸಿಕ್ಕಂತಹ ಮಾಹಿತಿಗಳೇನು ಅಂತಂದ್ರೆ ಇಡೀ ಟೆಕ್ಸ್ಟ್ ಇಡಿಯಾಗಿ ಇರ್ತಾ ಇತ್ತು. ಒಬ್ಬರದಾಗಿರ್ತಾ ಇತ್ತು. ಆ ಕವಿ, ಲೇಖಕರ ಬಗ್ಗೆ ಹೆಚ್ಚಿಗೆ ಹೇಳಬಹುದಿತ್ತು. ಈಗ ಯಾರ ಬಗ್ಗೆ ತಿಳ್ಕೊಬೇಕು, ಹೇಳ್ಬೇಕು ಅನ್ನೋದರ ಬಗ್ಗೆ ಪರ್ಟಿಕ್ಯುಲರ್ರಾಗಿ ಏನೂ ಇಲ್ಲ. ಸೊ, ಇಡೀ ಟೆಕ್ಸ್ಟ್‌ನ ಒಳಗಡೆ ಯಾರು ಅಂತ ಇಲ್ಲ. ಒಂದು ನಾಟಕಾನೊ ಕತೇನೊ ಇಡಿಯಾಗಿ ಓದಿದಾಗ ಹಿಂದುಮುಂದುಗಳನ್ನ ಚರ್ಚೆ ಮಾಡೋಕೆ ಚನ್ನಾಗಿತ್ತು. ಈಸಿಯಾಗಿತ್ತು, ಸ್ಟೂಡೆಂಟುಗಳಿಗೆ ಸರಿಯಾಗಿ ತಲುಪ್ತಾ ಇತ್ತು.. ಈ ತರದ ...

**ಕೆ.ವಿ.ಎನ್:** ಕರೆಕ್ಟ್ ಅದು. ಅವರ ಆಲೋಚನ ಕ್ರಮ ನಾನೇಳಿದ ಹಾಗೆ, ಹಿಂದೆ ಯೋಚನೆ ಮಾಡ್ತಾ ಇದ್ದ ಕ್ರಮದ ಮುಂದುವರಿಕೇನೆ ಅದು. ಅಂದ್ರೆ ಕರ್ತೃ ಓರಿಯೆಂಟೆಡ್ ಅದು. ಕೃತಿ ಓರಿಯೆಂಟೆಡ್ ಅಲ್ಲ ಅದು. ಅದರಿಂದಾಗಿ ಟೆಕ್ಸ್ಟನ್ನ–ಯಾಕೆಂದ್ರೆ ಅದನ್ನ ಯಾವ

ರೀತಿ ಬಳಸಬೇಕು ಅನ್ನೋದರ ಬಗೆಗೆ-ಚಿಮ್ಮು ಹಲಗೆ ಅದು, ಸ್ಪ್ರಿಂಗ್ ಬೋರ್ಡ್. ನಿಮಗೆ ನೆನಪಿರಬಹುದು.. ಇದನ್ನ ಯಾರು ಬರೆದಿದ್ದು ಅನ್ನೋದನ್ನ ಮುಖ್ಯಮಾಡ್ಕೊಳೊ ಅಗತ್ಯ ಇಲ್ಲ ಅಂತ ಹೇಳಿದ್ದನ್ನ, ಟಿಪ್ಪಣಿಗಳನ್ನ ಬರೀಬೇಕಾದ್ರೆ.

**ಚಲಪತಿ:** ಆ ವಿಷಯದಲ್ಲಿ ಬಿ ಬಿ ಎಂ ಟೆಕ್ಸ್ಟ್‌ಗಳ ಬಗ್ಗೆ ಒಂದು ದೊಡ್ಡ ಆಪಾದನೇನೆ ಇದೆ. ಇದನ್ನ ಪಾಲಿಸಿರೋದರಿಂದ. ಅಲ್ಲಿ ಲೇಖಕರು ಯಾರು ಅಂತಾನೆ ಗೊತ್ತಾಗೊಲ್ಲ, ಅದೆಂಗ್ರಿ ಪಾಠ ಹೇಳೋದು..ಅನ್ನೊ ಪ್ರಶ್ನೆಗಳು ಜೋರಾಗಿವೆ.

**ಕೆ.ವಿ.ಎನ್:** ಹೌದು, ಆಬ್ವಿಯಸ್ಸಾಗಿ. ಯಾಕೆಂದ್ರೆ ಅವ್ರಿಗೆ ಅದರಿಂದಾಗಿ ಕೆಲವು-ಲೇಖಕರ ಬಗ್ಗೆ ಮಾತಾಡೋಕೆ, ಸ್ವಲ್ಪ ಸಮಯ ಕಳೆಯೋಕೆ, ಅವರನ್ನ ಬಯ್ಯೋಕೆ, ಹೊಗಳೋಕೆ, ಇವರ ನೆನಪನ್ನ ಬಳಸಿ ಇನ್ನೇನೊ ಹೇಳೋಕೆ ಎಲ್ಲ ಅವಕಾಶ ಇರ್ತಿತ್ತು. ಆದ್ರೆ ಅವು ಯಾವೂ ಹೊರಟೊಯ್ತಲ್ಲ ಈಗ. ನಾನು ಹೇಳಿದ್ನೆಲ್ಲ, ಕಾನ್ಸೆಂಟ್ರೇಟ್ ಆನ್ ದ ಬೋರ್ಡ್ಸ್ ಏನಿದೆ, ಪದಗಳ ಮೇಲೆ ಕಾನ್ಸೆಂಟ್ರೇಟ್ ಮಾಡಿ ಅಂತಂದಾಗ ಆಯಾಸ ಆಗುತ್ತೆ ಇವರಿಗೆ.

**ಚಲಪತಿ:** ಮತ್ತೆ ಕೆಲವು ಪೂರ್ವ ನಿರ್ಧರಿತ ನೆಲೆಗಳೂ ಇವೆ ಅನ್ಸುತ್ತೆ. ಈ ಶ್ರೇಷ್ಠ-ಕನಿಷ್ಠ, ಸರಿ-ತಪ್ಪು, ಮೇಲು-ಕೀಳು ಹೀಗೆ... ಪಂಪ ಒಬ್ಬ ಶ್ರೇಷ್ಠ ಕವಿ ಅಂತ ಹೇಳೊವಾಗ ಇರೊ ಹುಮ್ಮಸ್ಸು ಪಂಪನ ಕಾವ್ಯವನ್ನ ವಿವರಿಸೊವಾಗ ಇಲ್ಲದೆ ಹೋಗ್ಬಿಡಬಹುದು.

**ಕೆ.ವಿ.ಎನ್:** ಹೌದು, ಈಗ್ಲೂನು ತುಂಬಾ ಜನ ಅಧ್ಯಾಪಕರನ್ನ ಸುಮ್ನೆ ಒಂದು ಬ್ರೈನ್‌ಸ್ಟಾರ್ಮ್ ಸೆಷನ್ ಗೆ ಒಂದು ಹತ್ತು ಜನಾನ ಕುಂಡ್ರಿಸಿಕೊಂಡ್ರೆ ಬೇರೆ ಬೇರೆ ವಯೋಮಾನದವರನ್ನ, ಅವರಿಗೆ ಈ ತರದ ಪ್ರಶ್ನೆ ಕೇಳೋಣ.. ಯಾಕೆ ಪಂಪ ಕನ್ನಡದ ಶ್ರೇಷ್ಠ ಕವಿ? ಗೀವ್ ಮಿ ಟೆನ್ ರೀಸನ್ಸ್... ಅಥವಾ ಐದು ಕಾರಣಗಳು. ಆಮೇಲೆ ಕಂಪೇರ್ ಮಾಡೋಣ. ಹತ್ತು ಜನಾನು ಏನು ಹೇಳಿದಾರೆ ಅಂತ. ನಿಮಗೆ ಬಹಳ ಇಂಟರೆಸ್ಟಿಂಗ್ ಆದ ಎಕ್ಸ್‌ಪೆರಿಮೆಂಟ್ ಆಗ್ತದೆ. ಏನು ಉತ್ತರ ಬರ್ತದೆ ಅಂತ ಅನ್ಕೊಂಡು. ಹಾಗಾಗಿ ನೀವು, ಪಂಪ ಯಾಕೆ ಕನ್ನಡದ ಶ್ರೇಷ್ಠ ಕವಿ ಅನ್ನೊ ಪ್ರಶ್ನೆಗೆ ಉತ್ತರಗಳನ್ನ ಸಹಜವಾಗಿ ಯಾರೂ ಕೊಡೊಕಾಗಲ್ಲ. ಅಂದ್ರೆ ಅವನು ಮಾಡಿದ್ದನ್ನ ವಿವರಿಸಿ ಹೇಳಬಹುದು.. ಅವನು ಧಾರ್ಮಿಕ ಕಾವ್ಯವನ್ನ, ಲೌಕಿಕ ಕಾವ್ಯವನ್ನ ಬರೆದಿದಾನೆ ಅದರಿಂದ ಶ್ರೇಷ್ಠ ಕವಿಯಾಗ್ತಾನೆ ಅಂತನ್ಕೊಂಡು. ಅವರು ಕೊಡೊ ಕಾರಣಕ್ಕೂ, ಅವನು ಶ್ರೇಷ್ಠ ಕವಿಯಾಗಿರೋದಕ್ಕು ಸಂಬಂಧ ಇರಲ್ಲ. ಅವನು ಆದಿಕವಿ ಅಂದ್ರೆ

ಅದಕ್ಕೊಸ್ಕರ ಶ್ರೇಷ್ಠ ಕವೀನಾ.. ಅವನು ಕಿರಿದರೊಳ್ ಪಿರಿದರ್ಥವನ್ನ ಕಟ್ಟಿದ, ವ್ಯಾಸಮುನೀಂದ್ರರುಂದ್ರ ವಚನಾಮೃತ ವಾರ್ಧಿಯನ್ನ ಈಸುವೆನ್ ಕವಿ ವ್ಯಾಸನೆನ್ ಎಂಬ ಗರ್ವಮೆನಗಿಲ್ಲ ಅಂದ.. ಅದಕ್ಕವನು ಶ್ರೇಷ್ಠ ಕವೀನ.. ನೀವು ಪ್ರಶ್ನೆಗಳನ್ನ ಹಾಕಿದ್ರೆ ಉತ್ತರ ಸಿಗಲ್ಲ.

**ಚಲಪತಿ:** ಬಹುಷ ಶ್ರೇಷ್ಠ ಕವಿ ಯಾರಲ್ಲ ಅಂತ ಹೇಳೋಕು ಇದೆ ಸಮಸ್ಯೆ ಆಗ್ಬಹುದು..

**ಕೆ.ವಿ.ಎನ್:** ಇದೆ ಸಮಸ್ಯೇನೆ... ನಾನು ಹೇಳಿದ ಹಾಗೆ ಆಗ್ಲೆ, ಕನ್ನಡ ವಿಮರ್ಶೆಯ ಕ್ಷೇತ್ರ ರೂಪಿಸಿರುವ ಸ್ಟ್ರಕ್ಚರನ್ನ ನಾವು ತಲೆಮೇಲೆ ಹೊತ್ಕೊಂಡು ಮೆರಿಸ್ತಾ ಇದ್ದೀವಿ ಮತ್ತು ಅವನು ಶ್ರೇಷ್ಠ ಕವಿ ಆಗಿರೋದು ಪದವಿ ತರಗತಿ ವಿದ್ಯಾರ್ಥಿಗಳಿಗೆ ರೆಲೆವೆಂಟ್ ಹೇಗೆ ಅನ್ನೋದು ಗೊತ್ತಿಲ್ಲ ನಮಗೆ. ಎಡಿಯೂರಪ್ಪ ಕರ್ನಾಟಕದ ಮುಖ್ಯಮಂತ್ರಿ ಆಗಿದಾರೆ ಅಂತ ಅನ್ನೋವಷ್ಟೆ ರೆಲೆವೆಂಟ್ ಅಷ್ಟೆ.

ಅಂದ್ರೆ ವಿದ್ಯಾರ್ಥಿಗಳಿಗೆ–ಪಂಪ ಕನ್ನಡದ ಶ್ರೇಷ್ಠ ಕವಿ ಇರಬಹುದು. ಪದವಿ ತರಗತಿಯ ವಿದ್ಯಾರ್ಥಿಗಳಿಗೆ, ಅದನ್ನ ತಗೊಂಡು ನಾನೇನ್ಮಾಡ್ಲಿ ಅಂತನಿಸಿ ಕೇಳಿದ್ರೆ ನೀವೇನುತ್ತರ ಕೊಡ್ತೀರಿ ಅವ್ರಿಗೆ.

**ಚಲಪತಿ:** ನೀವು ಹಿಂದೆ ಹಳಗನ್ನಡ ಯಾಕೆ ಬೇಕು ಅನ್ನೊ ಪ್ರಶ್ನೆ ಎತ್ತಿದ್ದೀರಿ...ಅನ್ನೊ ಮಾತಿದೆ...

**ಕೆ.ವಿ.ಎನ್:** ಯಾಕೆಂದ್ರೆ, ಹಳಗನ್ನಡ ಯಾಕೆ ಬೇಕು ಅಂತ ನಾವು ಹೇಳ್ಲಿಲ್ಲ ಅಂತ. ಹಳಗನ್ನಡ ಬೇಡ ಅಂತ ನಾನೇಳಿದ್ದು ಅಂದ್ರೆ, ಐಯಾಕೆ ಬೇಕು ಅನ್ನೋದನ್ನ ಮೊದ್ಲು ನೀವು ಜಸ್ಟಿಫೈ ಮಾಡ್ಕೊಳ್ಳಿ, ಇಂಥ ಕಾರಣಕ್ಕೆ ಬೇಕು ಅಂತ. ಅವಾಗ ನೀವು ಅದನ್ನ ಪ್ರಿಸ್ಕ್ರೈಬ್ ಮಾಡೋದಿಕ್ಕೆ ಸಾಧ್ಯ. ಯಾವುದೊ ಸ್ಕಿಲ್ಲನ್ನ–ನಾನೀಗ ಟ್ರಾನ್ಸ್‌ಲೇಶನ್ ಸ್ಕಿಲ್ ಅಂತ ಅಂದೆ–ಈಗ ಪಂಪನ ಯಾವುದೊ ಒಂದು ಪದ್ಯವನ್ನ ಓದ್ತಾ ಇರ್ಬೇಕಾದ್ರೆ ಅದು ಹೊಸಗನ್ನಡಕ್ಕೆ ನಾನು ಅನುವಾದ ಮಾಡ್ಕೊಳ್ತಾ ಇರ್ತೀನಿ. ಆ ಸ್ಕಿಲ್ಲನ್ನ ಡೆವಲಪ್ ಮಾಡ್ತಾ ಇದೀರಾ ನೀವು? ಅದು ನಿಮ್ಮ ಉದ್ದೇಶಾನ.. ರೈಟ್ ಪ್ರಿಸ್ಕ್ರೈಬ್ ಮಾಡಿ.

**ಚಲಪತಿ:** ಇಲ್ಲಿ ಕನ್ನಡ ಕಲಿಯೋದು ಅಂದ್ರೆ ಸಾಹಿತ್ಯ ಕಲಿಯೋದು, ಅದರಲ್ಲೂ ಸಾಹಿತ್ಯದ ಸಾರ ಕಲಿಯೋದು.

**ಕೆ.ವಿ.ಎನ್:** ಅದರಲ್ಲೂ ಅಧ್ಯಾಪಕರು ತಿಳಿದಿರುವ ಸಾರ ಮುಂಚೂಣಿಗೆ

ಬರುತ್ತೆ. ಹಳಗನ್ನಡ ಪದ್ಯಾನ ನಾನು ಓದ್ತಾ ಇದ್ರೆ, ಕುಮಾರವ್ಯಾಸನ ಷಟ್ಪದಿಯನ್ನ ಓದ್ತಾ ಇದ್ರೆ ಅದನ್ನ ನನ್ನ ಕನ್ನಡಕ್ಕೆ ಅನುವಾದ ಮಾಡ್ಕೊಳ್ತಾ ಇರ್ತೀನಿ. ಅವನು ರತುನ ಅಂದ್ರೆ ನಾನು ರತ್ನ ಮಾಡ್ಕೊಳ್ತೀನಿ. ಆತುಮ ಅಂತ ಬರೆದಿದ್ರೆ ಆತ್ಮ ಅಂತ ಮಾಡ್ಕೊತೀನಿ. ನನಗೆ ಗೊತ್ತಿರೊ ಒಂದು ಸ್ಟ್ರಕ್ಚರ್‌ಗೆ ಅದನ್ನ ತಗೊಳ್ತಿರ್ತೀನಿ. ನೆಲಸುಗೆ ಅಂದ್ರೆ ನೆಲೆಸಲಿ ಅಂತ ಟ್ರಾನ್ಸ್‌ಲೇಟ್ ಮಾಡ್ಕೊಳ್ತೀನಿ. ಕನ್ನಡಾನೆ ಆದ್ರೂನೂ ಅದು ಇಟ್ಸ್ ಎ ಪ್ರಾಸೆಸ್ ಆಫ್ ಟ್ರಾನ್ಸ್‌ಲೇಷನ್. ಆ ಸ್ಕಿಲ್ಲನ್ನ ಡೆವಲಪ್ ಮಾಡ್ತೀರ ಓಕೆ.. ರೈಟ್.

**ಚಲಪತಿ:** ಹಳಗನ್ನಡ ಕೂಡ ಈ ಅರ್ಥದಲ್ಲಿ ಪ್ರತ್ಯೇಕವಾದ ಲಾಂಗ್ವೇಜ್ ಆಗ್ತದೆ...

**ಕೆ.ವಿ.ಎನ್:** ಆಬ್ವಿಯೆಸ್ಲಿ. ನೀವು ಇಂಗ್ಲಿಷಿನಿಂದ ಶೇಕ್ಸ್‌ಪಿಯರನ್ನ ಹೆಂಗೆ ಕನ್ನಡಕ್ಕೆ ಟ್ರಾನ್ಸ್‌ಲೇಟ್ ಮಾಡ್ತಿರೊ ಹಾಗೆನೆ ಪಂಪನನ್ನು ನಿಮ್ಮ ಕನ್ನಡಕ್ಕೆ ಅನುವಾದ ಮಾಡ್ಕೊಳ್ತ ಇರ್ತೀರಿ.

**ಚಲಪತಿ:** ಆ ಕಾರಣದಿಂದಾಗಿ ನೀವು ಪಠ್ಯದ ಸಂದರ್ಭದಲ್ಲಿ ಹಳಗನ್ನಡ ಸರಳ ಅಥವಾ ಅನುವಾದ ರೂಪಗಳನ್ನು ತಗೊಳ್ಳಿ ಅಂತ ಹೇಳಿದ್ದು... ಆ ಮೂಲಕಾನು ನೀವು ಅದನ್ನೆ ತಿಳಿಯೋದು ಅನ್ನೊ ಕಾರಣದಿಂದ..

**ಕೆ.ವಿ.ಎನ್:** ಅದೆ ಅದೇ.. ಸಾರಾಂಶ ಹೇಳೋದಾದ್ರೆ ನಿಮಗೆ ಅದೆ ಸಾಕು. ಪಂಪಾನೆ ಯಾಕ್ಬೇಕು...

**ಚಲಪತಿ:** ಈ ಚರ್ಚೆ ನಡೆದ್ರು ಕೂಡ ಇನ್ನೂ ಹಳಗನ್ನಡ ಬೇಕು ಅಂತ ಎಳಕೊಂಡು ಬರ್ತಾನೆ ಇದ್ದೀವಿ ಅಲ್ವ ಸಾರ್...

**ಕೆ.ವಿ.ಎನ್:** ನೊ.. ಹಳಗನ್ನಡವನ್ನ ನೀವು ಚಾಟಿಗೋಸ್ಕರ ಬಳಸ್ತಾ ಇದ್ದೀರಿ. ವಿದ್ಯಾರ್ಥಿಗಳನ್ನ ಹೆದರಿಸೋದಕ್ಕೋಸ್ಕರ ಬಳಸ್ತ ಇದ್ರೆ ದಟ್ಸ್ ಯುಸ್‌ಲೆಸ್. ಅವರು ಅದೇ ಮಾಡ್ತಾ ಇರೋದು... 'ಏ ಹಳೆಗನ್ನಡ' ಅರ್ಥ ಆಗಲ್ಲ ನಿನಗೆ ಗೊತ್ತಾಯ್ತು...? ಒಂದು ಪದ್ಯ ಓದಕ್ಬರಲ್ಲ ಬಂದು ಕೂತ್ಬಿಟ್ಟಿದಾವೆ... ನಾನೇಳ್ತಿರೋದು ಹಳಗನ್ನಡ ನನಗೆ ರಿಲೆವೆಂಟ, ಅಲ್ವ, ಅಂದ್ರೆ ಹೌದು ಅಂತೀನಿ. ಆದ್ರೆ ಯಾವಾಗ ಅಂತೇಳಿದ್ರೆ, ನನ್ನ ಕನ್ನಡ ಇನ್‌ಬಿಲ್ಟ್ ಸ್ಕಿಲ್ ಇದೆಯಲ್ಲ ಅದನ್ನ ನಾನು ಬಳಸೋಕೆ ಸಾಧ್ಯ ಆದಾಗ. ಅದನ್ನ ಇಂಪ್ರೂವ್ ಮಾಡೋದಾದ್ರೆ, ಅದರ್‌ವೈಸ್ ಅಲ್ಲ ಅಂತ್ಲೆ. ಹಳಗನ್ನಡ ಕಾವ್ಯ, ಶಾಸನ ಯಾವುದಾದ್ರು ಸರಿ ಇಟ್ ಮೇಕ್ಸ್ ನೊ ಡಿಫರೆನ್ಸ್ ಅಂತ.

ಟೋಟಲ್ಲಾಗಿ ಹೇಳೋದಾದ್ರೆ ಪ್ರಾಬ್ಲಮ್ ಇದೆ. ಪ್ರಾಬ್ಲಮ್ಮಿಗೆ ಕಾರಣಗಳು–ಸಾಮಾಜಿಕವಾದ, ಚಾರಿತ್ರಿಕವಾದ ಕಾರಣಗಳಿವೆ. ನಾವು ಪ್ರಾಬ್ಲಮ್ ಇದೆ ಅಂತ ಒಪ್ಕೊಳ್ಳದೆ ಇರೋದೂ ಒಂದು ಪ್ರಾಬ್ಲಮ್ಮು, ತುಂಬಾ ಸಂದರ್ಭದಲ್ಲಿ. ಬೇರೆ ಯಾರೋ ಮಾಡ್ತಾ ಇದಾರೆ, ನಮಗೆ ಪ್ರಾಬ್ಲಮ್ ಇಲ್ಲಾಂತ ತಿಳ್ಕೊಳ್ಳೋದು. ಅಧ್ಯಾಪಕರ ಪ್ರಾಬ್ಲಂ... ಅಂತ ಹಾಗೆ ಹೇಳ್ತಾ ಕೂತ್ಕೊಳ್ಳೋಕು ಆಗೋದಿಲ್ಲ. ಬೇರೆ ಬೇರೆ ಹಂತಗಳಲ್ಲು ಕೂಡ ಪರಿಹಾರಗಳನ್ನ ಕಂಡ್ಕೊಳ್ಳೊ ಪ್ರಯತ್ನಗಳನ್ನ ಮಾಡಲಾಗಿದೆ. ಆದರೆ ಇವತ್ತಿನ ಸಮಸ್ಯೆ ಬೇರೆ ತರದ್ದು. ಅಂದ್ರೆ, ಇದಕ್ಕೆ ಉತ್ತರಗಳನ್ನ ಬೇರೆ ತರಾನೆ ಕಂಡ್ಕೊಳ್ಳಬೇಕು.

**ಚಲಪತಿ:** ಸಾರ್, ನೆನ್ನೆ ಕೊಠಾರಿ ಆಯೋಗದ ಚರ್ಚೆಯಲ್ಲಿ ನೀವು ಮಾತಾಡಿದ್ದನ್ನ ಪೇಪರ್‌ನಲ್ಲಿ ಓದ್ತಾ ಇದ್ದೆ–ಮಾತೃಭಾಷೆಯ ಕಲ್ಪನೆಯೆ ಬದಲಾಗಿದೆ ಅಂತ, ಅದು ಹ್ಯಾಗೆ ಅಂತ ಇನ್ ಸ್ವಲ್ಪ ಹೇಳಬಹುದಾ...

**ಕೆ.ವಿ.ಎನ್:** ನೊ... ಮಾತೃಭಾಷೆ ಅಂದ್ರೆ ಡೆಫನೀಷನ್ ಸರಿಯಾಗಿ ಕೊಡ್ತಾ ಇಲ್ಲ. 66 ರಲ್ಲಿ ಕೊಠಾರಿ ಕಮಿಷನ್ ವರದಿ ಕೊಟ್ಟಾಗ ಅವರಿಗೆ ಪಿಕ್ಚರ್ ಬಹಳ ಹೇಜಿಯಾಗಿತ್ತು. ಯಾಕೆಂದ್ರೆ 71 ರ ಸೆನ್ಸಸ್ ಇನ್ನೂ ಆಗಿರ್‍ಲಿಲ್ಲ. ಆಕ್ಚುಯಲಿ ಮಾತೃಭಾಷೆಗಳ ಬಗೆಗೆ ದೊಡ್ಡ ಪ್ರಮಾಣದ ಮಾಹಿತಿ ನಮಗೆ ಹೊರಗೆ ಬಿದ್ದಿದ್ದು 71 ರಲ್ಲಿ. ಆಗ 15 ಭಾಷೆಗಳು ಮಾತ್ರ 8 ನೇ ಶೆಡ್ಯೂಲಲ್ಲಿ ಇದ್ದ ಭಾಷೆಗಳಾಗಿದ್ವು ಇವತ್ತು 22 ರಡು ಭಾಶೆಗಳಿವೆ. ಅದರಲ್ಲಿ ಕೊಠಾರಿ ಕಮಿಷನ್ ಕಲ್ಪಿಸಿಕೊಳ್ಳೋಕೆ ಕೂಡ ಸಾಧ್ಯ ಇರ್‍ಲಿಲ್ಲ ಸಂತಾಲಿ ಒಂದು ಭಾಶೆ ಆಗ್ಬಹುದು ಅಂತ. ಸಂತಾಲಿಗೆ ಇವತ್ತೂ ಲಿಪಿಯಿಲ್ಲ. ಲಿಪಿಯಿಲ್ಲದೆ ಇರೊ ಬೋಡೊ, ಡೋಗ್ರಿ ಸೇರಬಹುದು ಅಂತ ಕಲ್ಪನೆ ಇರ್‍ಲಿಲ್ಲ. ಅಂದ್ರೆ ಪಿಕ್ಚರ್ ಕ್ಲೀರ್ ಇರ್‍ಲಿಲ್ಲ ಅವ್ರಿಗೆ. ನಾನೇನು ಹೇಳೋಕೆ ಪ್ರಯತ್ನ ಪಡ್ತಾ ಇದೀನಿ, ಮಾತೃಭಾಷೆ ಶಿಕ್ಷಣ ಮಾಧ್ಯಮ ಆಗ್ಬೇಕು ಅಂತಾ ಹೇಳೊದು ಒಂದು ಪಾಲಿಸಿ ಸ್ಟೇಟ್‌ಮೆಂಟಾಗಿ ಕೊಠಾರಿಯವರಿಗೆ ಹೇಳೋದು ಸುಲಭವಾಗಿತ್ತು. ಕರ್ನಾಟಕಾನೆ ತಗೊಳಿ, ಅದಕ್ಕೆ ಕನ್ನಡವೇ ಮಾತೃಭಾಷೆ ಅಂತ ತಿಳ್ಕೊಂಡಿದೀರಿ ನೀವು–ಕನ್ನಡ ತರಗತಿಗಳಿಗೆ ಬರೊ ವಿದ್ಯಾರ್ಥಿಗಳ ಮಾತೃಭಾಷೆ ಅಂತ ತಿಳ್ಕೊಂಡ್ರೆ, ಅವರಿಗೆ ಈಗಾಗ್ಲೆ ಕನ್ನಡ ಶಿಕ್ಷಣ ಮಾಧ್ಯಮವಾಗಿತ್ತು. ಇಂಗ್ಲಿಷು ಬಾರ್ಡರ್ ಲೈನ್ ಕೇಸುಗಳಲ್ಲಿತ್ತು. ಆಂಗ್ಲೊ ವರ್ನಾಕುಲರ್ ಶಾಲೆಗಳಲ್ಲಿ ಮಾತ್ರ ಇತ್ತು. ಆ ಶಾಲೆಗಳು ಇಡೀ ಕರ್ನಾಟಕದಲ್ಲಿ ಬೆರಳೆಣಿಕೆಯಷ್ಟಿದ್ವು, ಬೆಂಗಳೂರಲ್ಲಿ ಒಂದು ಮೂರ್‍ನಾಲ್ಕು, ಮೈಸೂರಲ್ಲಿ ಒಂದೆರಡು ಶಾಲೆ ಇರಬಹುದು, ಅದೂ ಶ್ರೀಮಂತರು ಓದ್ತಾ ಇದ್ದ ಶಾಲೆಗಳವು. ಮತ್ತೆ ಬೇರೆ

ಭಾಷಿಕರಿದ್ರಲ್ಲ–ದೊಡ್ಡಪ್ರಮಾಣದ ಭಾಷಿಕರು–ಅವರು ಕನ್ನಡ ಶಿಕ್ಷಣ ಮಾಧ್ಯಮವಾಗಿ ಒಪ್ಕೊಳ್ಳೋಕೆ ಸುಲಭವಾಗಿತ್ತು. ನಮ್ಮ ಸಮಸ್ಯೆ ಇದ್ದಿದ್ದು ಉನ್ನತ ಶಿಕ್ಷಣದಲ್ಲಿ ಇರಬೇಕೋ ಬ್ಯಾಡ್ವೊ ಅನ್ನೋದು. ಕುವೆಂಪು ಆ ಪ್ರಯೋಗವನ್ನೂ ಮಾಡಿದ್ರು, ಬಟ್ ಮಾತೃಭಾಶೆ ಅನ್ನೊದು ಮುಂದಕ್ಕೇನಾಯಿತು ಅಂದ್ರೆ–ಡೆಫ಼ನಿಷನ್ ಬಂದಾಗ–ಒಬ್ಬ ವಿದ್ಯಾರ್ಥಿಯ ಮಾತೃಭಾಷೆ ಯಾವ್ದು? ಹೌಸ್ ಹೋಲ್ಡ್ ಲಾಂಗ್ವೇಜ್ ಅಂತನುಸ್ತು. ಮೊದಲು ಏನು ಹೇಳಿದ್ರು; ದ ಲಾಂಗ್ವೇಜ್ ದ ಚೈಲ್ಡ್ ಸ್ಪೀಕ್ಸ್ ಟು ಹಿಸ್/ಹರ್ ಮದರ್. ಆಮೇಲೆ ಸ್ವಲ್ಪ ಡೆಫ಼ನಿಶನ್ ಚೇಂಜ್ ಮಾಡಿದ್ರು, ಮದರ್ ಇಲ್ಲದೆ ಇದ್ರೆ, ಯಾರು ಸಾಕ್ತಾ ಇರ್ತಾರೆ ಅವ್ರ ಜೊತೆಗೆ ಅಂತ. ಆಮೇಲೆ ಹೌಸ್ ಹೋಲ್ಡ್ ಲಾಂಗ್ವೇಜ್ ಒಂದು. ಮನೆ ಒಳಗಡೆ ಯಾವ ಭಾಷೆ ಮಾತಾಡ್ತಾರೆ.. ಬಟ್ ಇಡೀ ಭಾರತದ ಸ್ಟ್ರಕ್ಚರ್ ಎಷ್ಟು ಫ್ರಾಕ್ಚರ್ಡ್ ಆಗಿದೆ ಅಂತಂದ್ರೆ, ಕೋಟ್ಯಾಂತರ ಜನಕ್ಕೆ ಹೌಸ್ ಹೋಲ್ಡ್ ಇಲ್ಲ. ಮನೇನೆ ಇಲ್ಲ. ಬಟ್ ದೆ ಆರ್ ಲಿವಿಂಗ್ ಟುಗೆದರ್. ಒಂದ್ಕಡೆ ವಾಸ ಮಾಡ್ತಾ ಇದಾರೆ ಅವ್ರು, ಬೇರೆ ಬೇರೆ ಕಡೆಯಿಂದ ಬಂದಿರ್ತಾರೆ.. ಬಹಳ ಒರಟಾದ ಎಕ್ಸಾಂಪಲ್ ಕೊಡ್ತೀನಿ; ಸೂಳೆಗೇರಿ. ರಿಯಾಲಿಟಿ ತಾನೆ ಅದು.. ಯಾವ ಯಾವ ಪ್ರದೇಶದ ಯಾವ ಯಾವ ಕಡೆಯಿಂದ ಬಂದಿರ್ತಾರೆ.. ಅಲ್ಲೂ ಮಕ್ಕಳು ಹುಟ್ತಾ ಇದಾರಲ್ಲ.. ಅವರಿಗೆ ಯಾವ್ದು ಹೌಸ್ ಹೋಲ್ಡ್ ಲಾಂಗ್ವೇಜು..? ಹೊಟೆಲ್ ಮಾಣಿಗಳು...? ಇಡೀ ಭಾರತದಾದ್ಯಂತ ನೋಡಿದ್ರೆ, ಹೌಸ್ ಹೋಲ್ಡ್ ಕಲ್ಪನೆ ಅನ್ನೋದೇನೆ ವಿಚಿತ್ರವಾಗಿದೆ. ಆಮೇಲೆ ಏನ್ಮಾಡಿದ್ರು; ಯಾವ ಲಾಂಗ್ವೇಜನ್ನ ತಮ್ಮ ಗುಂಪಿನಿಂದ ಆಚೆಗೆ ಮಾತಾಡ್ತಾರೆ–ಗುಂಪಿನ ಒಳಗಡೆ, ಗುಂಪಿನ ಆಚೆಗೆ ಮಾತಾಡೊ ಭಾಷೆಗಳು ಅಂತ ಶುರುಮಾಡಿದ್ರು, ಅಂದ್ರೆ ಮಾತೃಭಾಷೆ ಕಲ್ಪನೇನೆ ಅಡ್ಮಿನಿಸ್ಟ್ರೇಟೀವ್ ಆಗಿ ಡಿಫ಼ೈನ್ ಮಾಡೋಕೆ ಇವತ್ತಿನವರೆಗೂ ಸಾಧ್ಯಾ ಆಗ್ಲಿಲ್ಲ ನಮಗೆ. ಎರಡನೇದು; ಮಾತೃಭಾಷೆಯಲ್ಲಿ ಶಿಕ್ಷಣ ಕೊಡಬೇಕು ಅಂತ ಅಂದಾಗ ಹಾಗೆ ಒತ್ತಾಯ ಮಾಡೋರು ಪ್ರಾದೇಶಿಕ ಭಾಶೆಯನ್ನ ಒತ್ತಾಯ ಮಾಡ್ತಾರೆ. ಕರ್ನಾಟಕ ಎಂಥಾ ಸ್ಥಿತಿಯಲ್ಲಿದೆ ಅಂದ್ರೆ, ಇಡೀ ಭಾರತವನ್ನ ಐದು ಗುಂಪುಗಳಲ್ಲಿ ವಿಂಗಡಿಸ್ತಾರೆ.. ಮೊದಲ ಗುಂಪಿನಲ್ಲಿ ಬರೊ ರಾಜ್ಯಗಳು ಯಾವ ತರದವು ಅಂತಂದ್ರೆ, ಅಲ್ಲಿ ಪ್ರಾದೇಶಿಕ ಭಾಷೆಯನ್ನ ಆಡತಕ್ಕಂತವರು 85 ಪರ್ಸೆಂಟಿಗಿಂತ ಜಾಸ್ತಿ ಇದಾರೆ. ಎರಡನೆ ಗುಂಪಿನಲ್ಲಿ 70 ಪರ್ಸೆಂಟಿಗಿಂತ ಜಾಸ್ತಿ ಇದಾರೆ. ಕರ್ನಾಟಕ ಮೂರನೆ ಗುಂಪಲ್ಲಿ ಬರ್ತದೆ. ಆ ಮೂರನೆ ಗುಂಪಲ್ಲಿ ನಾಲ್ಕು ರಾಜ್ಯಗಳಿವೆ.. ಕರ್ನಾಟಕ, ಗೋವ, ಮೇಘಾಲಯ, ತ್ರಿಪುರ. ಈ ನಾಲ್ಕು ರಾಜ್ಯಗಳ ಪ್ರಥಮ

ಅಥವಾ ಪ್ರಾದೇಶಿಕ ಭಾಷಿಕರು ಇಟ್ಸ್ ಬಿಟ್ವೀನ್ 60 ಅಂಡ್ 70. ಕರ್ನಾಟಕದಲ್ಲಿ ಇದು 66. ಇನ್ನು ಉಳಿದ 34 ಪರ್ಸೆಂಟ್ ಜನಕ್ಕೆ ಏನ್ಮಾಡ್ತೀರಿ ನೀವು. ಬಟ್ ಇಂಟರೆಸ್ಟಿಂಗ್ ಫ್ಯಾಕ್ಟ್ ಅಂದ್ರೆ, ಅವರ ಮಾತೃ ಭಾಷೆಯಲ್ಲಿ ಶಿಕ್ಷಣ ಕೊಡ್ತಿರಲ್ಲ. ಆದರೆ ಆ ಮಾತೃ ಭಾಷಿಕರು ಏನ್ ಮಾಡ್ತಿದಾರೆ ಅಂತಂದ್ರೆ ನಾವು ಕನ್ನಡದಲ್ಲಿ ಶಿಕ್ಷಣ ಪಡೆಯೋದಿಲ್ಲ. ಅಲ್ಟರ್ನೇಟೀವ್ ಆಗಿ ಇಂಗ್ಲಿಷಲ್ಲಿ ಶಿಕ್ಷಣ ಪಡೀತೀವಿ.. ಇನ್ ಕೆಲವು ಕಡೆ ಏನಾಗ್ತ ಇದೆ ಅಂದ್ರೆ; ಉದಾಹರಣೆಗೆ, ತೆಲುಗು, ಉರ್ದು ಹೆಚ್ಚು ಜನ ಮಾತಾಡೊ ಭಾಷೆ ಕರ್ನಾಟಕದಲ್ಲಿ. ಮೂರನೆ ಸ್ಥಾನ ತೆಲುಗಿಗೆ. ನಾಲ್ಕನೆಯದು ಮರಾಠಿಗೆ, ಐದನೆಯದು ತಮಿಳಿಗೆ. ಅಲ್ಲೇನ್ ಮಾಡ್ತಾ ಇದಾರೆ ಅಂದ್ರೆ–ಇನ್ನು ಇಂಟೆರೆಸ್ಟಿಂಗ್ ಡಿಸ್ಟಿಂಕ್ಷನ್–ಕನ್ನಡ ತೆಲುಗು ಗೊತ್ತಿರೋರ ಮಾತೃಭಾಷೆ ಶಿಕ್ಷಣ ಅಂತಂದ್ರೆ, ತೆಲುಗು ಮೊದಲಭಾಶೆಯಾಗಿರೋರು ಹೆಣ್ಣುಮಕ್ಕಳಿಗೆ ಕನ್ನಡ ಮೀಡಿಯಂ ಅಥವ ತೆಲುಗು ಮೀಡಿಯಂ, ಗಂಡುಮಕ್ಕಳಿಗೆ ಇಂಗ್ಲಿಷ್ ಮೀಡಿಯಂ.. ಉರ್ದು ಭಾಷೆಗಳಲ್ಲಿ ಆ ತರ ಆಗ್ತಾ ಇದೆ.. ಹೆಣ್ಣುಮಕ್ಕಳಿಗೆ ಉರ್ದು ಮೀಡಿಯಮ್ಮು, ಗಂಡುಮಕ್ಕಳಿಗೆ ಇಂಗ್ಲಿಷ್ ಮೀಡಿಯಮ್. ಸೊ ಕರ್ನಾಟಕದಲ್ಲಿ ಈ 34 ಪರ್ಸೆಂಟ್ ಏನಾಗ್ತಾ ಇದಾರೆ, ಇವರ ಸಮಸ್ಯೆಗಳನ್ನ ಮಾತೃಭಾಷಾ ಶಿಕ್ಷಣಕ್ಕೆ ಸಂಬಂಧಿಸಿದ ಹಾಗೆ ಹೇಗೆ ನಿರ್ವಹಿಸ್ತೀರಿ? ಮರಾಠಿ ಭಾಷಿಕರೇನ್ಮಾಡ್ತಾರೆ ಅಂದ್ರೆ, ಬೆಳಗಾಂ ನಲ್ಲಿ ಗಲಾಟೆ ಮಾಡ್ತಾ ಇದಾರೆ. ಮರಾಠಿಗರಿಗೆ ಕನ್ನಡವನ್ನ ಕಂಪಲ್ಸರಿ ಮಾಡ್ತಾ ಇದಾರೆ.. ಅದರಿಂದಾಗಿ ಮರಾಠಿಗರಿಗೆ ಅನ್ಯಾಯ ಆಗ್ತಿದೆ ಅಂತ. ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿ ಕೊಂಕಣಿಗಳಿದಾರೆ, ಅವರ್‍ಯಾರೂ ಪ್ರಶ್ನೆ ಮಾಡಿಲ್ಲ ಇದುವರೆಗೆ.. ಗೋವಾದಲ್ಲಿ ಕೊಂಕಣಿ ರಾಜ್ಯಭಾಷೆ ಆದ್ರೂನು ಕೊಂಕಣಿ ಕನ್ನಡದ ಬಗೆಗೆ ಶತ್ರುತ್ವದ ಭಾವನೆಯನ್ನ ಹೊಂದಿಲ್ಲ. ಇವತ್ತು ಹೊಂದಿಲ್ಲ. ನಾಳೆ ಅವರು–ಈಗಾಗ್ಲೆ ಶುರುವಾಗಿದೆ ಕೊಂಕಣಿಯನ್ನ ಕನ್ನಡದಲ್ಲಿ ಬರೀಬಾರ್ದು ದೇವನಾಗರಿಯಲ್ಲಿ ಬರೀಬೇಕು ಅಂತ– ಪ್ರಶ್ನೆ ಮಾಡ್ತಾರೆ ಅಂತಿಟ್ಕೊಳ್ಳೋಣ. ಅಥವಾ ಈಗಾಗ್ಲೆ ಚಾಯ್ಸ್ ಮಾಡಿರಬಹುದು ಅವ್ರು. ಕನ್ನಡವನ್ನ ಬಿಟ್ಟು ಇಂಗ್ಲಿಷಿಗೆ ಹೊರಟೋಗಿರಬಹುದು. ಇಂಗ್ಲಿಷ್ ಬಗೆಗೆ ವ್ಯಾಮೋಹ ಇದೆಯಂತಲ್ಲ.. ನಾವು ತಪ್ಪಾಗಿ ಕಲ್ಪಿಸ್ತಾ ಇದೀವಿ ಅದನ್ನ. ನಾವು ಕಲ್ಪಿಸ್ತಾ ಇರುವ ಮಾತೃಭಾಷೆಯ ಪರಿಕಲ್ಪನೇನೆ ಸರಿಯಾಗಿ ಡಿಫೈನ್ ಆಗ್ದೆ ಇರೋದ್ರಿಂದಾಗಿ ಈ ಸಮಸ್ಯೆ ಆಗ್ತಾ ಇದೆ.

ಕೊಠಾರಿ ಕಮಿಶನ್ ವರದಿ ಕೊಟ್ಟಾಗ ಅವರಿಗೆ ಈ ಕಲ್ಪನೆಗಳೇ ಇರ್ಲಿಲ್ಲ. ಬಹಳ ಇಂಟರೆಸ್ಟಿಂಗ್ ಆದ ವಾತಾವರಣ ಇತ್ತು. ನಾನು

ಅದನ್ನ **ನೆಹರು ಯುಗದ ಆದರ್ಶ ಮತ್ತು ಕನಸುಗಾರಿಕೆಯ ಫೈನಲ್ ಡಾಕ್ಯುಮೆಂಟ್** ಅಂತ ಕರೀತೀನಿ. 64 ರಲ್ಲಿ ಆಯೋಗ ನೇಮಕಗೊಂಡಿದ್ದು, 66 ರಲ್ಲಿ ವರದಿ ಕೊಟ್ಟಿದ್ದು. ಆ ಮಧ್ಯದಲ್ಲಿ ಏನಾಗಿತ್ತು ಅಂದ್ರೆ, ಈ ಹಿಂದಿ ರಾಷ್ಟ್ರಭಾಷೆ ಆಗ್ಬೇಕು, ರಾಷ್ಟ್ರದ ಏಕೈಕ ಭಾಷೆಯಾಗ್ಬೇಕು ಅಂತ–ಜೊತೆಗೆ ಇಂಗ್ಲಿಷು ಇರಬಹುದು ಅನ್ನೋದನ್ನ 1950 ರ ಕಾನ್ಸ್ಟಿಟ್ಯೂಷನ್ನಲ್ಲಿ ಅವಕಾಶ ಕೊಟ್ಟಾಗ 15 ವರ್ಷ ಮಾತ್ರ ಟೈಮ್ ಕೊಟ್ರು, 15 ವರ್ಷ ಮಾತ್ರ ಇಂಗ್ಲಿಷನ್ನ ಉಳಿಸ್ಕೋಬೇಕು, 15 ವರ್ಷ ಆದ ತಕ್ಷಣ ಏಕೈಕ ರಾಷ್ಟ್ರಭಾಷೆಯಾಗಿ ಹಿಂದಿ ಇರಬೇಕು ಅಂತ ಮಾಡಿದ್ರು, 65 ರಲ್ಲಿ ಕಾನ್ಸ್ಟಿಟ್ಯೂಶನ್ನನಲ್ಲಿ ಅಮೆಂಡ್‌ಮೆಂಟ್ ಮಾಡ್ಬೇಕಾಗಿ ಬಂತು, ಇಂಗ್ಲಿಷನ್ನ ಉಳಿಸಿಕೊಬೇಕಾಗಿ ಬಂತು. ಬಹಳ ದೊಡ್ಡ ಪ್ರಮಾಣದ ಚಳುವಳಿ ನಡೀತು, ಹಿಂದಿ ಚಳುವಳಿ. ನಾವು ಅವಾಗ ಡಿಗ್ರಿ ಓದ್ತಾ ಇದ್ದ ಕಾಲದಲ್ಲಿ ದೊಡ್ಡ ಚಳುವಳಿ. ತಮಿಳುನಾಡ್ನಲ್ಲಂತೂನು ದೊಡ್ಡದಾಗಿ ನಡೀತು ಲೋಹಿಯಾ ಅವರೆಲ್ಲರೂನು ಇನ್ವಾಲ್ವಾಗಿದ್ರು ಅದರೊಳಗಡೆಗೆ. ತಮಿಳ್ನಾಡು ಯಾವತ್ತೂ ಒಪ್ಪಲೇ ಇಲ್ಲ. ಎಲ್ಲಕ್ಕಿಂತ ಇಂಪಾರ್ಟೆಂಟಾಗಿ ಇಡೀ ಇಂಡಿಯಾದಲ್ಲಿ ಏನಾಗಿತ್ತಂದ್ರೆ, ರಾಜಕೀಯವಾಗಿ ಕಾಂಗ್ರೆಸ್‌ನ ಏಕ ಚಕ್ರಾಧಿಪತ್ಯ ಇತ್ತಾಗ, ಅದು ಪ್ರಾದೇಶಿಕ ಶಕ್ತಿಗಳ ನಡುವೆ ಹೊಡೆದೋಗ್ಬಿಡ್ತು. ಮೊದಲನೆ ಸರ್ತಿ, 67ರಲ್ಲಿ ಎಲೆಕ್ಷನ್ನಾದಾಗ ಕಾಂಗ್ರೆಸ್ ಮೈನಾರಿಟಿ ಗೌರ್ನಮೆಂಟಾಯ್ತು. ಇಂದಿರಾಗಾಂಧಿ ಫಸ್ಟ್ ಫೇಸ್ ಮಾಡಿದ ಎಲೆಕ್ಷನ್ ಅದು. ಅದು ಬಹುಮತ ಪಡೆಯೋಕೆ ಆಗ್ಲಿಲ್ಲ. ಅಷ್ಟೊತ್ತಿಗೆ ತಮಿಳುನಾಡ್ನಲ್ಲಿ ಡಿಎಂಕೆ ಗೌರ್ನಮೆಂಟ್ ಬಂತು. ಕೇರಳದಲ್ಲಿ ಕಮ್ಯೂನಿಸ್ಟರು ಅಧಿಕಾರ ಪಡೆದ್ರು, ಪಂಜಾಬಿನಲ್ಲ ಅಕಾಲಿದಳದೋರು ಅಧಿಕಾರ ಪಡೆದ್ರು. ಅಂದ್ರೆ ಇವೆಲ್ಲ ಏನ್ ತೋರಿಸ್ತದೆ ಅಂದ್ರೆ, ಇಡೀ ಇಂಡಿಯ ಅನ್ನೋದು ಅಖಂಡವಾದ ರಚನೆಯಲ್ಲ. ಅದರೊಳಗಡೆ ಬೇರೆ ಬೇರೆ ಆಸ್ಪಿರೇಶನ್ಸ್ ಇವೆ. ಈ ಕೊಠಾರಿ ಕಮಿಷನ್ ವರದಿ ಬರಿತಾ ಇದ್ದಾಗ ಅವ್ರು ಕಲ್ಪಿಸಿಕೊಂಡಿದ್ದ ಭಾರತಾನೆ ಬೇರೆ. ಒಳಗಡೆ ರೂಪುಗೊಳ್ತಿದ್ದ ಭಾರತಾನೆ ಬೇರೆ. ಅದರಲ್ಲಿ ಮಾತೃಭಾಷೆಯ ಶಿಕ್ಷಣದ ಬಗ್ಗೆ ಹೇಳ್ತಾರೆ ಅವ್ರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದಲ್ಲಿ ಮಾತೃಭಾಷೆಯನ್ನ ಹೇಳ್ಬೇಕು ಅಂತ ಹೇಳ್ತಾರೆ ಅದರಲ್ಲಿ. ಸೊ, ಕೊಠಾರಿ ಕಮಿಷನ್ ಆಗ್ಲೆ ಹೇಳಿತ್ತು ಈಗ್ಲೂ ಅದರ ಬಗ್ಗೆ ಚರ್ಚೆ ಮಾಡ್ಬೇಕು ಯಾಕೆ ನಾವು ಅದನ್ನ ಅನ್ನೊ ತರದಲ್ಲಿ ಪ್ರಶ್ನೆ ಹಾಕೊ ಪ್ರಯತ್ನ ಮಾಡ್ತಿದಾರೆ. ಅದು ಅಡ್ಮಿನಿಸ್ಟ್ರೇಟಿವ್ ಡಿಸಿಷನ್ ಅಷ್ಟೆ ಅದು. ಜಾರಿ ಕೊಡೋಕೆ ಆಗದ ರೀತಿಯಲ್ಲಿ ಭಾರತ ತನ್ನ ಆಕಾರವನ್ನ

ಬದಲಾಯಿಸಿಕೊಂಡಿದೆ. ಸರ್ಕಾರ ಅನುದಾನರಹಿತ ಶಾಲೆಗಳ ಕಲ್ಪನೆ ಕರ್ನಾಟಕದಲ್ಲಿ ಜಾರಿಗೆ ಕೊಟ್ರಲ್ಲ, ಅದರಿಂದಾಗಿ ಒಂದು ಓಪನ್ ಸ್ಟೇಟ್‌ಮೆಂಟ್ ಕೋರ್ಟ್ನಲ್ಲಿ ಕೊಡ್ತಾರೆ, ಜಡ್ಜ್‌ಮೆಂಟಲ್ಲಿ ಒಂದು ಸಾಲಿದೆ. ರನ್ನಿಂಗ್ ಎಜುಕೇಶನಲ್ ಇನ್‌ಸ್ಟಿಟ್ಯೂಷನ್ ಈಸ್ ಎ ಬ್ಯುಸಿನೆಸ್ ಅಂತ. ಯಾರು ಹೇಳಿರೋದಿದು.. ಕೋರ್ಟ್ ಜಡ್ಜ್ ಹೇಳೊ ಮಾತಿದು. ಅದರಿಂದ ಬ್ಯುಸಿನೆಸ್ ಮಾಡೋನ್ಗೆ, ತನ್ನ ಹಣ ಹೂಡಿರೋನ್ಗೆ ಅವನು ಹೇಗಾದ್ರು ಬ್ಯುಸಿನೆಸ್ ಮಾಡ್ಬೇಕು. ಅವನಿಗೆ ನೀವು ಶರತ್ತುಗಳನ್ನ ಹಾಕೋಕಾಗಲ ಅಲ್ವೇ? ಎಲ್ಲಿಗ್ಬಂತು ನೋಡಿ.

ಶಿಕ್ಷಣ ಕೊಡತಕ್ಕಂತದ್ದು ಡೈರೆಕ್ಟಿವ್ ಪ್ರಿನ್ಸಿಪಲ್ಸ್ ಪ್ರಕಾರ ಸ್ಟೇಟ್‌ನ ರೆಸ್ಪಾನ್ಸಿಬಲಿಟಿ. ನೀವು ಅದನ್ನ ಬೇರೆಯವರಿಗೆ ರವಾನೆ ಮಾಡ್ಬಿಟ್ಟು, ನಮ್ಮ ಹೊಣೆಯಿಂದ ತಪ್ಪಿಸ್ಕೊಂಬಿಟ್ಟು ಅವ್ರು ಪ್ರೊವೈಡ್ ಮಾಡ್ಲಿ ಅಂತಂದ್ರೆ..? ಪರವಾಗಿ ಕೆಲಸ ಮಾಡಿದ್ರೆ ಪರವಾ ಇಲ್ಲ. ರಸ್ತೇನ ನಾವು ಮಾಡೊಕಾಗಲ್ಲ ಒಬ್ಬ ಕಂಟ್ರಾಕ್ಟರ್ ಮಾಡ್ತಾನೆ. ನಮಗೋಸ್ಕರ ಕೆಲಸ ಮಾಡ್ತಾ ಇರ್ತಾನೆ ಅಷ್ಟೆ ಅವನು. ಆತನಿಗೆ ಬೇಕಾದ ಹಾಗೆ ರಸ್ತೆ ಮಾಡ್ಕೊಳೊಕಾಗಲ್ಲ. ತಪ್ಪಲ್ಲ ಅದು. ಆದರೆ ಪರ್ಯಾಯ ಅಲ್ಲ ಅದು. ಎಜುಕೇಷನ್ನಲ್ಲಿ ಏನಾಗಿದೆ ಅಂತಂದ್ರೆ, ಪರ್ಯಾಯವಾಗ್ಬಿಟ್ಟಿದೆ. ಎಲ್ಲಾದರ ಜೊತೆಗೆ ಇನ್ನೊಂದು ಅಭಿಪ್ರಾಯ ರೂಪಿಸ್ತಾ ಇರ್ತಾರೆ.. ಸರ್ಕಾರಿ ಶಾಲೆಗಳು ಹಾಳಾಗಿವೆ, ಖಾಸಗಿ ಶಾಲೆಗಳು ಬಹಳ ಅತ್ಯುತ್ತಮವಾಗಿ ಶಿಕ್ಷಣ ಕೊಡ್ತಾ ಇವೆ ಅಂತ. ಇಟ್ಸ್ ಎಗ್ಯೆನ್ ಎ ರಾಂಗ್ ನೋಶನ್ . ಶಿಕ್ಷಣದ ಉದ್ದೇಶ ಏನು ಅನ್ನೋದು ಡಿಫೈನ್ ಆದ್ರೆ-ಉದಾಹರಣೆಗೆ ಶಿಕ್ಷಣದ ರಿಪೋರ್ಟ್ ನಾನು ಕೋಟ್ ಮಾಡ್ದೆ- ಶಿಕ್ಷಣ ಮುಗಿಸಿ ಹೊರಗಡೆ ಬಂದ್ಮೇಲೆ ಸಮಾಜದ ಜೊತೆಯಲ್ಲಿ ಬಾಳೋಕೆ ನಿಮಗೆ ಅರ್ಹತೆ ಇರ್ತದೊ ಇಲ್ವೊ.ಜೀವನ ಮಾಡೋಕೆ ನೀವು ಹೊಂದ್ಕೊಂಡು ಬದುಕ್ತೀರೊ ಇಲ್ವೊ ಇದು ಒಂದು ಟೆಸ್ಟ್, ಅದರಲ್ಲಿ ಗೆಲ್ಲೋರು ಯಾರು ಅಂತಂದ್ರೆ, ಯಾರು ಸರ್ಕಾರಿ ಶಾಲೆಗಳಿಂದ ಹೊರಗಡೆ ಬಂದಿರ್ತಾರೊ ಅವರು. ಯಾರು ಪ್ರೈವೇಟ್ ಪಬ್ಲಿಕ್ ಸ್ಕೂಲುಗಳಿಂದ ಬಂದಿರ್ತಾರೆ ಅವರು ಮರಳಿ ಬಂದು ಸಮಾಜದ ಜೊತೆಯಲ್ಲಿ ಬದುಕೋಕಾಗೋದಿಲ್ಲ. ಅವರು ಹಾಗೆ ನಡಕೊಂಡು ನಡ್ಕೊಂಡು ಅಮೆರಿಕಾಗೊ ಎಲ್ಲಿಗೊ ಹೊರಟೋಗ್ಬಿಡಬಹುದು. ಡರ್ಬಿ ಇಂಡಿಯಾ ಅಂತ ಹೊರಟೋಗ್ಬಿಡಬಹುದು. ಅವರಲ್ಲಿ ಅಡಾಪ್ಟಬಲಿಟಿ ಮಿನಿಮಮ್ ಆಗ್ಬಿಡ್ತದೆ. ಅವರು ಏನನ್ನೂ ಕೂಡ ಅಕ್ಸೆಪ್ಟ್ ಮಾಡ್ಕೊಳ್ಳೊ ಸ್ಟೇಜಲ್ಲಿರೊಲ್ಲ. ಆ ದೃಷ್ಟಿಯಿಂದ ನೋಡಿದ್ರೆ ಸರ್ಕಾರಿ ಶಾಲೆಗಳು....

**ಚಲಪತಿ:** ನಾವು ಅದನ್ನ ಬೆಳವಣಿಗೆ ಅಂತ ಕರೀತಾ ಇದೀವಿ. ಇದನ್ನ ಕುಂಟಿತ ಬೆಳವಣಿಗೆ ಅಂತಲೂ ಕರೀತಾ ಇದೀವಿ..

**ಕೆ.ವಿ.ಎನ್:** ಹೌದು ಹಾಗೆ ಕರೀತಾ ಇದೀವಿ. ಇವು ಸೋತಿವೆ ಅಂತೀರಿ. ನನ್ ಪ್ರಕಾರ ಇಟ್ಸ್ ನಾಟ್ ಎ ಕೈಟೀರಿಯ.

**ಚಲಪತಿ:** ಇದು ಬ್ಯೂಟಿಫುಲ್ ಅನಾಲಿಸಿಸ್ಸು ಸಾರ್. ಬಹಳ ಸೂಕ್ಷ್ಮವಾಗಿ ನೀವು ಎಲ್ಲವನ್ನು ಗಮನಿಸ್ತಾ ಇದೀರಿ. ಥ್ಯಾಂಕ್ಯು ಸಾರ್.

# ನಾಟಕ ಮತ್ತು ಸಿನಿಮಾ...

# ಬ್ರೆಕ್ಟ್ ಮತ್ತು ಕನ್ನಡ ರಂಗಭೂಮಿ

ಈಗ ಪೂರ್ವಜರ್ಮನಿಯೂ ಇಲ್ಲ ಬರ್ಲಿನ್ ಗೋಡೆಯೂ ಇಲ್ಲ. ಇಡೀ ಪ್ರಪಂಚವೇ ಒಂದು ಮಾರುಕಟ್ಟೆಯಾಗಿ ಪರಿವರ್ತಿತವಾಗ್ತಾ ಇದೆ. ಯುದ್ಧ ಅನ್ನೋದು ಒಂದು ವ್ಯಾಪಾರ ಆಗಿದೆ. ಇಂತಹ ಘಳಿಗೆಯಲ್ಲಿ ಬ್ರೆಕ್ಟ್‌ನ ಕುರಿತು ಯೋಚನೆ ಮಾಡೋದಿದ್ಯಲ್ಲ, ಇದೇ ಒಂದು ರೀತಿಯಲ್ಲಿ ಅಸಂಗತ ಸನ್ನಿವೇಶವೊಂದನ್ನ ನಾವೇ ಕಲ್ಪಿಸಿಕೊಳ್ಳುವಂತಹದ್ದು. ನಾನು ಇದನ್ನ ಬೇಕು ಅಂತಲೇ ಅಬ್ಸರ್ಡ್ ಅಂತ ಕರೀತಾ ಇದೀನಿ. ನಾವು ಯಾವ ಪರಿಸ್ಥಿತಿಯಲ್ಲಿ-ಯಾರನ್ನು ಕುರಿತು ಮಾತಾಡ್ತಾ ಇದೀವಿ ಅನ್ನೋದರ ನಡುವೆ ವಿಚಿತ್ರ ಸಂಘರ್ಷ ಇದ್ದ ಹಾಗೆ ನನಗೆ ತೋರತ್ತೆ. ಈ ಕುರಿತು ಮಾತಾಡುವುದಕ್ಕೆ ಮುನ್ನ ಬ್ರೆಕ್ಟ್ ಮತ್ತು ಕನ್ನಡ ರಂಗಭೂಮಿಗೆ ಸಂಬಂಧಿಸಿದ ಕೆಲವು ಘಟನೆಗಳನ್ನು ನಿಮ್ಮ ಗಮನಕ್ಕೆ ತರಬೇಕು. ಅನೇಕ ಹಿರಿಯರಿಗೆ ಇದು ಗೊತ್ತಿರುವಂತಹದು. ಆದರೂ ಕೆಲವರಿಗಾದರೂ ಕೆಲವು ಸಂಗತಿಗಳನ್ನ ನೆನಪು ಮಾಡಿಕೊಳ್ಳುವುದು ಬೇರೆ ಬೇರೆ ಕಾರಣಗಳಿಂದ ಉಪಯುಕ್ತ ಅಂತ ನನ್ನ ಅನಿಸಿಕೆ.

ಬ್ರೆಕ್ಟ್‌ನ ಉಲ್ಲೇಖ ಕನ್ನಡಿಗರಿಗೆ ದೊರೆತದ್ದು ಶಿವರಾಮ ಕಾರಂತರ ಬಾಲಪ್ರಪಂಚದಲ್ಲಿ. ಅದು 1936ರಲ್ಲಿ ಹೊರಬಂದ ಪುಸ್ತಕ. ಜಗತ್ತಿನ ಎಲ್ಲಾ ಸಂಗತಿಗಳನ್ನೂ ಹೇಳಬೇಕು ಅನ್ನುವ ತರಾತುರಿಯಿದ್ದ ಕಾರಂತರು ಬಾಲಪ್ರಪಂಚದಲ್ಲಿ ಬ್ರೆಕ್ಟ್‌ನನ್ನೂ ಕೇವಲ ಒಂದು ಸಂಗತಿಯಾಗಿ ನಿರೂಪಿಸಿದ್ದರು ಅಷ್ಟೆ. ಆದರೆ ಬ್ರೆಕ್ಟ್ ಕನ್ನಡ ರಂಗಭೂಮಿಗೆ ಸರಿಯಾಗಿ ಪರಿಚಯವಾಗಿದ್ದು 1970ರಲ್ಲಿ. ಹಿಂದಿಗೆ ಭಾಷಾಂತರಿಸಿದ ಬ್ರೆಕ್ಟ್‌ನ ಎರಡು ನಾಟಕಗಳನ್ನು ನ್ಯಾಷನಲ್ ಸ್ಕೂಲ್ ಆಫ್ ಡ್ರಾಮದವರು, ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಅಭಿನಯಿಸಿದರು. ಅದು 'ಕಕೇಷಿಯನ್ ಚಾಕ್ ಸರ್ಕಲ್' ಮತ್ತು 'ತ್ರೀಪೆನ್ನಿ ಅಪೇರಾ'. ಈ ಎರಡೂ ನಾಟಕಗಳಲ್ಲಿ ಭಾಗವಹಿಸಿದ್ದ ನಟರಲ್ಲಿ ಹಲವರು ಇಂದಿನ ಭಾರತೀಯ ರಂಗಭೂಮಿ ಹಾಗೂ ಚಲನಚಿತ್ರದ ಮಹಾನ್ ನಟರು ಎನಿಸಿಕೊಂಡಿದ್ದಾರೆ. ಆ ನಾಟಕಗಳನ್ನ ಆಗ ನೋಡಿದವರಿಗೆ ಅವು ವಿಚಿತ್ರ ಅನುಭವವನ್ನು ಕೊಟ್ಟವು. ಯಾಕೆ ಅಂದರೆ, ಕನ್ನಡ ರಂಗಭೂಮಿ ಆಗ ಹೊಸದಕ್ಕಾಗಿ ತಹತಹಿಸ್ತಾ ಇತ್ತು. 30ನೆಯ ಶತಮಾನದ ಯೂರೋಪಿಯನ್ ರಂಗಭೂಮಿಯು ಆಗ ಪ್ರಚಲಿತವಾಗಿದ್ದ ಮನರಂಜನೆಯೇ ಪ್ರಧಾನವಾದ ರಂಗಚಳುವಳಿಗೆ ಪ್ರತಿಕ್ರಿಯೆಯಾಗಿ ಎರಡು ರಂಗಭೂಮಿಗಳನ್ನು ಸೃಷ್ಟಿ ಮಾಡ್ತು. ಒಂದು 'ಅಸಂಗತ ನಾಟಕ ಪರಂಪರೆ' ಮತ್ತೊಂದು 'ಬ್ರೆಕ್ಟ್‌ನ ಮಹಾಕಾವ್ಯ ರಂಗಭೂಮಿ' ಇವುಗಳಲ್ಲಿ ಅಸಂಗತ ನಾಟಕಗಳು

60ರ ದಶಕದಲ್ಲಿಯೇ ಕನ್ನಡ ರಂಗಭೂಮಿಗೆ ಪರಿಚಯವಾಗಿತ್ತು. ಕೆಲವು ಅಸಂಗತ ನಾಟಕಗಳು ಅನುವಾದಗಳಾಗಿದ್ದವು. ಕೆಲವು ರೂಪಾಂತರವಾಗಿದ್ದವು. 1970ರಲ್ಲಿ ಬ್ರೆಕ್ಟ್‌ನ ನಾಟಕಗಳನ್ನು ನೋಡಿದ ಕನ್ನಡ ರಂಗಭೂಮಿ ಮಿತ್ರರಿಗೆ ಅಬ್ಸರ್ಡ್ ಥಿಯೇಟರ್‌ಗಿಂತ ಭಿನ್ನವಾದ ರಂಗಸಾಧ್ಯತೆಯೊಂದು ಪರಿಚಯವಾಯಿತು.

ಸುಮಾರು 1970 ರಿಂದ 75ರವರೆಗಿನ ಭಾರತೀಯ ರಾಜಕೀಯದ ಕೊಪ್ಪರಿಗೆಯ ಕುದಿತದ ಕಾಲದಲ್ಲಿ, ಇಡೀ ದೇಶವೇ ಹಲವಾರು ರೀತಿಯ ತಳಮಳವನ್ನು ಅನುಭವಿಸ್ತಾ ಇತ್ತು. ಈ ದೇಶದ ಭಾಗವಾಗಿದ್ದ ಕರ್ನಾಟಕ, ಕರ್ನಾಟಕದ ರಂಗಭೂಮಿ ಕೂಡ ಅಂತಹ ತಳಮಳವನ್ನೇ ಅನುಭವಿಸ್ತಾ ಇತ್ತು. ಆಗ ರಂಗಭೂಮಿಯ ಒಂದು ಗುಂಪಿನ ನಾಟಕಕಾರರು, ರಂಗಕರ್ಮಿಗಳು ಅಸಂಗತ ರಂಗಭೂಮಿಯ ಕಡೆಗೆ ಸಾಗಿದರು. ಇನ್ನೊಂದು ಗುಂಪು ಪಾರಂಪರಿಕ ರಂಗಭೂಮಿಯ ಕಡೆ ಹೋಗೋಕ್ಕೆ ಪ್ರಯತ್ನಿಸ್ತಾ ಇತ್ತು. ಅದಕ್ಕಾಗಿ ಜಾನಪದ ರಂಗಭೂಮಿಯಿಂದ ರಸವನ್ನು ಪಡ್ಯೋ ಪ್ರಯತ್ನಗಳಾಗ್ತಾ ಇದ್ವು. ಈ ಮಾತಿಗೆ, 1972ರಲ್ಲಿ ಅಭಿನಯಿಸಿದ 'ಜೋಕುಮಾರಸ್ವಾಮಿ'ಯನ್ನ, ಆ ನಾಟಕ ಬರೆವ ಕಾಲದಲ್ಲೇ ಬರೆದಿದ್ದರೂ ನಾಲ್ಕು ವರ್ಷದ ನಂತರ ಅಭಿನಯಿಸಿದ (1974ರಲ್ಲಿ) 'ಹಯವದನ'ವನ್ನ ತಾವು ನೆನಪಿಸಿಕೊಳ್ಳಬಹುದು. ಇವೆಲ್ಲವೂ ಪಾರಂಪರಿಕ ರಂಗಭೂಮಿಯತ್ತ ಸಾಗುವ ಹಾದಿಯಲ್ಲಿ ಜಾನಪದ ರಂಗಭೂಮಿಯಿಂದ ಹೊಸ ಕಸುವನ್ನು ಪಡೆಯುವ ಪ್ರಯತ್ನಗಳು. ಅದರೆ, ಇವೆರಡೂ ರಂಗಪರಂಪರೆಗಳಿಗೆ ಇಲ್ಲದ ಒಂದು ರಾಜಕೀಯ ಮೊನಚನ್ನು ಕೊಡಬಲ್ಲಂತಹ ರಂಗಭೂಮಿ ಯಾವುದು ಅಂತ ಯೋಚಿಸುತ್ತಿದ್ದ ರಂಗಕರ್ಮಿಗಳಿಗೆ ಹೊಳೆದಂತಹ ಅಥವಾ ಆಶಾಕಿರಣ ಆದಂತಹ ರಂಗಭೂಮಿ ಬ್ರೆಕ್ಟ್‌ನದ್ದು.

1973ರಲ್ಲಿ ಕನ್ನಡದಲ್ಲಿ ಬರೆದು, ಪ್ರದರ್ಶಿಸಿದ ನಾಟಕವೊಂದಿದೆ. ಅದನ್ನು ನಿರ್ದೇಶಿಸಿದವರು ಪ್ರಸನ್ನ. ಪ್ರಾಯಶ: ಅವರೂ ಇದನ್ನು ಮರೆತಿರಬಹುದು. ಆ ನಾಟಕ 'ಗರೀಬಿ ಹಟಾವೋ'. ಅದನ್ನ ಬಾಲಭವನದಲ್ಲಿ ಪ್ರದರ್ಶಿಸಲಾಯಿತು. ಇಂದಿರಾಗಾಂಧಿ ಅಂತಹ ರಾಜಕಾರಣಿಯನ್ನು ನಾಟಕೀಯವಾಗಿ ರಂಗದ ಮೇಲೆ ತರಬಹುದೆನ್ನುವ ಸಾಧ್ಯತೆಯನ್ನು ತೋರಿಸಿಕೊಟ್ಟ ನಾಟಕ ಅದು. ಆ ನಾಟಕದಲ್ಲಿ ಬ್ರೆಕ್ಟ್‌ನ ರಂಗಭೂಮಿಯ ಕೆಲವು ತಂತ್ರಗಳನ್ನು ಪ್ರಸನ್ನ ಬಳಸಿದ್ದರು. ಅದಾಗಿ ಮೂರು ವರ್ಷಗಳ ನಂತರವೇ 'ಸಮುದಾಯ' ರೂಪುಗೊಂಡದ್ದು. ಅದೇ ಸುಮಾರಿಗೆ, ಅಂದರೆ 1973–74ರಲ್ಲಿ ಎರಡು ಏಕಾಂಕಗಳು ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಶನವಾಯಿತು. ಅದರಲ್ಲಿ ಒಂದು ಬ್ರೆಕ್ಟ್‌ನ ನಾಟಕ. ಹೆಸರು 'ಆನೆಮರಿ'. ಆ ನಾಟಕದಲ್ಲಿ ಬ್ರೆಕ್ಟ್‌ನ ರಂಗತತ್ತ್ವದ ಪ್ರಧಾನ ಸಂಗತಿಗಳಾದ ಏಲಿಯನೇಷನ್, ಸರಳತೆ, ಮುಂತಾದವೇನಿದ್ದವು ಅವುಗಳ ಪ್ರಯೋಗ ಆಗಿತ್ತು. 'ಆನೆಮರಿ' ನಾಟಕದಲ್ಲಿ ಒಂದು ವಿಚಿತ್ರ ದೃಶ್ಯವಿದೆ. ನಾಟಕದೊಳಗೆ ಒಂದು ನಾಟಕ. ಆ ನಾಟಕ ಅಭಿನಯವಾಗ್ತಿರೋವಾಗ ರಂಗದ ಮೇಲೆ ಕುಳಿತೇ ಆ ನಾಟಕ ನೋಡುತ್ತಿರುವ ಪ್ರೇಕ್ಷಕರು ತಮ್ಮ ಅಂಶಗಳನ್ನು ಸೇರಿಸ್ತಾ ಇರ್ತಾರೆ. ಇದನ್ನು ಈಗ ಯಾಕೆ ನೆನಪಿಸಿಕೊಳ್ತಾ ಇದ್ದೇನೆ ಅಂದರೆ, ಆಗ ನಾವು ಬ್ರೆಕ್ಟ್‌ನ

ಕುರಿತು ಏನೇನು ಯೋಚ್ನೆ ಮಾಡ್ತಿದ್ರೋ, ತಿಳ್ಕೊಂಡಿದ್ರೋ, ಗ್ರಹಿಸೋಕ್ಕೆ ಪ್ರಯತ್ನಿಸ್ತಾ ಇದ್ರೋ ಅವುಗಳಲ್ಲಿನ ಅನೇಕ ಎಳೆಗಳು 'ಆನೆಮರಿ' ನಾಟಕದಲ್ಲಿ ಕಾಣಿಸಿಕೊಂಡಿದ್ವು. ಈಗ ಆ ನಾಟಕದ ಸ್ಕ್ರಿಪ್ಟ್ ಕೂಡ ಇದೆಯೋ ಇಲ್ವೋ. ಆಗ ಎನ್.ಎಸ್. ವೆಂಕಟರಾವ್ ಅವರು ಆ ನಾಟಕವನ್ನು ನಿರ್ದೇಶಿಸಿದ್ದರು ಅಂತ ನೆನಪು.

ಒಟ್ಟಾರೆಯಾಗಿ ತುರ್ತುಪರಿಸ್ಥಿತಿಯ ಕಾಲದ ಭಾರತೀಯ ರಂಗಭೂಮಿಯ ಮತ್ತು ಕನ್ನಡ ರಂಗಭೂಮಿಯ ತಳಮಳಗಳು, ಮೂರು ನೆಲೆಯಲ್ಲಿ ಕಾಣಿಸಿಕೊಂಡವು. ಒಂದು ಅಬ್ಸರ್ಡ್ ಥಿಯೇಟರ್‌ನ ಒಲವು. ಇನ್ನೊಂದು ಪಾರಂಪರಿಕ ರಂಗಭೂಮಿಯ ಹಿನ್ನೆಲೆಯೊಡನೆ ಜಾನಪದ ರಂಗಭೂಮಿಯ ಕಸುವನ್ನ ರೂಢಿಸಿಕೊಳ್ಳುವ ರಂಗ ಪ್ರಯತ್ನ. ಮೂರನೆಯದು ಬ್ರೆಕ್ಟ್‌ನ ತಂತ್ರಗಳ ಬಳಕೆಯ ಮೂಲಕ ರಂಗಭೂಮಿಗೆ ರಾಜಕೀಯ ಮೊನಚನ್ನ ತಂದುಕೊಡಬೇಕೆಂಬ ಪ್ರಯತ್ನ. ಕನ್ನಡ ರಂಗಭೂಮಿಗೆ ಪ್ರಧಾನವಾಗಿ ಬ್ರೆಕ್ಟ್‌ನ ಬಳಕೆಯಾದದ್ದೇ ಈ ಕಾರಣಕ್ಕಾಗಿ ಎಂದು ನನ್ನ ಗ್ರಹಿಕೆ. ಅನಂತರದ ಹತ್ತು ವರ್ಷದ ಕನ್ನಡ ರಂಗಭೂಮಿಯ ಚರಿತ್ರೆ ಗಮನಿಸಿದರೆ ಬ್ರೆಕ್ಟ್‌ನನ್ನು ನಮ್ಮ ರಂಗಭೂಮಿ 'ಜೇಬಿನಲ್ಲಿರುವ ನಾಣ್ಯ'ದ ಹಾಗೆ ಬಳಸಿದೆ. ಅಂದರೆ ಬೇಕಾದಾಗ ಉಪಯೋಗ ಪಡೆಯುತ್ತ, ಇಲ್ಲದಿದ್ದಾಗ ಜೇಬಲ್ಲಿದೆ ಎಂದು ಸಂತೋಷ ಪಡುವ ರೀತಿಯಲ್ಲಿ ಬ್ರೆಕ್ಟ್‌ನ ಬಳಕೆಯಾಗಿದೆ. 75–76ರ ನಂತರ ಸುಮಾರು 10–15 ವರ್ಷಗಳ ಕಾಲ ಬ್ರೆಕ್ಟ್‌ನ ನಾಟಕಗಳು ಹಲವಾರು ರೀತಿಯಲ್ಲಿ ಕನ್ನಡ ರಂಗಭೂಮಿಯಲ್ಲಿ ಕಾಣಿಸಿಕೊಂಡವು. ಅನುವಾದಗಳು ಬಂದವು, ರೂಪಾಂತರಗಳು ಬಂದವು, ಅವನ ನಾಟಕಗಳಿಂದ ಪ್ರಭಾವಿತವಾದ ನಾಟಕಗಳು ಬಂದವು, ಅವನ ರಂಗತಂತ್ರಗಳಿಂದ ಪ್ರಭಾವಿತರಾಗಿ ಬರೆದ ನಾಟಕಗಳೂ ಬಂದವು.

ಈ ಬ್ರೆಕ್ಟ್ ಸಾಹಚರ್ಯ ನಮ್ಮ ರಂಗಭೂಮಿಗೆ ಯಾಕೆ ಬಂತು ಅನ್ನೋದನ್ನ ಗಮನಿಸ್ಬೇಕು. ರಂಗಭೂಮಿಯು ಒಂದು ಪ್ರತ್ಯೇಕವಾದ ಸಾಂಸ್ಕೃತಿಕ ಚಟುವಟಿಕೆ ಅಲ್ಲ. ಅದು ನಮ್ಮ ಸಾಮಾಜಿಕ ಚಿಂತನೆಯ ಭಾಗವಾಗಿ ಇರಬೇಕಾದ್ದು. ರಂಗದ ಮೇಲಿನ ನಾಟಕದಲ್ಲಿ ನಾವು ಭಾಗವಹಿಸದೇ ಇರಬಹುದು. ನಮಗೆ ರಂಗಭೂಮಿಯ ಮೇಲೆ ನಡೆಯುವ ಎಲ್ಲದರ ನೇರ ಸಂಪರ್ಕ ಇಲ್ದೇ ಇರಬಹುದು. ಆದರೂ ನಮ್ಮ ದಿನನಿತ್ಯದ ನೂರಾರು ಸಾಮಾಜಿಕ ಚಟುವಟಿಕೆಗಳು ಏನಿದ್ದಾವೆ, ಆ ಚಟುವಟಿಕೆಗಳ ಮುಂದುವರಿಕೆಯಾಗಿ ರಂಗಭೂಮಿ ಇರಬೇಕು. ಈ ತಿಳುವಳಿಕೆಯ ಹಿನ್ನೆಲೆಯಲ್ಲಿಯೇ ಬ್ರೆಕ್ಟ್ ಕನ್ನಡ ರಂಗಭೂಮಿಗೆ ಬಂದದ್ದು. ಈ ಕಾರಣದಿಂದಾಗಿ ಯಾವುದೇ ಬಗೆಯ ರಾಜಕೀಯ ವ್ಯತ್ಯಾಸಗಳನ್ನು ರಂಗದ ಮೇಲೆ ತೋರಿಸಬೇಕು ಅನ್ನಿಸಿದಾಗೆಲ್ಲ ನಮ್ಮ ರಂಗಭೂಮಿ ಬ್ರೆಕ್ಟ್‌ನ ಮಾದರಿಯನ್ನ ಬಳಸಿಕೊಳ್ಳುವ ಪ್ರಯತ್ನ ಮಾಡಿದೆ. ಎಷ್ಟೋ ಸಂದರ್ಭದಲ್ಲಿ ಬ್ರೆಕ್ಟ್‌ನ ಸಿದ್ಧಾಂತಗಳನ್ನು ಬಳಸುವಾಗ ವಿರೋಧಾಭಾಸಗಳು ಕೂಡ ಕಾಣಿಸಿಕೊಂಡಿವೆ.

ಬ್ರೆಕ್ಟ್ ಸಿದ್ಧಾಂತವನ್ನು ಪರಿಚಯಿಸುವ ಕೆಲಸವನ್ನ ರಂಗಭೂಮಿಯ ಜೊತೆಗಿದ್ದ ಮತ್ತು ರಂಗಭೂಮಿಯ ಬಗ್ಗೆ ಸಾತ್ವಿಕವಾಗಿ ಯೋಚಿಸಬಲ್ಲವರಾಗಿದ್ದ ಕೆಲವರು

ಮಾಡಿದ್ದಾರೆ. ಪ್ರೊ.ಎಚ್.ಕೆ. ರಾಮಚಂದ್ರಮೂರ್ತಿಯಂತಹವರು ಬರೆದಿದ್ದಾರೆ. ನಾವು ಓದಿದ್ದೇವೆ. ಆದರೆ ಪೂರ್ವನಿರ್ಧಾರಿತವಾದ ಬ್ರೆಕ್ಟ್‌ನ ಸಿದ್ಧಾಂತವನ್ನ ತಲೆಯಲ್ಲಿ ಇಟ್ಟುಕೊಂಡು ಅದಕ್ಕನುಗುಣವಾದ ರಂಗಪ್ರದರ್ಶನ ರೂಪಿಸಿರುವ ಪ್ರಯತ್ನ ನಮ್ಮ ರಂಗಭೂಮಿಯಲ್ಲಿ ಆಗಲಿಲ್ಲ. ಇಲ್ಲಿ ನಮಗೆ ಸ್ಪಷ್ಟವಾಗಬೇಕಾದ ಸತ್ಯ ಏನಂದ್ರೆ, ಬ್ರೆಕ್ಟ್‌ನ ನಾಟಕವನ್ನು ಒಂದು ಸ್ಕ್ರಿಪ್ಟ್ ಆಗಿ, ವಾಚಿಕರೂಪದಲ್ಲಿ ಗ್ರಹಿಸೋದು ಸಾಧ್ಯವಿಲ್ಲ ಅನ್ನೋದು. ಷೇಕ್ಸ್‌ಪಿಯರ್‌ನನ್ನು ಓದಿದ ಹಾಗೆ, ಕಾಳಿದಾಸನನ್ನು ಓದಿದ ಹಾಗೆ ಬ್ರೆಕ್ಟ್‌ನನ್ನು ಓದೋದು ಸಾಧ್ಯ ಇಲ್ಲ. ಯಾಕೇಂದ್ರೆ, ನಮ್ಮ ಪಾರಂಪರಿಕ ರಂಗಚಿಂತನೆಯ ನಾಲ್ಕು ಅಭಿನಯ ಭಾಗಗಳೇನಿವೆ, ಅವುಗಳೆಲ್ಲವೂ ಪರಸ್ಪರ ಪೂರಕವಾಗಿದ್ದು, ಪೂರಕತೆಗಾಗಿಯೇ ಒಟ್ಟಾಗಿ ಸೇರಿರ್ತವೆ. ಕಾಳಿದಾಸನ ನಾಟಕಗಳ ಓದಿನಿಂದ ರಂಗಕೃತಿಯ ಚಿತ್ರವನ್ನ ಕಟ್ಟಬಹುದು. ಷೇಕ್ಸ್‌ಪಿಯರ್‌ನ ನಾಟಕದಲ್ಲೂ ಇದೂ ಸಾಧ್ಯ. ಆದರೆ ಬ್ರೆಕ್ಟ್‌ನನ್ನು ಕೇವಲ ಓದಿನಿಂದ ಕಟ್ಟೋಕ್ಕಾಗಲ್ಲ. ವಾಲ್ಟರ್ ಬೆಂಜಮಿನ್‌ನ 'ಕಾನ್‌ವರ್‌ಸೇಷನ್ಸ್ ವಿಥ್ ಬ್ರೆಕ್ಟ್' ಓದಿದರೆ ಇದು ಹಿಗೇಕೆ ಅನ್ನೋದು ಸ್ಪಷ್ಟವಾಗಿ ಗೊತ್ತಾಗತ್ತೆ. ಬ್ರೆಕ್ಟ್ ಎಂದೂ ಸಿದ್ಧಾಂತವೊಂದನ್ನಿಟ್ಟುಕೊಂಡು ನಾಟಕ ಬರೆದವನಲ್ಲ, ಅವನು ಪೂರ್ವಜರ್ಮನಿಯಲ್ಲಿ ಇದ್ದಾಗ ಬರೆದದ್ದನ್ನು, ನಾಜಿಗಳ ಆಳ್ವಿಕೆಯ ಅನುಭವವಿದ್ದಾಗ ಬರೆದದ್ದನ್ನು, ಅಥವಾ ಅಮೇರಿಕಾದಲ್ಲಿ ಇದ್ದಾಗ ಮೆಕಾರ್ಥಿಯನ್ ಸಂದರ್ಭದಲ್ಲಿ- ಪ್ರಜಾಪ್ರಭುತ್ವದ ಮತ್ತು ಆ ಸ್ವಾತಂತ್ರ್ಯದ ಲಕ್ಷಣಗಳ ಅನುಭವದಲ್ಲಿ ಬರೆದದ್ದನ್ನು ಗಮನಿಸಿದರೆ ಅವನ ಬರೆಹಗಳಲ್ಲಿ ಹಲವಾರು ರೀತಿಯ ಪಲ್ಲಟಗಳನ್ನು, ಬದಲಾವಣೆಯನ್ನು ಗುರುತಿಸಬಹುದು. ಆದರೆ ಬ್ರೆಕ್ಟ್‌ನ ಶ್ರೇಷ್ಠ ಕೃತಿಗಳು ಅಂತ ಪರಿಗಣಿಸಲಾಗುತ್ತಿರುವ ಕೃತಿಗಳನ್ನು ಆತ ಬರೆದದ್ದು ನಾಜಿಗಳು ಅಧಿಕಾರದಲ್ಲಿದ್ದ ಕಾಲದಲ್ಲೂ ಅಲ್ಲ, ಆ ದೇಶದಲ್ಲೂ ಅಲ್ಲ. ಯಾಕೆ ಈ ಮಾತನ್ನು ಹೇಳ್ತಿದೀನಿ ಅಂದ್ರೆ, ಬ್ರೆಕ್ಟ್ ಅರಿಸ್ಟಾಟಲ್ ರೀತಿಯ ಸಿದ್ಧಾಂತಿ ಅಲ್ಲ. ಅವನ ನಾಟಕಗಳ ಮೂಲಕವೇ ಅವನ ಸಿದ್ಧಾಂತಗಳ ಅನುಭವ ಆಗುತ್ತೆ ಅಷ್ಟೆ. ಹೀಗಾಗಿಯೇ ಅವನ ಸಿದ್ಧಾಂತಗಳು ಮತ್ತು ನಾಟಕಗಳಲ್ಲಿ, ಅವನ ವಾಚಿಕಕ್ಕೂ, ಆಂಗಿಕ್ಕೂ ಪರಸ್ಪರ ವಿರೋಧ ಇರತ್ತೆ. ಆ ಕಾರಣದಿಂದಲೇ ಷೇಕ್ಸ್‌ಪಿಯರ್‌ನ ಅಥವಾ ಕಾಳಿದಾಸನ ಕೃತಿಗಳನ್ನ ಓದಿದ ಹಾಗೆ ಬ್ರೆಕ್ಟ್‌ನನ್ನು ಓದೋಕ್ಕೆ ಆಗಲ್ಲ. ಆದರೂ ನಾವು ಅವನ ನಾಟಕಗಳನ್ನ ಪಠ್ಯವಾಗಿ ಹೇಳ್ತಾ ಇದ್ದೇವೆ. ನಾನೇ ಸ್ವತಃ 'ಕಕೇಷಿಯನ್ ಚಾಕ್ ಸರ್ಕಲ್'ನಂತಹ ನಾಟಕವನ್ನ ಪಾಠ ಮಾಡಿದ್ದೇನೆ. ಬ್ರೆಕ್ಟ್‌ನ ಸೈದ್ಧಾಂತಿಕ ನಿಲುವುಗಳನ್ನು ನಾವು ಓದಿ ಅರ್ಥಮಾಡಿಕೊಂಡಿರಬಹುದಾದರೂ ಅವುಗಳು ರಂಗಪ್ರಯೋಗದ ನೆಲೆಯಲ್ಲಿ ನಮ್ಮನ್ನು ಕಾಡಿಸಿಲ್ಲ. ಇದಕ್ಕೆ ಎರಡು ಕಾರಣಗಳಿವೆ. ಒಂದು: ನಮ್ಮ ಪ್ರಮುಖ, ಪಾರಂಪರಿಕ ನಾಟಕಕಾರರು ಬ್ರೆಕ್ಟ್‌ನನ್ನ ಒಪ್ಪಿಕೊಳ್ಳಲೇ ಇಲ್ಲ. ಶ್ರೀರಂಗರಂತೂ ಬ್ರೆಕ್ಟ್‌ನಲ್ಲಿ ಹೊಸತನ ಅನ್ನೋದು ಇಲ್ಲವೇ ಇಲ್ಲ ಅಂತ ಸಾರಾಸಗಟಾಗಿ ತಿರಸ್ಕರಿಸ್ತಿದ್ರು, ಇದೇ ರೀತಿಯ ಮಾತನ್ನ ಚಂದ್ರಶೇಖರ ಕಂಬಾರರು ಸಹ ಹೇಳಿದಂತೆ ನೆನಪು. ಇನ್ನು ಎರಡನೆಯದು: ಅವನ ನಾಟಕಗಳ ನಿರೂಪಣಾ ಲಕ್ಷಣಗಳೇನಿವೆ, ಅವು ನಮ್ಮಲ್ಲಿ ಇದ್ದ ಕಥನತಂತ್ರದ ಲಕ್ಷಣಗಳಿಗಿಂತ ಭಿನ್ನವಾದ್ದಲ್ಲ. ಹಾಗೆ ನೋಡಿದರೆ ನಮ್ಮ ಹರಿಕಥೆಯೇ ಅತ್ಯಂತ ಶ್ರೇಷ್ಠವಾದ ಬ್ರೆಕ್ಟಿಯನ್ ಪರ್‌ಫಾರ್‌ಮೆನ್ಸ್.

ಬ್ರೆಕ್ಟ್‌ನದ್ದು ರೇಖಾತ್ಮಕವಾದ ಚಲನೆಯ ನಿರೂಪಣೆ ಅಲ್ಲ. ಕಥೆ-ಉಪಕಥೆಗಳ ಮುಖಾಂತರ ಹರಿಯುವಂತಹದು. ಈ ಕ್ರಮವನ್ನೇ ಬ್ರೆಕ್ಟ್‌ನ ಮಾದರಿ ಅಂತ ಭಾವಿಸಿ ನಮ್ಮ ರಂಗಭೂಮಿಯಲ್ಲಿ ಬಳಸಿದ್ದಾರೆ. ಕಾದಂಬರಿಯನ್ನು ರಂಗಭೂಮಿಗೆ ತಂದ ಕೆಲವು ನಾಟಕಕಾರರು ಸಹ ಈ ಕ್ರಮವನ್ನೇ ಅನುಸರಿಸಿದರು. ಈ ನಿಟ್ಟಿನಲ್ಲಿ ಆರ್. ನಾಗೇಶ್ ಅವರ 'ಕಾಮಗಾರಿ' ನಾಟಕವನ್ನ ನೆನಪಿಸಿಕೊಳ್ಳಬಹುದು. ಈ ರೀತಿಯಾಗಿ ಕನ್ನಡ ರಂಗಭೂಮಿಯು ತನ್ನ ರಾಜಕೀಯ, ಸಾಮಾಜಿಕ ನೆಲೆಗಳನ್ನು ಗುರುತಿಸಿಕೊಳ್ಳಬೇಕು ಅನ್ನುವ ಸಂದರ್ಭದಲ್ಲಿ ಬ್ರೆಕ್ಟ್‌ನನ್ನ ತನಗೆ ಬೇಕಾದಂತೆ ಹೊಂದಿಸಿಕೊಳ್ಳುತ್ತಾ ಇತ್ತೇನೊ.

ಈ ಶತಮಾನವು ಸೃಷ್ಟಿಸಿದ ಇಬ್ಬರು ಮಹಾನ್ ಕ್ಯಾರೆಕ್ಟರ್‌ಗಳು ಅಂದರೆ ಬಹುಶಃ ಒಂದು ಚಾಪ್ಲಿನ್, ಇನ್ನೊಬ್ಬ ಹಿಟ್ಲರ್; ಅರ್ಥಾತ್ ಕಲೆ ಮತ್ತು ರಾಜಕಾರಣ. ಬ್ರೆಕ್ಟ್‌ನನ್ನ ಬಹಳವಾಗಿ ಕಾಡಿದ ನಟ ಚಾಪ್ಲಿನ್. ಆತ ಬಹಳವಾಗಿ ಮೆಚ್ಚಿಕೊಂಡ ನಟರಲ್ಲಿ ಕೂಡ ಚಾಪ್ಲಿನ್ ಒಬ್ಬನಾಗಿದ್ದ. ಚಾಪ್ಲಿನ್ನನ್ನು ಬಹಳವಾಗಿ ಕಾಡಿದ ಕ್ಯಾರೆಕ್ಟರ್ ಹಿಟ್ಲರ್‌ನದ್ದು. ಈ ಮಾತಿನ ಮೂಲಕವೇ ಕನ್ನಡ ರಂಗಭೂಮಿ ಬ್ರೆಕ್ಟ್‌ನನ್ನು ಅರ್ಥಮಾಡಿಕೊಂಡದ್ದು ಸರಿಯಾಗಿಯೇ ಇತ್ತು ಎಂದು ತಿಳಿಯುತ್ತದೆ. ಅಂದರೆ, ಕಲೆ ಮತ್ತು ರಾಜಕಾರಣ ಇವೆರಡೂ ಕೂಡ ಒಂದಕ್ಕೊಂದು ಹೇಗೆ ಬೆರೆಯಬಹುದು, ಒಂದು ಇನ್ನೊಂದನ್ನ ಹೇಗೆ ರೂಪಿಸಬಹುದು, ಒಂದು ಇನ್ನೊಂದಕ್ಕೆ ಹೇಗೆ ಪ್ರೇರಣೆಯಾಗಬಹುದು ಅನ್ನೋದು ಸ್ಪಷ್ಟ ಆಗ್ತದೆ. ರಾಜಕಾರಣವೂ ಕೂಡ ಒಂದು ಮಹಾನ್ ನಾಟಕವೇ. ಅದನ್ನ ಬೃಹತ್ ರಂಗವಾಚಿಕೆ ಅನ್ನಬಹುದು. ಅದರಲ್ಲೂ ವಿಭಿನ್ನ ಕ್ಯಾರೆಕ್ಟರ್‌ಗಳಿರ್ತವೆ. ಅದನ್ನಿಲ್ಲಿ ನಿಮಗೆ ವಿವರಿಸುವುದು ಬೇಕಿಲ್ಲ ಅಂತ ಭಾವಿಸ್ತೇನೆ. ಒಟ್ಟಾರೆ 1970 ರಿಂದ 1985ರವರೆಗಿನ ಹದಿನೈದು ವರ್ಷಗಳ ಕಾಲದಲ್ಲಿ ಕನ್ನಡ ರಂಗಭೂಮಿಯು ಬ್ರೆಕ್ಟ್‌ನನ್ನು ಅರ್ಥಮಾಡಿಕೊಂಡ ಕ್ರಮಕ್ಕೆ ತಾರ್ಕಿಕ ಬೆಂಬಲವೂ ಇದೆ ಎಂದಾಯ್ತು. ಈ ನಿಟ್ಟಿನಲ್ಲೇ ಬ್ರೆಕ್ಟ್‌ನ ಏಲಿಯನೇಷನ್ ಎಫೆಕ್ಟ್, ಎಪಿಸೋಡಿಕ್ ನಿರೂಪಣೆಯನ್ನ ನಮ್ಮ ರಂಗಭೂಮಿ ಸ್ವೀಕರಿಸಿದೆ.

ಆದರೆ ಕೆಲವೊಮ್ಮೆ ಬ್ರೆಕ್ಟ್‌ನ ಸೈದ್ಧಾಂತಿಕ ದೃಷ್ಟಿ ಕುರಿತು ಬಹಳ ತಲೆ ಕೆಡಿಸಿಕೊಂಡಿದ್ದೂ ಉಂಟು. ಉದಾಹರಣೆಗೆ ಅವನ 'ಸೋಷಿಯಲ್ ಜಿಸ್' ಅನ್ನುವ ಮಾತು. ವಾಲ್ಟರ್ ಬೆಂಜಮಿನ್‌ನ ಪುಸ್ತಕದಲ್ಲಿ ಈ ಮಾತು ಮತ್ತೆ ಮತ್ತೆ ಬರುತ್ತದೆ. ಬೆಂಜಮಿನ್ ಸಹ ಈ 'ಸೋಷಿಯಲ್ ಜಿಸ್' ಅನ್ನು ಬ್ರೆಕ್ಟ್‌ನ ಮಾತಿನಿಂದಲೇ ತಿಳಿದುಕೊಳ್ಳಲು, 'ಹಾಗೆಂದ್ರೇನು' ಅನ್ನುವ ಪ್ರಶ್ನೆ ಹಾಕ್ತಾನೆ. ಡಯಲೆಕ್ಟಿಕಲ್ ಮೆಟೀರಿಯಲಿಸಂನ ಹಿನ್ನೆಲೆಯಲ್ಲಿ ಈ 'ಸೋಷಿಯಲ್‌ಜಿಸ್' ಅನ್ನು ಅರ್ಥಮಾಡಿಕೊಳ್ಳೋಕ್ಕೆ ಕೆಲವು ಸೂಚನೆಗಳು ಸಿಗ್ತಾವೆ. ಬ್ರೆಕ್ಟ್ ಹಾದಿ ಬದಿಯ ದೃಶ್ಯವೊಂದನ್ನ ಕುರಿತು ಬರೆದ ಟಿಪ್ಪಣಿಯಲ್ಲಿ ಸಹ ಇದಕ್ಕೆ ಸಾಕಷ್ಟು ಸೂಚನೆಗಳು ಸಿಗ್ತವೆ. ಈ ದೃಶ್ಯದಲ್ಲಿ. ಎಂದೋ-ಎಲ್ಲೋ ನಡೆದ ಘಟನೆಯನ್ನ ನೋಡಿದವನೊಬ್ಬ ವಿವರಿಸ್ತಾ ಇದಾನೆ. ಎದುರಿಗೆ ಅದನ್ನ ತಿಳಿಯದ ಜನ ಇದ್ದಾರೆ. ಈ ವಿವರಣಾ ದೃಶ್ಯದ ನಿರ್ಮಾಣಕ್ರಮ ಇದ್ಯಲ್ಲ. ಅಲ್ಲಿ ನಿರೂಪಿಸ್ತಾ ಇರುವವನು ಘಟನೆಗೂ ತನಗೂ ಇರುವ ಸಂಬಂಧವನ್ನ ಉಳಿಸಿಕೊಳ್ಳುತ್ತಲೇ-ಉಳಿಸಿಕೊಳ್ಳದೆ

ಇರುವುದಕ್ಕೂ ಪ್ರಯತ್ನಿಸ್ತಾ ಎರಡು ಪಾಯಿಂಟ್ ಆಫ್ ವ್ಯೂಗಳನ್ನು ಬಳಸ್ತಿರ್ತಾನೆ. ಪ್ರೇಕ್ಷಕ ಸಹ ಈ ಘಟನೆಗೂ ಮತ್ತು ಅದನ್ನ ನಿರೂಪಿಸುತ್ತಿರುವವನಿಗೂ ಇರುವ ಸಂಬಂಧ ಹಾಗೂ ಆ ಘಟನೆಗೂ–ತನಗೂ ಇರುವ ಸಂಬಂಧವನ್ನ ತನ್ನ ಅನುಭವದ ಭಾಗವಾಗಿ ಮಾಡಿಕೊಳ್ತಾ ಇರ್ತಾನೆ. ಇದೊಂದು ಉತ್ತಮ ಟಿಪ್ಪಣಿ. ಇಲ್ಲಿ 'ಸೋಷಿಯಲ್ ಜೆಸ್' ಅನ್ನೋ ಮಾತು ಮತ್ತಷ್ಟು ಸ್ಪಷ್ಟವಾಗತ್ತೆ. ನಾವು ಯಾವುದನ್ನು ರಂಗಭೂಮಿಯ ಭಾಗವಾಗಿ ಮಾಡಿಕೊಳ್ತೀವೋ ಅದು ಒಬ್ಬ ವ್ಯಕ್ತಿಯ ಅಂತರಂಗದ ಅನುಭವವಾಗಿ ಉಳಿದಾಗಲೇ ವ್ಯಕ್ತಿ ಮತ್ತು ಸಮುದಾಯಕ್ಕೆ ಇರುವ ಸಂಬಂಧದ ನೆಲೆಗಳು ಸಾಬೀತಾಗೋದು. ಸಣ್ಣ ಉದಾಹರಣೆಯಾಗಿ ಬ್ರೆಕ್ಟ್ ಇನ್ನೊಂದು ಮಾತನ್ನ ಹೇಳ್ತಾನೆ. 'ಒಬ್ಬ ವ್ಯಕ್ತಿ ಬ್ರೆಡ್ ಕಸಿದುಕೊಂಡ' ಅಂತ ಹೇಳುವುದಕ್ಕೂ 'ಒಬ್ಬ ಹಸಿದ ವ್ಯಕ್ತಿ ಬ್ರೆಡ್ ಕಸಿದುಕೊಂಡ' ಅಂತ ಹೇಳೋದಕ್ಕೂ ಇರುವ ವ್ಯತ್ಯಾಸ ಅದು.

ಮ್ಯಾಕ್ಸ್‌ಜಂಗ್ ಹೇಳಿದ ಒಂದು ಮಾತು ನೆನಪಿಸಿಕೊಳ್ಳಿ–ಚೈನಾದ ಕಲ್ಚರಲ್ ರೆನೈಸಾನ್ಸ್‌ನ ಸಂದರ್ಭದಲ್ಲಿ ಒಂದು ದೊಡ್ಡ ಚರ್ಚೆ ನಡೀತಾ ಇತ್ತು. ಕಲೆ ಜನರಿಗೆ ಎಷ್ಟು ಉಪಯೋಗ ಆಗ್ತದೆ, ಅದು ವ್ಯಕ್ತಿಯ ಐಷಾರಾಮದ ಚಟುವಟಿಕೆಯಲ್ಲಿ ಒಂದಲ್ಲವೇ ಅನ್ನುವ ಚರ್ಚೆ ಅದು. ಇದಕ್ಕೆ ಒಂದು ಪ್ರಕೃತಿ ದೃಶ್ಯ ಅಥವಾ ಲ್ಯಾಂಡ್‌ಸ್ಕೇಪನ್ನು ಕಲ್ಪಿಸಿಕೊಳ್ಳಿ. ಒಂದು ನೈಜ ಪ್ರಕೃತಿದೃಶ್ಯದಲ್ಲಿ ಚಿತ್ರಕಾರ ಎಲ್ಲೋ ಒಂದೆಡೆ ಒಬ್ಬ ದುಡಿಯುತ್ತಿರುವ ವ್ಯಕ್ತಿಯನ್ನ ಚಿತ್ರಿಸಿರಬಹುದು. ದೊಡ್ಡ ಬೆಟ್ಟದ ಹಿನ್ನೆಲೆ, ಹರಿಯುವ ನದಿ, ಹಾರುವ ಹಕ್ಕಿ ಹೀಗೆ ಏನೆಲ್ಲ ವಿವರಗಳಿರಬಹುದು. ಅವುಗಳ ನಡುವೆ ದುಡೀತಾ ಇರುವ, ಶ್ರಮ ಹಾಕುತ್ತಿರುವ ವ್ಯಕ್ತಿ ಕಾಣಿಸ್ತಾನಲ್ಲ ಅದು ಒಂದು 'ಸೋಷಿಯಲ್ ಜೆಸ್' ಆಗಿರುತ್ತೆ ಅನ್ನೋದು ಮ್ಯಾಕ್ಸ್‌ಜಂಗ್‌ನ ಅಭಿಪ್ರಾಯ. ಸೈದ್ಧಾಂತಿಕವಾಗಿ ಬ್ರೆಕ್ಟ್ ಹೇಳೋದು ಇದನ್ನೇ. ಅದನ್ನ ಕನ್ನಡ ರಂಗಭೂಮಿ ಅರ್ಥ ಮಾಡಿಕೊಂಡ ಅಥವಾ ತನಗೆ ಬೇಕಾದ ಹಾಗೆ ಬಳಸಿಕೊಂಡ ಕ್ರಮ ಬೇರೊಂದು ರೀತಿಯದು. ರಾಜಕೀಯವಾಗಿ ಅಥವಾ ಸಾಮಾಜಿಕವಾಗಿ ರಂಗಭೂಮಿ ಏನನ್ನು ಹೇಳಬೇಕು ಅಥವಾ ನಾವೀಗಾಗಲೇ ಏನನ್ನ ಯೋಚಿಸ್ತಾ ಇದ್ದೇವೆ, ಸಮಾಜದಲ್ಲಿ ಯಾವ ಬಗೆಯಲ್ಲಿ ಪರಿವರ್ತನೆಗಳು ಆಗ್ತಾ ಇವೆ, ಯಾವ ಬಗೆಯ ಚಿಂತನೆಗಳು ಆಗ್ತಾ ಇವೆ ಅದನ್ನು ರಂಗಭೂಮಿಯಲ್ಲಿ ಪ್ರತಿಬಿಂಬಿಸೋ ಪ್ರಯತ್ನ ಅದಾಗಿತ್ತು. ಈ ಮಾತನ್ನು ಹೇಳೋವಾಗ 'ಸಮುದಾಯ'ಕ್ಕೂ ಬ್ರೆಕ್ಟ್‌ಗೂ ಇರುವ ಸಂಬಂಧವನ್ನ ನನಗೇ ಗೊತ್ತಿಲ್ಲದೆ ಸ್ಪಷ್ಟಪಡಿಸ್ತಾ ಇದೀನಿ ಅಂತ ಕಾಣಿಸತ್ತೆ. 'ಸಮುದಾಯ' ಜಾಥಾಗಳನ್ನು ಮಾಡಿದ್ದು, ಬೀದಿ ನಾಟಕಗಳನ್ನು ಮಾಡಿದ್ದು, ಇಡೀ ಕರ್ನಾಟಕವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳೋದಕ್ಕೆ ಪ್ರಯತ್ನ ಪಟ್ಟಿದ್ದು ಇವೆಲ್ಲವೂ ಕೂಡ ಇದೇ ಅಂಶವನ್ನ ಮತ್ತೆ ಮತ್ತೆ ಹೇಳತ್ತೆ. ಇವೆಲ್ಲವೂ ನಮ್ಮ ಬೌದ್ಧಿಕ ಚಿಂತನಾಕ್ರಮ, ಬೌದ್ಧಿಕ ಅಸ್ತಿತ್ವ–ಇವೆರಡರ ನಡುವಣ ಸೇತುವೆಯಂತೆ ಕಾಣತ್ತೆ. ಹೀಗೆ ಯೋಚನೆ ಮಾಡಿಯೇ ಕನ್ನಡ ರಂಗಭೂಮಿ ಬ್ರೆಕ್ಟ್‌ನನ್ನು ತನ್ನ ಜೊತೆಗೆ ತಗೊಳ್ತು ಅಂತನ್ಸತ್ತೆ. ಆಮೇಲೆ ಬ್ರೆಕ್ಟ್‌ನ ಸಿದ್ಧಾಂತಗಳಲ್ಲದೆ ಅವನ ಯುದ್ಧವಿರೋಧೀ ನಿಲುವು, ಅವನ ಮಾನವತಾವಾದೀ ನೆಲೆಗಳನ್ನು ಕೂಡ ಕನ್ನಡ ರಂಗಭೂಮಿ ಸ್ವೀಕರಿಸಿದೆ.

ಒಂದರ್ಥದಲ್ಲಿ ಬಹಳ ಆಶ್ಚರ್ಯವಾಗುವ ವಿಷಯ ಅಂದರೆ ಷೇಕ್ಸ್‌ಪಿಯರ್‌ಗೆ ಇಂಗ್ಲಿಷ್ ಭಾಷೆ ಮತ್ತು ಸಾಮ್ರಾಜ್ಯಶಾಹಿಗಳೆರಡೂ ಬೆನ್ನೆಲುಬಾಗಿದ್ದವು. ಅದಿಲ್ಲದೆ ಹೋಗಿದ್ರೆ, ಷೇಕ್ಸ್‌ಪಿಯರ್ ನಮಗೆ ಇವತ್ತು ಸಿಗ್ತಿದ್ನೋ ಇಲ್ವೋಂತ ನನಗೆ ಗೊತ್ತಿಲ್ಲ. ಇದು ಆತ ಮಹಾನ್ ನಾಟಕಕಾರ ಹೌದೋ-ಅಲ್ಲವೋ ಅನ್ನುವ ಪ್ರಶ್ನೆ ಅಲ್ಲ, ಷೇಕ್ಸ್‌ಪಿಯರ್ ಸಾಮ್ರಾಜ್ಯಶಾಹಿಗಳಿಂದ ನಮಗೆ ಪರಿಚಿತನಾದ ಅನ್ನುವ ಸತ್ಯ. ಯುರೋಪ್ ಷೇಕ್ಸ್‌ಪಿಯರ್‌ನನ್ನ ಎದುರಿಸಲಿಕ್ಕಾಗಿ ಪ್ರಯತ್ನ ನಡೆಸಿ, ಸ್ಟ್ರಿಂಡ್‌ಬರ್ಗ್‌ನಂತಹ-ಮೆಟರ್‌ಲಿಂಕ್‌ನಂತಹ ನಾಟಕಕಾರರನ್ನು ಸೃಷ್ಟಿ ಮಾಡ್ತು. ಅವರ ನಡುವೆ ಬ್ರೆಕ್ಟ್ ಕೂಡ ಸೃಷ್ಟಿಯಾದ. ಬ್ರೆಕ್ಟ್‌ಗೆ ಯಾವುದೇ ಸಾಮ್ರಾಜ್ಯಶಾಹಿ ಹಿನ್ನೆಲೆ ಇರಲಿಲ್ಲ, ಪ್ರಪಂಚವನ್ನ ಆಳುವ ಭಾಷೆ ಜೊತೆಗಿರಲಿಲ್ಲ. ಆದರೂ ಕೂಡ ಬ್ರೆಕ್ಟ್ ನಮ್ಮಲ್ಲಿಗೆ ಬಂದ, ನಮ್ಮೊಳಗೆ ಸೇರಿಕೊಂಡ. ಆದರೆ 20ನೇ ಶತಮಾನದ ಈ ಘಟ್ಟದಲ್ಲಿ ಬ್ರೆಕ್ಟ್ ಸಾಹಚರ್ಯದಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವಿದೆ:

ನಮ್ಮಲ್ಲಿ ಭೂ ಸುಧಾರಣೆ ಬಂದಿರಬಹುದು, ಅದರ ಪರಿಣಾಮವಾಗಿ ಕರ್ನಾಟಕದ ಸಾಂಸ್ಕೃತಿಕ ನೆಲೆಯಲ್ಲಿ ಹಲವಾರು ಒಳದನಿಗಳು-ಹೊರದನಿಗಳು ಬಂದಿರಬಹುದು. ಆದರೆ ಇದು ಒಟ್ಟಾಗಿ ಭಾರತದ ಮೇಲೆ ಮಾಡಿದ ಪರಿಣಾಮ-ಕರ್ನಾಟಕದಲ್ಲಾದ ಪರಿಣಾಮ ಕಾಡಿಸುವಂತಹದು. ಈ ಮಾರುಕಟ್ಟೆ ಅರ್ಥವ್ಯವಸ್ಥೆಯಿಂದ 'ಲೆವಲ್ ಆಫ್ ಮಾರ್ಜಿನಲೈಸೇಷನ್' ಎಷ್ಟರ ಮಟ್ಟಿಗೆ ಆಗ್ತದೆ ಅಂದರೆ ಆಳುವವರೇ ಹೇಳುವಂತೆ ಬಡತನದ ರೇಖೆಗಿಂತ ಕೆಳಗಿನ ಮಟ್ಟದಲ್ಲಿ ಜೀವಿಸುತ್ತಿರುವವರು ಶೇಕಡ 40ರಷ್ಟಿದ್ದಾರೆ. ಸಹಜವಾಗಿಯೇ ಇದು ಶೇಕಡ 40ಕ್ಕಿಂತ ಹೆಚ್ಚು ಎಂದು ನಮಗೂ ತಿಳಿದಿದೆ. ಈ ನಲ್ವತ್ತು ಕೋಟಿ ಜನ ಸುಲಭವಾಗಿ ಚರಿತ್ರೆಯ ಕಸದ ಬುಟ್ಟಿಗೆ ಹೋಗೋರಲ್ಲ. ಅವರಿಗೆ ಅವರದ್ದೇ ಆದ ಚರಿತ್ರೆ ಇದೆ, ಧಾರಣಾ ಶಕ್ತಿಯಿದೆ. ಆ ಶಕ್ತಿಗಳು ಅವರಿಗೆ ತಮ್ಮ ಅಸ್ತಿತ್ವವನ್ನು ಸಾಬೀತು ಮಾಡುವುದಕ್ಕೆ ಪ್ರೇರೇಪಿಸ್ತವೆ. ಆಗ ಮುಖ್ಯ ರಾಜಕಾರಣಕ್ಕೆ ಎದುರಾಗಿ ನಿಂತ ಅವರ ಕಲೆ-ರಾಜಕಾರಣದ ಸಂದರ್ಭದಲ್ಲಿ ಬ್ರೆಕ್ಟ್ ಮತ್ತೊಮ್ಮೆ ನಮಗೆ ಬೇಕಾಗುವ ವ್ಯಕ್ತಿ ಆಗ್ತಾನೆ. ಆ ದಿನ ದೂರವಿಲ್ಲ ಎಂಬ ಹೈಪಾಥಿಸಿಸ್‌ನೊಡನೆ ನನ್ನ ಮಾತು ಮುಗಿಸ್ತೇನೆ.

# ಹಾದಿ ಬದಿಯ ದೃಶ್ಯ
## (ಮಹಾರಂಗಭೂಮಿಯ ಮೂಲಮಾದರಿ)

ವಿಶ್ವಯುದ್ಧದ ಅನಂತರದ ಒಂದೂವರೆ ದಶಕಗಳಲ್ಲಿ ಜರ್ಮನಿಯ ರಂಗಭೂಮಿಗಳ ಮೇಲೆ ಒಂದು ಹೊಸಬಗೆಯ ನಟನೆಯ ವಿಧಾನವನ್ನು ಬಳಕೆಗೆ ತರಲು ಯತ್ನಿಸಲಾಯಿತು. ಅದರ ಮುಖ್ಯ ಲಕ್ಷಣಗಳು; ಸ್ಪಷ್ಟವಾದ ವರ್ಣನಾ ವಿಧಾನ. ವರದಿ ಮಾಡುವ ಬಗೆ, ಮೇಳಗಳು ಹಾಗೂ ತೆರೆಗಳ ಮೇಲೆ ಬಿಂಬಗಳನ್ನು ಮೂಡಿಸುವ ಮೂಲಕ ವಿವರಣೆ ನೀಡುವುದು–ಈ ಲಕ್ಷಣಗಳಿಂದಾಗಿ ಈ ಬಗೆಯ ರಂಗಭೂಮಿಗೆ 'ಎಪಿಕ್' ಎಂಬ ಹೆಸರನ್ನು ಸೂಚಿಸಲಾಯಿತು. ಪಾತ್ರಧಾರಿಗಳು ತಾವು ವಹಿಸುತ್ತಿದ್ದ ಪಾತ್ರದಿಂದ ಹೊರಗುಳಿಯಲು ಒಂದು ವಿಶೇಷ ಬಗೆಯ ಸಂಕೀರ್ಣ ತಂತ್ರವನ್ನ ಬಳಸುತ್ತಿದ್ದರು. ಪ್ರೇಕ್ಷಕರು ನಾಟಕದ ಸಂದರ್ಭವನ್ನು ಒಂದು ವಿಶಿಷ್ಟ ದೃಷ್ಟಿಕೋನದಿಂದ ನೋಡುವಂತೆ ಮಾಡುವ ಮೂಲಕ, ಆ ಪ್ರೇಕ್ಷಕರ ಬಗ್ಗೆಯೂ ವ್ಯಾಖ್ಯಾನವನ್ನು ಮಂಡಿಸಲು ನಟರಿಗೆ ಸಾಧ್ಯವಾಗುತ್ತಿತ್ತು. ಈ ಹೊಸ ರಂಗಭೂಮಿಯ ಸಮರ್ಥಕರ ವಾದದ ತಿರುಳು ಹೀಗಿತ್ತು: ವರ್ಗ ಸಮರದಂಥ ದೈನಿಕ ಸತ್ಯಗಳನ್ನು ನಿಕಟವಾಗಿ ಹಾಗೂ ಸಮರ್ಥವಾಗಿ ಮಂಡಿಸುವುದು ಈ ರಂಗಭೂಮಿಯ ಮೂಲಕ್ಕ ಸಾಧ್ಯ. ಆದರೆ ಈ ತಾಂತ್ರಿಕ ಆವಿಷ್ಕಾರದ ಮೂಲಕ ಕೆಲವು ಹೊಸ ಸಮಸ್ಯೆಗಳು ಉದ್ಭವವಾದವು.

ಒಂದು 'ಸಹಜ'ಎಪಿಕ್ ದೃಶ್ಯಾವಳಿಯನ್ನು ಪರೀಕ್ಷಿಸೋಣ. ಹಾದಿಬದಿಯ ದೃಶ್ಯ ಅಂತಹವುಗಳಲ್ಲೊಂದು. ಅಪಘಾತವನ್ನು ಕಣ್ಣಾರೆ ಕಂಡವನೊಬ್ಬ ಅದನ್ನು ವಿವರಿಸುತ್ತಿದ್ದಾನೆ ಎಂದಿಟ್ಟುಕೊಳ್ಳಿ. ಕೇಳುತ್ತ ನಿಂತವರು ಆ ಅಪಘಾತವನ್ನು ಕಂಡವರಲ್ಲದಿರಬಹುದು, ಇಲ್ಲವೇ ಅವನು ಹೇಳುತ್ತಿರುವುದನ್ನು ನಂಬದಿರುವಂತವರೂ ಅಲ್ಲಿರಬಹುದು, ಅಥವಾ ಇಡೀ ಸಂಗತಿಯನ್ನು 'ಬೇರೊಂದು ದೃಷ್ಟಿಯಿಂದ ನೋಡಲು' ಬಯಸುವವರಿರಬಹುದು. ಮುಖ್ಯವಾದ ಸಂಗತಿ ಎಂದರೆ ಇಲ್ಲಿ ವಿವರಿಸುವವನು ಏಕಕಾಲಕ್ಕೆ ಅಪಘಾತಕ್ಕೆ ತುತ್ತಾದವವನ ಹಾಗೂ ವಾಹನದ ಚಾಲಕನ ವರ್ತನೆಗಳನ್ನು ಅಭಿನಯಿಸಿ ತೋರಿಸುತ್ತಿರುವನು. ಇದರಿಂದ ಕೇಳುವವರು ತಮಗೆ ಬೇಕಾದ ಅಭಿಪ್ರಾಯವನ್ನು ತಳೆಯಲು ಸಾಧ್ಯವಾಗುತ್ತದೆ.

ಎಪಿಕ್ ರಂಗಭೂಮಿಯ ಈ ಮೂಲ ಮಾದರಿಯನ್ನು ಅರ್ಥಮಾಡಿಕೊಳ್ಳುವುದು ಸುಲಭ. ಆದರೆ ಈ ಹಾದಿಬದಿಯ ದೃಶ್ಯವೇ ಆಧುನಿಕ ಜಗತ್ತಿನ ಸವಾಲುಗಳಿಗೆ ತಕ್ಕ ರಂಗಭೂಮಿಯಾಗಬಹುದೆಂದು ನಂಬುವವರು ಮಾತ್ರ ಕಡಿಮೆ. ಎಪಿಕ್ ಥಿಯೇಟರ್

ಎಷ್ಟೇ ಸಂಕೀರ್ಣವಾದುದಾಗಿರಲಿ ಅದರ ಅಂತರಾಳದಲ್ಲಿ ಒಂದು ಹಾದಿಬದಿಯ ದೃಶ್ಯ ಇರಲೇಬೇಕು. ಅಥವಾ ಹಾದಿಬದಿಯ ದೃಶ್ಯದ ಲಕ್ಷಣಗಳಲ್ಲಿ ಯಾವುದಾದರೊಂದನ್ನು ಕೈಬಿಟ್ಟ ರಂಗಭೂಮಿಗೆ ಎಪಿಕ್ ಎಂಬ ಹೆಸರು ಸಲ್ಲದು. ಈ ಅಂಶವನ್ನು ಮೊದಲು ಅರಿಯಬೇಕು.

ಈಗ ಗಮನಿಸಿ: ಅಪಘಾತವನ್ನು ವಿವರಿಸುತ್ತಿದ್ದವನ ಮಾತಿನಲ್ಲಿ ಕಲಾತ್ಮಕತೆ ಇರಲಾರದು. ಆತ ಕಲಾವಿದನೂ ಅಲ್ಲ. ತನ್ನ ಉದ್ದೇಶಕ್ಕಾಗಿ ಆತ ಬಳಸುವ ತಂತ್ರಗಳು ಸಾರ್ವತ್ರಿಕವಾದವು. ಅಪಘಾತಕ್ಕೆ ತುತ್ತಾದವನು ಹೇಗೆ ಚಲಿಸಿದನೆಂಬುದನ್ನು ತಾನೂ ಚಲಿಸಿತೋರಿಸಲು ಸಾಧ್ಯವಾಗದೆಂದುಕೊಳ್ಳಿ ಆಗ ಅವನು ಮಾಡುವುದಿಷ್ಟೆ: ತನಗಿಂತ ಮೂರುಪಟ್ಟು ವೇಗದಲ್ಲಿ ಚಲಿಸಿದನೆಂದು ನಿರೂಪಿಸುವುದು. ಇದರಿಂದ ಸುಳ್ಳು ಹೇಳಿದಂತೇನೂ ಆಗಲಿಲ್ಲ. ಮುಖ್ಯವಾದ ಸಂಗತಿ ಎಂದರೆ ತೀರಾ ಖಚಿತವಾಗಿರುವುದೇ ತಪ್ಪಾಗಬಹುದು. ನೋಡುವವರಿಗೆ ಅಪಘಾತದ ದೃಶ್ಯವನ್ನು ಯಥಾವತ್ತಾಗಿ, ಅಲ್ಲಿ ನಡೆದ ಹಾಗೆಯೇ ತೋರಿಸಲು ಹೊರಟರೆ ಅವರ ಗಮನವೆಲ್ಲಾ ನಿರೂಪಕನ ಅನುಕರಣೆಯ ಸಾಮರ್ಥ್ಯದ ಕಡೆಗೆ ಹರಿಯಬಹುದು. ಆಹಾ! ಅಪಘಾತವನ್ನು ಕಣ್ಣಾರೆ ಕಂಡಹಾಗಾಯ್ತು ಎಂದು ನೋಡುವವರು ಉದ್ಗರಿಸಿದರೆ ನಿರೂಪಕರ ಮುಖ್ಯ ಉದ್ದೇಶವೇ ವ್ಯರ್ಥವಾದಂತಾಯಿತು. ಆತ ನೋಡುವವರು 'ಇನ್ನೊಂದು ವಾಸ್ತವ'ಕ್ಕೆ ಜಗಿಯುವಂತೆ ಮಾಡಬಾರದು.

ನಮ್ಮ ಸಾಮಾನ್ಯ ರಂಗಭೂಮಿಯ ಕೆಲವು ಲಕ್ಷಣಗಳನ್ನು ಹಾದಿಬದಿಯ ದೃಶ್ಯಗಳಿಂದ ಕೈಬಿಡಬೇಕು. ಮುಖ್ಯವಾದುದೆಂದರೆ ಭ್ರಮೆಯನ್ನುಂಟುಮಾಡುವುದು. ಬೀದಿಯ ನಿರೂಪಕನ ನಿರೂಪಣೆ ಕೇವಲ ಪುನರಾವರ್ತನೆಯಂತಿರಬೇಕು. ರಂಗಭೂಮಿಯು ಆ ದೃಶ್ಯವನ್ನೇ ತಾನು ಪುನಃ ರೂಪಿಸಲು ಹೆಣಗುತ್ತದೆ. ಆದರೆ ಹಾದಿಬದಿಯ ದೃಶ್ಯಕ್ಕೆ ಈ ಉದ್ದೇಶವಿಲ್ಲ. ರಂಗಭೂಮಿಯೂ ತನ್ನ ಉದ್ದೇಶವನ್ನು ಕೈಬಿಟ್ಟು ಕೇವಲ ವರದಿ ಮಾಡುವುದೇ ತನ್ನ ಗುರಿ ಎಂದುಕೊಂಡಾಗ ಅದು ರಂಗಭೂಮಿಯ ಸೋಗನ್ನು ಕೈಬಿಡಬೇಕು. ಆದರೆ ರಂಗತಾಲೀಮುಗಳು, ವಾಚಿಕವನ್ನು ಉರು ಹಚ್ಚುವುದು ಮುಂತಾದ ಪೂರ್ವಸಿದ್ಧತೆಗಳೆಲ್ಲವೂ ರಂಗಭೂಮಿಯಲ್ಲಿ ಭ್ರಮೆಯ ಸೃಷ್ಟಿಗಾಗಿಯೇ ಇವೆ. ಆದರೆ ಹೀಗೆ ಸಿದ್ಧಗೊಂಡಾಗ ಮೂಲಾನುಭವವನ್ನು ಇನ್ನೂ ರೋಚಕವಾಗಿ ನಟ ಮರುಸೃಷ್ಟಿಗೊಳಿಸುವುದು ಸಾಧ್ಯವಾಗುವುದೇ ಎಂಬುದೂ ಸಮಸ್ಯೆಯೇ ಸರಿ.

ಹಾದಿಬದಿಯ ದೃಶ್ಯ ನೋಟಕರಿಗೆ ಯಾವ ಅನುಭವವನ್ನು ನೀಡಬೇಕೆಂದು ಮೊದಲೇ ಯೋಜಿಸಿರುತ್ತದೆ. ನಿರೂಪಕರಿಗೆ ಮೂಲ 'ಅನುಭವ'ದಲ್ಲಿ ಭಾಗಿಯಾದ ಸೌಲಭ್ಯವಿದೆ ನಿಜ. ಆದರೆ ಅವರು ನಿರೂಪಕರಾಗಿ ಈಗ ನೋಟಕರಿಗೆ ಆ 'ಅನುಭವ'ದಲ್ಲಿ ಭಾಗಿಗಳಾಗುವ ಅವಕಾಶವನ್ನು ಕಲ್ಪಿಸುತ್ತಿರುವುದಿಲ್ಲ. ವಾಹನದ ಚಾಲಕ ಹಾಗೂ ಅಪಘಾತಕ್ಕೀಡಾದವನು ಇವರ ಅನುಭವಗಳಲ್ಲಿ ಸ್ವಲ್ಪ ಭಾಗಮಾತ್ರ ನಿರೂಪಕನಿಂದ ಸಂವಹನಗೊಳ್ಳುವುದು. ಅವನ ಗಮನವೆಲ್ಲಾ ತನ್ನ ಈ ನಿರೂಪಣೆಯು ನೋಟಕರಿಗೆ ಆಹ್ಲಾದವನ್ನುಂಟುಮಾಡುವ ಬಗೆಯದ್ದಾಗದಂತೆ ನೋಡಿಕೊಳ್ಳುವ ಕಡೆಗಿರುತ್ತವೆ.

ಅಪಘಾತದಿಂದುಂಟಾದ ಭಯವನ್ನು ನೋಟಕರಿಗೂ ರವಾನಿಸದಿದ್ದರೆ ಅದರಿಂದ ಕುಂದೇನೂ ಇಲ್ಲ. ಬದಲಿಗೆ ಹಾಗೆ ಅವರಲ್ಲೂ ಆ ಭಯವು ಮೂಡುವಂತೆ ಮಾಡುವುದು ಕುಂದನ್ನು ತರುವುದು. ಭಾವೋದ್ದೀಪನವು ಅವನ ಗುರಿಯಲ್ಲ. ಅದರಲ್ಲಿ ಅವನಿಗೆ ಆಸಕ್ತಿ ಇಲ್ಲ. ರಂಗಭೂಮಿ ಕೂಡ ತನ್ನ ಗುರಿ ಹಾಗೂ ಆಸಕ್ತಿಗಳನ್ನು ಬದಲಾಯಿಸಿಕೊಂಡರೆ ಅದರ ಸ್ವರೂಪದಲ್ಲಿ ಮೂಲಭೂತ ಹಾಗೂ ಉಪಯುಕ್ತ ಬದಲಾವಣೆಗಳಾಗುವುವು.

ರಂಗಭೂಮಿಗೆ 'ಎಪಿಕ್' ಸ್ವರೂಪ ಬರಬೇಕೆಂದರೆ, ಅದು ಹಾದಿಬದಿಯ ದೃಶ್ಯದಂತೆ ಒಂದು ಸಾಮಾಜಿಕ ಪ್ರಸ್ತುತತೆಯನ್ನು ಹೊಂದಿರಬೇಕು. ನಮ್ಮ ಈ ನಿರೂಪಕನು ಚಾಲಕ ಇಲ್ಲವೇ ಪಾದಚಾರಿಯ ದೃಷ್ಟಿಯಿಂದ ಅಪಘಾತ ನಡೆಯದಿರಲು ಏನಾಗಬೇಕಿತ್ತೆಂದು ವಿವರಿಸುತ್ತಿರಬಹುದು. ಇಲ್ಲವೇ ಅವರಿಬ್ಬರಲ್ಲಿ ಯಾರಾದರೊಬ್ಬರ ಮೇಲೆ ಹೊಣೆ ಹೊರಿಸಲು ಯತ್ನಿಸುತ್ತಿರಬಹುದು. ಏನಾದರೂ ಅವರ ನಿರೂಪಣೆಗೆ ಒಂದು ಸಾಮಾಜಿಕ ಗುರಿ ಇದೆ.

ನಿರೂಪಕರ ಉದ್ದೇಶವೇ ಅವರು ಅನುಕರಿಸಬೇಕಾದ ಪ್ರಮಾಣವನ್ನೂ ನಿಗದಿಗೊಳಿಸುವುದು. ಅವರು ಪಾತ್ರಗಳ ಎಲ್ಲ ಅಂಶಗಳನ್ನೂ ಅನುಕರಿಸಬೇಕಿಲ್ಲ. ಸುಮಾರಾಗಿ ಅವರ ಚಹರೆಗಳನ್ನು ಖಚಿತಗೊಳಿಸುವಷ್ಟಿದ್ದರೆ ಸಾಕು. ಸಾಮಾನ್ಯವಾಗಿ ರಂಗಭೂಮಿಯು ಮೂಲದ ನಿಕಟ ಚಿತ್ರವನ್ನು ನೀಡಲು ಹೊರಡುವುದು. ಇದರಿಂದ ರಂಗಭೂಮಿ ಸೀಮಿತ ವ್ಯಾಪ್ತಿಯಲ್ಲಿ ಮಾತ್ರ ಕ್ರಿಯಾಶೀಲವಾಗಿರಲು ಸಾಧ್ಯ. ಒಂದು ಉದಾಹರಣೆ ನೋಡೋಣ. ಅಪಘಾತದಲ್ಲಿ ಯಾರೋ ಕಿರುಚಿದರೆನ್ನೋಣ. ಹೀಗೆ ಕಿರುಚಿದ್ದು ಯಾರೆಂಬುದರ ಬಗ್ಗೆ ನಮ್ಮ ನಿರೂಪಕ ಮುಕ್ತನಾಗಿರುತ್ತಾನೆ. ಅದು ಈಡಾದ ವ್ಯಕ್ತಿ. ಹಾದಿಯ ಇತರ ವ್ಯಕ್ತಿಗಳು, ಹೆಂಗಸು, ಗಂಡಸು, ವೃದ್ಧ, ಭಿನ್ನವರ್ಗಕ್ಕೆ ಸೇರಿದವರು ಹೀಗೆ ಯಾರಾದರೂ ಆಗಿರಬಹುದು. ಆದ್ದರಿಂದ ನಿರೂಪಕ ಅನುಕರಿಸಲು ವಿಶಾಲವ್ಯಾಪ್ತಿಯ ಬಗೆಗಳಿರುತ್ತವೆ. ಆದರೆ ಕೂಗು ಯಾರದ್ದೆಂದು ಖಚಿತಪಡಿಸಿಕೊಳ್ಳಲು ಹೊರಡುವ ರಂಗಭೂಮಿಗೆ ಇಷ್ಟು ಅವಕಾಶಗಳಿರುವುದಿಲ್ಲ.

ಇದೂ ಅಲ್ಲದೆ ಅಪಘಾತದ ಇತರ ಸಾಮಾಜಿಕ ಅಂಶಗಳನ್ನು ನಿರೂಪಕ ಎಳೆದು ತಂದು ಸಂಬಂಧ ಕಲ್ಪಿಸಬಹುದು. ಅಪಘಾತದಿಂದ ಕೆಲಸ ಕಳೆದುಕೊಳ್ಳುವ ಚಾಲಕ, ಅಂಗವಿಕಲನಾಗಿ ನಿರುಪಯುಕ್ತನಾಗುವ ವ್ಯಕ್ತಿ, ಹೀಗೆ ಬೇರೆ ಬೇರೆ ನಿಟ್ಟಿನಲ್ಲಿ ಆಯ್ಕೆ ಮಾಡುವ ಅವಕಾಶವಿರುತ್ತದೆ. ಇದರಿಂದ ಪಾತ್ರಗಳು ಕೇವಲ 'ನಿರ್ದಿಷ್ಟ'ಗೊಳ್ಳುವ ಬದಲು ಹೆಚ್ಚು ಸಾಮಾಜಿಕವಾಗುತ್ತವೆ.

ಹಾದಿಬದಿಯ ದೃಶ್ಯದಲ್ಲಿ ಪಾತ್ರಗಳ ಕ್ರಿಯೆಗಳನ್ನು ಮಾತ್ರ ಅನುಕರಿಸಲಾಗುವುದು. ಕ್ರಿಯೆಯ ಹಿಂದಿನ ಪ್ರೇರಣೆಗಳ ಬಗ್ಗೆ ಮೂಲಕ್ಕೆ ನಿಷ್ಠವಾಗಿರುವುದು ಇಲ್ಲಿ ಬೇಕಿಲ್ಲ. ಇದರಿಂದ ನೋಡುತ್ತಿರುವವರು ಪಾತ್ರದ ಬಗ್ಗೆ-ಕ್ರಿಯೆಯ ಹಿಂದಿನ ಪ್ರೇರಣೆಗಳ ಬಗ್ಗೆ-ತಾವೇ ನಿರ್ಣಯಗಳನ್ನು ತೆಗೆದುಕೊಳ್ಳಬಲ್ಲರು. ರಂಗಭೂಮಿಯು ಈ ಪ್ರೇರಣೆಗಳನ್ನೂ ತಾನೇ ಮಂಡಿಸಲು ಹೊರಡುವುದರಿಂದ ನೋಟಕರಿಗೆ ಈ ಅವಕಾಶ ಉಳಿಯುವುದಿಲ್ಲ-ಹಾದಿಬದಿಯ ದೃಶ್ಯದ ಆಯ್ಕೆಯ ಅವಕಾಶಗಳನ್ನು ರಂಗಭೂಮಿ ಉಳಿಸಿಕೊಳ್ಳಬೇಕಾದರೆ ಆಗ ಅದು ಪಾತ್ರಗಳನ್ನು ಮಂಡಿಸುವ ಕ್ರಮವನ್ನು

ಬದಲಾಯಿಸಿಕೊಳ್ಳಬೇಕಾಗುತ್ತದೆ. ಬೇರೆ ಬೇರೆ ಸಂದರ್ಭಗಳಲ್ಲಿ ಪಾತ್ರಗಳನ್ನು ಇರಿಸಿ ಅವುಗಳ ವರ್ತನೆಗಳಿಗೆ, ಕ್ರಿಯೆಗಳಿಗೆ ಕಾರಣವಾಗುವ ಪ್ರೇರಣೆಗಳನ್ನು ನೋಟಕರೇ ಊಹಿಸುವಂತೆ ಮಾಡಬೇಕು. ನಟ ಕೂಡ ತಾನೇ ಪಾತ್ರವಾಗಬಾರದು. ಪಾತ್ರದಿಂದ ತಾನು ಹೊರಗುಳಿದು ನಿರೂಪಕನಂತೆ ಹೊಣೆ ನಿರ್ವಹಿಸಬೇಕಾಗುವುದು. ಭಾವೋದ್ದೀಪನ ಸಂದರ್ಭಗಳು ಆಗಾಗ ಬಂದರೂ, ಅವುಗಳಿಂದ ನೋಟಕರು ತಾವೂ ಭಾವಮತ್ತರಾಗದೆ, ಆ ಭಾವಗಳ ಬಗೆಗೆ ತಮ್ಮ ವ್ಯಾಖ್ಯಾನವನ್ನು ಮಂಡಿಸುವಂತಿರಬೇಕು.

ಹಾದಿಬದಿಯ ನಿರೂಪಕರು ಏಕಕಾಲಕ್ಕೆ ನಿರೂಪಕ ಹಾಗೂ ಪಾತ್ರ ಎರಡೂ ಆಗಿರುತ್ತಾರೆ. ಈ ಎರಡೂ ಬೆರೆತು ವಿಶಿಷ್ಟ ವ್ಯಕ್ತಿತ್ವವೊಂದು ರೂಪುಗೊಳ್ಳುವುದನ್ನು ನೋಟಕರು ಕಾಣಲಾರರು. ಹೀಗಾಗುವುದು ಸಾಂಪ್ರದಾಯಿಕ ರಂಗಭೂಮಿಯಲ್ಲಿ. ಸ್ಟಾನ್‌ಸ್ಲಾವ್‌ಸ್ಕಿ ಇಂಥ ನಟನೆಯನ್ನೇ ರೂಪಿಸಿದ್ದನು.

ಹೀಗೆ ನಟ ಮತ್ತು ಪಾತ್ರಗಳು ಬೇರೆ ಬೇರೆ ಉಳಿಯುವ ನಟನೆಯನ್ನ ಎಪಿಕ್ ರಂಗಭೂಮಿಯಲ್ಲಿ 'ಪ್ರತ್ಯೇಕೀಕರಣ' ತಂತ್ರವೆನ್ನಲಾಗುವುದು. ಮಾನವೀಯ ಸಾಮಾಜಿಕ ಘಟನೆಗಳನ್ನು ಇರುವಂತೆ ಮಂಡಿಸುವ ಬದಲು, ಅವುಗಳ ಬಗ್ಗೆ ಒಂದು ನಿರ್ಣಯವನ್ನೂ ವ್ಯಾಖ್ಯಾನವನ್ನೂ ನೋಟಕರು ಹೊಂದುವಂತೆ ಪ್ರೇರೇಪಿಸುವುದೇ ಈ ತಂತ್ರದ ವೈಶಿಷ್ಟ್ಯ. ಹಾದಿಬದಿಯ ದೃಶ್ಯದ ನಿರೂಪಕನೂ ಈ ತಂತ್ರವನ್ನು ಬಳಸುತ್ತಾನೆ. ಅಪಘಾತದ ಯಾವುದೇ ಒಂದು ಸಂಗತಿಯನ್ನು ಬೇಕೆಂದೇ ವಿವರವಾಗಿ ಹೇಳುವ ಮೂಲಕ ತಾನು ಕೇವಲ ನಿರೂಪಕನಾಗಿದ್ದೇನೆಂಬ ಸಂಗತಿಯನ್ನು ಆತ ಖಚಿತಪಡಿಸಿಕೊಳ್ಳುತ್ತಿರುತ್ತಾನೆ. ನಿರೂಪಣೆಯಿಂದ ತನ್ನ ವಿವರಣೆಗೆ ಆತ ಬದಲಾಗುವ ಕ್ರಮ ಕೂಡ ಗಮನಾರ್ಹ. ಈ ತಂತ್ರ ಕೂಡ ಎಪಿಕ್ ರಂಗಭೂಮಿಯಲ್ಲಿ ಉಪಯುಕ್ತ. ಮೇಳಗಳು, ವಿವರಣೆ ನೀಡುವ ಬಿಂಬಗಳನ್ನು ತೆರೆಯ ಮೇಲೆ ಮೂಡಿಸುವುದು, ನೇರವಾಗಿ ನೋಟಕರೊಡನೆ ಸಂಭಾಷಣೆಗೆ ತೊಡಗುವುದು, ಇವೇ ಮುಂತಾದ ತಂತ್ರಗಳ ಮೂಲಕ ಎಪಿಕ್ ರಂಗಭೂಮಿಯು 'ಪ್ರತ್ಯೇಕೀಕರಣ'ವನ್ನು ಸಾಧಿಸುವುದು.

ಇದುವರೆಗೂ ಹಾದಿಬದಿಯ ದೃಶ್ಯದಲ್ಲಿನ ಯಾವುದೇ ಕಲಾತ್ಮಕ ಅಂಶವನ್ನು ಕುರಿತು ನಾನು ಹೇಳಿಲ್ಲ. ಆದರೆ ಈ ಮಾದರಿಯನ್ನು ಅಳವಡಿಸಿಕೊಂಡ ಎಪಿಕ್ ರಂಗಭೂಮಿ ಕಲಾತ್ಮಕವಾಗುವುದು ಹೇಗೆ? ಸಾಂಪ್ರದಾಯಿಕ ರಂಗಭೂಮಿಯಲ್ಲಿ "ವ್ಯಕ್ತಿತ್ವದ ಅಭಿವ್ಯಕ್ತಿಯ ತುಡಿತ" "ತನ್ನನ್ನು ತಾನು ತೊಡಗಿಸಿಕೊಳ್ಳುವುದು" "ಅತೀಂದ್ರಿಯ ಅನುಭವ" ಇವೇ ಮುಂತಾದ ಮಾತುಗಳ ಮೂಲಕ ಅದರ ಕಲಾತ್ಮಕತೆಯನ್ನು ಸಾಬೀತು ಮಾಡಲಾಗುತ್ತದೆ.

ಹಾದಿಬದಿಯ ದೃಶ್ಯದಲ್ಲೂ ಒಂದಲ್ಲ ಒಂದು ಬಗೆಯ ಕಲಾತ್ಮಕ ಅಂಶಗಳಿರುವುದು ಸಾಧ್ಯ. ಆದರೆ ಅವುಗಳ ಸ್ವರೂಪ ಬೇರೆ. ಹಾಗಾಗಿ ಈ ಮಾದರಿಯ ಮೇಲಿನ ಎಪಿಕ್ ರಂಗಭೂಮಿಯೂ ಕಲಾತ್ಮಕವೇ ಸರಿ. ಹೇಗೆ ಇದನ್ನು ಸಾಧಿಸಬೇಕೆಂಬ ಸಮಸ್ಯೆ ಮಾತ್ರ ಗಹನವಾದುದು.

ನಮ್ಮ ನಿರೂಪಕ ಮೂಲಪಾತ್ರಕ್ಕೆ ಸಂಬಂಧಿಸಿದ ನೈಜಸಂಗತಿಗಳ ಜತೆಗೆ ಕಲ್ಪಿತವಾದ ಕೆಲವನ್ನು ಬೇಕಂತಲೇ ಮಂಡಿಸಬಹುದು. ನಿಜವಾದುದರ ಇತರ ಮುಖಗಳನ್ನು

ಹೊರಗೆಳೆಯಲು ಈ ತಂತ್ರದಿಂದ ಸಾಧ್ಯ. ಹೀಗೆ ಮಾತು, ಚಲನೆ, ಉಡುಪು, ಮುಖಾಲಂಕಾರ ಮುಂತಾದ ವಿಷಯಗಳನ್ನು ಸೇರಿಸುವವನೂ ಆಗಿರುತ್ತಾನೆ. ಎಪಿಕ್ ಥಿಯೇಟರ್‌ನ ಕಲಾತ್ಮಕ ಅಂಶವೆಂದರೆ ಹೀಗೆ ವಾಸ್ತವವನ್ನು ಖಚಿತಪಡಿಸಲು ವಾಸ್ತವವಲ್ಲದ್ದನ್ನೂ ಬಳಸುವುದೇ ಆಗಿದೆ. ಬೀದಿಯ ಮಾರಾಟಗಾರರು, ಜಾದೂಗಾರರು ನಡೆಸುವ ಆಟವನ್ನು ನೋಡಿದರೆ ಈ ಅಂಶ ಮತ್ತಷ್ಟು ಸ್ಪಷ್ಟವಾಗುವುದು. ಅವರು ಅವ್ಯವಸ್ಥಿತ ಲಯದ ಹಾಡುಗಳನ್ನು ಕೂಡ ಬಳಸಿ ಮೇಲೆ ಹೇಳಿದ ಉದ್ದೇಶವನ್ನು ಸಾಧಿಸುವರು.

ಈ ಎಲ್ಲ ಸಂಗತಿಗಳನ್ನು ಗಮನಿಸಿದ ಮೇಲೆ ಸ್ಪಷ್ಟವಾಗುವುದಿಷ್ಟು; ಹಾದಿ ಬದಿಯ ದೃಶ್ಯದ ಗುಣ ಆದಿಮ ರೂಪದ್ದು; ಮೂಲಮಾದರಿ. ಇದಕ್ಕೊಂದು ಸಾಮಾಜಿಕ ಗುರಿ ಇದೆ. ಅದರಲ್ಲಿ ನಿರೂಪಿತವಾದ ಘಟನೆ ಸ್ವಯಂಪೂರ್ಣವಾದುದಲ್ಲ. ಅದರ ಹಿಂದೆ ಹಾಗೂ ಮುಂದೆ ಜಾಡುಗಳಿವೆ. ಈ ಹೊರಚಾಚುಗಳ ಬಗ್ಗೆ ನೋಟಕರೇ ತಮ್ಮ ವ್ಯಾಖ್ಯಾನವನ್ನು ಮಾಡಿಕೊಳ್ಳುವರು. ಎಪಿಕ್ ರಂಗಭೂಮಿ ಕೊಂಚ ಸಂಕೀರ್ಣವೂ ಕುಶಲತೆಯಿಂದ ತುಂಬಿದ್ದೂ ಆಗಿರುವುದು. ಇಲ್ಲೂ ಸಾಮಾಜಿಕ ಪ್ರಸ್ತುತತೆ ಇರುವ ಘಟನೆಗಳಿಗೆ ಮಾತ್ರ ಅವಕಾಶ. ನಿರೂಪಣೆಯಲ್ಲೂ ಇದೇ ಮುಖ್ಯ ಉದ್ದೇಶ.

# ಎಪಿಕ್ ಥಿಯೇಟರ್ ಸ್ವರೂಪ ಮತ್ತು ಪಾರಂಪರಿಕ ರಂಗಭೂಮಿಯ ಲಕ್ಷಣ

ಬ್ರೆಕ್ಟ್‌ನ ಎಪಿಕ್ ಥಿಯೇಟರ್ ಕುರಿತು ಈಗಾಗಲೇ ಕನ್ನಡದಲ್ಲಿ ಸಾಕಷ್ಟು ವಿವರಗಳು ದೊರಕುತ್ತವೆ. ಶ್ರೀ ಕ.ವೆಂ.ರಾಜಗೋಪಾಲ ಮತ್ತು ಶ್ರೀ ರಾಮಚಂದ್ರ ಮೂರ್ತಿ ಇವರು ಬೇರೆ ಬೇರೆ ಸಂದರ್ಭದಲ್ಲಿ ದೀರ್ಘವಾಗಿ ಈ ಪರಿಕಲ್ಪನೆಯನ್ನು ಕುರಿತಂತೆ ವಿವರಗಳನ್ನು ಒದಗಿಸಿದ್ದಾರೆ. ಇದಲ್ಲದೆ ಬ್ರೆಕ್ಟನ ಕೆಲವು ನಾಟಕಗಳು ಕನ್ನಡಕ್ಕೆ ಅನುವಾದಗೊಂಡು ರಂಗದ ಮೇಲೆ ಪ್ರದರ್ಶನಗೊಂಡಾಗ ಕೂಡ ಈ ಕುರಿತ ಚರ್ಚೆ ನಡೆದಿದೆ. ಅದಕ್ಕೂ ಮೊದಲು ಬ್ರೆಕ್ಟನ ಪರಿಚಯ ಕನ್ನಡ ಜನತೆಗೆ ಇದ್ದಿರಬಹುದಾದರೂ ರಂಗ ಚಳವಳಿಯೊಂದರ ಮೇಲೆ ಪ್ರಭಾವ ಬೀರುವ ಮಟ್ಟಿಗೆ ಅವನ ವಿಚಾರಗಳು ಪ್ರಬಲವಾಗಿ ಚರ್ಚಿತವಾಗಿರಲಿಲ್ಲ. ಹಾಗೂ ಅನುಸರಣೆಯ ಪ್ರಯೋಗಗಳಿಗೆ ಒಳಗಾಗಿರಲಿಲ್ಲ. ಒಟ್ಟಾರೆ ಕನ್ನಡ ಸಾಂಸ್ಕೃತಿಕ ಕ್ಷೇತ್ರದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಸೂಚಿಸುವ ಬಗೆಯಲ್ಲಿ ಬ್ರೆಕ್ಟನ ಸಿದ್ಧಾಂತಗಳು ಗಮನಕ್ಕೆ ಬಂದಿವೆ ಎನ್ನುವುದು ಸರಿಯಾದ ಮಾತಾಗಬಹುದು. ಈ ಪ್ರಬಂಧದಲ್ಲಿ ಎಪಿಕ್ ಥಿಯೇಟರ್‌ನ ಕೂಲಂಕಷ ವಿವರಗಳನ್ನು ಮಂಡಿಸಲು ಹೋಗುವುದಿಲ್ಲ. ಆ ವಿಚಾರಗಳ ಹಿನ್ನೆಲೆಯಲ್ಲಿ ಕನ್ನಡಕ್ಕೆ ಸಂಬಂಧಿಸಿದಂತೆ ಕೆಲ ಮಾತುಗಳನ್ನು ಹೇಳಲು ಪ್ರಯತ್ನಿಸಲಾಗಿದೆ. ಮುಖ್ಯವಾಗಿ ಬ್ರೆಕ್ಟನ ವಿಚಾರಗಳನ್ನು ಅವನ ಬರೆಹಗಳನ್ನು ಇಂಗ್ಲಿಷಿಗೆ ಅನುವಾದಿಸಿ ಪ್ರಕಟಿಸಿರುವ ಜಾನ್‌ವಿಲೆಟನ ಗ್ರಂಥ ಮತ್ತು ಫ್ರೆಡ್ರಿಕ್ ಇಪೆನ್ ಬ್ರೆಕ್ಟ್‌ನನ್ನು ಕುರಿತು ಬರೆದ ಒಂದು ಗ್ರಂಥ ಇವೆರಡು ಮೂಲಗಳಿಂದ ನಾನು ಸ್ವೀಕರಿಸಿದ್ದೇನೆ.[1]

ಇಪ್ಪತ್ತನೆ ಶತಮಾನದ ಯುರೋಪಿನ ರಂಗಭೂಮಿ ಹಲವು ಹೊಸ ವಿಚಾರ ಧಾರೆಗಳಿಂದ ಪ್ರೇರಣೆ ಪಡೆದು ಹೊಸ ಪ್ರಯೋಗಗಳನ್ನು ಕಂಡಿತು. ಇವುಗಳಲ್ಲಿ ಮುಖ್ಯವಾದ ಎರಡು ಕನ್ನಡ ರಂಗಭೂಮಿಯನ್ನು ಪ್ರಭಾವಿಸಿವೆ. ಅವು ಅಸಂಗತ ರಂಗ ಮತ್ತು ಎಪಿಕ್ ಥಿಯೇಟರ್. ಇವೆರಡೂ ವಿಚಿತ್ರವೆನ್ನಿಸುವಂತೆ ಯಾವ ಭಾಷಾ ಸಂಪ್ರದಾಯಗಳನ್ನು ಪ್ರಭಾವಿಸಲಿಲ್ಲವೋ ಆ ಇಂಗ್ಲಿಷಿನ ಮೂಲಕ ಕನ್ನಡಕ್ಕೆ ಬಂದವು. ಅದೇನೇ ಇರಲಿ, ಇವೆರಡೂ ಮೂಲಭೂತವಾಗಿ ಒಂದು ಸಾಮ್ಯವನ್ನು ಹೊಂದಿವೆ. ಅದೆಂದರೆ ತಿರುಳಿನಲ್ಲಿ ಎರಡೂ ಅರಿಸ್ಟಾಟಲ್ ಪ್ರಣೀತ ರಂಗಭೂಮಿಯ ಪರಿಕಲ್ಪನೆಯನ್ನು ವಿರೋಧಿಸುತ್ತವೆ. ಬ್ರೆಕ್ಟ್ ರೂಪಿಸಿದ ಮತ್ತು ಬೆಳೆಸಿದ ಎಪಿಕ್ ಥಿಯೇಟರ್‌ನ ಚಿಂತನೆಗಳು ನಮಗೆ ಅಪರಿಚಿತವಾದ ರಂಗ ಪರಂಪರೆಗೆ ಸೇರಿದ್ದೆಂಬುದನ್ನು ನಾವು ಮೊದಲು ಗಮನಿಸಬೇಕು. ಆದ್ದರಿಂದ ಅದು ನಮಗೆ ಕೇವಲ ವೈಚಾರಿಕ ಆಕೃತಿಯಾಗಿ ಮಾತ್ರ

ತನ್ನ ಸತ್ಯಗಳನ್ನು ಪ್ರಕಟಿಸಬಲ್ಲದು. ಕನ್ನಡದ ಜೀವಂತ ರಂಗ ಪರಂಪರೆಯನ್ನು ಅದು ಪ್ರಭಾವಿಸಿದೆ ಎನ್ನುವ ಮಾತನ್ನು ಪ್ರತ್ಯೇಕವಾಗಿ ಮುಂದೆ ಪರಿಶೀಲಿಸೋಣ. ಬ್ರೆಕ್ಟ್ ತನ್ನ ರಂಗಚಿಂತನೆಯನ್ನು ಎಲ್ಲ ಕಾಲಕ್ಕೂ ಮತ್ತು ಎಲ್ಲ ದೇಶಕ್ಕೂ ಸಲ್ಲುವ ಸಂಗತಿ ಎಂದು ಎಲ್ಲೂ ಹೇಳಿಲ್ಲ ಮಾತ್ರವಲ್ಲ ತನ್ನ ಮಟ್ಟಿಗೆ ಅದು ಒಂದು ಸಾಧ್ಯತೆ ಮಾತ್ರವೆಂದು ಒಂದಲ್ಲ ಹಲವು ಬಾರಿ ಹೇಳಿದ್ದಾನೆ. ಅವನ ವಿಚಾರಗಳು ಸುಮಾರು ಇಪ್ಪತ್ತೈದು ವರುಷಗಳ ಅವಧಿಯಲ್ಲಿ ರೂಪುಗೊಂಡದ್ದರಿಂದ ಹಾಗೂ ಈ ಅವಧಿಯಲ್ಲಿ ಅವನ ಮತ್ತು ಜಗತ್ತಿನ ಜೀವನಕ್ರಮದಲ್ಲಿ ಆಗುತ್ತಿದ್ದ ಬದಲಾವಣೆಗಳಿಂದಾಗಿ ಅವನು ತನ್ನ ಎಷ್ಟೋ ವಿಚಾರಗಳನ್ನು ಪರಿವರ್ತಿಸುತ್ತಾನೆ. ಇದನ್ನು ಕೂಡ ನಾವು ಗಮನಿಸಬೇಕು. ಏನೇ ಆದರೂ ಮೂಲಭೂತವಾಗಿ ಕೆಲವು ಸಂಗತಿಗಳ ಬಗೆಗೆ ಖಚಿತವಾದ ನಿಲುವುಗಳನ್ನು ಆತ ಮಂಡಿಸಿದ್ದಾನೆ. ಅವನ್ನು ನಾವು ಈಗ ನೋಡಬಹುದು.

ಬ್ರೆಕ್ಟ್‌ನ ರಂಗ ಚಿಂತನೆಯ ಹೊಸತನ ಪ್ರಾರಂಭವಾಗುವುದು ಆತ ನೋಟಕನಿಗೆ ಹೊಸ ಅನುಭವವನ್ನು ಒದಗಿಸಬೇಕೆಂದು ಹೇಳುವುದರಿಂದ. ಎಂದರೆ ಬ್ರೆಕ್ಟ್ ರಂಗಭೂಮಿ ನಿಯೋಗವನ್ನು ಬದಲಾಯಿಸಲು ಉದ್ದೇಶಿಸಿ ತನ್ನ ವಿಚಾರಗಳನ್ನು ಮಂಡಿಸಿದ್ದಾನೆ. ಸಾಂಪ್ರದಾಯಕ ರಂಗಭೂಮಿ ತೋರಿಸುವ ಜಗತ್ತು ಬದಲಾಗದ್ದು. ಆದರೆ ಚಾರಿತ್ರಿಕ ಗತಿ ತರ್ಕವಾದವನ್ನು ಒಪ್ಪುವ ಬ್ರೆಕ್ಟನಿಗೆ ರಂಗಭೂಮಿ ಬದಲಾವಣೆಯ ಸಾಧ್ಯತೆ ಇರುವ ಜಗತ್ತನ್ನು ನೋಟಕನಿಗೆ ಒದಗಿಸಬೇಕು. ಇದು ರಂಗದಿಂದ ದೊರಕುವ ಜ್ಞಾನಕ್ಕೆ ಸಂಬಂಧಿಸಿದ ಮಾತಾಯಿತು. ಇನ್ನು ರಂಗದ ಮುಂದೆ ಕುಳಿತ ನೋಟಕ ಪ್ರಯೋಗದಲ್ಲಿ ತಲ್ಲೀನನಾಗಿ ತನಗೂ ನಡೆಯುತ್ತಿರುವ ನಾಟಕಕ್ಕೂ ಅಂತರವೇ ಇಲ್ಲವೆಂಬಂತೆ ಭಾವಿಸುವ ಹಾಗೆ ಮಾಡುವ ಸಾಂಪ್ರದಾಯಕ ರಂಗದ ಅನುಭವವನ್ನು ಕೂಡ ಬ್ರೆಕ್ಟ್ ನಿರಾಕರಿಸಬೇಕೆನ್ನುತ್ತಾನೆ. ಎಂದರೆ ನೋಟಕ ಕೇವಲ ಭಾವನೆಗಳ ಹಂತದಲ್ಲಿ ಒಂದಾಗುವಂತೆ ಮಾಡಿ ವಸ್ತುಸ್ಥಿತಿಯನ್ನು ಮರೆಮಾಡುವ ಬಗೆ ಸರಿಯಲ್ಲವೆನ್ನುತ್ತಾನೆ. ಇಲ್ಲಿ ರಂಗಭೂಮಿಯ ಕೆಲಸ ಏನೆಂಬುದನ್ನು ಬ್ರೆಕ್ಟ್ ಸ್ಪಷ್ಟಪಡಿಸುತ್ತಾನೆ. ನೋಡುತ್ತಿರುವವನು ನಡೆಯುತ್ತಿರುವ ಘಟನೆಯ ಬಗೆಗೆ ತನ್ನದೇ ಆದ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಮರ್ಥನಾಗಬೇಕು. ಇದು ಆಗಬೇಕಾದರೆ ಆತ ಭಾವತಲ್ಲೀನತೆಯಿಂದ ಹೊರಗೆ ಉಳಿಯಬೇಕು ಮತ್ತು ರಂಗದ ಮೇಲಿನ ವಿವರಗಳು ವಿವೃತವಾಗಿದ್ದು, ಒಂದು ನಿರ್ದಿಷ್ಟಗೊಂಡ ಆಕಾರವನ್ನು ಹೊಂದಿರಬಾರದು. ಅಥವಾ ನೋಟಕದ ಮೇಲೆ ತನ್ನ ನಿರ್ಧಾರಗಳನ್ನು ಹೇರಬಾರದು. ಈ ಎರಡೂ ನಿಯೋಗಗಳಿಗೂ ಪರಸ್ಪರ ಸಂಬಂಧವಿದೆ. ರಂಗಭೂಮಿಗೆ ತಾನು ವಹಿಸಲಿರುವ ಹೊಸ ಜವಾಬ್ದಾರಿಯನ್ನು ಅವಲಂಬಿಸಿ ಬ್ರೆಕ್ಟ್ ಕೆಲವು ಪ್ರಾಯೋಗಿಕ ಸಲಹೆಗಳನ್ನು ಮುಂದೆ ಇಡುತ್ತಾನೆ. ಈ ಸಲಹೆಗಳು ನಾಟಕ ರಚನೆ, ರಂಗವಿನ್ಯಾಸ, ಸಂಗೀತ, ಬೆಳಕು ವಿನ್ಯಾಸ, ನಟನೆ, ಶಬ್ದಕವಲ್ಲದ ಇತರ ಪರಿಕರಗಳ ಬಳಕೆ ಮುಂತಾದ ಹಲವು ಹಂತಗಳಲ್ಲಿ ಹರಡಿಕೊಂಡಿವೆ. ಅವುಗಳಲ್ಲಿ ಕೆಲವನ್ನು ನಾವು ಇಲ್ಲಿ ಗಮನಿಸಬಹುದಾಗಿದೆ. ನೋಟಕನ ಭಾವಕೋಶಕ್ಕೆ ನೇರವಾಗಿ ತಲುಪದ ಬಗೆಯನ್ನು ಉಂಟುಮಾಡುವ ಮೊದಲ ಹಂತದಲ್ಲಿ ಬ್ರೆಕ್ಟ್ ನಾಟಕವನ್ನು ಮೂಲಭೂತವಾಗಿ ನಿರೂಪಣಾತ್ಮಕ ನೆಲೆಯಲ್ಲಿ ಇರಿಸುತ್ತಾನೆ. ಎಪಿಕ್ ರಂಗಭೂಮಿಗೆ ಮೂಲ ಆಕೃತಿ ಎನ್ನಬಹುದಾದ ಬೀದಿ ದೃಶ್ಯವನ್ನು

ಕುರಿತು ಅವನು ಹೇಳುವ ಮಾತುಗಳಲ್ಲಿ ನಾವು ಗಮನಿಸಬಹುದಾದ ವಿಚಾರಗಳಿವೆ. ಬೀದಿ ದೃಶ್ಯದ ನಿರೂಪಕ ತಾನು ನಿರೂಪಿಸುತ್ತಿರುವ ಘಟನೆಯಲ್ಲಿ ಭಾಗಿಗಳಾದ ಎಲ್ಲ ಪಾತ್ರಗಳನ್ನೂ ಕೂಡ ನೆರೆದವರಿಗೆ ಪರಿಚಯಿಸುತ್ತಾನೆ. ಅಲ್ಲದೆ ಕೇಳುತ್ತಿರುವವರ ಮನಸ್ಸನ್ನು ಕರಗಿಸುವಂತೆ ನಿರೂಪಣೆ ಮಾಡುವುದು ಅವನ ಉದ್ದೇಶವಾಗಿರದೆ ಸಂಗತಿಯನ್ನು ತಿಳಿಸುವುದೇ ಆಗಿರುತ್ತದೆ. ಆ ದೃಶ್ಯವನ್ನು ನೋಡುತ್ತಿರುವ ನೋಟಕರು ಆ ಘಟನೆಯಲ್ಲಿ ಬಂದ ಪಾತ್ರಗಳಲ್ಲಿ ಯಾವುದನ್ನು ತಮ್ಮ ಮನಸ್ಸು ಮತ್ತು ಬುದ್ಧಿ ಆಯ್ಕೆ ಮಾಡುತ್ತದೋ ಅದರ ನಿಟ್ಟಿನಲ್ಲಿ ಇಡೀ ಕಥಾನಕವನ್ನು ನೋಡಲು ತೊಡಗುತ್ತಾರೆಯೇ ಹೊರತು ಆ ದಿಕ್ಕನ್ನು ಕೂಡ ನಿರೂಪಕನೇ ಒದಗಿಸುವುದಿಲ್ಲ. ಎಪಿಕ್ ರಂಗ ಕೂಡ ಹೀಗೆ ಪ್ರಧಾನವಾಗಿ ನಿರೂಪಣೆಯ ಹಾದಿಯನ್ನು ಹಿಡಿಯಬೇಕೆಂದು ತಿಳಿದು ಅದಕ್ಕೆ ತಕ್ಕ ಪರಿಕರಗಳನ್ನು ರೂಪಿಸಲು ತೊಡಗುತ್ತಾನೆ. ಮುಖ್ಯವಾಗಿ ಆತ ಯೋಜಿಸಿದ್ದು ನಟನೆಯನ್ನು ಕುರಿತಂತೆ ಕೆಲವು ಹೊಸದೆನ್ನಿಸುವ ವಿಚಾರಗಳನ್ನು. ಆವರೆಗೆ ರೂಢಿಯುಲ್ಲಿ ಇದ್ದಂತೆ ನಟ ತನ್ನ ಪಾತ್ರವನ್ನು ಉತ್ತಮವಾಗಿ ಅಭಿನಯಿಸುವುದೆಂದರೆ ಆ ಪಾತ್ರದ ಭಾವಗಳ ಜಗತ್ತನ್ನು ತನ್ನದನ್ನಾಗಿ ಮಾಡಿಕೊಂಡು, ನೋಡುತ್ತಿರುವವನು ಆ ಪಾತ್ರವನ್ನೇ ನೋಡುತ್ತ ಇರುವ ಭ್ರಮೆಯುನ್ನು ಉಂಟುಮಾಡಬೇಕಿತ್ತು. ಇದು ನಟನ ಮೇಲೆ ಉಂಟುಮಾಡುತ್ತಿದ್ದ ಪರಿಣಾಮವನ್ನು ನಾವು ಬಿಟ್ಟರೂ ಅವನಿಂದ ಇದು ಎಷ್ಟು ಸಾಧ್ಯವಾಗುತ್ತಿತ್ತು ಎಂಬ ಪ್ರಶ್ನೆ ಕೂಡ ಏಳುತ್ತದೆ. ಹೇಗಾದರೂ ಅದೊಂದು ಆದರ್ಶ ಸ್ಥಿತಿಯಾಗಿತ್ತೆಂಬುದರಲ್ಲಿ ಸಂದೇಹವಿಲ್ಲ. ಬ್ರೆಕ್ಟ್ ರೂಪಿಸಿದ ನಟನೆಯ ಪ್ರಕಾರ ಆತ ನಟಿಸುವ ಪಾತ್ರದ ಬಗೆಗೆ, ನೋಟಕನಿಗೆ ವಿವರಗಳನ್ನು ತಲುಪಿಸಬೇಕೇ ಹೊರತು ತಾನೇ ಆ ಪಾತ್ರದ ಭಾವಜಗತ್ತಿನಲ್ಲಿ ಮುಳುಗಬಾರದು. ಇದು ಸಾಧ್ಯವಾಗುವಂತೆ ಬ್ರೆಕ್ಟ್ ಚೀನಿ ರಂಗಭೂಮಿಯ ನಟರ ನಟನೆಯ ತಂತ್ರವನ್ನು ಅಳವಡಿಸಿಕೊಳ್ಳಲು ಸೂಚಿಸುತ್ತಾನೆ ಅಭಿನಯಿಸುವವನು ಪಾತ್ರವನ್ನು ತನ್ನ ಮೂಲಕ ನೋಟಕನಿಗೆ ತೋರಿಸುತ್ತಾನೆ. ಅಂದರೆ ತಾನೇ ಆ ಪಾತ್ರವನ್ನು ಹೊರನಿಂತು ನೋಡಬಲ್ಲವನಾಗಿರುತ್ತಾನೆ. ಇದನ್ನು, ಎಂದರೆ ಈ ಸ್ಥಿತಿಯನ್ನು ನಟನೆಯಲ್ಲಿ ಪ್ರತ್ಯೇಕೀಕರಣವೆಂದು ಬ್ರೇಕ್ಟ್ ಕರೆದದ್ದು ಉಂಟು. ಈ ಬಗೆಯ ನಟನೆ ನೋಟಕನಿಗೆ ಪಾತ್ರದ ಮನಸ್ಥಿತಿಯ ಪರಿಚಯ ಮಾಡಿಕೊಡುವ ಬದಲು ಆ ಪಾತ್ರದ ಕಥಾನಕದಲ್ಲಿ, ಆ ಘಟ್ಟದಲ್ಲಿ ತಳೆದಿರುವ ನಿಲುವನ್ನು ಕುರಿತಂತೆ ಕೆಲ ವಿವರಗಳನ್ನು ನೀಡುವುದರಿಂದಾಗಿ ಆತ ಒಟ್ಟಾರೆ ನಿರೂಪಣೆಯಲ್ಲಿ ಆ ಪಾತ್ರದ ನಿಲುವನ್ನು ಕುರಿತಂತೆ ಬೇಕಾದ ಚರ್ಚೆಯನ್ನು ತನ್ನಲ್ಲಿ ತಾನು ಮಾಡಿಕೊಳ್ಳಬಲ್ಲ. ಎಂದರೆ ನೋಟಕನಲ್ಲಿ ನಾಟಕದ ವೈಚಾರಿಕ ನೆಲೆಯನ್ನು ಕುರಿತಂತೆ ಒಂದು ಆಲೋಚನಾಕ್ರಮದ ಚೋದನೆ ಸಾಧ್ಯ. ಬ್ರೆಕ್ಟ್‌ರಂಗದಿಂದ ಅಪೇಕ್ಷಿಸುವುದೂ ಕೂಡ ಇದನ್ನೇ. ನಿರೂಪಣೆಯೇ ಪ್ರಧಾನ ಮಾರ್ಗವಾದ್ದರಿಂದ ನಾಟಕದ ರಚನೆ ಕೂಡ ಪಾತ್ರದ ಬೆಳವಣಿಗೆ, ಕಥಾ ವಸ್ತುವಿನ ತಾರ್ಕಿಕ ಮುಂದುವರಿಕೆ ಮುಂತಾದ ನಿಯತಿಯನ್ನು ಬಿಟ್ಟು ಹೆಚ್ಚು ಮುಕ್ತವಾದ ಮಾರ್ಗವನ್ನು ಅನುಸರಿಸುತ್ತದೆ. ಈ ಬಗ್ಗೆ ಬ್ರೆಕ್ಟ್ ಸ್ಪಷ್ಟವಾಗಿ ಹೇಳುವ ಮಾತೆಂದರೆ ಎಪಿಕ್ ರಂಗಕ್ಕೆ ತಕ್ಕ ನಾಟಕಗಳು ಘಟನೆಗಳನ್ನು ತುಂಡುತುಂಡಾಗಿ ಹೇಳುತ್ತವೆ. ಎಲ್ಲಿಯೂ ಭಾವನಿರ್ಭರತೆಯು ಖಚಿತ ರೂಪವನ್ನು ತಾಳಲು ಅವಕಾಶವಿಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಯಾವಾಗ ಭ್ರಮೆಯ ಅನುಭವವನ್ನು ರಂಗವು ತರಬಹುದೆಂದು

ತೋರುತ್ತದೋ ಅಲ್ಲಿ ಎಚ್ಚರದಿಂದ ಆ ಅನುಭವದಿಂದ ನೋಟಕನನ್ನು ದೂರವಿಡಬೇಕು. ಉದಾಹರಣೆಗೆ ರಂಗ ಪರಿಕರಗಳು, ಬೆಳಕಿನ ಮೂಲಗಳು, ಸಂಗೀತಗಾರರು ಇವರೆಲ್ಲ ಎಲ್ಲಿಯೋ ಮರೆಯಲ್ಲಿದ್ದು ಕೇವಲ ಅವುಗಳ ಪರಿಣಾಮವನ್ನು ಮಾತ್ರ ನೋಟಕನು ಪಡೆಯುವ ಬಗೆಯು ಒಂದು ರೀತಿಯ ಭ್ರಮೆಯ ಸಾಧ್ಯತೆಯೆಂದು ಬ್ರೆಕ್ಟ್ ತಿಳಿದನು. ಹೀಗಾಗಿ ಇವೆಲ್ಲವೂ ರಂಗದ ಒಂದು ಕಾಣುವ ಅಂಗಗಳಾಗಿ ರೂಪ ತಳೆದವು. ಇದೆಲ್ಲದರ ಪರಿಣಾಮವಾಗಿ ನೋಟಕ ರಂಗದ ನಾಲ್ಕನೆಯ ಗೋಡೆಯೆ ಆಗಿ ಉಳಿದಿದ್ದ ಸ್ಥಿತಿಯನ್ನು ಮುರಿದು ಅವನನ್ನು ನಾಟಕ, ನಾಟಕಕಾರ, ನಟ, ನಿರ್ದೇಶಕ ಇವರೆಲ್ಲ ತಮ್ಮ ಆಲೋಚನೆಯ ಸರಣಿಯಲ್ಲಿ ಸೇರಲು ಅವಕಾಶ ನೀಡಿದಂತಾಯ್ತು. ಜತೆಗೆ ನೋಟಕ ಮೂಲಭೂತವಾಗಿ ಈ ಜಗತ್ತು ಪೂರ್ವ ನಿರ್ಧಾರಿತ ಬಗೆಯಲ್ಲಿ ಚಲಿಸುವುದೆಂದು ತಿಳಿಯುವ ಬದಲು, ಅದರ ಭಿನ್ನಸಾಧ್ಯತೆಗಳ ಪರಿಚಯವನ್ನು ತಾನೇ ಉಳಿಸಬಲ್ಲವನಾಗಿ, ಅದನ್ನೀಗ ಬದಲಾವಣೆ ಸಾಧ್ಯವಿರುವ ಸನ್ನಿವೇಶವೆಂದು ಗ್ರಹಿಸಬಲ್ಲವನಾಗುತ್ತಾನೆ.

ಬ್ರೆಕ್ಟ್ ರೂಪಿಸಿದ ಈ ಹೊಸ ರಂಗಭೂಮಿಯು ಕೇವಲ ಹೊರ ರೂಪಕ್ಕೆ ಸಂಬಂಧಿಸಿದ್ದು ಎಂದು ತಿಳಿದರೆ ಅದು ಅಪಾಯಕಾರಿಯಾದ ಪರಿಣಾಮಗಳಿಗೆ ಕಾರಣವಾಗಬಹುದು. ಏಕೆಂದರೆ ಬ್ರೆಕ್ಟ್‌ನಿಗಿಂತ ಕೊಂಚ ವರುಷಗಳ ಹಿಂದೆಯೇ ಫ್ರಾನ್ಸಿನ ನಾಟಕಕಾರನೊಬ್ಬ ಇದೇ ಬಗೆಯ ರಂಗತಂತ್ರಗಳನ್ನು ಅಳವಡಿಸಿ ಪ್ರಯೋಗಗಳನ್ನು ರೂಪಿಸಿದ ವಿವರಗಳು ತಿಳಿದಿವೆ.[2] ಆದರೆ ಆತ ತನ್ನ ಪ್ರಯೋಗಗಳಿಂದ ನೋಟಕನನ್ನು ಚಿಂತನೆಗೆ ಅದರಲ್ಲೂ ಪ್ರಗತಿಪರವಾದ ಚಿಂತನೆಗೆ ಹಚ್ಚುವ ಬದಲು ಹಿಮ್ಮೊಗದ ನಡೆಗೆ ಕಾರಣವಾಗಬಲ್ಲಂತೆ ರೂಪಿಸಿದ್ದನು. ಅಂದರೆ ಈ ಹೊಸ ರಂಗ ಪರಿಕರಗಳಿಗೆ ತಮಗೆ ತಾವೇ ಮಹತ್ವದ್ದನ್ನು ರೂಪಿಸಬಲ್ಲ ಸಾಮರ್ಥ್ಯವಿಲ್ಲ. ಬದಲಾಗಿ ವಿರುದ್ಧ ದಿಕ್ಕಿನಲ್ಲಿ ಚಿಂತಿಸುವ ನಾಟಕಕಾರ ಕೂಡ ಇದೇ ಪರಿಕರಗಳನ್ನು ತನ್ನ ಉದ್ದೇಶಕ್ಕೆ ತಕ್ಕಂತೆ ಬಳಸಬಹುದಾಗಿದೆ. ಈ ಮಾತನ್ನು ನಾವು ಎಚ್ಚರದಿಂದ ಗಮನಿಸಬೇಕಾಗಿದೆ.

## ಎರಡು

ಬ್ರೆಕ್ಟ್ ತನ್ನ ವಿಚಾರಗಳನ್ನು ರೂಪಿಸಿದ್ದು ಯೂರೋಪಿನ ರಂಗ ಪರಂಪರೆಯ ಹಿನ್ನೆಲೆಯಲ್ಲಿ ಎಂಬ ಮಾತನ್ನು ಮೊದಲಲ್ಲಿ ಹೇಳಲಾಗಿದೆ. ನಾಟಕೀಯ ಪರಿಣಾಮಗಳಿಗಾಗಿ ನಿರೂಪಣೆಯ ಅಂಶಗಳನ್ನು ದೃಶ್ಯ ಮಾಧ್ಯಮಗಳಿಂದ ದೂರವಿಟ್ಟ ಮತ್ತು ಅದಕ್ಕೆ ಎರವಾದ ಪರಂಪರೆಯದು. ಈ ಮಾತು ಭಾರತೀಯ, ಅದರಲ್ಲೂ ಕನ್ನಡದ ರಂಗಪರಂಪರೆಗೆ ಹೊಂದುವ ಮಾತೆ ಎಂಬುದನ್ನು ನಾವೀಗ ನೋಡಬೇಕಾಗಿದೆ. ಈ ಹಂತದಲ್ಲಿ ಕೆಲವು ನಿರ್ಧಾರಗಳನ್ನು ಮತ್ತು ಕೆಲವು ಉಹಾಕಲ್ಪನೆಗಳನ್ನು ಮಂಡಿಸಲು ಇಚ್ಛಿಸುತ್ತೇನೆ.

ದೃಶ್ಯಮಾಧ್ಯಮದ ಕಲೆಗಳಲ್ಲಿ ನೋಟಕನು ಸದಾ ಹೊರಗೆ ಉಳಿದಿರುವ ಬಗೆಯೊಂದರ ಜತೆಗೆ ಒಂದು ಹಂತದಲ್ಲಿ ನೋಟಕನು ನೇರವಾಗಿ ಕ್ರಿಯೆಯಲ್ಲಿ

ಭಾಗಿಯಾಗಿಯೇ ಅದರ ಅನುಭವವನ್ನು ಪಡೆಯಬೇಕಾಗಿದ್ದ ಬಗೆಗಳು ಇವೆ. ಆದಿಮ ಕಲೆಗಳನ್ನು ನೋಡುವುದರಿಂದ ಇದಕ್ಕೆ ಪುರಾವೆಗಳು ದೊರಕುತ್ತವೆ. ಅಷ್ಟು ವಿವರಗಳಿಗೆ ನಾವೀಗ ಹೋಗಬೇಕಿಲ್ಲವಾದರೂ ಸ್ಪಷ್ಟನೆಗಾಗಿ ಜನಪದ ಕಥೆಯೊಂದನ್ನು ನಿರೂಪಿಸುವ ಪ್ರಸಂಗ ಮತ್ತು ಕೋಲಾಟದ ಪ್ರಸಂಗ ಇವೆರಡನ್ನು ಗಮನಿಸೋಣ. ಕಥೆ ಕೇಳುವಾತ ನಿರಂತರವಾಗಿ ಹೊರಗೆ ನಿಂತು ಅದನ್ನು ಅನುಭವಿಸುವವನು, ಆದರೆ ಕೋಲಾಟದಲ್ಲಿ ನೋಡುತ್ತ ನಿಂತವನು ಮುಂದುವರಿದ ಹಂತದಲ್ಲಿ ಹೊರಗೆ ಬಂದವನು. ಅಲ್ಲಿನ ಅನುಭವ ಆ ಕೋಲಾಟದಲ್ಲಿ ತಾನೂ ಭಾಗಿಯಾಗುವುದರ ಮೂಲ ಅನುಭವದ ಮೂಲಕವೇ ದೊರಕುತ್ತಿದ್ದುದು. ಈಗಲೂ ಆ ಲಯಗಳನ್ನು ಮನಸ್ಸಿನ ಯಾವುದೋ ಒಂದು ವಲಯದಲ್ಲಿ ಪುನರಭಿನೀತಗೊಳಿಸಿಕೊಳ್ಳುವ ಮೂಲಕ ಮಾತ್ರ ಅದರ ಅನುಭವವನ್ನು ಪಡೆಯಲು ಸಾಧ್ಯ : ನಮ್ಮ ನಾಟಕಗಳಿಗೆ ಬಂದರೆ, (ಇಲ್ಲಿ ಮುಖ್ಯವಾಗಿ ಕನ್ನಡ ಜನಪದರು ತೆರೆದುಕೊಂಡಿರುವ ಪರಂಪರೆಯನ್ನು ಗಮನಿಸಿ ಮಾತುಗಳನ್ನು ಹೇಳುತ್ತಿದ್ದೇನೆ) ಇದು ಪ್ರಧಾನವಾಗಿ ಮೊದಲು ಹೇಳಿದ ಬಗೆಯದು. ನೋಟಕ ಹೊರಗೆ ಉಳಿದಿರುವವನು. ಇದ್ದರಿಂದ ಈ ಕಲೆ ತನ್ನ ನಿರೂಪಣೆಯ ನೆಲೆಗಳಿಗೆ ಎರವಾಗಿಲ್ಲವೆಂದೇ ಹೇಳಬೇಕು.[3]

ಇನ್ನು ಅಭಿನಯದ ಮಾತನ್ನು ನೋಡೋಣ. ನಮ್ಮ ಪರಂಪರೆಯ ಅಭಿನಯ, ನಟನು ಪಾತ್ರದ ಭಾವಜಗತ್ತಿನಲ್ಲಿ ತಲ್ಲೀನನಾಗಬೇಕೆಂದು ಬಯಸುವುದಿಲ್ಲ. ಮಾತ್ರವಲ್ಲ, ಆ ಬಗೆಯ ಅಭಿನಯವನ್ನು ನೋಟಕರೂ ಒಪ್ಪುವುದಿಲ್ಲ. ನಟ ಕಥಾನಕದ ಮುಂದುವರಿಕೆಯ ಕೊಂಡಿಗಳನ್ನು ತನ್ನ ಮಾತುಗಳ ಮೂಲಕ ಒದಗಿಸುತ್ತಾನೆ. ಅಥವಾ ಆತ ಪಾರದರ್ಶಕನಾಗುತ್ತಾನೆ. ಅವನ ಮೂಲಕ ನೋಟಕ ಪಾತ್ರವನ್ನು ಕಾಣುತ್ತಾನೆ; ಅವನಲ್ಲಿ ಅಲ್ಲ.[4] ಪಾತ್ರದ ಮನಸ್ಸಿನಲ್ಲಿ ಆಗುತ್ತಿರುವ ಭಾವನೆಗಳನ್ನಾಗಲೀ, ಅನಿಸಿಕೆಗಳನ್ನಾಗಲೀ ನಟ ಮಾತುಗಳಲ್ಲಿ 'ಹೀಗೆ ಆಗುತ್ತಿದೆ' ಎಂದು ಹೇಳುವ ಬಗೆಯನ್ನು ನಾವು ಕಂಡಿದ್ದೇವೆ. ಇಲ್ಲಿ ಬ್ರೆಕ್ಟ್ ಹೇಳುವ ಮಾತೊಂದನ್ನು ನಾವು ಗಮನಿಸಬಹುದಾಗಿದೆ. ನಟ ಅಭಿನಯಿಸುವಾಗ ಪ್ರತ್ಯೇಕೀಕರಣವನ್ನು ಸಾಧಿಸುವುದು ಮಾತ್ರವಲ್ಲದೆ ತಾನು ನಿರೂಪಿಸುತ್ತಿರುವ ಪಾತ್ರದ ಸ್ವಂತ ಅನಿಸಿಕೆಗಳನ್ನು ಹತ್ತಿಕ್ಕಿ, ವಿರೋಧವೆನಿಸಿದರೂ ಚಿಂತೆಮಾಡದೆ ಸಾಮಾಜಿಕವಾದ ಜೆಸ್ಟ್‌ಗಳನ್ನು ನಿರೂಪಿಸಬೇಕು ಎನ್ನುತ್ತಾನೆ. ನಮಗೆ ಪರಿಚಯವಿರುವ ಪರಿಭಾಷೆಯಲ್ಲಿ ಹೇಳುವುದಾದರೆ ವಾಚಿಕ ಅಭಿನಯವನ್ನು ಆಂಗಿಕ ಅಭಿನಯದ ಜತೆಗೆ ಸಮೀಕರಿಸುವ ಬದಲು ಅವೆರಡರ ನಡುವೆ ವೈಯಕ್ತಿಕ ಮತ್ತು ಸಾಮಾಜಿಕ ಹಂತಗಳ ನಡುವಣ ಅಂತರವನ್ನು ಉಂಟುಮಾಡಬೇಕೆಂದು ಬ್ರೆಕ್ಟ್ ಬಯಸುತ್ತಾನೆ. ಇವೆರಡೂ ಅಭಿನಯಗಳು ನಮ್ಮ ಪರಂಪರೆಯ ನಟನೆಯಲ್ಲಿ ಸಮೀಕರಣಗೊಳ್ಳುವುದಿಲ್ಲ. ಆದರೆ ಬೇರೆಯಾಗಿ ಉಳಿಯುವ ಆಂಗಿಕ ಚಲನೆಗಳು ಸಾಂಕೇತಿಕವೋ ಇಲ್ಲವೇ ಶೈಲೀಕೃತವೋ ಆಗುತ್ತವೆ. ಇಲ್ಲಿ ಬದಲಾವಣೆಗೆ ಅವಕಾಶಗಳಿವೆ. ಇದೇ ಮಾತನ್ನು ಸಂಗೀತಕ್ಕೂ ಹೇಳಬಹುದಾಗಿದೆ. ಬ್ರೆಕ್ಟ್ ಅನಿಯತ ಲಯ ಮತ್ತು ಪ್ರಾಸ ರಹಿತ ಹಾಡುಗಳು ಹಾಗೂ ನಾದಗಳು ಪಾತ್ರದ ಬಗೆಗೆ ಕೆಲವು ಸಂಗತಿಗಳನ್ನು ನೇರವಾಗಿ ನೋಟಕನಿಗೆ ತಿಳಿಸಲು ನೆರವಾಗುತ್ತವೆ ಎಂದು ಹೇಳುತ್ತಾನೆ. ನಮ್ಮ ಪರಂಪರೆಯ ರಂಗದಲ್ಲಿ ಹಾಡು ಯಾವಾಗಲೂ ಭಾವಕೋಶವನ್ನು ಆವರಿಸುವ

ಸಂಗೀತದ ಪರಿಣಾಮವನ್ನು ಉಂಟುಮಾಡುವುದಿಲ್ಲ. ನಿರೂಪಣೆಯನ್ನು ಸಂಕ್ಷಿಪ್ತಗೊಳಿಸಲು, ಅದಕ್ಕೂ ಒಂದು ಆಕಾರವನ್ನು ನೀಡಲು ಬಳಕೆಯಾಗುತ್ತಿರುವ ಸಾಧ್ಯತೆಗಳು ಹೆಚ್ಚು. ಆದರೆ ಸಂಗೀತದಿಂದ ಬ್ರೇಕ್ಟ್ ಬಯಸುವ ಸಾಮಾಜಿಕ ಜೆಸ್ಚ್‌ಗಳು ಒಂದು ಜವಾಬ್ದಾರಿಯೇ ಸರಿ.

ಪರಂಪರೆಯ ರಂಗಭೂಮಿಯ ನೋಟಕನು ಪಡೆಯುತ್ತಿರುವ ಅನುಭವವನ್ನು ನಾವು ಇನ್ನೂ ಸಾಕಷ್ಟು ಅಭ್ಯಾಸ ಮಾಡಿಲ್ಲ. ಆದರೆ ಭಾರತೀಯ ಕಾವ್ಯಮೀಮಾಂಸೆ ತನ್ನ ಆತ್ಯಂತಿಕ ಹಂತದಲ್ಲಿ ರೂಪಿಸಿದ ಅಭಿವ್ಯಕ್ತಿವಾದದ ಬಗೆಯಲ್ಲಿ ಆತ ತನ್ನ ಮನಸ್ಸಿನ ಒಳಗಿರುವ ಸ್ಥಾಯಿಭಾವಗಳನ್ನು ತಾನೇ ಆಸ್ವಾದಿಸುವ ಬಗೆಯಂತೂ ಇಲ್ಲವೆಂಬುದು ಖಚಿತ. ಅಲ್ಲದೆ ನಾಟಕವನ್ನು ನೋಡುವ ಅನುಭವವು ಅಖಂಡವಾಗಿ ಆಗಬೇಕೆಂದು ಬಯಸುವುದಿಲ್ಲವೆಂಬುದನ್ನು ನಾವು ಗಮನಿಸಬೇಕು. ಆತ ನಾಟಕವನ್ನು ನೋಡುವಾಗ ತಲ್ಲೀನನಾಗುವುದು ವ್ಯಕ್ತಿತ್ವವನ್ನು ಶೂನ್ಯಗೊಳಿಸಿಕೊಳ್ಳುವ ಬಗೆಯಲ್ಲಿ ಅಲ್ಲ. ಇಡೀ ಪ್ರಯೋಗದ ಮೂಲಕ ಆತ ಗ್ರಹಿಸುವುದು ಮೂಲ ಕಥಾನಕವನ್ನು. ಪ್ರಯೋಗ ಅವನಿಗೆ ಒಂದು ನಿಮಿತ್ತಮಾತ್ರ. ಇಲ್ಲಿ ಪ್ರಾಸಂಗಿಕವಾಗಿ ಕಾವ್ಯಮೀಮಾಂಸೆಯ ಚಿಂತಕನೊಬ್ಬನ ವಿಚಾರಗಳನ್ನು ಚರ್ಚೆಗೆ ತರಲು ಬಯಸುತ್ತೇನೆ. ಈತ ಶಂಕುಕ. ಇವನು ಭರತನ ರಸಸೂತ್ರಕ್ಕೆ ವ್ಯಾಖ್ಯಾನ ಬರೆದವರಲ್ಲಿ ಒಬ್ಬ. ಬಹುಶಃ ಸಂಸ್ಕೃತ ರಂಗಭೂಮಿ ಅಥವಾ ಪಾರಂಪರಿಕ ರಂಗಭೂಮಿಯ ಪ್ರಯೋಗಗಳನ್ನು ನೋಡಿ ಆ ಮೂಲಕ ತನ್ನ ವ್ಯಾಖ್ಯಾನವನ್ನು ಮಂಡಿಸುತ್ತಾನೆ. ಆ ಮುಂದಿನವರು ಶ್ರವ್ಯ ಕಾವ್ಯಗಳಿಗೆ ಸಂಬಂಧಿಸಿದಂತೆ ತಮ್ಮ ವಿಚಾರಗಳನ್ನು ನಿರೂಪಿಸುತ್ತಾರೆ. ಶಂಕುಕನ ವಾದವನ್ನು 'ಅನುಮಿತಿವಾದ' ಎನ್ನುವುದುಂಟು. ಸ್ಥೂಲವಾಗಿ ಅವನ ವಿಚಾರ ಇಷ್ಟೆ. ನಾಟಕ ನೋಡುವಾಗ ನಾವು ನಟನ ಮೂಲಕ ಏನನ್ನು ಗ್ರಹಿಸುತ್ತೇವೆ? ಪಾತ್ರದ ಬಗೆಗಿನ ವಿವರಗಳನ್ನು. ಹಾಗಾದರೆ ನಟನೆ ಎಂಬುದು ಏನು? ನಟ ಚಿತ್ರದ ಕುದುರೆಯ ರೀತಿ. ಕುದುರೆಯ ಚಿತ್ರವನ್ನು ನೋಡುವವನು ಚಿತ್ರದ ಮೂಲಕ ಕುದುರೆಯನ್ನು ಗ್ರಹಿಸುತ್ತಾನೆ. ಆದರೆ ಚಿತ್ರ ತಾನೇ ಕುದುರೆಯ ಜೀವಂತ ಲಕ್ಷಣವನ್ನು ಹೊಂದಿರುವುದಿಲ್ಲ. ಕೇವಲ ಅದು ಮಾಧ್ಯಮ ಮಾತ್ರವಾಗಿ ಕೆಲಸ ಮಾಡುತ್ತದೆ. ಹಾಗೆ ನಟನ ಮೂಲಕ ನಾವು ಪಾತ್ರವನ್ನು ಅನುಮಿತಿಗೊಳಿಸಿಕೊಳ್ಳುತ್ತೇವೆ. ಶಂಕುಕನ ಈ ವಾದ ಬ್ರೆಕ್ಟ್ ಹೇಳುವ ಪ್ರತ್ಯೇಕೀಕರಣವನ್ನು ಸೂಚಿಸುವ ಬಗೆಯಲ್ಲಿದೆ ಎಂದು ನಾನು ತಿಳಿಯುತ್ತೇನೆ. ಈ ಹೋಲಿಕೆಯನ್ನು ನೀಡಿದ್ದರ ಉದ್ದೇಶ ನಮ್ಮ ಪರಂಪರೆಯ ನಟನೆಯ ಬಗೆಗೆ ಎಪಿಕ್ ರಂಗಕ್ಕೆ ತಕ್ಕ ಅಭಿನಯದ ಪರಿಚಯವಿದೆ ಎಂದು ಸೂಚಿಸುವುದೇ ಆಗಿದೆ. ಈ ಬಗೆಯ ಅಭಿನಯಕ್ಕೆ ಸೂಚನೆಯೂ ಕೂಡ ಬ್ರೆಕ್ಟ್‌ಗೆ ಸಿಕ್ಕಿದ್ದು ಪೂರ್ವದ ರಂಗಭೂಮಿಯಲ್ಲಿ, ಅದರಲ್ಲೂ ಚೀನಾರಂಗದಲ್ಲಿ ಎಂಬುದನ್ನು ನೋಡಬಹುದು.

ನಮ್ಮ ಪರಂಪರೆಯ ನೋಟಕನು ಪರಿವರ್ತನೆಯು ಸಾಧ್ಯವಿರುವ ಜಗತ್ತನ್ನು ತನ್ನ ಅನುಭವವನ್ನಾಗಿ ಪಡೆಯುತ್ತಾನೋ ಅಥವಾ ಮುಚ್ಚಿದ ಜಗತ್ತು ಅವನ ಅನುಭವಕ್ಕೆ ಬರುತ್ತದೋ ಎಂಬುದನ್ನು ನಾನು ಹೇಳಲಾರೆ. ಆ ಬಗ್ಗೆ ಇನ್ನೂ ಖಚಿತವಾದ ಅಧ್ಯಯನಗಳು ನಡೆಯಬೇಕಾಗಿದೆ. ಒಂದು ವಿಚಾರವಂತೂ ನಿಜ. ನಾಟಕ ಯಾವ

ದೃಷ್ಟಿಯನ್ನು ಹೊಂದಿರಬಹುದೋ ಅದೇ ನೋಟಕನ ಅನುಭವವೂ ಆಗಿರುತ್ತದೆ ಎಂದು ಹೇಳಲಾಗುವುದಿಲ್ಲ. ಅಷ್ಟರಮಟ್ಟಿಗೆ ಅವನಿಗೆ ಬಿಡುಗಡೆ ಇದೆ.

ನಮ್ಮ ಸಾಹಿತ್ಯಕ ರಂಗಭೂಮಿಯು ರೂಪಿಸುವ ರಂಗಕ್ಕೆ ವಿರುದ್ಧವಾಗಿ ಜೀವಂತವಾಗಿರುವ ಪಾರಂಪರಿಕ ರಂಗದ ಲಕ್ಷಣಗಳನ್ನು ನಾವು ಎಚ್ಚರದಿಂದ ಗಮನಿಸಬೇಕಾಗಿದೆ. ಆಗ ಮಾತ್ರ ಜನಪರವಾದ ರಂಗದ ಅವಿರ್ಭಾವ ಸಾಧ್ಯ. ಬ್ರೆಕ್ಟನ ಎಪಿಕ್ ರಂಗದ ವಿವರಗಳೊಡನೆ ನಮ್ಮ ಪರಂಪರೆಯ ರಂಗದ ಲಕ್ಷಣಗಳನ್ನು ಹೋಲಿಸಲು ಇಲ್ಲಿ ನಡೆಸಿದ ಯತ್ನವೂ ಇದೇ ಉದ್ದೇಶವನ್ನು ಹೊಂದಿದೆ. ಇದು ಕೇವಲ ಅಲ್ಲಿರುವುದೂ ಇಲ್ಲೂ ಇದೆ ಎಂದು ಮೆರೆಯುವ ದಡ್ಡತನವಲ್ಲ. ನಮ್ಮ ಪರಿಸರದಲ್ಲಿರುವ ರಂಗಪರಿಕರಗಳನ್ನು ಮರುಚಿಂತನೆಗೆ ಒಳಪಡಿಸುವತ್ತ ನಾವು ಯೋಚಿಸಬೇಕಾಗಿದೆಯೆಂದು ಸೂಚಿಸುವುದು ನನ್ನ ಗುರಿ.

**ಟಿಪ್ಪಣಿಗಳು**

1) ಎ) ಜಾನ್ ವಿಲ್ಲೆಟ್: ಬ್ರೆಕ್ಟ್ ಆನ್ ಥಿಯೇಟರ್: ರಾಧಾಕೃಷ್ಣ: (194) 1979

b) Frederick Ewen; Betrolt brecht : his life, his art, his times-calder and Boyes 1970

2) ಫ್ರಾನ್ಸಿನ ಪಾಲ್‌ಕ್ಲಾಡೆಲ್ ತನ್ನ ನಾಟಕ ಪ್ರಯೋಗದಲ್ಲಿ ಈ ರಂಗ ತಂತ್ರಗಳನ್ನು ಬಳಸಿದ್ದ. 1927ರ ಅವನ 'ಕ್ರಿಸ್ಟೊಫೆ ಕೊಲಂಬೆ', ಎಂಬ ನಾಟಕ ಇದಕ್ಕೆ ನಿದರ್ಶನ. ಬ್ರೆಕ್ಟ್ ಇವನನ್ನು ಉಲ್ಲೇಖಿಸುತ್ತಾನೆ ಕೂಡ. ಆದರೆ ಕ್ಯಾಥೊಲಿಕ್ ಪಂಥದ ಅನುಯಾಯಿಯಾಗಿದ್ದ ಇವನ ಪ್ರಯೋಗದ ಮೂಲ ಉದ್ದೇಶ ತನ್ನ ನಂಬಿಕೆಯ ವಿಚಾರಗಳನ್ನು ಪ್ರಚರಪಡಿಸುವುದೇ ಆಗಿತ್ತು. ಎಂದರೆ ಸಾಧನಗಳನ್ನು ಆತ ತನ್ನ ಉದ್ದೇಶಕ್ಕೆ ತಕ್ಕಂತೆ ಬಳಸಲು ಯೋಚಿಸಿದ್ದನು.

3) ಹಾಗೆ ನೋಡಿದರೆ ನಮ್ಮ ಶಾಬ್ದಿಕ ಕಲೆಗಳು ನಿರೂಪಕನನ್ನು ತಮ್ಮ ಕೇಂದ್ರವನ್ನಾಗಿ ಉಳಿಸಿಕೊಂಡಿರುವುದಕ್ಕೆ ಪರಂಪರೆಯ ಕೃತಿಗಳು ಉದಾಹರಣೆಗಳಾಗಬಲ್ಲವು. ಚಂಪೂ ಮತ್ತು ಆ ಮುಂದಿನ ದೇಸಿ ಪರಂಪರೆಯ ಕೃತಿಗಳು ನಿರೂಪಕನ ಮೂಲಕವೇ ಕಥೆಯನ್ನು ಹೇಳಿಸುವ ತಂತ್ರವನ್ನು ಅನುಸರಿಸಿವೆ. ಇದರಿಂದ ಪ್ರಭಾವಿತವಾಗಿರುವ ನಮ್ಮ ದೃಶಕಲೆಗಳು ಕೂಡ ನಿರೂಪಕನನ್ನು ಬಿಡುವ ಹೆಜ್ಜೆ ಹಾಕಲಿಲ್ಲ.

4) ಹರಿಕಥೆಯ ನಿರೂಪಕ ತನ್ನ ಕಥೆಯ ಪಾತ್ರಗಳ ವಾಚಿಕವನ್ನು ನಮ್ಮ ಮುಂದಿಡುವ ಬಗೆ ನಮಗೆ ಗಮನಾರ್ಹವಾಗುತ್ತದೆ. ಆತ ಯಾವ ಪಾತ್ರವನ್ನೇ ಆಗಲಿ ತನ್ಮಯತೆಯಿಂದ ಅಭಿನಯಿಸುವುದಿಲ್ಲ. ಆದರೆ ಆಯಾ ಪಾತ್ರಗಳ ಬಗೆಗೆ ನಮಗೆ ತನ್ಮಯತೆಯಿಂದ ವಿವರಗಳನ್ನು ಒದಗಿಸುತ್ತಾನೆ. ಈ ಬಗೆಯ ನಮ್ಮ ಪಾರಂಪರಿಕ ಅಭಿನಯದಲ್ಲಿ ಒಂದು ಸಮಸ್ಯೆ ಇದೆ. ಒಬ್ಬ ನಟ ಹಲವು ಪಾತ್ರಗಳನ್ನು ಅಭಿನಯಸುತ್ತಾ ಹೋದಂತೆ ನೋಟಕ ಪಾತ್ರವನ್ನು ಮತ್ತು ನಟನನ್ನು ಅವಿನಾಭಾವದಿಂದ ನೋಡಲು ಪ್ರಾರಂಭಿಸಬಹುದು. ಇದು ನಟ ಪುರಾಣೀಕೃತಗೊಳ್ಳುವ ಒಂದು ಬಗೆ.

# ಆಧುನಿಕ ರಂಗಭೂಮಿ ಮತ್ತು ಜನಪದ ರಂಗಭೂಮಿ

1. ಕರ್ನಾಟಕದ ಹಳ್ಳಿಗಾಡಿನಲ್ಲಿ ಇರುವ ಬಯಲಾಟಗಳನ್ನು ಜನಪದ ರಂಗಭೂಮಿ ಎಂದೂ, ಕಳೆದ ಏಳೆಂಟು ದಶಕಗಳಲ್ಲಿ ರೂಪುಗೊಂಡು ಬೆಳೆದು ಬಂದಿರುವ ಹೊಸ ಬಗೆಯ ರಂಗಭೂಮಿಯನ್ನು 'ಆಧುನಿಕ' ಎಂದೂ ವ್ಯವಹರಿಸುವುದುಂಟು. ಈ ಪ್ರಕಾರ ಜನಪದ ಎಂಬುದು ಹಳೆಯದೂ, ಸ್ಥಗಿತಗೊಂಡದ್ದೂ, ವಿನಾಶದ ಹಾದಿ ಹಿಡಿದಿರುವುದೂ ಆಗಿದ್ದರೆ, ಆಧುನಿಕ ರಂಗಭೂಮಿ ಚಲನಶೀಲವೂ, ಪ್ರಯೋಗಗಳಿಂದಾಗಿ ಪ್ರವರ್ತನಶೀಲವೂ ಆಗಿದೆ. ಆಧುನಿಕ ಎಂಬುದಕ್ಕೆ ಶಿಷ್ಟ, ನಾಗರಿಕ ಎಂಬ ವಿಶೇಷಣಗಳೂ ಬಳಕೆಯಾಗುತ್ತವೆ. ಆದರೆ ಈ ವಿಭಜನೆ ಅಷ್ಟು ಸರಳವಾದುದಲ್ಲ. ಆಧುನಿಕ ಎಂದರೆ, 'ಈಗ ನಮ್ಮ ಜತೆ ಇರುವುದೆಲ್ಲವೂ ಆಗಬಹುದು. ಹಾಗಿದ್ದರೆ ಜನಪದ ರಂಗಭೂಮಿಯೂ ಆಧುನಿಕವೇ ಆಗಿದೆ. ಇದು ಕೇವಲ ತರ್ಕವಲ್ಲ. ಸಾಹಿತ್ಯಕ್ಕೆ ಸಂಬಂಧಿಸಿದಂತೆ ಖಚಿತವಾಗಿದೆ ಎನ್ನಲಾದ ಜನಪದ, ಕೇವಲ ಅವಾಸ್ತವವೂ ಆಗಿರುವುದು ಸಾಧ್ಯವಿದೆ. ಈ ಎರಡೂ ರಂಗಭೂಮಿಗಳಲ್ಲದೆ ಜನಪ್ರಿಯ ರಂಗಭೂಮಿ ಎಂಬ ಮತ್ತೊಂದು ಬಗೆಯನ್ನು ಕಾಣಲು ಯತ್ನಿಸಲಾಗಿದೆ. ಇದೂ ಕೂಡ ವಾಸ್ತವವಲ್ಲ. ಏಕೆಂದರೆ ಜಾನಪದ ಈಗಲೂ ಸೃಜನಶೀಲ ಮತ್ತು ಚಲನಶಿಲವೆಂದು ವಾದಿಸುವುದಾದರೆ ಅದು ಈಗ ಯಾವ ಆಕಾರವನ್ನು ತಳೆಯುತ್ತಿದೆ ಎಂಬುದನ್ನು ಗುರುತಿಸಲು ಯತ್ನಿಸಬೇಕು. ಅಥವಾ ಆಧುನಿಕವೆಂದು ನಾವು ಹೇಳುತ್ತಿರುವ ರಂಗಭೂಮಿಯೂ ಜನಪದ ರಂಗಭೂಮಿಯೊಡನೆ ಸಂಬಂಧಗಳನ್ನು ಪಡೆದಿರುವುದನ್ನು ಕಾಣಬೇಕು. [1]

**2. ಚರ್ಚೆ**

(ಅ) ಜನಪದ ರಂಗಭೂಮಿಯನ್ನು ಕುರಿತು ಎರಡು ಮುಖ್ಯ ನಿಲುವುಗಳು ಹೀಗಿವೆ :

(i) ಜನಪದ ರಂಗಭೂಮಿ ಎಂದರೆ ಬಯಲಾಟ. ಮುಖ್ಯವಾಗಿ ಆರಾಧನೆಯ ಆಚರಣೆಯಲ್ಲಿ ಹುಟ್ಟಿರುವಂಥದ್ದು. (ಚಂದ್ರಶೇಖರ ಕಂಬಾರ, 1973, ಪುಟ 8) ಕಂಬಾರರು ಈ ನಿಲುವನ್ನು ಗಾಢವಾಗಿ ಸಮರ್ಥಿಸುವವರು. ಇಡೀ ಜನಪದ ರಂಗನಾಟಕ ಒಂದು ಭಕ್ತ ಪ್ರೇಕ್ಷಕರ ಎದುರು ನಡೆಯುವ ಆರಾಧನೆ ಎಂಬುದನ್ನೂ ಅವರು ಸೂಚಿಸುತ್ತಾರೆ.

(ii) ಈಗ ನಮ್ಮ ಜತೆಗೆ ಇರುವ ಜನಪದ ರಂಗಭೂಮಿ ಭಕ್ತಿಯುಗದ

ಚಳುವಳಿಯಿಂದ ರೂಪುಗೊಂಡಿದ್ದು, ಪುನರುಜ್ಜೀವನಗೊಂಡದ್ದು. (ಆದ್ಯರಂಗಾಚಾರ್ಯ 1977 ಪು. 83) ಮೂಲದಲ್ಲಿ ಜನಪದ ರಂಗಭೂಮಿಗೂ ಆರಾಧನೆಗೂ ಸಂಬಂಧವಿರಲಿಲ್ಲವೆಂದು ಆದ್ಯರಂಗಾಚಾರ್ಯರು ಸೂಚಿಸುತ್ತಾರೆ. ಭರತನಲ್ಲಿ ಸೂಚಿತವಾಗುವ ಉಪರೂಪಕಗಳೇ ಮೊದಲ ಜನಪದ ರಂಗ ಕೃತಿಗಳಾಗಿದ್ದಲ್ಲಿ ಅವುಗಳು ಪ್ರಾಸಂಗಿಕವಾದ, ಸಾಮಾಜಿಕ ಆಹ್ಲಾದವೆ ಗುರಿಯಾಗಿದ್ದ ದೃಶ್ಯ ಪ್ರಕಾರಗಳಾಗಿರಬೇಕು.

ಈ ಎರಡೂ ನಿಲುವುಗಳಲ್ಲಿ ಸರಿಯಾವುದೆಂಬುದು ನಮಗೆ ಮುಖ್ಯವಲ್ಲ. ಈಗ ಜನಪದರಂಗನಾಟಕ ಒಂದು ಆರಾಧನೆಯಾಗಿದೆಯೋ ಎಂಬುದು ಮಾತ್ರ ನಮ್ಮ ಚರ್ಚೆಗೆ ಬೇಕಾದದ್ದಾಗಿದೆ. ಅದೊಂದು ಸಾಮುದಾಯಿಕ ಚಟುವಟಿಕೆ ಎಂಬುದನ್ನು ಮಾತ್ರ ಒಪ್ಪಬಹುದೇ ಹೊರತು, ಆರಾಧನೆಗೆ ಅವಶ್ಯವಾದ ಭಾಗಿಯಾಗುವಿಕೆ ಮತ್ತು ತನ್ಮಯತೆಗಳು ನೋಟಕರಲ್ಲಿ ಇರುವುದೆಂದು ಒಪ್ಪುವುದು ಸಾಧ್ಯವಿಲ್ಲ.

ಇದಲ್ಲದೆ ಜನಪದನಾಟಕಗಳು ಲಿಖಿತರೂಪವೊಂದನ್ನು ಪಡೆದಿರುವುದಿಲ್ಲ. ಪ್ರಯೋಗವೇ ಅದರ ನಿಜವಾದ ಅಸ್ತಿತ್ವ. ಸೂತ್ರಧಾರ, ಮೇಳ ಇವು ಬಯಲಾಟದ ಅನಿವಾರ್ಯ ಪಾತ್ರಗಳು. ರಂಗಸಜ್ಜಿಕೆ, ಪರಿಕರ, ಭಾಷೆ, ನಟನೆ ಎಲ್ಲವೂ ಶೈಲೀಕೃತ (ಸ್ಟೈಲಯ್ಸ್‌ಡ್) ಮತ್ತು ಈ ನಾಟಕಗಳು ಹಾಡು – ಮಾತು – ಕುಣಿತಗಳಿಂದ ಕೂಡಿದ್ದು ಆದಿಮ ಕಲಾಪ್ರಕಾರದ ಸಂಪೂರ್ಣತೆ (ಟೋಟಾಲಿಟಿ)ಯನ್ನು ಹೊಂದಿರುತ್ತವೆ.

(ಆ) ಆಧುನಿಕ ರಂಗಭೂಮಿಯ ಲಕ್ಷಗಳನ್ನು ಸುಬ್ಬಣ್ಣ ಕೆ.ವಿ.ಯವರು ಹೀಗೆ ಸಂಗ್ರಹಿಸಿದ್ದಾರೆ :

(1) ಪ್ರೇಕ್ಷಾಗೃಹಕ್ಕೆ ಮೂರು ಗೋಡೆಗಳಿದ್ದು, ಪ್ರೇಕ್ಷಕವರ್ಗವೇ ನಾಲ್ಕನೆಯ ಗೋಡೆ, ಎಂದರೆ ಯೂರೋಪಿನ ಪ್ರೋಸೀನಿಯಂ ರಂಗಭೂಮಿಯ ಲಕ್ಷಣಗಳು ಇಲ್ಲಿ ಕಾಣತೊಡಗುತ್ತವೆ.

(2) ನಾಟಕಗಳಲ್ಲಿ ವಾಸ್ತವಿಕತೆಯ ಕಡೆಗೆ ಹೆಚ್ಚು ಒಲವು ಕಾಣತೊಡಗುತ್ತದೆ. ಇದು ವಸ್ತು, ವಸ್ತುವಿನ್ಯಾಸ, ನಟನೆ, ಅಭಿನಯ, ರಂಗಸಜ್ಜಿಕೆ, ಭಾಷೆ ಈ ಎಲ್ಲ ಪರಿಕರಗಳಿಗೂ ಅನ್ವಯಿಸುತ್ತದೆ.

(3) ನಾಟಕದ ಪ್ರಯೋಗಗಳ ಆಕಾರ ಲಿಖಿತನಾಟಕಗಳಿಂದ ಪೂರ್ವ ನಿರ್ಧಾರಿತವಾಗುತ್ತದೆ. (ಸುಬ್ಬಣ್ಣ ಕೆ.ವಿ. 1978 ಪುಟ 80). ಎಂದರೆ ನಾಟಕದ ಲಿಖಿತರೂಪು ಸಂವೃತಗೊಳ್ಳುತ್ತ ಬಂದು ತನ್ನ ದೃಶ್ಯರೂಪದ ಸಾಧ್ಯತೆಯನ್ನು ಮೊಟಕುಗೊಳಿಸುತ್ತಾ ಹೋಗುತ್ತದೆ.

ಮೇಲು ನೋಟಕ್ಕೆ ಈ ಲಕ್ಷಣಗಳನ್ನು ಒಪ್ಪುವುದು ಸಾಧು ಎನಿಸಿದರೂ, ವಿವರಗಳಲ್ಲಿ ಗಮನಿಸಿದಾಗ ಬೇರೊಂದು ಚಿತ್ರವೇ ನಮಗೆ ಕಾಣುವ ಸಾಧ್ಯತೆ ಇದೆ.

ಕನ್ನಡ ನವೋದಯದ ಕವಿಗಳು, ನಾಟಕಕಾರರು ರಚಿಸಿದ ನಾಟಕಗಳು ಮೇಲಿನ ಲಕ್ಷಣ ನಿರ್ವಚನದ ಹಿನ್ನೆಲೆಯಲ್ಲಿವೆ ಎಂದು ತಿಳಿಯಬಹುದು. ಈ ನಾಟಕಗಳು ಅಪೇಕ್ಷಿಸುತ್ತಿದ್ದ ರಂಗಭೂಮಿ ಕೇವಲ ಲಿಖಿತನಾಟಕಗಳನ್ನು ದೃಶ್ಯರೂಪಕ್ಕೆ ತರುವ

ಮಾಧ್ಯಮ ಮಾತ್ರ. ಪ್ರಯೋಗಗಳ ನೆರವಿಲ್ಲದೆಯೂ ಸಾಹಿತ್ಯಿಕವಾಗಿ ಈ ಲಿಖಿತ ನಾಟಕಗಳನ್ನು ಕೃತಿಗಳನ್ನಾಗಿ ಚಲಿಸುವುದು ಸಾಧ್ಯ.. ಮತ್ತು ನಾಟಕಗಳ ಪ್ರಯೋಗಗಳು ನಾಟಕಕಾರರನ್ನು ಮೀರಬಲ್ಲವು, ಹೊಸ ನೆಲೆಗಳಿಗೆ ತಲುಪಬಲ್ಲವು ಎಂಬುದನ್ನೂ ನವೋದಯದಲ್ಲಿ ಒಪ್ಪಿದಂತೆ ತೋರುವುದಿಲ್ಲ. ಜನಪದ ನಾಟಕ – ಪ್ರಯೋಗಗಳ ದೃಷ್ಟಿಯಿಂದ ಇದೊಂದು ಬದಲಾದ ಸ್ಥಿತಿಯೇ ಸರಿ. ಕೆಲವು ನಾಟಕಕಾರರು ಪಾರಂಪರಿಕ ರಂಗಭೂಮಿಯ ಅನುಭವಗಳಿಂದ ಭಿನ್ನವಾದ ಯೂರೋಪಿನ ರಂಗದ ನೇರವಾದ ಪರಿಚಯದಿಂದ ನಾಟಕಗಳನ್ನು ರಚಿಸಿದರೆಂಬುದೂ ನಿಜ. ಕೈಲಾಸಂ ಮತ್ತು ಶ್ರೀರಂಗ ಇವರೇ ಅದಕ್ಕೆ ಉದಾಹರಣೆಯಾಗಬಲ್ಲರು. ಆದರೆ ನವೋದಯದ ನಾಟಕಕಾರರು ತಮ್ಮ ಸಾಹಿತ್ಯಿಕ – ನಾಟಕಗಳ ಬಂಧಗಳಿಗೆ ಜನಪದ ರಂಗಭೂಮಿಯ ಅನುಭವಗಳಲ್ಲಿ ಹುಡುಕಾಟ ನಡೆಸಿರುವುದು ಸ್ಪಷ್ಟವಾಗಿದೆ. ಕಳೆದ ಶತಮಾನದಲ್ಲೇ ಶಾಕುಂತಲ ನಾಟಕವನ್ನು ಕನ್ನಡಿಸಿದ ಚುರುಮುರಿಯವರು, ಬೇಟರಾಯ ದೀಕ್ಷಿತರು ತಮಗೆ ಪರಿಚಯವಿದ್ದ ಜನಪದ ರಂಗಭೂಮಿಯ ಲಕ್ಷಣಗಳನ್ನೂ ಬಳಸಿಕೊಂಡಿದ್ದಾರೆ. ಅಥವಾ ಜನಪದ ರಂಗಭೂಮಿಯಲ್ಲಿ ಹೊಸದೊಂದು ಆಕೃತಿಯನ್ನು ಕಟ್ಟಲು ಯೋಜಿಸಿದ್ದಾರೆ. ಶಾಂತಕವಿಗಳು ಆಗ ಆಡಿಸುತ್ತಿದ್ದ ನಾಟಕಗಳು ಇದೇ ಲಕ್ಷಣಗಳು ಹೊಂದಿದ್ದವೆಂದು ಕೆ.ಡಿ. ಕುರ್ತಕೋಟಿಯವರು ಹೇಳುತ್ತಾರೆ. ಇಷ್ಟೂ ಮಾತುಗಳನ್ನೂ ನಾನು ನಾಟಕದ ರಚನೆಯನ್ನು ಕುರಿತುಮಾತ್ರ ಹೇಳಿದ್ದೇನೆ. ಅಷ್ಟೆ.

**3. ಚಾರಿತ್ರಿಕ ಬೆಳವಣಿಗೆ :**

ಆಧುನಿಕ ರಂಗಭೂಮಿಯ ವಿವಿಧ ಮಜಲುಗಳಲ್ಲಿ ಜನಪದ ರಂಗಭೂಮಿಗೆ ಇರುವ ಅಂತಸ್ಸಂಬಂಧಗಳನ್ನು ನಾವೀಗ ಗಮನಿಸಬಹುದು. ಆಧುನಿಕ ರಂಗಭೂಮಿಯಲ್ಲಿ 'ವೃತ್ತಿ' ಮತ್ತು 'ಹವ್ಯಾಸಿ' ಎಂಬ ಬಗೆಗಳಿವೆಯಷ್ಟೆ.. 'ಹವ್ಯಾಸಿ'ರಂಗದ ಬೆಳವಣಿಗೆಯಾಗಿ 'ಅರೆ – ವೃತ್ತಿ' ಮತ್ತು 'ಜನಪದ' ರಂಗಭೂಮಿಗಳೂ ರೂಪುಗೊಂಡಿವೆ. ಇವೆಲ್ಲವನ್ನು ಪ್ರತ್ಯೇಕವಾಗಿ ಚರ್ಚಿಸುವ ಅಗತ್ಯವಿದೆ.

**(ಅ) ವೃತ್ತಿರಂಗಭೂಮಿ** : ಜನಪದ ರಂಗಭೂಮಿಯೂ ವೃತ್ತಿರಂಗಭೂಮಿಯೇ ಆಗಿದೆ, ಅಲ್ಲಿಯೂ ಹವ್ಯಾಸಿಗಳಿದ್ದಾರೆ. ಮೇಳಗಳು ಅಲೆಮಾರಿಗಳಾಗಿ ಊರಿಂದ ಊರಿಗೆ ತಿರುಗಿ ನಾಟಕಗಳನ್ನು ಪ್ರದರ್ಶಿಸುತ್ತಿದ್ದುದು ಆಧುನಿಕ ವೃತ್ತಿರಂಗಭೂಮಿಯಲ್ಲೂ ಮುಂದುವರಿದಿದೆ. ಊಳಿಗಮಾನ್ಯ ವ್ಯವಸ್ಥೆಯಲ್ಲಿ ಇದು ರೂಪಗೊಂಡದ್ದು. ಆದರೂ ನವೋದಯದ ಸ್ವರೂಪದಲ್ಲೇ ಕಂಡುಬರುವ ಪ್ರಜಾಪ್ರಭುತ್ವೀಕರಣ ಇಲ್ಲಿಯೂ ಕಾಣುತ್ತದೆ. ವೃತ್ತಿರಂಗಭೂಮಿಗೆ ಮೇಲೆ ಹೇಳಿದ ಆಧುನಿಕ ರಂಗಭೂಮಿಯ ಲಕ್ಷಣಗಳನ್ನು ಪೂರ್ಣವಾಗಿ ಅನ್ವಯಿಸುವುದು ಸಾಧ್ಯವಾಗುವುದಿಲ್ಲ.

(1)ವೃತ್ತಿರಂಗದ ನಾಟಕಗಳು ಪ್ರಯೋಗಗಳ ಆಕಾರವನ್ನೂ ನಿರ್ಧರಿಸುತ್ತವೆ ಎನ್ನಲಾಗದು. ಆ ನಾಟಕಗಳು ಸಡಿಲಬಂಧವನ್ನೇ ಹೊಂದಿದ್ದು, ಎಷ್ಟೋ ಕಡೆಗಳಲ್ಲಿ ತೆರವುಗಳನ್ನೂ ಹೊಂದಿರುತ್ತವೆ. ಜನಪದ ನಾಟಕದಲ್ಲಿದ್ದಂತೆ ಹಾಡುಗಳಷ್ಟೇ ಖಚಿತ. ಎಷ್ಟೋ ಪ್ರಸಂಗಗಳು, ಪ್ರಯೋಗಳು ನಡೆಯುತ್ತಿರುವ ಪ್ರದೇಶವನ್ನು ಅವಲಂಬಿಸಿ ನಟರಲ್ಲೇ ರೂಪುಗೊಳ್ಳುವುದೂ ಉಂಟು. ಹಾಸ್ಯಕ್ಕೆ ಸಂಬಂಧಿಸಿದ್ದನ್ನು ಇಲ್ಲಿ

ನಿದರ್ಶನವೆಂದು ಹೇಳಬಹುದು. ಗುಂಪಿನ ನಟರ ಸಾಧ್ಯತೆಯನ್ನು ಅವಲಂಬಿಸಿ ನಾಟಕಗಳು ರಚನೆಯಾಗಿವೆ. ಹಾಡುವವರು ನಟರೇ ಆಗಿದ್ದು, ಮೇಳದವರು ಇಲ್ಲವೆ ಸಂಗೀತವಾದ್ಯಗಳವರು ಪ್ರೇಕ್ಷಕರಿಗೆ ಬೆನ್ನುತಿರುಗಿಸಿ ಕುಳಿತದ್ದು ಜನಪದ ನಾಟಕಗಳಿಗಿಂತ ಭಿನ್ನವೆನಿಸಲು ಕಾರಣವಿದ್ದೀತು. ನಾಟಕ ಪ್ರಯೋಗ ನಿರ್ವಾತೃ ಜನಪದ ರಂಗಭೂಮಿಯಲ್ಲಿ ರಂಗದಲ್ಲೇ ಸೂತ್ರಧಾರನಾಗಿ ಭಾಗವತನಾಗಿ ಹಾಜರಿರುತ್ತಾನೆ. ವೃತ್ತಿ ರಂಗಭೂಮಿಯಲ್ಲಿ ಆತ ಹೊರಗೆನಿಂತ. ಇದು ಅಭಿಜಾತರಂಗದ ಲಿಖಿತನಾಟಕಗಳ ಪರಿಚಯದಿಂದ ಆದ ಬದಲಾವಣೆ ಇದ್ದೀತು. ನಟನೇ ಹಾಡುಗಾರನಾದದ್ದೂ ಇದೇ ಕಾರಣದಿಂದ ಎನ್ನಬಹುದು. ಅಥವಾ ಹೀಗೆ ಹೇಳಬಹುದೇ? ಆದಿಮ ಕಲೆಯಲ್ಲಿ ಹಾಡು – ಕುಣಿತ – ಮಾತು ಇವು ಮೂರೂ ಜತೆಗಿದ್ದು, ಅಭಿನಯಿಸುವವರು ಮತ್ತು ನೋಡುವವರು ಎಂಬ ವಿಭಜನೆ ಇರಲಿಲ್ಲವಷ್ಟೆ. ನಿಧಾನವಾಗಿ ಪ್ರೇಕ್ಷಕವರ್ಗ ರೂಪುಗೊಂಡಿತು. ಹಾಡು ಮೇಳದವರದಾಯಿತು. ಮಾತು ಕುಣಿತಗಳೊಡನೆ ನಟ ಹೊರಗೆ ಬಂದನು. ಮುಂದವರಿದ ಹಂತದಲ್ಲಿ ನಟನೇ ಹಾಡು, ಮಾತು, ಅಭಿನಯಗಳಿಗೆ ಕೇಂದ್ರವಾದನು. ಇದೊಂದು ಬೆಳವಣಿಗೆ ಎನ್ನಬೇಕಲ್ಲವೆ?

(2) ಸಂಗೀತಗಾರರು ಮುಂದೆ ಬಂದದ್ದು ರಂಗಸ್ಥಳದಲ್ಲಿ ಆದ ಪರಿವರ್ತನೆಯಿಂದಾಗಿ. ಪರದೆಗಳು ರಂಗಪರಿಕರಗಳು ಬಯಲಾಟದ ರಂಗಕ್ಕೆ ಬಂದು ವಾದ್ಯಗಾರರು ಮುಂದೆ ಬಂದರು. ಪರದೆಗಳು ಬಂದದ್ದು ಕೂಡ ನಮ್ಮ ರಂಗಭೂಮಿಯ ದೃಷ್ಟಿಯಿಂದ ಗಮನಾರ್ಹ. ಪಾತ್ರಗಳು ತೆರೆದ ಬಯಲಿನಲ್ಲಿ ಕತ್ತಲಿನ ಹಿನ್ನಲೆಯಲ್ಲಿ ಆಕಾರ ತಳೆಯುತ್ತಿದ್ದ ಬಯಲಾಟದಲ್ಲಿ, ಪಾತ್ರಗಳಪರಿಸರ ಒಂದೋ ನೋಡುವವನಿಗೆ ಮುಖ್ಯವಾಗಿರಲಿಲ್ಲ, ಇಲ್ಲವೆ ನಟನ ಮಾತು ಮತ್ತು ಅಭಿನಯಗಳು ಅದನ್ನು ನಿರ್ಮಿಸುತ್ತಿತ್ತು. [2].

(3) ಪ್ರಯೋಗದ ಅಂಗವಾಗಿದ್ದ ಸಂಗೀತ ನಟನ ಜವಾಬ್ದಾರಿಯಾಗಿ ಕುಣಿತಕ್ಕೆ ಈಗ ಅವಕಾಶವಿಲ್ಲವಾಯಿತು, ಅಥವಾ ಅವಕಾಶ ಕಡಿಮೆಯಾಯಿತು. ವೃತ್ತಿರಂಗಭೂಮಿಯ ಗೀತೆಗಳ ಲಯಗಳು ಎಷ್ಟೋವೇಳೆ ಜನಪದ ಬಯಲಾಟಗಳ ಮಟ್ಟುಗಳೇ ಆಗಿದ್ದುದು ಗಮನಾರ್ಹ. ಅದಕ್ಕಿಂತ ಮುಖ್ಯವಾದ ವಿಷಯವೆಂದರೆ ಈಗ ಹಾಡು ನಿರ್ವಹಿಸುತ್ತಿದ್ದ ಕೆಲಸ–ಬಯಲಾಟದ ಹಾಡುಗಳು ಕಥಾನಾಯಕವೊಂದರ ಭಾಗಗಳೇ ಆಗಿದ್ದು ಪಾತ್ರಗಳು ತಮ್ಮ ಬಗ್ಗೆಯೇ ಉತ್ತಮ ಪುರುಷದಲ್ಲಿ ವಿವರ ನೀಡುವುದು ಸಾಮಾನ್ಯ.. ಹಾಡು ಮತ್ತು ಅರ್ಥವಂತಿಕೆ ಪರಸ್ಪರ ಜನಕ ಜನ್ಯ ಭಾವವನ್ನು ಹೊಂದಿರುತ್ತವೆ. ಎಂದರೆ ಪಾತ್ರದಾರಿಯ ಮಾತು ಆ ಮೊದಲಿನ ಹಾಡಿನ ವ್ಯಾಖ್ಯೆಯೂ ಆಗಿರುತ್ತಿತ್ತು. ವೃತ್ತಿರಂಗಭೂಮಿಯಲ್ಲಿ ಹಾಡು ಭಾವಸಮುಚ್ಚಯವನ್ನು ಅಭಿವಾಚಿಸಲು ಬಳಕೆಯಾಗುತ್ತದೆ. ತೀವ್ರತೆಯ ಎಲ್ಲ ಸಂದರ್ಭದಲ್ಲೂ ಹಾಡು ರೂಪುತಾಳುತ್ತದೆ. ಮತ್ತೆ ನಟನ ಸಂಭಾಷಣೆಯಲ್ಲಿ ಅದು ಗದ್ಯರೂಪವನ್ನು ತಾಳುವುದು. ಇದು ಖಂಡಿತವಾಗಿ ಅಭಿಜಾತರಂಗದ ಲಕ್ಷಣವಲ್ಲ. ಜನಪದರಂಗದ ಪ್ರಭಾವವೇ ಸರಿ.

(ಉ) ಪ್ರಯೋಗಗಳು ವೃತ್ತಿರಂಗಭೂಮಿಯಲ್ಲಿ ತೀರಾ ಇಕ್ಕಟ್ಟಾದ ಚೌಕಟ್ಟನ್ನು

ಅವಲಂಬಿಸುಸುವುದಿಲ್ಲ. ನಟರು ಪ್ರಯೋಗವನ್ನು ಅಲ್ಲಿಯೇ ಮೂಲ ದ್ರವ್ಯಗಳಿಂದ ನಿರ್ಮಿಸುತ್ತಾರೆ; ಮತ್ತು ಈ ನಿರ್ಮಿತಿಯೂ ಕೂಡ ಲೋಕಾಭಿರಾಮವಾಗಿ ನಡೆಯುತ್ತದೆ. ಇಲ್ಲಿಯೂ ಜನಪದ ರಂಗಭೂಮಿಯ ಲಕ್ಷಣಗಳೇ ಮುಂದುವರೆದಿರುವುದನ್ನು ಕಾಣುತ್ತೇವೆ. ನಟನೆ ಎಂಬುದು ಜನಪದ ರಂಗದಲ್ಲಿ ವಿಸ್ತೃತವಾದ ಆಂಗಿಕ ಚಲನೆಗಳು ಮಾತ್ರ. ಕತ್ತಲಿನ ತೆರೆದ ಬಯಲಿನ ಹಿನ್ನೆಲೆಗೆ ಈ ಚಲನೆಗಳು ಅತ್ಯವಶ್ಯವೇ ಸರಿ. ನಟ ಪಾತ್ರದ ಭಾವದೊಡನೆ ತನ್ಮಯನಾಗುವುದು ಒಂದು ಆರೋಪಿತಸ್ಥಿತಿ. ಹಾಗೆಂದುಕೊಂಡು ಆತನ ನಟನೆಯೇ ಬೇರೊಂದು ರೀತಿಯನ್ನು ತಾಳಬೇಕಾಗಿಲ್ಲ. ವೃತ್ತಿರಂಗ ಭೂಮಿಯಲ್ಲಿ ನಟ ತನ್ನ ನಿಕಟ ಪರಿಸರವನ್ನು ತಿಳಿಸುವ, ಪ್ರೇಕ್ಷರನ್ನು ಸಿದ್ಧಪಡಿಸುವ ಜವಾಬ್ದಾರಿಯನ್ನು ಪಡೆದದ್ದರಿಂದ ಆತನ ವಾಚಿಕಾಭಿನಯ ಹೆಚ್ಚು ಸ್ಫುಟಗೊಳ್ಳುತ್ತಾ ಹೋಗುತ್ತದೆ. ಹಿಗಿದ್ದರೂ ಇದು ಪೂರ್ಣ ಪ್ರಮಾಣದ ಪರಿವರ್ತನೆಯಲ್ಲ. ಇಲ್ಲಿ ನಟರಿಗೆ ಮಾದರಿಗಳು ಇನ್ನೂ ಜನಪದ ರಂಗದವೇ ಆಗಿರುವುದನ್ನು ಕಾಣುತ್ತೇವೆ. ಹಾಡುವಾಗಿನ ಅಭಿನಯ, ಕುಣಿತವನ್ನೂ ಬಿಟ್ಟ ಭಂಗಿಗಳು ಬಯಲಾಟದವೆ ಆಗಿರುತ್ತವೆ. ಈ ಮಾತಿಗೆ ವಿನಾಯತಿ ಎನಿಸುವ ನಟರೂ ಇರಲಿಲ್ಲವೆಂದಲ್ಲ. ಆದರೆ ಅವರು ವೃತ್ತಿರಂಗಭೂಮಿಯ ಪ್ರಬಲ ನಟನ ವಿಧಾನವನ್ನು ಪ್ರತಿನಿಧಿಸುವುದಿಲ್ಲ. ಈ ನಟರು ಆಂಗಿಕಾಭಿನಯದಲ್ಲಿ ಬಳಸುವ ಶೈಲೀಕೃತ ವಿಧಾನಗಳು ಜನಪದ ರಂಗದಿಂದಲೇ ಬಂದವು.

ಕರ್ನಾಟಕದ ವೃತ್ತಿರಂಗಭೂಮಿಯು ಜನಪದ ರಂಗಭೂಮಿಯ ಒಂದು ಹೊಸ ರೂಪವೆಂದು ಮೇಲಿನ ವಾದದಲ್ಲಿ ಸ್ಪಷ್ಟಗೊಳಿಸಲು ಯತ್ನಿಸಿದ್ದೇನೆ. ಇದು ಕೇವಲ ಅನಿವಾರ್ಯವೂ ಹೌದು. ವೃತ್ರಿರಂಗಭೂಮಿಗೆ ನಾಟಕವನ್ನು ಬರೆದವರಾಗಲೀ ನಟಿಸುವವರಾಗಲೀ ಪರಿಚಯಪಡೆದಿದ್ದ ರಂಗದ್ರವ್ಯಗಳೆಲ್ಲವೂ ಪಾಶ್ಚಾತ್ಯರಿಂದ, ಪಾರ್ಸಿ ರಂಗಭೂಮಿಯ ಮೂಲಕ ಬಂತೆಂದು ಅವಾಸ್ತವಾದ ಅತಿವಾದವನ್ನು ಹೂಡುವುದು ಉಪಯುಕ್ತವಲ್ಲವಷ್ಟೆ.

**(ಆ) ಹವ್ಯಾಸಿ ರಂಗಭೂಮಿ** (1) ಇದರಲ್ಲಿ ನಗರಗಳ ಹವ್ಯಾಸಿಗಳ ರಂಗಭೂಮಿಯಂತೆ ಹಳ್ಳಿಯ ಹವ್ಯಾಸಿಗಳ ರಂಗಭೂಮಿಯೂ ಒಂದಿದೆ. ಹಳ್ಳಿಯ ಹವ್ಯಾಸಿಗಳು ವರ್ಷಕ್ಕೊಮ್ಮೆ ಒಂದು ನಾಟಕವನ್ನು ಕಲಿತು ಆಡುವುದುಂಟಷ್ಟೆ. ವೃತ್ತಿರಂಗಭೂಮಿಯಲ್ಲಿ ಪ್ರಚಾರದಲ್ಲಿರುವ ಕೃತಿಯೊಂದನ್ನು ಕಲಿಯುವುದು ವಾಡಿಕೆ. ಇಲ್ಲಿಯೂ ಕಲಿಸುವವನಿಗೆ, ಅವನಿಗೆ ದೊರಕಿರುವ ನಟರ ಹಿನ್ನೆಲೆಯಲ್ಲಿ ಪ್ರಯೋಗವನ್ನು ತಾನೇ ನಿರ್ಮಿಸುವ ಅವಕಾಶವಿರುತ್ತದೆ. ಈ ಪ್ರಯೋಗಗಳಂತೂ ನಟನೆಯ ದೃಷ್ಟಿಯಿಂದ ಬಯಲಾಟದ ನೆರವನ್ನು ಪಡೆಯುತ್ತವೆ. ಇದೂ ಅಲ್ಲದೆ ಆಯ್ದ ನಾಟಕದ ಪಾತ್ರಗಳ ಹಂಚಿಕೆ; ನಾಟಕ ಪ್ರಯೋಗದವರೆಗೆ ಭಾಗಿಯಾಗುವವರ ಆರ್ಥಿಕ ಮತ್ತು ಸಾಮಾಜಿಕ ಸಂಬಂಧಗಳು ಮುಖ್ಯವಾಗುತ್ತವೆ. ನನಗೆ ಇದು ತುಂಬಾ ಮುಖ್ಯ ಸಂಗತಿ ಎನ್ನಿಸಿದೆ. ಪುರಾಣದ ಪಾತ್ರ ಘಟನೆಗಳೇ ಊರಿನ ಜನರ ನಡುವಣ ಸಂಬಂಧದಲ್ಲಿ ಪುನರ್ವ್ಯಾಖ್ಯಾನಗೊಂಡು ಜೀವಂತ ಪ್ರಕ್ರಿಯೆಗೆ ಒಳಗಾಗುವುದು ನಮ್ಮ ಜನಪದರ ನವೀನ ಸೃಜನಶೀಲತೆಯ ದಿಕ್ಕುಗಳನ್ನು ತೋರಿಸಬಲ್ಲುದು. ಈ ಮಾತನ್ನು ಸಮರ್ಥಿಸಲು ಇಲ್ಲಿ ಹೆಚ್ಚು ಅವಕಾಶವಿಲ್ಲ. ರಾಜನ ಪಾತ್ರ, ಕೃಷ್ಣನ ಪಾತ್ರ, ಅರ್ಜುನನ ಪಾತ್ರ,

ರಾಮನ ಪಾತ್ರ ವಹಿಸುವವರು ಮತ್ತು ಅವರ ಮೂಲಕ ಆ ಪಾತ್ರವನ್ನು ಗ್ರಹಿಸುವವರು ತಮ್ಮ ಜೀವನಕ್ರಮವನ್ನೆ ವ್ಯಾಖ್ಯಾನಿಸಿಕೊಳ್ಳುತ್ತಿರುವ ಬಗೆಯೂ ಹೌದಲ್ಲವೇ? ಈ ಬಗ್ಗೆ ಸಾಕಷ್ಟು ಅಭ್ಯಾಸ ಮತ್ತು ಚರ್ಚೆ ಅವಶ್ಯವೆನಿಸುತ್ತದೆ.

(2) ಈ ಮೊದಲು ಹೇಳಿದ ಆಧುನಿಕ ರಂಗಭೂಮಿಯ ಲಕ್ಷಣಗಳೇನಾದರೂ ಪೂರ್ಣರೂಪದಲ್ಲಿ ಅನ್ವಯಿಸುವುದಿದ್ದರೆ ಅದು ನಗರಗಳಲ್ಲಿ ರೂಪುಗೊಂಡ ಹವ್ಯಾಸಿರಂಗಭೂಮಿಗೆ ಎನ್ನಬೇಕು. ಈ ರಂಗಭೂಮಿ ಲಿಖಿತ ನಾಟಕಗಳ ದೃಶ್ಯ ರೂಪವನ್ನು ರೂಪಿಸಲು ಯತ್ನಿಸಿದವು. ಪ್ರಯೋಗದ ನಿರ್ಮಾತೃವೊಬ್ಬ ಈಗ ಸೃಷ್ಟಿಯಾಗುತ್ತಾನೆ. ನಿರ್ದೇಶಕ ಲಿಖಿತ ನಾಟಕದಲ್ಲಿ ದೊರಕುವ ದ್ರವ್ಯದೊಡನೆ ವಿಶಿಷ್ಟವೆನ್ನಲಾಗುವ ಪ್ರಯೋಗವನ್ನು ರೂಪಿಸುವುದುಂಟು. ಆದರೆ ನಮ್ಮ ಹವ್ಯಾಸಿ ರಂಗದ ನಾಟಕಕಾರರು ಮತ್ತು ನಿರ್ದೇಶಕರು ಮೊದಮೊದಲಂತೂ ವೃತ್ತಿರಂಗವನ್ನು, ಜನಪದ ರಂಗವನ್ನು ಗೇಲಿ ಮಾಡಿಯೇ ಹೊರಟವರು. ಶಿಕ್ಷಣ ಮತ್ತು ಇತರ ದೇಶಗಳ ರಂಗಭೂಮಿಗಳ ಪರಿಚಯ ಹೊಸಬಗೆಗಾಗಿ ಹುಡುಕಾಟ ನಡೆಸುವಂತೆ ಮಾಡಿತು. ನಟನ ವಾಚಿಕಾಭಿನಯವೆಷ್ಟು ಶಿಸ್ತಿಗೆ ಒಳಪಡುತ್ತಿತ್ತೊ ಅಷ್ಟೇ ಅವನ ಆಂಗಿಕ ಅಭಿನಯವೂ ಕೂಡ. ಎಲ್ಲ ಘಟಕಗಳೂ ಕೂಡ ಒಂದು ಅರ್ಥಪೂರ್ಣ ಚಿತ್ರದ ನಿರ್ಮಾಣಕ್ಕಾಗಿ ದುಡಿಯಬೇಕೆಂಬ ಸೂತ್ರ ಇಲ್ಲಿ ಮುಖ್ಯ. ನಟರ ಪರಸ್ಪರ ಚಲನವಲನ, ಮಾತುಗಳ ಏರಿಳಿತ, ಮೌನ, ಬೆಳಕಿನ ವ್ಯವಸ್ಥೆ, ಹಿನ್ನೆಲೆಯ ಸಂಗೀತ ಇವು ರಂಗಪರಿಕರಗಳ ಜತೆ ನಿಯೋಗಾತ್ಮಕವಾದವು. ಇದೆಲ್ಲವೂ ಸಂಪೂರ್ಣವಾಗಿ ಹೊಸದು.

ನಟರು ಆಡುವ ಮಾತುಗಳು ಪಾತ್ರಗಳೇ ಆಡುವ ಮಾತುಗಳಾಗದೆ, ಪಾತ್ರಗಳ ಮೂಲಕ ನಾಟಕಕಾರ ಕಾಣಿಸುತ್ತಿರುವುದನ್ನು ಸೂಚಿಸುತ್ತವೆ. ಎಂದರೆ ನಟರು ಪಾತ್ರಗಳು ಪಾರದರ್ಶಕ ವಸ್ತುಗಳಾದರು. ಅಂತಹ ಒಂದು ಉದಾಹರಣೆ ನೋಡಿ. 'ತುಘಲಕ್' ನಾಟಕದಲ್ಲಿ ತುಘಲಕನು 'ಒಂದು ಕಡೆ' ನೆಲದಲ್ಲಿ ಬೇರು ಬಿಡುವ ಮುನ್ನ ಆಕಾಶದಲ್ಲಿ ಟೊಂಗೆ ಬಿಟ್ಟವನು' ತಾನೆಂದು ತನ್ನನ್ನು ವರ್ಣಿಸಿಕೊಳ್ಳುತ್ತಾನೆ. 'ಯಯಾತಿ' ನಾಟಕದಲ್ಲಿ ಯಯಾತಿಯೂ ಕೂಡ ಹೇಳುವ ಒಂದು ಮಾತು ಹೀಗಿದೆ' 'ಬೆಳಕಿಲ್ಲದ ದಾರಿಯಲ್ಲಿ ಹೋಗಬಹುದು ಆದರೆ ಕನಸುಗಳಿಲ್ಲದ ದಾರಿಯಲ್ಲಿ ನಾ ಹೋಗಲಾರೆ'. ಈ ಮಾತುಗಳು, ಪಾತ್ರಗಳ ಮೂಲಕ ನಾಟಕಕಾರರು ಹೇಳುತ್ತಿರುವಂತಿದೆ. ಎಂದರೇನಾಯ್ತು ನಟ ಈ ಮಾತುಗಳನ್ನು ಆಡಿ ತೋರಿಸಿದಾಗ ಆತನ ಗುರಿ ಮತ್ತು ನೋಡುವವನ ಗುರಿ ಭಾಷಾ ಆಕೃತಿಯನ್ನು ಗ್ರಹಿಸುವುದೇ ಆಗಿರುತ್ತದೆ. ಇದು ಪಾರಂಪರಿಕ ರಂಗಭೂಮಿಗೆ ತೀರಾ ಅಪರಿಚಿತವಾದದ್ದು.

(ಇ) **ಪ್ರೇಕ್ಷಕನ ಸಮಸ್ಯೆ** : ಬಯಲಾಟದ ಪ್ರೇಕ್ಷಕನಿಗೆ ನಡೆಯುವ ಕತೆ ಹೊಸದೇ ಆಗಿರುವುದಿಲ್ಲ. ಆದರೆ ಪ್ರಯೋಗದ ಮೂಲಕ ಮತ್ತೆ ತನ್ನ ಅಭಿರುಚಿಗೆ ತಕ್ಕಂತೆ ಪುನಾರೂಪಿಸಿಕೊಳ್ಳುತ್ತಾನೆ. ಆತ ತನ್ನ ಅನುಭವವನ್ನು ನವೀಕರಿಸಿಕೊಳ್ಳುವ ಈ ಕ್ರಿಯೆಯಲ್ಲಿ ಆಯ್ಕೆಯ ಅವಕಾಶವನ್ನು ಉಳಿಸಿಕೊಂಡಿರುತ್ತಾನೆ. ಅಂದರೆ ಮಾತಾಡುವ, ನಿದ್ದೆಮಾಡುವ, ಹರಟೆ ಹೊಡೆಯುವ, ಎದ್ದು ಹೋಗುವ, ಮತ್ತೆ ಬರುವ ಅವಕಾಶವೆಲ್ಲ

ಇದ್ದೇ ಇರುತ್ತದೆ. ಆಧುನಿಕ ರಂಗಭೂಮಿಯಲ್ಲಿ ಈ ಜನಪದ ರಂಗದ ಪ್ರೇಕ್ಷಕನ ಸ್ವರೂಪ ಕೊಂಚ ಬೇರೆ. ವೃತ್ತಿನಾಟಕಗಳ ಪ್ರೇಕ್ಷಕನಿಗೆ ಮೇಲೆ ಹೇಳಿದ ಅವಕಾಶಗಳು ಇದ್ದೇ ಇರುತ್ತವೆ. ಆದರೆ ಪ್ರಮಾಣ ಕೊಂಚ ಕಡಿಮೆ. ಇಲ್ಲಿಯೂ ಆತ ತನ್ನೊಳಗಿನ ಜನಪದ ನಾಯಕರುಗಳನ್ನು ಕಾಣುತ್ತಿರುತ್ತಾನೆ. ನಮ್ಮ ವೃತ್ತಿ ರಂಗಭೂಮಿಯ ಮಹಾನ್ ನಟರುಗಳು ಕರ್ನಾಟಕದ ಜನಪದ ಸೃಷ್ಟಿಸಿದ ನಾಯಕರುಗಳು ; ಸೃಜನಶೀಲ ಜನಪದದ ರೂಪಿಸಿದ ಆಕೃತಿಗಳು. ಇವೆಲ್ಲದರ ಜತೆಗೆ ಊರಿಗೆ, ಊರಿನ ಸುತ್ತಮುತ್ತಲ ಪ್ರದೇಶಕ್ಕೆ ಹೆಸರಾದ, ಒಂದೊಂದು ಪಾತ್ರದೊಡನೆ ಗುರುತಿಸಲಾಗುವ ಜನಪದ ನಾಯಕರುಗಳು ಇರುತ್ತಾರೆ. ಎಂದರೆ ಪ್ರೇಕ್ಷಕರಿಗೆ ಜನಪದ ರಂಗಭೂಮಿಯಲ್ಲಿ ಹಾಗೂ ವೃತ್ತಿರಂಗಭೂಮಿ ಮತ್ತು ಹಳ್ಳಿಯ ಹವ್ಯಾಸಿ ರಂಗಭೂಮಿಯಲ್ಲಿ ದೊರಕುವ ಅನುಭವ ಪ್ರಮಾಣದಲ್ಲಿ ವ್ಯತ್ಯಾಸವಿರಬಹುದೇ ಹೊರತು, ಗುಣಾತ್ಮಕ ವ್ಯತ್ಯಾಸವನ್ನು ಪಡೆದಿರುವುದಿಲ್ಲ.

ಆದರೆ ಇದೇ ಮಾತನ್ನು ಕಲಿತ ಪ್ರೇಕ್ಷಕರನ್ನು ಗಮನಿಸಿ ಹೇಳಲು ಸಾಧ್ಯವಿಲ್ಲ. ಓದಿದವರು ಜನಪದ ಪ್ರೇಕ್ಷಕರಂತೆ ಉಳಿಯಲಾರರು. ಇದಕ್ಕೆ ಕಾರಣ ಅವರ ಅಭಿರುಚಿ ಪರಿಷ್ಕೃತವಾಗಿರುವುದು ಒಂದು ಸಾಮಾನ್ಯವಾದ ತಿಳುವಳಿಕೆ. ಇಲ್ಲಿ ಪರಿಷ್ಕೃತ ವಾಗಿರುವುದು ಎಂಬ ಮಾತಿನ ಅರ್ಥವ್ಯಾಪ್ತಿಯ ಮೇಲೆ ಈ ತಿಳಿವಳಿಕೆಯ ಸತ್ಯಾಸತ್ಯ ನಿರ್ಧಾರವಾಗಬೇಕು. ಆದರೆ ನೋಡುವವರು ಕಲಿತ ಕೆಲವು ವಿಚಾರಗಳು, ಪಡೆದ ಅನುಭವಗಳು ಅವರನ್ನು ಪ್ರೇಕ್ಷಕ ಸಮೂಹದಲ್ಲಿ ಒಬ್ಬಂಟಿಯನ್ನಾಗಿ ಮಾಡುತ್ತವೆ. ಇದು ನಮ್ಮ ಸಮಾಜದ ಒಂದು ಲಕ್ಷಣವೇ ಆಗುವುದರಿಂದ ಇಲ್ಲಿ ಅದನ್ನು ಪ್ರತ್ಯೇಕವಾಗಿ ಚರ್ಚಿಸಬೇಕಿಲ್ಲವೆಂದು ತೋರುತ್ತದೆ.

ನಗರ ಹವ್ಯಾಸಿ ರಂಗಭೂಮಿಯ ಪ್ರೇಕ್ಷಕರ ಅನುಭವವೇ ಬೇರೆ. ನಿರ್ದೇಶಕ ಕೇವಲ ಪ್ರಯೋಗದ ಲಕ್ಷಣವನ್ನು ಮಾತ್ರವಲ್ಲ. ಪ್ರೇಕ್ಷಕರ ಪ್ರತಿಕ್ರಿಯೆಯನ್ನೂ ನಿರ್ದೇಶಿಸುತ್ತಿರುತ್ತಾರೆ. ಉತ್ತಮ ಪ್ರಯೋಗದಲ್ಲಿ ಪ್ರೇಕ್ಷಕರನ್ನೂ ಆದಷ್ಟು ಕಟ್ಟಿಡುವುದರಲ್ಲಿ ಯಶಸ್ಸನ್ನು ಪಡೆಯಬೇಕಾಗುತ್ತದೆ.

ಹವ್ಯಾಸಿ ನಾಟಕ ಪ್ರಯೋಗಗಳ ಹಳ್ಳಿಯು ಪ್ರೇಕ್ಷಕರ ಎದುರಿಗೆ ತಾವೇ ಏಕಾಕಿತನದ ಅನುಭವವನ್ನು ಪಡೆಯುತ್ತವೆ. ಕೇವಲ ವಾಚಿಕಾಭಿನಯದಲ್ಲಿ ಮತ್ತು ಅತಿ ಸೂಕ್ಷ್ಮವಾದ ಆಂಗಿಕ ಅಭಿನಯದಲ್ಲಿ ಪ್ರೇಕ್ಷಕರನ್ನು ಅಲ್ಲಿ ಹಿಡಿದಿಟ್ಟು ಕೊಳ್ಳುವುದು ಅಸಾಧ್ಯವೇ ಸರಿ. ಈ ಅಂಶ ನಮ್ಮ ಹವ್ಯಾಸಿ ರಂಗಭೂಮಿಯಲ್ಲಿ ಒಂದು ಪರಿವರ್ತನೆಗೆ ಕಾರಣವಾಗಿದೆ. ಜತೆಗೆ ಪ್ರಯೋಗಗಳು ನಟರಿಗೆ ಒದಗಿಸುವ ಇಕ್ಕಟ್ಟು ಅಸಹನೀಯವೂ ಆಗುವುದರಿಂದ ಹವ್ಯಾಸಿಗಳು ನಿಧಾನವಾಗಿ ಬದಲಾಗುತ್ತಾರೆ. ಈ ಬದಲಾವಣೆ ' ಅತಿ-ಹವ್ಯಾಸಿ' ಮತ್ತು 'ಜನಪದ ರಂಗಭೂಮಿ (ಉದ್ದೇಶಿತ ಅಥವಾ ಬದ್ಧ)ಗೆ ಕಾರಣವಾಗಿದೆ. ಇವೆರಡೂ ಒಂದೇ ಬಗೆಯ ರಂಗಭೂಮಿಯಲ್ಲ. ಅರೆಹವ್ಯಾಸಿಗಳ ಪ್ರಯೋಗಗಳ ಮುಕ್ತತೆಯನ್ನೂ ಬಯಸುವವರು. ಬಂಧವನ್ನು ಸಡಿಲವಾಗಿಡಬಯಸುವವರು. ಪ್ರೇಕ್ಷಕ ವರ್ಗವನ್ನು ಹೆಚ್ಚಿಸಿಕೊಳ್ಳ ಬಯಸುವವರು. ಜನಪದ ರಂಗಭೂಮಿಯನ್ನು ಮೂಲಭೂತವಾಗಿ ಒಂದು ಸಾಧನವನ್ನಾಗಿ ಮಾಡಲು ಬಯಸುತ್ತಾರೆ. ನಾನು ಈ ಮಾತನ್ನು ತೀರಾ ಸರಳಗೊಳಿಸಲು ಪ್ರಯತ್ನಿಸಿ ಹೇಳಿದ್ದಲ್ಲ. [4]

ಎಂದರೆ ಪ್ರೇಕ್ಷಕರನ್ನು ಸೃಷ್ಟಿಸಲು, ವಿಸ್ತರಿಸಲು ಬದಲಾದ ರಂಗಪದ್ಧತಿಯನ್ನು ರೂಪಿಸುವ ಯತ್ನವನ್ನು ಮಾಡಲು ತೊಡಗಿವೆ.

ಗಮನಿಸಬೇಕಾದ ಅಂಶವೆಂದರೆ ಇವೆರಡೂ ಪ್ರಯತ್ನಗಳು ಕಳೆದ ಹತ್ತು ವರ್ಷಗಳ ಕನ್ನಡ ರಂಗಭೂಮಿಯಲ್ಲಿ ನಡೆಯುತ್ತ ಬಂದಿವೆ. ಮತ್ತು ಎರಡೂ ಪ್ರಯತ್ನಗಳು ಒಂದಿಲ್ಲೊಂದು ಬಗೆಯಲ್ಲಿ ಜನಪದ ರಂಗಭೂಮಿಯನ್ನು ಎಚ್ಚರದಿಂದ 'ಬಳಸಿಕೊಳ್ಳುವ' ಪ್ರಯತ್ನದಲ್ಲಿ ತೊಡಗಿವೆ. ಇದು ಹಲವು ಮುಖಗಳನ್ನು ಪಡೆದಿದೆ ಎನ್ನಬಹುದು.

(೧) ಪಿ. ಲಂಕೇಶರ 'ತೆರೆಗಳು' ಎಂಬ ನಾಟಕವನ್ನು ಸುಮಾರು ಹತ್ತು ವರ್ಷಗಳ ಹಿಂದೆ ಬಯಲಾಟದ ರೂಪಕ್ಕೆ ಪರಿವರ್ತಿಸಿ ಅಭಿನಯಿಸಿ ತೋರಿಸುವ ಒಂದು ಪ್ರಯತ್ನ ನಡೆಯಿತು. ಎಂದರೆ ಲಿಖಿತ ನಾಟಕವೊಂದರ ಪ್ರಯೋಗಕ್ಕೆ ಜನಪದ ಪರಿಕರಗಳನ್ನು ಬಳಸುವ ಯತ್ನ ನಡೆಯಿತು. ಹಾಡು, ಕುಣಿತಗಳು ಅಲ್ಲಿ ಪ್ರವೇಶಿಸಿದವು. ಹಾಡುಗಳು, ಮತ್ತು ವ್ಯಕ್ತಿಯನ್ನು ವಿಟ್ಟಿ, ಕಂಠಿ, ಕಿಟ್ಟಿ ಈ ಮೂವರು ಹಿಂಸಿಸುತ್ತಾ ನಡೆಯುವುದು ಸಂಗ್ಯಾಬಾಳ್ಯಾ ಬಯಲಾಟದಿಂದ ಪ್ರೇರಣೆಯನ್ನು ಪಡೆದಿತ್ತು. ಇಲ್ಲಿಂದ ಮುಂದೆ ಲಿಖಿತ ನಾಟಕಗಳನ್ನು ಬಯಲಾಟದ ತಂತ್ರದಲ್ಲಿ ಪ್ರಯೋಗಿಸುವ ಬಗೆ ಮುಂದುವರಿದಿದೆ.

(೨) ಇದಲ್ಲದೆ ನಾಟಕಕಾರನೇ ತನ್ನ ವಾಚಿಕವನ್ನು ಬಯಲಾಟದ ತಂತ್ರಗಳನ್ನು ಬಳಸಿ ರಚಿಸುವ ಪ್ರಯತ್ನಗಳು ನಡೆದಿವೆ. ಬಯಲಾಟದ ಶೈಲೀಕೃತ ರಂಗಪದ್ಧತಿಗಳನ್ನು ಪ್ರೇಕ್ಷಕನಿಗಾಗಿ ಸಾಂಕೇತಿಕ ಅರ್ಥದೊಡನೆ ಬಳಸುವ ಜೋಕುಮಾರ ಸ್ವಾಮಿ, ಋಷ್ಯಶೃಂಗ, ಹಯವದನ ಮೊದಲಾದ ನಾಟಕಗಳು ಮೊದಮೊದಲು ರಚನೆಯಾದುವು.[5] ಇಲ್ಲಿ ಜನಪದ ರಂಗಭೂಮಿಯ ಉದ್ದೇಶ ಹಾಗೇ ಉಳಿಯುವುದಿಲ್ಲ. ಪ್ರೇಕ್ಷಕನ ಅನುಭವವನ್ನು ವಿಸ್ತರಿಸುವ ಅಂಶವಾಗಿಬಿಡುತ್ತದೆ. ಆದ್ದರಿಂದ ಜನಪದ ರಂಗಭೂಮಿ ಆಧುನಿಕ ರಂಗಭೂಮಿಗೆ ದ್ರವ್ಯವನ್ನು ಒದಗಿಸುತ್ತದೆ ಎನ್ನಬಹುದೇ ಹೊರತು ತನ್ನ ಸಾಧ್ಯತೆಯನ್ನ ಸೃಷ್ಟಿಶೀಲವಾಗಿ ಅನ್ವೇಷಿಸುತ್ತದೆ ಎನ್ನುವಂತಿಲ್ಲ. ಈ ಬಗ್ಗೆಯೂ ಸಾಕಷ್ಟು ಚರ್ಚೆ ಸಾಧ್ಯವಿದೆ.

ಕಂಬಾರರೇ ಒಂದು ಕಡೆ ಬಯಲಾಟ ಇನ್ನು ಮುಂದೆ ಉಳಿಯುವುದಾದರೆ ನಗರ ಪ್ರೇಕ್ಷಕರಿಂದ ಎಂದಿದ್ದಾರೆ. (ಕಂಬಾರ, ಚಂದ್ರಶೇಖರ : ೧೯೭೩ ಪು. ೧೨) ಅವರು ತಾವು ಬಯಲಾಟದ ತಂತ್ರಗಳನ್ನು ತಮ್ಮ ನಾಟಕಗಳಲ್ಲಿ ಬಳಸುವ ಉದ್ದೇಶಗಳ ಹಿನ್ನೆಲೆಯಲ್ಲಿ ಈ ಮಾತು ಹೇಳಿದ್ದಾರೆ. 'ಜನಪದ ರಂಗ ಪ್ರಕಾರಗಳ ಅನುಸಂಧಾನದ' ಮೂಲಕ ಸ್ಪಷ್ಟ ರಂಗಕಲ್ಪನೆಯನ್ನೂ ರೂಢಿಸಬೇಕೆಂದು ಶ್ರೀ ಸುಬ್ಬಣ್ಣ ಕೂಡ ಹೇಳುತ್ತಾರೆ (ಸುಬ್ಬಣ್ಣ ಕೆ.ವಿ. ೧೯೭೮ ಪು. ೮೫).

ನಾಟಕಕಾರರು ಮತ್ತು ಪ್ರಯೋಗಕಾರರು ಈ ಮಾತುಗಳನ್ನು ಹೇಳಿರುವುದು. ಗಮನಾರ್ಹ. ಆಧುನಿಕ ರಂಗಭೂಮಿಯ ವಿಸ್ತರಣೆಗೆ ಮತ್ತು ಜೀವಂತಿಕೆಗೆ ನಡೆಯಬೇಕಾದ ಪ್ರಯತ್ನಗಳೇ ಅವರ ಗಮನದಲ್ಲಿದೆ ಎಂಬುದು ನಿಶ್ಚಯವಾಗಿದೆ.

ಇದಲ್ಲದೆ ಮತ್ತೆರಡು ಬಗೆಗಗಳಲ್ಲಿ ಜನಪದ ರಂಗವನ್ನು ಬಳಸುವ ಯತ್ನ ನಡೆದಿದೆ

(i) ಸಮೂಹಮಾಧ್ಯಮವನ್ನಾಗಿ ಬಳಸುವುದು.

(ii) ರಕ್ಷಿಸುವುದು.

ಸಮೂಹಮಾಧ್ಯಮವನ್ನಾಗಿ ಜನಪದ ರಂಗವನ್ನು ಬಳಸುತ್ತಿರುವ ಬಗೆಗೆ ಪ್ರತ್ಯೇಕ ಸಂಬಂಧವೇ ಮಂಡಿತವಾಗಿರುವುದರಿಂದ ನಾನಿಲ್ಲಿ ಅದನ್ನು ಚರ್ಚಿಸುವುದಿಲ್ಲ.

ಈಗೀಗ ಜನಪದ ರಂಗಭೂಮಿಯನ್ನು ರಕ್ಷಿಸುವ ಮಾತು ಕೇಳಿಬರುತ್ತಿದೆ. ಪ್ರಯತ್ನಗಳೂ ನಡೆದಿವೆ. ಮೇಳಗಳನ್ನು ಕರೆಸಿ ನಗರಗಳಲ್ಲಿ, ಭಾಷೆ ತಿಳಿಯದ ರಾಜ್ಯಗಳಲ್ಲಿ ಪ್ರದರ್ಶನಗಳನ್ನು ಏರ್ಪಡಿಸಲಾಗುತ್ತಿದೆ. ಜನಪದ ರಂಗಕ್ಕೂ, ಜನಪದ ರಂಗದ ನಿಜವಾದ ಪ್ರೇಕ್ಷಕರಿಗೂ ನಡುವೆ ಕೊಂಡಿ ಕಳಚಿ ಭಿನ್ನ ಮನೋವೃತ್ತಿಯ ನಗರದವರ ಮುಂದೆ ಬಯಲಾಟಗಳನ್ನು ಇಡುತ್ತಿರುವುದು ನಮ್ಮ ವಿದ್ಯಾವಂತರ ಮನೋವೃತ್ತಿಯನ್ನು ಎತ್ತಿ ಹೇಳುತ್ತದೆ. ಇದು ಬಯಲಾಟವನ್ನು ಜೀವಂತಿಕೆ ಕಳೆದುಕೊಂಡ, ಪ್ರೇಕ್ಷಕರನ್ನು ಕಳೆದುಕೊಂಡ ರಂಗ ಪ್ರಕಾರವೆಂದು ಭಾವಿಸಿದ್ಧರ ಪರಿಣಾಮ. ಇದು ವಾಸ್ತವವೇ ಇದ್ದೀತು. ಆದರೆ ಬಯಲಾಟದ ಸ್ಥಗಿತಕೊಂಡ ಸ್ಥಿತಿಯಲ್ಲಿ ಅದನ್ನು ಪ್ರದರ್ಶನದ ವಸ್ತುವನ್ನಾಗಿ ಪರಿವರ್ತಿಸಿರುವುದು ಎಷ್ಟು ಸರಿ ಎಂಬುದು ಆಲೋಚಿಸಬೇಕಾದ ವಿಷಯವಾಗಿದೆ.

ಜನಪರ ರಂಗಭೂಮಿಗೂ, ಜನಪದರಂಗಭೂಮಿಗೂ ಇರುವ ಅಂತರ್ಸಂಬಂಧದ ಬಗ್ಗೆ ನಾನು ಖಚಿತವಾಗಿ ಏನನ್ನು ಹೇಳುವ ಸ್ಥಿತಿಯಲ್ಲಿ ಇಲ್ಲ. ಇಲ್ಲಿ ನಡೆಯಬಹುದಾದ ಚರ್ಚೆಯ ಹಿನ್ನೆಲೆಯಲ್ಲಿ ಆ ಬಗೆಗೆ ಕೆಲವು ವಿಚಾರಗಳನ್ನು ಈ ಪ್ರಬಂಧದಲ್ಲಿ ಸೇರಿಸುವ ಆಸೆ ನನಗಿದೆ.

**ಗ್ರಂಥ ಋಣ**

1. ಆದ್ಯರಂಗಾಚಾರ್ಯ : ಭಾರತೀಯ ರಂಗಭೂಮಿ, 1977

2. ಕುರ್ತಕೋಟಿ ಕೆ.ಡಿ : ಯುಗಧರ್ಮ ಮತ್ತು ಸಾಹಿತ್ಯ, 1962

3. ಚಂದ್ರಶೇಖರ ಕಂಬಾರ : 'ಜನಪದ ನಾಟಕ' : 'ಕನ್ನಡ ನಾಟಕ ; ಪರಂಪರೆ ಮತ್ತು ಪ್ರಯೋಗ 1973

4. ಸುಬ್ಬಣ್ಣ ಕೆ.ವಿ. : ಜಾನಪದ ಸಾಹಿತ್ಯ ದರ್ಶನ – 3 (ಕರ್ನಾಟಕ ವಿಶ್ವವಿದ್ಯಾಲಯ) "ಅಧ್ಯಕ್ಷರ ಭಾಷಣ, ಗೋಷ್ಠಿ : 1" – 1978.

1. ಜಾನಪದವೆಂದರೆ ನಶಿಸಿಹೋಗುತ್ತಿರುವ ಕಲೆಗಳ ಆಗರವೆಂಬ ಮಾತನ್ನು ಮೇಲಿಂದ ಮೇಲೆ ಕೇಳುತ್ತೇವೆ. ಹೇಗಾದರೂ ಮಾಡಿ ಅದನ್ನು ಸಂಗ್ರಹಿಸಿ, ಸಂರಕ್ಷಿಸಿ, ಪುರೋಭಿವೃದ್ಧಿಗೆ ತರಬೇಕೆಂಬ ಪ್ರಯತ್ನಗಳು ನಡೆದಿವೆ ಎನ್ನಬೇಕು. ಇದು ಮೂಲ ಭೂತವಾಗಿ ವಸಾಹತುಷಾಹಿ ಶಿಕ್ಷಣ

ಪದ್ಧತಿ ನಮ್ಮಲ್ಲಿ ರೂಢಿಗೊಳಸಿರುವ ದೃಷ್ಟಿಕೋನ. ನಶಿಸಿಹೋಗುತ್ತಿದೆ ಎಂದು ನಾವು ಭಾವಿಸುತ್ತಿರುವುದು ನಿಜವಾಗಿ ಪಡೆಯುತ್ತಿರುವ ಹೊಸ ರೂಪುಗಳನ್ನು ಗುರುತಿಸಲಾರದೆ ಆಗುತ್ತಿರುವ ತಪ್ಪಿದೆಂದು ನನ್ನ ಅಭಿಪ್ರಾಯ. ಅಥವಾ ಜಾನಪದದ ಪ್ರಕ್ರಿಯಾತ್ಮಕ ನೆಲೆಗಳಲ್ಲಿ ಬೆರೆಯಲಾಗದೆ ಹೊರನಿಂತಿರುವುದೂ ಇದಕ್ಕೆ ಕಾರಣವಿದ್ದೀತು. ಈ ಏಕಾಕಿತನ ನಮ್ಮ ಅಧ್ಯಯನ ಪಟುಗಳ ಮಟ್ಟಿಗೆ ನಿಜವೇ ಸರಿ. ಆದರೆ ತಮ್ಮ ಸಂವೇದನೆಗಳಿಂದ ಜಾನಪದದ ಎಷ್ಟು ಸರಿ ಎಂಬುದನ್ನು ಚರ್ಚಿಸಬೇಕಾಗಿದೆ. ಗುಣಾತ್ಮಕ ಪರಿವರ್ತನೆಯ ಪ್ರಮಾಣವು ಶೂನ್ಯವೆನ್ನಬಹುದಾದ ಪ್ರಾಣಿವರ್ಗವನ್ನು ನಾಶವಾಗುವ ಸಂತತಿ ಎಂದು ಪರಿಗಣಿಸಿ ಶೂನ್ಯವೆನ್ನಬಹುದಾದ ಪ್ರಾನಿವರ್ಗವನ್ನು ನಾಶವಾಗುವ ಸಂತತಿ ಎಂದು ಪರಿಗಣಿಸಿಬಹುದೇ? ಚರ್ಚಿಸಬೇಕು. ಆದ್ದರಿಂದ ಈ ಪ್ರಬಂಧದಲ್ಲಿ ಆಧುನಿಕವೆಂಬ ಪ್ರಚಲಿತ ಸಂಬಂಧಗಳನ್ನು ಗುರುತಿಸಲು ಯತ್ನಿಸಿದ್ದೇನೆ. ಎಂದರೆ ಈ 'ಎರಡೂ ಬಗೆಯಗಳನ್ನೂ ಕಾಣುವುದು ಇಲ್ಲಿ ಮುಖ್ಯವಾಗಿದೆ – ಮೊದಲು ಈವರೆಗೆ ಈ ಸಂಬಂಧದಲ್ಲಿ ನಡೆದಿರುವ ಚರ್ಚೆಯನ್ನು ಸಂಗ್ರಹಿಸುತ್ತೇನೆ. ಅನಂತರ ಒಂದು ಚಆರಿತ್ರಿಕ ಬೆಳವಣಿಗೆಯನ್ನು ಗುರುತಿಸಿ ಕೊನೆಗೆ ಕೆಲವು ಸಮಸ್ಯೆಗಳೊಡನೆ ಪ್ರಬಂಧವನ್ನು ಕೊನೆಗೊಳಿಸುತ್ತೇನೆ.

2. ರವಿವರ್ಮ ಪೌರಾಣಿಕ ಪಾತ್ರಗಳನ್ನು ಚಿತ್ರಗಳಲ್ಲಿ ಚಿತ್ರಿಸುವಾಗ ಶೈಲೀಕೃತ ಹಿನ್ನೆಲೆಯನ್ನು ಅಥವಾ ಶೂನ್ಯ ಹಿನ್ನೆಲೆಯನ್ನು ತೊರೆದು 'ವಾಸ್ತವ'ದ ವಿವರಗಳನ್ನು ಬಳಸಿದವನಿರಬೇಕು. ಬೆಟ್ಟ ಗುಡ್ಡ, ಕಾಡು ಮೇಡು, ಮೋಡ, ಹಕ್ಕಿಗಳು, ಮನೆಗಳು ರಸ್ತೆಗಳು ಮುಂತಾದ ವಿವರಗಳನ್ನು ಆತ ತನ್ನ ಪಾತ್ರಗಳ ಹಿನ್ನೆಲೆಯಲ್ಲಿ ಬರೆದನು. ಇದರ ಮೂಲ ಯಾವುದೋ ನನಗೆ ತಿಳಿಯದು. ಆದರೆ ಇದರಿಂದಾಗಿ ಪೌರಾಣಿಕ ಪಾತ್ರ ಪರಿಸರಗಳು ಒಂದು ಸ್ಥಳ ಮತ್ತು ಆಕಾರಕ್ಕೆ ಖಚಿತಗೊಂಡಿದ್ದಂತೂ ನಿಜ ನಮ್ಮ ವೃತ್ತಿರಂಗಭೂಮಿಯ ಆಹಾರ್ಯವನ್ನು ನಿರ್ದೇಶಿಸುವ ಮಟ್ಟಿದೆ ಇದ್ದ ಪರಿಣಾಮಕಾರಿಯಾಯಿತೆನ್ನಬಹುದು ರಂಗಪ್ರಯೋಗದಲ್ಲಿ ಹೊಸದಾಗಿ ಸೇರಿದ ಈ ವಿಸ್ತೃತ ಆಹಾರ್ಯ ನಟನೆಯ ಸ್ವರೂಪವನ್ನೇ ಬದಲಾಯಿಸಿತೆನ್ನಬೇಕು. ಈ ಅಂಶವನ್ನು ಮುಂದೆ ಪರಿಶೀಲಿಸುತ್ತೇನೆ.

3. ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ 'ನಮ್ಮ ಊರಿನ ರಸಿಕರು' ಎಂಬ ಪುಸ್ತಕದಲ್ಲಿ ಬರುವ ಬಯಲಾಟದ ಪ್ರಸಂಗವೊಂದನ್ನೂ ಇಲ್ಲಿ ಗಮನಿಸಬಹುದು. ಬಯಲಾಟ ಒಂದು ಸಾಮುದಾಯಿಕ ಚಟುವಟಿಕೆಯಾಗಿ ಹಳ್ಳಿಯ ಜೀವನದ ವಿನ್ಯಾಸಗಳನ್ನು, ಒಳ ಸುಳಿಗಳನ್ನು ತೋರಿಸುವಾಗಲೇ, ನಗರದಿಂದ ಬಂದ ಗುಂಡನ ಚಡಪಡಿಕೆಯನ್ನೂ ಗೊರೂರರು ದಾಖಲೆಮಾಡಿದ್ದಾರೆ. ಗುಂಡನಿಗೆ ತನ್ನದು ಪರಿಷ್ಕೃತ ಅಭಿರುಚಿ ಎಂಬ ನಿಲುವೇನೂ ಇಲ್ಲ. ಆದರೆ ಉಳಿದವರಲ್ಲಿ ಬೆರೆಯಲಾಗದೇ ಹೋಗುವ ಪ್ರತಿನಿಧಿ ಮಾತ್ರ. ಈ ಚಿತ್ರವನ್ನು ನೀಡುವ ಗೊರೂರರು ಕನ್ನಡ ನವೋದಯ ಒಂದು ಪ್ರವೃತ್ತಿಯ ಮೂಲಕವೇ ಬಯಲಾಟವನ್ನು ಗಮನಿಸಿದ್ದಾರೆ. ಗಾಂಧಿವಾದದ ಹಿನ್ನೆಲೆಯಲ್ಲಿ ಹಳ್ಳಿಯ ಸಮಾಜದ ಗಾಢ ಸಂಬಂಧಗಳನ್ನು ಕಾನುವುದು ಅವರಿಗೆ ಕೇವಲ ಅವಶ್ಯವಾಗಿತ್ತು. ಈ ಬಗ್ಗೆ ಪರಿಶೀಲನೆ ಇಲ್ಲಿ ಅಪ್ರಸ್ತುತ. ಆದರೆ ನಮ್ಮ ನಾಟಕಕಾರರು ಪ್ರಯೋಗಕಾರರಲ್ಲಿ ಜನಪದ ರಂಗದ ಬಗ್ಗೆ ತೋರಿಸಿದ ದೃಷ್ಟಿಯಾಗಿದೆ ಎಂಬುದನ್ನಷ್ಟೆ ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ.

4. ಭಾರತದಲ್ಲಿ ಈ ಶತಮಾನದ ನಾಲ್ಕನೆಯ ದಶಕದಲ್ಲಿ ಆರಂಭವಾದ ಪ್ರಗತಿಶೀಲ ಚಳುವಳಿಯ ಅಂಗವಾಗಿ ಜನಪರ ರಂಗಭೂಮಿಯಗಳು ಸೃಷ್ಟಿಯಾದವು. ಇಪ್ಟಾ (IPTA) ಅಂಥ ಪ್ರಯತ್ನಗಳಲ್ಲಿ ಮುಖ್ಯವಾದುದು. ಅಲ್ಲದೆ ಜನಪದ ರಂಗ ಪ್ರಕಾರಗಳನ್ನೂ ಬಳಸಿ ನಿರ್ದಿಷ್ಟ ವಿಚಾರವನ್ನೂ ಮಂಡಿಸುವ ಯತ್ನವನ್ನೂ ಮಾಡುವುದೂ ಕಂಡು ಬರುತ್ತದೆ. ಬಂಗಾಳ, ಆಂಧ್ರ ಮತ್ತು

ಕೇರಳದಲ್ಲಿ ಇದು ಸ್ಪಷ್ಟವಾಗಿದೆ. ಈ ಪ್ರಯತ್ನಗಳು ಜನಪದ ರಂಗದ ಸಿದ್ಧ ಆಕಾರವನ್ನು ಬಳಸುವುದರ ಮೂಲಕ ಪ್ರೇಕ್ಷಕರೊಡನೆ ಸಂವಹನದ ಸಮಸ್ಯೆಯನ್ನು ನಿವಾರಿಸಲು ಯತ್ನಿಸಿದವು. ಎಂದರೆ ಇಲ್ಲಿ ಜನಪದರಂಗ ಒಂದು ಸಾಧನವಾಗುವುದು ಸ್ಪಷ್ಟವಾಗಿದೆ.

5. ಇದು ಸ್ವಲ್ಪ ಮಟ್ಟಿಗೆ ಯುರೋಪಿನ ಜ್ಞಾನೋದಯದ ಅವಧಿಯಲ್ಲಿ ರಚಿತವಾದ ನಾಟಕಗಳನ್ನೂ ನಮ್ಮ ನೆನಪಿಗೆ ತರುತ್ತದೆ. ಷೇಕ್ಸ್‌ಪಿಯರ್‌ನ ಎಷ್ಟೋ ನಾಟಕಗಳಲ್ಲಿ ಜನಪದ ರಂಗಭೂಮಿ ಪ್ರಾಸಂಗಿಕ ಅರ್ಥವಂತಿಕೆಯೊಡನೆ ಬಳಕೆಯಾಗುವುದನ್ನಿಲ್ಲಿ ಇದಕ್ಕೆ ನಿದರ್ಶನವಾಗಿ ಗಮನಿಸಬಹುದು. ಹ್ಯಾಮ್ಲೆಟ್ ನಾಟಕದ ಅಲೆಮಾರಿ ರಂಗಭೂಮಿ, ಟೆಂಪೆಸ್ಟ್ ನಾಟಕದ ಮದುವೆಯ ದೃಶ್ಯದಲ್ಲಿ ಅಭಿನಯಗೊಳ್ಳುವ 'ಮಾಸ್ಕ್' ದೃಶ್ಯ ಇವು ಉದಾಹರಣೆಗಳು. ಆಯಾ ನಾಟಕದ ಒಟ್ಟು ಅರ್ಥವನ್ನು ಕಟ್ಟುವ ವಿಶೇಷ ಯತ್ನದಲ್ಲಿ ಮೂಲದ ಸ್ವರೂಪವನ್ನಷ್ಟೆ ಗುರಿಯನ್ನಲ್ಲಿ ಉಳಿಸಿಕೊಂಡು ಅಲ್ಲಿ ಅವು ಬಳಕೆಯಾಗುತ್ತವೆ.

## ಚರಿತ್ರೆಯೆಂಬ ಕಪ್ಪುಕುಳಿಯು ನುಂಗಲಾಗದ 'ಮಲೆಗಳಲ್ಲಿ ಮದುಮಗಳು'

ಮಲೆಗಳಲ್ಲಿ ಮದುಮಗಳು 'ಓದಿದಾಗ'ಲೆಲ್ಲಾ ಅಲ್ಲಿರುವ ಯಾರು ಯಾರು ಈಗ ಈ ದಿನಮಾನಗಳ ಲೋಕಕ್ಕೆ ಬರಬಲ್ಲರು ಎಂದು ಕೇಳಿಕೊಂಡಿದ್ದೇನೆ. ಹಂಗಿನ ಚರಿತ್ರೆ, ಇಲ್ಲವೇ ಚರಿತ್ರೆಯ ಹಂಗು ಇಲ್ಲದೆ ಬದುಕುತ್ತಿರುವ ಅಲ್ಲಿನ ಯಾರಾದರೂ ನಮ್ಮೊಡನೆ ಮಾತನಾಡಬಲ್ಲರೇ? ಆ ಕಾಡಿನ ಮುಚ್ಚಿದ ಲೋಕಕ್ಕೆ ಅಂತಕ್ಕನ ಕಾಪಿ ಹೋಟೆಲ್, ಬೈಸಿಕಲ್ಲು, ಪೋಲಿಸು, ಕ್ರೈಸ್ತಮತ, ಯುದ್ಧದ ಸುದ್ದಿ ಮುಂತಾದವು ಒಳನುಗ್ಗಿ ಬಂದರೂ ಅಲ್ಲಿರುವ ಯಾರೂ, ಯಾವುದೂ ಹೊರಬರಲು ಸಿದ್ಧವಿಲ್ಲ. ನಿಲ್ಲದ ಪಯಣಕ್ಕೆ ಮೊಗಮಾಡಿದ ಗುತ್ತಿಯೊಬ್ಬ ನಮ್ಮ ಕಾಲಕ್ಕೆ ನಡೆದು ಬರಬಲ್ಲನೇನೋ ಅಲ್ಲವೇ? ಅದಿರಲಿ.

ಚಿನ್ನಮ್ಮ ಕಗ್ಗತ್ತಲಿನಲ್ಲಿ ಮಿನಗು ದೀಪದ ಮುಂದೆ ದೇವಿಯ ಬೊಂಬೆಯ ಮುಂದೆ ಅಡ್ಡಬಿದ್ದಿರುವುದನ್ನು ದೂರದ ದಕ್ಷಿಣೇಶ್ವರದ ಕಾಲಿಯ ದೇಗುಲದಲ್ಲಿ ಸನ್ಯಾಸಿಗಳು 'ಕಂಡ'ರೆಂದು ಕಾದಂಬರಿ ನಂಟು ಕಟ್ಟುತ್ತದೆ. ಆದರೆ ಒಂದು ಇನ್ನೊಂದನ್ನು ಹೇಳುವ ಬಗೆಯೇ ಇಲ್ಲಿ ಹಿಡಿಸದು. ಎಲ್ಲವೂ ತಂತಮ್ಮಲ್ಲೇ ಇಡಿ. ಬಿಡಿಯಾದುದನ್ನು ಹಿಡಿದಿಡುವ ಬೇರೇನೋ ಇದೆ ಎಂಬ ಹಂಗಿನ ಕತೆ ಇಲ್ಲಿ ಸಲ್ಲುವುದಿಲ್ಲ. ಹಾಗಾಗಿ ಇಂದು ನಿನ್ನೆ ಮತ್ತು ನಾಳೆಗಳು ಹೆಣೆದುಕೊಳ್ಳುವ ಚರಿತ್ರೆಯ ಬಲೆಯೊಳಗೆ ಈ ಕತೆಯ ಲೋಕ ಸಿಲುಕುವುದೇ ಇಲ್ಲ. ಎಲ್ಲರೂ ಅದರಿಂದ ಹೊರಬಂದವರೇ ಆಗಿದ್ದಾರೆ. ಹುಲಿಕಲ್ಲು ಗುಡ್ಡದ ದಾರಿಯಲ್ಲಿ ಸುಬ್ಬಣ್ಣ ಹೆಗ್ಗಡೆಯವರು ತಲುವಿದ ಕಡೆ ನೂರಾರು ವರುಷಗಳಿಂದ ಎಲ್ಲವನ್ನೂ 'ನೋಡುತ್ತ' ಇದ್ದ ಮಸೆಕಲ್ಲಿನಂತೆ ಈ ಲೋಕದಲ್ಲಿ ಎಲ್ಲರೂ ಎಡೆಬಿಡದೆ ತೊಡಗಿಕೊಂಡಿದ್ದರೂ ಅದು ಬೇರೆ ಯಾವುದಕ್ಕೋ ಆಗಿರದೆ ತನ್ನಪಾಡಿಗೆ ತಾನು ಇರುವ ಹಾಗಿದೆ; ಹಾಗಾಗಿ ನಮಗೆ ಬೆನ್ನು ಮಾಡಿದಂತಿದೆ.

ಈಗ ಈ ಕಾದಂಬರಿಯನ್ನು 'ತೋರಿಸುವ' ಕೆಲಸ ನಡೆದಿದೆ. ನಾಟಕಗಳು ಈಗ ಮತ್ತು ಇಲ್ಲಿ ನಡೆಯುವ ಮಾಯಕವನ್ನು ನೋಡುವವರಲ್ಲಿ ಹುಟ್ಟುಹಾಕಬೇಕು. ನಾವು ನೋಡುತ್ತಿರುವ ಕತೆ ಯಾವ ಕಾಲದ್ದಿರಲಿ, ಯಾವ ದೇಶದ್ದಿರಲಿ ನೋಡುವ ನಮ್ಮಲ್ಲಿ ಅದು ನಮ್ಮ ಕಾಲದ್ದೆಂದು ಅನ್ನಿಸುವ ಹಾಗೆ ಬೇರುಬಿಟ್ಟುಕೊಳ್ಳಬೇಕು. ಆದರೆ ಈ ಕಾದಂಬರಿಯನ್ನು 'ನೋಡುವುದು' 'ನೋಡುವಂತೆ ಮಾಡುವುದು'ಹೇಗೆ? ಇದು ಬೆಳಕು ನುಸುಳಲು ತಿಣಕಾಡಬೇಕಾದ ಹೆಗ್ಗಾಡು. ಒಳಗೆ ಬಾ ಎಂದು ಕರೆಯುವವರು

ಇಲ್ಲಿ ಯಾರೂ ಇಲ್ಲ. ನಮ್ಮ ನೋಟಕ್ಕೆ, ಆ ನೋಟದ ಮೂಲಕ ಕಟ್ಟಿಕೊಳ್ಳಬೇಕಾದ ಚಿತ್ತಾರಕ್ಕೆ ಒಂದು ತಿರುಳಿರಬೇಕು ಎಂದು ನಮಗೆ ಎನಿಸಿದ್ದರೆ ನಮಗೆ ಸೋಲು ಕಟ್ಟಿಟ್ಟದ್ದು. ಅಂದರೆ ಇದನ್ನು ನಮ್ಮ ಕಾಲದ ಕತೆಯನ್ನಾಗಿ ಬದಲಿಸಿಕೊಳ್ಳುವುದು ಆಗದ ಮಾತು. ಎಲ್ಲ ಕಾಲಕ್ಕೂ ಸಲ್ಲುವ ಪುರಾಣವನ್ನಾಗಿ ಬದಲಿಸಹೊರಟರೆ ಇಲ್ಲಿರುವ ಬದುಕಿನ ದಟ್ಟ ತೊಡಗುವಿಕೆ ಅದಕ್ಕೆ ಅಡ್ಡಿಯಾಗುತ್ತದೆ. ಹಾಗಾಗಿ ಇದು ಕತ್ತಿಯಲುಗಿನ ಮೇಲಿನ ಪಯಣ. ಕೊನೆಗೂ ನನಗೆ ಹೊಳೆಯುವ ಹೋಲಿಕೆ ಒಂದೇ. ಈ ಕಾದಂಬರಿಯನ್ನು ನೋಡಲು ಹೊರಡುವ ನಮಗೆ ಹುಲಿಕಲ್ಲು ಗುಡ್ಡದ ಮೇಲೆ ಕಾಯುತ್ತ ಕುಳಿತು ಅರೆನಿದ್ದೆಗೆ ಜಾರಿದ್ದ ತಿಮ್ಮಿಗೆ ಬಿದ್ದ ಕನಸಿನಂತೆ ಈ ಕಾದಂಬರಿಯೂ ಕೂಡ ನಮಗೆ ಕಾಣತೊಡಗುತ್ತದೆ. ಇದಲ್ಲದೆ ತಿರುಳೇನು ಎಂದು ಚಿಂತಿಸುವ ಹೊತ್ತಿಗೆ ಎಲ್ಲ ಕರಗಿ ಹೋಗಿರುತ್ತದೆ. ಕನಸು ಕಂಡದ್ದಷ್ಟೇ ದಿಟ. ಅಂದರೆ ಒಂದರ ಮೂಲಕ ಇನ್ನೊಂದನ್ನು ನೋಡುವುದನ್ನು, ಒಂದನ್ನು ಇನ್ನೊಂದನ್ನಾಗಿ ಬದಲಿಸಿ ತಿಳಿಯಲು ಮುನ್ನುಗ್ಗುವ ಪರಿಪಾಟವನ್ನು ಚರಿತ್ರೆ ನಮಗೆ ಕಲಿಸಿದೆ. ಆದರೆ ನಮ್ಮ ಈ ಬಗೆಯ ಬಲೆಗೆ ಸಿಲುಕದೆ ಚರಿತ್ರೆಯ ಕಪ್ಪುಕುಳಿಯೊಳಗೆ ಕರಗಿ ಹೋಗದೆ ಈ ಕಾದಂಬರಿ ದಾಟಿ ಮುಂದೆ ಸಾಗುತ್ತದೆ. ಹೌದಲ್ಲವೇ?

ಈ ಟಿಪ್ಪಣಿ ಬರೆದ ಮೇಲೆ ಮೈಸೂರಿನ ರಂಗಾಯಣದಲ್ಲಿ ಮಲೆಗಳಲ್ಲಿ ಮದುಮಗಳು ನಾಟಕವನ್ನು ನೋಡಿದೆ. ಕಾದಂಬರಿಯನ್ನು ಓದಿದ ನಮಗೆಲ್ಲರಿಗೂ ಅದನ್ನು ನೋಡುವ ಬಗೆಯನ್ನು ಬಸವಲಿಂಗಯ್ಯ ಅಚ್ಚರಿ ಎನಿಸುವ ಬಗೆಯಲ್ಲಿ ತೋರಿಸಿಕೊಟ್ಟರು. ಮೊದಲನೆಯದಾಗಿ ಸುಮಾರು ಒಂಬತ್ತು ಗಂಟೆಗಳ ಕಾಲ ಅದೂ ರಾತ್ರಿಯಲ್ಲಿ ನಿದ್ದೆಗೆಟ್ಟು ನಾಟಕ ನೋಡುವ ಉಮೇದು ಈಗ ಯಾರಿಗಿರುತ್ತದ?. ಆದರೆ ಅದು ಒತ್ತಾಯವಾಗದಂತೆ ಮಾಡಿದ್ದು ಮೊದಲ ಗೆಲುವಿನ ಗರಿ. ದೃಶ್ಯಗಳ ಜೋಡಣೆ ಮತ್ತು ಓಟದಲ್ಲಿ ಕಾಯ್ದುಕೊಂಡ ಸಮತೋಲದಿಂದ ಇದು ಸಾಧ್ಯವಾಯಿತೆಂದು ತಿಳಿಯುತ್ತೇನೆ. ಟಿವಿ ಮತ್ತು ಪ್ರೋಸೀನಿಯಂ ರಂಗದ ಸುಮಾರು ಮೂವತ್ತು ಡಿಗ್ರಿಯ ಕಣ್ಣಳತೆಯ ನೋಟಗಳು ಇಲ್ಲಿ ನೂರೆಂಬತ್ತು ಡಿಗ್ರಿಗೆ ಚಾಚಿಕೊಂಡದ್ದರಿಂದ ನೋಟವನ್ನು ಒಳತೆಗೆದುಕೊಳ್ಳುವ ಬಗೆಯುನ್ನೇ ಬದಲಾಯಿಸಿದಂತಾಗಿದೆ. ಈ ನಾಟಕ ನೋಡುವ ಒಂದು ವಾರದ ಮುನ್ನ ನಾನು ಐ-ಮಾಕ್ಸ್ ತೆರೆಯಲ್ಲಿ ಅವತಾರ್ ಸಿನಿಮಾವನ್ನು 3-ಡಿ ಕನ್ನಡಕ ಧರಿಸಿ ನೋಡಿದ್ದೆ. ತಂತ್ರಜ್ಞಾನದ ನೆರವಿನಿಂದ ಅದು ಮೂಡಿಸಿದ ಆಳದ ಭ್ರಮೆಗೆ ತುತ್ತಾಗಿದ್ದೆ. ಆದರೆ ಅನುಭವ ಪ್ರಾಮಾಣಿಕವೆನ್ನಿಸುವಂತಿರಲಿಲ್ಲ. ರಂಗಾಯಣದ ಪ್ರಯೋಗದಲ್ಲೂ ಆಳ ಮತ್ತು ಅಗಲಗಳನ್ನು ಕಟ್ಟಿಕೊಡುವ ರೀತಿ ಇದೆ. ಇದು ಸ್ಥಳಕ್ಕೆ ಸಂಬಂಧಿಸಿದಂತೆ ಕಾಲಕ್ಕೆ ಸಂಬಂಧಿಸಿದ್ದೂ ಆಗಿದೆ ಎನ್ನುವುದನ್ನು ಗಮನಿಸಬೇಕು. ಅದರಲ್ಲೂ ಬೇರೆಬೇರೆ ಕಾಲಗಳು, ಬೇರೆ ಬೇರೆ ಕಾಲದ ಅನುಭವಗಳು ಒಂದೇ ಗಳಿಗೆಯಲ್ಲಿ ಕಣ್ಣೆದುರು ಬರುವಂತೆ ಮಾಡುವ ದೃಶ್ಯಕಲ್ಪನೆಯನ್ನು ಈ ಪ್ರಯೋಗ ಕಟ್ಟಿಟ್ಟ ಬಗೆಯನ್ನು ಎತ್ತಿ ಹೇಳಲೇ ಬೇಕಾಗಿದೆ. ಹಾಗೆಯೇ ಮಾನವ ಜಗತ್ತು ಮತ್ತು ಪ್ರಾಣಿಜಗತ್ತುಗಳನ್ನು ಒಟ್ಟಾಗಿರಿಸಲು ಬಳಸಿದ ರಂಗತಂತ್ರಗಳೂ ಕೂಡ ಅಚ್ಚರಿ ಹುಟ್ಟಿಸುತ್ತವೆ.

ನಿರೂಪಣೆಗೆ ಬಗೆಬಗೆಯ ನಿರೂಪಕರನ್ನು ಮತ್ತು ಹಾಡುಗಳನ್ನು ಬಳಸುವುದು ಈಗಾಗಲೇ ನೆಲೆಗೊಂಡಿರುವ ಬಗೆಯೇ. ಆದರೆ ಇಲ್ಲಿ ಇವೆರಡೂ ಹೆಗ್ಗಾಡಿನೊಳಗೆ ಮತ್ತು ಅನೂಹ್ಯವಾದ ಅನುಭವ ಲೋಕದೊಳಕ್ಕೆ ಹೋಗುವ ಮತ್ತು ಅಲ್ಲಿಂದ ಹೊರ ಬರಲು ತಕ್ಕ ಕಿಂಡಿಗಳನ್ನು ನೋಟಕರಿಗೆ ಒದಗಿಸುತ್ತಿದ್ದವು. ಇದು ಅಗತ್ಯವಾಗಿತ್ತು ಮತ್ತು ಅದನ್ನು ಬಳಸಿದ ಕ್ರಮ ನಾಟಕರೂಪಕ್ಕೆ ಹೊಸ ಜಗಿತವನ್ನು ತಂದುಕೊಟ್ಟಿದೆ. ಇದಲ್ಲದೆ ಇಲ್ಲಿ ನಟರು ಪಾತ್ರವಾಗುವ ಬಯಕೆಯನ್ನು ತೋರದೆ ತಾವೇ ಆ ಪಾತ್ರವನ್ನು ಧ್ಯಾನಮಗ್ನರಾಗಿ ಪರಿಭಾವಿಸುವಂತೆ ತೋರುವ ವಿಧಾನವನ್ನು ಆಯ್ದುಕೊಂಡಿದ್ದರು. ಅಂದರೆ ತಲ್ಲೀನರಾಗುವ ಬಗೆಗಿಂತ ಪರಿಭಾವನೆಯ ನೆಲೆ ಮುಂಚೂಣಿಯಲ್ಲಿತ್ತು. ಇದೂ ಕೂಡ ಪ್ರಯೋಗದ ಹೊಸತನವೆಂದು ನಾನು ತಿಳಿಯುತ್ತೇನೆ. ನಟನೆಯ ತಂತ್ರವನ್ನು ವಿವರಿಸಬಹುದಾದರೂ ಅದನ್ನು ಅನುಸರಿಸುವುದು ಕಷ್ಟ. ಅದರಲ್ಲೂ ರಂಗತರಬೇತಿ ಹೆಚ್ಚಿಲ್ಲದ ನಟರೂ ಕೂಟ ಅದನ್ನು ತಮ್ಮದಾಗಿಸಿಕೊಂಡಿದ್ದರು. ಸುಮಾರು ಒಂಬತ್ತು ಗಂಟೆಗಳ ಕಾಲ ನೂರೆಂಬತ್ತು ಡಿಗ್ರಿ ಹರವುಳ್ಳ ಸಮತಟ್ಟಿಲ್ಲದ ರಂಗಭೂಮಿಯಲ್ಲಿ ತಮ್ಮ ದೈಹಿಕ ಮತ್ತು ಮಾನಸಿಕ ಶಕ್ತಿಯನ್ನು ಕಾಯ್ದುಕೊಂಡದ್ದು ಇನ್ನೊಂದು ಗೆಲುವಿನ ಗರಿ.

ಬರೆಯಲು ಇನ್ನೂ ಇದೆ. ಕಾದಂಬರಿಯ ಮಾತುಗಳನ್ನು ಉಳಿಸಿಕೊಳ್ಳುತ್ತಲೇ ತಮ್ಮ ಮಾತುಗಳಲ್ಲಿ ರಂಗರೂಪವನ್ನು ಬರೆದ ಮತ್ತು ಸರಿಸುಮಾರು ನಲವತ್ತು ಹಾಡುಗಳನ್ನು ಬರೆದ ಗೆಳೆಯರು ನಾಟಕಕ್ಕೆ ಹೊಸ ನೆಲೆಗಳನ್ನು ತಂದುಕೊಟ್ಟಿದ್ದಾರೆ. ಕಾಡಿನ ಮೌನ ಮತ್ತು ಜನರ ಮಾತುಗಳ ನಡುವೆ ತುಂಬಿಕೊಂಡ ಸಂಗೀತ ಕೂಡ ನೋಡುಗರನ್ನು ಬದಲಾದ ಲೋಕಕ್ಕೆ ಒಯ್ಯಲು ಸಮರ್ಥವಾಗಿತ್ತು.

ಇಂಥದೊಂದು ರಂಗಪ್ರಯೋಗ ಮತ್ತೆಮತ್ತೆ ಆಗುವುದು ಕಷ್ಟ. ಇದನ್ನು ಸುಳ್ಳು ಮಾಡಿದರೆ ಅದರಿಂದ ನನಗೆ ಸಂತೋಷವೇ ಆಗುತ್ತದೆ. ಆದರೆ ಈಗಿರುವಂತೆ ಇದು ಮತ್ತಮತ್ತೆ ನೋಡುಗರ ಅನುಭವದ ಮಡಿಲಿಗೆ ಏರುವಂತೆ ಮಾಡುವ ಯಾವುದಾದರೊಂದು ಪ್ರಯತ್ನವನ್ನು ಮಾಡಬೇಕಾಗಿದೆ. ನೊಡೋಣ ಏನಾಗುವುದೋ!

## 'ಮಾಡಿ ಮಡಿದವರು' ಕಾದಂಬರಿ ಮತ್ತು ಚಲನಚಿತ್ರ

ಕನ್ನಡದಲ್ಲಿ ಕಾದಂಬರಿಗಳು ಚಲನಚಿತ್ರವಾಗುವುದು ಹಳೆಯ ಸಂಗತಿ. ಇಂತಹ ಸಂದರ್ಭದಲ್ಲಿ ಬಹುಪಾಲು ನಿರ್ದೇಶಕರು ಕಾದಂಬರಿಗಳನ್ನು ಸಿದ್ಧಚಿತ್ರಕಥೆಗಳೆಂದು ತಿಳಿಯುತ್ತಾರೆ. ಹಾಗಾಗಿ ಅವರು ಕಾದಂಬರಿಯನ್ನು ದೃಶ್ಯಮಾಧ್ಯಮಕ್ಕೆ ಅಳವಡಿಸುವ ಮಟ್ಟಿಗೆ ತಮ್ಮ ವ್ಯಾಪ್ತಿಯನ್ನು ಕಲ್ಪಿಸಿಕೊಳ್ಳುತ್ತಾರೆ. ಈಗಾಗಲೇ ಐವತ್ತಕ್ಕೂ ಮಿಕ್ಕಿ ಕಾದಂಬರಿಗಳು ಚಿತ್ರವಾಗಿ ಬಂದಿವೆಯಷ್ಟೆ. ನಿರ್ದೇಶಕರ ಈ ಪ್ರವೃತ್ತಿಯಿಂದಾಗಿ ಪ್ರೇಕ್ಷಕರು ಕಾದಂಬರಿಯು ನೀಡುವ ಕಲ್ಪನೆಯ ಚೌಕಟ್ಟಿಗೆ ಮಾತ್ರ ಹೊಂದಿಕೊಂಡು ಚಿತ್ರವನ್ನು ನೋಡುವುದಕ್ಕೆ ಸಿದ್ಧರಾಗಿರುತ್ತಾರೆ. "ಮಾಡಿ ಮಡಿದವರು" ಚಿತ್ರ ಈ ಜಾಡನ್ನು ಬದಲಾಯಿಸಲು ಹೊರಟಿದೆ. ಕಾದಂಬರಿಯ ಚೌಕಟ್ಟನ್ನು ಪಡೆದ ಪ್ರೇಕ್ಷಕರಿಗೆ ಚಿತ್ರ ಭಿನ್ನ ಅನುಭವವನ್ನು ನೀಡುತ್ತದೆ. ಅದನ್ನು ಹೀಗೆ ವಿವರಿಸಬಹುದು.

1. '42'ರ ಚಳುವಳಿಯನ್ನು ಬೆರಗುಗಣ್ಣಿಂದ, ರೋಮಾಂಚನಗಳಿಂದ ನೋಡುವ ಹುರುಪು ಕಾದಂಬರಿಯಲ್ಲಿದೆ. ಅಲ್ಲಿನ ಪಾತ್ರಗಳಲ್ಲೆಲ್ಲಾ ಒಂದು ಬಗೆಯ ಛಲ ಇದೆ. ಕಾದಂಬರಿಕಾರರು ಆ ಚಳುವಳಿಯಲ್ಲಿ ಪ್ರವೃತ್ತರಾಗಿದ್ದರಿಂದ ಈ ನಿಲುವು ಸರಿಯಾಗಿದೆ. ಚಲನಚಿತ್ರವು '42'ರ ಘಟನೆಯನ್ನು ಹೀಗೆ ನೋಡುವುದಿಲ್ಲ. "ಮಾಡು ಇಲ್ಲವೇ ಮಡಿ" ಎಂದು ಘೋಷಣೆ ನೀಡಿದ ನಾಯಕರು ಜೈಲಿನಲ್ಲಿದ್ದರು. ದ್ವಿತೀಯ ಶ್ರೇಣಿಯ ನಾಯಕರು [ಚಿತ್ರದಲ್ಲಿ ಶ್ಯಾಮರಾವ್ ಅಂತಹವರು, ಹೇಮಳ ತಂದೆ] ನಿವೃತ್ತರಾಗಿದ್ದಾರೆ. ಹೀಗಾದಾಗ ಶೇಖರನಂತಹ ತರುಣರಿಗೆ ದಾರಿಗಾಣದಂತಾಗುವುದು ಸಹಜ. ಅವರೆಲ್ಲಾ ಘೋಷಣೆಯನ್ನು ಆಧಾರವಾಗಿ ಹಿಡಿದು ಹೋರಾಟಕ್ಕೆ ಅಣಿಯಾಗುತ್ತಾರೆ. ಆದರೆ ಅವರಿಗೆ ಅದರ ಸ್ವರೂಪ ಅಸ್ಪಷ್ಟ. ಬಂದೂಕದ ಉಪಯೋಗದ ಬಗ್ಗೆ ವಿಶ್ವನಾಥ ಕೇಳುವ ಪ್ರಶ್ನೆಗೆ ಖಚಿತವಾದ ಉತ್ತರವಿಲ್ಲ. ಅವರು ನಡೆಸುವ ಹೋರಾಟಗಳನ್ನು ನೋಡಿ. ಎಲ್ಲೋ ನಡೆದ ಘಟನೆಗಳನ್ನು ಪುನರಾವರ್ತಿಸುತ್ತಾರೆ. ಅವುಗಳು ತಮಗೆ ತಾವು ಪೂರ್ಣ. ಅದರಾಚೆಗೆ ಅವರಿಗೆ ಗೊತ್ತಿಲ್ಲ. ಕಿತ್ತೂರು ನಾಯಕರ ಹೋರಾಟದ ಸ್ಮೃತಿಗೂ ಗಾಂಧಿ, ನೆಹರೂ ಯುಗದ ವಾಸ್ತವತೆಗೂ ಅಂತರವೇ ಇಲ್ಲ. ವಾಸ್ತವ ಸಂಗತಿ ಆದಾಗಲೇ ಲಾವಣಿಯಾಗುವ ಘಟ್ಟವನ್ನು ತಲುಪಿತ್ತು. ಇಂತಹ ಹಿನ್ನೆಲೆಯಲ್ಲಿ ಹೋರಾಟ ನಡೆಸಿದವರಲ್ಲಿ ಅಸ್ಪಷ್ಟತೆ ಹಾಗೂ ಅನಾಯಕತ್ವಗಳು ಸ್ಥಾಯಿಯಾಗುವುದು ಅನಿವಾರ್ಯ. ಅಲ್ಲದೆ ಅದು ಇತಿಹಾಸದ ದುರಂತ. ಚಲನಚಿತ್ರವು 42ರ ಚಳುವಳಿಯ ಈ ಮುಖವನ್ನು ನೋಡಲು ಪ್ರಯತ್ನಿಸಿ ಯಶಸ್ವಿಯಾಗಿದೆ. ಕಾದಂಬರಿಯನ್ನು ಓದಿದ ಪ್ರೇಕ್ಷಕರು ಈ ಬದಲಾದ ದೃಷ್ಟಿಕೋನಕ್ಕೆ

ಸಿದ್ಧರಾಗಿರುವುದಿಲ್ಲ. ಕಾದಂಬರಿಯನ್ನು ಓದದ ಪ್ರೇಕ್ಷಕರ ಬಗ್ಗೆಯೂ ಈ ಮಾತು ನಿಜ. ಸ್ವಾತಂತ್ರ್ಯ ಚಳುವಳಿ ಎಂದರೆ ತ್ಯಾಗ, ಬಲಿದಾನ, ರೋಮಾಂಚನ ಇತ್ಯಾದಿ ಭಾವನೆಗಳು ಸಾಮಾನ್ಯವಾಗಿ ಪ್ರಚಲಿತವಾಗಿವೆ. ಈವೆಲ್ಲವೂ ಸುಳ್ಳು ಎಂದಲ್ಲ. ಆದರೆ ಚಳುವಳಿಗೆ ಇದ್ದ ಅನಿವಾರ್ಯವಾದ ಮತ್ತೊಂದು ಮುಖದ ಬಗ್ಗೆ ಸಾಮಾನ್ಯವಾಗಿ ಜನರು ಹೆಚ್ಚು ತಿಳಿದಿಲ್ಲ. ಆ ಚಳುವಳಿಯನ್ನು ಕುರಿತ ಚರಿತ್ರೆಗಳು ಈ ದಿಕ್ಕಿನಲ್ಲಿ ಯಾವ ಪ್ರಯತ್ನವನ್ನೂ ಮಾಡಿಲ್ಲ.

2] ಕಾದಂಬರಿ ತನ್ನ ಪಾತ್ರ, ಘಟನೆಗಳನ್ನು ವೈಭವಿಸುತ್ತದೆ. ಆದ್ದರಿಂದ ಅಲ್ಲಿನ ಪಾತ್ರಗಳು, ಘಟನೆಗಳು ಮಾದರಿಗಳಾಗುವ ಸಾಧ್ಯತೆಗಳಿವೆ. ಶೇಖರ ಎಂದರೆ ಸ್ವಂತದ ತಾಪತ್ರಯಗಳನ್ನು ಹರಿದು ನಿಂತವನು. ಹೇಮಾ ಮಧುರ ಬದುಕನ್ನು ತೊರೆದವಳು ಹೀಗೆ ಮುಂದುವರಿಸಬಹುದು. ಇವೆಲ್ಲವೂ ತ್ಯಾಗದ ಮಾದರಿಗಳು. ಚಲನಚಿತ್ರವು ಇವೆಲ್ಲವನ್ನೂ ಕೇವಲ ಘಟನೆಗಳು ಎಂದು ಮಾತ್ರ ತಿಳಿಯುತ್ತದೆ. ಸಂಗಣ್ಣನನ್ನು ಮನೆಯಲ್ಲಿ ಬಂಧಿಸುವ ಸಂದರ್ಭದಲ್ಲಿ ಅವನ ತಾಯಿ ಪೋಲೀಸರ ಗುಂಡಿಗೆ ಬಲಿಯಾಗತ್ತಾಳಷ್ಟೆ. ಕಾದಂಬರಿಯ ಓದುಗರಿಗೆ ಆ ಸಂದರ್ಭದಲ್ಲಿ ಕಣ್ಣು ತುಂಬಿ ಬರುತ್ತದೆ. ಏಕೆಂದರೆ ಆ ಬಗೆಯ ಸಿದ್ಧತೆ ಹಾಗೂ ಉದ್ದೇಶ ಅಲ್ಲಿದೆ. ಚಲನಚಿತ್ರವು ಈ ಘಟನೆಯನ್ನು ಸೆಕೆಂಡುಗಳ ಅವಧಿಯಲ್ಲಿ ನಿರೂಪಿಸಿ ಏನೂ ಆಗಿಲ್ಲವೆಂದು ಮುಂದುವರಿಯುತ್ತದೆ. ಅಲ್ಲಿ ಉದ್ವೇಗವಿಲ್ಲ. ಅದು ಸಂಗಣ್ಣನಿಗೆ ಮುಂದೆ ಬಂದೂಕು ಹಿಡಿಯಲು ಪ್ರಚೋದಕವಾಯಿತು ಎಂಬಷ್ಟಕ್ಕೆ ಮಾತ್ರ ದಾಖಲೆಯಾಗಿ ಚಿತ್ರದಲ್ಲಿ ಬರುತ್ತದೆ.

ಹೀಗೆ ಘಟನೆಗಳನ್ನು ಕೇವಲ ದಾಖಲೆಗಳೆಂದು ಪರಿಗಣಿಸುವ ದೃಷ್ಟಿಯಿಂದಾಗಿ ಚಲನಚಿತ್ರವು ಪ್ರೇಕ್ಷಕರ ಭಾವಪ್ರಪಂಚವನ್ನು ತಟ್ಟುವುದಿಲ್ಲ. ಇದು ಕೆಲವರಿಗೆ ಚಿತ್ರದ ನೀರಸ ಅಂಶವೆಂದು ಕಂಡಿದೆ. ಆದರೆ ನಿಜವಾಗಿ ಹಾಗಲ್ಲ. ಕಾದಂಬರಿಕಾರ ಘಟನೆಯನ್ನು ತನ್ನ ಹಾಗೂ ತನ್ನ ಮಾಧ್ಯಮದ ಮಿತಿಗಳಲ್ಲಿ ಹುಡುಕುತ್ತಾನೆ. ಇತಿಹಾಸಕಾರರಿಗೆ ಅದೊಂದು ಘಟನೆ. "ಮಾಡಿ ಮಡಿದವರು" ಚಿತ್ರದ್ದು ಎರಡನೆಯ ಬಗೆಯ ಕೆಲಸ. ಹೋರಾಟದ ಕ್ಷಣದ ಉದ್ವೇಗಗಳನ್ನು ಅಲ್ಲಿ ಹುಡುಕಲಾಗದು. ಬದಲಿಗೆ ಚರಿತ್ರೆಯ ತರ್ಕವನ್ನೂ ನಿರ್ದೇಶಕ ಕಂಡುಕೊಳ್ಳುತ್ತಿರುವುದನ್ನು ಗಮನಿಸಬೇಕು. ಇದಕ್ಕೂ ಪ್ರೇಕ್ಷಕರು ಸಿದ್ಧವಾಗಿರಬೇಕು.

'42'ರ ಚಳುವಳಿಯ ಘಟನೆಗಳು ಅನಿವಾರ್ಯವಾಗಿ ಹಿಂಸಾತ್ಮಕವಾದದ್ದು ಗಮನಾರ್ಹ. ಶೇಖರನ ಗುಂಪು ಅನಿಶ್ಚಿತ ಸ್ಥಿತಿಯಲ್ಲಿ ಕಾಲತಳ್ಳುತ್ತಿದ್ದು, ತಾವು ಎದುರಿಸುತ್ತಿದ್ದ ವ್ಯವಸ್ಥೆಯ ದಮನಶೀಲ ನೀತಿಯೊಡನೆ ಮುಖಾಮುಖಿಯಾಗಿ ನಿಂತಾಗ ತಾವು ಬಂದೂಕನ್ನು ಕೈಗೆ ತೆಗೆದುಕೊಳ್ಳುತ್ತದೆ. ಇದು ನಿಶ್ಚಿತತೆಯ ಕಡೆಗೆ ಇಟ್ಟ ಮೊದಲ ಹೆಜ್ಜೆ. ಆಗಲೇ ಅವರ ಸಿದ್ಧತೆಯ ಕೊರತೆಯ ಅರಿವು ಅವರಿಗೆ ಆಗುವುದು. ಪರಿಣಾಮವಾಗಿ ಸಾವು. ಇದಿಷ್ಟರ ಕಡೆಗೆ ಚಿತ್ರ ಮುನ್ನಡೆಯುತ್ತಾ ಹೋಗುತ್ತದೆ.

ಇದಿಷ್ಟೂ ಚಲನಚಿತ್ರದ ಕೇಂದ್ರಬಿಂದುವಿನ ಬಗ್ಗೆ ಹಾಗೂ ಇದು ಕಾದಂಬರಿಯಿಂದ ಭಿನ್ನವಾಗುವ ರೀತಿಯ ಬಗ್ಗೆ ಹೇಳಿದ ಮಾತುಗಳಾದವು. ಈ ಕೇಂದ್ರಬಿಂದುವಿಗೆ ಪೋಷಕವಾಗಿ ನಿಂತು ತಾನೇ ಹಲವಾರು ಮಹತ್ವದ ಸಂಗತಿಗಳನ್ನು ಸೂಚಿಸುವ ಸನ್ನಿವೇಶಗಳು ಚಿತ್ರದಲ್ಲಿವೆ. 'ಅವುಗಳಲ್ಲಿ ಕೆಲವನ್ನು ನಾವೀಗ ನೋಡಬಹುದು. ದೇಸಾಯಿಗೆ ಸಂಬಂಧಿಸಿದ ವಿವರಗಳು. ಈತ ಸಾಮ್ರಾಜ್ಯಶಾಹಿಯ ನೆರಳನ್ನು ಆಶ್ರಯಿಸಿದವನು. ಅವರ ಸಂಸ್ಕೃತಿಯನ್ನು ಎರವಲಾಗಿ ಪಡೆದವನು. ಇಂಗ್ಲಿಶರಿಗಿಂತಲೂ ಹಿಂದಿನ ರಾಜರುಗಳನ್ನು ಹೀಗೆ ಆಶ್ರಯಿಸಿದ್ದವನು. ಅವರೆಲ್ಲರ ಚೇಲಾ ಆಗಿ ಇಲ್ಲಿ ಕಾಣುತ್ತಾನೆ. ಆತನ ಮೊಗಲಾಯಿ ರೀತಿನೀತಿಗಳು, ವಿಕ್ಟೋರಿಯನ್ ಯುಗದ ಚಿತ್ರಗಳು, ಇವೆಲ್ಲವೂ ಚಿತ್ರದಲ್ಲಿ ದೇಸಾಯಿಯ ಸ್ಥಿತಿಯನ್ನು ತೋರಿಸುತ್ತವೆ. ಅವನಿಂದ ಹೊರಬಂದ ಮಗ ಕೂಡ ಒಂದು ಬಗೆಯ ಸವಾಲೇ ಎಂಬಂತೆ, ಅದೂ ತಾನು ಒಪ್ಪುವ ಹೆಣ್ಣು ಹೇಮಾಳಿಂದ ಬಂದ ಸವಾಲಾದ್ದರಿಂದ ಚಳುವಳಿಗೆ ಬರುತ್ತಾನೆ. ವಿಶ್ವನಾಥನಿಗೂ ಈ ಚಳುವಳಿ ಅಸ್ಪಷ್ಟ ಅದರ ವಾಸ್ತವತೆ ಆತನಿಗೆ ಹೇಮಾಳ ಜತೆ ಮಾತ್ರ ಇರುವುದು. ದೇಸಾಯಿ ಸಾಮ್ರಾಜ್ಯಶಾಹಿಯು ತನ್ನ ಬೆನ್ನಿಗೆ ಇದೆ ಎಂದು ತಿಳಿದಿದ್ದ. ಬಂದೂಕಗಳನ್ನು ಮಗ ತನಗೇ ಮೋಸಮಾಡಿ ಕದ್ದುಹೋದ ಮೇಲೆ ಬರುವ ಒಂದು ಚಿತ್ರಿಕೆಯನ್ನು ನೆನಪಿಸಿಕೊಳ್ಳಿ, ವಾಡೆಯ ಬಾಗಿಲಿನ ಮೇಲೆ ಕೈಯಿಟ್ಟುಕೊಂಡು ನಿಲ್ಲುತ್ತಾನೆ. ಆತ ತನ್ನ ತಲೆಮಾರಿನ ಯಾವನೇ ಚಿತ್ರವನ್ನು ಹೋಲುತ್ತಾನೆ. ಮ್ಯೂಸಿಯಂ ವಸ್ತುವಿನ ಹಾಗೆ. ಇಲ್ಲಿಂದ ದೇಸಾಯಿಯ ಪ್ರಜ್ಞೆಗಳ ಬೆಳವಣಿಗೆ ಆರಂಭ. ತಾನು ತಿಳಿದಂತೆ ಸಾಮ್ರಾಜ್ಯಶಾಹಿ ತನ್ನ ಬೆನ್ನಿಗಿಲ್ಲವೆಂಬುದು ಮಗ ಗುಂಡಿಗೆ ಬಲಿಯಾಗಿ ಸಾಯುವ ಸಂದರ್ಭ ಬಂದಾಗ ತಿಳಿಯುತ್ತದೆ. ಆತನಲ್ಲಿ ತನ್ನ ದೀನತನದ ಅರಿವು ಮೂಡುತ್ತದೆ. ಪಿಸ್ತೂಲು ಹಿಡಿಯುತ್ತಾನೆ. ಇಂತಹ ಘಟನೆಯ ಮೂಲಕ 42ರ ಚಳುವಳಿಯ ಬಗ್ಗೆ ಒಂದು ಸಾರ್ವತ್ರಿಕ ನಿಲುವನ್ನು ಪಡೆಯುವ ಪ್ರಯತ್ನವನ್ನೂ ನಿರ್ದೇಶಕರು ಮಾಡಿದ್ದಾರೆ. ಅದು ನಾಯಕರಿಲ್ಲದ ಗೊಂದಲವಾದರೂ ಮೂಲಭೂತ ವಿರೊಧಗಳು ಸಾಮ್ರಾಜ್ಯಶಾಹಿ ಹಾಗೂ ಭಾರತೀಯ ಎಂಬವು ಪರಸ್ಪರ ತಮ್ಮ ತಮ್ಮ ನೆಲೆಗಳನ್ನು ಅರ್ಥಮಾಡಿಕೊಳ್ಳಲು ಆಗ ಸಾಧ್ಯವಾಯಿತು.

ನಮ್ಮ ಚಿತ್ರವಿಮರ್ಶಕರು ಚಿತ್ರದ ಆಶಯವನ್ನು ಕುರಿತು ಹಲವು ಬಾರಿ ಯೋಚಿಸುವುದೇ ಇಲ್ಲ. ತಾಂತ್ರಿಕ ಸಾಧನೆಗಳನ್ನು ಎತ್ತಿ ಹೇಳುವುದು ಹವ್ಯಾಸವಾಗಿ ಹೋಗಿದೆ. 'ಕಾಡು' ಚಿತ್ರದ ಉದಾಹರಣೆ ಇಲ್ಲಿ ತೆಗೆದುಕೊಳ್ಳಿ. ಅದರ ಆಶಯವನ್ನು ಚಿತ್ರವಿಮರ್ಶಕರು ಗಮನಿಸಿಯೇ ಇಲ್ಲ. ಸಣ್ಣ ಹುಡುಗನ ಕಣ್ಣಿನಿಂದ ನೋಡಿದ ಘಟನೆಗಳು ಎಂಬ ವಿನಾಯಿತಿಯನ್ನು ಪಡೆದ ಈ ಚಿತ್ರದ ಧಾಟಿ ನಿಜಕ್ಕೂ ಅಪಾಯಕಾರಿ. ತಮ್ಮ ವರ್ಷದ ದುಡಿಮೆಯನ್ನೆಲ್ಲಾ ಪಕ್ಕದ ಊರಿನ ಗೌಡನ ಅನುಯಾಯಿಗಳು ಬೆಂಕಿಗೆ ಇಟ್ಟಾಗ ಬಾಯಿಬಡಿದು ಮಣ್ಣುತೂರುವ ಜನರು, ತಮ್ಮ ಗೌಡನ ಹೆಂಡತಿಗೆ ಯಾರೋ ಅವಮಾನ ಮಾಡಿದರೆಂದು ಕತ್ತನ್ನು ಕತ್ತರಿಸಿಕೊಳ್ಳುತ್ತಾರೆ. ಬಲಿಗೂ ಸಿದ್ಧರಾಗುತ್ತಾರೆ. ಇದು ವಾಸ್ತವವೇ ಇದ್ದೀತು. ಇಂತಹ ಪ್ರಸಂಗದ ಬಗ್ಗೆ ಸಾಮಾಜಿಕವಾದ ದೃಷ್ಟಿಕೋನವೊಂದನ್ನು ತಳೆಯಲು ನಿರ್ದೇಶಕರು ಸೋತಿದ್ದಾರೆ. ಅಲ್ಲದೆ ಆ ಬಗ್ಗೆ

ಅವರು ತಲೆಯನ್ನು ಕೆಡಿಸಿಕೊಂಡಿಲ್ಲ. ಕಲಾತ್ಮಕತೆಯ ಹೆಸರಿನಲ್ಲಿ ನಡೆದಿರುವ ದಗಾಬಾಜಿ ಎಂಬುದು ಇದು ಸ್ಪಷ್ಟ.

ತಾಂತ್ರಿಕವಾದ ಕೆಲವು ಲೋಪಗಳನ್ನು-ದೋಷಗಳನ್ನಲ್ಲ-'ಮಾಡಿ ಮಡಿದವರು' ಪಡೆದಿದೆ ಎಂಬ ಮಾತ್ರಕ್ಕೆ ಅದರ ಆಶಯದ ಸಮಕಾಲೀನತೆಯನ್ನು ಪರಿಗಣಿಸದೆ ಚಿತ್ರವಿಮರ್ಶಕ ಪಂಡಿತರು ಹೀಗೆಳೆದಿದ್ದಾರೆ. ಇದೊಂದು ವಿಪರ್ಯಾಸವೇ ಸೈ.

ಈ ಪಂಡಿತರ ಇನ್ನೊಂದು ಆರೋಪ ಚಿತ್ರದಲ್ಲಿನ ಅಭಿನಯವನ್ನು ಕುರಿತದ್ದು. ಚಿತ್ರಮಾಧ್ಯಮವನ್ನು ಅರಿತವರು ಚಲನಚಿತ್ರದಲ್ಲಿ ಅಭಿನಯವೆಂಬ ಸಾಂಪ್ರದಾಯಿಕ ಕಲ್ಪನೆಯನ್ನು ಪೋಷಿಸುವುದಿಲ್ಲ. ನಿಜಕತೆಯನ್ನು ಪೂರೈಸುವಂತೆ ಆ ಸಂದರ್ಭದಲ್ಲಿ ಅಭಿನಯವೆಂದು ಕರೆಯುವುದಾದರೆ ಯಶಸ್ಸು ನಿರ್ದೇಶಕನದೇ.

ವಿಕ್ಟೋರಿಯಾ ಡೆಸಿಕಾ ಎಂಬ ಇತ್ತೀಚೆಗೆ ಸತ್ತ-ಪ್ರಸಿದ್ಧ ನಿರ್ದೇಶಕನ ಬಗ್ಗೆ ಹೇಳುವುದುಂಟಂತೆ. 'ಆತ ಬಟಾಟೆ ಚೀಲಗಳ ಕೈಯಲ್ಲೂ ನಟನೆಮಾಡಿಸಬಲ್ಲ' ಎಂದು. ಆದರೆ ಮಾತುಗಳನ್ನು ಆಡುವಲ್ಲಿ ಮಾತ್ರ ನಟರಿಗೆ ವಿಶೇಷ ಜವಾಬ್ದಾರಿ ಇರಬೇಕು. ಅದನ್ನು ಅವರು ಪೂರೈಸುವಲ್ಲಿ ಅವರಿಗೆ ಕೆಲವು ಅಂಕಗಳು ಸಲ್ಲುತ್ತವೆ; ಮತ್ತು "ಕಾಡು" ಚಿತ್ರವನ್ನು ಗಮನಿಸಿ. ಅಖಿಲ ಭಾರತೀಯ ಮಟ್ಟದಲ್ಲಿ ಆ ಚಿತ್ರದ ನಟಿಯ ಅಭಿನಯವನ್ನು ಶ್ಲಾಘಿಸಲಾಗಿದೆ. ಕನ್ನಡದ ಉಚ್ಚಾರಣಾ ರೀತಿಯನ್ನು ಅರಿಯದ ನಟಿಯ ಅಭಿನಯವನ್ನು ಪ್ರಶಸ್ತಿ ನೀಡಿದ ಸಮಿತಿಯ ಕನ್ನಡ ಬಾರದ ಸದಸ್ಯರು ಮಾತ್ರ ಮೆಚ್ಚಬೇಕು. ಕನ್ನಡ ಬಲ್ಲವರು ಆಕೆಗೆ ಧ್ವನಿ ನೀಡುವವರ ಕೆಟ್ಟ ಉಚ್ಚಾರಣೆಯನ್ನು ಸಹಿಸಬೇಕು ಅಷ್ಟೇ. ಇದರ ಜತೆಗೆ ಶರತ್‌ಚಂದ್ರರ ನಾಯಕಿಯ ಚೌಕಟ್ಟಿಗೆ ಸಿಕ್ಕುವ ಪಾತ್ರವನ್ನಾಗಿ ನಿರ್ದೇಶಕರು ಆಕೆಯನ್ನು ಕಲ್ಪಿಸಿದ್ದಾರೆ. ಇಡೀ ಚಿತ್ರದ ವಾತಾವರಣದಲ್ಲಿ ಆ ನಟಿ ಅತ್ಯಂತ ಸೊಫಿಸ್ಟಿಕೇಟೆಡ್ ಆಗಿ ಕಂಡುಬಂದು, ತಪ್ಪಿ ಅಲ್ಲಿ ಬಂದಂತೆ ಕಾಣುತ್ತದೆ. ಹಾಗಿದ್ದರೂ ಆಕೆಯ ಅಭಿನಯವನ್ನು ಹಾಡಿ ಹೊಗಳಲಾಗಿದೆ. ಇದೂ ಒಂದು ವಿಪರ್ಯಾಸ.

ಈ ಜನರು "ಮಾಡಿಮಡಿದವರು" ಚಿತ್ರದಲ್ಲಿನ ಅಭಿನಯದ ಬಗ್ಗೆ ನಿರಾಶರಾಗಿದ್ದು ಸಹಜವೇ ಆಗಿದೆ. ಚಿತ್ರದಲ್ಲಿನ ಅಭಿನಯವೆಂದರೆ ನಿರ್ದೇಶಕನ ದೃಷ್ಟಿಕೋನಕ್ಕೆ ತಕ್ಕ ಸ್ಥಿತಿ ಎಂದಾದ ಮೇಲೆ ನಾವು ಚಿತ್ರದಲ್ಲಿ ನಟರ ಅಭಿನಯವನ್ನು ವಿಮರ್ಶಿಸುವಾಗ ಎಚ್ಚರದಿಂದಿರಬೇಕು. 42ರ ಘಟನೆಗಳು, ಅದೂ ಕರ್ನಾಟಕದ ಮೂಲೆಯೊಂದರಲ್ಲಿ ನಡೆದ ಘಟನೆಗಳು ಅನಾಯಕತ್ವದ ಗೊಂದಲದವು, ಆದರೆ ಉತ್ಸಾಹ, ಹುತಾತ್ಮರಾಗಲು ಇದ್ದ ಆವೇಶಗಳಿಗಾಗಿ ಗಮನಾರ್ಹ, ಎಂದಾದ ಮೇಲೆ 74ರಲ್ಲಿ ನಿಂತವರಿಗೆ ಆ ಘಟನೆಗಳ ಬಗ್ಗೆ ಒಂದು ಬಗೆಯ ವಿವಾದ ಮೂಡುವುದು ಸಹಜ. ನಿರ್ದೇಶಕರಿಗೆ ಈ ವಿವಾದ ಎಲ್ಲಾ ಘಟನೆಗಳ ಸ್ಥಾಯಿಯಾಗುವುದು ಬೇಕಾಗಿದೆ. ಹೀಗಾಗಿ ವಾಸ್ತವವಾಗಿ ಆಯಾ ಘಟನೆಗಳು ಪಡೆದಾಗ ಇದ್ದ ಭಾವವನ್ನು ಚಿತ್ರದಲ್ಲಿ ಅಪೇಕ್ಷಿಸುವುದು ತಪ್ಪು.

ಬದಲಿಗೆ ಚಿತ್ರದ ದೃಷ್ಟಿಕೋನವನ್ನು ಅದು ಘಟನೆಗಳನ್ನು ನೋಡುತ್ತಿರುವ ರೀತಿಯಲ್ಲಿ ಗಮನಿಸಬೇಕು. ಚಿತ್ರದಲ್ಲಿ ನಟರ 'ಅಭಿನಯ' ಇದಕ್ಕೆ ತಕ್ಕುದಾಗಿದೆ ಎಂದು ಹೇಳಬಹುದು. 'ಮಾಡಿಮಡಿದವರು' ಯಾವ ಬಗೆಯ ಲೋಪವೂ ಇಲ್ಲವೆಂದು ಸ್ಥಾಪಿಸುವುದು ನನ್ನ ಉದ್ದೇಶವಲ್ಲ. ಆದರೆ ಚಿತ್ರ ವಿಮರ್ಶಕರು ಪ್ರಸ್ತುತ ಚಿತ್ರವನ್ನು ನೋಡುವಾಗ ಅದರ ಗುಣಾತ್ಮಕ ಅಂಶಗಳ ಬಗ್ಗೆ ಹೇಳುವುದನ್ನು ಮರೆತಿದ್ದಾರೆಂದು ಅನ್ನಿಸಿ ಈ ಲೇಖನ. ಅವರು ಮರೆತಿರುವುದು ಉದ್ದೇಶ ಪೂರ್ವಕವೇ ಎಂಬುದು ಗುಮಾನಿಯ ಸಂಗತಿ.

## ‘ವಂಶವೃಕ್ಷ’ದ ಶ್ರೋತ್ರೀಯರು: ಸಿನಿಮಾದಲ್ಲಿ

ಶ್ರೀ ಎಸ್. ಎಲ್. ಭೈರಪ್ಪನವರ ವಂಶವೃಕ್ಷ ಕಾದಂಬರಿ ತನ್ನ ಕ್ಷೇತ್ರದಲ್ಲಿ ಹಲವು ದೃಷ್ಟಿಗಳಿಂದ ಗಮನಾರ್ಹವಾದಂತೆ, ಆ ಕಾದಂಬರಿಯನ್ನಾಧರಿಸಿದ ಚಲನಚಿತ್ರವೂ ಕೂಡ ಒಂದು ಸಾಧನೆಯಾಗಿದೆ. ಸಧ್ಯ ನಾನು ಕಾದಂಬರಿ ಮತ್ತು ಚಲನಚಿತ್ರದ ಶ್ರೋತ್ರೀಯರ ನಡುವೆ ಇರುವ ಮಹತ್ವದ ವ್ಯತ್ಯಾಸಗಳನ್ನು ಕುರಿತು ಹೇಳಬೇಕೆಂದಿದ್ದೇನೆ.

ಕಾದಂಬರಿಯ ಶ್ರೋತ್ರೀಯರು ಒಂದು ಮೌಲ್ಯ ಶ್ರೇಣಿಯ ಪ್ರತೀಕವಾಗಿ ನಿಲ್ಲುತ್ತಾರೆ. ಸನಾತನವಾದ ನಂಬಿಕೆಯ ಬುಡವಾದ ಈ ಶ್ರೇಣಿಯನ್ನು ಪ್ರತಿನಿಧಿಸುವ ಶ್ರೋತ್ರೀಯರು ವ್ಯಕ್ತಿಯ ಬದುಕು, ತನ್ನಿಂದ ತಾನು ರೂಪಗೊಳ್ಳತ್ತದೆ ಎಂದು ನಂಬುವವರಲ್ಲ. ಒಂದು ವಂಶದ ಕೊಂಡಿಯಾಗಿ ವ್ಯಕ್ತಿ ಜೀವಿಸಿ ತನ್ನ ಮೂಲಕ ವಂಶವೃಕ್ಷ ಬೆಳೆಯಬೇಕು ಎಂದು ನಂಬಿದವರು. ‘ಚಿತ್ರ’ದಲ್ಲಿ ಕಾಣುವ ಶ್ರೋತ್ರೀಯರು ಇದಕ್ಕಿಂತ ಅಷ್ಟು ಭಿನ್ನರಾದವರಲ್ಲ. ಆದರೆ ನಾನು ಇವರಿಬ್ಬರಲ್ಲೂ ವ್ಯತ್ಯಾಸಗಳನ್ನು ಕಾಣುವುದು ನಿರೂಪಣೆಯಲ್ಲಿ ಮುಖ್ಯವಾಗಿ ಮೂರು ಘಟನೆಗಳನ್ನು ಆಧರಿಸಿ ಇದನ್ನು ಈಗ ವಿಶ್ಲೇಷಿಸುತ್ತೇನೆ.

(1) ಕಾತ್ಯಾಯನಿಯ ಎರಡನೆಯ ಮದುವೆಯ ಸಂದರ್ಭದಲ್ಲಿ :

ಕಾದಂಬರಿಯಲ್ಲಿ ಕಾತ್ಯಾಯನಿ ‘ಪ್ರಕೃತಿ ಸಹಜ’ವೆಂದು ವಾದಿಸಿ ತನ್ನ ಎರಡನೆಯ ಮದುವೆಯನ್ನು ಸಮರ್ಥಿಸಿಕೊಳ್ಳುತ್ತಾಳೆ. ಅವಳ ನಿರ್ಣಯ ಅವಳಲ್ಲಿ ಮೂಡುವಾಗ ಸಾಕಷ್ಟು ಒಳತೋಟಿಗೆ ಒಳಗಾಗುತ್ತಾಳೆ. ಅಲ್ಲಿ ಅವಳಲ್ಲಿ ಉಂಟಾಗುವ ತಾಕಲಾಟಕ್ಕೆ ಕಾರಣ ತನ್ನ ನಿರ್ಣಯ ತಪ್ಪೋ ಸರಿಯೋ ಎಂಬುದನ್ನು ಗೊತ್ತು ಮಾಡಿಕೊಳ್ಳಲಾಗದೇ ಇರುವುದೇ ಆಗಿದೆ. ಶ್ರೋತ್ರೀಯರ ಸಂಯಮದ ಬದುಕು ಎದುರಿಗೆ ಇದ್ದು ತಾನು ‘ಸಹಜಧರ್ಮ’ವನ್ನು ಅವಲಂಬಿಸುವುದು ಎಷ್ಟು ಸರಿ!

ಚಲನಚಿತ್ರ ಹೆಚ್ಚೂಕಡಿಮೆ ಹೀಗೆ ನಡೆದಿದೆ. ಆದರೆ ಇಲ್ಲಿ ಕಾತ್ಯಾಯನಿಯ ಸರಿ ತಪ್ಪುಗಳ ನಡುವೆ ಜಗಳವಿದ್ದಂತಿಲ್ಲ. ತನ್ನ ನಿರ್ಣಯದ ಬಗ್ಗೆ ಅವಳಿಗೆ ಸಂಪೂರ್ಣ ಗೌರವವಿದೆ. ಆದರೆ ಶ್ರೋತ್ರೀಯರಂತಹವರ ಮುಂದೆ ಈ ನಿರ್ಣಯವನ್ನು ಸಮರ್ಥಿಸಿಕೊಳ್ಳುವುದಕ್ಕೆ ಅವಳಿಗೆ ಭಯವಿದೆ. ಇದನ್ನವಳು ರಾಜಾರಾಯನಲ್ಲಿ ಹೇಳುತ್ತಾಳೆ. ಇಲ್ಲಿ ಮುಖ್ಯನಾಗುವುದು ಶ್ರೋತ್ರೀಯರು ತಮ್ಮ ಆವರಣದಲ್ಲಿ ಬರುವವರ ಮೇಲೆ ಬೀರುತ್ತಿದ್ದ ಪರಿಣಾಮ. ಕಾತ್ಯಾಯನಿ ಇಲ್ಲಿ ಈ ಪರಿಣಾಮಕ್ಕೆ ಒಳಗಾಗಿದ್ದಾಳೆ.

ಕಾದಂಬರಿಯಲ್ಲಿ ಉದ್ದಕ್ಕೂ ಶ್ರೋತ್ರೀಯರ ಪಾತ್ರದ ಒಳಸ್ತರವಾಗುವ ಈ ಮುಖ ತನ್ನ ಸುತ್ತಣವರ ವಿಚಾರಗಳನ್ನು ಮುಸುಕು ಮಾಡುವುದು-ಇಲ್ಲಿ ಮುಖ್ಯವಾಗಿ ನಿಲ್ಲುತ್ತದೆ.

ಕಾತ್ಯಾಯನಿ ಬೆಟ್ಟ ಹತ್ತುವುದು, ಚಿತೆಯನ್ನು ನೋಡುವುದು ಒಂದು ಸಾಂಕೇತಿಕ ಘಟನೆಯಾದರೂ ಕಾದಂಬರಿಯಿಂದ ಭಿನ್ನವಾದ ಮೇಲೆ ವಿವರಿಸಿದ ಹಿನ್ನೆಲೆಯಲ್ಲಿ ಸಂದಿಗ್ಧ ವಿವರಣೆಯನ್ನು ಪಡೆಯುತ್ತದೆ. ಸಾವಿನ ನಿಷ್ಫಲತೆಯನ್ನು ಗಮನಿಸಿಯೂ ಆದರ್ಶದ ಬೆನ್ನು ಹತ್ತುವ ವಿಫಲತೆಯನ್ನು ಸ್ಪಷ್ಟವಾಗಿ ಸಿನಿಮಾ ಹೇಳಿ ಬಿಡುತ್ತದೆ. ಆದ್ದರಿಂದ ಅವಳು ಹಿಂತಿರುಗಿ ಬಂದು ತನ್ನದು ತಪ್ಪು ಎಂದು ಒಪ್ಪಿಕೊಳ್ಳುವುದು ಮತ್ತೆ ಶ್ರೋತ್ರೀಯರ ಪಾತ್ರದ ಅವರಿಸುವಿಕೆಯನ್ನೇ ಸ್ಪಷಪಡಿಸುತ್ತದೆ. ಶ್ರೋತ್ರೀಯರು ಸಾಧಿಸಿದ್ದು ಮಹತ್ತ್ವದ್ದಿರಬಹುದು. ಅದು ವ್ಯಕ್ತಿಯ ಮಿತಿಯನ್ನು ಅವಲಂಬಿಸಿರುತ್ತದೆ. ಅದರ ಬಗೆಗೆ ಮೆಚ್ಚುಗೆ ಇರುವುದಕ್ಕೂ ಇದಕ್ಕೂ ವ್ಯತ್ಯಾಸವಿದೆ. ಚಲನಚಿತ್ರದ ಶ್ರೋತ್ರೀಯರು ಎರಡನೆಯದನ್ನು ಸಾಧಿಸಲು ಬಾಯಿಬಿಟ್ಟು ಹೇಳುತ್ತಾರೆ-ಭಯ ಗೌರವಗಳನ್ನವರು ಮಾತ್ರ ಪಡೆಯುತ್ತಾರೆ; ಹಿಂಬಾಲಕರನ್ನಲ್ಲ, ಅವರ ನಿಜವಾದ ಸೋಲು ಇಲ್ಲಿ ಪ್ರಾರಂಭವಾಗಿದೆ.

(2) ಶ್ರೋತ್ರೀಯರ ಸನ್ಯಾಸ ಸ್ವೀಕಾರದ ಸಂದರ್ಭ

ಕಾದಂಬರಿ ಈ ಸಂದರ್ಭದ ಎಲ್ಲ ವಿವರಗಳನ್ನೂ ವೈಭವಿಸುತ್ತವೆ. ಬದುಕಿನ ಗತಿಯಲ್ಲಿ ತಾವು ನಂಬಿದ ಮೌಲ್ಯಶ್ರೇಣಿಯಲ್ಲಿ ಒಂದು ಹಂತದಿಂದ ಇನ್ನೊಂದು ಹಂತಕ್ಕೆ ದಾಟುವ ಶ್ರೋತ್ರೀಯರು ಸನ್ಯಾಸ ಸ್ವೀಕರಿಸಿದ್ದು ಒಂದು ಆಚರಣೆಯಾಗುತ್ತದೆ. ಅವರ ಪರಿಸರ ವಿಡೀ ಈ ಆಚರಣೆಯಲ್ಲಿ ಭಾಗಿಯಾಗುತ್ತದೆ. ಈ ವೈಭವಿಸುವಿಕೆ ಪಾತ್ರದ ಹುಸಿಯನ್ನು ಮುಚ್ಚಿಡುವ ಯತ್ನ. ವಂಶವೃಕ್ಷದ ತಮ್ಮ ನಂಬಿಕೆ ಬುಡವಿಲ್ಲದ್ದೆಂದು ತಿಳಿದ ಶ್ರೋತ್ರೀಯರು ತಾವು ನೀಡುವ ತರ್ಪಣ ಉದ್ದೇಶಿತ ಪಿತೃವಿಗೆ ಅಲ್ಲವೆಂಬುದರಲ್ಲಿ ಇರುವ ಅಸಂಗತತೆಯನ್ನು ಅನುಭವಿಸುತ್ತಾರೆ. ಇನ್ನೂ ಸಧ್ಯದ ಆಶ್ರಮದಲ್ಲೇ ಇದ್ದು ಈ ಅಸಂಗತತೆಯನ್ನು ಮುಂದುವರಿಸುವುದು ಬೇಡವಾಗಿ ಅದರಿಂದ ದೂರವಾದ ಸನ್ಯಾಸವನ್ನು ಆಶ್ರಯಿಸುತ್ತಾರೆ. ಈ ಆಶ್ರಯಿಸುವಿಕೆ ತಮ್ಮ ಗೊಂದಲವನ್ನು ಇಲ್ಲವಾಗಿಸಿಕೊಳ್ಳುವುದಕ್ಕಾಗಿ ಬರುತ್ತದೆ. ಇದನ್ನು ವೈಭವಿಸುವುದರಲ್ಲಿ ಅರ್ಥವಿಲ್ಲ. ಸಿನಿಮಾದಲ್ಲಿ ಶ್ರೋತ್ರೀಯರು ಸನ್ಯಾಸ ಸ್ವೀಕರಿಸುವ ಘಟನೆ ತೀರಾ ಸರಳವಾಗಿದ್ದು ಕಾತ್ಯಾಯನಿಯು ಎರಡನೆಯ ಮದುವೆಯಾಗುವಾಗ ಮನೆಬಿಟ್ಟಷ್ಟೇ ಸರಳವಾಗಿದೆ; ಇವೆರಡೂ ಸಂವಾದಿ ಘಟನೆಗಳೂ ಹೌದು.

ಕಾದಂಬರಿಯಲ್ಲಿ ಶ್ರೋತ್ರೀಯರು ಕಳಚಿಬಿದ್ದ ನಂಬಿಕೆಗಳ ಹಿನ್ನೆಲೆಯಲ್ಲೂ ತಮ್ಮ ಸೋಲನ್ನು ಒಪ್ಪಿಕೊಳ್ಳುವುದಿಲ್ಲ. ವಂಶದ ಭಾಂದವ್ಯವನ್ನು ಅನ್ಯತ್ರ ಮುಂದುವರಿಸಲು, ನಡೆಸಲು ಯತ್ನಿಸುತ್ತಾರೆ. ಆದರೆ ಸಿನಿಮಾದಲ್ಲಿ ಹೀಗಾಗದೆ ಅವರು ಸರಳವಾಗಿ ಸನ್ಯಾಸವನ್ನು ತಮ್ಮ ಗೊಂದಲ ನಿರ್ಮೂಲನಕ್ಕಾಗಿ ಹೊಂದುತ್ತಾರೆ. ಇದು ಸಹಜ. ಅದರಿಂದ ಮತ್ತೆ ಪಾತ್ರದ ಇಬ್ಬಂದಿತನ ಇಲ್ಲವಾಗಿದೆ.

(3) ಅಂತ್ಯ :

ಕಾದಂಬರಿಯಲ್ಲಿ ಶ್ರೋತ್ರೀಯರು ಕೊನೆಗೂ ಗೆಲುವಿನ ಹಾದಿಯನೇ ಹಿಡಿದಂತೆ ಚಿತ್ರಿಸಲಾಗಿದೆ. ಸನ್ಯಾಸ ಸ್ವೀಕರಿಸುವಾಗ ವಂಶದ ಕುಡಿಯ ಬಗ್ಗೆ ಅವರು ಚಿಂತಿಸುತ್ತಿದ್ದು ಅದು 'ರಾಯ'ರ ಮನೆಯಲ್ಲಿ ವೃದ್ಧಿಯಾಗುತ್ತಿರುವುದು ತಿಳಿಯುವುದು ಆ ನಂಬಿಕೆಯ ಪುನರುತ್ಥಾನದ ಪ್ರಯತ್ನ. ಅಲ್ಲದೆ ಅವರು ಸಾವಿನ ಮನೆಯನ್ನು ಬಿಟ್ಟು ಹೊರಡುವುದು ಬೆಳಕು ಮೂಡುತ್ತಿರುವಾಗ, ಇವೆಲ್ಲಾ ಅವರ ಸನ್ಯಾಸ ಅವರಿಗೆ ಬಂದು ಗೆಲುವನ್ನು ತಂದುಕೊಟ್ಟಿರುವುದನ್ನು ಹೇಳುತ್ತವೆ.

ಆದರೆ ಸಿನಿಮಾದಲ್ಲಿ ಶ್ರೋತ್ರೀಯರು ನಿಜವಾಗಿ ತಾವು ಕ್ಷಮೆಬೇಡಲು ಬಂದಿದ್ದಾಗಿ ಹೇಳುತ್ತಾರೆ. ಆ ಕ್ಷಮೆ ಸಿಗದಿದ್ದುದರಿಂದ ಸೋತವರಾಗುತ್ತಾರೆ. ಸನ್ಯಾಸವೇ ಸೋಲಾಗಿರುವಾಗ ಮತ್ತೊಂದು ಸೋಲು ಇದು. ಕೊನೆಯಲ್ಲಿ ಅವರು ನಡೆದುಕೊಂಡು ಹೋಗುತ್ತಿರುವ ದೃಶ್ಯ ಗಮನೀಯ. ಹೆಜ್ಜೆಗಳಲ್ಲಿ ಕಾಣುವ ಈ ಸೋಲು, ಹಿನ್ನೆಲೆಯ ಅಷ್ಪಸ್ಪತೆಯಲ್ಲಿ ವೃದ್ಧಿಯಾಗುತ್ತಾ ಹೋಗುತ್ತದೆ.

ಈ ಮೂರು ಘಟನೆಗಳನ್ನು ಸಿನಿಮಾದ ಶ್ರೋತ್ರೀಯರ ಭವ್ಯತೆ, ಅವರ ಸಾಧನೆಗಳ ಬಿತ್ತರಗಳನ್ನು ಅವರನ್ನು ಅಗಮ್ಯರನ್ನಾಗಿಸುವುದೇ ಅಲ್ಲದೆ ಅವರ ಹೆಜ್ಜೆಗಳನ್ನು ಸಂಪೂರ್ಣವಾಗಿ ಮಿತಿಗೊಳಿಸುತ್ತದೆ. ಎಂದರೆ ಅವರ ವರ್ತನೆಗಳು ಅತ್ಯಂತ ಸೂಕ್ಷ್ಮವಾಗಿದ್ದು, ಪ್ರತಿನಿಧಿತವಾದ ಭವ್ಯತೆಯ ವಿವರಗಳನ್ನು ಸಮರ್ಥಿಸಬೇಕಾಗುತ್ತದೆ. (ಇದರಿಂದಲೇ ಶ್ರೋತ್ರೀಯರಂತಹ ವ್ಯಕ್ತಿ ಇರಲು ಸಾಧ್ಯವೇ ಎನ್ನುವ ಪ್ರಶ್ನೆ ದೊಡ್ಡದಲ್ಲ). ಆದರೆ ಕಾದಂಬರಿಯ ಉದ್ದಕ್ಕೂ ಆ ಪಾತ್ರದ ಒಳಸ್ತರವೊಂದು ಬೆಳೆಯುತ್ತಾ ಬಂದು ಕೊನೆಕೊನೆಗೆ ಅವರ ವರ್ತನೆಗಳೆಲ್ಲಾ ಕೇವಲ ವಿಧಿಗಳಾಗಿ ತೋರಿಬರುತ್ತವೆ. ಆದರೆ ಕಾದಂಬರಿಕಾರರ ಆಶಯ ಪಾತ್ರವನ್ನು ಮೆಚ್ಚುವಂತೆ ಮಾಡುವುದೇ ಆಗಿರುವುದಾದ ಘಟನೆಗಳಿಂದ ತಮಗೆ ಬೇಕಾದ ಫಲಿತಾಂಶವನ್ನು ಮಾತ್ರವೇ ಪಡೆಯುತ್ತಾ ಹೋಗುತ್ತಾರೆ. ಸೋಲು ಅನಿವಾರ್ಯವಾದ ಈ ಪಾತ್ರದ ಇನ್ನೊಂದು ಪಾತಳಿಯನ್ನು ವೈಭವಿಸುತ್ತಾರೆ.

ಸಿನಿಮಾದಲ್ಲಿ ನನಗೆ ಇಬ್ಬಂದಿತನ ಎಲ್ಲೂ ಕಾಣುವುದಿಲ್ಲ. ಅವರ ಸಾಧನೆಯು ಅವರಿಗೆ ಸೀಮಿತವಾಗಿದ್ದು ಅದಕ್ಕೆ ಸಮಾನಳಾಗಿ ಕಾತ್ಯಾಯಿನಿ ಬೆಳೆಯುತ್ತಾಳೆ. ಹೀಗಾಗಿ ಪಾತ್ರದ ನಿರೂಪಣೆ ಅಂತ್ಯದತ್ತ ಸಹಜವಾಗಿ ನಡೆದಿದೆ. ಅವರು ಗೆದ್ದರೋ, ಸೋತರೋ ಎಂಬುದು ನನಗೆ 'ಈಗ' ಮುಖ್ಯವಲ್ಲ; ಆದರೆ ಅನಿವಾರ್ಯವಾದದ್ದನ್ನು ಒಪ್ಪಿಕೊಂಡರು ಎನ್ನುವುದೇ ಮೆಚ್ಚತಕ್ಕ ವಿಷಯವಾಗಿದೆ. ಅವರ ಅಧ್ಯಯನ, ಭಾರತೀಯ ತತ್ತ್ವಶಾಸ್ತ್ರ ಇತ್ಯಾದಿಗಳಲ್ಲಿ ಅವರಿಗಿದ್ದ ಆಸಕ್ತಿ, ಸ್ವತಂತ್ರ ವಿಚಾರಗಳನ್ನು ಸಿನಿಮಾ ಕೈಬಿಟ್ಟಿರುವುದು ಮುಖ್ಯ. ಹೀಗಾಗಿ ಅವರನ್ನು ಹೆಚ್ಚು ಮುಕ್ತರನ್ನಾಗಿ ಮಾಡಲಾಗಿದೆ. ಹೆಚ್ಚೆಂದರೆ ಅವರು ಶುದ್ಧಜೀವಿ ಮಾತ್ರ; ಸಂಯಮ, ತಾಳ್ಮೆ ಅವರ ಮುಖ್ಯ ಗುಣ, ಇದಿಷ್ಟೇ ಪ್ರಧಾನ ವಿವರ.

ವಂಶದ ಬಗ್ಗೆ ಶ್ರೋತ್ರೀಯರು ನಂಬುವುದನ್ನೂ ಒಂದು ಮುಖವನ್ನಾಗಿ ಮಾತ್ರ ಸಿನಿಮಾ ಸ್ವೀಕರಿಸುವುದರಿಂದ, ಆ ನಂಬಿಕೆಯನ್ನು ತನ್ನದೇ ಆದ ನಿಕಷದಲ್ಲಿಡುವ ಸ್ವಾತಂತ್ರ್ಯವನ್ನು ಪಡೆಯುತ್ತದೆ. ಹೀಗಾಗಿ ಪ್ರಜ್ಞೆ ಮಾತ್ರ ಕೇಂದ್ರಕ್ಕೆ ಒಂದು ಪಾತ್ರ ಉಪಕರಣವಾಗುತ್ತದೆ; ಸಹಜತೆ ಸಾಧ್ಯವಾಗುತ್ತದೆ. ಈ ಸಾಧನೆಯೇ ನನಗೆ ಮೆಚ್ಚುಗೆ ತಂದದ್ದು.

# ಮತ್ತೊಬ್ಬ ಸೂತಮುನಿ

ಪೀಟರ್ ಬ್ರೂಕ್ ಎಂಬ ರಂಗತಜ್ಞ ತಯಾರಿಸಿದ 'ಮಹಾಭಾರತ' ಚಲನ ಚಿತ್ರವನ್ನು ಭಾರತದ ಬುದ್ಧಿವಂತರಿಗೆ ತೋರಿಸಿ ಚರ್ಚಿಸುವ ಕೆಲವು ಕಾರ್ಯಕ್ರಮ ಡಿಸೆಂಬರ್‌ನಲ್ಲಿ ನಡೆದವು. ಅವುಗಳಲ್ಲೊಂದು ಬೆಂಗಳೂರಿನಲ್ಲಿ ನಡೆದಾಗ ದಕ್ಷಿಣದ ರಾಜ್ಯದ ಪ್ರತಿನಿಧಿಗಳೂ ಸೇರಿದಂತೆ ರಾಜ್ಯದ ವಿವಿಧ ಕಲಾವಲಯದ ಜಾಣರು ಒಡಗೂಡಿ ಒಂದೆರಡು ದಿನ ಕಳೆದರು. ಹಳೆಯ ಪಳಕೆಯ ಮುಖಗಳೊಡನೆ ಬೆಂಗಳೂರಿನಲ್ಲಿ ಟಂಕಿತವಾಗುತ್ತಿರುವ ಹೊಸ ತಲೆಮಾರಿನ ಉತ್ಸಾಹಿಗಳನ್ನೂ ನೋಡಲು ಅವಕಾಶ ಸಿಕ್ಕಿದ್ದು ಸಂತೋಷವೇ ಸರಿ. ಐದೂವರೆ ಗಂಟೆಯ ಚಲನಚಿತ್ರವನ್ನು ನೋಡಿದ್ದು, ಅನಂತರ ತಂಡದೊಡನೆ ಚರ್ಚಿಸಿದ್ದು ಇವೆಲ್ಲವೂ ಈಗಾಗಲೇ ಬೇರೆ ಬೇರೆ ಬರೆಹಗಳಲ್ಲಿ ಬಂದಿವೆ. ಅವುಗಳಲ್ಲಿ ಕೆಲವನ್ನು ನಾನು ಓದಿದ್ದೇನೆ, ನೀವೂ ಓದಿದ್ದೀರಿ, ಹಾಗಾಗಿ ಹೆಚ್ಚು ವಿವರಗಳಿಗೆ ಹೋಗುವುದು ಬೇಕಿಲ್ಲ.

ಬ್ರೂಕ್‌ರ 'ಮಹಾಭಾರತ'ವನ್ನು ಮೆಚ್ಚಬೇಕೆ? ಒಪ್ಪಬೇಕೆ? ನಂಬಬೇಕೆ? ಮೆಚ್ಚಬಹುದು. ಆದರೆ ಉಳಿದೆರಡು ಪ್ರಶ್ನೆಗಳಿಗೆ 'ಇಲ್ಲ'ವೆಂದೇ ನನ್ನ ಉತ್ತರ, ಒಪ್ಪದಿರುವುದನ್ನು, ನಂಬದಿರುವುದನ್ನು ಮೆಚ್ಚುವುದು ಹೇಗೆ ಎಂದು ಹುಬ್ಬುಗಂಟಿಕ್ಕಬೇಕಿಲ್ಲ. ಮೆಚ್ಚಲಿಕ್ಕೆ ಕಾರಣಗಳು ಹಲವಿವೆ. ಎಷ್ಟೋ ವರ್ಷ ಶ್ರಮವಹಿಸಿ, ಅಭ್ಯಾಸ ಮಾಡಿ, ಯೋಜನೆಗಳನ್ನು ರೂಪಿಸಿ, ಮಾನವಸಂಪನ್ಮೂಲವನ್ನು ಬಳಸಿ, ಹಣ ಕೂಡಿಹಾಕಿ ಒಂದು ಹಂತವನ್ನು ತಲುಪಿಸುವ ಸಾಧನೆಯನ್ನು ಯಾರೂ ಮೆಚ್ಚಬೇಕು. ಶ್ರದ್ಧೆಗೆ ತಲೆದೂಗಲೇ ಬೇಕು. ಹಾಗಾಗಿ ಮೊದಲು ಬ್ರೂಕರಿಗೆ ನಮ್ಮ ನಮಸ್ಕಾರಗಳು.

ಒಪ್ಪದಿರುವವರಲ್ಲಿ ಕೆಲವರು ಸಂಪ್ರದಾಯವಾದಿಗಳು ಇದ್ದಾರು; ಕೆಲವರು ಕನಸುಣಿಗಳು ಇದ್ದಾರು. ಸಂಪ್ರದಾಯವಾದಿಗಳು ಮಹಾಭಾರತ (ಪಂಚಮವೇದ)ವನ್ನು ಮ್ಲೇಚ್ಛನೊಬ್ಬ ಹದಗೆಡಿಸುತ್ತಿರುವುದನ್ನು ಕಂಡು ಕುಪಿತರಾದಾರು. (ಕೊಂಚ ಹತ್ತಿರದಿಂದ ಕಂಡರೆ ಈ ವಿರೋಧಿಗಳಿಗೆ ಒಪ್ಪಿಗೆಯಾಗುವ ಬ್ರೂಕ್ ಚಲನಚಿತ್ರದಲ್ಲಿ ಆಗಾಗ ತಲೆ ಹಾಕುತ್ತಾನೆಂಬ ಸಂಗತಿ ತಿಳಿಯುತ್ತದೆ.) ಕನಸುಣಿಗಳಿಗೆ ನವಿಲುಗರಿ ಸಿಕ್ಕಿಸಿಕೊಂಡ ನೀಲಿ ಮುಖದ ಬೆಣ್ಣೆಕೃಷ್ಣ, ಬಿಳಿಯ ರೇಶಿಮೆ ಗಡ್ಡದ ಭೀಷ್ಮ ಮುಂತಾದವರ ಬದಲು ಇಲ್ಲಿರುವ ಪಾತ್ರಗಳು ನಿರಾಸೆ ಹುಟ್ಟಿಸಿ ಒಪ್ಪದೇ ಹೋಗಬಹುದು. ಆದರೆ ಇವರಿಬ್ಬರೂ ಆಗದೆಯೂ ಬ್ರೂಕ್‌ರ ಮಹಾಭಾರತ 'ಒಪ್ಪಿಗೆ'ಯಾಗದಿರುವುದು ಸಾಧ್ಯ.

'ಮಾನವ ಜನಾಂಗದ ರಾಜಕೀಯ ಚರಿತ್ರೆ'ಯನ್ನು ಹೇಳುತ್ತೇನೆಂಬ ಮೊದಲ ವಾಕ್ಯದೊಂದಿಗೆ ಚಿತ್ರ ಮೊದಲಾಗುತ್ತದೆ. ಚಿತ್ರದಲ್ಲಿ ಗೈರುಹಾಜರಾಗಿರುವುದೇ ರಾಜಕೀಯ ಚರಿತ್ರೆ. ಕಾಲದೇಶಗಳಿಗೆ ಬದ್ಧವಾಗದ ಪರಿಸರ, ಉಡುಗೆ ತೊಡುಗೆ, ಹಿನ್ನೆಲೆಯ ಸಂಗೀತ, ಇವೇ ಮುಂತಾದ ವಿವರಗಳಿಂದ ಚರಿತ್ರೆಯ ಕಲ್ಪನೆ ಸೋರಿ ಹೋಗುತ್ತದೆ. 'ಯುದ್ಧದ ಭಯಾನಕತೆ'ಯನ್ನು 'ತಿಳಿಯ ಹೇಳುವ' ಗುರಿ- ಹಾಗೆಂದು ಚಿತ್ರ ಕುರಿತ ಸಾಹಿತ್ಯ ಸಾಮಗ್ರಿ ಹೇಳುತ್ತದೆ-ಇದೆಯಾದರೆ ಆ ಮಹಾಹುನ್ನಾರಗಾರ ಕೃಷ್ಣನನ್ನು ಈಗಿರುವಂತೆ ಚಲನಚಿತ್ರ ಉಳಿಸಿಕೊಳ್ಳಲು ಸಾಧ್ಯವೇ ಇಲ್ಲ. ಮುಖ್ಯವಾಗಿ ಅವನ 'ಗೀತೋಪದೇಶ' ಪ್ರಸಂಗ ಹಾಗೂ ಪಾಂಡವರನ್ನು ನಿಸ್ಸಂತಾನಗೊಳಿಸಿದ ತಂತ್ರ [ಅಭಿಮನ್ಯು, ಘಟೋತ್ಕಚರ ಸಾವು] ಇವೆರಡೂ ಯುದ್ಧ ಹಾಗೂ ಸಾವನ್ನು ನೋಡಲು ಬೇರೆಯೇ ನೆಲೆಗಳನ್ನು ಒದಗಿಸುತ್ತವೆ. ಕೃಷ್ಣನ 'ಗೀತೆ'ಯ ಬಗ್ಗೆ ಎಲ್ಲಿಯಾದರೂ ಕಟಕಿ ವ್ಯಂಗ್ಯಗಳಿವೆಯೇ ಎಂದು ಕಾಯ್ದುನೋಡಿದೆ. ಇರಲಿಲ್ಲ. ಹಾಗೆ ನೋಡಿದರೆ ಅದು ನೋಡುಗರಲ್ಲಿ ಇದ್ದೀತು. ಆದ್ದರಿಂದ ಇದು ಯುದ್ಧವಿರೋಧಿಯಲ್ಲ. 'ತೊಡಗುವಿಕೆ'ಯನ್ನೇ ಬೇಧಿಸುವವನು ಕೃಷ್ಣ. 'ತೊಡಗಿ'ದ ದುರ್ಯೋಧನಾದಿಗಳಿಗೆ ಸ್ವರ್ಗ ಸಿಗುವುದನ್ನೂ ಚಿತ್ರ 'ತೋರಿಸುತ್ತದೆ'.

ಈ ಚಲನಚಿತ್ರವು ಮಹಾಭಾರತದ 'ಮಾನವ' ಮತ್ತು 'ಅತಿಮಾನವ' ಪಾತಳಿಗಳನ್ನು ಗ್ರಹಿಸುವ ವಿಧಾನದಲ್ಲಿ ಮುಖ್ಯದೋಷ ಅಡಗಿದೆ. ಮಹಾಭಾರತದ 'ಅತಿಮಾನವ' ಪಾತಳಿ-ವ್ಯಾಸನ ಹುಟ್ಟು, ಪಾಂಡವರ ಜನನ, ಕೌರವರ ಜನನ, ಶಸ್ತ್ರಾಸ್ತ್ರಗಳ ವಿವರಗಳು, ಅರ್ಜುನನ ಕಿರಾತ ಪ್ರಸಂಗ ಇವೇ ಮುಂತಾದವು-ಮಾನವ ಪಾತಳಿಯ ಸಾಧ್ಯಮಾನ ವಿಸ್ತರಣೆಯಾಗಿ ಬರುವುದೇ ಹೊರತು, ಪ್ರತಿವಾಸ್ತವವಾಗಿ ಅಲ್ಲ ಎಂಬುದನ್ನು ಗಮನಿಸಬೇಕು. ಬ್ರೂಕ್‌ರು ಈ ಅಂಶವನ್ನು ಮಂಡಿಸುವಂತೆ ತೋರುವುದಿಲ್ಲ. ಪಾಂಡವರ ಜನನದ ಸಂದರ್ಭದ ದೃಶ್ಯವಿವರಗಳು, ಯುದ್ಧದ ಹೋರಾಟದ ಸಂದರ್ಭದ ದೃಶ್ಯ ಚಿತ್ರಣ (ಬಾಣಗಳು) ಈ ಮಾತಿಗೆ ನಿದರ್ಶನಗಳು. ಜತೆಗೆ ಕೃಷ್ಣನ ಕಲ್ಪನೆ, ಅಕ್ಷಯ ವಸ್ತ್ರ ಪ್ರಸಂಗವನ್ನು ದೃಶ್ಯೀಕರಿಸಿ ಒಪ್ಪಿಕೊಳ್ಳುತ್ತಾರೆ. ಘಟೋತ್ಕಚನನ್ನು ಕರೆಸುವಾಗ ಮಾಟಗಾರನಂತೆ ಹೂಂಕಾರ ಮಾಡಿಸುತ್ತಾರೆ. ಸಾವನ್ನು ಮುಂಗಂಡ ಪ್ರವಾದಿಯನ್ನಾಗಿ ಮಾಡುತ್ತಾರೆ. ಇವೆಲ್ಲವೂ ಆಕಾರಗೊಳ್ಳದೆ ವಿವರಗಳಾಗಿ ನಿಂತು ಕೃಷ್ಣನ 'ಅತಿಮಾನವ' ಪಾತಳಿ ಕೇವಲ ಇಂದ್ರಜಾಲಿಕನ ತಲೆಟೊಪ್ಪಿಗೆಯಂತೆ ಕಂಗೊಳಿಸುತ್ತದೆ. ಈ ಮಹಾಭಾರತವನ್ನು ಒಪ್ಪುವುದು ಹೇಗೆ?

ಮಹಾಭಾರತದ ಪಾತ್ರಗಳ ಮನೋಭೂಮಿಕೆಯ ಮೂಲಕ ಆ ಕಥನವನ್ನು, ಸಂಘರ್ಷವನ್ನು ಹಿಡಿಯುವ ಯತ್ನ ಇಲ್ಲಿದೆ ಎಂದುಕೊಳ್ಳೋಣವೇ? [ನಾಟಕೀಯವಲ್ಲದ, ಬರಿಯ ಮಾತನಾಡುವ, ಆದರೆ ಅದಕ್ಕೆ ಯಾರೂ ಕಿವಿಗೊಡದ ಪಾತ್ರವೆಂದು ವಿದುರನನ್ನು ಸಂಪೂರ್ಣವಾಗಿ ಚಿತ್ರದಿಂದ ಓಡಿಸಿರುವುದು ನೆನಪಿರಲಿ] ಈ ಮನೋಭೂಮಿಕೆ ಚಾರಿತ್ರಿಕವಾದುದೋ ವೈಯಕ್ತಿಕವಾದುದೋ ಎಂಬುದು ದೊಡ್ಡಪ್ರಶ್ನೆ. ವೈಯಕ್ತಿಕ ನೆಲೆಯಲ್ಲಿ ನೋಡಲು ಪ್ರಾರಂಭಿಸಿದ ಕೂಡಲೇ ಇಡೀ ಮಹಾಭಾರತ ಕುಸಿದು ಬಿದ್ದು ನೂರಾರು 'ದುರಂತ' ನಾಟಕಗಳು ಹುಟ್ಟಿಕೊಳ್ಳುತ್ತವೆ. [ಹಾಗೆ ಆಗಿರುವುದಕ್ಕೆ

ಉದಾಹರಣೆಗಳಿವೆಯಷ್ಟೆ] ಬ್ರೂಕ್‌ರ ಚಲನಚಿತ್ರ ಈ ಬಗ್ಗೆ ಡೋಲಾಯಮಾನ ಸ್ಥಿತಿಯಲ್ಲಿದೆ. ಅಂಬೆ, ದುರ್ಯೋಧನ, ಕೀಚಕ, ಕೊಂಚ ಮಟ್ಟಿಗೆ ಕರ್ಣ ಇವರ ಚಿತ್ರಣದಲ್ಲಿ, ವೈಯಕ್ತಿಕ ಪಾತಳಿಗೆ, ಮನೋಭೂಮಿಕೆಗೆ ಒತ್ತು ಹೆಚ್ಚು ಬಿದ್ದಿದೆ. ಉಳಿದ ಪಾತ್ರಗಳು ಅದರಲ್ಲೂ ಮುಖ್ಯವಾಗಿ ವ್ಯಾಸ, ಕೃಷ್ಣ, ದ್ರೋಣ, ಮುಂತಾದವರಲ್ಲಿ ಚಾರಿತ್ರಿಕ ಪಾತಳಿಗೆ ಒಲವು ಇದೆ. ಆದರೆ ಉಳಿದವರ ಬಗ್ಗೆ ಏನೂ ಹೇಳಲು ಸಾಧ್ಯವೇ ಆಗದು.

ಹಾಗೆಂದರೆ ಈ ಚಿತ್ರದಲ್ಲಿ ಒಂದು ಆಕೃತಿ ನಿರ್ಮಾಣಕ್ಕೆ ಬೇಕಾದ ಪರಿಕರಗಳಿಲ್ಲವೆಂದಲ್ಲ. ಉದ್ದಕ್ಕೆ ಬರುವ ಬೆಂಕಿ, ಭೂಮಿ, ನೀರು, ಆಗಾಗ ಬರುವ ಗಾಳಿ ಮತ್ತು ಆಕಾಶಗಳು; ದೃಶ್ಯವಿವರಗಳನ್ನು ಕಲ್ಪಿಸುವ ತಾಂತ್ರಿಕ ವಿನ್ಯಾಸಗಳು: ನಿರೂಪಣೆಯಲ್ಲಿ ಕಾಲದೇಶಗಳನ್ನು ಭಗ್ನಗೊಳಿಸುವ ಯೋಜನೆ ಇವೆಲ್ಲವೂ ಗಮನ ಸೆಳೆಯುತ್ತವೆ. ಆದರೆ ಈ ವಿವರಗಳನ್ನು ಏಕಾಗಿ ಬಳಸಲಾಗಿದೆ? ನಿರೂಪಣೆಯಲ್ಲಿ ನಿರೂಪಕನೇ ಮುನ್ನುಗ್ಗಿ ಬಂದು ಕಥಾನಕವನ್ನು ನಿಶ್ಚಲಗೊಳಿಸಿ ವ್ಯಾಖ್ಯಾನಗೊಳಿಸುವ ತಂತ್ರ ತನಗೆ ತಾನೇ ಏನೂ ಹೇಳುವುದಿಲ್ಲ. ಎಂಬ ಕೇತನ್‌ಮೆಹ್ತಾರ ಎಂ.ಯೋಗಿ ಟಿವಿ ಸರಣಿಯಲ್ಲೂ ಈ ತಂತ್ರವಿದೆ. ತಂತ್ರ ಬಳಕೆಯಾದ ಒಂದು ಸಂದರ್ಭ ನೋಡೋಣ. ಉದ್ಯೋಗ ಪರ್ವದಲ್ಲಿ ಕೃಷ್ಣ ವಿಶ್ವರೂಪ ತೋರಿಸುವಾಗ ಅವನನ್ನು ಅರೆ ಪಾರದರ್ಶಕ ತೆರೆಯಿಂದ ಬೇರ್ಪಡಿಸಲು ವ್ಯಾಸ ಹಾಗೂ ಹುಡುಗ (ನಮ್ಮೆಲ್ಲರ ಪ್ರತಿನಿಧಿ?) ತೆರೆ ಹಿಡಿದು ಬರುತ್ತಾರೆ. ಇವರು ತೆರೆ ಹಿಡಿಯುವುದರ ಮಹತ್ವ, ಅರ್ಥವಂತಿಕೆ ಏನಿರಬಹುದು? ತಿಳಿಯದು. ಬಹುಶಃ ಏನೂ ಇಲ್ಲ. ಈ ತಂತ್ರ ತನಗೆ ತಾನೇ ಬಳಕೆಯಾಗಿದೆ ಅಷ್ಟೆ. ಇದನ್ನೇ ಇನ್ನಷ್ಟು ವಿಸ್ತರಿಸಿದರೆ ಮಹಾಭಾರತದಲ್ಲಿ ಬರುವ ಅತಿಮಾನವ ವಿವರಗಳನ್ನು ಇರುವಂತೆಯೇ ಹಿಡಿದಿಡಲು ಯತ್ನಿಸಿದಾಗ ಆಗುವ ಅಪಾಯ ಕೂಡ ಈ ಚಿತ್ರದಲ್ಲಿದೆ. ಯುದ್ಧಭೂಮಿಯಲ್ಲಿ ನೆಲಕ್ಕೆ ಬಾಣ ಹೊಡೆದು ನೀರು ತರಿಸಿ ಭೀಷ್ಮನಿಗೆ ಅರ್ಜುನ ಕುಡಿಸಿದ ವಿವರ ನೋಡಿ. ಈ ಚಿತ್ರದಲ್ಲಿ ಇದೊಂದು ಐಂದ್ರಜಾಲಿಕದಂತಿದೆ [ಮಾಂತ್ರಿಕ ಅಲ್ಲ] ಅದರಾಚೆಗೆ ಏನೂ ಸಂಬಂಧವಿಲ್ಲವಾಗಿದೆ.

ಚಿತ್ರ ನೋಡಿದ ಅನಂತರ ಗೆಳೆಯರು ಅಲ್ಲಿನ ದೃಶ್ಯಕಲ್ಪನೆಯನ್ನು ಬಹುವಾಗಿ ಮೆಚ್ಚಿದರು. ಮೆಚ್ಚಿದರು ಎಂದೆ. ಸರಿ, ಅಭಿಮನ್ಯುವಿನ ಕಾಳಗ, ವಿರಾಟನ ಸಭೆ, ಘಟೋತ್ಕಚನ ಇರುಳುಗಾಳಗ [ಈ ದೃಶ್ಯಗಳನ್ನು ನೋಡುತ್ತಿರುವಾಗಲೇ ಬಿ. ವಿಠಲಾಚಾರ್ಯರನ್ನು ಕಲ್ಪಿಸಿಕೊಂಡರು, ನನ್ನ ಗೆಳೆಯರೊಬ್ಬರು. ಕೊಂಚ ಅತಿಯಾಯಿತು ಅನ್ನುತ್ತೀರಾ? ಯಾವುದು ಅತಿ? ಬ್ರೂಕ್‌ರ ಚಿತ್ರೀಕರಣವೋ ಗೆಳೆಯರ ವ್ಯಾಖ್ಯೆಯೋ?] ಇವೆಲ್ಲವನ್ನೂ ಉದಾಹರಿಸಿಬಹುದು. ಮತ್ತೆ ಮೊದಲ ಮಾತು ಬರುತ್ತದೆ. ತಾಂತ್ರಿಕ ಶೋಭೆ, ಕಲ್ಪನೆ ಹಾಗೂ ಬಿಂಬನ ಇವುಗಳನ್ನೇ ಮೆಚ್ಚುವುದಾದರೆ ಸ್ಪಿಲ್‌ಬರ್ಗ್ [ಚಿತ್ರ ನೋಡುವಾಗ ಈತನ ನೆನಪು ಬಂದಿತು. ಮಾರನೆಯ ದಿನ ಆಕಸ್ಮಾತ್ತಾಗಿ ಬ್ರೂಕ್‌ರೇ ಇವನನ್ನು ಉಲ್ಲೇಖಿಸಿದರು.]ನಂಥ ಹಾಲಿವುಡ್ ನಿರ್ದೇಶಕನ ಸಾಟಿ ಯಾರೂ ಇರಲಾರರು. ಆದರೆ ಬ್ರೂಕ್‌ರ ಮಹಾಭಾರತವನ್ನು ಈ ಕಾರಣಕ್ಕಾಗಿ ಒಪ್ಪಬೇಕೇ?

ಈ ತಾಂತ್ರಿಕ ವಿವರಗಳು ಹಾಗೂ ದೃಶ್ಯ ಕಲ್ಪನೆಗಳು ಕೂಡ ವಿಭಿನ್ನ ಶೈಲಿಗಳ ಮಿಶ್ರಣವಾಗಿ ಬಿಟ್ಟಿವೆ. ನಾಲ್ಕು ಜನ ಹೊರುವ ಸಿದಿಗೆಯ ಮೇಲೆ ನಿಂತು ಹೋರಾಡುವ

ಭೀಷ್ಮ, ಅತಿಪೌರ್ವಾತ್ಯ ನಾಡಿನ ಉಡುಪು, ಸಂಗೀತಗಳ ಹಿನ್ನೆಲೆಯ ವಿರಾಟನಗರಿ, ಅಭಿಮನ್ಯುವಿನ ಕಾಳಗದಲ್ಲಿ ಆಫ್ರಿಕಾದ ಆಯಾತಾಕಾರದ ಗುರಾಣಿಗಳು, ಏಕಲವ್ಯನಲ್ಲಿ ಕೇರಳದ ಹಳದಿ, ಹೀಗೆ ಎಲ್ಲ ಬೆರೆತಿವೆ. ಮಹಾಭಾರತವನ್ನು ಎಲ್ಲ ಜನಾಂಗಗಳ ಕಥೆ ಎನಿಸಲು ಎಲ್ಲದರ ಚೂರುಪಾರನ್ನು ಬೆರೆಸುವುದು ಸರಿಯಾದ ಮಾರ್ಗವೇ? ಆ ಚೂರುಚೂರುಗಳು ಅಂತಾ ದೇಶಗಳ ಧನಸಹಾಯ ಪಡೆದದ್ದರಿಂದ ಸಮರ್ಥನೀಯವಾಗಿರಬಹುದು. ಆದರೆ ಚಲನಚಿತ್ರದ ಆಕೃತಿಯನ್ನು ಅವು ಕಟ್ಟಿಕೊಡಲಾರವು. ಬೇರೆಬೇರೆ ನಾಡುಗಳಿಂದ ಬಂದ ನಟರನ್ನು ನಟಿಯರನ್ನು ಕೂಡಿ ಹಾಕಿ ಜಾಗತಿಕ ಸ್ವರೂಪ ನೀಡಲು ಯತ್ನಿಸಿದ್ದಾರಷ್ಟೆ [ಆದರೆ ಕಪ್ಪು, ಸೆಮಿಟಿಕ್ ಮತ್ತು ಮಂಗೋಲಿಯನ್ ಬುಡಕಟ್ಟಿನಿಂದ ಬಂದ ನಟ ನಟಿಯರ ಹಂಚಿಕೆಯಲ್ಲಿ ಪೂರ್ವಸಿದ್ಧ ಮಾದರಿಗಳನ್ನು ಅನುಸರಿಸಿದಂತೆ ತೋರುತ್ತದೆ. ಅಮಾನುಷ, ಆದಿಮ, ತೀವ್ರ ದುಡುಕಿನ ಪಾತ್ರಗಳಿಗೆ ಕಪ್ಪು ನಟನಟಿಯರನ್ನು ಆಯ್ಕೆ ಮಾಡಿದ್ದೇಕೆ? ಭೀಮ ಹಿಡಿಂಬೆಯರು ಘಟೋತ್ಕಚನ ಸಾವಿಗೆ ಅಳುವಾಗ ಆಫ್ರಿಕನ್ ಬುಡಕಟ್ಟಿನ ಹಾಡಿಗೆ ಬದಲಾಗುವುದೇಕೆ? [ಇವುಗಳಿಗೆ ವಿಶೇಷ ಅರ್ಥ ಹಚ್ಚಬಾರದೆಂದು ಗೆಳೆಯರು ನನ್ನೊಡನೆ ವಾದಿಸುತ್ತಾರೆ. ಏಕೆ? ಬೇರೆ ದೇಶದ ಅತಿಥಿಗಳಿಗೆ ಮುಜುಗರವನ್ನುಂಟು ಮಾಡುವ ಪ್ರಶ್ನೆ ಎಂದೇನು?]

ಇಷ್ಟೆಲ್ಲ ಆದಮೇಲೆ ಈ ಮಹಾಭಾರತವನ್ನು ನಂಬಬೇಕೇ ಎಂಬ ಪ್ರಶ್ನೆ. ಎಲ್ಲ ಮಹಾಭಾರತಗಳೂ ನಂಬಿಕೆಗೆ ಅರ್ಹವೇ ಆಗಿವೆಯಷ್ಟೆ. ಆದರೆ ಬ್ರೂಕ್‌ರ ಈ ಕೃತಿಯ ಬಗ್ಗೆ ನನಗೆ ನಂಬಿಕೆ ಹುಟ್ಟುವುದಿಲ್ಲ. ನಂಬಿಕೆ ಎಂದರೇನು? ಕಲಾಕೃತಿಯ ಹಿಂದಿನ ಉದ್ದೇಶ. ಕಲಾಕೃತಿಯ ನಿರ್ಮಾಣ, ಕಲಾಕೃತಿಯ ಪ್ರಸಾರ, ಕಲಾಕೃತಿಯ ಚರ್ಚೆ– ಇವೆಲ್ಲವೂ ಸಮನ್ವಯಗೊಂಡು ಸಾಮರಸ್ಯ ತೋರಿಬಂದರೆ ಆಗ ಕೃತಿ ನಂಬಿಕೆಗೆ ಅರ್ಹ. ಇಲ್ಲದಿದ್ದರೆ ಇಲ್ಲ. ಅನಥೆಂಟಿಕ್ ಆಗುತ್ತದೆ. ಇಲ್ಲಿ ಅನಥೆಂಟಿಕ್ ಎಂಬುದನ್ನು ಅನಧಿಕೃತ, ಮೂಲಕ್ಕೆ ದೂರವಾದುದು ಎಂಬ ಅರ್ಥದಲ್ಲಿ ಬಳಸಿಲ್ಲ. ಅದು ನಮಗೆ ನೀಡುವ ಅನುಭವ ಅಧಿಕೃತವಲ್ಲ ಎಂಬ ಅರ್ಥವಷ್ಟೇ ನಮಗೆ ಇಲ್ಲಿ ಮುಖ್ಯ. ಇದನ್ನು ಹೇಗೆ ಸಮರ್ಥಿಸುವುದು? ಚಿತ್ರ ನೋಡಿದ ಮಾರನೇ ದಿನದ ಚರ್ಚೆಯಲ್ಲಿ ಮತ್ತೆ ಮತ್ತೆ ಪಲ್ಲವಿಯಂತೆ ಬಂದು ಮಾತು: "ಇದು ಭಾರತೀಯರಿಗೆಂದೇ ತಯಾರಿಸಿದ ಚಿತ್ರವಲ್ಲ; ನೆನಪಿಡಿ". ಹಿಂದಿನ ದಿನವೇ ಇದನ್ನು ಸೂಚ್ಯವಾಗಿ ಸಂಚಾಲಕಿ ವಿಜಯ ಮೆಹ್ತಾ ಹೇಳಿದ್ದರು. ಏನು ಹೀಗಂದರೆ? ಭಾರತೀಯರಿಗೆಂದೇ ಕಲಾಕೃತಿಗಳು ಸೃಷ್ಟಿಯಾಗುತ್ತವೆ ಎಂದರೇನು.?ಅಥವಾ ವ್ಯಾಸಭಾರತದ ಹಿಡಿತಕ್ಕೆ ಸಿಲುಕಿದ ಭಾರತೀಯರಿಗೆ ಬಿಡುಗಡೆಯೇ ಇಲ್ಲವೆಂಬ ಅನುಕಂಪವೋ? ದೇಶೀಯ ಪರಂಪರೆಗಳು ವ್ಯಾಸನನ್ನು ತಮಗೆ ತಕ್ಕಂತೆ ವ್ಯಾಖ್ಯಾನಿಸಿ ದೇಶಕಾಲಗಳಿಗೆ ಬದ್ಧವಾಗಿಸಿಯೂ ಶ್ರೇಷ್ಠ ಕಲಾಕೃತಿಗಳನ್ನು ಸೃಷ್ಟಿಸಿ ಭಾರತೀಯರ ಸಂವೇದನೆಯನ್ನು ಹೆಚ್ಚು ಮುಕ್ತಗೊಳಿಸಿವೆ. ಹೀಗಿರುವಾಗ ಭಾರತೀಯರು ವ್ಯಾಸಭಾರತವನ್ನು ಗಮನಿಸಿಯೇ ಇನ್ನೊಂದು ಮಹಾಭಾರತವನ್ನು ನೋಡುತ್ತಾರೆ ಎಂಬ ಚಿಂತನೆಯೇ ತಪ್ಪು; ಬುಡವಿಲ್ಲದ್ದು. ಬ್ರೂಕ್‌ರು ಈ ವಾದವನ್ನು ತಂತ್ರವನ್ನಾಗಿಯೂ ಬಳಸುತ್ತಿರಬಹುದು. ಹಾಗಾದಾಗಲೂ ಕಲಾಕೃತಿಯು ನಮ್ಮ ನಂಬಿಕೆಯ ವಲಯದ ಆಚೆಗೇ ಉಳಿಯುತ್ತದೆ.

ಮತ್ತೆ ಕೆಲವರು ಬಿ.ಆರ್. ಚೋಪ್ರಾ ಅವರ ಸಂದರ್ಭದಲ್ಲಿ ಪೀಟರ್ ಬ್ರೂಕ್‌ರನ್ನು ಇಟ್ಟು ನೋಡಲು ಯತ್ನಿಸಬಹುದು. ಎರಡೂ ಸರಕಾರಿ ನೆರವಿನಿಂದಲೇ ಪ್ರಚುರಗೊಳ್ಳುತ್ತಿವೆ ಎಂಬುದನ್ನು ಮರೆಯಬಾರದು. ದೂರದರ್ಶನದ ಮೂಲಕ ಚೋಪ್ರಾ ಹರಿದು ಬಂದಾಗ, ಮುಜುಗರ ಪಡುವವರಿಗೆಂದೇ ವಿಶೇಷವಾಗಿ ಪ್ರಚುರಪಡಿಸಿದ ಸಾಮಗ್ರಿ ಬ್ರೂಕ್‌ರ ಮಹಾಭಾರತ. [ಸುಮ್ಮನೆ ನಿಮಗಾಗಿ ಒಂದು ಸುದ್ದಿ: ಹಲವು ಮಂದಿ ಈ ಮಹಾಭಾರತವನ್ನು ನೋಡಲಿಲ್ಲವಲ್ಲ. ಅವರಿಗಾಗಿ ಕರ್ನಾಟಕದ ಚೇಂಬರ್ ಆಫ್ ಕಾಮರ್ಸ್ ವಿಶೇಷ ಪ್ರದರ್ಶನವನ್ನು ಯೋಜಿಸುತ್ತಿದೆಯಂತೆ. ಗಂಟೆಗಳು ಉಳಿದವೇನು?] 'ಗಾಂಧಿ'ಯಂತೆ ಎಲ್ಲರಿಗೂ ಕಾಣುವಂತೆ ಬರಲಿಲ್ಲ. ಫ್ರೆಂಚ್ ಅತ್ತರಿನಂತೆ ಕೆಲವರಿಗೆ ದಕ್ಕಿದ ಈ ಕೃತಿಯನ್ನು ಚೋಪ್ರಾ ಅವರ ಮಾದರಿಗೆ ಎದುರಾಗಿ ನಿಲ್ಲಿಸಿ ಚರ್ಚಿಸುವ ಅವಶ್ಯಕತೆಯೇ ಇಲ್ಲ.

ವಸಾಹತುಗಳನ್ನು ತೊರೆದು ಹೋದವರು ವಸಾಹತುಗಳ ತಮ್ಮ ಗ್ರಹಿಕೆಯನ್ನು ಮತ್ತೊಮ್ಮೆ ಪರಿಷ್ಕರಿಸಿ ಮಂಡಿಸುವ ಯತ್ನಗಳು ಈಗ ಅಗಾಧ ಪ್ರಮಾಣದಲ್ಲಿ ನಡೆಯುತ್ತಿವೆ. ಅದರ ಒಂದು ಮಾದರಿ 'ಮಹಾಭಾರತ': ಬ್ರೂಕ್‌ರು ಅದರ ಚಿತ್ರಕಥಾ ಲೇಖಕ, ನಾಟಕಕಾರ. ಒಂದೂವರೆ ದಶಕಗಳ ಹಿಂದೆ ಆರಂಭಿಸಿದ ಯೋಜನೆಗೆ ಆಗ ಒತ್ತಾಸೆಗಳೇನೇ ಇರಲಿ, ಈಗ ನಮಗೆ ಲಭ್ಯವಿರುವ ಚೌಕಟ್ಟಿನಲ್ಲಿ ಮಾತ್ರ ಅದನ್ನು ನೋಡಲು ಸಾಧ್ಯ ತಾನೇ? ಬಹುಶಃ ಮತ್ತೆ ನಾವು ಎಂದೆಂದೂ ನೋಡದೇ ಹೋಗಬಹುದಾದ ಬ್ರೂಕ್‌ರ ಮಹಾಭಾರತಕ್ಕೆ ಗುಡ್ ಬೈ. ಬಾದರಾಯಣನು ಕೊಟ್ಟ ಪುಸ್ತಕಗಳಾದ ದೇಶೀಮಾದರಿಗಳು–ಪಂಪ, ಕುಮಾರವ್ಯಾಸರು–ನಮ್ಮೊಡನೆ ಇರುತ್ತವೆ.

# ನಿರ್ದೇಶಕನ ಹುಡುಕಾಟದಲ್ಲಿ ಕಾರಂತರು

ನಾಟಕಗಳಿಗೆ ನಿರ್ದೇಶಕರೊಬ್ಬ ಬೇಕಾಗುತ್ತಾರೆ ಎಂಬುದನ್ನು ಒಪ್ಪಿಕೊಳ್ಳುವ ಕನ್ನಡ ನಾಟಕಗಳು ತೀರಾ ಇತ್ತೀಚಿನವು. ನಿರ್ದೇಶಕರೆಂಬುವವರು ನಾಟಕವನ್ನು ರಂಗನಿರ್ಮಿತಿಯ ಮಟ್ಟಕ್ಕೆ ಬದಲಿಸುವ ಜವಾಬ್ದಾರಿಯುಳ್ಳವರೆಂಬುದನ್ನು ಅರಿತ ನಿರ್ದೇಶಕರು ಕೈ ಬೆರಳಿನ ಮೇಲಿನವರು. ಇಂತಹ ಪರಿಸ್ಥಿತಿಯಲ್ಲಿ ಪ್ರತಿಭಾವಂತರೊಬ್ಬರು ಏನು ಮಾಡಿದರೂ ಅದು ಒಂದು ಸಾಧನೆಯಾಗುವುದರಲ್ಲಿ ಆಶ್ಚರ್ಯವಿಲ್ಲ. ಎರಡು ವರ್ಷಗಳ ಅವಧಿಯಲ್ಲಿ ಒಬ್ಬರು ನಿರ್ದೇಶಿಸಿದ ಹನ್ನೆರಡು ನಾಟಕಗಳನ್ನು ನಾನು ರಂಗದಲ್ಲಿ ಕಂಡಿದ್ದೇನೆ. ಅವರು ನಿರ್ದೇಶಿಸಿರುವ ಒಟ್ಟು ಕನ್ನಡ ನಾಟಕಗಳು ಇದಕ್ಕೆ ಎರಡರಷ್ಟಿವೆ. ಇದು ಸಂಖ್ಯೆಯ ದೃಷ್ಟಿಯಿಂದ ಒಂದು ಸಾಧನೆ ಎನ್ನಬಹುದಾದರೂ ಅದಕ್ಕೂ ಮುಖ್ಯವಾಗಿ ಈ ಎಲ್ಲ ರಂಗನಿರ್ಮಿತಿಗಳಲ್ಲಿ ನಿರ್ದೇಶಕರು ವಿವಿಧ ಆಯಾಮಗಳನ್ನು ಜವಾಬ್ದಾರಿಯುತವಾಗಿ ಪ್ರಕಟಿಸಿದ್ದಾರೆ ಎನ್ನುವುದು ಮುಖ್ಯ. ಕಾರಂತರು ನಿರ್ದೇಶಕರಾಗಿ ತಮ್ಮ ಗರಿಷ್ಠ ಸಾಧನೆಯನ್ನು ಕೊಟ್ಟಿಲ್ಲ. ಕೊಡಬೇಕಾಗಿತ್ತೆಂದು ಅದರ ಅರ್ಥವಲ್ಲ. ಅವರು ತಮ್ಮ ಸಾಧ್ಯತೆಗಳನ್ನು ನಾಟಕಗಳಿಂದ ನಾಟಕಗಳಿಗೆ ಹುಡುಕುತ್ತಾ ಹೊರಟಿದ್ದಾರೆ.

ಕಾರಂತರು ಬಹುಪಾಲು ನಾಟಕಗಳಲ್ಲಿ ತಾವೇ ನಟರಾಗಿದ್ದುಕೊಂಡು ನಿರ್ದೇಶಕರಾಗಿಯೂ ಉಳಿಯುತ್ತಾರೆ. ಈ ನಾಟಕಗಳೆಲ್ಲ ಸೋತಿವೆ ಎಂದು ಕೆಲವರ ಅಭಿಪ್ರಾಯ. ಹೀಗೆ ಮಾಡುವುದರಲ್ಲಿ ಕಾರಂತರ ಉದ್ದೇಶ ಏನಿದ್ದಿರಬಹುದೆಂದು ಊಹಿಸಬಹುದು. ನಟರ ಚಲನವಲನ ಮತ್ತು ಗುಂಪುಗಳನ್ನು ರಂಗದ ಮೇಲೆ ಮೊನಚಾಗಿ ಎಂದೂ ಕಾರಂತರು ಇಟ್ಟದ್ದಿಲ್ಲ. ತಮ್ಮ ಸಹನಟರ ಸಾಧ್ಯತೆಗಳನ್ನರಿತು ಅವರು ಇವುಗಳನ್ನು ರೂಪಿಸುತ್ತಾ ಹೋಗುತ್ತಾರೆ. ಆದ್ದರಿಂದ ಅವರೇ ಪಾತ್ರವಹಿಸಿದ ನಾಟಕಗಳು ಒಂದೊಂದು ಸುಧಾರಿತ 'ರಿಹರ್ಸಲ್'ಗಳಾಗಿರುತ್ತವೆ. ಆದರೆ ಅವರು ನಟರಾಗದೆ ಉಳಿದ ನಾಟಕಗಳಲ್ಲಿ ಹೀಗಾಗುವುದಿಲ್ಲ. 'ಸ್ವರ್ಗಕ್ಕೆ ಮೂರೇ ಬಾಗಿಲು'ಏನ ಪ್ರದರ್ಶನಗಳಲ್ಲಿ ಚಲನೆ ಮತ್ತು ಗುಂಪುಗಳು ನಿಖರವಾಗಿದ್ದವು. 'ಪಂಜರ ಶಾಲೆ'ಯಲ್ಲೂ ಇದನ್ನೇ ಕಾಣಬಹುದು.

ನಟರ ಅಭಿನಯವೆಂಬುದು ಸನ್ನಿವೇಶದ ಒಂದಂಗ ಎನ್ನುವುದು ಅವರ ನಿರ್ದೇಶನದ ಒಂದು ಮುಖ್ಯ ಸಂಗತಿ. ಕೇವಲ ಅಭಿನಯದಿಂದಲೇ ಸನ್ನಿವೇಶವನ್ನು ನಿರ್ಮಿಸಿದ ಉದಾಹರಣೆಗಳನ್ನು ಕಾಣಬಹುದು. 'ಬಿರುದೆಂತೆಂಬರ ಗಂಡ'ದ ಪ್ರಾರಂಭದ

ದೃಶ್ಯದಲ್ಲಿ ರಂಗದಮೇಲೆ ಇದ್ದ ಜನರು ತಮ್ಮ ಚಲನೆಯಿಂದ ಇಕ್ಕಟ್ಟು ಮತ್ತು ಜಾತ್ರೆಯ ಸನ್ನಿವೇಶವನ್ನು ನಿರ್ಮಿಸಿದರು. ಅಲ್ಲದೆ ಹುಸಿಚಲನೆ-ಮೈಮಿಂಗ್-ಯನ್ನು ಕಾರಂತರು ಬಳಸಿದ ಕಡೆಯಲ್ಲೆಲ್ಲಾ ಇದೇ ಪರಿಣಾಮವನ್ನು ಕಾಣಬಹುದಾಗಿದೆ. 'ಏವಂ ಇಂದ್ರಜಿತ್'ನಲ್ಲಿ ಇಂಟರ್‌ವ್ಯೂನ ಸನ್ನಿವೇಶ ಇದಕ್ಕೆ ಉದಾಹರಣೆ. ಪಂಜರ ಶಾಲೆಯಲ್ಲಿ ಪಂಜರ ನಿರ್ಮಾಣದ ಸಂದರ್ಭದಲ್ಲಿ ಬೇರೆಬೇರೆಯ ರೀತಿಯ ಹುಸಿಚಲನೆಗಳನ್ನು ಒಂದು ಬಂಧಕ್ಕೆ ತರಲು ಅವರು ಲಯಬದ್ಧವಾದ ಘೋಷಣೆಗಳನ್ನು ಬಳಸಿದ್ದರು. ಈ ಎಲ್ಲ ನಿರ್ದೇಶನಗಳಲ್ಲೂ ಕಾರಂತರು ಸನ್ನಿವೇಶ ನಿರ್ಮಾಣವನ್ನು ತಮ್ಮ ನಿರ್ದೇಶನದ ಒಂದು ಪ್ರಮುಖ ಜವಾಬ್ದಾರಿಯನ್ನಾಗಿ ತಿಳಿದಿದ್ದಾರೆ. ಇದರಿಂದಾಗಿ ಅವರು ನಾಟಕವನ್ನು ಅರ್ಥವಿಸುವ ಬಗೆಯು ಅವು ನಿರ್ಮಿಸಿದ ಸನ್ನಿವೇಶಗಳಿಂದಲೇ ಹುಟ್ಟಬೇಕಾಗುತ್ತದೆ. ಆದ್ದರಿಂದಲೇ ನಾನು ಹೇಳಿದ್ದು ಕಾರಂತರ ನಾಟಕಗಳಲ್ಲಿ ಅಭಿನಯ ಗೌಣ.

ಇನ್ನು ಈ ಸನ್ನಿವೇಶ ನಿರ್ಮಾಣಕ್ಕೆ ಕಾರಂತರು ಬಳಸುವ ವಿಧಾನಗಳು. ಸಂಗೀತ, ಬೆಳಕು, ರಂಗಸಜ್ಜಿಕೆ, ರಂಗದ ಬಳಗ ಇವುಗಳೆಲ್ಲ ಸಾಧನಗಳಾಗುತ್ತವೆ. ನಾಟಕದ ಓಟವೊಂದನ್ನೇ ನಿಯಂತ್ರಿಸುತ್ತಾ ಉಳಿದವುಗಳು ಗಮನಕ್ಕೆ ಬಾರದಂತೆ ಅವರು 'ಏವಂ ಇಂದ್ರಜಿತ್' ಅನ್ನು ನಿರ್ಮಿಸಿದರು. ಒಬ್ಬನೇ ನಟ ಬೇರೆ ಬೇರೆ ಪಾತ್ರಗಳನ್ನು ವಹಿಸಬೇಕಾಗಿ ಬರುವ ಆ ನಾಟಕದಲ್ಲಿ ರಂಗನಿರ್ಮಿತಿಯ ಓಟವೇ ಸನ್ನಿವೇಶ ನಿರ್ಮಾಣಕ್ಕೆ ಮುಖ್ಯವಾದ ಸಾಧನವೆಂದು ತಿಳಿದಿದ್ದು ಅವರ ಒಂದು ಸಾಧನೆ. ರಂಗಸಜ್ಜಿಕೆಯಲ್ಲಿ ನಾಟಕದ ಅರ್ಥವನ್ನು ಹೊರತಂದದ್ದು. 'ಸ್ವರ್ಗಕ್ಕೆ ಮೂರೇ ಬಾಗಿಲು' ಮತ್ತು 'ನಾಟಕಕಾರನ ಶೋಧನೆಯಲ್ಲಿ ಆರು ಪಾತ್ರಗಳು' ನಾಟಕಗಳಲ್ಲಿ ನಾಟಕದ ಓಟವನ್ನು ಲಯಕ್ಕೆ ತರುವ ತಾಂತ್ರಿಕ ಸಾಧನೆಯು 'ಸ್ವರ್ಗಕ್ಕೆ ಮೂರೇ ಬಾಗಿಲು'ವಿನಲ್ಲಿ ನಾಟಕ ಹೇಳುವ 'ಹಳೆಯದರಲ್ಲಿ ಹೊಸದು ಹುಟ್ಟುವ' ಸಂದೇಶವನ್ನು ಸಾಂಕೇತಿಕವಾಗಿ ತೋರಿಸಿತು. ಅವರ ಬಯಲು ನಾಟಕಗಳಿಂದ ಕೂಡ ನಿದರ್ಶನಗಳನ್ನು ನೋಡಬಹುದು. ಈಡಿಪಸ್‌ನಲ್ಲಿ ವಿಶಾಲ ಚಲನೆಗೆ ಅವಕಾಶ ಕೊಟ್ಟು ನಾಟಕದ ದುರಂತದ ಒತ್ತಡವನ್ನು ಹೊರತಂದರು.

ಸಂಗೀತವನ್ನು ಹಿನ್ನೆಲೆಯಲ್ಲಿ ಮತ್ತು ರಂಗದ ಮೇಲೆ ಎರಡೂ ಕಡೆ ಬಳಸಿದ್ದಾರೆ. 'ತೆರೆಗಳು' (ಬಯಲಾಟ) ಮತ್ತು 'ಜೋಕುಮಾರಸ್ವಾಮಿ'ಗಳಲ್ಲಿ ಕಾರಂತರು ಮಾತು ಮತ್ತು ಸಂಗೀತಗಳಿಗೆ ಸಮಾನ ಪ್ರಾಧಾನ್ಯ ಕೊಟ್ಟಿದ್ದರು. 'ಪಂಜರ ಶಾಲೆಯಲ್ಲಿ' ಕಲ್ಪಕತೆಗೆ ಪ್ರಾಧಾನ್ಯ ಅದು ತಕ್ಕದಾಯಿತಾದರೂ ಕಾರಂತರು ಇವೆರಡರ ಮೇಳನದಲ್ಲಿ ಇನ್ನೂ ತಕ್ಕ ಪರಿಣಾಮಕ್ಕಾಗಿ ಹುಡುಕಾಟ ನಡೆಸಿದ್ದಾರೆ ಎನ್ನಿಸುತ್ತದೆ. ಆದ್ದರಿಂದ ಅವರು musical ಆಗಿಸಿ ನಿರ್ಮಿಸಲಿರುವ ಹಯವದನ ಕುತೂಹಲಕಾರಿಯಾದುದು. ಇಷ್ಟೆಲ್ಲಾ ಹೇಳಿದರೂ ಕಾರಂತರ ನಿರ್ದೇಶನ ಅತ್ಯಂತ ಸಮರ್ಥವಾದುದನ್ನೇ ನಿರ್ಮಿಸಿದೆ ಎಂದು ಹೇಳುವಂತಿಲ್ಲ. 'ಏವಂ ಇಂದ್ರಜಿತ್'ನಲ್ಲಿ ಶಿಲ್ಪದ ನಿರ್ಮಾಣಕ್ಕೆ ಹೆಚ್ಚು ಅವಧಾರಣೆ ಬಿದ್ದು ನಾಟಕದ ಅಂತ್ಯ ಹಳೆಯ ನಾಟಕಗಳ ನೀತಿಬೋಧನೆಯ ಸಾಂಗ್ ಆಯಿತು. 'ಈಡಿಪಸ್'ನಲ್ಲಿ ಪಾಪದ ಕಾರಣವಾಗಿ ಥೀಬ್ಸ್‌ನಲ್ಲಿ ಉಂಟಾದ ಗೊಂದಲವನ್ನು ರಂಗದಲ್ಲಿ ತರಲಿಲ್ಲ. ಅರಮನೆಯ ಗೊಂದಲವೇ ಪ್ರಧಾನವಾಯಿತು. ಪಿರಾಂಡೆಲೋನ ನಾಟಕದಲ್ಲಿ ಬಂಧವೇ ಮೂಡಲಿಲ್ಲ. ಕಾರಣ ಕಾರಂತರು ನಾಟಕದ ಸಾಂಕೇತಿಕತೆಗೆ

ಒತ್ತನ್ನು ನೀಡಿದ್ದರು. ಹೀಗೆ ಪಟ್ಟಿ ಬೆಳೆಸಬೇಕಾಗಿಲ್ಲ. ಏಕೆಂದರೆ ಇವುಗಳಿಗೆ ನಿರ್ದೇಶಕರಾಗಿ ಕಾರಂತರ ಕೊರತೆ ಕಾರಣವಲ್ಲ. ಅವರ ಪ್ರಯೋಗಶೀಲತೆಯೇ ಕಾರಣ. ಜತೆಗೆ ಅವರ ಕೈ ಮೀರಿದ ಬಾಹ್ಯ ಕಾರಣಗಳೂ ಇರಬಹುದು. ಉದಾಹರಣೆಗೆ ರಿಹರ್ಸಲ್‌ಗಳ ಸಂಖ್ಯೆ ಕಡಿಮೆಯಾಗುವುದು, ರಂಗಮಂಚ, ಪ್ರೇಕ್ಷಕರು ಇತ್ಯಾದಿ.

ನಾಟಕವನ್ನು ಹವ್ಯಾಸವನ್ನಾಗಿ ಸ್ವೀಕರಿಸಿದವರಿಗೆ ಕಾರಂತರು ಒಂದು ಸವಾಲಾಗುತ್ತಾರೆ. ಏಕೆಂದರೆ ರಿಹರ್ಸಲ್‌ಗಳು ನಾಟಕ ಪ್ರಯೋಗದತ್ತ ಹೊರಟ ರೇಸ್ ಆಗುವುದರಿಂದ ಅಲ್ಲಲ್ಲಿ ವಿಶ್ರಾಂತಿ ಅದರಲ್ಲಿ ಸಾಧ್ಯವೇ ಇಲ್ಲ.

ಕೊನೆಯ ಮಾತು. ಮಾಧ್ಯಮಗಳ ಪರಿವರ್ತನೆ ನಿರ್ದೇಶಕನ ಪ್ರಮುಖ ಜವಾಬ್ದಾರಿ ಎಂದು ತಿಳಿದ ಕಾರಂತರು ಸಿನಿಮಾದಂತಹ ಮಾಧ್ಯಮವನ್ನೂ ಈಗ ಪರೀಕ್ಷಿಸಿದ್ದಾರೆ. [ಅದನ್ನವರು ಅದರ ಸ್ವಾತಂತ್ರ್ಯಕ್ಕಾಗಿ ಮೆಚ್ಚಿರಬಹುದು] ರಂಗ ಮತ್ತು ಸಿನಿಮಾಗಳ ಮಾಧ್ಯಮಗಳಲ್ಲಿ ಅತ್ಯಂತ ಮಹತ್ವದ ಸಾಧನೆ ನಡೆಸಿರುವ ಎಲಿಯ ಕಜಾನ ಉದಾಹರಣೆ ಇದೆ. ಕಾರಂತರು ಕಲೆಯ ಭಿನ್ನ ಮಾಧ್ಯಮಗಳ ಸಮಾನ ಅಂಶಗಳ ಹುಡುಕಾಟ ನಡೆಸಿರುವ ಪ್ರತಿಭಾವಂತ ವ್ಯಕ್ತಿಯಾಗಿದ್ದಾರೆ,

ಈ ಟಿಪ್ಪಣಿ ಬರೆದ ಮೇಲೆ ಕಾರಂತರು ಎರಡು ನಾಟಕಗಳನ್ನು ನಿರ್ದೇಶಿಸಿದ್ದಾರೆ. 'ಜೀವದ ಗೊಂಬೆ' ಮತ್ತು 'ಹಯವದನ' ಪ್ರದರ್ಶನದ ಮೌಲ್ಯಗಳ ದೃಷ್ಟಿಯಿಂದ ಹಯವದನ ಒಂದು ಯಶಸ್ವಿ ನಿರ್ಮಿತಿ. ನಾಟಕದ ವಾಚಿಕದೊಳಗೆ ಕಾರಂತರು ಪ್ರದರ್ಶಿಸಿದ ಸ್ವಂತಿಕೆಗಳು ಅದಕ್ಕೆ ಕಾರಣವಾದವು. ಈ ನಾಟಕದ ಪ್ರದರ್ಶನದ ನಂತರ ಇನ್ನೊಂದು ಪ್ರಶ್ನೆ ಏಳುತ್ತದೆ. ಅದು ಶೈಲೀಕರಣವನ್ನು ಕುರಿತದ್ದು. ಅದನ್ನು ಪ್ರದರ್ಶನದ ಒಂದು ವಿಧಿಯನ್ನಾಗಿ ಕಾರಂತರು 'ಹಯವದನ'ದಲ್ಲಿ ಸ್ವೀಕರಿಸಿದ್ದರು. ಅದು ರಮ್ಯವಾದ ವಾತಾವರಣದ ನಿರ್ಮಿತಿಗೆ ದಾರಿ ಕೊಟ್ಟಿತು. ಈ ದಿಕ್ಕಿನಲ್ಲಿ ಕಾರಂತರು ಗಳಿಸಿದ ಯಶಸ್ಸು ಅದರ ಮಿತಿಗೂ ಕಾರಣವಾಗಬಹುದೆಂದೂ ನನಗೆ ಅನ್ನಿಸುತ್ತದೆ. ಶೈಲೀಕರಣದಲ್ಲಿ ಎಲ್ಲವೂ ಸಂವೃತಗೊಳ್ಳುವುದರಿಂದ ತೀವ್ರವಾದ ಅನುಭವಗಳ ಎಲ್ಲಾ ಮುಖಗಳು ರಂಗದಲ್ಲಿ ಕಾಣುವುದು ಸಾಧ್ಯವಿಲ್ಲ. ಇಂದ್ರಜಿತ್‌ನಲ್ಲೂ ಇದೇ ಆಯಿತು. ಕಾರಂತರು ಈ ಬಗೆಯಲ್ಲಿ ಗೆಲ್ಲುವುದರಿಂದ ಅವರು ನಾಟಕಗಳ ಆಯ್ಕೆಯಲ್ಲಿ ಗೊತ್ತಾಗುವ "ಜಾಣ್ಮೆ"ಯನ್ನು ತೋರಿಸುವಂತಿದೆ. ಅಥವಾ ಕಮಿಟ್‌ಮೆಂಟ್‌ನಲ್ಲಿ ಹಲವರಿಗೆ ನಂಬಿಕೆಯೇ ಇಲ್ಲದಿರಬಹುದು, (ಹಾಗೇನಾದರೂ ಆಗಿದ್ದರೆ ಕಾರಂತರ ಮಿತಿಗಳು ಈಗಾಗಲೇ ಸಿದ್ಧವಾದಂತೆ) ಇಷ್ಟಕ್ಕೂ ಭರತವಾಕ್ಯ ಹೇಳಲು ನಾಳೆ ರಂಗಭೂಮಿಗೆ ಅಷ್ಟಗ್ರಹಯೋಗವೇನೂ ಬಡಿಯುವುದಿಲ್ಲವಲ್ಲ.

# ರಾಜ್‌ಕುಮಾರ್

ಸಮುದಾಯಗಳಿಗೆ ನಾಯಕರು ಬೇಕು. ಈ ನಾಯಕರು ಹೇಗೆ ರೂಪುಗೊಳ್ಳುತ್ತಾರೆಂಬುದು ಸುಲಭ ವ್ಯಾಖ್ಯೆಗೆ ಒಗ್ಗುವ ವಿಷಯವಲ್ಲ. ಜನತಾಂತ್ರಿಕ ವ್ಯವಸ್ಥೆಯಲ್ಲಿ ರಾಜ್ಯಶಕ್ತಿಯು ಚುನಾವಣೆಗಳ ಮೂಲಕ ನಾಯಕರನ್ನು ಆಯ್ದುಕೊಳ್ಳುತ್ತದೆ. ಆದರೆ ಸಮುದಾಯಗಳು ತನ್ನದೇ ಆದ ಬಗೆಗಳಲ್ಲಿ ತನ್ನ ನಾಯಕರನ್ನು ಗುರುತಿಸಿಕೊಳ್ಳುತ್ತದೆ. ಅಧಿಕಾರ ಕೇಂದ್ರದಿಂದ ಹೊರಗುಳಿದರೂ ಈ ನಾಯಕರು ಹಲವು ವಿಧಗಳಲ್ಲಿ ತಮ್ಮ ಪ್ರಭಾವಲಯವನ್ನು ಕಾಯ್ದಿರಿಸಿಕೊಳ್ಳಲು ಶಕ್ತರಾಗುತ್ತಾರೆ. ಅಥವಾ ಅಧಿಕಾರ ಕೇಂದ್ರೀಕರಣಗೊಳ್ಳುವುದನ್ನು ತಡೆಯಲು ಸಮುದಾಯವು ಇಂಥ ಹುನ್ನಾರಗಳನ್ನು ರೂಪಿಸುತ್ತದೋ ಏನೋ! ಹೀಗೆ ನಾಯಕರು ಕಲಾವಲಯಗಳಲ್ಲಿ, ಸಾಹಿತ್ಯ ಕ್ಷೇತ್ರದಲ್ಲಿ, ಆಟದ ಮೈದಾನದಲ್ಲಿ ಮೈದಳೆಯುತ್ತಿರುತ್ತಾರೆ.

ಸ್ವಾತಂತ್ರ್ಯೋತ್ತರ ಕರ್ನಾಟಕದಲ್ಲಿ ಜನಸಮುದಾಯವು ಗುರುತಿಸಿಕೊಂಡ ನಾಯಕರಲ್ಲಿ ನಟ ರಾಜ್‌ಕುಮಾರ್ ಒಬ್ಬರು. ಚಲನಚಿತ್ರಗಳ ನಾಯಕ ಪಾತ್ರಧಾರಿಯಾಗಿ ಸುಮಾರು 40 ವರ್ಷಗಳಿಂದ ಜನರಂಜನೆಗಾಗಿ ತಮ್ಮ ವೃತ್ತಿಜೀವನವನ್ನು ಸಾಗಿಸಿದ್ದಾರೆ. ಕನ್ನಡ ಚಿತ್ರರಂಗದ ಚರಿತ್ರೆಯನ್ನು ರಾಜಕುಮಾರ್ ಅವರ ವೃತ್ತಿಜೀವನದ ಚರಿತ್ರೆಯಿಂದ ಬೇರೆಯಾಗಿಸಿ ನೋಡುವುದು ಅಸಾಧ್ಯವೆನಿಸುವಷ್ಟು ಅವೆರಡೂ ಬೆರೆತುಹೋಗಿವೆ.

'ಆಕಸ್ಮಿಕ' ಪಾತ್ರ ಸಿದ್ಧವಾಯಿತು. ಅದಕ್ಕೊಂದು ತಾತ್ವಿಕ ಗೀತೆ ಬೇಕು ಎಂದು ಹಂಸಲೇಖಾ ಅವರನ್ನು ಕೇಳಿದರು. ಹೀಗೆ ಹುಟ್ಟಿದ್ದು 'ಬಾಳುವಂಥ ಹೂವೆ' ಆದರೆ ಹಾಡನ್ನು ನೋಡಿ ರಾಜ್‌ಕುಮಾರ್ ದಿಗಿಲು ಬಿದ್ದರು...ಅದರಲ್ಲಿ ಭಾರಿ ಉಪದೇಶಗಳಿದ್ದವು. 'ಅವಳು ಅಷ್ಟು ದೊಡ್ಡ ತಪ್ಪು ಮಾಡಿದಳೇನ್ರೀ...' ಎಂದರಂತೆ. ಕೊನೆಗೆ ಗೀತೆಯನ್ನು ಮೂರು ಭಾಗಗಳಾಗಿ ಚಿತ್ರದಲ್ಲಿ ಬಳಸಲಾಯಿತಂತೆ. ರಾಜ್‌ಕುಮಾರ್‌ಗೆ ಚಿತ್ರಗೀತೆ ಮಾಡಬಲ್ಲ ಪರಿಣಾಮದ ಬಗ್ಗೆ ಬಹಳ ನಂಬಿಕೆ ಇತ್ತು ಎಂದರು ಹಂಸಲೇಖಾ.

***

ಇದೊಂದು ವಿಶಿಷ್ಟ ಅನುಭವ ಕೇಳಿ ಅಂತ ಮಾತಿಗಾರಂಭಿಸಿದರು ರಾಜ್ಯಪಾಲ ಟಿ.ಎನ್.ಚತುರ್ವೇದಿಯವರ ಮುಖ್ಯ ಸಲಹೆಗಾರ ಗುರುಮೂರ್ತಿ. ಅವರಾಗ ಮೈಸೂರಿನಲ್ಲಿ ಕೆಮಿಸ್ಟ್ರಿ ಪ್ರೊಫೆಸರ್. ಪಾಠ ಮಾಡುತ್ತಿರುವಾಗ ಇದ್ದಕ್ಕಿದ್ದ ಹಾಗೆ ಬಾಗಿಲಲ್ಲಿ

ರಾಜ್‌ಕುಮಾರ್ ಪ್ರತ್ಯಕ್ಷರಾದರು. ಹುಡುಗರೆಲ್ಲ ರೋಮಾಂಚಿತರಾಗಿ ಎದ್ದು ನಿಂತರಂತೆ. ರಾಜ್‌ಕುಮಾರ್ ಅವರೇ, 'ಎಲ್ಲಾ ಕುಳಿತುಕೊಳ್ಳಿ...ಸ್ವಲ್ಪ ಜಾಗ ಕೊಟ್ಟರೆ ನಾನೂ ಕುಳಿತುಕೊಳ್ಳುತ್ತೇನೆ. ನಾಳೆ ಶೂಟಿಂಗ್ ಇದೆ. ನಾನು ಲೆಕ್ಚರರ್ ಪಾತ್ರ ಮಾಡಬೇಕು. ಅವರ ಹಾವಭಾವ ಗಮನಿಸಿ ಒಂದಿಷ್ಟು ಕಲಿತುಕೊಳ್ತೇನೆ' ಎಂದರಂತೆ. ವರನಟನ ಎದುರು ಅದೇನು ಪಾಠ ಮಾಡಿದೆನೋ ಗೊತ್ತಿಲ್ಲ... ಆದರೆ ಅವರಂತೂ, 'ತುಂಬಾ ಉಪಕಾರವಾಯಿತು' ಎಂದರು ಎಂದು ಹೇಳಿದರು. ಗುರುಮೂರ್ತಿ. ಹೀಗೆ ರಾಜ್‌ಕುಮಾರ್ ತರಗತಿಯಲ್ಲಿ ಕುಳಿತು ಸಿದ್ಧತೆ ಮಾಡಿಕೊಂಡರು 'ಒಲವು-ಗೆಲುವು' ಅವರ 172ನೇ ಚಿತ್ರ. ಅಂದರೆ...ಅವರ ವ್ಯಕ್ತಿತ್ವದಲ್ಲಿ ಸದಾ ಹಸಿರಾಗಿದ್ದ ಕಲಿಕೆ ಗುಣ ಅರ್ಥವಾಗಬಹುದು.

***

ಚಲನಚಿತ್ರ ನಿರ್ಮಾಣ ಒಂದು ಗುಂಪು ಹವ್ಯಾಸವಾಗಿದ್ದ ಕಾಲದಿಂದ, ಕೋಟ್ಯಂತರ ರೂಪಾಯಿಗಳ ಬಂಡವಾಳ ಹಾಗೂ ಸಾವಿರಾರು ಮಂದಿಯ ಉದ್ಯೋಗವನ್ನು ಒಳಗೊಂಡ ಉದ್ಯಮವಾಗಿ ಬೆಳೆದು ಬಂದಿದೆ. ರಾಷ್ಟ್ರಮಟ್ಟದಲ್ಲಿ ಇಂಥ ಉದ್ಯಮ ತತ್ತರಿಸುವುದು ಅನಿವಾರ್ಯ. ಆದರೆ ಸರಕಾರದ ಒತ್ತಾಸೆಯಿಂದ ಈ ಅಪಾಯ ಅಷ್ಟಿಷ್ಟು ಕಡಿಮೆಯಾಗಬಹುದಾದರೂ ಉದ್ಯಮ ಕುಸಿಯದಂತೆ ಹಿಡಿಯುವ ಒಳಬಲವೊಂದು ಅವಶ್ಯ. ಕನ್ನಡ ಚಲನಚಿತ್ರೋದ್ಯಮಕ್ಕೆ ರಾಜಕುಮಾರ್ ಅಂಥ ಒಳಬಲವಾಗಿದ್ದಾರೆ. ಚಲನಚಿತ್ರರಂಗಕ್ಕೆ ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ನೆಲೆಯಲ್ಲಿ ಗೌರವ ತಂದುಕೊಟ್ಟ ಕೆಲವು ಹೆಸರುಗಳನ್ನು ಹೇಳಬಹುದಾದರೂ ಉದ್ಯಮ ಬಲಗೊಳ್ಳಲು ನೆರವಾದವರಲ್ಲಿ ರಾಜಕುಮಾರ್ ಅವರಿಗೆ ಸಾಟಿಯಾಗಬಲ್ಲವರು ಇಲ್ಲವೆನ್ನಬಹುದು.

ಉದ್ಯಮಕ್ಕೆ ಸಂಬಂಧಿಸಿದ ಕೊಡುಗೆ, ಸಾಧನೆಗಳಷ್ಟೇ ರಾಜಕುಮಾರ್ ಅವರಿಗೆ ಸಮುದಾಯದ ನಾಯಕಸ್ಥಾನವನ್ನು ದೊರಕಿಸಿಕೊಟ್ಟಿರಲಾರವು. ಅವರ ಚಲನಚಿತ್ರಗಳ ಕಲಾತ್ಮಕತೆ, ಅವರ ನಟನೆಯ ಗುಣಗಳು ಮತ್ತಿತರ ಸಂಗತಿಗಳನ್ನು ಕೇವಲ ಚಲನಚಿತ್ರ ಮೀಮಾಂಸೆಯ ನಿಟ್ಟಿನಿಂದಷ್ಟೇ ನೋಡಿದರೆ ಸಾಲದು. ಹಾಗೆ ನೋಡಿದರೆ ಒಂದೋ ಅವರನ್ನು ಯಾವುದೇ ಸಾಮಾನ್ಯನಟನಿಂದ ಬೇರೆ ಮಾಡಿ ನೋಡಲಾಗುವುದಿಲ್ಲ. ಹಾಗಾಗಿ, ಅನಾವಶ್ಯಕ ಗುಣವಾಚಕಗಳಿಂದ ವಾಸ್ತವವನ್ನು ಮರೆಮಾಚಲೂಬಹುದು. ಆದ್ದರಿಂದ ನೋಡುಗರಲ್ಲಿ ರಾಜಕುಮಾರ್ ಬಗೆಗೆ ಇರುವ ನಾಯಕಬಿಂಬ ರೂಪುಗೊಳ್ಳಲು ಇದ್ದ, ಇರುವ ಸನ್ನಿವೇಶವನ್ನು ಅರಿಯಲು ಹೆಚ್ಚು ವ್ಯಾಪಕವಾದ ಸಾಮಾಜಿಕ ವಲಯವನ್ನು ಪರಿಗಣಿಸಬೇಕು.

ರಾಜ್ಯ-ಮರುವಿಂಗಡಣೆಗೆ ಮೊದಲು ಹಾಗೂ ಅನಂತರ ಕೂಡ 'ಕರ್ನಾಟಕ'ದ ಎಲ್ಲ ಕಡೆಗೂ ಪ್ರಸಾರ ಪಡೆದಿದ್ದು ಕನ್ನಡ ಚಲನಚಿತ್ರ ಮಾತ್ರ. ವೃತ್ತಿನಾಟಕಗಳು, ಕಂಪನಿಗಳು ಮೊದಮೊದಲು ಇಂಥ ದೇಶವ್ಯಾಪ್ತಿಯನ್ನು ಪಡೆದಿದ್ದವು. ಆದರೆ ನಿಧಾನವಾಗಿ ಈ ಮಹತ್ವದ ಜವಾಬ್ದಾರಿಯನ್ನು ಚಲನಚಿತ್ರಗಳು ಪಡೆದುಕೊಂಡವು. ಜನಸಮುದಾಯಕ್ಕೆ ಪರಿಚಿತರಾಗುವ ಅವಕಾಶಗಳು ಆ ಚಲನಚಿತ್ರಗಳ ನಾಯಕರಿಗೆ

ದೊರಕಿತು. ಏಕಕಾಲಕ್ಕೆ ಲಕ್ಷಾಂತರ ಜನರೊಡನೆ ಹೀಗೆ ಸಂಪರ್ಕ ಪಡೆಯುವ ಅವಕಾಶ ಈಗ ಕೂಡ, ಕರ್ನಾಟಕ ಮಟ್ಟಿಗೆ ಚಲನಚಿತ್ರದ ನಟರಿಗೆ ಮಾತ್ರ ಇದೆ ಎಂಬ ಸಂಗತಿಯನ್ನು ಮರೆಯುವಂತಿಲ್ಲ. ಇದರಿಂದಾಗಿ ರಾಜ್‌ಕುಮಾರ್ ಜನಪರಿಚಿತರಾಗುವ ಅವಕಾಶ ಪಡೆದ ಮೊದಲ ಸಮುದಾಯ ನಾಯಕ.

ಕರ್ನಾಟಕ ಸಮಾಜದಲ್ಲಿ ನಡೆದ ಸಾಮಾಜಿಕ ಸಂಚಲನಗಳ ಫಲಿತಗಳನ್ನು ರಾಜಕುಮಾರ್ ನಟಿಸುತ್ತ ಬಂದಿರುವ ನಾಯಕ ಪಾತ್ರಗಳು ಒಂದಿಲ್ಲ ಒಂದು ಬಗೆಯಲ್ಲಿ ಪ್ರತಿಬಿಂಬಿಸುತ್ತಾ ಬಂದಿವೆ. ಸಾಹಸ, ತ್ಯಾಗ, ನಿಷ್ಠೆ, ಸಾಧನೆಗಳಂಥ ಕಾಲದೇಶ ಬದ್ಧವಲ್ಲದ ಮೌಲ್ಯಗಳ ಜತೆಜತೆಗೆ ಸಮಕಾಲೀನ ಆಕೃತಿಗಳು ಅವರ ಪಾತ್ರಗಳಲ್ಲಿ ಸೇರಿವೆ. ಹಳ್ಳಿಗನೊಬ್ಬನ ಸ್ವಾಭಿಮಾನ, ಕಲಿಕೆಯ ಇಬ್ಬಂದಿತನ, ಬಡವ-ಶ್ರೀಮಂತರ ಮುಖಾಮುಖಿ, ಕುಟುಂಬ ವ್ಯವಸ್ಥೆಯ ವಿಘಟನೆಗಳು ಇವೇ ಮುಂತಾದ ಸಾಮಾಜಿಕ ಸಂಗತಿಗಳ ಈಚಿನ ಸ್ವರೂಪಗಳನ್ನು ಅಳವಡಿಸಿಕೊಂಡ ಹತ್ತಾರು ಪಾತ್ರಗಳನ್ನು ರಾಜಕುಮಾರ್ ನಿರ್ವಹಿಸಿದ್ದಾರೆ. ಈ ಎಲ್ಲಾ ಸಮಸ್ಯೆಗಳನ್ನೂ, ಸಾಮಾಜಿಕ ಬದಲಾವಣೆಗಳನ್ನೂ ಅಧ್ಯಯನ ಮಾಡುವವರು ಹೇಗೆ ನೋಡುತ್ತಾರೆ ಎಂಬುದು ಮುಖ್ಯವಲ್ಲ. ಬದಲಿಗೆ ಈ ಬದಲಾವಣೆಗಳಿಗೆ ಸಮುದಾಯ ನೀಡಿಕೊಂಡ ಜನಪ್ರಿಯ ವ್ಯಾಖ್ಯೆ ಹಾಗೂ ಬಹುವ್ಯಾಪ್ತಿ ಗ್ರಹಿಕೆಗೆ ಗಮನಾರ್ಹ. ಏಕೆಂದರೆ ರಾಜ್‌ಕುಮಾರ್ ನಾಯಕರಾಗಿದ್ದು ಇಂಥ ವ್ಯಾಖ್ಯೆ ಮತ್ತು ಗ್ರಹಿಕೆಗಳನ್ನು ಪಡೆದ ಪಾತ್ರಗಳ ಮೂಲಕವೇ. ಆದ್ದರಿಂದ ಸಹಜವಾಗಿಯೇ ಸಮುದಾಯವು ತನ್ನ ವ್ಯಕ್ತಿಬಿಂಬವಾಗಿ ಅವರನ್ನು ಸ್ವೀಕರಿಸಿತು. ಸಾಮಾಜಿಕ ನೆಲೆಗಳ ಬದಲಾವಣೆ ಸಾಮುದಾಯಿಕ ವ್ಯಾಖ್ಯೆಗಳನ್ನು ಬಿಂಬಿಸುವ ಕಲೆಗಳ ಜನಪ್ರಿಯತೆಯನ್ನು ಬಲ್ಲ ಯಾರಿಗಾದರೂ ರಾಜ್‌ಕುಮಾರ್ ಏಕೆ ಕರ್ನಾಟಕ ವ್ಯಾಪ್ತಿಯಲ್ಲಿ ಸಮುದಾಯ ನಾಯಕರಾದರು ಎಂಬುದು ಸ್ಪಷ್ಟವಾಗುತ್ತದೆ.

ರಾಜ್‌ಕುಮಾರ್ ಸಮುದಾಯ ನಾಯಕರಾದುದಕ್ಕೆ ಇರುವ ಸಾಮಾಜಿಕ ಕಾರಣಗಳನ್ನು ಹೇಳಿದ ಮಾತ್ರಕ್ಕೆ ನಟರಾಗಿ ಅವರ ಸಾಮರ್ಥ್ಯಗಳನ್ನು ಅಲ್ಲಗಳೆದಂತಲ್ಲ. ಆಂಗಿಕ ಅಭಿನಯದಲ್ಲಿ ವರ್ಷ ಕಳೆದಂತೆ ಅವರು ನೆಲೆಗೊಳಿಸಿರುವ ಶೈಲೀಕೃತ ಬಗೆಯೊಂದು ಕಡೆಗೆ ಇದೆ. ವಾಚಿಕದಲ್ಲಿ ಅವರ ಕನ್ನಡ ಉಚ್ಚಾರಣೆ ಹಾಗೂ ಕಾಕುಗಳು ಕೂಡ ಭಾವತೀವ್ರತೆಯೊಡನೆ ಶೈಲೀಕೃತ ವಿಧಾನವನ್ನು ರೂಢಿಸಿವೆ. ಕನ್ನಡದ ಪ್ರಮಾಣೀಕೃತ ಉಚ್ಚಾರಣೆಗೆ ಒಂದು ಮಾದರಿ ಎಂಬಂತೆ ಅವರ ವಾಚಿಕಾಭಿನಯ ಬೆಳೆದುಬಂದಿದೆ. ಇವೆಲ್ಲದರ ಜತೆಗೆ ಅವರ ಒಟ್ಟು ಚಿತ್ರಗಳ ಆಕಾರ ಮತ್ತು ನಾಯಕನಾಗಿ ಅವರು ಪಡೆದುಕೊಳ್ಳುವ ಮಹತ್ವಗಳ ಬಗ್ಗೆ ಇನ್ನೂ ವಿವರವಾಗಿ ಚರ್ಚಿಸುವ ಅವಶ್ಯಕತೆ ಇದೆ.

ಈ ಸಮುದಾಯ ನಾಯಕನನ್ನು ಚಾಲ್ತಿಯ ಜನತಾಂತ್ರಿಕ ವ್ಯವಸ್ಥೆಯು ಗುರುತಿಸಿ ಗೌರವಿಸುವುದು ಅನಿವಾರ್ಯ. ಅಂಥ ಹಲವಾರು ಗೌರವಗಳ ಸಾಲಿನಲ್ಲಿ ಈಚಿನ 'ಕರ್ನಾಟಕ ರತ್ನ' ಪ್ರಶಸ್ತಿ ಸೇರಿದೆ. ಈ ಪ್ರಶಸ್ತಿಯನ್ನು ಪಡೆಯಲು ಅವರು ತಕ್ಕವರು. ವ್ಯಕ್ತಿ, ಸಮುದಾಯ ಹಾಗೂ ರಾಜ್ಯವ್ಯವಸ್ಥೆಗಳು ಅನುಭವಿಸುವ ಸಮ್ಮತಿಯ ಗಳಿಗೆಗಳು ಈ ಪ್ರಶಸ್ತಿಗಳು.

## ಸಿನಿಮಾಯಾನ– ಮುನ್ನುಡಿ

ಇಪ್ಪತ್ತನೆಯ ಶತಮಾನದ ಕತೆ ಹೇಳುವವರು ಸಿನಿಮಾವನ್ನು ಬಿಟ್ಟು ಮುಂದುವರೆಯುವಂತಿಲ್ಲ. ಕಾಲದೇಶ ಮತ್ತು ನೆನಪುಗಳನ್ನು ಹಲವು ಬಗೆಯಲ್ಲಿ ಒಡೆದು ಕಟ್ಟಿದ ಈ ಮಾಧ್ಯಮ ನಮ್ಮ ಕಣ್ಣು ಕಿವಿಗಳನ್ನು ಜೊತೆಗೆ ಸಮಾಜದ ನಡಾವಳಿಗಳನ್ನು ಪ್ರಭಾವಿಸಿರುವ ಬಗೆಯನ್ನು ತಿಳಿಯುವುದು ಅಗತ್ಯ. ಹಾಗೆ ಇದು ಸಂಗೀತ ನೃತ್ಯಗಳಂತೆ ಕಾಲಬದ್ಧವಲ್ಲ. ನಾಟಕದಂತೆ ದೇಶಬದ್ಧವೂ ಅಲ್ಲ. ಈ ಎಲ್ಲವನ್ನೂ ಒಳಗೊಂಡೂ ಮೀರಿನಿಂತ ಸಿನಿಮಾವನ್ನು ಕಲೆಯನ್ನಾಗಿ, ಸಮೂಹ ಮನರಂಜನೆಯ ಮಾಧ್ಯವನ್ನಾಗಿ, ಉದ್ಯಮವನ್ನಾಗಿ, ಸಾಮಾಜಿಕ ಪರಿವರ್ತನೆಯ ಸಾಧನವನ್ನಾಗಿ ಹಲವು ನಿಟ್ಟಿನಲ್ಲಿ ನೋಡಿರುವುದುಂಟು. ಇಂತಹ ಸಿನಿಮಾದ ಚರಿತ್ರೆ ಬರೆಯುವುದು ನಾವು ತಿಳಿದಷ್ಟು ಸುಲಭವಲ್ಲ. ಏಕೆಂದರೆ ಯಾವುದನ್ನು ಕುರಿತು ಮಾತನಾಡುತ್ತಿರುತ್ತಾರೋ ಆ ಸಿನಿಮಾಗಳು ಈಗ ಹೀಗೆ ನಮ್ಮ ನೋಟಕ್ಕೆ ಸಿಗುವಂತೆ ಇರುವುದಿಲ್ಲ. ಇದು ಒಂದು ಬಗೆಯಲ್ಲಿ ತಮಗೆ ಕಂಡದ್ದನ್ನು ಯಾರೋ ನಮಗೆ ಹೇಳುವ ಮಾದರಿ. ಅವರು ನೋಡಿದವರಾದ್ದರಿಂದ ಅವರು ಹೇಳಿದ್ದನ್ನು ನಾವು ನಂಬಬೇಕು. ಆದರೆ ಅವರು ಹೇಳುವುದು ಸುಳ್ಳೋ ದಿಟವೋ ಎಂಬುದಕ್ಕಿಂತ ಅವರು ಏನನ್ನು ಹೇಳಲು ಆಯ್ದುಕೊಳ್ಳುತ್ತಾರೆ ಮತ್ತು ಏನೆಲ್ಲವನ್ನು ಹೇಳದೇ ಬಿಡುತ್ತಾರೆ ಎಂಬುದು ಮುಖ್ಯವಾಗಿ ಬಿಡುತ್ತದೆ. ಅಲ್ಲದೆ ಸಿನಿಮಾದ ಚರಿತ್ರೆ ಅದರ ಒಳ ಹೂರಣದ ಕಥನವಾಗಿರುವಂತೆ ಅದರ ನಿರ್ಮಾಣ ಸಂಬಂಧದ ವಿವರಗಳ ಕಥನವೂ ಆಗಿರುತ್ತದೆ. ಗೆಳೆಯ ಪುಟ್ಟಸ್ವಾಮಿಯವರ ಈ ಕಥನ ಈ ಎರಡೂ ನೆಲೆಗಳನ್ನೂ ತೂಗಿಸಿಕೊಂಡು ಹೋಗಿರುವ ಪರಿಯನ್ನು ಯಾರಾದರೂ ಗುರುತಿಸಬಹುದು.

ಹಾಗೆ ನೋಡಿದರೆ ಸಿನಿಮಾಗೂ ಭಾಷೆಗೂ ನೇರ ಸಂಬಂಧವಿರುವುದಿಲ್ಲ. ಈ ಮಾತನ್ನು ಕೊಂಚ ಎಚ್ಚರಿಕೆಯಿಂದ ಹೇಳುತ್ತಿದ್ದೇನೆ. ಸಿನಿಮಾದಲ್ಲಿ ಪಾತ್ರಗಳು ಗೊತ್ತಾದ ಸಾಮಾಜಿಕ ಸನ್ನಿವೇಶದಲ್ಲಿ ಇರುತ್ತವೆಯಾದ್ದರಿಂದ ಒಂದು ಭಾಷೆಯನ್ನು ಮಾತಾಡುತ್ತವೆ ಎನ್ನುವುದು ದಿಟ. ಆದರೆ ಕನ್ನಡ ಸಿನಿಮಾ, ತಮಿಳು ಸಿನಿಮಾ, ಮರಾಠಿ ಸಿನಿಮಾ ಎಂದು ಬೇರೆ ಮಾಡಿನೋಡಲು ಬರುವುದೇ? ಈ ಪ್ರಶ್ನೆಗೆ ಎರಡು ರೀತಿಯ ಉತ್ತರ ಸಾಧ್ಯ. ಸಿನಿಮಾವನ್ನು ಒಂದು ತಂತ್ರಜ್ಞಾನವೆಂದು ನೋಡುವುದಾದರೆ ಬೇರೆಬೇರೆ ಭಾಷೆಯ ಸಿನಿಮಾಗಳು ಎಂದು ಇರುವುದಿಲ್ಲ. ಆದರೆ ಸಿನಿಮಾವನ್ನು ಸಂಸ್ಕೃತಿಯ ನೆಲೆಯಲ್ಲಿ ನೋಡಿದಾಗ ಭಾಷೆಯ ಚೌಕಟ್ಟಿನಲ್ಲಿ ನೋಡುವುದು ಸಾಧ್ಯ. 'ಸಿನಿಮಾ ಯಾನ' ಎರಡನೆಯ ನೆಲೆಯನ್ನು ಆಯ್ದುಕೊಂಡ ಕಥನ. ಆದ್ದರಿಂದ ಇಲ್ಲಿ ಕನ್ನಡ ಸಿನಿಮಾಗಳ ಕಥನವಿದೆ.

ಚರಿತ್ರೆಯನ್ನು ಬರೆಯುವವರು ಕಾಲಾನುಕ್ರಮಣಿಕೆಯನ್ನು ಆಯ್ದುಕೊಳ್ಳುತ್ತಾರೆ. ಯಾವುದು ಮೊದಲು ಯಾವುದು ಬಳಿಕ ಎಂದು ಹೇಳುವ ಬಗೆಯದು. ಆದರೆ ಹೀಗಲ್ಲದೆ ಕನ್ನಡ ಸಿನಿಮಾಗಳನ್ನು ರೂಪಿಸಿದ ಹಲವು ನೆಲೆಗಳನ್ನು ಆಧಾರವಾಗಿಟ್ಟುಕೊಂಡು ಅವೆಲ್ಲವನ್ನೂ ಬೇರೆಬೇರೆಯಾಗಿ ನೋಡುವ ಬಗೆ ಇನ್ನೊಂದು. ಸಿನಿಮಾದಲ್ಲಿ ನಟ, ನಟಿಯರಿರುತ್ತಾರೆ; ನಿರ್ದೇಶಕರಿರುತ್ತಾರೆ; ಚಿತ್ರಕಥೆ ಸಂಭಾಷಣೆಗಳನ್ನು ಬರೆದವರಿರುತ್ತಾರೆ; ಸಂಗೀತ ನಿರ್ದೇಶಕರಿರುತ್ತಾರೆ; ಹಲವು ಬಗೆಯ ತಂತಜ್ಞರಿರುತ್ತಾರೆ ಇವೆಲ್ಲ ನೆಲೆಗಳಿಂದಲೂ ಕಥನವೊಂದನ್ನು ಕಟ್ಟಲು ಬರುತ್ತದೆ. 'ಸಿನಿಮಾ ಯಾನ'ದಲ್ಲಿ ಎರಡನೆಯ ಹಾದಿಯನ್ನು ಹಿಡಿಯಲಾಗಿದೆ. ಇಲ್ಲಿನ ವಿವರಗಳಿಂದ ಮತ್ತೊಂದು ಸಂಗತಿ ನಮ್ಮ ಗಮನಕ್ಕೆ ಬರುವಂತಿದೆ. ಅದನ್ನಿಲ್ಲಿ ಹೇಳಬೇಕಿದೆ.

ಎಪ್ಪತ್ತೈದು ವರ್ಷಗಳ ಕನ್ನಡ ಸಿನಿಮಾಗಳ ಸಾಧನೆಯನ್ನು ಕುರಿತು ಮಾತನಾಡುವ ಹಲವರು ಕನ್ನಡದಲ್ಲಿ ಬಂದ ಶ್ರೇಷ್ಠ ಸಿನಿಮಾ, ಇಲ್ಲಿನ ಶ್ರೇಷ್ಠ ನಿರ್ದೇಶಕರು ಮುಂತಾದವರನ್ನು ಚರ್ಚಿಸುತ್ತಾರೆ. ಬುದ್ಧಿಜೀವಿಗಳು, ಸಿನಿಮಾ ಮಾಧ್ಯಮವನ್ನು ಅರಿತವರು ಕನ್ನಡದಲ್ಲಿ ತಯಾರಿಸಿದ ಸಿನಿಮಾಗಳನ್ನು ಹೆಮ್ಮೆಯಿಂದ ಎತ್ತಿ ಹೇಳುತ್ತಾರೆ. ಈ ಬಗೆಯ ಇತಿಹಾಸ ಸಂಸ್ಕಾರದಿಂದ ಮೊದಲಾಗುತ್ತದೆ. ಆದರೆ ಈ ಇತಿಹಾಸದಲ್ಲಿ ಜಾಗ ಪಡೆಯದ ನೂರಾರು ಕನ್ನಡ ಸಿನಿಮಾಗಳು ದಿಟವಾಗಿ ಸಿನಿಮಾ ಮಾಧ್ಯಮವನ್ನು ಕನ್ನಡೀಕರಿಸುವ ಕೆಲಸವನ್ನು ಮಾಡಿವೆ. ಅಂದರೆ ಕನ್ನಡ ಸಮಾಜ ಒಪ್ಪಿಕೊಂಡು ಬಂದ ದೃಶ್ಯ ಮತ್ತು ಶ್ರವ್ಯ ಕಲೆಗಳ ಪರಂಪರೆಯೊಡನೆ ನಿಕಟ ಸಂಬಂಧವನ್ನು ಉಳಿಸಿಕೊಳ್ಳುತ್ತಲೇ ಸಿನಿಮಾವನ್ನು ಹೊಸದಾಗಿ ವ್ಯಾಖ್ಯಾನಿಸಿವೆ.

ಸಾಹಿತ್ಯ ವಿಮರ್ಶೆ ಹುಟ್ಟುಹಾಕಿರುವ 'ನಾಟಕೀಯ' ಮತ್ತು 'ಸಿನಿಮೀಯ' ಎಂಬ ಎರಡು ಪದಗಳನ್ನು ನೋಡಿ. ಇವೆರಡೂ ಪದಗಳ ತಿರುಳನ್ನು ಗಮನಿಸಿದರೆ ಸಾಹಿತ್ಯ ವಿಮರ್ಶೆ ಮಂಡಿಸುತ್ತಿದ್ದ ವಾಸ್ತವತೆಯ ವ್ಯಾಖ್ಯೆಗೆ ಹೊಂದಿಕೊಳ್ಳದ ಅನುಭವಗಳನ್ನು ಸಿನಿಮಾ ಮಂಡಿಸುತ್ತಿದೆ ಎಂಬ ತಿಳುವಳಿಕೆ ಅಡಕವಾಗಿರುವಂತಿದೆ. ಆದರೆ ಸಿನಿಮಾ ಇಪ್ಪತ್ತನೆಯ ಶತಮಾನದ ಮೊದಲ ಹೊತ್ತಿಗೆ ಚಿತ್ರಕಲೆಗಳಲ್ಲಿ ಉದ್ದ ಮತ್ತು ಅಗಲಗಳೆಂಬ ಎರಡು ಆಯಾಮಗಳ ಜೊತೆಗೆ ಬಣ್ಣದಲ್ಲಿ ಆಳವೆಂಬ ಮೂರನೆಯ ಆಯಾಮವನ್ನು ತರುವ ಬಗೆಯನ್ನು ತಿಳಿದುಕೊಳ್ಳಲಾಗಿತ್ತು. ಆದರೆ ಪಾರಂಪರಿಕ ಚಿತ್ರಕಲೆಗಳು ಆಳವೆಂಬ ಮೂರನೆಯ ಆಯಾಮದ ಬಗೆಗೆ ತಲೆಕೆಡಿಸಿಕೊಂಡಿರಲಿಲ್ಲ. ಭಿತ್ತಿ ಚಿತ್ರಗಳನ್ನು ನೋಡಿದರೆ ಈ ಅಂಶ ನಮಗೆ ಗೊತ್ತಾಗುತ್ತದೆ. ನಮ್ಮ ಸಿನಿಮಾಗಳೂ ಕೂಡ ಕಪ್ಪು ಬಿಳುಪು ಚಿತ್ರಗಳಲ್ಲಿ ನಮ್ಮೆದುರು ಮಂಡಿಸುತ್ತಿದ್ದುದು ಇದೇ ಬಗೆಯ ಆಳದ ಭ್ರಮೆಯನ್ನು ಉಂಟುಮಾಡದ ಲೋಕವನ್ನು. ಸಿನಿಮಾಗಳನ್ನು ನೋಡುತ್ತಿದ್ದ ಮೊದಮೊದಲ ನೋಟಕರು ಅಲ್ಲಿ ವೇಗವಾಗಿ ಬರುತ್ತಿದ್ದ ವಾಹನಗಳು ತಮ್ಮ ಮೇಲೇ ಬಂದವೇನೋ ಎಂಬ ಭ್ರಮೆಗೆ ಒಳಗಾಗಿ ಹೆದರಿ ಓಡಿಹೋದರೆಂದು ಕತೆ ಕಟ್ಟಿ ಹೇಳುತ್ತಾರೆ. ಆದರೆ ಸಿನಿಮಾಗಳು ರೂಪಿಸಿಕೊಡುವ ಭ್ರಮೆ ಮತ್ತು ವಾಸ್ತವಗಳ ನೆಲೆಯನ್ನು ಎಷ್ಟು ಬೇಗ ನಮ್ಮ ನೋಟಕರು ಒಪ್ಪಿಕೊಂಡರೆಂದರೆ ಅವರೊಡನೆ ಸಂವಾದಿಸುವುದು ನಮ್ಮ ಸಿನಿಮಾ ಕರ್ತೃಗಳಿಗೆ ಸುಲಭವಾಯಿತು. ನಾವೀಗ ಜನಪ್ರಿಯ ಎಂದು ಪಟ್ಟಕಟ್ಟಿ ನೂರಾರು ಸಿನಿಮಾಗಳನ್ನು ನಾವು ಅರಿತುಕೊಳ್ಳಬೇಕಾದ ಬಗೆಯನ್ನು

ಬದಲಿಸಿಕೊಳ್ಳ ಬೇಕಿದೆ. ನನ್ನ ಓದಿಗೆ 'ಸಿನಿಮಾ ಯಾನ'ದಲ್ಲಿ ಇಂತಹ ಗ್ರಹಿಕೆಗೆ ಅನುವು ಮಾಡಿಕೊಡುವ ಸಾಮಗ್ರಿ ತುಂಬ ಇದೆ.

ಕಿವಿಯ ನೆಲೆಯಲ್ಲಿದ್ದ ಪುರಾಣ, ಐತಿಹ್ಯ, ಚರಿತ್ರೆ, ಜಾನಪದಗಳನ್ನು ಕಣ್ಣಿನ ನೆಲೆಗೆ ತರುವ ಕೆಲಸವನ್ನು ಒಂದು ರೀತಿಯಲ್ಲಿ ಪಾರಂಪರಿಕ ದೃಶ್ಯ ಕಲೆಗಳು ಮಾಡಿದ್ದವು. ಆದರೆ ಸಿನಿಮಾದ ತಂತ್ರಜ್ಞಾನ ಒದಗಿಸಿದ ಅಪಾರವಾದ ಬೀಸಿನಿಂದಾಗಿ ಹೀಗೆ ಕಣ್ಣಿನ ಅನುಭವಗಳ ನೆಲೆಗೆ ಪುರಾಣ ಇತ್ಯಾದಿಗಳನ್ನು ತರುವ ಬಗೆಯೇ ಬೇರೆಯಾಗಿ ಬಿಟ್ಟಿತು. ಈ ಅವಕಾಶ ಮತ್ತು ತೆರಪನ್ನು ನಮ್ಮ ಸಿನಿಮಾಗಳು ಹೇಗೆ ತುಂಬಿದವು ಎನ್ನುವುದನ್ನು ನಾವಿನ್ನೂ ಅಭ್ಯಾಸ ಮಾಡಬೇಕಿದೆ. ಹೀಗೆ ಕಿವಿಯ ಅನುಭವಗಳನ್ನು ಕಣ್ಣಿನ ಅನುಭವಗಳನ್ನಾಗಿ ಬದಲಿಸುವಾಗ ಕೇವಲ ಮಂಡನೆಯ ಕೆಲಸವನ್ನು ಮಾತ್ರ ಮಾಡದೆ ಮರುವ್ಯಾಖ್ಯಾನದ ಕೆಲಸವನ್ನೂ ನಮ್ಮ ಸಿನಿಮಾಗಳು ಮಾಡಿವೆ. ಬಸವಣ್ಣ, ಕನಕದಾಸ, ಪುರಂದರದಾಸ, ಕಬೀರ, ಮುಂತಾದವರನ್ನು ಸಿನಿಮಾಗಳು ಮಂಡಿಸಿರುವ ಬಗೆಯನ್ನು ನೋಡಿ. ಅವರು ಚರಿತ್ರೆಗೆ ಬದ್ಧರಾಗಿಯೂ ಬದ್ಧರಾಗದೆ ಉಳಿಯುವಂತೆ ಮಾಡುವ ಒಂದು ವಿಶಿಷ್ಟ ಸಾಧ್ಯತೆಯನ್ನು ಸಿನಿಮಾಗಳು ಕಂಡುಕೊಂಡವು. ಈ ಮಾತನ್ನು ಚರಿತ್ರೆ, ಜಾನಪದ ವಸ್ತುಗಳನ್ನು ಆಧರಿಸಿದ ಸಿನಿಮಾಗಳಿಗೂ ಹೊಂದಿಸಿಕೊಳ್ಳಬಹುದಾಗಿದೆ. ಒಟ್ಟಾರೆ ಹೇಳಬೇಕಿದ್ದಿಷ್ಟೆ, ನಮ್ಮ ಸಿನಿಮಾಗಳು ಜನರ ಸ್ಮೃತಿಯನ್ನು ತಮ್ಮದೇ ಆದ ರೀತಿಯಲ್ಲಿ ಉತ್ಖನನ ಮಾಡಿದವು. ಜೊತೆಗೆ ಜನರಿಗೆ ಅವರವರ ಸ್ಮೃತಿಗಳನ್ನು ಗ್ರಹಿಸಿಕೊಳ್ಳಲು ದಾರಿಗಳನ್ನು ಹುಡುಕಿಕೊಟ್ಟವು.

ಜಗತ್ತಿನ ಯಾವ ಭಾಷೆಯ ಸಿನಿಮಾಗಳಲ್ಲೂ ಇಂಡಿಯಾದ ಸಿನಿಮಾಗಳಲ್ಲಿರುವಂತೆ ಹಾಡುಗಳನ್ನು ಬಳಸುವುದಿಲ್ಲ. ಸರಿ ತಾನೇ?. ಆದರೆ ಇದು ನಮ್ಮ ನಾಟಕ, ಯಕ್ಷಗಾನ, ಹರಿಕತೆಗಳಲ್ಲಿ ಇದ್ದದ್ದೇ ಎಂದು ತಿಳಿದು ಸುಮ್ಮನಾಗುವಂತಿಲ್ಲ. ಹಾಡುಗಳನ್ನು ಸಿನಿಮಾಗಳು ಬಳಸುವ ಮತ್ತು ಮಂಡಿಸುವ ಬಗೆಯನ್ನು ಎಚ್ಚರದಿಂದ ನೋಡಬೇಕಿದೆ. ಇದರಲ್ಲಿ ಹಲವಾರು ಸಾಧ್ಯತೆಗಳನ್ನು ನಮ್ಮ ಸಿನಿಮಾಗಳು ಕಂಡುಕೊಂಡಿವೆ. ಈ ಹಾಡುಗಳು ಸಿನಿಮಾದಲ್ಲಿದ್ದರೂ ಅಲ್ಲಿಂದ ಸಿಡಿದು ಹೊರಬಂದು ತಮ್ಮದೇ ಆದ ಬೇರೆ ಜಗತ್ತನ್ನು ಕಟ್ಟಿಕೊಂಡಿವೆ. ಇದೆಲ್ಲ ಆದುದು ಹೇಗೆ? ಆ ಹಾಡುಗಳ ಭಾಷಿಕ ನೆಲೆಯ ಚರ್ಚೆಗಳನ್ನು ನಾವಿನ್ನೂ ಆರಂಭಿಸಿಲ್ಲ. ಸಿನಿಮಾ ಮಾಧ್ಯಮದಲ್ಲಿ ಅವುಗಳ ಸೇರ್ಪಡೆ ಮತ್ತು ಅವುಗಳ ಮಂಡನಾಕ್ರಮಗಳನ್ನು ಅರಿಯುವ ಮಾತಂತೂ ದೂರ ಉಳಿದಿದೆ.

ಸಿನಿಮಾಗಳನ್ನು ಒಳ್ಳೆಯ ಇಲ್ಲವೇ ಕೆಟ್ಟ ಎಂದಾಗಲೀ, ಕಲಾತ್ಮಕ ಇಲ್ಲವೇ ಜನಪ್ರಿಯ ಎಂದಾಗಲೀ ಗ್ರಹಿಸಿ ಚರ್ಚಿಸುವುದರಿಂದ ಆಗುವ ಉಪಯೋಗ ಕಡಿಮೆ. ಕಳೆದ ಮುಕ್ಕಾಲು ಶತಮಾನದ ಕನ್ನಡ ಸಂಸ್ಕೃತಿಯೊಡನೆ ಈ ಸಿನಿಮಾಗಳು ಹೊಂದಿರುವ ನಂಟನ್ನು ಅರಿತುಕೊಳ್ಳುವತ್ತ ಹೆಜ್ಜೆಗಳನ್ನು ಇಡಬೇಕಿದೆ. ಈ ದಿಕ್ಕಿನಲ್ಲಿ ಗೆಳೆಯ ಡಾ.ಪುಟ್ಟಸ್ವಾಮಿ ಅವರ ಈ 'ಸಿನಿಮಾ ಯಾನ' ಒಂದು ಮುಖ್ಯ ಹೆಜ್ಜೆ ಎಂದು ನಾನು ತಿಳಿದಿದ್ದೇನೆ. ಅಪೂರ್ವ ಲವಲವಿಕೆಯ ಬರೆಹವಿರುವ ಈ ಹೊತ್ತಗೆ ಇಂತಹ ಹಲವು ಯಾನಗಳನ್ನು ಪ್ರಚೋದಿಸುವ ಕಸುವು ಇದೆ.

# ಹುತ್ತವ ಬಡಿದರೆ

# ಮೊದಲಿಗೆ ಕೆಲವು ಮಾತು

ಈ ನಾಟಕದ್ದೊಂದು ಕಥೆ. 1975ರ ಮೊದಲ ಕೆಲವು ತಿಂಗಳುಗಳಲ್ಲಿ 'ಏನಾದರೂ ಮಾಡಬೇಕು' ಎಂಬ ತವಕದವರು ಆಗಾಗ ಗುಂಪಾಗಿ ಮಾತಾಡಿ ಜನತೆಗಾಗಿ ರಂಗಭೂಮಿ ಎನ್ನುವ ಮುಖ್ಯ ಆದರೆ ಅಷ್ಟೇ ಅಸ್ಪಷ್ಟವಾದ ನೆಲೆಯಲ್ಲಿ 'ಸಮುದಾಯ'ವನ್ನು ಕಟ್ಟಿದರು. ಬ್ರೆಕ್ಟ್ ನಮಗೆ ಮಾದರಿ. ಉತ್ಸಾಹದಲ್ಲಿ ನಮಗೆ ತೋಚಿದಂತೆ ಅವನನ್ನು ಗ್ರಹಿಸಿದೆವು. ಅವನು ಹಳೆಯ ನಾಟಕಗಳನ್ನು ತನ್ನ ಉದ್ದೇಶಕ್ಕಾಗಿ ಪರಿವರ್ತಿಸಿಕೊಂಡನೆಂಬ ಸಂಗತಿಯ ಬೆನ್ನು ಹತ್ತಿ, ಯಾನ್ ಕಾಟ್ ಷೇಕ್ಸ್‌ಪಿಯರಿನಲ್ಲಿ ತನ್ನ ಕಾಲದ ಅರ್ಥವನ್ನು ಕಂಡನೆಂಬ ದಾರಿ ಹಿಡಿದು ನಡೆದೆವು. ಎಲ್ಲವೂ ಈಗ ನಿಂತು ನೋಡಿದಾಗ ಅರೆ ಹುಡುಕಾಟ. ನಮಗೆ ಕಂಡದ್ದು ಸಂಸರ 'ವಿಗಡ ವಿಕ್ರಮರಾಯ'. ಆ ನಾಟಕವನ್ನು, ಅದರ ಹಂದರವನ್ನು ಉಳಿಸಿಕೊಂಡು ನಮಗೆ ಬೇಕಾದ ಅರ್ಥವನ್ನು ಪಡೆಯುವ ಯತ್ನ ನಡೆಸಿ ಈ ನಾಟಕ ಬರೆಯಬೇಕೆಂದಾಯ್ತು. 'ಹ್ಯಾಮ್ಲೆಟ್'ನ ಇಬ್ಬರ (ರೋಸನ್‌ಕ್ರಾನ್ಜ್ ಮತ್ತು ಗಿಲ್ಡನ್ ಸ್ಟ್ರನ್) ಪ್ರಜ್ಞೆಯಲ್ಲಿ ಇಡೀ ನಾಟಕವನ್ನು ಪುನಾರಚನೆಗೆ ಒಳಪಡಿಸಿದ ಮಾದರಿ ಕೂಡ ಎದುರಲ್ಲಿತ್ತು. ಚೆನ್ನ-ರಂಗರನ್ನು ಆ ನೆಲೆಗೆ ತಂದು 'ವಿಗಡ ವಿಕ್ರಮರಾಯ'ವನ್ನು ಪುನಾರಚಿಸಲಾಯಿತು. ಆ ನಾಟಕದ ದೃಶ್ಯ ಸಂಯೋಜನೆ ಕೂಡ ಹಾಗೇ ಅಲ್ಲಲ್ಲಿ ಉಳಿದಿದೆ. ಸೂತ್ರಧಾರನೇ ಬಾಯಿಬಿಟ್ಟು ನಾಟಕವನ್ನು ಹುಂಬನಂತೆ ವಿವರಿಸಿರುವುದರಿಂದ ಮತ್ತೆ ಅದಕ್ಕೆ ನಾನು ಕೈ ಹಾಕಲಾರೆ.

ಇದೊಂದು ದೃಶ್ಯಾವಳಿ. ತರ್ಕವನ್ನು ಆಧರಿಸಿ ದೃಶ್ಯಗಳನ್ನು ಜೋಡಿಸಲಾಗಿದೆ. ಸಾಂಪ್ರದಾಯಿಕ ಅರ್ಥದಲ್ಲಿ ಇಲ್ಲಿ ನಾಟಕ ಎಂಬುದಿಲ್ಲ. ಅದರೆ ರಂಗವಾಚಿಕದ ಲಕ್ಷಣವೇ ಇದು. ಭಾಷಿಕ ವಿವರಗಳನ್ನು ಆಯಾ ಪಾತ್ರಗಳ ಮೂಲಕ ದಾಖಲು ಮಾಡುವುದು. ಆ ಕೆಲಸ ಇಲ್ಲಿ ನಡೆದಿದೆ ಅಷ್ಟೆ.

ದೃಶ್ಯಗಳು ವಿಕ್ರಮರಾಯನ ಮನೆ, ರಾಜನ ಅಂತಃಪುರ, ವಿಕ್ರಮರಾಯನ ಗುಪ್ತಗೃಹ, ಅರಮನೆ, ತೆರಕಣಾಂಬಿ, ಮೈಸೂರಿನ ಬೀದಿ, ಮೈಸೂರಿನ ಅರಮನೆ ಹೀಗೆ ಬೇರೆ ಬೇರೆ ಕಡೆಗಳಲ್ಲಿ ನಡೆಯುತ್ತವೆ. ದೃಶ್ಯಗಳನ್ನು ರಚಿಸುವಾಗ ಆಹಾರ್ಯದ ಕಡೆಗೆ ಹೆಚ್ಚಿನ ಗಮನ ನೀಡಿಲ್ಲ. ಹಾಗೆಯೇ ಪಾತ್ರಗಳ ಮನೋಭಾವದ ಏರಿಳಿತಗಳನ್ನೂ ಹೇಳಲು ಯತ್ನಿಸಿಲ್ಲ. ಮಾತುಗಳಷ್ಟೇ ಇವೆ. ಮಾತಿನ ನಡುವಣ ಭಾವಸಂಬಂಧ ನಾಟಕಕ್ಕೆ ಗೌಣ. ಆದರೆ ತರ್ಕಸಂಬಂಧ ಮುಖ್ಯ. ಹಾಗಾಗಿ ಇಲ್ಲಿ ಪಾತ್ರಗಳಿಲ್ಲ. ಪಾತ್ರ

ಮುಖೇನ ವಿಚಾರಗಳಿವೆ. ಇದು ಮುಖ್ಯವಾಗಿ 'ವಿಗಡ ವಿಕ್ರಮರಾಯ'ದಿಂದ ಆಗಿರುವ ಬದಲಾವಣೆ. ಹಾಗೆಯೇ ಸಂಸರ ಭಾಷೆ ಕೂಡ ಇಲ್ಲಿಲ್ಲ. ಇಲ್ಲಿನದು ಉಪಯೋಗಾಧಾರಿತ ಭಾಷೆ.

ಪ್ರಸನ್ನರ ದೃಶ್ಯಕಲ್ಪನೆಯಲ್ಲಿ ಈ ನಾಟಕ ರಂಗದ ಮೇಲೆ ಬಂತು. ಅಲ್ಲಿಂದ ಹನ್ನೊಂದು ವರ್ಷ ಕಳೆದಿವೆ. ನನಗೆ ಇದನ್ನು ಮುದ್ರಿಸುವ ಅಗತ್ಯವಾಗಲೀ. ಮಹತ್ವವಾಗಲೀ ಸ್ಪಷ್ಟಗೊಂಡಿರಲಿಲ್ಲ. ಈಗಲೂ ನನ್ನ ನಿಲುವಿನಲ್ಲಿ ಬದಲಿಲ್ಲ. ಈ ಕೃಷ್ಣಪ್ಪ ಎಂಬ ರಂಗಭೂಮಿಯ ದಾಳಿಕೋರ ವ್ಯಕ್ತಿಯೇ ಇದಕ್ಕೆ ಹೊಣೆ. ಲಿಪಿಯ ಬಾಕಿನ ಅವರನ್ನು ಹಿಡಿದು ಎಲ್ಲೋ ಹುದುಗಿದ್ದ ಹಸ್ತಪ್ರತಿ ತಂದು ಅಚ್ಚುಗಾಣಿಸಿದ್ದಾರೆ. ಅವರ ಹಣೆ ಬರಹ. ನಾನೇನು ಮಾಡಲಿ! ಆದರೆ ಅವರ ಪ್ರೀತಿಗೆ ವಂದನೆಗಳು.

– ಕೆ.ವಿ. ನಾರಾಯಣ

## 1975ರ ಮೊದಲನೇ ಪ್ರಯೋಗದಲ್ಲಿ ಅಭಿನಯಿಸಿದವರು

| | |
|---|---|
| ಚೆನ್ನ | ಮಾಧವರಾವ್ ಎಸ್.ಕೆ. |
| ರಂಗ | ಸತ್ಯನಾರಾಯಣ ಭಟ್ |
| ನರಸರಾಜ | ಶ್ರೀನಿವಾಸಮೂರ್ತಿ |
| ವಿಕ್ರಮರಾಯ | ಲೋಕನಾಥ್ |
| ರಾಜಒಡೆಯ | ರಮೇಶ್ ಭಟ್ |
| ನಿರೀಶ | ಆನಂದ್ ಎಂ.ಸಿ. |
| ಸಕ್ಕ | ಸುಂದರ್‌ರಾಜ್/ಶ್ರೀನಿವಾಸಮೂರ್ತಿ |
| ಬಸವ | ಜಗದೀಶ್ |
| ತುಂಗರಾಯ | ಕೃಷ್ಣಪ್ಪ ಎಲ್. |
| ಅಳಗರಾಜಯ್ಯ | ಪ್ರಭಾಕರ್ |
| ಕರಣಿಕರು | ರಾಂಪ್ರಕಾಶ್, ರಾಂಗೋಪಾಲ್, ಮಂಜುನಾಥ್ ಸಿಂಗ್ |
| ಬೊಮ್ಮರಸಪಂಡಿತ | ಗೋಡೆ ಲಕ್ಷೀನಾರಾಯಣ |
| ವಿರೂಪಾಕ್ಷಯ್ಯ | ಮಲ್ಲಿಗೆ/ಹಾ.ಸಾ.ಕೃ. |
| ಕೃಷ್ಣರಾಯ | ಸಿಂಗ್ |
| ಮಾರನಾಯಕ | ಸಿದ್ದಯ್ಯ |
| ಶ್ರೀನಿವಾಸಶೆಟ್ಟಿ | ಶಂಕರಪ್ಪ |
| ರಂಗರಾಯ | ಅರ್ಜುನ್ |
| ಮೈಸೂರು ನಾಗರಿಕರು | ಶರ್ಮ, ಶಿವಶಂಕರ್,ವೀರಣ್ಣ, ರುದ್ರಮೂರ್ತಿ |
| ಯುವಕ | ಮೃತ್ಯುಂಜಯ |
| ಗೌಡ | ಲಕ್ಷ್ಮೀಕಾಂತರಾಜು |
| ಪಂಜಿನವ | ಮಾದಯ್ಯ |
| ಮಲ್ಲರು | ನಾಗರಾಜ್, ಜಯದೇವ್ |
| ವಂದಿಮಾಗಧರು | ಕೃಷ್ಣಪ್ರಸಾದ್, ಉಮೇಶ್ |

| | |
|---|---|
| ರಾಜಮಾತೆ | ಭಾರ್ಗವಿ ನಾರಾಯಣ |
| ಚೆನ್ನಾಸಾನಿ | ಮಾಲತಿ |
| ಅಂತಃಪುರದ ಹೆಂಗಸರು | ವನಮಾಲ, ಸುಜಾತ, ಗೌರಿ ಮತ್ತು ಇತರರು |
| | **ರಂಗದ ಹಿಂದೆ:** |
| ರಂಗ ನಿರ್ವಾಹಕ | ನೀಲಿ |
| ರಂಗ ಸಜ್ಜಿಕೆ | ಜಯದೇವ್, ಗಂಗಾಧರ ಸ್ವಾಮಿ, ಪದ್ದು, ನಾಗರಾಜ್ |
| ಬೆಳಕು | ಪರೇಶ್ |
| ಪ್ರಸಾದನ | ನಾಣಿ, ಉಮೇಶ್ |
| ಸಹ ನಿರ್ದೇಶನ | ಆನಂದ್ |
| ಸಂಗೀತ | ಬಿ.ವಿ.ಕಾರಂತ |
| ನಿರ್ದೇಶನ | ಪ್ರಸನ್ನ |

# ದೃಶ್ಯ ವಿವರ

1. ಸೂತ್ರಧಾರನ ಪ್ರವೇಶ

2. ವಿಕ್ರಮರಾಯನ ನಿವಾಸದ ಸಿಂಗಾರಗೊಂಡ ಮೊಗಸಾಲೆ. ಒಳ ಕೊಠಡಿಗೆ ಹೋಗುವ ಬಾಗಿಲು. ಅದನ್ನು ಕಾಯುವವರು ಇರುತ್ತಾರೆ. ಮೊಗಸಾಲೆಗೆ ಹೊರಗಿನಿಂದ ಬರುವುದೂ ಸಾಧ್ಯ.

3. ಇಮ್ಮಡಿ ರಾಜಒಡೆಯನ ಅಂತಃಪುರ. ಹೆಂಗಸರ ಸಾಮ್ರಾಜ್ಯ. ತಕ್ಕ ಚಟುವಟಿಕೆಗಳು.

4. ವಿಕ್ರಮರಾಯನ ನಿವಾಸದ ಗುಪ್ತಗೃಹ. ಒಳಬರುವ, ಹೊರಹೋಗುವ ಬಾಗಿಲು ಒಂದೇ ಒಂದು. ಸಭೆಗೆ ತಕ್ಕ ಏರ್ಪಾಟು.

5. ಇಮ್ಮಡಿ ರಾಜಒಡೆಯನ ಶಯ್ಯಾಗೃಹ. ಹೊರಗಿನಿಂದ ಬರಲು ಒಳಕೋಣೆಗೆ ಹೋಗಲು ಬೇರೆ ಬೇರೆ ಬಾಗಿಲುಗಳು.

6. ತೆರಕಣಾಂಬಿ. ನರಸರಾಜನ ಮಲ್ಲಸಾಲೆ. ವಿವಿಧ ಕಸರತ್ತುಗಳಲ್ಲಿ ತೊಡಗಿರುವ ಅವನ ಗೆಳೆಯರು.

7. ರಾಜಧಾನಿಯ ಬೀದಿ. ವಿವಿಧ ಚಟುವಟಿಕೆಗಳಲ್ಲಿ ತೊಡಗಿದ ಜನಸಂದಣಿ. ದೃಶ್ಯ ಪ್ರಾರಂಭದಲ್ಲಿ ನರಸರಾಜನ ಗೆಳೆಯರು ಒಬ್ಬೊಬ್ಬರಾಗಿ ಜನರ ನಡುವೆ ಸೇರಿಹೋಗುವರು. ಸಕ್ಕ ಸೇರಿದ ಗುಂಪು ಕೇಂದ್ರವಾಗುವುದು. ಅಲ್ಲಿ ಆತ ನರಸರಾಜನನ್ನು ಹೊಗಳಿ ಮಾತನಾಡತೊಡಗುವನು. ಬೇರೆ ಗುಂಪಿನಲ್ಲಿರುವ ಅವನ ಗೆಳೆಯರು ಪ್ರೋತ್ಸಾಹಿಸುತ್ತಾರೆ.

8. ಒಂದು ಹಳ್ಳಿಯ ಚಾವಡಿ. ಹಳ್ಳಿಯ ಮುಖಂಡರು (ಗೌಡ ಇತ್ಯಾದಿ) ನಿರೀಶ ಮತ್ತವನ ಗೆಳೆಯರ ಜತೆ ಇದ್ದಾರೆ. ಇತರ ಜನರೂ ಸುತ್ತ ನೆರೆದಿರುತ್ತಾರೆ.

9. ಗೃಹಬಂಧನದಲ್ಲಿ ನರಸರಾಜ. ಹೆಚ್ಚಿನ ಸಿಂಗಾರಗಳಿಲ್ಲದ ನಿವಾಸ. ಕಂಬಗಳಿವೆ. ನರಸರಾಜನಿರುವ ಕೋಟೆಯ ಬಾಗಿಲಿನ ಹೊರಗೆ ಚೆನ್ನ-ರಂಗರ ಪಹರೆ. ತಿಮ್ಮಾಜಮ್ಮಣ್ಣಿ ಒಳಬಂದು ಅನಂತರ ತುಂಗರಾಯ ಬಂದಾಗ ಅವಿತುಕೊಳ್ಳಲು ತಕ್ಕ ರಂಗಸಜ್ಜಿಕೆ.

10. ರಾತ್ರಿಯ ವೇಳೆ. ವಿಕ್ರಮರಾಯನ ನಿವಾಸದ ಬಳಿಯ ಬೀದಿ. ಪಂಜಿನವರ ಪಂಜುಗಳ ಬೆಳಕಿನಿಂದ ಮಾತ್ರ ದೃಶ್ಯ ಕಾಣುತ್ತಿದೆ. ಎಲ್ಲ ಅಸ್ಪಷ್ಟ ಧ್ವನಿಗಳಿಂದ ಪಾತ್ರಗಳು ಗೊತ್ತಾಗುತ್ತವೆ.

11. ನರಸರಾಜನಿರುವ ಕೋಣೆ. ತುಂಗರಾಯನ ಪ್ರವೇಶ. ಅನಂತರ ನಿರೀಶ ಹಾಗೂ ಗೆಳೆಯರು ಚೆನ್ನ–ರಂಗರೊಡನೆ ಬರುತ್ತಾರೆ. ಕೊನೆಯಲ್ಲಿ ಚೆನ್ನ–ರಂಗರ ಬಂಧನ.

12. ಅರಮನೆ. ಸಿಂಹಾಸನ ಒಡ್ಡೋಲಗ. ವಿವಿಧ ಸ್ಥಾನಗಳಲ್ಲಿ ತಕ್ಕವರು. ಜನಸಂದಣಿ ಒಂದು ಕಡೆ.

# ದೃಶ್ಯ 1

**ಸೂತ್ರಧಾರ:** ನಮಸ್ಕಾರ. ನಾಟಕ ನೋಡೋಕೆ ಬಂದಿರೋ ನಿಮ್ಮ ಜೊತೆ ಕೊಂಚ ಮಾತಾಡಬೇಕಾಗಿದೆ. ಅದಕ್ಕೆ ಬಂದೆ. ಈ ನಾಟಕ ನಿಮಗೆ ತೀರಾ ಹೊಸದೇನೂ ಅಲ್ಲ. ನೂರಾರು ವರ್ಷಗಳ ಹಿಂದೆ ಆಗಿಹೋಗಿರೋದು. ಚರಿತ್ರೆಗೆ ಸೇರಿಹೋಗಿದೆ. ಚರಿತ್ರೆ ಅಂದರೆ ಬರೀ ಕಥೆ ಅಲ್ಲ. ಒಂದಾದ ಮೇಲೆ ಒಂದರಂತೆ ಬರುವ ಘಟನೆಗಳೂ ಅಲ್ಲ. ಈ ಕಥೆಯ ಹಿಂದೆ ಇರೋ ತರ್ಕವೇ, ಈ ಘಟನೆಗಳ ನಡುವೆ ಇರುವ ಸಂಬಂಧವೇ ಚರಿತ್ರೆ, ಆದ್ದರಿಂದ ಈಗ ನಿಮ್ಮ ಮುಂದೆ ನಡೆಯೋ ನಾಟಕದಲ್ಲಿ ಬರೀ ಕಥೆ ಹೇಳೋದು ನಮ್ಮ ಉದ್ದೇಶ ಅಲ್ಲ. ಅಲ್ಲಿ ಬರೋ ಪಾತ್ರಗಳ ಭಾವನೆಗಳನ್ನು ಹೇಳೋದು, ಒಳತೋಟಿಗಳನ್ನು ಅಭಿನಯಿಸೋದು ನಮ್ಮ ಕೆಲಸ ಅಲ್ಲ. ಅದರ ಬದಲು ಈ ಕಥೆ ಹಿಂದೆ ಇರೋ ತರ್ಕಾನ, ಈ ಘಟನೆಗಳ ನಡುವೆ ಇರೋ ಸಂಬಂಧಾನ ಹೇಳೋಕೆ ಮಾತ್ರ ಹೊರಟಿದೀವಿ.

ಇದು ಯಾಕೆ ಹೇಳಿದೆ ಅಂದ್ರೆ ಏನನ್ನು ನಾವು ಮಾಡೋಕೆ ಹೊರಟಿದೀವಿ ಅನ್ನೋದು ಗೊತ್ತಿರೋದು ಒಳ್ಳೇದು. ಆಗ ಯಾವ್ದು ನಮ್ಮ ಉದ್ದೇಶ ಅಲ್ವೋ ಅದನ್ನ ಹುಡುಕೋ ಕೆಲಸ ನಿಮ್ಗೆ ತಪ್ಪುತ್ತೆ.

ಈ ಕಥೆ ಮೈಸೂರು ಸಂಸ್ಥಾನಕ್ಕೆ ಸೇರಿದ್ದು...ಇಲ್ಲಿ ಒಂದು ವಂಶದವರು ಆಳ್ತಾ ಇದ್ರು. ಮಧ್ಯಯುಗದ ಎಲ್ಲಾ ರಾಜ್ಯಗಳ ಹಾಗೇನೇ ಇದೂ ಚಿಕ್ಕದು. ಮುವತ್ತೋ ಏನೋ ಗ್ರಾಮಗಳಿದ್ದವು. 1578ನೇ ಇಸವಿಯಲ್ಲಿ ಈ ರಾಜ್ಯಕ್ಕೆ ಒಬ್ಬ ರಾಜ ಇದ್ದ. ಅವನ ಹೆಸರು ರಾಜಒಡೆಯ ಅಂತ. ತನ್ನ ಅಣ್ಣನ್ನ ಗಡೀಪಾರು ಮಾಡಿ ಸಿಂಹಾಸನ ಹತ್ತಿದೋನು. ಅಲ್ಲಿ 40 ವರ್ಷ ಪಟ್ಟಾಗಿ ಕುಳಿತ. ರಾಜ್ಯ ದೊಡ್ಡದು ಮಾಡಿದ. ಸೈನ್ಯ ಕಟ್ಟಿದ. ಆದರೆ, ಇವು ನಮಗೆ ಅಷ್ಟು ಮುಖ್ಯವಲ್ಲ. ಚರಿತ್ರೆಯನ್ನು ನಿರ್ಧರಿಸೋ ಶಕ್ತಿಯುಳ್ಳ

ಜನರನ್ನು ಸುಳ್ಳು, ಭ್ರಮೆ, ಒಡೆತಗಳ ನೆರವಿನಿಂದ ದಾರಿತಪ್ಪಿಸಲಾಯ್ತು ಅನ್ನೋದು ನಮಗೆ ಮುಖ್ಯ

ಈಗ ಪ್ರಾರಂಭ. 1638ನೇ ಇಸವಿ. ರಾಜಒಡೆಯನ ಮಗ ಇಮ್ಮಡಿ ರಾಜಒಡೆಯ ಆಳ್ತಾ ಇದಾನೆ. ಈತನ ದಳವಾಯಿ ವಿಕ್ರಮರಾಯ. ಇವರಿಬ್ಬರಿಗೂ ರಕ್ತಸಂಬಂಧವಿದೆ. ವಾವೆಯಲ್ಲಿ ರಾಜನಿಗೆ ದಳವಾಯಿ ಅಣ್ಣ ಆಗಬೇಕು. ವಿವರ ಸಾಕಲ್ಲ. ಉಳಿದದ್ದು ಮುಂದೆ......

## ದೃಶ್ಯ 2

*(ವಿಕ್ರಮರಾಯನ ಮನೆ. ಬಾಗಿಲ ಹೊರಗೆ ಚೆನ್ನ, ರಂಗರ ಪಹರೆ. ಅವರು ಬೇಸರದ ಚಿಹ್ನೆ ಕಾಣುವಂತೆ ಕಾಯುತ್ತಿದ್ದಾರೆ. ಸ್ವಲ್ಪ ಕಾಲದ ಮೇಲೆ ಚೆನ್ನ ಒಳಗೆ ಬಗ್ಗಿ ನೋಡಿ ರಂಗನನ್ನು ಕರೆಯುತ್ತಾನೆ. ಇಬ್ಬರೂ ಒಳಗೆ ಬಂದು ಸಂಚಿ ಬಿಚ್ಚಿ ಕೂರುತ್ತಾರೆ.)*

**ಚೆನ್ನ:** ಎಣಾನಾದ್ರೂ ಕಾಯಬೋದು. ಸುಮ್ಕೆ ತಿರ್ಗೋದ್ ಮಾತ್ರಾ ಆಗಾಕಿಲ್ಲ ಕಣಪ್ಪ...ನಿದ್ದೆ ಸುತ್ಕೊಂಡ್ ಬತ್ತೈತೆ.

**ರಂಗ:** ಬರ್‍ದೆ ಇನ್ನೇನ್ಮತ್ತೆ. ಇಳ್ಳೆಲ್ಲಾ ಕಣ್ಗೆ ಎಣ್ಣೆ ಬುಟ್ಗೊಂಡ್ ಕುಂತಿದ್ರೆ...ಯಾವೋನ್ ಯಾವೊತ್ತಾಗ್ ಬತ್ತಾನೋ.

**ಚೆನ್ನ:** ಅಂಗ್ ನೋಡಿದ್ರೆ ದಳವಾಯಿಗಳ ಮನೆ ಅಂದ್ಮೇಗೆ ಸಾವ್ರ ಜನ ಬತ್ತಾರೆ ಓಯ್ತಾರೆ. ಅದ್ರ ಲೆಕ್ಕ ಮಡಿಕ್ಕೊಂಡು ಯಾನ ಮಾಡೋದು.

**ರಂಗ:** ಅದ್ ಕಟ್ಗೊಂಡ್ ನಮಗೇನು? 'ಲೇ, ಇದು ಮಾಡು' ಅಂದ್ರೆ ಬಾಯ್ ಒಲ್ಕೊಂಡ್ ಮಾಡಾದ್ ತಾನೇ ನಮ್ಮ ಚಾಕ್ರಿ.

**ಚೆನ್ನ:** ಎಂತಾ ಚಾಕ್ರಿ ತಗೀಲಾ. ಮಯ್ ಮುರ್‍ದು ದುಡಿಯೋ ಅಂಗಿಲ್ಲ. ಕೆಲಸಕ್ಕೆ ಬಾರದ್ದು ಬೊಗಸೆಗೆ ಬಾರದ್ದು ಮಾಡ್ಕೊಂಡು ತಿರ್ಗೋದು. ಕೆಲಸ ಮಾಡೋದು ಮಾಡಿ, ಇದು ಯಾಕೆ ಮಾಡ್ಬೋ ಅಂತ ತಿಳ್ಕಳ ಅಂಗಿಲ್ಲ. ಇಲ್ಲ ಬಾಗಿಲು ಕಾಯಿ, ಇಲ್ಲ ಅವನ್ನ ಇಡ್ಕಂಡ್ ಬಾ, ಇಲ್ಲ ಓಲೆ ತಗಂಡೋಗು, ಇಲ್ಲ ಅವ್ರೇನಂತಾರೆ ಕದ್ದು ಕೇಳ್ಕೋ...ಇದ್ಯಾವ ಸೀವೆ ಗೇವೆ. ದಿನಬೆಳಗಾದ್ರೆ ಇದೇ...ನಂಗಂತೂ ರೋಸತ್ತು ಓಗೈತೆ.

**ರಂಗ:** ಅನ್ನಾಂಗಿಲ್ಲ ಆಡಾಂಗಿಲ್ಲ. ಇದು ಬ್ಯಾಡಾಂತ ಒದ್ದು ಓಗೋಂಗೈತಾ. ಅದೂ ಇಲ್ಲ.

**ಚೆನ್ನ:** ನಿಂಗೇನೋ ಒಂದ್ಕಿತ ಅದೂ ಸೈ. ಎಂಡ್ರಿಲ್ಲ ಮಕ್ಳಿಲ್ಲ. ನಾನೂ? ಒಟ್ಟೆಗೇನೆ ತಣ್ಣೀರ್ ಬಟ್ಟೆ ಆಕ್ಕೊಳ್ಳೋದಾ?

ರಂಗ: ಏನ್ ಸೈಯೋ ನಮ್ಮಪ್ಪ...*(ಎದ್ದು ಹೋಗಿ ಬಾಗಿಲಲ್ಲಿ ಇಣಿಕಿ ನೋಡಿ ಬರುವನು.)* ಒಂದ್ ನೊಣಾನೂ ಇಲ್ಲ. ಈ ದಳವಾಯಿ ಬಂದ್ಮೇಲೆ ಎಲ್ಲಾ ಗೊಜಗೊಟ್ಲೆ ಆಗೋಯ್ತು. ಎಲ್ಲಾರೂ ಕಂಕ್ಳಲ್ ದೊಣ್ಣೆ ಕೈಯಲ್ ಸರಣು ಅನ್ನೋರೇ...

ಚೆನ್ನ: ಇವತ್ತು ಇಂಗೈತೆ. ನಮ್ಮನ್ ನಂಬ್ಕಂಡವ್ರೆ. ನಾಳೀಕೆಂಗೋ. ಅನುಮಾನ ಬತ್ತೂಂದ್ರೆ ನಮ್ಕತೆ ಮುಗ್ದಂಗೇ. ಕತ್ತಿ ಮ್ಯಾಗ್ ನಡದಂಗೆ ಇಲ್ಲಿನ್ ಚಾಕ್ರಿ. ನೋಡ್ದಲ್ಲ ಊನ್ ಸೆಟ್ಟಿಗಾದ್ ಕತೆ...

ರಂಗ: ಅಲ್ಲ ಆ ಸೆಟ್ಟಿನೂ ಅಳಗ್ರಾಜಯ್ಯನೂ ಕಿತ್ರೆ ಬರ್ದಂಗಿದ್ರು, ಒಬ್ರಿಗೊಬ್ರು ತ್ಯಾಪೆಗೆ ಜತೆಂರಾಗಿ ಓಗೋದೇನು, ತಿರುಗೋದೇನು. ಅಂಗಿದ್ದೋರು ಈಗ ಕೊತ್ತಿ ಕಚ್ಚಾಡ್ದಂಗೆ ಕಚ್ಚಾಡ್ತಾರೆ.

ಚೆನ್ನ: ಅದ್ಕೆ ನಾಯೋಳಿದ್ದು *(ಕಿವಿಯಲ್ಲಿ)* ಅಳಗರಾಜಯ್ಯ ಅರಮನ್ಯಾಗ್ ಇದ್ದದ್ ಬಾಚ್ಕೊಂಡೋಗಿ ಸೆಟ್ಟೀಗೆ ಮಾರ್ತಿದ್ದ. ಆಗ ಗೆಣೆತನ ಚೆನ್ನಾಗಿತ್ತು. ಯವ್ವಾರ್ದಾಗೆ ಏನು ಕೀಸರು ಬಾಸರೋ. ಇವತ್ತು ದಳವಾಯಿಗೊಳ್ ಜತೆ ಮಸಲತ್ತು ನಡ್ಸಿ, ಸೆಟ್ಟಿ ಮನೇಗ್ ಸೈನ್ಯ ನುಗ್ಸಿ, ಎಲ್ಲಾ ತಗಿಸ್ಬುಟ್ಟ. ಅರಮನೆ ಸಾಮಾನ್ ಕದ್ದವ್ನೆ ಅಂತ ಕೋಳಾ ಆಕುಸ್‌ಬುಟ್ಟಾ. ನಡೀವಾಗ್ ಎಲ್ಲಾಸರಿ...ವಸಿ ತಪ್ತೋ ಕುತ್ತಿಗೇಗ್ ಬತ್ತೈತೆ. ಇದ್ನೆಲ್ಲಾ ತಲೀಗ್ ಅಚ್ಕಂಡ್ರೆ ಗಂಟ್ಲಾಗ್ ಅನ್ನಾ ಇಳಿಯಾಕಿಲ್ಲ.

ರಂಗ: ತತ್. ಒಂದ್ ಗೇಣು ನೆಲಾನಾದ್ರೂ ನಂದೂಂತ ಇದ್ದಿದ್ರೆ ಇದ್ ಒದ್ ನಡೀತಿದ್ದೆ.

ಚೆನ್ನ: ಇದ್ದೋರ್ ಕತೆಯೇನ್ ಬೋ ಪಸಂದಾಗೈತೇಂತ ತಿಳ್ಕಂಡಿದೀಯಾ? ಯಾಕಪ್ಪ ನನ್ ಕತೀನೇ ತಕೋ. ನಮ್ಮಪ್ಪನ್ ಕಾಲದ್ ಅತ್ತೆಕ್ರೆ ಜಮೀನು. ಅದೂ ಏರಿ ಮಗ್ಗುಲ್ದು. ನಮ್ಮಪ್ಪನ್ ಕೈಗ್ ಯಜಮಾನ್ಕೆ ಬರೋ ಒತ್ಗೆ ರಾಜೋಡೇರ್ ಕಾಲ. ಬೆಳೆದಿದ್ರಾಗೆ ರಾಜ್ಯಕ್ ಪಾಲ್ ಕೊಡ್ಬೇಕೂಂದ್ರು. ಆಯ್ತು. ಅದು ಎಂಗೋ ನಡೀತಿತ್ತು. ಬಂತಲಪ್ಪಾ ಒಂದಿನ ಪೋಜು. ಮ್ಯಾಗಿನ ಮೋಡ ಬಂದಂಗೆ . ಯಾವ್ನೋನೋ ನಾಯಕನ್ ಪುಂಡು ಅಡಗ್ಸೋಕ್ ಓಯ್ತಿದ್ರಂತೆ. ರಾತ್ರಿ ಊರ ಅತ್ರ ಉಳ್ಕಂಡಿದ್ರು. ಎಲ್ಲಾರ್ ಮನ್ಯಾಗ್ ಇದ್ದ ಬದ್ದದ್ದೆಲ್ಲಾ ಬಾಚ್ಕೊಂಡ್ರು. ಇಡೀ ವರ್ಸಾ ಬೆವ್ರು ಸುರ್ಸಿ ಬೆಳ್ದು, ಕಣಜಾ ತುಂಬುಕಂಡು ಮಡೀಕೊಂಡಿದ್ವಿ, 'ಬ್ಯಾಡ ಕಣ್ರಪ್ಪೋ ಮಕ್ಳೂ ಮರೀ ಇರೋ ಮನೆ. ದಯತೋರ್ಸಿ' ಅಂತ ಜನ ಕಾಲಿಗ್ ಬಿದ್ ಕೇಳ್ಕಂಡ್ರು. 'ಈಗ ನಾವು ತಿಂದು ಗಟ್ಟಿಯಾಗಿರ್‌ದಿದ್ರೆ ನಾಳೆ

ಆ ಪುಂಡ ಬತ್ತಾನಲ್ಲಾ ಅವ್ನಗೇನ್ ಅಂತೀರಿ. ನಿಮ್ಮ ಮನೆ ಮಟ ಕಾಯಕ್ ಮಾತ್ರ ನಾವು ಬೇಕು. ನಾವೇನ್ ಬರೀ ಒಟ್ಟೇಲಿರ್‍ಬೇಕಾ?' ಅಂದ್ರು. ಆವೊತ್ತು ಎಲ್ಲಾರ್ ಕಣ್ಣಾಗೂ ನೀರಲ್ಲ ರಕ್ತ ರಕ್ತಾ ಸುರೀತಿತ್ತು. ಏನ್ ಮಾಡೋದು ಬಡವನ್ ಕ್ವಾಪ ದವಡೇಗ್ ಮೂಲ. ಉಸಿರ್ ಬಿಡ್ದಂಗ್ ನಿಂತ್ಕಂಡಿದ್ದೋ. ಅಂಗೂ ಒಂದಿಬ್ರು ಗಲಾಟೆ ಮಾಡ್ದ್ರು. ಅವರ್ನ ಕುದ್ರೆ ಕಾಲಿಗ್ ಕಟ್ಟಿ ಎಳ್ಸತೀವೀಂತ ಎಳ್ಕೊಂಡ್ ಓದ್ರು. ಅಲ್ಲ ಭೂಮಿಕಾಣಿ ಮಾಡ್ಕಂಡಿರೋರ್ ಕತೆ ಇಂಗೆ.

**ರಂಗ:** ಅಂಗಾದ್ರೆ ನಾವ್ ಉಟ್ಟಿರೋದೇ ಇದ್ನೆಲ್ಲಾ ನುಂಗ್ಕಂಡ್ ಇರಾಕೆ ಅಂತೀಯಾ?

**ಚೆನ್ನ:** ಅದೆಂಗೋ. ಇದು ಗರ್‍ಗಸ್ದಂಗೆ. ಅತ್ಲಾಗೂ ಕೊಯ್ತದೆ. ಇತ್ಲಾಗೂ ಕೊಯ್ತದೆ. *(ಹೋಗಿ ಪಹರೆ ಶುರು ಮಾಡುವರು. ಕಹಳೆ ಸದ್ದು. ವಿಕ್ರಮರಾಯ ಮೂವರು ಕರಣಿಕರು ಮತ್ತು ಪರಿವಾರದೊಡನೆ ಪ್ರವೇಶಿಸುವನು. ಅವನು ಒಳಗೆ ಬಂದವನು ನೇರವಾಗಿ ಒಂದು ಕೊಠಡಿಯೊಳಗೆ ಹೋಗುವನು. ಪರಿವಾರದೊಡನೆ. ಚೆನ್ನ ರಂಗರು ಈಗ ಬಾಗಿಲ ಒಳಗೆ ಆಚೀಚೆ ನಿಲ್ಲುವರು. ಕೆಲ ಕಾಲ ಮೌನ.)*

**ಕರಣಿಕ 1:** ಎಲ್ಲಾ ನಿನ್ನಿಂದ್ಲೇ. ರಾಜರು ಬಂದಾಗ ಯಾಕೆ ಎಲ್ಲಾನೂ ಹೇಳಿದ್ದೂ? ಅಲ್ದೇ ಕಡತಾನೂ ತೋರಿಸ್ದೆ. ಈಗ ನೋಡು ಇವ್ರು ಉರುದ್ ಬೀಳ್ತಾರೆ.

**ಕರಣಿಕ 2:** ಇನ್ನೇನು ಖುದ್ದಾಗಿ ಒಡೆಯರು ಬಂದು ಹೇಗೆ ಅಂತ ಬಾಯ್ಬಿಟ್ ಕೇಳಿದ್ರೆ ಕಿವಿ ಕೇಳದ ಹಾಗೆ ಇರ್‍ಬೇಕಿತ್ತೇನೋ.

**ಕರಣಿಕ 3:** ಕಿವಿ ಕೇಳದ ಹಾಗಲ್ಲ. ಮಾತು ಬರದ ಹಾಗೆ, 'ನಮಗೇನೂ ಗೊತ್ತಿಲ್ಲ ಬುದ್ಧಿ ದಳವಾಯಿಗಳು ನಿಯೋಗಿಗಳು ಹೇಳಿದ ಹಾಗೆ ಕೇಳೋದು ನಮ್ಮ ಕೆಲಸಾ' ಅಂದಿದ್ರೆ ಆಗ್ತಿರಲಿಲ್ವಾ?

**ಕರಣಿಕ 2:** ಹೂಂ, ಹಾಗೇನಾದ್ರೂ ಇವ್ರನ್ನ ಬೆರಳು ಮಾಡಿ ತೋರ್‍ಸಿದ್ರೆ, ಇಷ್ಟು ಹೊತ್ತಿನವರೆಗೂ ನನ್ನ ಕತ್ತು ಮುಂಡದ ಮೇಲೆ ಇರ್‍ತಿತ್ತಾ?

**ಕರಣಿಕ 1:** ಈಗೇನು? ಇನ್ನೂ ಅಲ್ಲೇ ಇರತ್ತೆ ಅಂದ್ಕೊಂಡಿದೀರಾ?....ಇವ್ರೇನು ಇನ್ನೂ ಬರಲೇ ಇಲ್ವಲ್ಲಾ. *(ಚೆನ್ನನಿಗೆ)* ಏನಪ್ಪಾ ಸ್ವಲ್ಪ ಹೋಗಿ ನೋಡ್ತಿಯಾ? *(ಚೆನ್ನ ಸುಮ್ಮನೆ ನಿಲ್ಲುವನು.)*

**ಕರಣಿಕ 2:** ನೀವಿಬ್ರೂ ಸೇರ್‍ಕೊಂಡು ನನ್ಮೇಲೆ ಗೂಬೆ ಕೂರಿಸ್ತಿದೀರಲ್ಲ. ಲೆಕ್ಕ ತಾಳೆ ಆಗೋ ಹಾಗೆ ಸ್ವಲ್ಪ ಬರೆದು ಮುಗಿಸಿಬಿಡೋಣಾಂತ

ಗಿಣೀಗೆ ಹೇಳಿದ ಹಾಗೆ ಹೇಳ್ದೆ. ನೀವು ಕೇಳಿದ್ರಾ? ಒಬ್ರಿಗೆ ಗಂಜೀಪು ಆಟ ಮುಗಿಯೊಲ್ಲ. ಇನ್ನೊಬ್ರಿಗೆ ತ್ಯಾಪೆ ಬಿಡೋದಿಲ್ಲ. ನಾಯೇನು ಮನುಷ್ಯಾನೋ ಮತ್ತೇನೋ ಒಬ್ಬನೇ ದುಡಿಯೋಕೆ?

**ಕರಣಿಕ 1:** ಸುಮ್ಮನಿರಿ ಸ್ವಾಮಿ. ಪ್ರಾಣ ಹೋಗೋವಾಗ ಸಿಂಬಳ ಒರೆಸಿ ಕೊಂಡ್ರಂತೆ. ನಮ್ ಮೇಲೆ ನಿಮಗೆ ಕಣ್ಣು. ಲೆಕ್ಕ ಸರಿ ಮಾಡಿದ್ರೆ ತಾನೇ ಏನು? ಆಗೋದಂತೂ ಆಗೇಹೋಯ್ತಲ್ಲ...

**ಕರಣಿಕ 3:** ಇವರೇನಪ್ಪಾ ಇನ್ನೂ ಬರ್ಲಿಲ್ಲಾ. ನಾವೇ ಒಳಗೆ ಹೋಗೋಣ.

**ಕರಣಿಕ 1:** ಸುಮ್ಮನಿರಿ. ಮತ್ತಷ್ಟು ರೇಗಿ ಬಿದ್ದಾರು.

**ಕರಣಿಕ 2:** ಅಲ್ಲಾ ಅಷ್ಟು ರಾಜಾರೋಷಾಗಿ ಹಣ ತೆಗೀತಿದ್ರು. ದಳವಾಯಿಗಳೂ ಅಂದ್ರೆ ಸಿಂಹದ ಮರಿ ಅಂದ್ಕೊಂಡಿದ್ದೋ. ಅವ್ರು ರೇಗೋದ್ ನೋಡಿದ್ರೆ ತುಂಬಾ ಹೆದರಿ ಹೋಗಿರೋ ಹಾಗಿದೆ.

**ಕರಣಿಕ 3:** ನಿಮಗೆಲ್ಲೋ ಭ್ರಮೆ. ತಮ್ಮ ವ್ಯವಹಾರ ಬಯಲಾಯ್ತೂಂತ ಹೆದರಿದ್ದಾರೆ ಅಂದ್ಕೊಂಡ್ರಾ?

**ಕರಣಿಕ 2:** ಮತ್ತೆ?

**ಕರಣಿಕ 3:** ರಾಜರು ಎಸ್ಟಾವತ್ತೂ ತಿರಿಗ್ ಬೀಳೋಲ್ಲಾ ನಾನೇ ಮೆರೀಬಹೂದುಂತ ಇದ್ರು. ಯಾವಾಗ ರಾಜರು ಎದ್ರಿಗೆ ನಿಂತ್ರೋ ಇವರಿಗೆ ತಡೆಯೋಕಾಗ್ಲಿಲ್ಲ. ಕೈಲಾಗದವನು ಮೈ ಪರಚಿಕೊಂಡ ಅಂದ್ಹಾಗೆ ನಮ್ಮೇಲೆ ಎಗರಾಡ್ತಿದಾರೆ.

**ಕರಣಿಕ 1:** ಅದೂ ಸರೀನೆ. ತಾವಾಯ್ತು ಸಂಗೀತ ನರ್ತನವಾಯ್ತು ಅಂತಿದ್ದ ರಾಜರು ಇದ್ದಕ್ಕಿದ್ದ ಹಾಗೆ ಹಣಕಾಸಿನ ವಿಚಾರದಲ್ಲಿ ತಲೆ ಹಾಕಿದ್ದು ಬಹಳ ಸೋಜಿಗ ಅಲ್ವೇ? ಅದೇನೂ ಅಂಥಾದ್ದು?

**ಕರಣಿಕ 3:** ನಮಗ್ಯಾಕೆ ಹೆಚ್ಚಿನ ಮಾತು ತಕ್ಕೊಳ್ಳಿ. ಇಲ್ಲಿ ಗೋಡೆಗಳಿಗೂ ಕಿವಿ ಇರುತ್ವೆ

**ಕರಣಿಕ 2:** ಇನ್ನೂ ಎಷ್ಟು ಹೊತ್ತು ಕಾಯೋದು. ಕೂಗಿ ಕರೆಯೋಣ. *(ಎಲ್ಲರೂ ಒಟ್ಟಾಗಿ ಕೊಠಡಿಯ ಬಾಗಿಲಿಗೆ ಹೋಗಿ ತಕ್ಷಣವೇ ಹಿಂತಿರುಗಿ ಬಂದು ತಮ್ಮ ಮೊದಲಿನ ಜಾಗದಲ್ಲಿ ನಿಲ್ಲುವರು.)*

**ವಿಕ್ರಮರಾಯ:** *(ಪ್ರವೇಶಿಸಿ ಕರಣಿಕರನ್ನು ನೋಡಿ ಪಲ್ಲಂಗದ ಮೇಲೆ ವಿಶ್ರಮಿಸುವಂತೆ ಮಲಗುವನು.)* ಈಗ ವಿನಯ ತೋರ್ಸಿದ್ರೆ ಏನ್ಬಂತ್ರೀ? ಆಗೋದೆಲ್ಲಾ ಆಗಿಹೋದ ಮೇಲೆ.

**ಕರಣಿಕ 2:** ನಾವು ಅಶಕ್ತರು ಸ್ವಾಮಿ. ಸ್ವತಃ ಮಹಾರಾಜರೇ ಬಂದು...

**ವಿಕ್ರಮರಾಯ:** ಮಹಾರಾಜರು! ಯಾವ ಮಹಾರಾಜರು? ನೀವು ಊಳಿಗ ಮಾಡ್ತಿರೋದು ನನ್ನಲ್ಲಿ. ಬೇರೆ ಯಾರಲ್ಲೂ ಅಲ್ಲ. ನಿಮ್ಮಲ್ಲಿ ಒಬ್ಬೊಬ್ಬನನ್ನೂ ಆಯ್ದು ಕರಕೊಂಡು ಬಂದು ಇಲ್ಲಿಟ್ಟಿದ್ದು ಯಾರು? ತಿಂಗಳಿಗೆ ಸಾವಿರ ವರಹ ಎಣಿಸೋರು ಯಾರು?

**ಕರಣಿಕ 1:** ಅದು ಸರಿ ಸ್ವಾಮಿ...

**ವಿಕ್ರಮರಾಯ:** ಬಾಯಿಮುಚ್ಚಿ, ಸ್ವಾಮಿಯಂತೆ ಸ್ವಾಮಿ. ಈಗ ಸ್ವಾಮಿ ಅಂತ ಹಲ್ಲು ಗಿಂಜೋ ಬುದ್ದಿ ಕಡತ ಒದರಿ ತೋರ್ಸೋವಾಗ ಎಲ್ಹೋಗಿತ್ತು? ಬೇವಿಲೇವಾರಿ ಆಗಿರೋ ಹಣಕ್ಕೆ ಒಂದು ದಿಕ್ಕು ತೋರ್ಸೋಕೆ ಏನಾಗಿತ್ತು?

**ಕರಣಿಕ 3:** ಅಂತಃಪುರದ ವೆಚ್ಚವನ್ನು ಬರೆದಿದ್ದರೆ ಎಲ್ಲಾ ಸರಿ ಹೋಗ್ತಿತ್ತು ಸ್ವಾಮಿ. ಅಷ್ಟರಲ್ಲಿ...

**ವಿಕ್ರಮರಾಯ:** ಏನು ಅಷ್ಟರಲ್ಲಿ? *(ಸ್ವಗತ)* ಅಷ್ಟರಲ್ಲಿ ಈ ಇಪ್ಪತ್ತು ವರ್ಷದ ಕುನ್ನಿಗೆ ತಲೆ ತಿರಿಗಿ ಹೋಯ್ತು. ಕುಮ್ಮಕ್ಕಿಗೆ ಸೆಟೆದು ನಿಂತಿದ್ದಾನೆ...ಒಟ್ನಲ್ಲಿ ನಿಮ್ಮಂಥೋರನ್ನ ನಂಬಿ ಕೂತ್ನಲ್ಲ ನಾನು...ನಾನು ದಡ್ಡ ಅಷ್ಟೆ. *(ಕಹಳೆ)* ಯಾವ್ನೋನೋ ಅದು ಕೊಬ್ಬಿದೋನು? ನಮಗೆ ಒಳಗೆ ಬೆಂಕಿ ಕುದೀತಿದೆ. ಅವನಿಗೆ ಕಹಳೆ ಗೌರವದ ಮೋಜು. ಅವನನ್ನು ಹಿಡಕೊಂಡು ಬನ್ರೋ. *(ಚೆನ್ನ ರಂಗ ಹೋಗುವರು.)*

**ಕರಣಿಕ 1:** ನಾವು ಇನ್ನು ಬರಬಹುದೇ?

**ವಿಕ್ರಮರಾಯ:** ಇನ್ಯಾಕೆ ಬರ್ತೀರಿ..ಒಟ್ಟಿಗೇ ಸೆರೆಮನೆಗೆ ಹೋಗುವಿರಂತೆ ತಾಳಿ. *(ಚೆನ್ನ ರಂಗ ಬರುವರು.)*

**ಚೆನ್ನ:** ಪ್ರಭುಗಳು ಬರ್ತಿದಾರೆ ಸ್ವಾಮಿ.

**ವಿಕ್ರಮರಾಯ:** ಯಾರು? *(ರಾಜಒಡೆಯ ಬರುತ್ತಾನೆ. ಅವನ ಜತೆಯಲ್ಲಿ ಸಜ್ಜಿತರಾದ ಕೆಲವರಿದ್ದಾರೆ.)*

**ರಾಜಒಡೆಯ:** ನಾವು ದಳವಾಯಿಗಳೇ...

**ವಿಕ್ರಮರಾಯ:** ಓಹೋ ಪುಟ್ಟಸ್ವಾಮಿ. ಬಾ. ಬಾ. ಏನು ಅಂತಃಪುರದ ದಾರಿ ತಪ್ಪಿ ಇಲ್ಲಿಗೆ ಬಂದ ಹಾಗಿದೆ.

ರಾಜಒಡೆಯ: ದಾರಿ ತಪ್ಪಿ ಅಂತಃಪುರಕ್ಕೆ ಹೋಗ್ತಿದ್ದವರು ಈ ದಿನ ಸರಿಯಾದ ದಾರಿ ಹಿಡಕೊಂಡು ಬಂದಿದೀವಿ.

ವಿಕ್ರಮರಾಯ: ಸೋಮಯಾಜಿಗಳು ಕಾವ್ಯಾರ್ಥ ಕಲಿಸಿದ್ದು ಸಾರ್ಥಕವಾಯ್ತು. ಅದಿರಲಿ, ಏನು ಸಮಾಚಾರ? ನಮ್ಮನ್ನ ಕರೆ ಕಳಿಸಿ ಅರಮನೆಗೆ ಬರಮಾಡಿಕೊಳ್ಳಬಹುದಿತ್ತಲ್ಲ?

ರಾಜಒಡೆಯ: ಅದರ ಬದಲು ದಳವಾಯಿಗಳ ಚಾಕಚಕ್ಯತೆ ನೋಡೋ ಆಸಕ್ತಿ ನಮಗೆ ಆಯ್ತು. ಯಾಕೆ? ಬಂದದ್ದು ನಿಮಗೆ ಹಿಡಿಸಲಿಲ್ಲವೇ?

ವಿಕ್ರಮರಾಯ: ಉಂಟೇ ಉಂಟೇ ನಮ್ಮ ಪುಟ್ಟಸ್ವಾಮಿ ನಮ್ಮ ಮನೆಗೆ ಬಂದರೆ ಬೇಡಾ ಅನ್ನಿಸುತ್ತ್ಯೇ? ಬಾ, ಇಲ್ಲೇ ಕೂತ್ಕೋ.

ರಾಜಒಡೆಯ: ಇರಲಿ. (ಕರಣಿಕರನ್ನು ನೋಡಿ) ಇವರು...?

ವಿಕ್ರಮರಾಯ: ಹೌದು, ಅವರನ್ನೇ ವಿಚಾರಿಸಿಕೊಳ್ತಿದ್ದೆ. ರಾಜ್ಯದ ಹಣಕಾಸಿನ ಲೆಕ್ಕ ಪತ್ರಗಳನ್ನು ಸರಿಯಾಗಿ ಇಡದೇ ಇದ್ದದ್ದು ತಪ್ಪೂಂತ.

ರಾಜಒಡೆಯ: ಅಥವಾ ನಮಗೆ ಕಡತಗಳನ್ನು ತೋರಿಸಿದ್ದು ತಪ್ಪು ಅಂತಲೋ?

ವಿಕ್ರಮರಾಯ: ಯಾಕೆ ಕೊಂಕು ಪುಟ್ಟಸ್ವಾಮಿ. ಇವತ್ತು ನಿನಗೇನಾಗಿದೆ? ನಿತ್ಯದ ಸರಳ ತೊಡಿಗೆ ಬಿಟ್ಟು ಸಿಂಹಾಸನ ಹತ್ತುವಾಗ ತೊಡುವ ಈ ಕಿರೀಟ, ಈ ಕತ್ತಿ ಈ ಉಡುಪು ತೊಟ್ಟು ಬಂದಾಗಲೇ ಅಂದುಕೊಂಡೆ ನೀನಿವತ್ತು ನೆಟ್ಟಗೆ ಯೋಚಿಸ್ತಿಲ್ಲಾಂತ. ಅದಿರಲಿ. ಈ ಉಡುಪನ್ನು ನಿನಗೆ ಬೊಕ್ಕಸದಿಂದ ತೆಗೆಸಿಕೊಟ್ಟವರಾರು?

ರಾಜಒಡೆಯ: ಯಾಕೆ? ನಮಗೆ ವಂಶಪಾರಂಪರ್ಯವಾಗಿ ಬಂದ ವೇಷವನ್ನು ತೊಡಲು ದಳವಾಯಿಗಳು ಅಪ್ಪಣೆ ಕೊಡಬೇಕೋ?

ವಿಕ್ರಮರಾಯ: ದಳವಾಯಿಗಳ ಅಪ್ಪಣೆ ಬೇಡದಿದ್ದರೂ ಚಿಂತೆಯಿಲ್ಲ, ನಮಗೆ ಕಾರಣ ಕೊಡಬೇಕು.

ರಾಜಒಡೆಯ: ಓಹೋ ಕಾರಣ ಕೊಡಬೇಕೋ, ನಿನ್ನ ಹದ್ದು ಮೀರ್ತಿದೆ ದಳವಾಯಿ.

ವಿಕ್ರಮರಾಯ: ನನ್ನ ಹದ್ದನ್ನು ಕಾಣೋದೇ ನಿನಗಿನ್ನೂ ಆಗಿಲ್ಲ. ಇನ್ನು ನಾವು ಅದನ್ನು ಮೀರೋದನ್ನು ಏನು ಕಂಡೀಯೇ ಪುಟ್ಟಸ್ವಾಮಿ?

ರಾಜಒಡೆಯ: ಯಾರೊಡನೆ ಮಾತನಾಡ್ತಿದೀಯಾ ಅನ್ನೋ ಕಲ್ಪನೆನಾದ್ರೂ ನಿನಗಿದೆಯೇ?

ವಿಕ್ರಮರಾಯ: ತಾವು ಯಾರೋ? (ರಾಜಒಡೆಯ ಸನ್ನೆ ಮಾಡುವನು. ವಂದಿ ಮಾಗಧರು ರಾಜನ ಬಿರುದುಗಳನ್ನು ಹೇಳುವರು.)

**ವಂದಿ:** ಸ್ವಸ್ತಿ ಶ್ರೀಮತ್ಪಶ್ಚಿಮ ರಂಗನಾಥ ಪಾದಾರವಿಂದ ಮಧುಕರಾಯತ ಚಿತ್ತಾ।
ಮತ್ತರಿಪಾಷಾಂಡ ಖಂಡನೋದ್ದಂಡ ದೋರ್ದಂಡಾ।
ಅರ್ಥಿಜನೇಪ್ಸಿತಾರ್ಥಿದಾನ ಶೌಂಡಾ।
ಅಂಗನಾಜನ ಕುಸುಮ ಕೋದಂಡಾ।
ಬಾಹುದಂಡ ಧೃತ ವಿವಿಧಾಯುಧ ಪ್ರಕಾಂಡಾ।
ಬಿರುದೆಂತೆಂಬರ ಗಂಡಾ।
ಮಿತ್ರಕುಲಕಮಲ ಮಾರ್ತಾಂಡಾ।
ಮೊನೆಗಾರಾ।
ಸುಗುಣ ಗಂಭೀರಾ।
ರಾಜಕಂದರ್ಪಾ।
ವೀರಾ।
ಶೂರಾ।
ಮಲೆಪರ ಗಂಡಾ।
ಅಭಯ ಪ್ರತಾಪಾಧೀಶ್ವರಾ।
ಶರಣಾಗತ ಪರಿಪಾಲಕಾ।
ಸಂಗೀತಲೋಲಾ।
ಸಾಹಿತ್ಯ ರತ್ನಾಕರಾ।
ಸೂರ್ಯಚಂದ್ರ ಶಂಖ ಚಕ್ರಾಂಕುಶ ಮಕರ ಮತ್ಸ್ಯ
ಹನೂಮದ್ಗರುಡಕಂಠೀರವಾದ್ಯಾನೇಕಬಿರುದಾಂಕಿತಾ।
ರಾಜಾಧಿರಾಜಾ।
ಮಹಾರಾಜ।
ಶ್ರೀಮನ್ಮಹಿಶೂರ ರತ್ನ ಸಿಂಹಾಸನಾಧೀಶ್ವರ।
ಶ್ರೀ ಶ್ರೀ ಶ್ರೀ ಇಮ್ಮಡಿ ರಾಜಒಡೆಯ
ಜಯಜಯ ಮಹಾಸ್ವಾಮಿ
ವಿಜಯೀಭವ।
ವಿಜಯೀಭವ।

**ವಿಕ್ರಮರಾಯ:** ಮುಗಿಯಿತೋ. ಈ ಬಿರುದುಗಳ ಅರ್ಥವಾದರೂ ಗೊತ್ತೋ ನಿನಗೆ?

**ರಾಜಒಡೆಯ:** ನಮಗಿನ್ನು ಸಹಿಸುವುದು ಸಾಧ್ಯವೇ ಇಲ್ಲ. ಮೊದಲು ನೀನು ನಿನ್ನನ್ನು 'ನಾವು' ಎಂದು ಕರೆದುಕೊಳ್ಳುವುದನ್ನು ನಿಲ್ಲಿಸು. ಹಾಗೆಯೇ ಸಂಸ್ಥಾನಾಧೀಶರಾದ ನಮ್ಮನ್ನು ಏಕವಚನದಲ್ಲಿ ಮಾತನಾಡಿಸುವುದನ್ನು ನಿಲ್ಲಿಸು.

ವಿಕ್ರಮರಾಯ: ಆಯಿತಾಯಿತು ಮಹಾಸ್ವಾಮಿ. ಈ ಬಡಪಾಯಿಯನ್ನು ಇನ್ನಾದರೂ ಕ್ಷಮಿಸಿ. ನನ್ನ ಮೇಲೆ ಕೋಪ ಬರಲು ಕಾರಣವೇನಿದೆ? ಅಂತಃಪುರದ ವೆಚ್ಚದಲ್ಲಿ ಹಣದ ಕೊರತೆ ಏನಾದರೂ ಬಿತ್ತೇ? ಅಥವಾ ಮಹಾರಾಜರ ಕೃಪೆಗೆ ಇನ್ನಾರಾದರೂ ಸುಂದರಿ ಒಳಗಾಗಬೇಕಿದೆಯೆ? ಅದನ್ನಷ್ಟು ಹೇಳಿದರೆ ಕುಂದನ್ನು ಚಿಟಿಕೆ ಹೊಡೆಯೋದರಲ್ಲಿ ಇಲ್ಲಾ ಅನ್ನಿಸಿಬಿಡ್ತೀನಿ.

ರಾಜಒಡೆಯ: ನೀನಷ್ಟು ಚಾಣಾಕ್ಷ ಅನ್ನೋದು ನಮಗೆ ಗೊತ್ತು. ನಮ್ಮನ್ನು ಇನ್ನು ಅಂತಃಪುರದಲ್ಲಿ ಇಡಲಾರೆ ವಿಕ್ರಮ. ನಮ್ಮ ದಾರಿ ನಮಗೆ ಗೊತ್ತಾಗುತ್ತಿದೆ...ನಾಳೆ ನಾವು ಕರೆಯೋ ಓಲಗದಲ್ಲಿ ಎಲ್ಲ ಲೆಕ್ಕಪತ್ರಗಳನ್ನೂ ತಂದು ತೋರಿಸಬೇಕು. ಇಲ್ಲದಿದ್ದರೆ ಅಪರಾಧಕ್ಕೆ ತಕ್ಕ ಶಿಕ್ಷೆಗೆ ಎಲ್ಲರೂ ಸಿದ್ಧರಾಗಿರಬೇಕು. ನಾವಿನ್ನು ಬರುತ್ತೇವೆ. (ಕಹಳೆ. ಹೋಗುವರು.)

ವಿಕ್ರಮರಾಯ: ಆಹಾಹಾಹಾ! "ಅಂತಃಪುರದಲ್ಲೇ ಇಡಲಾರೆ ವಿಕ್ರಮ". ನಿನ್ನನ್ನು ಎಲ್ಲಿ ಇಡಬೇಕು ಅನ್ನೋದು ಗೊತ್ತಾಯ್ತಯ್ಯ ಸಂಸ್ಥಾನಾಧಿಪತಿ. ಜೋರಾಗಿ ಮಾತಾಡೋಕೂ ಹೆದರ್ತಿದ್ದೆ. ನಿನ್ನ ಪೊಗರು ಕಡ ತಂದದ್ದು ಅನ್ನೋದು ಗೊತ್ತಾಗೊಲ್ವೇ ನನಗೆ? *(ಹೋಗುವನು.)*

ರಂಗ: *(ಜೋರಾಗಿ ಸೀನುವನು.)* ಅಯ್ಯಯ್ಯಪ್ಪಾ. ಪ್ರಾಣಾನೇ ಒಂಟೋಗ್ ಬುಟ್ಟಿತ್ತು. ಸೀನು ತಡ್ದೆ ತಡ್ದೆ. ಇನ್ನೇನು ಆಗಾಕೆ ಇಲ್ಲ. ಇಲ್ಲ ಸೀನ್ ಬೇಕು, ಇಲ್ಲದಿದ್ರೆ ಓಡೋಗ್ ಬೇಕು ಅನ್ನಿಸ್‌ಬಿಟ್ಟಿತ್ತು. ಸದ್ಯ ಮುಗ್ಸಿ ಇಬ್ರೂ ಓದ್ರಲ್ಲ. ಆಗ್ಲೇ ಸೀನಿಬಿಟ್ಟಿದ್ರೆ ಏನ್‌ಗತಿಯಪ್ಪಾ ನಂದು?

ಚಿನ್ನ: ಬೋ ಚೆನ್ನಾಗೈತೆ. ಮನೆಯಾಗೆ ಕತೆ ಮಾಡಿ ಯೋಳಿದ್ರೆ ಮಕ್ಕಳು ನಗ್ತಾವೆ. *(ಜನರಿಗೆ)* ಏನಂತೀರಿ? 'ನಾವು' ಅನ್ಬೇಡ. 'ನಾನು' ಅನ್ನೂಂತ ಇವ್ನು, 'ನಾನು' ಅನ್ನೂಂತ ಅವ್ನು. ಎಂಗ್ ಕಿತ್ತಾಡ್‌ಬಿಟ್ರು. ಯಾರು ಮೊದ್ಲು ಕಣ್ಣು ಬಿಡ್ತಾರೋ ಅವ್ನು ಕಣ್ಣು ಬಿಡೋದ್ರೊಳ್ಗೆ ಇರಿದು ಬುಡಾನಾ ಅಂತ ಇಬ್ರೂ ಕೆಕ್ಕರಿಸ್ಕೊಂಡು ಒಬ್ಬರನ್ನೊಬ್ರು ನೋಡ್ತಿದ್ದಂಗಿತ್ತು.

ರಂಗ: ಇವ್ರು ಇಂಗಾಡ್ತಾ ಇರೋದು ನಮ್ಗೂ ಒಂತರಾ ನಿಸೂರಲ್ವಾ?

ಚಿನ್ನ: ಅದೆಂಗಪ್ಪಾ?

ರಂಗ: ಎಲ್ಡು ಉಲಿ ಒಡಿದಾಡಿ ಸತ್ತೋ ಅನ್ನು. ಸತ್ ಉಲಿ ಮೇ ಮ್ಯಾಗಿರೋ ಚಿಗಟಾ ಅಂಗೇ ಉಳಿಯಾಕಿಲ್ವಾ? ಘಟಾನುಘಟಿ

ಒಬ್ರಿಗೊಬ್ರು ಕಚ್ಚಾಡ್ತಾ ಇದ್ರೆ ನಾವು ತೆಪ್ಗೆ ನಿಂತ್ಕಂಡಿರಬೋದಲ್ವಾ? 'ಲೇ, ಮಗ್ನೆ' ಅಂತ ನಮ್ಮುನ್ನ ಯಾರೂ ಮಾತಾಡ್ಸಾಕಿಲ್ಲ. ನಂ ಪಾಡಿಗ್ ನಾವ್ ಇರ್ಬೋದು.

ಚಿನ್ನ: ದಡ್ಡ.ದಡ್ಡ. ನೀನಿನ್ನೂ ಪರಪಂಚ ಕಾಣೋದ್ ಭಾಳ ಐತೆ. ಇದು ಇಂಗಲ್ಲ ಕಣ್ಲಾ. ಕೈಲಿ ಅರೀದೇ ಇದ್ದಾಗ ಕೈಗ್ ಸಿಕ್ಕೋರು ಯಾರು? ಕೈಯಾಗ್ ಈಟಿ ಇದ್ರೂ ಅದಕ್ ತುಕ್ ಇಡಸ್ಕೊಂಡು ಕುಂತಿರೋ ನಾವ್ ತಾನೆ? ಮ್ಯಾಗೆ ಕತ್ತಿ ಯಾವಾಗ್ಲೂ ತೂಗ್ತಾನೆ ಇರ್ತೈತೆ. ತಗಿ ತಗೀ ಎಲೆ ಕೊಡು.

ರಂಗ: *(ಸಂಚು ನೋಡಿ)* ಇಲ್ವಲ್ಲಾ ಆಗೇ ಓಗೈತೆ.

ಚಿನ್ನ: ನಡೀ ಮತ್ತೆ ಚೆನ್ನಾಸಾನಿ ಮನೆ ಕಡೆ.

## ದೃಶ್ಯ 3

*(ಅಂತಃಪುರ. ಬಿರುಸಿನ ಸಿದ್ಧತೆಗಳು ನಡೆಯುತ್ತಿವೆ. ಒಂದು ಕಡೆ ಚೆನ್ನಾಸಾನಿ ಕುಳಿತು ತನ್ನ ಸದಸ್ಸನ್ನು ನಡೆಸಿದ್ದಾಳೆ.)*

**ಹೆಂಗಸು 1:** ಅಲ್ಲಾ ಕಣಕ್ಕಾ. ನೀನು ಎಷ್ಟು ವರ್ಷದಿಂದ ಇಲ್ಲಿ ಊಳಿಗ ಮಾಡ್ತಿದೀಯಾ. ಯಾವತ್ತೂ ನಿಂಗೆ ಬೇಜಾರೇ ಆಗಿಲ್ವಾ?

**ಚೆನ್ನಾಸಾನಿ:** ಬೇಜಾರ‍್ಯಾಕೆ ಬಂಗಾರೂ. ರಾಜರು ನಮಗೇನು ಕಡಿಮೆ ಮಾಡವ್ರೆ. ಉಣ್ಣಾಕೆ ಉಡಾಕೆ ಏನು ಬೇಕೋ ಅದು ತಗೋ ಅಂತ ಸುರಿಯೋ ಧಣಿ ಇದ್ಮೇಲೆ ಇನ್ನೇನು ನಮಗೆ?

**ಹೆಂಗಸು 2:** ಇಂಗಿದ್ರೂ ಆಗಾಗ ಒಬ್ಬೊಬ್ರು ಕದ್ದು ಓಡೋಗ್ತಾರಲ್ಲಾ?

**ಚೆನ್ನಾಸಾನಿ:** ನಿಂಗೂ ಓಡೋಗೋ ಮನಸ್ಸೈತಾ?

**ಹೆಂಗಸು 2:** ಮಾತಿಗೆ ಕೇಳ್ದೆ ಅಷ್ಟೇ.

**ಚೆನ್ನಾಸಾನಿ:** ಬುದ್ಧಿ ಇಲ್ಲದ ಮುಕ್ಕಗಳು. 'ಬನ್ರೆ, ಹಾಯಾಗಿರ್ರೇ' ಅಂದ್ರೆ ಪೊಗರು. 'ಗತಿ ಇಲ್ದಿರೋನ್ ಕಟ್ಕೊಂಡ್ ಒಟ್ಟೇಗಿಲ್ದೇ ಸತ್ರೂ ಚಿಂತೆ ಇಲ್ಲ. ಇಲ್ಲಿ ಇರಾಕಿಲ್ಲ' ಅಂತಾರೆ. ಆರ್ ತಿಂಗ್ಳಿಂದೆ ಬಂದಿದ್ಲಲ್ಲಾ ಒಬ್ಳು, ಎಂತೋಳವ್ವ

**ಹೆಂಗಸು 3:** ಪ್ರಭಾವತಿ.

**ಚೆನ್ನಾಸಾನಿ:** ಊಂ. ಎಂತದೋ 'ವತಿ'. ಬಂದ್ ದಿನದಿಂದ ಒಂದ್ ಗಳಿಗೆ ನಕ್ಕಿದ್ರೆ ನನ್ನಾಣೆ. ನಿನ್ನಣೆಬರಾಂತ ತೆಪ್ಪಗಿದ್ದೆ. ಆಮೇಲೆ ಓಡೋದ್ಲಲ್ಲ, ಮೊನ್ನೆ ದೇವಸ್ಥಾನಕ್ಕೋದಾಗ, ಅಲ್ಲಿ ಊ ಮಾರ‍್ತಾ ಕುಂತಿದ್ಲು *(ಬೆರಳಲ್ಲಿ ಸಣ್ಣಗಾಗಿದ್ದಾಳೆಂದು ತೋರಿಸಿ)* ಇಂಗಾಗೋಗವಳೆ. 'ಅಯ್ಯೋ ಮುಕ್ಕ. ಇದ್ಯಾಕ್ ಬೇಕಿತ್ತು ನಿಂಗೆ. ಕೂದ್ಲೂ ಕೊಂಕದಂಗೆ ನೋಡ್ಕೊಳೊ ಧಣೀನ್ ಬಿಟ್ಟುಬಿಟ್ಟು ಬೀದೀಲ್ ಬಿದ್ದಲ್ಲೇ' ಅಂದಕೊಂಡ್ ಬಂದೆ.

**ಹೆಂಗಸು 1:** ಆದ್ರೂ ದಿನಾಲೂ ಬೆಳಗ್ಗಿಂದ ಸಂಜೇವರೆಗೂ ಕೆಲ್ಸ ಇಲ್ದೇ ಇರೋದೂಂದ್ರೆ ಒಂದೊಂದ್ ಸಲ ಅಯ್ಯೋ ಅನ್ಸುತ್ತೆ.

**ಚೆನ್ನಾಸಾನಿ:** ಕೆಲ್ಸ ಯಾಕಿಲ್ಲ? ಸ್ನಾನ ಮಾಡಿ ಅಲಂಕಾರ ಮಾಡ್ಕೊಂಡು ನೃತ್ಯಾನೋ ಸಂಗೀತಾನೋ ಅಭ್ಯಾಸ ಮಾಡೋದು. ಪೊಗದಸ್ತಾಗಿ ತಿನ್ನೋದು. ರಾಜರು ಬಂದಾಗ ಅವರಿಗೆ ಪ್ರೀತಿಯಾಗೋ ಹಾಗೆ ನಡ್ಕೊಳ್ಳೋದು, ಇವ್ಯಾವುದೂ ಕೆಲ್ಸನೇ ಅಲ್ವಾ?

**ಹೆಂಗಸು 2:** ತಲೆತಲಾಂತರದಿಂದ ಇಲ್ಲಿದ್ದೋರಿಗೆ ಸರಿ ಅನ್ನು. ಆದ್ರೆ ನಮ್ಮ ನೀಲಮ್ಮನಂತೋರು, ಹಕ್ಕಿ ಹಾಗಿದ್ದೋರು, ಈಗ ಇಲ್ಲಿ ಕಟ್ಟಿ ಹಾಕಿದಂಗೆ ಆಗೋಲ್ವೇನಕ್ಕಾ?

**ಹೆಂಗಸು 3:** ಅವಳಿಗೇನೇ ಕಮ್ಮಿ. ಅವರಪ್ಪ ನೆಗೆದು ಬಿದ್ದಿದ್ರೂ ಒಂದು ಸೀರೆ ತೆಕ್ಕೋಡೋಕೆ ಆಗ್ತಿರಲಿಲ್ಲ. ಇಲ್ನೋಡು ಹೆಂಗಿದ್ದಾಳೆ?

**ಚೆನ್ನಾಸಾನಿ:** ಅದೂ ಮಾತು ಚಿನ್ನ. ತೋಗೋ ಒಂದು ವೀಳ್ಯ. *(ಮಧ್ಯ ಪ್ರವೇಶಿಸಿ ಅವರ ಗಮನ ಸೆಳೆಯಲು ಪ್ರಯತ್ನಿಸುವ ಚೆನ್ನ-ರಂಗರಿಗೆ)* ಬಂದ್ರಾ? ಏನು?

**ರಂಗ:** ಇನ್ನೇನವ್ವಾ, ಕವಳ ಕೇಳೋಣಾಂತ ಬಂದೋ.

**ಚೆನ್ನಾಸಾನಿ:** ನೀವೊಂದು. ತಗೋ ತಗೋ.

**ಚೆನ್ನ:** ಏನಕ್ಕಾ? ಎಂಗಿದ್ದೀಯಾ?

**ಹೆಂಗಸು 1:** ಅಕ್ಕನಂತೆ ಅಕ್ಕ. ನಾನ್ಯಾವ ಅಕ್ಕನೋ ನಿನಗೆ?

**ರಂಗ:** ಬಾಪ್ಪಾ ಚೆನ್ನಾ. ಇವತ್ತು ಏನೋ ಭಾರೀ ಬೇಟೆ ಇದ್ದಂಗೈತೆ. ನಾವಿರೋ ಅಂಗಿಲ್ಲ.

**ಚೆನ್ನಾಸಾನಿ:** ನೀವು ಬರೋವಾಗ ಅರಮನೆಯಿಂದ ಸ್ವಾಮೇರು ಒರಟಿದ್ರಾ?

**ಚೆನ್ನ:** ಮ್ಯಾನೆ ಇಟ್ಟಿದ್ರು, ಈಗ ಒಂಟಿರ್ಬೋದು. ನಾವ್ ಬತ್ತೀವಿ ಕಣಕ್ಕ.

**ಚೆನ್ನಸಾನಿ:** ಅಯ್ಯೋ ಇನ್ನೂ ಏನೂ ಮುಗ್ದೇ ಇಲ್ಲ. ಏನ್ರೇ ಎಲ್ಲಾ ಅಲಂಕಾರ ಮುಗಿತೋ ಇಲ್ಲೋ? ಅವ್ರು ಬಂದಮೇಲೆ ತಾರಾಡಬೇಕೂಂತ ಇದೀರೇನೇ? *(ವೀಣಾಪಾಣಿಗೆ)* ಏನೇ ನಿಂದಿನ್ನೂ ಶ್ರುತಿ ಸರಿ ಹೋಗಿಲ್ವಾ? ತಂತಿ ಕಿತ್ತು ಹೋಗೋ ಹೊತ್ಗೆ ಸರಿಯಾಗುತ್ತೆ. *(ಅವಳು ನಗುವಳು)* ನಗುನಗು. ನೇಣಗೊಬ್ಬು. ಇನ್ಯಾವಳಾದ್ರೂ ವೀಣೆ ಮೀಟೋಳು ಅವ್ರ ಕಣ್ಣಿಗೆ ಬಿದ್ರೆ ಆಗ ಇಳಿಯುತ್ತೆ ಗರ್ವ.

ಏನ್ರೇ ಪಲ್ಲಂಗ ಅಣಿಯಾಯ್ತಾ? ಇಲ್ಲಿ ಈ ಕಡೆ ಅದಕ್ಕೆ ಚಿತ್ರ ಬರೋ ಹಂಗೆ ಹಾಸು. ನೆರಿಗೆ ಸರಿ ಮಾಡು ಸುಕ್ಕು ಇದೆ ನೋಡು. ಇನ್ನೂ ಹೂ ತರ್ರೇ...*(ಬಾಗಿಲಿಗೆ ಹೋಗಿ ಬಗ್ಗಿ ನೋಡಿ)* ಆಯ್ತಾ, ಅವಳ ಶೃಂಗಾರ? *(ಕೆಲವರು ಸುಮಾರು ಚಿಕ್ಕ ವಯಸ್ಸಿನವಳೊಬ್ಬಳನ್ನು ಶೃಂಗರಿಸಿ ಕರೆತರುವರು.)* ಬಾರೇ ನನ್ನ ಮುದ್ದು. ನಾಚ್ಕೋ ಬೇಡಾ. ಹೆದರ್ಕೆ ಆಯ್ತದೇನು ಮಗಾ?

**ಹುಡುಗಿ:** ಹೆದರ್ಕೆ ಯಾಕೆ?

**ಚೆನ್ನಾಸಾನಿ:** ರಾಜ್ರು ಹೆಂಗೋ ಏನೋ ಅಂತ. ಹಾಗೇನೂ ಇಲ್ಲ. ಎಲ್ಲಿ, ಅವ್ರು ಬಂದಾಗ ಹೇಗೆ ಮಲಗಿರ್ತೀಯಾ ತೋರ್ಸು. *(ಹುಡುಗಿ ಒಂದು ಭಂಗಿಯಲ್ಲಿ ಮಲಗಿ ತೋರಿಸುವಳು.)*

**ಚೆನ್ನಾಸಾನಿ:** ಆಹಾಹಾ! ಚಿಕ್ಕೋಳು ಅಂದ್ರೆ ಚುರುಕು ಮೆಣಸಿನಕಾಯಿ *(ಲಟಿಕೆ ತೆಗೆಯುವಳು)* ಈಗ, ಇವಳೇ ರಾಜರೂಂತ ಇಟ್ಕೋ. ಅವ್ರು ಬಂದಾಗ ಹೇಗೆ ನಡ್ಕೋಳ್ತೀಯಾ ತೋರ್ಸು.

**ಹೆಂಗಸು-ರಾಜ:** ಹಾ! ಚೆಲುವೆ!

**ಹುಡುಗಿ:** ಪ್ರಿಯಾ!

**ಹೆಂಗಸು-ರಾಜ:** ನಿನ್ನ ಮುಖವೆಷ್ಟು ಮುದ್ದಾಗಿದೆ. ಕಣ್ಣುಗಳು ಮೀನಿನಂತೆ ಇವೆ. ಇದು ಹೊಗಳಿಕೆ ಅಲ್ಲ.

**ಹುಡುಗಿ:** ನಿಮ್ಮ ಸೇವೆಗೆ ಸದಾ ಸಿದ್ದಳು.

**ಚೆನ್ನಾಸಾನಿ:** ಅಯ್ಯೋ...ಅಯ್ಯೋ ಎಷ್ಟೊಂದು ಕಲ್ತಿದ್ದೀಯೆ.

**ಹೆಂಗಸು:** ವಲ್ಲಿಯ ತರಬೇತು ಅಂದ್ರೆ ಸುಮ್ಮನೆ ಆಯ್ತೇ? *(ಕಹಳೆ. ಎಲ್ಲರೂ ಸಡಗರದಿಂದ ಸ್ಥಗಿತ. ಮಹಾರಾಜ ಪ್ರವೇಶಿಸಿ ಪಲ್ಲಂಗವನ್ನು ಒಂದು ಕ್ಷಣ ನೋಡಿ ನಿಟ್ಟುಸಿರುಬಿಟ್ಟು ಇನ್ನೊಂದು ಕಡೆ ಇರುವ ಪೀಠದ ಮೇಲೆ ಕೂರುವನು. ಎಲ್ಲರಿಗೂ ಗಾಬರಿಯಾಗುವರು ಚೆನ್ನಾಸಾನಿ ಹುಡುಗಿಗೆ ಸನ್ನೆ ಮಾಡುವಳು. ಅವಳು ಎದ್ದು ರಾಜನ ಬಳಿಗೆ ಹೋಗುವಳು.)*

**ಹುಡುಗಿ:** ನಿಮ್ಮ ಮುಖವೇಕೆ ಕುಂದಿದೆ ಸ್ವಾಮಿ?

**ರಾಜಒಡೆಯ:** *(...ಮಾತಿಲ್ಲ.)*

**ಹುಡುಗಿ:** ಕೋಪವೇ? ಬೇಸರವೇ? *(ತಡೆದು)* ಅನಾರೋಗ್ಯವೇ?

**ರಾಜಒಡೆಯ:** *(...ಮಾತಿಲ್ಲ.)*

**ಹುಡುಗಿ:** ನಮ್ಮಲ್ಲಿ ಯಾರಾದರೂ ತಪ್ಪಿ ನಡೆದೆವೇ? ನೀವು ಮಾತಾಡದಿದ್ದರೆ ನನ್ನ ಕೊರಳಾಣೆ.

**ರಾಜಒಡೆಯ:** ಸಾಕು. ಸಾಕು. ಈ ಬಿನ್ನಾಣ.

**ಹುಡುಗಿ:** ಶಿವ ಶಿವಾ! ನನ್ನ ಪ್ರೀತಿಯಲ್ಲಿ ತಮಗೆ ಸಂದೇಹವೇ?

**ರಾಜಒಡೆಯ:** ಹಾಗಲ್ಲ. ನಮ್ಮನ್ನು ಆವರಿಸಿರುವ ಚಿಂತೆಯೇ ಬೇರೆ.

**ಚಿನ್ನಾಸಾನಿ:** ಚಿಂತೆಯೇ? ಅದಕ್ಕೇಕೆ ಕುಂದುವಿರಿ ಸ್ವಾಮಿ. *(ಸನ್ನೆ ಮಾಡುವಳು, ವೀಣೆ ಮುಂತಾದ ವಾದ್ಯಗಳು, ನರ್ತನ ಗಾಯನ ಪ್ರಾರಂಭ.)*

**ರಾಜಒಡೆಯ:** ನಿಲ್ಲಿಸಿ. *(ಸ್ತಬ್ಧ. ಹುಡುಗಿ ಬೆದರಿ ದೂರ ಸರಿಯುವಳು.)*

**ಚಿನ್ನಾಸಾನಿ:** ಇವತ್ಯಾಕೋ ಒಡೇರು ನಮ್ಮ ಮೇಲೆ ಕೋಪಿಸ್ಕೋತಿದ್ದೀರಿ. ಏನಾದರೂ ತಪ್ಪಾಗಿದ್ರೆ ಕ್ಷಮಿಸಿ, ನಮ್ಮ ಸೇವೇನ ಸ್ವೀಕರಿಸಬೇಕು.

**ರಾಜಒಡೆಯ:** ನಮಗಿನ್ನು ಅದರ ಅವಶ್ಯಕತೆ ಇಲ್ಲ.

**ಹೆಂಗಸು 1:** ಹಾಗಂದರೇನು ಪ್ರಭು

**ರಾಜಒಡೆಯ:** ನಾವು ಈ ಅಂತಃಪುರದ ಮೆಟ್ಟಲು ತುಳಿಯುತ್ತಿರುವುದು ಇದೇ ಕೊನೆಯ ಬಾರಿ.

**ಹೆಂಗಸು 2:** *(ನಗು)* ತಮ್ಮಂಥಾ ರಸಿಕರು ಈ ಮಾತನ್ನಾಡಿದರೆ ಅದು ಹಾಸ್ಯ ಮಾತ್ರ.

**ಹೆಂಗಸು 1:** ನಮ್ಮೊಡನೆ ಸರಸವಾಡಲು ಒಡೇರು ಹೊಸ ಬಗೆಯನ್ನು ಕಲಿತು ಬಂದಂತಿದೆ.

**ರಾಜಒಡೆಯ:** ನಾನು ಹೇಳುತ್ತಿರುವುದು ನಿಮಗೆ ಗೊತ್ತಾಗುತ್ತಿಲ್ಲ.

**ಚಿನ್ನಾಸಾನಿ:** ಹೇಳಿದ್ರೆ ಅಲ್ವೇ ಗೊತ್ತಾಗೋದು. ಅಂತಃಪುರಕ್ಕೆ ಬಂದು 'ಇನ್ನು ಮೇಲೆ ಅದರ ಅವಶ್ಯಕತೆ ಇಲ್ಲಾ' ಅಂತ ಅಂದರೆ ಏನು ಗೊತ್ತಾಗುತ್ತೆ

**ರಾಜಒಡೆಯ:** ನಾವು ಈ ಕಡೆಗೆ ಹೆಚ್ಚು ಗಮನ ಕೊಟ್ಟು ರಾಜಕಾರ್ಯಗಳು ಕುಂಠಿತವಾಗಿವೆ.

**ಹೆಂಗಸು 2:** ಅದಕ್ಕೆ ನಾವು ಹೊಣೆಗಾರರೆಂದು ನಿಮ್ಮ ಇಂಗಿತವೆ?

**ರಾಜಒಡೆಯ:** ಹಾಗಲ್ಲ. ಇನ್ನು ರಾಜ್ಯಭಾರವನ್ನು ನಾವೇ ಹೊರಲಿದ್ದೇವೆ.

**ಹೆಂಗಸು 3:** ತಾವೇ ಅಭಿಷಿಕ್ತ ರಾಜರಲ್ಲವೇ-ಮತ್ತೇನು ನಿಮ್ಮ ಹೊಸ ನಡೆ.

**ರಾಜಒಡೆಯ:** ಇದೆಲ್ಲಾ ನಿಮಗೆ ತಿಳಿಯುವಂತಿಲ್ಲ. ಹೆಚ್ಚು ಜವಾಬ್ದಾರಿಯನ್ನು ನಾವು ಹೊರಬೇಕಾಗಿದೆ.

**ಹೆಂಗಸು 4:** ನಮ್ಮ ತೋಳುಗಳು ಬಳಸುವ ಭುಜಗಳು ಹೆಚ್ಚು ಜವಾಬ್ದಾರಿ ಹೊತ್ತು ಕುಂದಬೇಕೆ?

**ರಾಜಒಡೆಯ:** ಅದು ಅನಿವಾರ್ಯ.

**ಚೆನ್ನಾಸಾನಿ:** ಹಾಗಿದ್ದೂ ತಮಗೆ ಅಂತಃಪುರದ ಮೇಲೆ ಮುನಿಸೇಕೆ ಒಡೆಯ?

**ರಾಜಒಡೆಯ:** ಇಲ್ಲ. ನಿಮ್ಮ ವಿಲಾಸಗಳು ನಮ್ಮನ್ನು ಬಂಧಿಸುತ್ತವೆ.

**ಹೆಂಗಸು 1:** ಹಾಗಿದ್ದರೆ ನೀವು ನಮ್ಮನ್ನು ತ್ಯಜಿಸುವುದು ನಿಶ್ಚಯವೇ?

**ರಾಜಒಡೆಯ:** ಹೌದು.

**ಚೆನ್ನಾಸಾನಿ:** ನಿಮ್ಮನ್ನು ನಂಬಿದ ನಮ್ಮ ಗತಿ ಏನು?

**ರಾಜಒಡೆಯ:** ಚಿಂತಿಸಬೇಕಿಲ್ಲ. ಅದಕ್ಕೆ ತಕ್ಕ ಏರ್ಪಾಟು ಮಾಡಿದ್ದೇವೆ. ನಿಮ್ಮಲ್ಲಿ ಪ್ರತಿಯೊಬ್ಬರಿಗೂ ಎರಡು ಸಾವಿರ ಚಿನ್ನದ ವರಹ ಕೊಡುತ್ತೇವೆ. *(ಕೈ ತಟ್ಟಿ)* ಯಾರಲ್ಲಿ ಆ ಥೈಲಿಗಳೊಡನೆ ಚಾರರು ಬರಲಿ. *(ಹೆಂಗಸರು ಗುಂಪುಗಳಲ್ಲಿ ಸೇರುವರು.)*

**ಹೆಂಗಸು 2:** ಹಾಗಾದ್ರೆ ನಿಜವಾಗ್ಲೂ ಇಲ್ಲಿಂದ ಹೊರಟು ಹೋಗ್ಬಹುದಾ?

**ಹೆಂಗಸು 1:** ಕುಣೀತಾಳೆ. ಎಲ್ಲಿಗೆ ಹೋಗೋದು? ಎಲ್ಲಾ ಬಿಟ್ಟೋರು ನಾವು. ಮನೆಗೆ ಸೇರಿಸ್ತಾರಾ?

**ಹೆಂಗಸು 2:** ಎಲ್ಲಾದ್ರೂ ಸರಿ. ಇಲ್ಲಿಂದ ತೊಲಗ್ತೀವಲ್ಲಾ.

**ಹೆಂಗಸು 4:** ಕಾಸು ಕೈಲಿಟ್ಕೊಂಡು ಬೀದಿಗೆ ಬೀಳ್ತೀವಲ್ಲೇ ತಾಯಿ. ನಾಯಿಗಳು ಬಿಟ್ಟಾವೇನೆ?

**ಚೆನ್ನಾಸಾನಿ:** ಎಲ್ಲಾ ನಿಸೂರಾಯ್ತು ಅನ್ನೋದ್ರೊಳ್ಗೆ ಇವ್ರಿಗೆ ಇಲ್ಲದ್ದು ಬಂತಲ್ಲ. ರಾಜ್ಯ ಅಳಬೇಕಂತೆ. ಈಗೇನು ಎಲ್ಲಾ ಸೊಟ್ಟಗಾಗೈತೆ. ಇವ್ರು ನ್ಯಾರ ಮಾಡೋರು. *(ರಾಜ ಕುಳಿತು ಥೈಲಿ ಹಂಚುತ್ತಾನೆ. ನಮಸ್ಕರಿಸಿ ಹೊರಡುತ್ತಾರೆ. ಹೆಂಗಸು 2 ಒಂದು ಕಡೆ ಬಂದಾಗ,*

**ರಂಗ:** ಬೆಳಿಗ್ಗೆ ರೇಗಿದ್ದೆಯಲ್ಲಾ. ಈಗೇನಂತೀಯಾ? ಓಡೋಗೋಣಾಂದ್ರೆ ಬೇಡಾ ಅಂತಿದ್ದೆ. ಈಗ ಅವ್ರೇ ಒದ್ದು ಆಚೆಗೆ ಹಾಕಿದ್ರು. ಈಗ್ಲಾದ್ರೂ ಬರ್ತೀಯಲ್ಲಾ.

**ಹೆಂಗಸು 2:** ಆವತ್ತು ಬರಿಗೈಯಲ್ಲಿ ಬರಬೇಕಲ್ಲಾಂತ ಬರ್ಲಿಲ್ಲ. ಈಗ ನೋಡು *(ಹಣ ತೋರಿಸಿ)* ನಡಿ ನಡಿ.

**ರಂಗ:** ಬಾ. ಚೆನ್ನನ ಮನೆಗೆ ಹೋಗೋಣ. *(ಎಲ್ಲರೂ ಹೋಗುವರು. ರಾಜ ಒಬ್ಬನೇ ಉಳಿಯುವನು. ಸ್ವಲ್ಪ ಕಾಲಾನಂತರ ರಾಜಮಾತೆ ಬರುವಳು.)*

**ತಿಮ್ಮಾಜಮ್ಮಣ್ಣಿ:** ಮಗೂ! ಯಾಕೆ ಒಬ್ಬನೇ ಇದ್ದಿ. ಯಾರೂ ಕಾಣುವುದೇ ಇಲ್ಲ.

**ರಾಜಒಡೆಯ:** ಎಲ್ಲಾ ತಿಳಿದೂ ತಿಳಿಯದವಳ ಹಾಗೆ ಕೇಳ್ತೀಯಲ್ಲಮ್ಮಾ.

**ತಿಮ್ಮಾಜಮ್ಮಣ್ಣಿ:** ನಾಲ್ಕು ಬುದ್ಧಿಯ ಮಾತು ಹೇಳಿದರೆ ನೊಂದುಕೊಳ್ಳುವುದೇ?

**ರಾಜಒಡೆಯ:** ನನ್ನನ್ನು ನಂಬಿದವರು ಈ ದಿನ ಬೀದಿ ಪಾಲಾದ್ರಲ್ಲ. ಅದು ಸರೀನೇನಮ್ಮಾ?

**ತಿಮ್ಮಾಜಮ್ಮಣ್ಣಿ:** ಅವರ್‍ಯಾಕೆ ಬೀದಿ ಪಾಲಾಗ್ತಾರೆ. ಸುಮ್ಮನೆ ನಿನ್ನನ್ನು ಹೊಗಳಿ ಬದುಕುತ್ತಿದ್ದ ಜಿಗಣೆಗಳು ಅವು. ಅವರು ತೊಲಗಿದ್ದು ಸರಿಯೇ. ವಿಕ್ರಮರಾಯನ ವಿಚಾರ ಏನಾಯ್ತು?

**ರಾಜಒಡೆಯ:** ನಾಳೆ ಖಾಸಾ ಓಲಗವನ್ನು ಕರೆದಿದ್ದೇನೆ. ಅವನು ಲೆಕ್ಕ ಇಡಬೇಕೆಂದು ಹೇಳಿದ್ದೇನೆ.

**ತಿಮ್ಮಾಜಮ್ಮಣ್ಣಿ:** ಇಡದಿದ್ದರೆ...

**ರಾಜಒಡೆಯ:** *(ಗಲಿಬಿಲಿಗೊಂಡು)* ತಲೆ ಕಡಿಸುತ್ತೇನೆ.

**ತಿಮ್ಮಾಜಮ್ಮಣ್ಣಿ:** ಯಾರದು?

**ರಾಜಒಡೆಯ:** ಅಪರಾಧಿಯದು.

**ತಿಮ್ಮಾಜಮ್ಮಣ್ಣಿ:** ಅಪರಾಧಿ ಯಾರು?

**ರಾಜಒಡೆಯ:** ವಿಕ್ರಮರಾಯ.

**ತಿಮ್ಮಾಜಮ್ಮಣ್ಣಿ:** ಹಾಗೆಂದು ಹೇಗೆ ನಿರ್ಣಯಿಸ್ತಿ?

**ರಾಜಒಡೆಯ:** *(ಮತ್ತಷ್ಟು ಗಲಿಬಿಲಿಗೊಂಡು)* ನೀನನ್ನುವುದಾದರೂ ಏನು?

**ತಿಮ್ಮಾಜಮ್ಮಣ್ಣಿ:** ನೀನಿನ್ನೂ ಪಳಗಬೇಕು. ಅಪರಾಧದ ಹೊಣೆಯನ್ನು ಹೆಗಲಿಂದ ಹೆಗಲಿಗೆ ಬದಲಾಯಿಸೋದು ತೀರಾ ಸುಲಭ.

**ರಾಜಒಡೆಯ:** ಹಾಗಾದರೆ ವಿಕ್ರಮರಾಯ ಸಿಕ್ಕಿ ಬೀಳುವುದಿಲ್ಲ?

**ತಿಮ್ಮಾಜಮ್ಮಣ್ಣಿ:** ಅಷ್ಟೇ ಅಲ್ಲ. ಕೆಣಕಿ ಬಿಟ್ಟಿದ್ದೀ. ಇನ್ನವನ ಕಾರಾಸ್ಥಾನಗಳ ಬಗ್ಗೆ ಎಚ್ಚರಿಕೆಯಿಂದಿರಬೇಕು.

**ರಾಜಒಡೆಯ:** ಇದೆಲ್ಲಾ ಯಾಕೆ ಇಷ್ಟೊಂದು ಗೋಜಲು?

**ತಿಮ್ಮಾಜಮ್ಮಣ್ಣಿ:** ನೀನಿನ್ನು ತಿಳಿಯಾಗಿರ್ತೀಯಲ್ಲಾ. ಯೋಚಿಸು, ನಿನಗೇ ಗೊತ್ತಾಗುತ್ತೆ.

**ರಾಜಒಡೆಯ:** ಆದರೂ ಅರಮನೆಯನ್ನು ನಂಬಿದ್ದವರನ್ನು ಹೀಗೆ ಕೈ ಬಿಡಬಾರದಾಗಿತ್ತು.

**ತಿಮ್ಮಾಜಮ್ಮಣ್ಣಿ:** ನಿನಗಿನ್ನೂ ಹುಡುಗಾಟ ಬಿಟ್ಟಿಲ್ಲ. ಎಲ್ಲ ಕೈ ಮೀರಿದ ಮೇಲೆ ನಾವು ಬೀದಿ ಪಾಲಾಗ್ತೇವೆ.

**ರಾಜಒಡೆಯ:** ಅದು ಹೇಗೆ ಸಾಧ್ಯ? ಈ ಕಿರೀಟ, ಈ ಕತ್ತಿ ಯಾರು ಕಿತ್ಕೋತಾರೆ ನನ್ನಿಂದ?

**ತಿಮ್ಮಾಜಮ್ಮಣ್ಣಿ:** ಕಿತ್ಕೊಳ್ಳೋದೇ? ನೀನೇ 'ಒಪ್ಪಿಸ್ಕೊಳ್ಳಿ' ಅಂತ ಕೊಡಬೇಕಾಗುತ್ತೆ.

**ರಾಜಒಡೆಯ:** ಅಂದರೆ...

**ತಿಮ್ಮಾಜಮ್ಮಣ್ಣಿ:** ನಿನ್ನ ದೊಡ್ಡಪ್ಪ ಎರಡೇ ವರ್ಷ ರಾಜ್ಯ ಆಳಿ ನಿಮ್ಮ ತಂದೆಗೆ ರಾಜ್ಯ ಕೊಟ್ಟರು. ಅವರು ತಪಸ್ಸಿಗೆ ಹೋದರೂಂತ ತಿಳಿದಿದ್ದಾರೆ. ಆದರೆ ರಾಜ್ಯ ಕೊಡದಿದ್ದರೆ ಅವರು ಉಳಿಯೋದಿಕ್ಕೆ ಸಾಧ್ಯವಿರಲಿಲ್ಲ.

**ರಾಜಒಡೆಯ:** ನನಗೆ ಇದೆಲ್ಲಾ ತುಂಬ ಗೊಂದಲ ತರ್ತಿದೆ, ತಲೆ ಸುತ್ತುತ್ತಿದೆ. *(ಕೂರುವನು.)*

**ತಿಮ್ಮಾಜಮ್ಮಣ್ಣಿ:** ಮಗೂ...

## ದೃಶ್ಯ 4

*(ವಿಕ್ರಮರಾಯನ ಗುಪ್ತ ಸದಸ್ಸು. ಅವನ ಆಪ್ತರು ಒಬ್ಬೊಬ್ಬರಾಗಿ ಬಂದು ಗುಂಪುಗೂಡಿ ಮಾತನಾಡತೊಡಗುತ್ತಾರೆ.)*

**ಮಾರನಾಯಕ:** ಅಲ್ಲಾ, ಯಾಕಂತೆ?

**ವಿರೂಪಾಕ್ಷಪ್ಪ:** ನಾಳೆ ಲೆಕ್ಕ ತಂದಿಡಿ ಅಂದಿದಾರಲ್ಲ ಎಲ್ಲಿಂದ ತರ್ತಾರೆ. ನಮ್ಮ ತಲೆ ತೆಗಿಸ್ತಾರೆ. ನೀನೇ ಗತಿ ಅಂತ ಕಾಲಿಗೆ ಬಿದ್ದ. ಅಗೋ ದಳವಾಯಿಗಳು ಬಂದರು.

**ವಿಕ್ರಮರಾಯ:** ಎಲ್ಲರೂ ಬಂದಾಯ್ತು. *(ಒಬ್ಬ ಪಟ್ಟಿಯೊಡನೆ ಹೋಲಿಸ್ತಾನೆ. ಆಗ ಬೊಮ್ಮರಸ ಬರುತ್ತಾನೆ.)* ಯಾರು ಬಂದಿಲ್ಲ... ಚೆನ್ನಯ್ಯನಾ...ಇರಲಿ ಬನ್ನಿ *(ಎಲ್ಲರೂ ಕೂರುವರು.)*

**ವಿಕ್ರಮರಾಯ:** ಏನು ಪಂಡಿತರೆ, ಮಹಾರಾಜರ ಆರೋಗ್ಯ ಹೇಗಿದೆ?

**ಬೊಮ್ಮರಸ:** ಸಾಕಷ್ಟು ಕೆಟ್ಟಿದೆ. ಆದರೂ ಕೈ ಮೀರಿಲ್ಲ.

**ರಂಗರಾಯ:** ಅಂದ್ರೆ?

**ವಿಕ್ರಮರಾಯ:** ಅದಕ್ಕೆ ಬೇರೆ ಅರ್ಥ ಏನೂ ಬೇಕಿಲ್ಲ. ನಿಮ್ಮ ಕ್ಷೇತ್ರಗಳಲ್ಲಿ ಎಲ್ಲಾ ಸರಿಯಾಗಿದೆ ಅಂತ ಭಾವಿಸುತ್ತೇನೆ.

**ಶ್ರೀನಿವಾಸಶೆಟ್ಟಿ:** ಎಲ್ಲಾ ತಮ್ಮ ರಕ್ಷೆ. ಆದರೂ ಅಂತಃಪುರವನ್ನು ಮುಚ್ಚಿದ್ದರಿಂದ ನಮ್ಮ ಜವಳಿ ಸರಬರಾಯಿಗೆ ಕುಂದಾಗಬಹುದೂಂತ.

**ವಿಕ್ರಮರಾಯ:** ನಿಜ. ಆ ಬಗ್ಗೆ ಬೇರೆ ಏನಾದ್ರೂ ವ್ಯವಸ್ಥೆ ಮಾಡಬೇಕು.

**ರಂಗರಾಯ:** ಈಗ ನಾವು ಯಾಕೆ ಇಲ್ಲಿ ಸೇರಿರೋದು ದಳವಾಯಿಗಳೇ?

**ವಿಕ್ರಮರಾಯ:** ಅದನ್ನೇ ಹೇಳಬೇಕೂಂತಿದ್ದೆ. ಹಾಗೆ ನೋಡಿದ್ರೆ ಒಂದು ತರಹಾ ತುರ್ತಿನದು. ಇನ್ನೊಂದು ಕಡೆಯಿಂದ ನೋಡಿದ್ರೆ ಸಾಮಾನ್ಯ

ವಿಚಾರ ಅಂತಿಟ್ಕೊಳ್ಳಿ. ವಿಷಯ ಇಷ್ಟೆ. ನಮ್ಮ ರಾಜ್ಯದ ಸಿಂಹಾಸನಕ್ಕೆ ಬಂದಿರೋ ವಿಪತ್ತುಗಳನ್ನು ಹೇಗೆ ಬಗೆಹರಿಸೋದೂಂತ?

**ವಿರೂಪಾಕ್ಷಪ್ಪ:** ಅಂತದೇನು ವಿಪತ್ತುಗಳು ಬಂದಿರೋದು? ಹಣಕಾಸಿನ ಕೊರತೆಯಾದರೆ ಶ್ರೀನಿವಾಸ ಶೆಟ್ಟರಲ್ಲಿ ಸಾಲ ಪಡೆಯೋದು. ಏನು ಶೆಟ್ಟರೇ?

**ಶ್ರೀನಿವಾಸ ಶೆಟ್ಟಿ:** ನಂದೇನಿದೆ. ಎಲ್ಲಾ ದೇಶಕ್ಕೆ ಮುಡಿಪು.

**ವಿಕ್ರಮರಾಯ:** ಅದಲ್ಲಾ. ಈಗ ಮಹಾರಾಜರ ಆರೋಗ್ಯ ಕೆಟ್ಟಿರೋದು ನಮ್ಮೆಲ್ಲರನ್ನ ಯೋಚನೆಗೆ ತಳ್ಳಿದೆ. ಅಲ್ಲದೆ ಅವರು ರಾಜ್ಯದ ಹಣಕಾಸಿನ ವ್ಯವಹಾರದ ಬಗ್ಗೆ ಸರಿಯಾದ ವಿವರ ಕೇಳಿದ್ದಾರೆ. ಈ ವಿವರಗಳನ್ನು ಅವರು ಕರೆಯೋ ಓಲಗದಲ್ಲಿ ಒಪ್ಪಿಸಬೇಕೂಂತ ಆಜ್ಞೆ ಮಾಡಿದ್ದಾರೆ. ಈ ಸಂಗತೀನೇ ನಾವು ಇವತ್ತು ಚರ್ಚಿಸಬೇಕಾಗಿರೋದು.

**ರಂಗರಾಯ:** ಸುತ್ತಾ ಇರೋ ಶತ್ರುಗಳು ಕಾಲು ಕೆರೀತಿರೋ ವೇಳೆಯಲ್ಲಿ ಮಹಾರಾಜರ ಆರೋಗ್ಯ ತಪ್ಪಿರೋದು ನಿಜವಾಗಲೂ ಗಂಭೀರವಾದ ವಿಷಯ.

**ವಿಕ್ರಮರಾಯ:** ಅದಕ್ಕಿಂತಲೂ ಗಂಭೀರವಾದ ವಿಷಯ ಅಂದ್ರೆ ಲೆಕ್ಕ ಪತ್ರಗಳ ಪರಿಶೀಲನೆಗೆ ಖುದ್ದಾಗಿ ರಾಜರೇ ತೊಡಗಿರುವುದು. ಹಣಕಾಸಿನ ವ್ಯವಹಾರದಲ್ಲಿ ಆಗಿರೋ ಕಲಸು ಮೇಲೋಗರ ಈಗ ಹೊರಗೆ ಬಿದ್ದರೆ...ಏನಾಗುತ್ತೇಂತ...

**ಕೃಷ್ಣರಾಯ:** ಏನಾಗುತ್ತೆ...ತಲೆ ಹೋಗುತ್ತೆ.

**ವಿರೂಪಾಕ್ಷ:** ಯಾರ ತಲೆ? ನಂದೇ? ನಿಮ್ಮದೇ ಅಥವಾ ದಳವಾಯಿಗಳದೇ?

**ರಂಗರಾಯ:** ಚರ್ಚೆ ದಾರಿ ತಪ್ಪಿದೆ. ಈಗ ರಾಜರ ಅನಾರೋಗ್ಯದ ಪ್ರಶ್ನೆ ಮುಖ್ಯ.

**ಮಾರನಾಯಕ:** ಇಷ್ಟಕ್ಕೂ ಹಣಕಾಸಿನ ಅವ್ಯವಸ್ಥೆ ಎಲ್ಲಿ ಆಗಿದೆ? ರಾಜರ ಖಾಸಾ ಅಂತಃಪುರದ ಖರ್ಚು ಲೆಕ್ಕ ಹಾಕೋದು ಯಾರು? ಆ ಕಡೆ ಹರಿಯೋ ನೀರು ಇನ್ನೊಂದು ಕಡೆ ಹರಿದರೆ ಅದನ್ನು ವ್ಯರ್ಥ ಅಂತಾರೇನು?

**ಶ್ರೀನಿವಾಸ ಶೆಟ್ಟಿ:** ಜಾಣತನದ ಮಾತು ನಾಯಕರೆ. ನಾಳೆ ಜನರಿಗೆ ಏನಂತೀರಿ? ಅವರು ಒಪ್ತಾರಾ?

**ಮಾರನಾಯಕ:** ಜನರು? ಹಾಗಂದರೇನು? ಅವರನ್ನ ಮರುಳು ಮಾಡೋದು ಚಿಟಿಕೆ ಹೊಡಿಯೋ ಕೆಲ್ಸ. ನಾಲ್ಕು ಕೆರೆ ಕಟ್ಸಿಸಿ ಎರಡು ದೇವಸ್ಥಾನಕ್ಕೆ ಜೀರ್ಣೋದ್ಧಾರ ಮಾಡಿಸಿ ಅಲ್ಲಲ್ಲಿ ಹೊಗಳು ಭಟ್ಟರಿಗೆ ಉಂಬಳಿ ಬಿಡಿಸಿದರೆ ನಾಳೆ ದಳವಾಯಿ ವಿಕ್ರಮರಾಯರಂಥೋರು ಯಾರೂ ಇಲ್ಲಾಂತಾರೆ, ಪೂಜಿಸ್ತಾರೆ.

**ವಿಕ್ರಮರಾಯ:** ಅದು ಹಾಗಿರಲಿ. ಹಣಕಾಸಿನ ವ್ಯವಹಾರದಲ್ಲಿ ಆಗಿರೋ ಕೊರತೆಯದಲ್ಲಾ ಈ ಸಮಸ್ಯೆ. ನಾವು ಅಧಿಕಾರಕ್ಕೆ ಬಂದಾಗ ಈಗಿನ ರಾಜರಿಗೆ ಹದಿಮೂರು ವರ್ಷ, ಏಳು ವರ್ಷಗಳಿಂದ ಇವರನ್ನು ನೋಡಿದ್ದೇವೆ. ತಿದ್ದಿದ್ದೇವೆ. ಏನಂತೀರಿ ಬೊಮ್ಮರಸ ಪಂಡಿತರೇ?

**ಬೊಮ್ಮರಸ:** ಹೌದು. ನಿಯೋಗಿಯಾಗಿ ನಾನು ನಡೆಸಿದ ಕೈವಾಡ ಕಡಿಮೇನೇ? ಹರಿಯೋ ಹಣ ಮಹಾರಾಜರ ವಿಲಾಸಗಳ ಕಡೆಗೆ ಹರಿಯೋ ಹಾಗೆ ನೋಡಿಕೊಂಡು, ಆಗಾಗ ಬೇಕಾದ ಗುಳಿಗೆಗಳು, ಮತ್ತು ಬರಿಸೋ ಮದ್ದಿನ ಲೇಪನ...ನನಗೆ ಸಾಟಿಯಾಗಿ ಸೋಮಯಾಜಿಗಳು ಇದ್ದರಲ್ಲವೇ?

**ಸೋಮಯಾಜಿ:** ಅದೂ ಸರೀನೆ. ನಾನು ವಾತ್ಸಾಯನ, ಕಕ್ಕೋಕರನ್ನು ಬಿಟ್ಟು ಬೇರೆ ಏನಾದ್ರೂ ಹೇಳಿದ್ರೆ ರಂಗನಾಥನ ಆಣೆ. ಉಳಿದ ಎಲ್ಲಾ ಶಾಸ್ತ್ರಗಳು ಅವರಿಗೆ ಗಾವುದ ದೂರ.

**ವಿರೂಪಾಕ್ಷಪ್ಪ:** ಹೀಗೆ ತಯಾರಾದವರು ಇದ್ದಕ್ಕಿದ್ದಂತೆ ದಳವಾಯಿಗಳ ಎದುರು ನಿಲ್ಲುವುದೆಂದರೆ ಅದೂ ಸಾಧ್ಯವೇ ಅಂಥ...

**ಮಾರನಾಯಕ:** ಸರಿಯಾದ ಮಾತು ಹೇಳಿದಿರಿ. ಹೀಗೆ ಆದದ್ದು ಅವರ ಸ್ವಂತ ಆಲೋಚನೆಯಿಂದಲೋ ಅಥವಾ ಬೇರೆ ಯಾರಾದರೂ......

**ವಿಕ್ರಮರಾಯ:** ಅದು ನಮಗೆ ಈಗ ಮುಖ್ಯ ಅಲ್ಲ. ರಾಜರು ಜಾಗ್ರತರಾಗಿದ್ದಾರೆ. ನಮ್ಮ ತಾಳಕ್ಕೆ ತಕ್ಕಂತೆ ಕುಣೀತಿಲ್ಲ. ಇದರ ಪರಿಣಾಮ ಏನಾಗಬಹುದೂಂತ ನಮ್ಮ ಯೋಚನೆ.

**ವಿರೂಪಾಕ್ಷಪ್ಪ:** ಅದೂ ಗೊತ್ತಿರೋ ವಿಚಾರಾನೇ, ನಾವೆಲ್ಲ ಧೂಳಾಗಿ ಹೋಗುತ್ತೇವೆ. ಈಗ ಅವರ ಕಾಲು ನೆಕ್ಕುತ್ತಿರೋರು ನಮ್ಮ ಜಾಗದಲ್ಲಿರುತ್ತಾರೆ.

**ಬೊಮ್ಮರಸ:** ಹಾಗೆ ಆಗೋದನ್ನ ನಾವು ತಡಿಯಬೇಕಲ್ಲವೆ?

**ವಿರೂಪಾಕ್ಷಪ್ಪ:** ಏನು ಮಾಡಬಹುದೆನ್ನುತ್ತೀರಿ? (ವಿಕ್ರಮರಾಯನಿಗೆ)

ವಿಕ್ರಮರಾಯ: ಈಗಿನ ರಾಜರು ಮಾತು ಕೇಳೋ ಹಾಗೆ ಮಾಡ್ಬೇಕು.

ಮಾರನಾಯಕ: ಆದರೆ ಅವರು ಕೇಳ್ತಾ ಇಲ್ಲವಲ್ಲ.

ವಿರೂಪಾಕ್ಷಪ್ಪ: ಮಾತು ಕೇಳೋ ರಾಜರು ಇರಬೇಕು.

ಸೋಮಯಾಜಿ: ಎರಡೂ ಒಂದೇ ಅಲ್ಲವೇ? *(ಮೌನ.)*

ಕೃಷ್ಣರಾಯ: ಅಲ್ಲಾ ಅನ್ನೋದು ಗೊತ್ತಾಗ್ತಾ ಇದೆ...ಆದರೆ...

ವಿಕ್ರಮರಾಯ: ರಾಜರಿಗೆ ಆರೋಗ್ಯ ಇಲ್ಲ ಅನ್ನೋದನ್ನ ನಾವು...

ಮಾರನಾಯಕ: ಸರಿಯಾದ ಕಾಲಕ್ಕೆ ನೆನಪು ಮಾಡಿದಿರಿ...

ವಿರೂಪಾಕ್ಷಪ್ಪ: ಒಂದು ಮಾತು, ಹಿಂದಿನ ರಾಜರಿದ್ದಾಗ ನಿಮ್ಮಣ್ಣನವರ ಮಕ್ಕಳು ರಾಜರ ವಿಚಾರಕ್ಕೆ ಹೀಗೆ ಅಂದುಕೊಂಡು ಕೊನೆಗೆ ಗುಟ್ಟು ಬಯಲಾಗಿ ನೇಣಿಗೆ ಹೋದದ್ದು ನಾವು ಮರೀಬಾರ್ದು.

ವಿಕ್ರಮರಾಯ: ಅದರಲ್ಲಿ ಎರಡೂ ಕಡೆ ತಪ್ಪಿದ್ದವು. ಒಂದು-ನಮ್ಮ ಅಣ್ಣ ಬೆಟ್ಟದ ಅರಸು, ಅವರ ಮಕ್ಕಳು ಯೋಜನೆ ಹಾಕಿದ್ದಾಗ ಅದನ್ನು ಗುಟ್ಟಾಗಿ ಇಡಲಿಲ್ಲ. ಎರಡು-ದಳವಾಯಿ ಆಗಿದ್ರೂ ನಮ್ಮ ಅಣ್ಣ ಮಕ್ಕಲು. ಅದಕ್ಕೆ ತಕ್ಕಹಾಗೆ ಮಕ್ಕಳನ್ನು ಬಲಿಕೊಟ್ಟ-ಕಣ್ಣು ಕಳೆದುಕೊಂಡ.

ಬೊಮ್ಮರಸ: ಈ ಬಾರಿ ಹಾಗಾಗಬಾರದು.

ವಿರೂಪಾಕ್ಷಪ್ಪ: ಹಾಗಾಗೋದು ಸಾಧ್ಯವೇ ಇಲ್ಲ. ಇಷ್ಟಕ್ಕೂ ಸೈನ್ಯದ ಜುಟ್ಟನ್ನು ಕೈಯಲ್ಲಿ ಹಿಡಿದಿರುವವರು ನಮ್ಮ ದಳವಾಯಿಗಳು ತಾನೇ?

ಕೃಷ್ಣರಾಯ: ಆದರೂ ನನಗೇಕೋ ಭಯವಾಗುತ್ತೆ.

ವಿರೂಪಾಕ್ಷಪ್ಪ: ಕೃಷ್ಣರಾಯರು ಜವಳಿ ವ್ಯಾಪಾರದಲ್ಲಿ ನಿಪುಣರಾಗಿರುವಷ್ಟು ಅದನ್ನ ಉಳಿಸಿಕೊಳ್ಳುವುದರಲ್ಲಿ ಆಸಕ್ತಿ ಹೊಂದಿಲ್ಲ ಅಂತ ಕಾಣುತ್ತೆ.

ಕೃಷ್ಣರಾಯ: ಮನ್ನಿಸಬೇಕು, ತಮಗಿಂತ ಚುರುಕಾಗಿ ಯೋಚನೆ ಮಾಡೋಕೆ ನನಗೆ ಆಗೋಲ್ಲ.

ಮಾರನಾಯಕ: ಈ ಕೆಲಸ ನಡೆಯೋದು ಹೇಗೆ?

ವಿಕ್ರಮರಾಯ: ಅಂದಹಾಗೆ ಬೊಮ್ಮರಸರೇ-ಅರಮನೆಯಿಂದ ಇಷ್ಟರಲ್ಲೇ ಕರೆ ಬರುತ್ತೆ. ರಾಜರ ಆರೋಗ್ಯ ಪರೀಕ್ಷೆಗೆ ಅಲ್ಲಿಗೆ ಹೋಗಬೇಕಾಗುತ್ತೆ, ಅಲ್ಲವೇ ಪಂಡಿತರೆ?

ಬೊಮ್ಮರಸ: *(ತಲೆ ಹಾಕುವನು)* ಬೇರೆ ದಾರಿ ಇಲ್ಲವೆ?

ವಿಕ್ರಮರಾಯ: ಇದೆ. ಆದರೆ ಇದು ಸುಲಭ, ಅಲ್ಲದೆ ಬೇಗನೆ ಫಲ ಕೊಡುವ ದಾರಿ.

ಬೊಮ್ಮರಸ: ಆದರೂ ನನ್ನನ್ನು ಮಾತ್ರ ಇಕ್ಕಟ್ಟಿಗೆ ಸಿಕ್ಕಿಸುತ್ತಾ ಇದ್ದೀರಿ.

ವಿಕ್ರಮರಾಯ: ನೀವು ನಿಯೋಗಿಗಳು. ಹಣಕಾಸಿನ ಅವ್ಯವಸ್ಥೆಗೆ ನೇರವಾಗಿ ಗುರಿಯಾಗುವವರು ನೀವು ಅನ್ನೋದನ್ನ ಮರೆಯಬೇಡಿ.

ಬೊಮ್ಮರಸ: ಆ ತಪ್ಪಿನಿಂದ ಉಳಿದುಕೊಳ್ಳುವ ಮಾರ್ಗ ನಾನು ಹುಡುಕ ಬಲ್ಲೆ, ಆದರೆ ಈ ಹೊಣೆ ಹೊರಲಾರೆ. ಅಲ್ಲದೆ ಮಧ್ಯೆ ಸಿಕ್ಕಿ ಬಿದ್ದರೆ...

ವಿಕ್ರಮರಾಯ: ನಿಮ್ಮ ರಕ್ಷಣೆ ನಮ್ಮ ಮೇಲೆ.

ಬೊಮ್ಮರಸ: ಆಮೇಲೆ ನಿಮ್ಮ ರಕ್ಷಣೆ ಕೂಡಾ ನಮ್ಮ ಮೇಲೆ...

ವಿಕ್ರಮರಾಯ: ಆಯಿತು. ನಿಮ್ಮ ಷರತ್ತೇನು?

ಬೊಮ್ಮರಸ: ಎರಡು ಲಕ್ಷ ವರಹಗಳು.

ವಿಕ್ರಮರಾಯ: ಒಪ್ಪಿಗೆ. ಇದರಲ್ಲಿ ಸ್ವಲ್ಪವೂ ಅನುಮಾನ ಬರಬಾರದು. *(ಬೊಮ್ಮರಸ, ಮಾರನಾಯಕ ಹೋಗುವರು.)*

ವಿಕ್ರಮರಾಯ: ಮಾತು ಕೇಳದ ರಾಜನ ಕಥೆಯಾಯಿತು. ಇನ್ನು ಮಾತು ಕೇಳುವ ರಾಜನ್ನ ಎಲ್ಲಿ ಹುಡುಕೋದು?

ವಿರೂಪಾಕ್ಷಪ್ಪ: ಈಗ ಉತ್ತರಾಧಿಕಾರಿಯಾಗಿ ಅರಮನೆಯಲ್ಲಿರೋದು ಹತ್ತು ವರ್ಷದ ಹುಡುಗ ಮಾತ್ರ.

ಶ್ರೀನಿವಾಸ ಶೆಟ್ಟಿ: ಯಾಕೆ ಸುಮ್ಮನೆ ಅವರಿವರ್‍ನ ಹುಡುಕೋದು. ದಳವಾಯಿಗಳೇ ಅಲ್ಲಿ ಕುಳಿತರೆ ಹೇಗೆ? ಅವರ ಮಾತನ್ನ ಮೀರೋರು ಯಾರು ಇರುತ್ತಾರೆ?

ಕೃಷ್ಣರಾಯ: ಇದು ನಿಜವಾದ ಮಾತು, ಅಲ್ಲವೇ?

ವಿಕ್ರಮರಾಯ: ನಿಮ್ಮ ಬುದ್ಧಿಯ ಚುರುಕು ಅಷ್ಟೇ. ನಮಗೆ ಗೊಂಬೆಗಳನ್ನ ದಾರ ಕಟ್ಟಿ ಆಡಿಸೋದು ಬೇಕು. ನಾವೇ ಬೊಂಬೆ ಆಗೋದು ಬೇಡ.

ವಿರೂಪಾಕ್ಷ: ನಿಮ್ಮನ್ಯಾರು ಕಟ್ಟಿ ಆಳೋರು?

**ವಿಕ್ರಮರಾಯ:** ಯಾಕೆ? ನೀವೇ ಇದೀರಲ್ಲ; ನಿಮ್ಮಲ್ಲಿ ಒಬ್ಬೊಬ್ಬರಲ್ಲೂ ಒಬ್ಬೊಬ್ಬ ವಿಕ್ರಮರಾಯ ಹುಟ್ಟಿಕೋತಾನೆ. ಮಹಾರಾಜ ಅನ್ನೋದು ನಮ್ಮ ಆಟಕ್ಕೆ ಇರೋ ತೆರೆ. ಇಲ್ಲಿ ನಡೆಯೋದು ಅವನ ಮರೆಯಲ್ಲಿ. ನಾವು ಅವನ ಹೆಸರಿನಲ್ಲಿ ಬೆಳೀತೀವಿ. ಅದು ಬಿಟ್ಟು ಇನ್ಯಾರದೋ ತಪ್ಪನ್ನ ತನ್ನ ಮೇಲೆ ಹಾಕಿಕೊಳ್ಳೋ ರಾಜ ನಾನಾಗಬೇಕೇ?

**ಕೃಷ್ಣರಾಯ:** ಇಷ್ಟು ಹೊಳೆಯೋದು ಸಾಧ್ಯವಿದ್ದರೆ ನಿಮ್ಮ ಜಾಗದಲ್ಲಿ ಇರತಿದ್ವು

**ವಿರೂಪಾಕ್ಷಪ್ಪ:** ಸಮಸ್ಯೆ ಬಗೆ ಹರೀಲಿಲ್ಲ, ನಮ್ಮ ಮಾತು ಕೇಳೋಕೆ ಈಗ ಯಾರು ಕಾಯ್ತಾ ಕೂತಿರೋದು?

**ವಿಕ್ರಮರಾಯ:** ನಮ್ಮ ವಂಶಾವಳಿ ನಿಮಗೆ ಗೊತ್ತಲ್ಲ. ನಮ್ಮ ತಂದೆಯವರಿಗೆ, ಬೆಟ್ಟದ ಚಾಮರಾಜ ಒಡೆಯರಿಗೆ ಸದ್ಯ ಒಬ್ಬ ಮಗ ಇದ್ದಾನೆ. ಅವರ ಅರವತ್ತೈದನೇ ವಯಸ್ಸಿನಲ್ಲಿ ಹುಟ್ಟಿದ ಮಗ.

**ರಂಗರಾಯ:** ಯಾರು ನರಸರಾಜನೆ?

**ವಿಕ್ರಮರಾಯ:** ಅಲ್ಲ...ರಣಧೀರ ಕಂಠೀರವ ನರಸರಾಜ.

**ವಿರೂಪಾಕ್ಷಪ್ಪ:** ಯಾವ ಯುದ್ಧವನ್ನೂ ಮಾಡದೆ ಇರೋನು ಯಾವ ರಣಧೀರ? ಈ ಬಿರುದುಗಳು ಎಲ್ಲಿಂದ ಬಂದವು?

**ವಿಕ್ರಮರಾಯ:** ಜನರಿಗೆ ತಮ್ಮ ರಾಜ ಶೂರನೆಂಬ ಮಾತು ಹೆಮ್ಮೆ ತರುವುದಿಲ್ಲವೆ?

**ವಿರೂಪಾಕ್ಷಪ್ಪ:** ಆತನ ಬಗ್ಗೆ ಕಥೆಗಳನ್ನು ಕೇಳಿದ್ದೇನೆ. ಆತ ಯಾರ ಮಾತನ್ನೂ ಕೇಳದ ಬಲಶಾಲಿ ಅನ್ನೋದು ಗಾಳಿ ವರ್ತಮಾನ.

**ವಿಕ್ರಮರಾಯ:** ಅದೂ ಒಳ್ಳೇಯದೇ, ಬಿರುದುಗಳನ್ನು ಸಮರ್ಥಿಸುವ ಕಥೆಗಳು ಗಾಳಿಯಲ್ಲಿ ತೇಲಾಡಿದರೆ ಜನರಿಗೆ ಮತ್ತು ಹೆಚ್ಚಾಗುತ್ತದೆ.

**ಮಾರನಾಯಕ:** ನಿಮ್ಮ ಜಾಣ್ಮೆಗೆ ಸಾಟಿಯಿಲ್ಲ!

**ವಿಕ್ರಮರಾಯ:** ಹೊಗಳು ಭಟ್ಟರನ್ನು ನಾವು ಸಂಬಳ ಕೊಟ್ಟು ನೇಮಿಸಿಕೊಂಡಿದ್ದೇವೆ; ನರಸರಾಜನನ್ನು ತರುವುದು ನಿಮಗೆ ಒಪ್ಪಿಗೆಯಾ?

**ಕೃಷ್ಣರಾಯ:** ಈಗೇನೋ ಸರಿ.

**ವಿರೂಪಾಕ್ಷಪ್ಪ:** ಆದರೆ ಅಧಿಕಾರಕ್ಕೆ ಬಂದಮೇಲೆ ಅವನನ್ನ ದಾರಿ ತಪ್ಪಿಸೋದು ಹೇಗೆ? ಅವನಿಗೊಂದು ಅಂತಃಪುರ ಕಟ್ಟಬೇಕೆ?

**ಮಾರನಾಯಕ:** ಅಂತಃಪುರವಲ್ಲ-ಮಲ್ಲಶಾಲೆ.

ವಿಕ್ರಮರಾಯ: ಸರಿಯಾಗಿ ಹೇಳಿದಿರಿ. ಅವನನ್ನು ಯಾವಾಗಲೂ ಗಂಟಿನಲ್ಲಿ ಇಡೋಕೆ ಅದೇ ಸರಿಯಾದ ಅಸ್ತ್ರ. ದೂರದೂರದಿಂದ ಜಟ್ಟಿಗಳನ್ನು ಕರೆಸಿ ಕುಸ್ತಿಗಳನ್ನು ಏರ್ಪಡಿಸೋ ಜವಾಬ್ದಾರಿ ನಿಯೋಗಿಗಳಿಗೂ, ತುಂಗರಾಯರಿಗೂ ಸೇರಿದ್ದು. ಇದಕ್ಕೆ ಅವನು ಜಗ್ಗದಿದ್ದರೆ ಬೇರೊಂದು.

ವಿರೂಪಾಕ್ಷಪ್ಪ: ಈಗ ನಾವು ಕರೆದರೆ ಆತನು ಬರಬೇಕಲ್ಲ.

ವಿಕ್ರಮರಾಯ: ಅವನಿಗೆ ರಾಜನಾಗುವ ಆಸೆಯಿದೆ, ಅಲ್ಲದೆ ಅವಕಾಶಗಳನ್ನು ಹುಟ್ಟು ಹಾಕೋನು ನಾನೇ ಎಂಬ ನಂಬಿಕೆಯೂ ಅವನಲ್ಲಿದೆ.

ರಂಗರಾಯ: ರಾಜ್ಯಕ್ಕೆ ಉತ್ತರಾಧಿಕಾರಿಯನ್ನು ಆಯುವ ಹೊಣೆ ಇಷ್ಟಕ್ಕೂ ನಮ್ಮದಲ್ಲವಲ್ಲ?

ವಿಕ್ರಮರಾಯ: ಹೊಣೆ ಇರುವವರೆಗೆ ನರಸರಾಜನನ್ನು ಬಿಟ್ಟರೆ ಗತಿ ಇಲ್ಲ. ನೀವಿನ್ನು ಹೊರಡಿ.

ತುಂಗರಾಯ: ಇಲ್ಲಿ ಎಲ್ಲಾ ಮುಗಿಯಿತಲ್ಲಾ?

ವಿರೂಪಾಕ್ಷಪ್ಪ: ಇನ್ನೊಂದು ಬಾರಿ ಎಚ್ಚರಿಕೆಯ ಮಾತು, ಗುಟ್ಟು ರಟ್ಟಾದರೆ ಹಿಂದೆ ಆದದ್ದು ಮತ್ತೊಮ್ಮೆ ಆಗುವುದು ಖಂಡಿತ.

ವಿಕ್ರಮರಾಯ: ಆಯಿತು ನೀವಿನ್ನು ಹೊರಡಿರಿ. ಅರಮನೆಯಿಂದ ಯಾವ ವೇಳೆಯಲ್ಲಾದರೂ ಕರೆ ಬರಬಹುದು. ಅಳಗರಾಜಯ್ಯ, ಪಂಡಿತರು ಅರಮನೆಗೆ ಕಾಲಿಟ್ಟ ಮೇಲೆ ಪ್ರತಿಕ್ಷಣವೂ ಆಗುವುದನ್ನು ನೀವು ವರದಿ ಮಾಡಬೇಕು.

ವಿರೂಪಾಕ್ಷಪ್ಪ: ಪಂಡಿತರ ಎರಡು ಲಕ್ಷ ವರಹಗಳ ವ್ಯವಸ್ಥೆ ಆಗಬೇಕಲ್ಲ?

ವಿಕ್ರಮರಾಯ: ಶೆಟ್ಟರಿದ್ದಾರಲ್ಲ!

ಶ್ರೀನಿವಾಸ ಶೆಟ್ಟಿ: ಒಮ್ಮೆಗೆ ಅಷ್ಟೊಂದು ಹಣಾ...

ವಿಕ್ರಮರಾಯ: ಸಾಲಾಂತ ಕೊಡಿ.

ಶ್ರೀನಿವಾಸಶೆಟ್ಟಿ: ಆದರೂ...

ವಿಕ್ರಮರಾಯ: ನಿಮ್ಮ ಮುತ್ತು ರತ್ನಗಳ ಹೊರೆಗಳು ಬಿಜಾಪುರದ ಕಡೆಯಿಂದ ಬರಬೇಕಲ್ಲವೆ? ನೋಡಿ. ಕೋಟ್ಯಾಂತರ ವರಹದ ಮಾಲು ಅದು.

ಶ್ರೀನಿವಾಸಶೆಟ್ಟಿ: ಆಯಿತು, ಅಪ್ಪಣೆ ಕೊಟ್ಟರೆ ಹೊರಡುವೆ. *(ಹೋಗುವನು.)*

ವಿಕ್ರಮರಾಯ: ಆಯಿತು. ತುಂಗರಾಯರೇ, ಶೆಟ್ಟರು ಭಯಗೊಂಡು ಬೇರೇನೋ ಎಡಬಿಡಂಗಿ ಕೆಲಸ ಮಾಡಿಯಾರು; ನೋಡಿಕೊಳ್ಳಿ.

ವಿರೂಪಾಕ್ಷಪ್ಪ: ನಿಮ್ಮ ನಿರೂಪವನ್ನು ಅಲಕ್ಷಿಸಿದ್ದಾರಲ್ಲ ಅವರ ವಿಷಯ?

ವಿಕ್ರಮರಾಯ: ಹೌದು, ರಂಗಪ್ಪ. ಅದು ನಿಮಗೆ ಸೇರಿದ ವಿಷಯ. ಮುಂದೆ ನಡೆಯೋದನ್ನ ಎಲ್ಲರೂ ಎಚ್ಚರಿಕೆಯಿಂದ ಗಮನಿಸಬೇಕು.

## ದೃಶ್ಯ 5

*(ರಾಜ ಮಲಗಿದ್ದಾನೆ. ರಾಜಮಾತೆಯ ಉದ್ವಿಗ್ನತೆ. ಬೊಮ್ಮರಸನ ಪ್ರವೇಶ.)*

**ಬೊಮ್ಮರಸ:** ಶರಣು ತಾಯಿ.

**ತಿಮ್ಮಾಜಮ್ಮಣ್ಣಿ:** ಯಾಕೆ ತಡ ಮಾಡಿದಿರಿ ಪಂಡಿತರೆ; ರಾಜರೆಂದರೆ ಲೆಕ್ಕವೇ ಇಲ್ಲವಾಯಿತಲ್ಲ!

**ಬೊಮ್ಮರಸ:** ಅಯ್ಯೋ! ಹಾಗೆಂದವರುಂಟೇ ತಾಯಿ! ಮಾತು ಕೇಳಿದ ಕೂಡಲೇ ಓಡಿ ಬಂದಿದ್ದೇನೆ? ಪುಟ್ಟಸ್ವಾಮಿಗೆ ಏನಾದರೂ ಅದು ನನಗೆ ಆದಂತಲ್ಲವೆ?

**ತಿಮ್ಮಾಜಮ್ಮಣ್ಣಿ:** ಮಾತು ಸಾಕು! ಈಗ ಅವರನ್ನು ನೋಡಿ.

**ೊಮ್ಮರಸ:** (ಪರೀಕ್ಷಿಸುವನು)

**ತಿಮ್ಮಾಜಮ್ಮಣ್ಣಿ:** ಏನಾಗಿದೆ ಪಂಡಿತರೇ?

**ೊಮ್ಮರಸ:** ಏನಿಲ್ಲ ತಾಯಿ, ಇವರಿಗೆ ಗುಂಡಿಗೆ ಬಲಹೀನ. ಎಂದಿನ ತೊಂದರೆ. ಕೊಂಚ ಬಿರುಸಾಗಿ ನಡೆದುಕೊಂಡರೂ...ಒಂದು ಮಾತು ಹೇಳಬೇಕಿತ್ತು ತಾಯಿ.

**ಮ್ಮಾಜಮ್ಮಣ್ಣಿ:** ಅದಾಯಿತಲ್ಲ. ರಾಜ್ಯ ಆಳುವ ಹುಡುಗ ಪಲ್ಲಂಗದ ಮೇಲೆ ಕುಡಿದ ನೀರಲುಗದೆ ಕುಳಿತರೆ ನಡೆಯುವುದೇ? ಈಗ ಅವರನ್ನು ಸರಿಮಾಡೋದು ನೋಡಿ.

**ೊಮ್ಮರಸ:** ಅಪ್ಪಣೆ ತಾಯಿ *(ಔಷಧಿ ಸಿದ್ಧ ಪಡಿಸುವನು)* ತಾಯಿ...ರಾಜರು ಆಯಾಸ ಮಾಡಿಕೊಳ್ಳದ ಹಾಗೆ ನೋಡಿಕೊಳ್ಳಬೇಕಿತ್ತು... ಹೊಣೆಗಾರನಾಗಿ ಮಾಡಿದರೆ ಏನಾಯ್ತು?

ತಿಮ್ಮಾಜಮ್ಮಣ್ಣಿ: ಯಾಕೆ ಬೇಡದ್ದು ಬಾಯ್ಬಿಡುತ್ತೀರಿ? ಮೊದಲು ಅವರ ಸರಿಯಾಗಲಿ, ಆಮೇಲೆ ನೀವು ಹೇಳುವ ಮಾತು ಲೆಕ್ಕಕ ತೆಗೆದುಕೊಳ್ಳೋಣ.

ಬೊಮ್ಮರಸ: ವೈದ್ಯನಾಗಿ ನನ್ನ ಕೆಲಸ ನಾನು ಮಾಡಬೇಡವೇ?

ತಿಮ್ಮಾಜಮ್ಮಣ್ಣಿ: ನಿಯೋಗಿಯಾಗಿ ಮಾಡಿದ ಕೆಲಸ ಸಾಲದು ಅಂತಲೋ?

ಬೊಮ್ಮರಸ: ಆಗದವರ ಮಾತು ಕೇಳಿ ಮನಸ್ಸು ಯಾಕೆ ಕೆಡ್ಸಿಕೋಬೇಕು ತಾಯಿ? ಆಳಿದ ರಾಜರ ಕಾಲದಿಂದಲೂ ಊಳಿಗದಲ್ಲಿರೋ ನಂಬಿಗಸ್ಥ ನಾನು.

ತಿಮ್ಮಾಜಮ್ಮಣ್ಣಿ: ಅವರ ತಾಯಿಯ ಕೃಪೆ ನಿಮಗಿತ್ತು ಎಂಬುದು ನಮಗೂ ಗೊತ್ತು

ಬೊಮ್ಮರಸ: ತೀರಿಕೊಂಡವರ ಬಗ್ಗೆ ಸಲ್ಲದ ಮಾತು ಯಾಕೆ? ಅವರು ನಿಮ ಸೊಸೆ...ಮಗಳ ಸಮಾನ. ಇರಲಿ ತೊಗೊಳಿ.

ತಿಮ್ಮಾಜಮ್ಮಣ್ಣಿ: ನೀವೇ ಕುಡಿಸಬಾರದೇ? ಇದೇನು ಹೊಸ ಬಗೆ?

ಬೊಮ್ಮರಸ: ನಮ್ಮ ಮೇಲೆ ಅವರಿಗೆ ಕೋಪ, ನಾನು ಕೊಡುವ ಔಷಧಿ ಅವರಿಗೆ ರುಚಿಸದೇ ಹೋಗಬಹುದು. ನೀವು ಎಷ್ಟಾದರೂ ತಾಯಿ

ತಿಮ್ಮಾಜಮ್ಮಣ್ಣಿ: ಆಯ್ತು ಕೊಡಿ. (ರಾಜ ಸಾಯುತ್ತಾನೆ. ವಿಕ್ರಮರಾಯ ಕಹಳೆಯೊಡನೆ ಬರುತ್ತಾನೆ.)

ವಿಕ್ರಮರಾಯ: ಪುಟ್ಟಸ್ವಾಮಿಗೆ ಹೇಗಿದೆ? ಅವರ ಆರೋಗ್ಯಕ್ಕೆ ರಂಗನಾಥನನು ಬೇಡಿ ಬರುತ್ತಿದ್ದೇನೆ. (ಮೌನ.)

ಛೇ! ಎಂತಹ ಅನಾಹುತವಾಯ್ತು! ಎಲ್ಲಾ ಸರಿಹೋಯ್ತು ಎನ್ನು ಹೊತ್ತಿಗೆ ರಾಜ್ಯಕ್ಕೆ ಮತ್ತೆ ವಿಪತ್ತು; ಏನು ಪಂಡಿತರೇ ನಮ ರಾಜರನ್ನ ಉಳಿಸಿಕೊಡಲಾಗದೆ ಹೋದಿರಲ್ಲಾ!

ಬೊಮ್ಮರಸ: ಎಲ್ಲಾ ನಮ್ಮ ಕೈ ಮೀರಿದ್ದು ದಳವಾಯಿಗಳೇ; ನಾವು ಅವ ಆಟದ ಬೊಂಬೆಗಳು.

ವಿಕ್ರಮರಾಯ: ಅದೂ ಸರಿಯೆನ್ನಿ...ನಿಮ್ಮಂಥ ಚತುರ ವೈದ್ಯರ ಕೈಯೂ ಕಟ್ಟಿತೆಂದ ಯಾರನ್ನು ಹಳಿದರೆ ಏನು ಪ್ರಯೋಜನ? ಸುಖವಾಗಿರುವುದ ಆ ರಂಗನಾಥನಿಗೆ ಹಿಡಿಸಲಿಲ್ಲ. ತಾಯಿಯವರು ಈ ಎದೆಗುಂದಬಾರದು. (ಮೌನ.)

ಬೊಮ್ಮರಸ: ಮುಂದಿನ ಸಿದ್ಧತೆಗಳು ನಡೆಯಬೇಕಾಗಿದೆ.

**ವಿಕ್ರಮರಾಯ:** ಹೌದು. ರಾಜ್ಯ ರಾಜನಿಲ್ಲದೆ ಬಹಳ ಹೊತ್ತು ಇರಬಾರದು, ಶತ್ರುಗಳ ಕುಟಿಲ ಜಾಲದ ಹರವು ನಮ್ಮ ಊಹೆಗೆ ಮೀರಿದ್ದು. ಬೇಗನೆ ಉತ್ತರಾಧಿಕಾರಿಯನ್ನು ಆಯುವ ಕೆಲಸ ಆಗಬೇಕು. ಅದಕ್ಕೆ ತಾವು ಸಹಕರಿಸಬೇಕು ಬೊಮ್ಮರಸರೇ, ಅವಸರದ ಸಭೆಯೊಂದನ್ನು ಸೇರಿಸಿ.

**ತಿಮ್ಮಾಜಮ್ಮಣ್ಣಿ:** ಅದಕ್ಕೂ ಮೊದಲು ಮತ್ತೊಂದು ವಿಷಯ ನಿಶ್ಚಯವಾಗಬೇಕಾಗಿದೆ.

**ವಿಕ್ರಮರಾಯ:** ಅಂಥದ್ದೇನು? ಅವಸರವೇ?

**ತಿಮ್ಮಾಜಮ್ಮಣ್ಣಿ:** ಮಹಾರಾಜರು ಸತ್ತದ್ದು ನಿಜವೇ ಅನ್ನೋದು ಗೊತ್ತಾಗಬೇಕು.

**ವಿಕ್ರಮರಾಯ:** ನಿಮಗೆ ಮಗನ ಮೇಲಿರುವ ಪ್ರಿತಿಯ ಆಳ ನಮಗೆ ತಿಳಿದಿದೆ ತಾಯಿ.

**ತಿಮ್ಮಾಜಮ್ಮಣ್ಣಿ:** ಅದನು ತಿಳಿದಿದ್ದೇ ಆದರೆ ಈ ಮಾತು ಈಗಲೇ ನಿಶ್ಚಯವಾಗಬೇಕು.

**ಬೊಮ್ಮರಸ:** ನಾಡಿ ನಿಂತದ್ದನ್ನ ನಾನೇ...

**ತಿಮ್ಮಾಜಮ್ಮಣ್ಣಿ:** ನಿಂತದ್ದಲ್ಲ ಪಂಡಿತರೇ...

**ವಿಕ್ರಮರಾಯ:** ನೀವನ್ನುವುದಾದರೂ ಏನು?

**ತಿಮ್ಮಾಜಮ್ಮಣ್ಣಿ:** ಪಂಡಿತರು ವಿವರಿಸಲಿ.

**ವಿಕ್ರಮರಾಯ:** ಆಗುವುದನ್ನು ಬದಲಿಸಲು ಸಾಧ್ಯವೇ?

**ತಿಮ್ಮಾಜಮ್ಮಣ್ಣಿ:** ಜಾಣತನದ ಮಾತನಾಡಬೇಡಿ ದಳವಾಯಿಗಳೇ.

**ವಿಕ್ರಮರಾಯ:** ಆಯಿತು, ಈಗ ನೀವು ಕೇಳಬೇಕಾದ್ದು ಏನು?

**ತಿಮ್ಮಾಜಮ್ಮಣ್ಣಿ:** ಮತ್ತೆ ಅದೇ; ಇಲ್ಲಿ ಮಲಗಿದ ರಾಜರು ಸತ್ತದ್ದು ನಿಜವೇ?

**ವಿಕ್ರಮರಾಯ:** ಅದಕ್ಕೆ ಕಾರಣರಾದ ತಾವು ಆ ಪ್ರಶ್ನೆಗೆ ಉತ್ತರ ಕೊಡಬೇಕು.

**ತಿಮ್ಮಾಜಮ್ಮಣ್ಣಿ:** ಏನಂದಿರಿ?

**ವಿಕ್ರಮರಾಯ:** ಸತ್ಯ ಹಾಗೆ ತಾಯಿ. ನೀವು ನಿಮ್ಮ ಮಗನನ್ನ ಮುಂದಿರಿಸಿಕೊಂಡು ಹೋರಾಡಲು ಹೊರಟಿರಿ. ಅವನು ಹಾಲು ಗಲ್ಲದ ಹುಡುಗ; ದುರ್ಬಲ. ನೀವು ನಡೆಸಿದ ಹೋರಾಟದಲ್ಲಿ ನಿಮ್ಮ ಮಗ ಬಲಿಯಾದ.

ತಿಮ್ಮಾಜಮ್ಮಣ್ಣಿ: ಹೊಣೆ ಬದಲಿಸುವ ಯತ್ನ ನಡೆಸುತ್ತೀರಲ್ಲವೆ?

ವಿಕ್ರಮರಾಯ: ಇದು ನ್ಯಾಯದ ಆಟ ಅಲ್ಲ ಅನ್ನೋದು ನಿಮಗೂ ಗೊತ್ತು. ತಪ್ಪು ನಡೆಗೆ ಬಲಿ ಕೊಡಲೇ ಬೇಕು. ಆದರೆ ಆಟ ಅಲ್ಲಿಗೆ ಮುಗಿದಂತೆ ಅಲ್ಲವಲ್ಲ. ಬರ್ತೀನಿ ತಾಯಿ.

ತಿಮ್ಮಾಜಮ್ಮಣಿ: *(ಸೋಲಿನ ಚಿಹ್ನೆ)*

## ದೃಶ್ಯ 6

*(ಗರಡಿ ಮನೆ. ವಿವಿಧ ಆಯುಧಗಳ ಅಭ್ಯಾಸದಲ್ಲಿ ತೊಡಗಿರುವ ಜನರಿದ್ದಾರೆ.)*

**ನಿರೀಶ:** *(ಕತ್ತಿ ವರಸೆಯವರಿಗೆ)* ಹಾಗಲ್ಲ. ನೀವಿನ್ನೂ ಪಟ್ಟುಗಳನ್ನು ಅಭ್ಯಾಸ ಮಾಡೋರ ಥರ ಇದ್ದೀರಿ, ಬರೀ ರಕ್ಷಣೆ ಮಾಡಿಕೊಳ್ಳೋದೇ ಅಲ್ಲ.

**ಸಕ್ಕ:** ಇನ್ನೇನು? ಬಸವನ್ನ ಕೊಂದು ಬಿಡು ಅಂತೀಯಾ?

**ಬಸವ:** ಓ! ತಾನೇ ಕೊಲ್ಲೋನು ಅನ್ನೋ ಹಾಗೆ!

**ಸಕ್ಕ:** ಬಿಡತಾರೆ ಮತ್ತೆ!

**ಬಸವ:** ಮುಖ ನೋಡಿಕೋ!

**ನಿರೀಶ:** ಕಾಲ ಬಂದರೆ ಬಸವ ಸಕ್ಕನ್ನ ಕೊಲ್ಲಬೇಕು, ಸಕ್ಕ ಬಸವನ್ನ ಕೊಲ್ಲಬೇಕು. *(ರಣಧೀರ ಬರುತ್ತಾನೆ.)*

**ರಣಧೀರ:** ಏನದು ನಿರೀಶ! ಕೊಲ್ಲೋ ಮಾತು ಬರುತ್ತಿದೆ?

**ನಿರೀಶ:** ಕೊಲ್ಲೋದಲ್ಲ ಗೆಲ್ಲೋದು.

**ಬಸವ:** ಸುಮ್ಮನಿರ್ರೋ. ನರಸ. ಏನು ಸುದ್ದಿ ಮೈಸೂರು ಕಡೆಯಿಂದ?

**ರಣಧೀರ:** ಎಂಥ ಸುದ್ದಿ! ಅದೇ ಅಂತಃಪುರ, ಅದೇ ಶೂಲ, ಅದೇ ಪಾಳೇಗಾರ!

**ನಿರೀಶ:** ರಾಜ್ಯ ಅಂದ ಮೇಲೆ ಇವೆಲ್ಲಾ ನಿತ್ಯದ ಮಾತು, ಸುದ್ದಿಯಲ್ಲ. ಹೊಸ ಮಾತಿಲ್ವಾ?

**ರಣಧೀರ:** ಮಾತಿನ ಮಾತು ಹಾಗಿರಲಿ. ನಮ್ಮ ದಳದ ತರಬೇತಿ ಎಲ್ಲಿಗೆ ಬಂತು?

**ನಿರೀಶ:** ಅದರ ಮಾತು ಬಿಡು. ಕತ್ತಿ ಕಾಳಗದ ಮಾತು ಬಂದ್ರೆ ಬಸವ ಸಕ್ಕರಿಗೆ ಸೈ ಎನ್ನುವ ಧೀರರಿಲ್ಲ; ಅವರ ಕೈ ಆಸರೆಗೆ ಸಾಕಷ್ಟು ಜನ ಇದಾರೆ. ಮಲ್ಲನಿಗೆ ಕುದುರೆ ಮೇಲೇರಿ ಹೋರಾಡೋದನ್ನ

ತರಬೇತಿ ಕೊಟ್ಟಿದ್ದೇನೆ. ಅವನು ಕೋಟೆ ಕಡೆಗೆ ಹೋಗಿದ್ದಾನೆ. ಠಾಣೆಯವರ ಕಣ್ಣು ತಪ್ಪಿಸಿ ಊರು ಲೂಟಿ ಹೊಡೆಯೋದು ಬಲು ಕಷ್ಟ. ಈ ಸಲ ಏನಾದ್ರೂ ಗಳಿಕೆ ಹೆಚ್ಚಿದ್ರೆ ಮತ್ತಷ್ಟು ಆಯುಧಗಳನ್ನು ಕೊಳ್ಳಬಹುದು.

ಸಕ್ಕ: ದಿನವೂ ಬರೀ ಗೊಂಬೆ ಯುದ್ಧ ಮಾಡಿ ಕೈ ಬೇಸತ್ತಿದೆ. ಯಾವಾಗ ಯುದ್ಧ? ಯಾರ ಮೇಲೆ?

ರಣಧೀರ: ಯಾರ ಮೇಲೆ? ಯಾರ ಮೇಲೂ ಇಲ್ಲ. ರಕ್ಷಣೆಗೇಂತ ನೂರು ಬಾರಿಯಾದರೂ ಹೇಳಿಲ್ವಾ? ಮತ್ತೆ ನಿನಗದೇ ಗುಮಾನಿ.

ನಿರೀಶ: ಹಾಗಲ್ಲ ನರಸ, ನಿನಗೆ ಅಧಿಕಾರ ತಪ್ಪಿ ಎಷ್ಟು ವರ್ಷ ಆಯ್ತು? ದಳವಾಯಿ ಮೈಸೂರಿಗೆ ಹೋಗಿ ಏಳು ವರ್ಷ ಆಯ್ತು. ಇದು ಸಕ್ಕನಿಗೆ ಗುಮಾನಿ ತರೋದು ತಪ್ಪಲ್ಲ.

ರಣಧೀರ: ಕಾಲಕ್ಕೆ ನಾವು ಕಾಯ್ಬೇಕು ನಿರೀಶ. ಅದು ನಮಗೆ ತಕ್ಕಂತೆ ಇರದು. ಅಲ್ಲಿ ಯಾವಾಗ ಏನಾಗುತ್ತೆ ಹೇಳಲಿಕ್ಕೆ ಬಾರದು. ರಾಜ ಕೈಲಾಗದವನು.

ನಿರೀಶ: ಮಾತಿಗೆ ಹೇಳ್ತೇನೆ, ನೀನು ನಿನ್ನ ಚಿಕ್ಕ ತಾಯಿಗೆ ಆಗಾಗ ಪತ್ರ ಬರೆದು ಅವರಲ್ಲಿ ನಿನಗೆ ಭಕ್ತಿ ಗೌರವ ಇದೆ ಅಂತ ಸೂಚಿಸೋದು ಒಳ್ಳೆಯದು.

ರಣಧೀರ: ಅದನ್ನ ಲಾಗಾಯ್ತಿನಿಂದ ಮಾಡ್ತಿದೀನಿ. ಕಳೆದ ವಾರ ತಾನೇ ಒಂದು ಮಗೆ ಜೇನಿನ ಜೊತೆಗೆ ಕುಶಲ ಕೇಳಿ ಪತ್ರ ಕಳಿಸಿದ್ದೇನೆ. ಅಪ್ಪಾಜಿ ಈ ವಿಚಾರದಲ್ಲಿ ನಮಗಿಂತ ಹೆಚ್ಚು ಜಾಣರು. ಕಲಿತ ಪಾಠದಿಂದ ನಮಗೆ ಹೀಗಲ್ಲ, ಹೀಗೆ ಅಂತ ಹೇಳ್ತಾರೆ. *(ಒಬ್ಬ ಬರುತ್ತಾನೆ.)*

ಆಳು: ನರಸ, ಪಟ್ಟಣದಿಂದ ಇಬ್ಬರು ಓಲೆಕಾರರು ಬಂದಿದಾರೆ.

ರಣಧೀರ: ಕರೆ ತಾ.

ಚೆನ್ನ–ರಂಗ: ಅಡ್ಡ ಬಿದ್ದೋ ಬುದ್ಧಿ!

ರಣಧೀರ: ಇರಲಿ. ಸುದ್ದಿಯೇನು?

ರಂಗ: ಪತ್ರ ತಂದಿದೀವಿ. ಏ, ಕೊಡೋ ಚೆನ್ನ

ಚೆನ್ನ: ನಿಂತಾವೆ ಐತಲ್ಲೋ? ಒಡೇರ್ನ ಕಂಡು ಗಾಬಿರಿಯಾಗ್ಬಿಟ್ಟವ್ನೆ.

ರಂಗ: ಓಡೋಡಿ ಬಂದು ಸುಸ್ತಾಯ್ತು ಬುದ್ದಿ ತಗನಿ.

ರಣಧೀರ: ಇದನ್ನು ಓದು.

ನಿರೀಶ: 'ನರಸ, ಮಹಾರಾಜರು ಪುಟ್ಟಸ್ವಾಮಿಯವರು ದೈವಾಧೀನರಾದರು. ಸಿಂಹಾಸನಕ್ಕೆ ನಿನ್ನನ್ನು ಆರಿಸಲಾಗಿದೆ. ಬೇಗನೆ ಹೊರಟು ಮೈಸೂರಿಗೆ ಬರುವುದು. ನಿನ್ನ ವಿಶ್ವಾಸಿ, ವಿಕ್ರಮರಾಯ'.

ಸಕ್ಕ: ಹಾ! ಹಾ! ಸುದ್ದಿ ಅಂದ್ರೆ ಇದಲ್ವಾ! ನಡಿ ನಡೀರೋ! ಕಟ್ಟಿ ಗಂಟು ಮೂಟೆ!

ನಿರೀಶ: ಸದ್ದು ಸಕ್ಕ! ನರಸ ಏನಿದು?

ರಣಧೀರ: ಏ! ನಿಮ್ಮ ಹೆಸರೇನು?

ಚೆನ್ನ: ಇವ್ನು ರಂಗ.

ರಂಗ: ಇವ್ನು ಚೆನ್ನ.

ನಿರೀಶ: ರಾಜರು ತೀರ್ಕೊಂಡಿದ್ದು ಯಾವಾಗ್ಲೋ?

ಚೆನ್ನ–ರಂಗ: *(ಪರಸ್ಪರ ಮುಖ ನೋಡಿಕೊಳ್ಳುವರು)*

ರಣಧೀರ: ಯಾಕ್ರೋ? ಕೇಳಿದ್ದು ತಿಳೀಲಿಲ್ವಾ?

ಚೆನ್ನ: ನಮಗ್ಗೊತ್ತಿಲ್ಲ ಬುದ್ದಿ!

ರಣಧೀರ: ಅಂದ್ರೆ?

ರಂಗ: ನಾವಿಲ್ದೆ ಇರುವಾಗ ಆಗಿರಬೇಕು ಬುದ್ದಿ?

ಚೆನ್ನ: ಏ ರಂಗ!

ನಿರೀಶ: ಯಾಕೆ ಗದರ್ತೀಯೋ?

ಚೆನ್ನ: ನಂಗೇನೂ ಗೊತ್ತಿಲ್ಲ ಸ್ವಾಮಿ. ಇಲ್ಲದ ಮಾತು ನಂಗ್ಯಾಕೇಂತ.

ನರಸ: ನಿಜ ಹೇಳ್ರೋ. ನೀವು ಊರು ಬಿಟ್ಟಾಗ ಏನು ಸುದ್ದಿ?

ಚೆನ್ನ–ರಂಗ: *(ಮೌನ.)*

ನಿರೀಶ: ಯಾಕೆ, ಸುಮ್ಮನಾದ್ರಿ?

ನರಸ: ಅವರ್ನ ಗದರಿಸಿ ಪ್ರಯೋಜನವೇನು ನಿರೀಶ, ವಿಷಯ ನಾವಂದು ಕೊಂಡಷ್ಟು ಸುಲಭವಾಗಿಲ್ಲ. ಹನುಮ ಇವರಿಬ್ರನ್ನ ಕರೆದೊಯ್ಯಿ.

ರಂಗ: ಇಲ್ಲ ಸ್ವಾಮಿ. ನಾವೀಗ ಹೊರಟೊ. ನಿಲ್ಲೋಕೆ ನಮಗೆ ಹೊತ್ತಿಲ್ಲ.

ನರಸ: ಆಯಿತು. ಇವರನ್ನು ಬಿಟ್ಟು ಬನ್ನಿ. ಪತ್ರ ತಲುಪಿದ್ದನ್ನ ದಳವಾಯಿಗಳಿಗೆ ತಿಳಿಸಿ. *(ಹೋಗುವರು.)*

ನಿರೀಶ: ಏನಿದು ನರಸಾ! ಪತ್ರ ವಿಕ್ರಮರಾಯನಿಂದ ಬಂದಿದೆ!

ನರಸ: ನಂಗೂ ಅದೇ ಸಂದೇಹ. ಏನೋ ಗುಟ್ಟು ಅಡಗಿರೋ ಹಾಗಿದೆ. ಅವನು ನಾವು ಅಂದ್ಕೊಂಡದ್ದಕ್ಕಿಂತ ಚಾಣಾಕ್ಷ ಅಂತಾಯ್ತು.

ನಿರೀಶ: ಈಗ ನಂ ಪಡೆಗೆ ಏನೂ ಕೆಲಸ ಉಳಿದಂತಿಲ್ಲ.

ನರಸ: ನಾವು ಬರೋಕೆ ಸರಿಯಾದ ವಾತಾವರಣ ತರ್ತೀನಂತ ಹೇಳಿ ಹೋದೋನು, ನೇರವಾಗಿ ರಾಜನಾಗು ಬಾ ಅಂತ ಕರಿತಿದಾನಲ್ಲ! ಅಲ್ಲಿಗೆ ಅವನ ಕಿಮ್ಮತ್ತು ಎಷ್ಟಿರಬೇಡ!

ನಿರೀಶ: ನೀನೀಗ ಮೈಸೂರಿಗೆ ಹೋಗ್ತೀಯಲ್ಲ.

ನರಸ: ನಂಗೀಗ ಏನೂ ತೊಚ್ತಾ ಇಲ್ಲ. ಪತ್ರ ಕೊಡು ಇಲ್ಲಿ. ಅಪ್ಪಾಜಿ ಹತ್ರ ಹೋಗಿ ಕೇಳ್ತೇನೆ. *(ಹೋಗುವನು.)*

ಸಕ್ಕ: ಯಾಕಯ್ಯ, ಕುಣಿದಾಡೋ ಮಾತು ಕೇಳೀನೂ ಆಕಾಶ ತಲೆ ಮೇಲೆ ಬಿದ್ದವನ ಹಾಗಿದೀ?

ನಿರೀಶ: ಸಕ್ಕ! ನರಸ ರಾಜ ಆಗ್ತಾನೆ ನಿಜ. ಆದ್ರೆ ಯಾರೋ ಕರೆದು ಹರಿವಾಣದಲ್ಲಿ ಇಟ್ಟು ಒಪ್ಪಿಸ್ಕೋ ಅಂತ ಕೊಡ್ತಾ ಇದಾರೆ. ಅದನ್ನ ಮರೀಬೇಡ. ಕೊಡೋರು ಒಂದು ಗಾಳ ಎಸೆದೇ ಕೊಡ್ತಾರೆ, ನರಸ ಸಿಂಹಾಸನಾನ ಮೈ ಬಗ್ಗಿಸಿ ಪಡದಿದ್ದರೆ ಆವಾಗ ಬೇರೆ ಇತ್ತು.

ಬಸವ: ಹೌದು ನಮ್ಮ ಕತ್ತಿ ತುಕ್ಕು ಬಿಡೋ ಹಂಗೆ ಇಲ್ಲಾಂತ ಕಾಣುತ್ತೆ.

ಸಕ್ಕ: ಅಂದ್ರೆ ಈಗ ನರಸ ರಾಜ ಆಗೋದು ಸರಿ ಅಲ್ವಾ?

ನಿರೀಶ: ಅಲ್ಲಾ ಅಂತನೂ ಹೇಳೊ ಹಾಗಿಲ್ಲ. ಅಪ್ಪಾಜಿಯವರು 'ಹೂಂ' ಅಂದ್ರೆ ಅವನು ಹೊರಟ ಹಾಗೇನೆ. ನಾವು, ಅವನಿಗಾಗಿ ನಿಂತವ್ರು ಇದು ಸರೀನಾ ಅಂತ ಯೋಚನೆ ಮಾಡ್ಬೇಡ್ವಾ?

ಬಸವ: ಕೊಟ್ಟ ಪದವೀನ ದಳವಾಯಿಗಳು ಮತ್ತೆ ತೊಗೊಳ್ಳಬಹುದು ಅಂತ್ಲೋ ನಿನ್ನ ಗುಮಾನಿ.

**ನಿರೀಶ:** ಇದು ಹೀಗೇ ಅನ್ನೊಕೆ ಬರೋಲ್ಲ. ಒಟ್ನಲ್ಲಿ ದಳವಾಯಿಗಳು ತಮ್ಮ ನಡೇನ ಗುಟ್ಟಾಗಿಟ್ಟಿದ್ದಾರೆ. ಇದು ಬೆಳೆಯೋ ಬಗೆ ಎಂತೋ ಹೇಳೋ ಹಾಗಿಲ್ಲ.

**ಸಕ್ಕ:** ನಮ್ಮ ದಳದ ಸೂಕ್ಷ್ಮ ದಳವಾಯಿಗೂ ಗೊತ್ತು ಅಂತೀಯೇನು?

**ನಿರೀಶ:** ಗೊತ್ತಿದ್ರೆ ಅದು ಅಪಾಯ. ಗೊತ್ತಿಲ್ದಿದ್ರೆ ಗೊತ್ತಾಗ್ಬಾರ್ದು. ನರಸ ಅವನ ಪಾಡಿಗೆ ಅವನು ಹೋಗಲಿ. ನಾವೆಲ್ಲ ಮರೆಸ್ಕೊಂಡು ಆಮೇಲೆ ಮೈಸೂರಿಗೆ ಹೋಗೋಣ. ಮಲ್ಲನಿಗೂ ಸುದ್ದಿ ಕಳ್ಸಿ.

**ಬಸವ:** ಅಲ್ಲೇನು ಮಾಡೋದು–ಪಟ್ಟಾಭಿಷೇಕದ ಊಟ ದಕ್ಕೋದು ಅಷ್ಟೇ!

**ನಿರೀಶ:** ಏನು ಮಾಡೋದು ಅನ್ನೋದು ಈಗ ಗೊತ್ತಾಗಲ್ಲ ಬಸವ. ನರಸನಿಗೆ ನಮ್ಮ ದಳದ ನೆರವು ಯಾವಾಗ ಬೀಳುತ್ತೋ. ಅಲ್ಲದೆ ಅವನಿಗೆ ನಾವು ಬೇಡಾ ಅನ್ನೋ ಹೊತ್ತು ಬರಬಾರ್ದು ನೋಡು. ಅದಕ್ಕೆ ನಾವು ಕಾಯ್ಕೊಂಡಿರಬೇಕು. ಈಗ ನಡೀರಿ ಇನ್ನೂ ಮಾತಾಡೋದಿದೆ.

## ದೃಶ್ಯ 7

(ಮೈಸೂರಿನ ಬೀದಿ. ಗುಂಪು. ವೇಷ ಮರೆಸಿಕೊಂಡ ರಣಧೀರನ ಗೆಳೆಯರು ಗುಂಪಿನ ನಡುವೆ. ಸಕ್ಕ ರಣಧೀರನನ್ನು ಹೊಗಳಿ ಹಾಡುತ್ತಾನೆ.)

**ನಿರೀಶ:** ಅಬ್ಬಬ್ಬಾ! ಇಂಥ ಧೀರನಾದವ್ರು ನಮ್ಮ ರಾಜ ಆದ್ರೆ ಎಷ್ಟು ಚೆನ್ನಾಗಿರ್ರೋದು?

**ಪೌರ 1:** ನಂಗೂ ಅಂಗೆ ಅನಿಸ್ತೈತೆ.

**ಯುವಕ:** ಯಾವನೋ ಬಂದ್ರೆ ಏನಾಗೋದು? ಕಾವೇರಿ ಹೊಳೇಲಿ ಹಾಲು ಹರೀತೈತಾ?

**ಬಸವ:** ಹರಿಸೋ ಶಕ್ತಿ ಇರೋರು ಅಂದ್ರೆ ಇಂಥ ಸಿಂಹದ ಮರೀನೇ ಅಲ್ವಾ?

**ಯುವಕ:** ಈ ಕಥೇನೆಲ್ಲ ನಂಬ್ತೀರಾ?

**ಸಕ್ಕ:** ಕಥೆಯೆಂದ್ರೆಂಗೆ? ನಡೆದದ್ದು ಅಲ್ವಾ? ನಂಬ್ದೆ ಇರಾಕಾಯ್ತದ? ಯಾರಿಗೂ ತಲೆ ಬಗ್ಸಲ್ಲ ಅನ್ನೋ ಗಂಡು ಗಾದೀಲಿ ಇದ್ರೆ ಯಾರೂ ಬಾಲ ಬಿಚ್ಚಾಕೆ ಇಲ್ಲ.

**ಪೌರ 2:** ಈಗ ಎಂಗಿದ್ರೂ ಅವ್ರ್ನೇ ಅಂತಲ್ಲಾ ಪಟ್ಟಕ್ಕೆ ಆಯ್ತಿರೋದು?

**ಸಕ್ಕ:** ಹೌದಾ? ಹಾಗಿದ್ರೆ, ಸ್ವಾಮಿ ನಮ್ಮೇಲೆ ಕಣ್ಣು ಬಿಟ್ಟಾಂತಾಯ್ತು?

**ಬಸವ:** *(ಸಕ್ಕ ಇದ್ದ ಜಾಗಕ್ಕೆ ಸೇರಿ)* ಅಣ್ಣಂದಿರೆ, ಅಪ್ಪಂದಿರೇ, ಈತ ಈವರೆಗೂ ಯಾರ ಭಲಾನಾ ಯಾರ ಧೈರ್ಯಾನ ಹಾಡ ಮಾಡಿ ಹೇಳಿದನೋ, ಆ ದೇವರಂಥ ಮನುಷ್ಯ ನಮ್ಮ ರಾಜರಾಗ್ತಾ ಅವ್ರೆ, ಇನ್ನು ಮೇಲೆ ನಾವು ಯಾರ ದಬಾವಣೆಗೂ ಬಗ್ಗಿ ಬದುಕಬೇಕಾಗಿಲ್ಲ.

**ಯುವಕ:** ಅದೆಂಗೊತ್ತು ನಿನಗೆ? ನೀನೇನೂ ನಾಳೆ ಆಗೋದು ಕಂಡಿದೀಯಾ?

ನಿರೀಶ: ತಾಳಪ್ಪಾ! ತಾಳು! ಈಗ ಎಲ್ಲರ ಮೇಲೆ ದಬಾಯಿಸ್ಕೊಂಡು ಬದುಕುತ್ತಿರೋರ್‍ಗೆ ಯಾರ ಅಂಕೇನೂ ಇಲ್ಲದಂತಾಗಿದೆ. ನಮ್ಮ ಗೋಳು ಕೇಳೋರಿಲ್ಲ. ಅಂಥೋರ್‍ನೆ ಮೀರ್‍ಸೋ ಗಂಡು ರಾಜಾ ಆದ್ರೆ ಅವ್ರೆಲ್ಲಾ ತಣ್ಣಗಾಗ್ತಾರೆ. ಏನಂತೀರಿ?

ಪೌರ 1: ನೀ ಅನ್ನೋದೇನೋ ದಿಟಾನೆ!

ಯುವಕ: ಕನಸು! ಕನಸು!

ಪೌರ 2: ಯಾವೊನ್ಲಾ ಇವ್ನು? ಮಾತು ಮಾತ್ಗೂ ರಾಗ ಎಳೀತಾವ್ನೆ! ದಳವಾಯಿ ಗುಲಾಮ ಇರ್‍ಬೋದು. ಇಡ್ಕಂಡು ನಾಲ್ಕು ಮಡಗ್ರಲಾ! *(ಗಲಾಟೆ.)*

ನಿರೀಶ: ಸದ್ದು! ಜಗಳ ಯಾಕೆ? ಅದೂ ಒಳ್ಳೇ ಕಾಲ ಬಂದಿರುವಾಗ

(ಒಬ್ಬ ಓಡಿ ಬರುವನು)

ನಾಳೆ ನಮ್ಮ ರಾಜರಾಗೋರ್‍ಗೆ...ಜಯಕಾರ ಹಾಕೋಣ. *(ಜಯಕಾರ)*

ಓಡಿಬಂದವ: ನಿಲಿಸ್ರಪ್ಪೋ! ಇನ್ಯಾವ ರಾಜ? ಅವರು ಬೆಟ್ಟದಿಂದ ಬಂದಿದ್ದೇ ತಡ. ದಳವಾಯಿ ಕಡೇವ್ರು ಹಿಡ್ಕೊಂಡೋಗಿ ಸೆರೆಗಾಕುದ್ರು.

ಪೌರ 2: ಬೊಗಳೆ ಬಿಡ್ತಾವ್ನೆ!

ಓಡಿಬಂದನ: ನನ್ನಾಣೆಗೂ ದಿಟ ಅಂತೀವ್ನಿ! ಅಂಗೆ ಅವ್ರ ಮುಖನಾದ್ರೂ ನೋಡಾವಾಂತ ಹಾದೀಮೇಗೇ ಕಾಯ್ತಿದ್ರೆ, ದಳದವ್ರು ಒದ್ದು ಓಡಿಸ್ಬುಟ್ರು ಅಂತೀವ್ನೀ.

ಪೌರ 1: ಇನ್ನೇನಪ್ಪ ಗತಿ!

ಬಸವ: ಈಗ ನಾವು ಎದೆಗುಂದಬಾರ್‍ದು. ದಳವಾಯಿಗಳ ಮೋಸ ಸಹಿಸಬಾರ್‍ದು. ನಮ್ಮನ್ನಾಳೋಕೆ ದೇವ್ರೇ ಕಳ್ಸಿರೋ ಧೀರ ಆತ. ಆತನ್ನೇ ಹಿಡಿದು ಹಾಕೋದೂಂದ್ರೆ ಏನು!

ಯುವಕ: ಧೀರ ಆದ್ರೆ ತಪ್ಪಿಸ್ಕೊಂಡು ಬರ್‍ತಾನೆ ಬಿಡು.

ನಿರೀಶ: ಹಾಗಂತ ನಾವು ಕೈ ಕಟ್ಟಿಕೊಂಡು ಕೂತಿರಕಾಗತ್ತಾ? ಅದು ಚೆಂದವಾ? ದಳವಾಯಿಗೆ ಕೊಬ್ಬು ಹೆಚ್ಚಾಗೈತೆ. ತಾನು ಮಾಡೋದನ್ನ ಕೇಳೋರೇ ಇಲ್ಲ ಅಂದ್ಕೋತಾನೆ. ಈಗ ಸುಮ್ಮನೆ ಸೆರೆಗೆ ಹಾಕ್ತಿದಾನೆ. ನಾಳೆ ಕೊಲ್ಲಿಸಿದ್ರೂ...ಕೊಲ್ಲಿಸಬೋದು.

ಬಸವ: ಈಗ ನಾವೇನಾದ್ರೂ ಮಾಡಿ ನಮಗಿರೋ ಒಂದೇ ಒಂದು ಆಸ್ತೀನ ಉಳಿಸ್ಕೋಬೇಕು.

ನಿರೀಶ: ಸ್ವಲ್ಪ ಸಾವರಿಸಿಕೊಳ್ಳಿ. ಇದು ಹೀಗೆ ಗುಂಪಿನಲ್ಲಿ ಆಗೋ ಕೆಲ್ಸ ಅಲ್ಲ. ಮೊದಲು ನಾನು ಹೇಳೊದನ್ನ ಕೇಳ್ಕೊಳ್ಳಿ.

ಅವಂದು ಗಿಡುಗನ ಹಿಡಿತ, ಆದ್ದರಿಂದ ನಮ್ಮ ರಾಜನ್ನ ಉಳಿಸೋಕೆ ಪ್ರಾಣಾನಾದ್ರೂ ಕೊಡ್ಬೇಕಾಗುತ್ತೆ. ಯಾರ ಯಾರ್ಗೆ 'ಹಾಗಾದ್ರೂ ಪರವಾಗಿಲ್ಲ...ನಾನು ಸಿದ್ಧ...' ಅನ್ನೋ ಗುಂಡಿಗೆ ಇದ್ಯೋ ಅವರೆಲ್ಲ ಒಂದು ಕಡೆ ಸೇರ್ಬೇಕು. ಅಂಥೋರು ಯಾರಾದ್ರೂ ಸರಿ, ಸರಿ ರಾತ್ರಿಗೆ ಊರಾಚೆ ತೋಪಿಗೆ ಗುಟ್ಟಾಗಿ ಬರ್ಬೇಕು ಸಿದ್ಧಾನಾ?

ಪೌರರು: ಓಹೋ!

ನಿರೀಶ: ನಾವು ಎಚ್ಚರಿಕೆಯಿಂದಿರ್ಬೇಕು ನೆನಪಿರಲಿ ರಾತ್ರಿ, ತೋಪು......ದಳವಾಯಿಗಳ ಕಡೇವ್ರು ತಡೆದರೂ ತಡೀಬೋದು. ಇಲ್ಲೇ ಯಾರಾದ್ರೂ ಅವ್ರ ಕಡೆವ್ರು ಇದ್ರೂ ಇರಬೋದು. *(ಜನರು ಸುತ್ತಮುತ್ತ ನೋಡುವರು. ಚೆನ್ನ-ರಂಗರು ಗಮನಕ್ಕೆ ಬರುವರು. ಅವರು ಜಾಗ್ರತರಾಗುತ್ತಾರೆ.)*

ಚೆನ್ನ: *(ಯುವಕನನ್ನು ತೋರಿಸಿ)* ಇನ್ನಾರು? ಇವ್ನೆ ಅವನಲ್ಲ!

ರಂಗ: ಹೂಂ, ಇವ್ನೆ, ದಳವಾಯಿ ಕಡೆವ್ರು...*(ಗಲಭೆ.)*

ನಿರೀಶ: ಮರೀಬೇಡಿ...ರಾತ್ರಿ...ತೋಪು... *(ಜಯಕಾರ.)*

# ದೃಶ್ಯ 8

*(ಹಳ್ಳಿ ಚಾವಡಿ: ಗೌಡ, ಸಕ್ಕ, ಬಸವ, ನಿರೀಶ, ಇತರರು.)*

**ಗೌಡ:** ಅಂಗಾದ್ರೆ ಎಲ್ಲಾ ತಲೆ ಕೆಳಕಾಗ್ಯೆತೆ ಪಟ್ಟಣದಾಗೆ?

**ನಿರೀಶ:** ಹೌದು ನೀವು ದೂರ ಇರೋರು ಸಂಗತಿ ತಲುಪೋ ಹೊತ್ತಿಗೆ ಹೇಗಾದ್ರೂ ಆಗಿರ್ಬೋದು.

**ಗೌಡ:** ಅದೂ ನಿಜನೆ. ಈಗ ದಳವಾಯಿಗಳ ಕೈ ನಡೆಯೋಕಿಲ್ಲಂತೀರಾ?

**ನಿರೀಶ:** ನನ್ಮಾತ್ಯಾಕೆ ಈಗಾಗ್ಲೆ ಅಲ್ಲಿಂದ್ಲೇ ಬಂದಿರೋ ನಿಮ್ ಜನಾನೇ ಇದಾರಲ್ಲಾ. ಅವರ ಬಾಯಿಂದ್ಲೆ ಕೇಳಿದಿರಲ್ಲಾ.

**ಗೌಡ:** ಆದ್ರೂ ಈ ಯಪ್ಪನ್ನ ಎದುರಾಕೊಳ್ಳೋದು ಎಂಗೆ? ಯಾವತ್ತು ಈ ಕೊಡಗಿನ ಕಡೆ ಮುಂದ್ರು ಬರ್ತಾರೋ ಆಗ ಯಾರೂ ಕೇಳಾಕಿಲ್ಲಂದ್ಬುಂಟ್ರೆ ನಂಗತಿ?

**ನಿರೀಶ:** ನಿಮಗೆಲ್ಲೋ ಭ್ರಮೆ! ಆಮೇಲೆ ಇವರಾಟ ಸಾಗುತ್ತೇಂತೀರಾ? ಆಗ ಯಾರ ಮಾತು ನಡೆಯುತ್ತೋ ಅವರ್ನ ಎದುರು ಹಾಕಿಕೊಂಡ್ರೆ ಕಷ್ಟ ಆಗಬೋದು.

**ಗೌಡ:** ನಿಮಗೂ ನರಸರಾಜನಿಗೂ ಅಷ್ಟೊಂದು ಗೆಣೆತನಾನಾ?

**ಸಕ್ಕ:** ಕಿತ್ರೆ ಬರಾಕಿಲ್ಲ ಅಂತೀನಿ!

**ಗೌಡ:** ಆಯ್ತು ನಿಮ್ ಧೈರ್ಯದ ಮ್ಯಾಲೆ ಇವತ್ತು ದಳವಾಯಿಗಳನ್ನ ಎದುರು ಆಕ್ಕೊಂತೀನಿ.

**ಬಸವ:** ಭಯ ಯಾಕೆ? ಜನ ನಿಮ್ ಕಡೆ ಇದಾರೆ ನಡಿರಿ. *(ಕಹಳೆ...ವಿಕ್ರಮರಾಯನ ಪ್ರವೇಶ.)*

**ವಿಕ್ರಮರಾಯ:** ಯಾರಯ್ಯ ಗೌಡ? ನೀನೋ?

**ಗೌಡ:** ಹೌದು ಸ್ವಾಮಿ ಊಳಿಗದಲ್ಲಿರೋನು ನಾನು.

**ವಿಕ್ರಮರಾಯ:** ಹೂಂ...ಊಳಿಗದಲ್ಲಿರೋನು ಇದ್ದಕೊಂಡು ಹೋದ ವರ್ಷದ ಕರ ಬೊಕ್ಕಸಕ್ಕೆ ಪೂರ್ತಿ ಸಂದಾಯವಾಗಲಿಲ್ಲ ಅಲ್ಲಾ?

**ಗೌಡ:** ಜನರಿಂದ ಕರ ಪಡೆಯೋದು ಸಾಧ್ಯ ಆಯ್ತಿಲ್ಲ ಸ್ವಾಮಿ,

**ವಿಕ್ರಮರಾಯ:** ಹಾಗಂದ್ರೇನು?

**ಗೌಡ:** ಕೊಡೋಕೆ ಜನ ಒಪ್ತಿಲ್ಲ.

**ವಿಕ್ರಮರಾಯ:** ಹಾಗಂತ ನೀವು ಸುಮ್ನೆ ಇದೀರಿ. ನಾವು ಇನ್ನೆಂಟು ದಿನ ಅವಧಿ ನೀಡ್ತೇವೆ. ಅಷ್ಟರಲ್ಲಿ ಸಲ್ಲಿಸದಿದ್ದರೆ ನೀನೇ ಹೊಣೆ.

**ಗೌಡ:** ಇನ್ನೂ ಎಂಟು ದಿನ ಐತಲ್ಲ ನೋಡೋನು ಬಿಡಿ.

**ವಿಕ್ರಮರಾಯ:** ಧೋರಣೆ ಸಾಕು. ಊರ ಮುಂದಿನ ಕೆರೆ ಯಾಕೆ ಒಣಗಿದೆ? ಹೂಳು ತಗಿಸಬಾರದೇನು?

**ಗೌಡ:** ಬಿಟ್ಟಿ ಕೆಲ್ಸ ಅಂದ್ರೆ ಜನರು ಮೈಗಳ್ಳರಾಗ್ತಾರೆ ಸ್ವಾಮಿ. ಅರಮನೆಯಿಂದ ಹಣ ಕೊಡ್ಸಿದ್ರೆ...

**ವಿಕ್ರಮರಾಯ:** ಹಳ್ಳಿಯಿಂದ ಕರ ಬಾಕಿ ಇರೋದಲ್ದೆ ಮತ್ತೆ ನಾವೇ ಹಣ ಕೊಡಬೇಕಲ್ಲವೆ?

**ಗೌಡ:** ಅರಮನೆಯ ಬೊಕ್ಕಸದಿಂದ...

**ವಿಕ್ರಮರಾಯ:** ಆಹಾ! ಈ ಜನರನ್ನು ಬಡಿದು ದುಡಿಸೋದಿಕ್ಕೆ ನಿಮ್ಮ ಕೈ ಹರಿಯುತ್ತಿಲ್ಲಾಂತಾಯ್ತು.

**ಗೌಡ:** ತಮ್ಮಷ್ಟು ಅನುಭವ ಸಾಲ್ದು...ತಮ್ಮ ಪೋಜಿನ ಭಾಗವೊಂದನ್ನು ಕಳಿಸಿ ಕೊಟ್ಟರೆ...

**ವಿಕ್ರಮರಾಯ:** ಸಾಕು! ಸಾಕು! ನೀವು ಗೌಡನಾಗಿರಲು ಅರ್ಹರಲ್ಲ. ಈವರಿಗಾದದ್ದು ಸಾಲಾಂತ ತಿಳ್ಕೊಂಡು ಬೊಕ್ಕಸಕ್ಕೆ ಸಲ್ಲಿಸದಿದ್ದರೆ ನಿನ್ನಾಸ್ತೀನ ವಶಪಡಿಸಿಕೊಳ್ಳಬೇಕಾಗುತ್ತದೆ.

**ಗೌಡ:** ಆಗಬಹುದು. ಜನರ ಹತ್ತಿರ ನಿಮಗೂ ಏಗಲ್ಲ. ಎತ್ತಿಗೆ ಜ್ವರ ಬಂದ್ರೆ ಎಮ್ಮೆಗೆ ಬರೆ ಹಾಕದ್ರಂತಲ್ಲ.

**ವಿಕ್ರಮರಾಯ:** ನಿಮಗೆ ಕೊಬ್ಬು ಹೆಚ್ಚಾಗಿದೆ. ಬುದ್ಧಿ ಕಲಿಸಬೇಕಾಗಿದೆ. ಅರಮನೆಗೆ ನಿಮ್ಮ ಬಗ್ಗೆ ಹೇಳುತ್ತೇವೆ.

**ಗೌಡ:** ಶ್ರೀಮಂತರು ಮನಸ್ಸು ಮಾಡಿದರೆ ಏನು ಬೇಕಾದ್ರೂ ಮಾಡಬಲ್ಲಿರಿ!

**ವಿಕ್ರಮರಾಯ:** ನಿನ್ನ ವರ್ತನೆ ಹದ್ದು ಮೀರುತ್ತಿದೆ. *(ಗಲಭೆ–ಜಯಕಾರ.)*

# ದೃಶ್ಯ 9

*(ಚೆನ್ನ-ರಂಗ ನರಸರಾಜರ ಮನೆ ಕಾಯುತ್ತಿದ್ದಾರೆ.)*

**ಚೆನ್ನ:** ಲೇ! ರಂಗಾ! ನೋಡೋ ಯಾರೋ ಇತ್ಲಾಗೇ ಬತ್ತಾವ್ರೆ.

**ರಂಗ:** ಬಂದ್ರೆ ಬರ್ತಾರೆ ತೆಗಿಲಾ! ನಂಪಾಡಿಗೆ ನಾವಿದ್ರೆ ಆಯ್ತು. *(ಒಬ್ಬಳು ಬಂದು ಚೆನ್ನನ ಬಳಿ ಪಿಸು ಮಾತನಾಡುವಳು. ಚೆನ್ನ ರಂಗನನ್ನು ಎಬ್ಬಿಸಿ ಬಾಗಿಲ ಬಳಿ ಕರೆತರುವನು.)*

**ಚೆನ್ನ:** ಒಡೇರಿಗೆ ಸರಣು! ತಾಯಿಯೋರು ತಮ್ಮನ್ನ ಕಾಣೋಕೆ ಬಂದವ್ರೆ.

**ರಣಧೀರ:** ಯಾರು? ಚಿಕ್ಕಮ್ಮನೇ ಕರೆ ತಾ!

**ಚೆನ್ನ:** ಅಪ್ಪಣೆ. *(ತಿಮ್ಮಾಜಮ್ಮಣ್ಣಿಯ ಪ್ರವೇಶ.)*

**ರಣಧೀರ:** ಚಿಕ್ಕಮ್ಮ! ಏನಿಲ್ಲಿ?

**ತಿಮ್ಮಾಜಮ್ಮಣ್ಣಿ:** ಕುಶಲವೇ ಮಗೂ? ನಿನ್ನನ್ನು ನೋಡೋಣವೆಂದೇ ಬಂದೆವು.

**ರಣಧೀರ:** ವಿಷಯ ತಿಳೀತು. ನಾನೇ ನಿಮ್ಮನ್ನು ನೋಡೋಕೆ ಬರ್ತಿದ್ದೆ.

**ತಿಮ್ಮಾಜಮ್ಮಣ್ಣಿ:** ಅದು ಬೇಡ ಬಿಡು. ಅಂತಹ ದುರ್ಬಲ ಮಗನನ್ನು ಹೆತ್ತದ್ದು ಕೆಟ್ಟ ನೆನಪು.

**ರಣಧೀರ:** ತಮ್ಮಾಜಿಯವರ ಬಗ್ಗೆ ಹಾಗೆನ್ನಬಾರದು ಚಿಕ್ಕಮ್ಮ!

**ತಿಮ್ಮಾಜಮ್ಮಣ್ಣಿ:** ಕೈ ಬಿಟ್ಟು ಹೆಜ್ಜೆ ಇಡಲಾರದವನಿಗೆ ನಾವು ಏನಂದರೇನು? ಆಯಿತು. ನೀನು ಇಲ್ಲಿ ಕುಶಲವೇ?

**ರಣಧೀರ:** ನಾನು ಬಂದಾಗಿನಿಂದ ಒಂಟಿಯಾಗಿಯೇ ಇದ್ದೇನೆ. ವಿಷಯ ತಿಳಿಯಲೊಲ್ಲದು. ನಿನ್ನ ಜೀವಕ್ಕೆ ಅಪಾಯವಿದೆಯೆಂದು ಹೇಳಿದ ದಳವಾಯಿ ನನ್ನನ್ನು ರಕ್ಷಣೆಯಲ್ಲಿಟ್ಟಿದ್ದಾರೆ.

**ತಿಮ್ಮಾಜಮ್ಮಣ್ಣಿ:** ವಿಕ್ರಮನ ಬಲೆಗೆ ನೀನೂ ಬಿದ್ದೆಯಲ್ಲವೆ?

ರಣಧೀರ: ನೀವನ್ನುವುದು...

ತಿಮ್ಮಾಜಮ್ಮಣ್ಣಿ: ನಿನಗಿನ್ನೂ ತಿಳೀಯಬೇಕಾದ್ದು ಬಂಡಿಯಷ್ಟಿದೆ. ವಿಕ್ರಮನ ರಕ್ಷಣೆಯ ಮಾತನ್ನು ನಂಬಿ ಕುಳಿತ ನಿನ್ನನ್ನು ಏನನ್ನಬೇಕು? *(ಚೆನ್ನ-ರಂಗರು ಒಳಗೆ ನುಗ್ಗಿ ಬಾಗಿಲನ್ನು ಮುಚ್ಚುವರು.)*

ರಣಧೀರ: ಏನಿದು? *(ಚೆನ್ನ-ರಂಗರೊಡನೆ ಹೊಡೆದಾಟ.)* ನೀವು ಹೇಳುವುದು ಈಗ ಗೊತ್ತಾಗಿದೆ. ತಾಯಿ ನಾನೀಗ ಬಂದೀ ಏಯ್! ನೀವಿಬ್ರೂ ಅಮ್ಮಾಜಿಯವರು ಇಲ್ಲಿಗೆ ಬಂದಿದ್ದನ್ನ ಎಲ್ಲಾದ್ರೂ ಬಾಯಿ ಬಿಟ್ರೆ ಕತ್ತು ಹಾರಿಸಿ ಬಿಡುತ್ತೇನೆ.

ಚೆನ್ನ: ಅಯ್ಯೋ ನಮ್ಮನ್ನ ಕೊಲ್ಬೇಡಿ ಬುದ್ದೀ...ಬುಟ್ಬುಡಿ!

ರಣಧೀರ: ಬಿಟ್ಟ ಮೇಲೆ ಬಾಲ ಬಿಚ್ಚಿದರೆ ಇವರನ್ನ ನೀವೇ ಸಂಚಿನಿಂದ ಕರೆದುಕೊಂಡು ಬಂದಿರೆಂದು ದಳವಾಯಿಗಳಿಗೆ ಹೇಳಿ ಶೂಲಕ್ಕೆ ಹಾಕಿಸ್ತೇನೆ.

ರಂಗ: ಅಯ್ಯಯಪ್ಪಾ! ಅಂಗ್ಮಾಡಬೇಡಿ ಬುದ್ದೀ. ಏನೋ ಒಳ್ಳೇದಿಕ್ಕೆ ಇರ್‍ಬೋದಂತಾ ಈ ಕೆಲಸ ಮಾಡಿಬುಟ್ವಿ!

ತಿಮ್ಮಾಜಮ್ಮಣ್ಣಿ: ಇವರನ್ನ ಶಿಕ್ಷಿಸಬೇಡ ರಣಧೀರ. ನಾವು ಒಳಗೆ ಬರುವುದು ಇವರಿಂದಾಯ್ತು.

ರಣಧೀರ: ಆಯ್ತು ತಾಯಿ. ಮತ್ಯಾಕೆ ಇವರು ಬಾಗಿಲು ಮುಚ್ಚಿದ್ದು?

ಚೆನ್ನ: ಅದನ್ನೇ ಏಳ್ತೀವಿ ದಣಿಗಳೇ! ತುಂಗರಾಯನ ಕಡೆವ್ರು ಇನ್ನೇನು ಬರೋ ಹೊತ್ತಾಯ್ತು. ಅವ್ರು ಬಂದರೆ ವಸಿ ತಲೆ ಕೆಳಗಾಯ್ತದೊ ಅಂತ ಬಾಗಿಲು ಹಾಕಿದ್ವಿ!

ರಣಧೀರ: ಇವರನ್ನ ಒಳಗೆ ಬಿಡುವಾಗ ಭಯ ಇರಲಿಲ್ಲವೋ?

ರಂಗ: ಆಗ್ದೆ ಇರ್‍ತಾದಾ?

ರಣಧೀರ: ಮತ್ತೆ?

ಚೆನ್ನ: ಜನಾ ಎಲ್ಲಾ ನೀವೇ ಸರಿಯಾದ ದೊರೆಯಂತ ಕುಣಿದಾಡ್ತವ್ರೆ. ನಿಮ್ಮನ್ನ ರಾಜನಾಗಿ ಮಾಡ್ಬೇಕೂಂತ ಕೂಗಾಡ್ತವ್ರೆ. ಇಂತಾದ್ರಾಗೆ ನಂದೂ ಒಂದು ಅಳಿಲು ಸೇವೆ ಇರ್‍ಲೀ ಅಂತ ಗುಂಡಿಗೆ ಗಟ್ಟಿಗೆ ಮಾಡ್ಕೊಂಡು ಇವ್ನಿ ಬುದ್ದಿ.

ರಣಧೀರ: ಇವರ ಮಾತು ನಿಜವೇ?

ತಿಮ್ಮಾಜಮ್ಮಣ್ಣಿ: ಅವರನ್ನು ಸಂದೇಹಿಸಬೇಡ ನರಸ. ಏ! ನೀವು ನರಸನಿಗೆ ಏನು ಬೇಕಾದ್ರೂ ಮಾಡ್ತೀರಾನ್ನಿ.

ರಣಧೀರ: ಇವರನ್ನು ಹೇಗೆ ನಂಬ್ತೀರಿ? ಹಾಗೆ ನೋಡಿದ್ರೆ ವಿಕ್ರಮ ನನ್ನ ಕರೆದು ಬಾ ಅಂತ ಬರೆದಿದ್ದ ಪತ್ರ ತಂದದ್ದು ಇವರೆ!

ತಿಮ್ಮಾಜಮ್ಮಣ್ಣಿ: *(ಪಿಸುಮಾತಿನಲ್ಲಿ)* ಅವರೀಗ ಇಕ್ಕಟ್ಟಿನಲ್ಲಿದ್ದಾರೆ. ಅಲ್ದೆ ನೀನು ಇಲ್ಲಿಂದ ಬಿಡುಗಡೆಯಾಗಬೇಕಾದರೆ ಇವರ ನೆರವು ಬೇಕೇಬೇಕು. *(ಪ್ರಕಾಶ)* ಏನು? ಸಿದ್ಧವೊ?

ಚೆನ್ನ: ತಲೆಕೊಡಾಕೂ ಸಿದ್ಧ ತಾಯಿ! ಏನೋ ರಂಗಾ?

ರಂಗ: ತಲೆ ತೆಗೆಯಾಕೂ!

ತಿಮ್ಮಾಜಮ್ಮಣ್ಣಿ: ಹಾಗಾದ್ರೆ *(ಜೋರಾಗಿ ಬಾಗಿಲು ಬಡಿದ ಸದ್ದು. ಸ್ತಬ್ಧ)*

ಚೆನ್ನ: ಬಂದೇ ಬುಟ್ರು!

ರಂಗ: ಈಗೇನಪ್ಪಾ ಮಾಡೋದು?

ಚೆನ್ನ: ಅಲ್ಲಿ... ಆ ಕನ್ನಡಿ ಹಿಂದೆ ಇದ್ದುಬಿಡಿ ತಾಯಿ. ಯಾರ್ಗೂ ಕಾಣ್ಸಾಕಿಲ್ಲ.

ರಣಧೀರ: ನಿಜ ತಾನೆ?

ರಂಗ: ಕೊರಳಾಣೆ. *(ರಾಣಿ ಮರೆಯಾಗುವಳು. ಚಿಲಕ ತೆಗೆಯುವರು.)*

ತುಂಗರಾಯ: ಯಾರೋ ಅದು? ಯಾಕಿಷ್ಟು ತಡ?

ಚೆನ್ನ: ಈ ರಂಗ ಗೊರಕೆ ಹೊಡೀತಿದ್ದ ಬುದ್ಧಿ. ನೀವು ಬಾಗಿಲ ಬಡಿದದ್ದು ತಿಳೀಲಿಲ್ಲ.

ತುಂಗರಾಯ: ಕಾವಲಿಗಂತ ಹಾಕಿದ್ರೆ ಗೊರಕೆ ಹೊಡೀತೀರಾ?

ರಂಗ: ನಿನ್ನೆ ರಾತ್ರಿ ಕುಂತ್ತು ನೋಡ್ತಾ ಜಾಗರಣೆ ಆಗೋಯ್ತು ಬುದ್ಧಿ. ನಿದ್ದೆ ತಡಿಯಾಕಿಲ್ಲ.

ತುಂಗರಾಯ: ಓ! ನೀವು ಮಲಗಿದ್ದಾಗ ಇಲ್ಲಿ ಯಾರೂ ಬರಲಿಲ್ಲವೊ?

ರಂಗ: ಮಲಗಿರೋವಾಗ ಅದೆಂಗೊತ್ತಾಗ್ತದೆ ಬುದ್ಧಿ?

ಚೆನ್ನ: *(ತಿವಿದು)* ಯಾರೂ ಬರ್ಲಿಲ್ಲ.

ತುಂಗರಾಯ: ಹೌದಾ? ಚೆನ್ನಾಗಿ ನೋಡಿದಿರಾ?

ಚೆನ್ನ: ನೊಣ ಓದ್ರೂ ಲೆಕ್ಕ ಮಡ್ಗೀವ್ನಿಂತೀನಿ!

ತುಂಗರಾಯ: ಇಟ್ಟಿರು, ದಳವಾಯಿಗಳು ಬಂದಾಗ ತೋರ್‍ಸಿ ಬಹುಮಾನ ಪಡೀತೀಯಂತೆ. *(ಒಳಗೆ ಹೋಗುವನು. ಹಿಂದೆಯೇ ಚೆನ್ನ-ರಂಗ.)*

ತುಂಗರಾಯ: ಏನು ನರಸ? ಸೌಖ್ಯವೆ?

ರಣಧೀರ: ತಮ್ಮ ಆರೈಕೆ ಹೇಳಬೇಕೆ?

ತುಂಗರಾಯ: ಒಬ್ಬನೇ ಇದ್ದು ಬೇಸರ ಬಂದಿರಬೇಕಲ್ಲ?

ರಣಧೀರ: ಬೇಸರ ತುಂಬಿದೆ. ಆದರೇನು? ದಳವಾಯಿಗಳ ಮಾತು ನಡೀಬೇಕಲ್ಲ.

ತುಂಗರಾಯ: ಉಂಟೇ ? ನಿನಗಲ್ಲ ಸಂಚುಗಾರರಿಗೆ ಹೇಳಿದೆ.

ರಣಧೀರ: ಅದನ್ನು ನನ್ನ ಬಳಿ ಅಂದಿದ್ದರ ಕಾರಣ?

ತುಂಗರಾಯ: ಸಂಚುಗಾರರ ತಂಡ ಶ್ರೀರಂಗಪಟ್ಟಣದಿಂದ ಇಲ್ಲಿಗೆ ಬಂದಿದೆ. ಅವರು ನಿನ್ನನ್ನು ಭೇಟಿಯಾಗಲು ಬರಬಹುದು. ನೀನು ಅವರನ್ನು ದೂರ ಇಡಬೇಕು.

ರಣಧೀರ: ಇದು ನಿಮ್ಮ ಮಾತೇ?

ತುಂಗರಾಯ: ಇಲ್ಲ ಸಾಕ್ಷಾತ್ ದಳವಾಯಿಗಳದು. ಅಲ್ಲದೆ ಆ ಗುಂಪಿನ ಮುಂಚೂಣಿಯಲ್ಲಿ ಯಾರಿದ್ದಾರೆ ಗೊತ್ತೆ? ರಾಜಮಾತೆಯವರು. ನಿಮ್ಮ ಚಿಕ್ಕಮ್ಮ!

ರಣಧೀರ: ನಿಮ್ಮ ಮಾತನ್ನು ನಂಬಬೇಕೋ? ಕೇಳಿ ನಗಬೇಕೋ? ಸಂಚೆಲ್ಲಿ? ಚಿಕ್ಕಮ್ಮನೆಲ್ಲಿ?

ತುಂಗರಾಯ: ಕಾವೇರಿಯ ನೀರನ್ನು ನೀನಿನ್ನೂ ಕುಡಿದಿಲ್ಲ ನರಸಾ! ಅದು ಕುಡಿಯುವವನಿಗೆ ದಿಟ ಗೊತ್ತಾಗುವುದಿಲ್ಲ.

ರಣಧೀರ: ಆಯಿತು ಆ ಕಾಲಕ್ಕಾಗಿ ನಾನು ಕಾಯುತ್ತೇನೆ.

ತುಂಗರಾಯ: ಅದು ಬೇಗ ಬರ್‍ತಿದೆ. ಇಂದು ಸಂಜೆ ದಳವಾಯಿಗಳು ನಿನ್ನನ್ನು ಭೇಟಿಯಾಗ್ತಾರೆ. ಅದು ಗುಟ್ಟಿನ ಭೇಟಿ. ಸಿದ್ಧನಾಗಿರು. *(ರಣಧೀರ ಬಾಯಿ ತೆಗೆಯುವಷ್ಟರಲ್ಲಿ ಅವನು ಹೊರಟುಹೋಗುವನು.)*

# ದೃಶ್ಯ 10

*(ದೀವಟಿಗೆಯವನೊಡನೆ ವಿಕ್ರಮರಾಯನ ಪ್ರವೇಶ.)*

**ದೀವಟಿಗೆಯವ:** *(ನಿಂತು)* ಓ! ಯಾರಲ್ಲಿ?

**ವಿಕ್ರಮರಾಯ:** ಏನದು?

**ದೀವಟಿಗೆಯವ:** ಅಲ್ಲಿ ಮಹಲ್‌ನಿಂದ ಯಾರೋ ಬರ್ತಿದಾರೆ. ಓಯ್ ಯಾರಲ್ಲಿ?

**ವಿಕ್ರಮರಾಯ:** ನರಸನಿರುವ ಸೌಧವಲ್ಲವೆ? *(ಅಳಗರಾಜಯ್ಯನ ಪ್ರವೇಶ.)*

**ಅಳಗರಾಜಯ್ಯ:** ನೀವು ಇಲ್ಲಿದ್ದೀರಾ?

**ವಿಕ್ರಮರಾಯ:** ಏನು?

**ಅಳಗರಾಜಯ್ಯ:** ಊರಾಚೆ ಮಾವಿನ ತೋಪಿನಲ್ಲಿ ಜನ ಸೇರಿ ನರಸರಾಜನನ್ನು ಬಿಡುಗಡೆ ಮಾಡಿಸುವುದಾಗಿ ಕೂಗಾಡುತ್ತಿದ್ದಾರೆ. ಹಲವರಂತೂ ನಿಮ್ಮ ವಿರುದ್ಧ ಕೆಟ್ಟ ಮಾತುಗಳನ್ನು ಆಡುತ್ತಿದ್ದಾರೆ.

**ವಿಕ್ರಮರಾಯ:** ಆ ಸಂದಣಿಯನ್ನು ಕಂಡು ಸುಮ್ಮನಿದ್ದೀರಾ?

**ಅಳಗರಾಜಯ್ಯ:** ಇಲ್ಲ. ದಳವನ್ನು ಕಳಿಸಿ ಎಲ್ಲರನ್ನೂ ಬಡಿದೋಡಿಸುವ ಆಜ್ಞೆ ಮಾಡಿದೆ. ಅವರ ಮುಂದಾಳನ್ನು ಹಿಡಿದು ತಂದವರಿಗೆ ಬಹುಮಾನವನ್ನು ಸಾರಿದ್ದೇನೆ.

**ವಿಕ್ರಮರಾಯ:** ಆಮೇಲೆ?

**ಅಳಗರಾಜಯ್ಯ:** ಆ ಜನರಾರೂ ಕತ್ತಲಲ್ಲಿ ಕೈಗೆ ಸಿಗಲಿಲ್ಲ. ಎಲ್ಲೋ ಅವಿತುಕೊಂಡರು. ಒಬ್ಬರೂ ಸಿಕ್ಕಲಿಲ್ಲ.

**ವಿಕ್ರಮರಾಯ:** ಆ ತಂಡದ ನಾಯಕ ಯಾರು? ಅವನೆಲ್ಲಿ?

**ಅಳಗರಾಜಯ್ಯ:** ಅವನು ಕಣ್ಮರೆಯಾಗಿದ್ದಾನೆ.

**ವಿಕ್ರಮರಾಯ:** ಅಲ್ಲವೇ ಮತ್ತೆ! ನಿಮ್ಮೆದುರು ಬಂದು ಕೈನೀಡಿದ ಹೊರತು ಬಂಧಿಸುವವರೇ ನೀವು! ನಿಮ್ಮಂಥವರ ಬೆಂಬಲ ನಂಬಿದ ನಾನು ಮೂರ್ಖ, ಮತ್ತೇನಿದೆ ಹೇಳಿ ತೊಲಗು!

**ಅಳಗರಾಜಯ್ಯ:** ರಾಜಮಾತೆಯವರು ನರಸರಾಜನ ಭೇಟಿಗೆಂದು ಮೈಸೂರಿಗೆ ಬಂದ ಹಾಗಿದೆ. ಅವರಿಬ್ಬರೂ ಭೇಟಿಯಾಗುವಂತೆ ಚೆನ್ನ-ರಂಗರು ಸಂಚು ಮಾಡಿದ್ದಾರೆಂದು ತುಂಗರಾಯ ಹೇಳಿದ.

**ವಿಕ್ರಮರಾಯ:** ಮೊದಲು ಅವರಿಬ್ಬರನ್ನೂ ಗುಪ್ತಗೃಹದಲ್ಲಿ ಹಿಂಸಿಸಿ. ಬಾಯಿಬಿಡದಿದ್ದರೆ ಅವರು ಬೆಳಕು ನೋಡುವುದೇ ಬೇಡ.

**ಅಳಗರಾಜಯ್ಯ:** ಅಪ್ಪಣೆ.

**ವಿಕ್ರಮರಾಯ:** ಅವರೂ, ಆ ಜನರ ನಾಯಕನಂತೆ ಕಣ್ಮರೆಯಾದಾರು ಜೋಕೆ!

**ಅಳಗರಾಜಯ್ಯ:** ಆಯಿತು ಸ್ವಾಮಿ. *(ಹೊರಡುವನು. ಅವಿತಿದ್ದ ಇಬ್ಬರು ಮುಂದೆ ಹಾರಿ ಬರುವರು. ಚೆನ್ನ ದೀವಟಿಗೆಯವನಿಗೆ ಏಟು ಕೊಡುವನು. ಪಂಜು ಕೆಳಗೆ ಬೀಳುವುದು. ಅವನು ಕೂಗಾಡುವನು. ಆಗಲೇ ವಿಕ್ರಮನನ್ನು ಹಿಡಿಯಲು ಯತ್ನಿಸಿದ ರಂಗ ಅವನ ಏಟಿಗೆ ಸಿಕ್ಕಿ ಕೆಳಗೆ ಬೀಳುತ್ತಾನೆ. ವಿಕ್ರಮ ಅವನ ಕೊರಳು ಹಿಸುಕುತ್ತಾನೆ. '...ಓ! ಅಳಗರಾಜಾ! ತುಂಗಾ! ನಂಜಾ! ದೇವಾ! ಬನ್ನಿ! ಕೊಲೆಗಾರ!' ಮುಂತಾಗಿ ಕೂಗಾಡುತ್ತಾನೆ. ದೀವಟಿಗೆಯವ ಓಡುತ್ತಾನೆ. ಚೆನ್ನ ಕತ್ತಿ ಝಳಪಳಿಸುವನು. ಕತ್ತಲೆ, ಗಲಭೆ, ಚೆನ್ನ 'ರಂಗಾ, ರಂಗಾ! ನೀನ್ ಕೆಳಗೋ ಮೇಲೊ?' ಎಂದು ಕೂಗುತ್ತಾನೆ. ಉಸುರಿಲ್ಲದ ಕ್ಷೀಣ ಸ್ವರ 'ಕೆಳಗೆ-ಕೆಳಗೆ!' ಎಂದು ಉತ್ತರ-ಖಡ್ಗ ಬೀಸಿದ ಶಬ್ದ.)*

# ದೃಶ್ಯ 11

*(ರಣಧೀರನ ಅರಮನೆ. ತುಂಗರಾಯ ಇದ್ದಾನೆ.)*

**ತುಂಗರಾಯ:** ನರಸರಾಜ ಕುಶಲವೇ? *(ರಣಧೀರ ಹೂಂ, ಎಂಬಂತೆ ತಲೆ ಹಾಕುವನು.)* ಏಕೆ? ಆಯಾಸಗೊಂಡಂತಿದೆ? ಹೌದು ಊಟದ ವೇಳೆಯಾಯಿತು ಹೊರಡಿರಿ. ಅಲ್ಲಿ ಜನ ಕಾಯ್ತಾ ಇದಾರೆ.

**ರಣಧೀರ:** ನಾವು ಇಲ್ಲೇ ಊಟ ಮಾಡ್ತೇವೆ.

**ತುಂಗರಾಯ:** ನಾವು?

**ರಣಧೀರ:** ನೀನು ನಮ್ಮನ್ನು 'ರಾಜರು' ಎಂದ ಮೇಲೆ, ನಾನು 'ನಾವು' ಎನ್ನಬಾರದೋ?

**ತುಂಗರಾಯ:** ಹಾಗೋ ನೀವು ಊಟಕ್ಕೆ ಅಲ್ಲಿಗೇ ಬರಬೇಕು. ಆ ವೇಳೆಗೆ ಇಲ್ಲಿರುವ ಕಸವನ್ನು ತೆಗಿಸಬೇಕು.

**ರಣಧೀರ:** ಅವರ ಕೃಪೆಗೆ ನಾನು ಕೃತಜ್ಞ.

**ತುಂಗರಾಯ:** ತಾವೀಗ ಊಟಕ್ಕೆ...

**ರಣಧೀರ:** ಆಗಲೇ ಹೇಳಿದೆವಲ್ಲ. ಊಳಿಗದವರನ್ನು ಇಲ್ಲಿಗೆ ಕರೆಸಿ.

**ತುಂಗರಾಯ:** ಹಾಗಲ್ಲ...

**ರಣಧೀರ:** ಹಾಗೋ ಹೀಗೋ. ನೀನಿನ್ನು ಹೊರಡಬಹುದು.

**ತುಂಗರಾಯ:** ಇಲ್ಲ. ಈ ಕೊಠಡಿಯನ್ನು ಶುಚಿಗೊಳಿಸಲೇ ಬೇಕು.

**ರಣಧೀರ:** *(ಕತ್ತಿ ಎತ್ತಿ)* ನಾವಿಲ್ಲಿರುವಾಗಲೇ!

**ತುಂಗರಾಯ:** ದಳವಾಯಿಗಳ ಅಪ್ಪಣೆ. *(ಗಲಭೆ, ನಿರೀಶನ ಪ್ರವೇಶ. ತುಂಗರಾಯನನ್ನು ಹಿಡಿಯುವರು.)*

**ರಣಧೀರ:** ನಿರೀಶ! ಏನಿದು? ಈ ಬಿರುಸಿನಲ್ಲಿ?

ನಿರೀಶ: ಇಲ್ಲದಿದ್ದರೆ ತಮಗೆ ಒದಗಬಹುದಾಗಿದ್ದ ಆಪತ್ತುಗಳು ನಿವಾರಣೆಯಾಗುತ್ತಿರಲಿಲ್ಲ.

ರಣಧೀರ: ಅದಕ್ಕಾಗಿಯಂತೂ ನಾನು ಕೃತಜ್ಞ. ಅದಿರಲಿ ನಿನ್ನ ಪಡೆಯ ವಿವರಗಳೇನು?

ನಿರೀಶ: ಇಡೀ ಮೈಸೂರು ಜನತೆ ತಮ್ಮ ಪರವಾಗಿದೆ ಸ್ವಾಮಿ. ಸಕ್ಕ, ಮಲ್ಲ, ಬಸವರು, ಒಂದೊಂದು ದಳದ ಜೊತೆ ಹೋಗಿ ದಳವಾಯಿಗಳ ಮನೆ, ಆಯುಧಾಗಾರಗಳ ಮೇಲೆ ದಾಳಿ ಮಾಡಿದರಂತೆ. ಮಲ್ಲರ ದಳದವರು ಕೋಟೆಯ ಫಿರಂಗಿಗಳನ್ನು ಹಿಡಿಯಲು ಹೊರಟಾಗ ನಾನು ತಮ್ಮ ಬಿಡುಗಡೆಗೆ ಬಂದೆ.

ರಣಧೀರ: ಇಷ್ಟೊಂದು ಜನರನ್ನು ಹೇಗೆ ಹಿಡಿದೆ ನೀನು?

ನಿರೀಶ: ತಮ್ಮ ಮೇಲಿನ ಅಭಿಮಾನ.

ರಣಧೀರ: ನಿನಗೋ? ಜನಗಳಿಗೋ?

ನಿರೀಶ: ಸಂಶಯ ಯಾಕೆ?

ರಣಧೀರ: ಹೌದಲ್ಲವೇ? ಸಂಶಯ ಯಾಕೆ? ಅದರಲ್ಲೂ ನಿನ್ನ ಚಾಕ ಚಕ್ಯತೆಯಲ್ಲಿ!

ನಿರೀಶ: ಇನ್ನು ಸಿಂಹಾಸನದ ಹಾದಿ ನಿರಾತಂಕವಾಗಲಿದೆ.

ರಣಧೀರ: ಸಂತೋಷ. ಅಂತೂ ದಳವಾಯಿ ರಾಜ್ಯವನ್ನ ಹರಿವಾಣದಲ್ಲಿ ಇಟ್ಟು ಕೊಡ್ತೀನಿ ಅಂದ. ನೀನದನ್ನು ಹರಿವಾಣದಲ್ಲಿ ಇಟ್ಟುಕೊಟ್ಟು ಬಿಟ್ಟೆ!

ನಿರೀಶ: ತಮ್ಮ ಸೇವಕ.

ರಣಧೀರ: ನನ್ನ ಜೊತೆಯಲ್ಲಿ ಬರುವುದಿಲ್ಲ ಎಂದವನು ಅಂತೂ ಬಂದೆ. ಅಲ್ಲದೆ ದೊಡ್ಡ ಪಡೆಯನ್ನು ಕಟ್ಟಿರುವೆಯಂತೆ?

ನಿರೀಶ: ನಾನಲ್ಲ ಮಹಾಪ್ರಭು ತಮಗಾಗಿ ಪ್ರಾಣ ತೆರಲು ಸಿದ್ಧವಿರುವ ಮಹಾಜನತೆ.

ರಣಧೀರ: ಅವರನ್ನು ತರಬೇತುಗೊಳಿಸಿದವನು ನೀನು ತಾನೆ? *(ಸಕ್ಕ, ಚೆನ್ನ–ರಂಗರೊಡನೆ ಪ್ರವೇಶ.)*

ಸಕ್ಕ: ಏನು ನರಸ ಕುಶಲ ತಾನೆ?

ನಿರೀಶ: ಸಕ್ಕ! ಯಾರೊಡನೆ ಮಾತಾಡ್ತಿದ್ದಿ?

ಸಕ್ಕ: ತಪ್ಪಾಯ್ತು, ಇವರಿಬ್ಬರನ್ನೂ ಹಿಡಿದು ತಂದಿದೀನಿ.

ರಣಧೀರ: ಇವನು ದಳವಾಯಿಯನ್ನ ಹಿಡಿಯೋಕಂತ ಹೋಗಿದ್ದವನು ಹಿಡಿದು ತಂದಿರೋದು ಇವರನ್ನ.

ಸಕ್ಕ: ಇವರು ಮಾಡಿರೋದು ಅಂಥ ಕೆಲಸ ಸ್ವಾಮಿ.

ರಣಧೀರ: *(ತಲೆ ಬಗ್ಗಿಸುವಂತೆ ನಮಸ್ಕರಿಸುವನು.)*

ನಿರೀಶ: ಏನದು ಹೇಳ್ರಯ್ಯ. *(ರಂಗ ಕಂಕುಳಲ್ಲಿದ್ದ ಗಂಟನ್ನು ಮುಂದಿಡುವನು.)*

ನಿರೀಶ: ಏನಿದೆ ಅದರಲ್ಲಿ? *(ಕತ್ತಿಯ ಮೊನೆಯಿಂದ ನೂಕುವನು. ಗಾಬರಿ ದಳವಾಯಿ ತಲೆ ಕಾಣಿಸುತ್ತದೆ.)*

ನಿರೀಶ: ಯಾರ ಕೆಲಸ ಇದು?

ಸಕ್ಕ: ಈ ಇಬ್ಬರದು.

ನಿರೀಶ: ಹೌದೇನು? ಇದು ನಿಜವೆ?

ಚೆನ್ನ: ಹೌದು ಒಡೆಯ!

ರಣಧೀರ: ಯಾಕೆ ಹೀಗೆ ಮಾಡಿದಿರಿ?

ಚೆನ್ನ: ಇಲ್ದಿದ್ರೆ ನಾವು ಉಳಿಯುತ್ತಿರಲಿಲ್ಲ ಬುದ್ದಿ. ನಿಮ್ ಕಡೇಕಿದೀವೀಂತ ನಮ್ಮಿಬ್ರನ್ನೂವೆ ಕೊಲ್ಲೋಕೆ ಸಂಚು ಮಾಡ್ತಾ ಇದ್ರು.

ರಂಗ: ಇನ್ನು ಸುಮ್ಕಿದ್ರೆ ನಮ್ ತಲೆ ಉರುಳ್ತದೆ ಅಂತ ನಾವೇನೆ ತಲೆ ಉರುಳಿಸಿ ಬಿಟ್ವೋ. *(ಹೊರಗ ಗುಜು ಗುಜು)*

ರಣಧೀರ: ಏನದು ಗಲಭೆ?

ನಿರೀಶ: ದಳವಾಯಿಯ ಮರಣದ ಸುದ್ದಿ ಕೇಳಿ ಜನ ಉಲ್ಲಾಸದಿಂದ ಕೇಕೆ ಹಾಕುತ್ತಿದ್ದಾರೆ.

ರಣಧೀರ: ವಿಕ್ರಮನ ಸಾವು ಅಷ್ಟೊಂದು ಪ್ರಿಯವಾದ ಸಂಗತಿಯೇ?

ನಿರೀಶ: ತಮಗೂ, ಪಟ್ಟಕ್ಕೂ ನಡುವೆ ಅಡ್ಡ ಗೋಡೆಯಾಗಿದ್ದ ವಿಕ್ರಮರಾಯ ಸತ್ತರೆ ಜನರಿಗೆ ಸಂತೋಷವಾಗೋಲ್ವೆ?

**ರಣಧೀರ:** ನಿನ್ನ ತರ್ಕವನ್ನವರು ಚೆನ್ನಾಗಿಯೇ ತಿಳಿದಿದ್ದಾರೆ. (ಚೆನ್ನ-ರಂಗರಿಗೆ) ಇದು ಹೇಗಾಯ್ತು?

**ಚೆನ್ನ:** ನಮ್ಮನ್ನ ಕೊಲ್ಲೋಕೆ ಹೇಳಿದ. ನಾನು ಪಂಜಿನವನ ಮೇಲೆ ಬಿದ್ದೆ.

**ರಂಗ:** ನಾನು ದಳವಾಯಿ ಮೇಲೆ ಬಿದ್ದೆ.

**ಚೆನ್ನ:** ಕತ್ತಲಾಯ್ತು, ಅವನನ್ನ ಬಲವಾಗಿ ಹಿಡಿದುಕೊಂಡು ಕತ್ತಮಕ್ತಿದ್ದ ದಳವಾಯಿ. 'ಹಾ ತುಂಗಾ, ಅಳಗರಾಜಾ,' ಅಂತ ಕಿರಚ್ತಾ ಇದ್ದ.

**ರಂಗ:** ಅಯ್ಯಯ್ಯೋ, ಇನ್ನ ವಸಿ ಒತ್ತಿ ಹಂಗೆ ಆಮುಕಿದ್ರೆ ಪ್ರಾಣನೇ ಓಯ್ತಿತ್ತು.

**ಚೆನ್ನ:** ಇನ್ನು ತಡಿಯಾಕಾಗಾಕಿಲ್ಲಂತ ಕತ್ತಿ ಬೀಸ್ದೆ.

**ರಂಗ:** ಅವನ ಕೈ ನಿಧಾನವಾಗಿ ಬಿದ್ಕೊಂತು. *(ತಿಮ್ಮಾಜಮ್ಮಣ್ಣಿ ಬರುವಳು.)*

**ತಿಮ್ಮಾಜಮ್ಮಣ್ಣಿ:** ಅವನು ಸತ್ತನೆ? *(ತಲೆಯ ಬಳಿ ಸರಿಯುವಳು.)*

**ರಣಧೀರ:** ಬೇಡ ಚಿಕ್ಕಮ್ಮ.

**ತಿಮ್ಮಾಜಮ್ಮಣ್ಣಿ:** ಸತ್ತದ್ದು ನಿಜವೇ? ಇದು ಅವನ ತಲೆಯೇ?

**ರಣಧೀರ:** ನೀವಿಲ್ಲಿ ಕೂರಿ, ಅದನ್ನು ನಾವು ವಿಚಾರಿಸುತ್ತೇವೆ.

**ಚೆನ್ನ:** *(ತಲೆ ತಗ್ಗಿಸುವನು.)*

**ನಿರೀಶ:** ನಿಮಗೆ ಈ ಕೆಲಸ ಮಾಡೂಂತ ಹೇಳ್ದವರ್‍ಯಾರು?

**ರಂಗ:** ಯಾರ್ ಹೇಳೋದು ಬುದ್ಧಿ, ಮುಳ್ ಚುಚ್ತದ್ ಅಂದ ಮ್ಯಾಕೆ ಅದನ್ನ ತೆಗೆಯೋಕೆ ಯಾರನ ಹೇಳ್ಬೇಕಾ?

**ರಣಧೀರ:** ಜಾಣತನ ಸಾಕು. ನೀವು ಕೊಂದಿರೋದು ದಳವಾಯಿಯನ್ನ.

**ಚೆನ್ನ:** ಯಾರಾದ್ರೇನು? ಕತ್ತಿ ತಲೆಮ್ಯಾಗ್ ತಿರ್‍ಗ್ತಾ ಇದ್ರೆ, ಇದು ಯಾರ ಕತ್ತಿಂತ ಮ್ಯಾಲೆ ಕೆಳಗೆ ನೋಡೋಕಾಯ್ತದಾ!

**ರಂಗ:** ಅದೂ ಅಲ್ದೆ ಜನಗಳೆಲ್ಲಾ ಆ ವಯ್ಯನ ಮುಗಿಸ್ಬೇಕಂತ ಕೂಗಾಡ್ತಾ ಇದ್ರು *(ನಿರೀಶನಿಗೆ)* ಇವ್ರೆ ಆವತ್ತು ಚೌಕದಾಗೆ ಜನರನ್ನ ಎತ್ತಿ ಕಟ್ಟಿದರಲ್ಲಾ ಅದಕ್ಕೆ ನಂದೂ ಒಂದು ಕೈ ನೋಡೂಮಾಂತ.

**ರಣಧೀರ:** ನ್ಯಾಯ ನಾಳೆ ನೇಣಲ್ಲಿ ತೂಗಾಡ್ತಾ ಇರುತ್ತೆ. ಸಕ್ಕ! ಇವರನ್ನು ಎಳೆದೊಯ್ಯಿ!

# ದೃಶ್ಯ 12

*(ಒಡ್ಡೋಲಗ. ರಾಜನ ನಿರೀಕ್ಷೆಯಲ್ಲಿ ಎಲ್ಲರೂ ಇದ್ದಾರೆ.)*

**ವಂದಿಮಾಗಧರು:** ಸ್ವಸ್ತಿ ಶ್ರೀಮತ್ಪಶ್ಚಿಮ ರಂಗನಾಥ ಪಾದಾರವಿಂದ ಮಧುಕರಾಯತ ಚಿತ್ತಾ।
ಮತ್ತರಿಪಾಷಾಂಡ ಖಂಡನೋದ್ದಂಡ ದೋರ್ದಂಡ।

ಅರ್ಥಿಜನೇಪ್ಸಿತಾರ್ಥಿದಾನ ಶೌಂಡಾ।
ಅಂಗನಾಜನ ಕುಸುಮ ಕೋದಂಡಾ।
ಬಾಹುದಂಡ ಧೃತ ವಿವಿಧಾಯುಧ ಪ್ರಕಾಂಡಾ।
ಬಿರುದೆಂತೆಂಬರ ಗಂಡಾ।
ಮಿತ್ರಕುಲಕಮಲ ಮಾರ್ತಾಂಡಾ।
ಮೊನೆಗಾರಾ।
ಸುಗುಣ ಗಂಭೀರಾ।
ರಾಜಕಂದರ್ಪಾ।
ವೀರಾ।
ಶೂರಾ।
ಮಲೆಪರ ಗಂಡಾ।
ಅಭಯ ಪ್ರತಾಪಾಧೀಶ್ವರಾ।
ಶರಣಾಗತ ಪರಿಪಾಲಕಾ।
ಸಂಗೀತಲೋಲಾ।
ಸಾಹಿತ್ಯ ರತ್ನಾಕರಾ।
ಸೂರ್ಯ ಚಂದ್ರ ಶಂಖ ಚಕ್ರಾಂಕುಶ ಮಕರ ಮತ್ಸ್ಯಹನೂಮದ್ಗರುಡ ಕಂಠೀರವಾದ್ಯಾನೇಕಬರದಾಂಕಿತಾ ರಾಜಾಧಿರಾಜ ಮಹಾರಾಜಾ।
ಶ್ರೀನ್ಮಹಿಶೂರ ರತ್ನ ಸಿಂಹಾಸನಾಧೀಶ್ವರಾ।
ಶ್ರೀ ಶ್ರೀ ಶ್ರೀ ರಣಧೀರ ಕಂಠೀರವ ನರಸರಾಜ ಒಡೆಯ ಜಯ ಜಯ ಮಹಾಸ್ವಾಮಿ
ವಿಜಯೀಭವ।
ವಿಜಯೀಭವ।

*(ಈ ಉಘ್ಘಡಣೆ ನಡೆಯುತ್ತಿರುವಂತೆ ರಣಧೀರನ ಒಡ್ಡೋಲಗ ಪ್ರವೇಶ.)*

**ರಣಧೀರ:** ನನ್ನ ಪ್ರೀತಿಯ ಜನರೇ, ಸಿಂಹಾಸನ ನಿಷ್ಠ ಸಭಾಸದರೇ. ರಾಜ ನಿಷ್ಠ ಸೈನಿಕರೇ ಮಹಿಷೂರ ನಾಡ ಚರಿತ್ರೆಯ ಈ ಶುಭಾವಸರದಲ್ಲಿ ಇಗೋ ನಿಮಗೆಲ್ಲ ನಮ್ಮ ಅಭಿನಂದನೆಗಳು. ನಮ್ಮ ಪೂಜ್ಯ ತಂದೆಯುವರು, ಅಪ್ಪಾಜಿಯುವರು ಬಿಟ್ಟುಕೊಟ್ಟಿದ್ದ ಈ ಸಿಂಹಾಸನವನ್ನು, ಈ ಕಿರೀಟವನ್ನು, ಈ ರಾಜದಂಡವನ್ನು, ಈ ಹೊಣೆಯನ್ನು ಮತ್ತೆ ನಮಗೆ (ನಿರೀಶನತ್ತ ನೋಡಿ) ಒಪ್ಪಿಸಿದ್ದೀರಿ. ನಿಮ್ಮ ಪ್ರೀತಿ, ವಿಶ್ವಾಸ, ಅಭಿಮಾನಗಳಿಗೆ ನಾವು ಮಾರುಹೋಗಿದ್ದೇವೆ.

ರಾಜ್ಯವೆಂಬುದು ಈಗ ನಮ್ಮ ಮಲ್ಲಸಾಲೆ. ನಮ್ಮ ಪಟ್ಟು ಕಸರತ್ತುಗಳೀಗ ರಾಜ್ಯ ಸೇವೆಗೆ ಮುಡಿಪು. ಸಂಚುಗಾರರ ಹೂಟವನ್ನು ಅರಿತು ಅವರನ್ನು ಮೊಳಕೆಯಲ್ಲಿ ಚಿವುಟಿ ತೆಗೆಯಬೇಕಿದೆ. ಆಗಲೇ ನಾಡು ಸುಭದ್ರ, ಜನ ಸುರಕ್ಷಿತ.

ಈವರೆಗೆ ರಾಜ್ಯವನ್ನು ಕಾಯ್ದವರು ದಳವಾಯಿ ವಿಕ್ರಮರಾಯರು. ಮಹಾ ಮುತ್ಸದ್ದಿಗಳು. ಅವರ ನಾಡಭಕ್ತಿಯಲ್ಲಿ ಕಿಂಚಿದೂನವಿಲ್ಲ. ಶತ್ರುಗಳ ಅಪಾಯದಿಂದ ನಮ್ಮೆಲ್ಲರನ್ನೂ ಪಾರು ಮಾಡುತ್ತ ಬಂದವರು ಅವರು.

ಅಂಥ ಸಿಂಹಾಸನ ಸೇವಕರು ದುರ್ಮರಣಕ್ಕೀಡಾಗಿದ್ದಾರೆ. ಅವರು ಹುತಾತ್ಮರು. ಜೀವವನ್ನು ನಾಡಿಗಾಗಿ ತೇದವರು. ರಾಜ್ಯದ ಸಕಲ ಮರ್ಯಾದೆಗಳು ಅವರಿಗೆ ಸಲ್ಲಬೇಕು. ಅವರ ನಾಡ ಸೇವೆಗಾಗಿ ನಾವು ಅವರಿಗೆ ಋಣಿಗಳಾಗಿ ಅವರ ಸಾವಿಗೆ ಮರುಗಿ ಕಂಬನಿ ಸುರಿಸಬೇಕಾಗಿದೆ; ಅವರ ಆತ್ಮಕ್ಕೆ ಶಾಂತಿ ಕೋರಬೇಕಾಗಿದೆ.

**ಜನರು:** *(ಗುಜುಗುಜು)*

**ನಿರೀಶ:** ಸದ್ದು!

**ರಣಧೀರ:** ಹೌದು! ನಿಮ್ಮ ಅಪೇಕ್ಷೆ ನಮಗೆ ತಿಳಿದಿದೆ. ವಿಕ್ರಮರಾಯರ ಸಾವಿಗೆ ಕಾರಣರಾದವರ ಬಗ್ಗೆ ನಿಮ್ಮ ತಳಮಳ...

**ಜನರು:** ಹೌದು! ಹೌದು!

**ರಣಧೀರ:** ಅವರನ್ನ ಕರೆತರಲಿ. *(ಜನರ ನಡುವಿನಿಂದ ಸಂಕೋಲೆಗಳಲ್ಲಿರುವ ಚೆನ್ನ-ರಂಗರು ಬರುತ್ತಾರೆ.)*

ಜನರು: *(ಕೋಲಾಹಲ)* ಅನ್ಯಾಯ ಅನ್ಯಾಯ.

ನಿರೀಶ: ಸಕ್ಕ, ಬಸವ ಅವರನ್ನ ಹಿಡೀರಿ. ಸದ್ದು! ಶಾಂತರಾಗಿ.

ರಣಧೀರ: ನನ್ನ ಪ್ರೀತಿಯ ಜನರು ಶಾಂತರಾಗಿಬೇಕು. ಈ ಇಬ್ಬರು ಊಳಿಗದ ಆಳುಗಳು ದಳವಾಯಿಗಳನ್ನು, ಸಿಂಹಾಸನದ ರಕ್ಷಕರನ್ನು ಇರಿದು ಕೊಂದಿದ್ದಾರೆ. ರಾಜ್ಯವನ್ನು ಅನಾಥವಾಗಿಸುವ ಸಂಚಿನಲ್ಲಿ ಪಾಲುಗೊಂಡಿದ್ದಾರೆ. ದೈವಕೃಪೆಯಿಂದ ರಾಜ್ಯದಲ್ಲಿ ಅರಾಜಕ ಕ್ಷಣಗಳು ಬೆಳೆಯಲಿಲ್ಲ. ಆದರೆ...ಆದರೆ ಇಂಥ ಅಪರಾಧ ಎಂದೂ ಸಲ್ಲ. ಇದನ್ನು ನನ್ನ ಜನತೆ ತಿಳಿಯಬೇಕು. ಅವರಿಗೆ ಅದನ್ನು ತಿಳಿಸಬೇಕು. ಹಾಗೆಂದೇ ಈ ಇಬ್ಬರನ್ನು...

ಚೆನ್ನ-ರಂಗ: ಬುದ್ಧಿ...

ನಿರೀಶ: ಅಪರಾಧಿಗಳು ಮಾತನಾಡುವಂತಿಲ್ಲ.

ಚೆನ್ನ-ರಂಗ: ನಾವು ಅಪರಾಧ ಮಾಡಿಲ್ಲ.

ನಿರೀಶ: ಹಾಗನ್ನುವುದು ರಾಜದ್ರೋಹ. ಬಾಯಿ ಮುಚ್ಚಿ.

ರಣಧೀರ: ...ನಾವು ಶೂಲಕ್ಕೆ ಹಾಕಲು ಆಜ್ಞಾಪಿಸುತ್ತೇವೆ.

*(ಕೋಲಾಹಲ. ಸೈನಿಕರು ಜನರನ್ನು ತಡೆಯುತ್ತಾರೆ. ಚೆನ್ನ-ರಂಗರು ರಂಗದ ಮೇಲೆ ಜನರ ಮುಂದೆ ಇರುವಂತೆ ದೃಶ್ಯ ಮುಕ್ತಾಯ.)*

# ಅಂಕೆತಪ್ಪಿದ ಆರ್ಥರೋ ಊಯಿ

(The Resistiable Rise of Arthuro Ui)

ಬರ್ಟೋಲ್ಟ್ ಬ್ರೆಕ್ಟ್ (1941)
ರಾಲ್ಫ್ ಮನ್‌ಹೀಮ್ (1958)–ಇಂಗ್ಲಿಷ್
ಕೆ.ವಿ.ನಾರಾಯಣ (1992) ಕನ್ನಡ

# ಲೇಖಕನ ಮಾತು

ಬರ್ಟೋಲ್ಟ್ ಬ್ರೆಕ್ಟ್ ಕನ್ನಡ ರಂಗಭೂಮಿಯಲ್ಲಿ ಕಾಣಿಸಿಕೊಂಡದ್ದು ೧೯೭೦-೭೧ರ ಸುಮಾರಿಗೆ.ರಾಷ್ಟ್ರೀಯ ನಾಟಕ ಶಾಲೆಯ ತಂಡದವರು ತ್ರೀ ಪೆನ್ನಿ ಅಪೇರಾ ಮತ್ತು ಕಕೇಶಿಯನ್ ಚಾಕ್ ಸರ್ಕಲ್ ನಾಟಕಗಳ ಹಿಂದಿ ರೂಪಗಳನ್ನು ಬೆಂಗಳೂರಿನ ರವೀಂದ್ರ ಕಲಾಕೇತ್ರದಲ್ಲಿ ಪ್ರಸ್ತುತ ಪಡಿಸಿದರು. ಆ ನಾಟಕಗಳಲ್ಲಿ ನಟಿಸಿದ ಕೆಲವು ನಟರು ಭಾರತದ ಬಹುಶ್ರೇಷ್ಠ ನಟನಟಿಯರಾಗಿ ಮುಂದಿನ ದಶಕಗಳಲ್ಲಿ ಬೆಳೆದರು. ಕನ್ನಡದ ಬಿ.ಜಯಶ್ರೀಯವರೂ ಆ ತಂಡದಲ್ಲಿದ್ದ ನೆನಪು. ಬಳಿಕ ಬ್ರೆಕ್ಟ್ ನ ನಾಟಕಗಳು ಬಗೆಬಗೆಯಲ್ಲಿ ಕನ್ನಡ ರಂಗಭೂಮಿಯಲ್ಲಿ ಮೈತಳೆಯ ತೊಡಗಿದವು. ಅದೆಲ್ಲ ಈಗ ಕತೆ. ಬ್ರೆಕ್ಟನ ನಾಟಕಗಳು ಮತ್ತು ಸಿದ್ಧಾಂತಗಳ ಮೋಹದ ಮೂಲಕವೇ ರಂಗಭೂಮಿಗೆ ಬಂದ ಗೆಳೆಯ ಸಿ.ಜಿ.ಕೃಷ್ಣಸ್ವಾಮಿ ೧೯೯೦ರಲ್ಲಿ 'ದ ರೆಸಿಸ್ಟಬಲ್ ರೈಸ್ ಆಫ್ ಅರ್ಥರೋ ಊಯಿ' ಎಂಬ ಬ್ರೆಕ್ಟ್ ನಾಟಕವನ್ನು ಕನ್ನಡಕ್ಕೆ ತರಲು ಸೂಚಿಸಿದರು. ಅದಕ್ಕೆ ಕೆಲವು ವಾರಗಳ ಹಿಂದೆ ಬೆಂಗಳೂರಿನ ಕೆಲವು ಮಿತ್ರರು ಅದರ ಇಂಗ್ಲಿಷ್ ಆವೃತ್ತಿಯನ್ನು ಅಭಿನಯಿಸಿದ್ದನ್ನು ನಾನು ನೋಡಿದ್ದೆ. ಹಾಗಾಗಿ ಆ ನಾಟಕವನ್ನು 'ಅನುವಾದಿಸಲು' ತಲೆದೂಗಿದೆ. ಆದರೆ ದಿನಗಳು ಕಳೆದರೂ ನಾನು ಸುಮ್ಮನೆ ಇದ್ದುದನ್ನು ಕಂಡು ಕೆಂಡವಾದ ಸಿಜಿಕೆ ಹಲವು ಬಗೆಗಳಲ್ಲಿ ನನ್ನನ್ನು ಚುಚ್ಚಿ ಕೆಲಸ ಮುಗಿಯುವಂತೆ ಮಾಡಿದರು. ಆ ನಾಟಕವನ್ನು ರವೀಂದ್ರ ಕಲಾಕ್ಷೇತ್ರದ ಮೊಗಶಾಲೆಯಲ್ಲಿ ಗೆಳೆಯರೆದುರಿಗೆ ಓದಿದಾಗ ಅಷ್ಟೇನೂ ಉತ್ಸಾಹ ಹುಟ್ಟಲಿಲ್ಲ. ಎಲ್ಲೋ ಶಿಕಾಗೋ ನಗರದಲ್ಲಿ ನಡೆಯುವ ಈ ಕತೆಯ ಪಾತ್ರಗಳು ಕೇಳಿದವರಿಗೆ ದೂರವೇ ಉಳಿದವೆಂದು ಸಿಜಿಕೆಗೆ ಅನ್ನಿಸಿ ನಾಟಕವನ್ನು ರೂಪಾಂತರಿಸಲು ಹೇಳಿದರು. ಆಗಲೇ ಈ 'ಅಂಕೆ ತಪ್ಪಿದ ಶಂಕರಲಾಲ್' ಹುಟ್ಟಿದ್ದು. ಇಲ್ಲಿ ನಾಟಕದ ಮಾತುಗಳು ಮೂಲದಲ್ಲಿ ಇದ್ದಂತೆಯೇ ಇವೆ. ಆದರೆ ಕತೆ ನಡೆಯುವ ಸ್ಥಳ ಗೊತ್ತಿಲ್ಲ. ಏನೇ ಆಗಿದ್ದರೂ ಅದಕ್ಕೆ ಈಗ ನಮ್ಮೊಡನೆ ಇಲ್ಲದ ಸಿಜಿಕೆಯೇ ಹೊಣೆ. ಕೆಲವು ತಿಂಗಳುಗಳಲ್ಲಿ ಇದು ಸಿಜಿಕೆ ನಿರ್ದೇಶನದಲ್ಲಿ ರಂಗಭೂಮಿಯಲ್ಲೂ ಕಾಣಿಸಿಕೊಂಡಿತು.ಇದಾದ ಕೆಲವು ವರ್ಷಗಳ ಬಳಿಕ ಮೈಸೂರಿನ ಗೆಳೆಯ ಲಿಂಗದೇವರು ಹಳೆಮನೆಯವರೂ ಕೂಡ ಇದರ ಕನ್ನಡ ರೂಪವನ್ನು ಸಿದ್ಧಡಿಸಿದರು. ಅದೂ ಕೂಡ ರಂಗದ ಮೇಲೆ ಕಾಣಿಸಿಕೊಂಡಿದೆ.

ಬ್ರೆಕ್ಟ್ ಈ ನಾಟಕವನ್ನು ಅಮೆರಿಕ ಸಂಸ್ಥಾನವು ಕಳೆದ ಶತಮಾನದ ಮೂರನೆಯ ದಶಕದಲ್ಲಿ ಎದುರಿಸಿದ ಆರ್ಥಿಕ ಸಂಕಷ್ಟ(ದಿ ಗ್ರೇಟ್ ಡಿಪ್ರೆಶನ್)ದ ಸಂದರ್ಭವನ್ನು ಗಮನದಲ್ಲಿರಿಸಿಕೊಂಡು ಬರೆದಿದ್ದಾನೆ. ಮಾರುಕಟ್ಟೆಯ ಶಕ್ತಿಗಳ ನಿಯಂತ್ರಣವನ್ನು

ಕೈಗೆ ತೆಗೆದುಕೊಂಡ ಮಾಫಿಯಾದ ಕಾರ್ಯತಂತ್ರ ಮತ್ತು ಅದರ ಎದುರು ಮಂಡಿಯೂರಿ ತಲೆಬಾಗಿದ ಬಂಡವಾಳಶಾಹಿಯ ಚಿತ್ರಣ ಅವನ ಗುರಿಯಾಗಿದೆ. ಈ ನಾಟಕವು ಆರ್ಥಿಕ ಉದಾರೀಕರಣದ ಮೊದಲ ಹೆಜ್ಜೆ ಇಟ್ಟ ವರುಷದಲ್ಲಿ ಕನ್ನಡಕ್ಕೆ ಬಂತು. ಆದರೆ ಅಂದಿಗಿಂತಲೂ ಇಂದು ತನ್ನ ಸಾಧ್ಯತೆಯನ್ನು ಹೊಂಗೆಡಹಲು ಸಮರ್ಥವಾಗಿದೆ. ಏಕೆಂದರೆ ಈಗ ಎದುರಾಗಿರುವ ಮಾನವನಿರ್ಮಿತ ಬರಗಾಲದ ಕಂಗಾಲು ಸ್ಥಿತಿಯನ್ನು ಈ ನಾಟಕ ಮಂಡಿಸುತ್ತದೆ.

ಗೆಳೆಯ ರವಿಕುಮಾರ್ ನಾಲ್ಕೈದು ವರುಷಗಳ ಹಿಂದೆಯೇ ಇದನ್ನು ಅಚ್ಚುಹಾಕುವ ಇರಾದೆ ಮುಂದಿಟ್ಟರು. ಹಸ್ತಪ್ರತಿ ನನ್ನಲ್ಲಿ ಇರಲಿಲ್ಲ. ಅದನ್ನೂ ಅವರೇ ಎಲ್ಲಿಂದಲೋ ಪಡೆದುಕೊಂಡು ಈಗ ಪುಸ್ತಕ ರೂಪದಲ್ಲಿ ಹೊರತರುತ್ತಿದ್ದಾರೆ. ಇದಕ್ಕೆ ಅವರೇ ಹೊಣೆ. ಬ್ರೆಕ್ಟ್ ಹುಟ್ಟಿ ನೂರು ವರುಷ ತುಂಬಿದ ಸಂದರ್ಭದಲ್ಲಿ ಸಮುದಾಯದವರು ಹಮ್ಮಿಕೊಂಡಿದ್ದ ವಿಚಾರ ಸಂಕಿರಣದಲ್ಲಿ ನಾನು ಆಡಿದ ಮಾತುಗಳನ್ನು 'ಸಂಕುಲ' ಪತ್ರಿಕೆಯ ಸುರೇಶ್ ಮತ್ತು ವಿಜಯಮ್ಮ ಲೇಖನ ರೂಪದಲ್ಲಿ ಪ್ರಕಟಿಸಿದ್ದರು. ಅದನ್ನೇ ಇಲ್ಲಿ ಮರಳಿ ಅಚ್ಚು ಮಾಡಲಾಗಿದೆ. ಅದನ್ನು ಒದಗಿಸಿದ ವಿಜಯಮ್ಮನವರಿಗೆ ಶರಣು. ರವಿಕುಮಾರ್ ತಮ್ಮ ಹಲವು ಸಾಹಸಗಳ ಜೊತೆಗೆ ಇದನ್ನು ಸೇರಿಸಿಕೊಂಡದ್ದಕ್ಕೆ ಅವರಿಗೂ ಥ್ಯಾಂಕ್ಸ್.

**ಕೆ.ವಿ. ನಾರಾಯಣ**

## ಪ್ರವೇಶ

*(ಉದ್ಘೋಷಕ ತೆರೆಯ ಮುಂದೆ ಬರುತ್ತಾನೆ, ತೆರೆಯ ಮೇಲೆ ದಪ್ಪಕ್ಷರದ ಭಿತ್ತಿಪತ್ರಗಳಿವೆ. "ಬಂದರು ಸಬ್ಸಿಡಿ ದುರ್ವ್ಯವಹಾರದಲ್ಲಿ ಹೊಸ ಬೆಳವಣಿಗೆ", "ಡಾಗ್ಸ್‌ಬರೋ ಉಯಿಲಿನ ರಹಸ್ಯ", "ಗೋಡೌನ್ ಬೆಂಕಿ ವಿಚಾರಣೆಯಲ್ಲಿ ರೋಮಾಂಚಕ ತಿರುವು", "ಗೆಳೆಯರಿಂದಲೇ ಗೂಂಡಾ ಅರ್ನೆಸ್ಟೋ ರೋಮಾನ ಕೊಲೆ", "ಸಂಚು ಹೂಡಿ ಡಲ್‌ಫೀಟ್ ಕೊಲೆ", "ಸಿಸಿರೋ ಗೂಂಡಾಗಳ ವಶ". ತೆರೆಯ ಹಿಂದೆ ಜನಪ್ರಿಯ ನೃತ್ಯಸಂಗೀತ)*

**ಉದ್ಘೋಷಕ:** ಸ್ನೇಹಿತರೇ, ನಾವು ಆಡೋ ನಾಟಕ ಈ ರಾತ್ರಿ
ಹಿಂದಿನ ಸಾಲಿನೋರು ಗಲಾಟೆ ಮಾಡಬೇಡ್ರಿ
ಅಮ್ಮಾ ನೀವೊಬ್ರೆ ನೋಡಿಬಿಟ್ಟರೆ ಸಾಕಾ
ಭಾರಿ ಐತಿಹಾಸಿಕ, ಗೂಂಡಾ ನಾಟಕ.
ಎಷ್ಟೋ ವಿಷಯ ತರ್ತಿದೀವಿ, ಇದೇ ಮೊದಲು
ಬಂದರುಕಟ್ಟೆ ಸಾಲ,ಅದರ ಗೋಲ್ಮಾಲು,
ಡಾಗ್ಸ್‌ಬರೋ ಉಯಿಲು ಬರೆದದ್ದು; ತಪ್ಪೊಪ್ಪಿದ್ದು;
ಶೇರುಬೆಲೆ ಗೋತಾ, ಊಯಿ ಮಾತ್ರ ಬೆಳೆದದ್ದು
ಗೌಡೌನಿಗೆ ಬೆಂಕಿಯ ವಿಚಾರಣೆ, ಅಬ್ಬಬ್ಬಾ.
ಡಲ್‌ಫೀಟ್ ಕೊಲೆ, ನ್ಯಾಯಾ ಗೋತಾ, ಇದೇ ಇನ್ನೂ ಹಬ್ಬ
ರೌಡಿ ಜಗಳ, ಅರ್ನೆಸ್ಟೋ ರೋಮಾ ಕೊಲೆಯಾದದ್ದು,
ಗೂಂಡಾಗಳು ಸಿಸಿರೋ ನಗರ ಹಿಡಕೊಂಡದ್ದು
ಇದೆಲ್ಲಾ ತೋರಿಸ್ತಾರೆ, ನಮ್ಮ ನಟರು ಅದ್ಭುತ
ಭಾರಿ ಗೂಂಡಾಗಳು ಇದಾರೆ ಕೊಂಚ ಜಾಗ್ರತೆ
ಸತ್ತವರು, ಬದುಕಿರೋರು, ಕಥೆಯಾದವರು
ಕಥೆಯಾಗೋರು, ಹುಟ್ಟಾ ಗೂಂಡಾಗಳಾಗಿದ್ದವರು,
ಹೇಗೋ ಏನೋ ಗೂಂಡಾಗಳಾಗಿಬಿಟ್ಟವರು ಕೂಡ
ಇಲ್ಲೇ ಇದಾನಲ್ಲ ಸಜ್ಜನ ಡಾಗ್ಸ್‌ಬರೋ, ಕೊಂಚ ಜಡ.
(ಡಾಗ್ಸ್‌ಬರೋ ತೆರೆಯ ಮುಂದೆ ಬರುತ್ತಾನೆ.)
ಕೂದಲು ಮಾತ್ರ ಬೆಳ್ಳಗೆ. ಹೃದಯ ಅನ್ನೋದು ಕರ್ರಗೆ

ಅಯ್ಯಾ ಭ್ರಷ್ಟ ಮುದುಕ ಸಾಕಿನ್ನು ನಡಿ ಒಳಗೆ
*(ಡಾಗ್ಸ್‌ಬರೋ ಹಿಂದಕ್ಕೆ ಸರಿಯುವನು.)*
ಮುಂದಿನವನು ನಮ್ಮ ಪಟ್ಟೀಲಿ, ಜಿವೋಲಾ
*(ಜಿವೋಲಾ ತೆರೆ ಮುಂದೆ ಬರುತ್ತಾನೆ)*
ಹೂ ವ್ಯಾಪಾರಿ. ನಾಲಿಗೆ ಇವನದು ಬಲು ಸಡಿಲ
ಆಡು ಆನೆ ಮಾಡುತ್ತಾನೆ. ಸುಳ್ಳಿಗೆ ಸೊಟ್ಟಗಾಲು
ನೀವೇ ನೋಡಿ. ಎದುರಿಗೆ ಇದಾನಲ್ಲ ಅವನ ಕಾಲು
*(ಜಿವೋಲಾ ಕುಂಟುತ್ತ ನಡೆಯುವನು)*
ಮುಂದೆ ಇಮ್ಯಾನುಯಲ್ ಗಿರಿ, ನಕಲಿಶ್ಯಾಮ
ನೋಡೋಣ ಬಾರಯ್ಯ, ಏನೀ ವೇಷ ರಾಮ ರಾಮ
*(ಗಿರಿ ತೆರೆ ಮುಂದೆ ಬರುತ್ತಾನೆ, ನೋಟಕರಿಗೆ ಕೈ ಬೀಸುವನು)*
ಇವನಂಥ ಕೊಲೆಗಾರ ಹುಟ್ಟಿಲ್ಲ ಈವರೆಗೆ
ಆಯ್ತು ನಡಿ
*(ಗಿರಿ ಹೋಗುವನು)*
ಜನತೆಯ ಶತ್ರು ನಂಬರ್ ಒನ್ ಕೊನೆಗೆ
ಬರ್ತಿದಾನೆ ನೋಡಿ ಇವನೆ ಅರ್ಥರೋ ಊಯಿ ಇಲ್ಲ
ಗೂಂಡಾಗಳಲ್ಲಿ ಇವನ್ನ ಬಿಟ್ಟರೆ, ಶಿವಾಯಿ
ನಮ್ಮ ದಡ್ಡತನ, ನಮ್ಮ ದೌರ್ಬಲ್ಯ ಇವೆಲ್ಲ
ಬಳಸಿ ಬೆಳೀತಾನೆ, ಇಲ್ಲದಿದ್ದರೆ ಇವನಿಲ್ಲ.
*(ಅರ್ಥರೋ ಊಯಿ ತೆರೆಯ ಮುಂದೆ ಬಂದು ನೇರವಾಗಿ ಪುಟ್ ಲೈಟಿಗೆ ಹೋಗುವನು)*
ಮೂರನೆ ರಿಚರ್ಡ್ ಹಾಗೆ ಕಾಣೋದಿಲ್ವಾ,
ಅವನ ಕಥೆ ನೀವೆಲ್ಲ ಕೇಳಿದೀರಲ್ವಾ,
ಬಿಳಿ ಮತ್ತು ಕೆಂಪು ಗುಲಾಬಿ ಹೂಗಾಗಿ
ರಕ್ತ ಸುರಿಸಿ ಹೋರಾಡಿದ್ದು–ದಡ್ಡರಾಗಿ
ಇದೆಲ್ಲ ತಿಳಿದೇ ನಮ್ಮ ಕಂಪನಿಯವರು
ಖರ್ಚು ಮಾಡಿ ರೂಪಾಯಿ ಸಾವಿರಾರು,
ಕಣ್ಣಿಗೆ ಹಬ್ಬ ಆಗೋ ಹಾಗೇ ತೋರಿಸ್ತಾರೆ.
ಈ ಗೂಂಡಾನ ಚಾಲಾಕನ್ನ ಮೆರಸ್ತಾರೆ.
ಆದರೆ ಮುಂದೆ ನೀವು ನೋಡೋದೆಲ್ಲ ಸತ್ಯ,
ಹೊಸದೇನಿಲ್ಲ. ಇಲ್ಲಿಲ್ಲದ್ದು ಮಿಥ್ಯ.
ರೌಡಿಗಳ ನಾಟಕ. ಇಗೋ ನಾವಾಡೋದು
ಇಡೀ ಜಗತ್ತಿಗೆ ಈಗಾಗಲೇ ಗೊತ್ತಿರೋದು.
*(ಸಂಗೀತ ವೃದ್ಧಿಯಾಗುವುದು. ಜತೆಗೆ ಮಶಿನ್ ಗನ್‌ಗಳ ಸದ್ದು ಬೆರೆಯುತ್ತದೆ. ಉದ್ಘೋಷಕ ಹೆಮ್ಮೆಯಿಂದ ಹಿಂದೆ ಸರಿಯುತ್ತಾನೆ.)*

## ದೃಶ್ಯ ೧ ಎ

*(ಐದು ಜನ ವ್ಯಾಪಾರಿಗಳ ಪ್ರವೇಶ. ಇವರು ಕಾಲಿಫ್ಲವರ್ ಟ್ರಸ್ಟ್‌ನ ನಿರ್ದೇಶಕರು.)*

**ಫ್ಲೇಕ್:** ಕಾಲ ಕೆಟ್ ಹೋಯ್ತು.

**ಕ್ಲರ್ಕ್:** ಮಾರ್ಕೆಟ್‌ಗೆ ಹೋಗುವಾಗ ಜೇಬಲ್ಲಿ ಇದ್ದದ್ದು ಅಲ್ಲಿ ಕಳಕೊಂಡು ಈಗ ಹೊಟ್ಟೆಪಾಡಿಗೆ ಮೋರಿ ಕೆರಿಯೋ ಗತಿ ಥರ ಇದೆ ಈ ಶಿಕಾಗೋ.

**ಕಾರೂಥರ್:** ಮೊನ್ನೆ ಗುರುವಾರ ಜೋನ್ಸ್ , ನನ್ನನ್ನ ಮತ್ತೆ ಇನ್ನೂ ಎಂಬತ್ತು ಜನರನ್ನ ಬರೋ ಸೋಮವಾರ ಊಟಕ್ಕೆ ಬನ್ನಿ ಅಂತ ಕರೆದರು. ನಂಬಿಕೊಂಡು ನಾವೇನಾದ್ರು ಅಲ್ಲಿಗೆ ಹೋದ್ರೆ ಅಲ್ಲಿ ಅವರ ಆಸ್ತಿ ಹರಾಜು ಹಾಕೋನು ಮಾತ್ರ ಇರತಾನೆ. ಮೊನ್ನೆ ಭಾರೀ ಶ್ರೀಮಂತ, ಇವತ್ತು ಬೀದಿ ಭಿಕಾರಿ. ಚಿಟಕಿ ಹೊಡೆಯೋ ಅಷ್ಟರಲ್ಲಿ ಎಲ್ಲ ಅದಲೂಬದಲು. ತರಕಾರಿ ತುಂಬಿದ ಹಡಗು ನದೀಲಿ ಈಗಲೂ ಓಡಾಡ್ತಿವೆ, ಆದರೇನು? ಕೊಳ್ಳುವವರೇ ಇಲ್ಲ.

**ಬುಚರ್:** ಹಾಡು ಹಗಲಲ್ಲಿ ಕತ್ತಲು ಕವಿದಹಾಗಿದೆ.

**ಮಲ್ಬರಿ:** ರಾಬರ್ಟ್ಸ್ ಮತ್ತೆ ಕ್ಲೈವ್ ಅವರ ಆಸ್ತಿ ಹರಾಜಿಗೆ ಬಂದಿದೆ.

**ಕ್ಲರ್ಕ್:** ನೂರಾರು ವರ್ಷದಿಂದ ಹಣ್ಣು ವ್ಯಾಪಾರ ಮಾಡುತ್ತಿದ್ದ ವೀಲರ್ ಕಂಪನಿ ಇವತ್ತು ದಿವಾಳಿ.

**ಫ್ಲೇಕ್:** ಡಿಕ್, ಹ್ಯಾವ್ಲೆಕ್ ಗೆರೇಜು ಮುಚ್ಚುತ್ತಿದ್ದಾರೆ.

**ಕಾರೂಥರ್:** ಶೀಟ್ ಎಲ್ಲಿ?

**ಫ್ಲೇಕ್:** ಪುರುಸೊತ್ತೇ ಇಲ್ಲ. ಬ್ಯಾಂಕಿಂದ ಬ್ಯಾಂಕ್‌ಗೆ ಓಡಾಡ್ತ ಇದ್ದಾರೆ.

**ಕ್ಲರ್ಕ್:** ಏನು? ಶೀಟ್? *(ಮೌನ)* ಅಂದರೆ ಈ ಊರಲ್ಲಿ ನಮ್ಮ ವ್ಯಾಪಾರ ಇನ್ನ ನಡೆದ ಹಾಗೇನೇ!

ಬುಚರ್: ಇರಲಿ ಇರಲಿ... ನಾವಿನ್ನೂ ಮುಳುಗಿ ಹೋಗಿಲ್ಲ, ಕೊಂಚ ನಗ್ರಿ

ಮಲ್ಬರಿ: ಇಂಥ ಸ್ಥಿತೀಲೂ.

ಬುಚರ್: ಯಾಕಿಷ್ಟು ಮಂಕಾಗಿದೀರಿ? ಈ ಊರಲ್ಲಿ ತರಕಾರಿ ವ್ಯಾಪಾರದ ಬುಡ ಇನ್ನೂ ಭದ್ರವಾಗಿದೆ. ಕಾಲ ಒಳ್ಳೇದಿರಲಿ ಕೆಟ್ಟದಿರಲಿ, ಇಲ್ಲಿರೋ ನಲವತ್ತು ಲಕ್ಷ್ ಜನಕ್ಕೆ ತಾಜಾ ತರಕಾರಿ ಬೇಕೇ ಬೇಕು ಬಿಡಿ. ನಾವು ಪಾರಾಗ್ತೀವಿ.

ಕಾರೂಥರ್: ಅಂಗಡಿ ಮುಂಗಟ್ಟಲ್ಲಿ ವ್ಯಾಪಾರ ಹೇಗಿದೆ?

ಮಲ್ಬರಿ: ಕೆಟ್ಟದಾಗಿದೆ. ಗಿರಾಕಿ ಕೊಳ್ಳೋದು ಅರ್ಧ ಕೋಸು. ಅದೂ ಸಾಲ.

ಕ್ಲರ್ಕ್: ನನ್ನ ಹೂಕೋಸೆಲ್ಲ ಕೊಳೀತಾ ಇದೆ.

ಫ್ಲೇಕ್: ಅಲ್ಲ, ಹೊರಗೆ ಲಾಬೀಲಿ ಒಬ್ಬ ಕಾಯ್ತಿದ್ದಾನೆ. ಕೊಂಚ ವಿಚಿತ್ರ ಅದಕ್ಕೇ ಹೇಳ್ತಿದೀನಿ. ಹೆಸರು ಊಯೀ....

ಕ್ಲರ್ಕ್: ಗೂಂಡಾ?

ಫ್ಲೇಕ್: ಹೌದು. ಸಾಕ್ಷಾತ್ ಅವನೇ. ನಮ್ಮ ಕೊಳೆತ ತರಕಾರಿ ವಾಸನೇ ಹಿಡಿದಿದಾನೆ. ಇದಕ್ಕೆಲ್ಲ ಒಂದೇ ದಾರಿಯಂತೆ. ಬೇರೆ ಯಾರಿಂದಲಾದರೂ ತರಕಾರಿ ಕೊಂಡು, ಮಾರಿದರೆ ನೆಟ್ಟಗಾಗೊಲ್ಲಾಂತ ಅಂಗಡಿಯವರನ್ನ ಬೆದರಿಸ್ತಾನಂತೆ. ಹಾಗಂದ ಅವರ ಬಲಗೈ ಭಂಟ, ಆರ್ನೆಸ್ಟೋ ರೋಮಾ. ಆಗ ನಮ್ಮ ವ್ಯಾಪಾರ ಕುದುರಿ ಎರಡು ಪಟ್ಟಾಗುತ್ತಂತೆ. ಯಾಕಂದ್ರೆ ಅಂಗಡಿಯವರು ತರಕಾರಿ ಕೊಳ್ಳತಾರೇ ಹೊರತು ನೇಣುಹಗ್ಗಾ ಅಲ್ಲ ಅಂತಾನೆ. *(ವಿಷಾದದ ನಗೆ...)*

ಕಾರೂಥರ್: ತಲೆ ತಿರುಕ.

ಮಲ್ಬರಿ: *(ಗಹಗಹಸಿ ನಗುತ್ತ)* ಇನ್ನೇನು ಬಾಂಬು, ಮಷಿನ್‌ಗನ್ ಹೊಸಾ ತರಹ ವ್ಯಾಪಾರ! ನಮ್ಮ ಟ್ರಸ್ಟಲ್ಲಿ ಹೊಸ ರಕ್ತ. ನಾವು ನಿದ್ರೆಗೆಡತೀವಿ ಅನ್ನೋದು ತಿಳಿಕೊಂಡು ಮಿ. ಊಯಿ ನಮ್ಮ ಸೇವೆಗೆ ಸನ್ನದ್ಧರಾಗಿದ್ದಾರೆ. ಆಯ್ತಪ್ಪ ಆಯ್ತು. ನಾವೀಗ ತೆಪ್ಪಗೆ ಆಯ್ಕೆ ಮಾಡಿಕೋಬೇಕು. ಮಿ. ಊಯಿ ಇಲ್ಲವೇ ಭಿಕ್ಷಾಪಾತ್ರೆ, ಯಾವುದು ಬೇಕು ಅಂತೀರಿ?

ಕ್ಲರ್ಕ್: ಮಿ. ಊಯಿ ಬಿಸಿ ತುಪ್ಪ ಇದ್ದ ಹಾಗೆ.

ಕಾರೂಥರ್: ಒದ್ದೋಡಿಸಿ.

ಮಲ್ಬರಿ: ಕೊಂಚ ವಿನಯವಾಗಿ. ನಾವು ಇನ್ನೂ ಎಂಥೆಂಥ ಇಕ್ಕಟ್ಟಲ್ಲಿ ಇದ್ದೀವೋ ಯಾರಿಗೆ ಗೊತ್ತು? (ನಗುತ್ತಾರೆ.)

ಫ್ಲೇಕ್: *(ಬುಚರ್‌ಗೆ)* ಡಾಗ್ಸ್‌ಬರೋ ಕಡೆಯಿಂದ ಮುನಿಸಿಪಾಲಿಟಿ ಸಾಲ ಪಡೆದರೆ ಹೇಗೆ? *(ಎಲ್ಲರಿಗೂ)* ನಾನೂ ಬುಚರ್ ಒಂದು ತಂತ್ರ ಹುಡುಕಿದೀವಿ. ಅದರಿಂದ ಈ ಮುಗ್ಗಟ್ಟಿಂದ ಪಾರಾಗಬಹುದು. ಹೀಗೆ ಮಾಡೋಣ. ನಮ್ಮ ಹತ್ತಿರ ತೆರಿಗೆ ತೆಗೆದುಕೊಳ್ಳುವ ಮುನಿಸಿಪಾಲಿಟಿ ನಮಗೆ ಯಾಕೆ ಸಾಲ ಕೊಡಬಾರದು? ಹೊಸ ಬಂದರು ಕಟ್ಟತೀವಿ ಅನ್ನೋಣ. ಡಾಗ್ಸ್‌ಬರೋಗೆ ತುಂಬ ಪ್ರಭಾವ ಇದೆ. ಅವರು ಸಾಲಕೊಡಿಸಬಲ್ಲರು. ನೀನು ಅವರನ್ನ ಈ ಬಗ್ಗೆ ಕಂಡಿದ್ದಿಯೇನು?

ಬುಚರ್: ಹಾಂ! ಆದರೆ ಅವರು ಒಪ್ಪುವ ಹಾಗೆ ತೋರೋಲ್ಲ.

ಫ್ಲೇಕ್: ಆಗೋಲ್ಲ ಅಂದರಾ? ಹಾಳಾಯ್ತು. ಇಷ್ಟು ವರ್ಷ ನಮ್ಮ ಓಟಿನಿಂದಲೇ ಗೆದ್ದು ಬಂದು ಈಗ ಆಗೋಲ್ಲ ಅಂತಿದಾರಾ?

ಕಾರೂಥರ್: ಅವರ ಎಲಕ್ಷನ್ ಫಂಡಿಗೆ ವರ್ಷಾವರ್ಷಾ ಹಣ ಸುರೀತಾನೇ ಇದ್ದೀವಿ.

ಮಲ್ಬರಿ: ಶೀಟ್ ಹತ್ರ ಕ್ಯಾಂಟೀನ್ ನಡೆಸತಾ ಇದ್ದ ಅವನು! ರಾಜಕೀಯಕ್ಕೆ ಇಳಿಯೋಕೆ ಮೊದಲು ಅನ್ನ ಹುಟ್ಟತಾ ಇದ್ದದ್ದೇ ಈ ಟ್ರಸ್ಟ್‌ನಿಂದ. ನಿಯತ್ತು ಇಲ್ಲದವನು. ನಾನು ಹೇಳುತಾ ಇರಲಿಲ್ಲವೇ? ನಿಷ್ಠೆ ಅನ್ನುವದೆಲ್ಲ ಹೋಯ್ತು. ಕಾಸಿಗೇ ಕೊರತೆ ಅಂದರೆ ನಿಷ್ಠೆಗೆ ಇನ್ನೂ ಕೊರತೆ. ಎಲ್ಲ ಶಾಪ ಹಾಕುವವರೇ. ಬೆಂದ ಮನೇಲೆ ಗಳಾ ಹಿರೀತಾರೆ. ಸ್ನೇಹಿತರು ವೈರಿಗಳಾಗುತಿದಾರೆ. ಕೆಲಸದವರು ಯಜಮಾನರ ತಲೆ ಮೆಟ್ಟತಿದಾರೆ. ಮತ್ತೆ ನಮ್ಮ ಹಳೇ ಕ್ಯಾಂಟಿನ್ ನಡೆಸತಿದ್ದವನು, ಮೊದಲು ಹಲ್ಲು ಗಿಂಜತಿದ್ದ ಈಗ ಹುಂಜದ ಥರ ಆಡತಿದಾನೆ. ನೀತಿ ನಿಯತ್ತೆಲ್ಲ ಕಷ್ಟದ ಕಾಲದಲ್ಲಿ ಗಾಳೀಲಿ ತೂರಿ ಹೋಗುತ್ವೆ

ಕಾರೂಥರ್: ಡಾಗ್ಸ್‌ಬರೋ ಹೀಗ್ ಮಾಡತಾರೆ ಅಂತ ಯಾರು ಅಂದುಕೊಂಡಿದ್ದರು?

ಬುಚರ್: ನಾವು ಸಾಲ ಕೇಳುವುದರಲ್ಲಿ ಏನೋ ಸಂಚಿದೆ ಅಂತಾರೆ?

ಫ್ಲೇಕ್: ಬಂದರು ಕಟ್ಟತೀವಿ ಅನ್ನುವುದರಲ್ಲಿ ಸಂಚೇನಂತೆ? ಅದರಿಂದ ಎಷ್ಟು ಜನಕ್ಕೆ ಕೆಲಸ ಸಿಗುತ್ತೆ ಗೊತ್ತಂತಾ?

**ಬುಚರ್:** ನಾವು ಬಂದರು ಕಟ್ಟುವುದೇ ಅನುಮಾನ ಅಂತಾರೆ.

**ಫ್ಲೇಕ್:** ಶುದ್ಧ ತಲೆಹರಟೆ.

**ಬುಚರ್:** ಏನು ನಾವು ಕಟ್ಟುವ ವಿಚಾರಾನಾ?

**ಫ್ಲೇಕ್:** ಅದಲ್ಲ, ಅವರ ಅನುಮಾನಕ್ಕೆ ಹೇಳಿದೆ.

**ಕ್ಲರ್ಕ್:** ಹೋಗಲಿ ಸಾಲ ಕೊಡಿಸೋಕೆ ಬೇರೆ ಯಾರನ್ನಾದರೂ ಹುಡುಕಿ.

**ಮಲ್ಬರಿ:** ಹೌದು. ಇನ್ನೂ ಎಷ್ಟೋ ಜನ ಇದಾರೆ.

**ಬುಚರ್:** ಅದು ಸರಿ, ಆದರೆ ಅವರು ಯಾರೂ ಡಾಗ್ಸ್‌ಬರೋ ತರಹ ಅಲ್ಲವಲ್ಲ. ಸ್ವಲ್ಪ ಸಮಾಧಾನ ಮಾಡಿಕೊಳ್ಳಿ. ಡಾಗ್ಸ್‌ಬರೋ ಒಳ್ಳೆಯ ಮನುಷ್ಯ.

**ಕ್ಲರ್ಕ್:** ಅವರ ಒಳ್ಳೆಯತನ ತಗೊಂಡು ಏನು ಮಾಡೋದು?

**ಬುಚರ್:** ಅವರ ಕೈ ಶುದ್ಧ; ಅಷ್ಟೇ ಅಲ್ಲ, ಕೈ ಶುದ್ಧಿ ಇರೋರು ಅಂತ ಹೆಸರೂ ಇದೆ.

**ಫ್ಲೇಕ್:** ಮಣ್ಣು.

**ಬುಚರ್:** ಹೆಸರು ಕೆಡಿಸಿಕೊಳ್ಳಬಾರದೂ ಅಂತ ಅಂದುಕೊಳ್ಳೋದೂ ತಪ್ಪಾ?

**ಫ್ಲೇಕ್:** ಅದರಿಂದ ನಮಗೇನು ಬಂತು? ನಮಗೆ ಮುನ್ಸಿಪಾಲಟಿಯಿಂದ ಸಾಲ ಬೇಕು. ಅವರ ಹೆಸರು ಅವರ ಹಣೆಯಬರಹ.

**ಬುಚರ್:** ನೀನು ಹಾಗಂತೀಯ? ಹಾಗಲ್ಲ. ಅದು ನಮಗೂ ಸೇರಿದ್ದು. ಇಷ್ಟು ದೊಡ್ಡ ಸಾಲ ಕೊಡಿಸೋಕೆ ಒಬ್ಬ ನಿಯತ್ತಿನ ಮನುಷ್ಯ ಬೇಕೇ ಬೇಕು. ಅಂಥವನಿದ್ರೆ ಜಾಮೀನು, ಪುರಾವೆ ಕೇಳೋಕೆ ಹಿಂಜರೀತಾರೆ. ಡಾಗ್ಸ್‌ಬರೋ ಒಬ್ಬರೇ ಅಂಥ ವ್ಯಕ್ತಿ. ಅವರೇ ನಮ್ಮ ಸಾಲಕ್ಕೆ ಆಧಾರ. ಯಾಕಂತೀರಾ? ಜನ ಅವರನ್ನ ನಂಬತಾರೆ. ದೇವರನ್ನ ನಂಬದೇ ಹೋದವನೂ ಡಾಗ್ಸ್‌ಬರೋನ ನಂಬೇ ನಂಬತಾನೆ. ಯಾರು ಟೋಪಿ ಹಾಕಬಿಡತಾರೋ ಅಂತ ಮೈಯೆಲ್ಲಾ ಕಣ್ಣಾಗಿರೋ ದಳಾಳಿ ಕೂಡ ಕೈಯಲ್ಲಿನ ಕಾಸನ್ನ ಕಣ್ಣುಮುಚ್ಚುಕೊಂಡು ಡಾಗ್ಸ್‌ಬರೋ ಜೇಬಲ್ಲಿ ಬಚ್ಚಿಡತಾನೆ. ಸಕತ್ ಇನ್ನೂರು ಪೌಂಡು ತೂಕದ ನಿಯತ್ತು. ಎಂಬತ್ತು ಚಳಿಗಾಲ ಕಳೆದರೂ ಜಗ್ಗಿಲ್ಲ. ಅಂಥವರಿಗೆ ಅವರ ತೂಕದ ಚಿನ್ನದಷ್ಟು ಬೆಲೆ; ಅದರಲ್ಲೂ ಬಂದರು ಕಟ್ಟುವ ತಂತ್ರ ಮಾಡತಿರೋ ನಮ್ಮಂಥವರಿಗೆ.

ಫ್ಲೇಕ್: ಆಯ್ತಪ್ಪ ಅವರ ತೂಕದಷ್ಟೇ ಚಿನ್ನಕ್ಕೆ ಅವರು ಸಮಾನ. ಸರಿ, ಸಾಕ್ಷಿಯಾಗಿ ನಿಂತರೆ ವ್ಯವಹಾರ ಕುದುರುತ್ತೆ. ಅದೂ ಸರಿ. ಆದರೆ ಅವರು ನಮಗೆ ಸಾಕ್ಷಿ ಆಗತಿಲ್ಲವಲ್ಲ.

ಕ್ಲರ್ಕ್: ಅವರೆಲ್ಲಿ ಸಾಕ್ಷಿಯಾಗತಾರೆ? 'ನಗರದ ಖಜಾನೆ ಅಂದರೆ ಲೂಟಿ ಚೀಲ ಅಲ್ಲ'.

ಮಲ್ಬರಿ: ಮತ್ತೆ. 'ನನ್ನದೆಲ್ಲ ನಗರಕ್ಕೆ ಮಾತ್ರ ಮೀಸಲು'.

ಕಾರೀಥರ್: ಅಸಹ್ಯ. ನಗೂನೂ ಬರೋಲ್ಲ.

ಮಲ್ಬರಿ: ಅವರೊಂದು ಸಾರಿ ನಿರ್ಧಾರ ಮಾಡಿಬಿಟ್ರೆ ಭೂಕಂಪ ಆದರೂ ಬದಲಾಯಿಸೋಲ್ಲ. ಅವರಿಗೆ ಈ ಸಿಟಿ ಅಂದರೆ ಬರೀ ಕಲ್ಲು, ಮಣ್ಣು ಮಾತ್ರ ಅಲ್ಲ. ಜನರು ತಂತಮ್ಮಲ್ಲೇ ಹೊಟ್ಟೆಪಾಡಿಗೆ, ತಲೆಮೇಲಣ ಸೂರಿಗೆ ಹೋರಾಡತಾ ಇರೋ ಜಾಗ ಕೂಡ ಅಲ್ಲ; ಸಿಟಿ ಅಂದರೆ ಬೈಬಲ್ಲಿನ ಪದಗಳ ಹಾಗೆ. ಅವರನ್ನ ಕಂಡರೆ ನನ್ನ ಮೈಯೆಲ್ಲ ಉರಿಯುತ್ತೆ.

ಕ್ಲರ್ಕ್: ನಮ್ಮನ್ನ ಕಂಡರೆ ಅವರಿಗೆ ಯಾವಾಗಲೂ ಅಷ್ಟಕಷ್ಟೆ. ತರಕಾರಿ, ಲಾರಿ ವ್ಯವಹಾರ ಕಟ್ಟಿಕೊಂಡು ಏನಾಗಬೇಕು? ಇಡೀ ಸಿಟಿಯಲ್ಲಿರೋ ತರಕಾರಿಯೆಲ್ಲ ಕೊಳೆತರೂ ಅವರ ಕರುಳೇನಾದ್ರೂ ಚುರ್ರನ್ನತ್ತೇಂತೀರಾ? ಊಹು. ಹತ್ತೊಂಬತ್ತು ಯಾಕೆ ಇಪ್ಪತ್ತು ವರ್ಷದಿಂದ ಅವರ ಎಲಕ್ಷನ್ ಫಂಡಿಗೆ ಹಣ ಸುರಿದಿದೀವಿ. ಇಷ್ಟೂ ವರ್ಷ ಅವರು ತರಕಾರಿ ನೋಡಿರೋದು ಊಟದ ತಟ್ಟೇಲಿ ಮಾತ್ರ, ಅಷ್ಟೆ ಯಾಕೆ? ಯಾವತ್ತಾದರೂ ನಮ್ಮ ಮಂಡಿಗೆ ಕಾಲಿಟ್ಟಿದಾರಾ?

ಬುಚರ್: ಅದೂ ಸರಿ.

ಕ್ಲರ್ಕ್: ಅವನಿಗೆ ದೆವ್ವ ಹಿಡಿಯ.

ಬುಚರ್: ಯಾಕೆ ನಾವೇ ಹಿಡಿಯೋಣ.

ಫ್ಲೇಕ್: ಆದರೆ....ಅದು ಆಗೋಲ್ಲ. ಅವರು ನಮ್ಮ ಮಾತಿಗೆ ಕಿವಿ ಕೊಡೋದಿಲ್ಲವಲ್ಲ.

ಬುಚರ್: ಹೌದು. ಅದು ಯಾಕೆ ಅನ್ನೋದು ನಮಗೆ ಗೊತ್ತು.

ಕ್ಲರ್ಕ್: ಅವರಿಗೆ ಬದುಕೋ ದಾರಿ ಗೊತ್ತಿಲ್ಲ.

**ಬುಚರ್:** ಅದಪ್ಪ. ಈಗೇನವರ ತೊಂದರೆ? ದಡ್ಡತನ. ಇಂಥ ಇಕ್ಕಟ್ಟಲ್ಲಿ ಸಿಕ್ಕಿಕೊಂಡರೆ ಹೇಗಿರುತ್ತೆ ಅನ್ನೋದು ಗೊತ್ತಿಲ್ಲ. ಅದರಿಂದ ನಾವೀಗ ಇರೋ ಸ್ಥಿತಿಗೆ ಅವರನ್ನ ತಳ್ಳಬೇಕು. ಆಗಲೇ ಗೊತ್ತಾಗೋದು; ಬುದ್ದಿ ಕಲಿಯೋದು. ನಾನೆಲ್ಲ ಯೋಚನೆಮಾಡಿದೀನಿ. ನನ್ನ ಪ್ಲಾನ್ ಕೇಳಿ.

*(ಭಿತ್ತಿ ಪತ್ರ)*

## ದೃಶ್ಯ ೧ ಬಿ

(ಸಗಟು ಮಾರುಕಟ್ಟೆ ಹೊರಗೆ ಫ್ಲೇಕ್ ಮತ್ತು ಶೀಟ್ ಮಾತುಕತೆ)

**ಶೀಟ್:** ಸಾಲಕ್ಕಾಗಿ ಸುತ್ತಿ ಸುತ್ತಿ ನನಗೂ ಸಾಕಾಯ್ತು. ಒಬ್ಬನ ಹತ್ರ ಹೋದ್ರೆ ಅವನು ಯಾವಾಗ್ಲೂ ಊರಲ್ಲಿರೋಲ್ಲ. ಇನ್ನೊಬ್ಬ ಬಚ್ಚಲು ಮನೆ ಬಿಟ್ಟು ಬರೋಲ್ಲ. ಹಳೇ ಸ್ನೇಹಿತರು ಒಬ್ಬರಿಗೊಬ್ಬರು ಬೆನ್ನು ಹಾಕತಿದ್ದಾರೆ. ಅಣ್ಣ, ತಮ್ಮನ್ನ ನೋಡೋಕೆ ಹೋಗುವಾಗ, ಎಲ್ಲಿ ಅವನು ಸಾಲ ಕೇಳಿಬಿಡತಾನೋ ಅಂತ ಹರಕಲು ಷೂ ಹಾಕಿಕೊಂಡು ಹೋಗುತಾನೆ. ಹಳೇ ಪಾಲುದಾರರ್ಗೆ ಒಬ್ಬರನ್ನ ಕಂಡರೆ ಒಬ್ಬರಿಗೆ ಆಗತಿಲ್ಲ. ಮಾರ್ಕೆಟ್ಟಲ್ಲಿ ಕಂಡಾಗ ಸುಳ್ಳು ಹೆಸರು ಹೇಳಕೋತಿದಾರೆ. ಇನ್ನು ಜನರೋ! ಜೇಬು ಭದ್ರವಾಗಿ ಹೊಲೆದಿಟ್ಟುಕೋತಿದಾರೆ.

**ಫ್ಲೇಕ್:** ನಾನು ಹೇಳಿದ್ದ ವಿಷಯ ಏನಾಯ್ತು?

**ಶೀಟ್:** ಇಲ್ಲ. ಆಗಲ್ಲಪ್ಪ. ನೀನು ಕಾಸು ಚಿಲ್ಲಿ ರೂಪಾಯಿ ದೋಚೋಕೆ ನೋಡತಿದೀಯ. ಅಲ್ಲದೆ ನೀವು ಕೊಟ್ಟ ಕಾಸಿಗೆ ಸಲಾಮು ಬೇರೆ ಹಾಕಬೇಕು...ನಿಮ್ಮನ್ನ ಕಂಡರೆ ನನಗೆ...ಹೇಳಿದರೆ ನಿಮಗೆ ಇಷ್ಟ ಆಗೋಲ್ಲ ಬಿಡಿ.

**ಫ್ಲೇಕ್:** ಇದಕ್ಕಿಂತ ನಿಮಗೆ ಒಂದು ಕಾಸೂ ಹೆಚ್ಚಿಗೆ ಹುಟ್ಟೋಲ್ಲ.

**ಶೀಟ್:** ವ್ಯವಹಾರದಲ್ಲಿ ಸ್ನೇಹಿತರೇ ಆಗಿದ್ರೂ ಧಾರಾಳವಾಗಿ ಕೈ ಬಿಚ್ಚೋಲ್ಲ.

**ಫ್ಲೇಕ್:** ದುಡ್ಡಿಗೇ ಕೊರತೆ ಈಗ.

**ಶೀಟ್:** ಅದೂ ಕೈ ಖಾಲಿಯಾಪವರಿಗೇ ಗೊತ್ತು. ಅಲ್ಲದೆ ಸ್ನೇಹಿತನಿಗೆ ಏನು ಬೇಕು ಅನ್ನುವುದು ಸ್ನೇಹಿತನಿಗೆ ತಾನೇ ತಿಳಿಯೋದು.

**ಫ್ಲೇಕ್:** ಹೇಗೇ ಆದರೂ ನೀನು ಹಡಗು ಕಟ್ಟೆ ಕಳಕೊಳ್ಳತೀಯಾ?

**ಶೀಟ್:** ಅಷ್ಟೇ ಅಲ್ಲ. ಈಗಲೋ ಆಗಲೋ ಹೇಗೋ ಹೆಂಡತೀನ ಕೂಡ.

ಫ್ಲೇಕ್: ನೀನೀಗ ಮಾರಿದರೆ.....

ಶೀಟ್: ಅವಳು ಇನ್ನೊಂದು ವರ್ಷ ಇರತಾಳೆ. ಆದರೆ ಈ ಹಡಗು ಕಟ್ಟೆ ನಿನಗೆ ಯಾಕೆ ಬೇಕು?

ಫ್ಲೇಕ್: ನಾವು, ಅಂದರೆ ಟ್ರಸ್ಟ್‌ನವರು, ನಿನ್ನ ಒಳ್ಳೆಯದಕ್ಕೆ ಇದೆಲ್ಲ ಮಾಡತಿರೋದು. ಇಷ್ಟೂ ತಿಳೀತಿಲ್ಲವಾ?

ಶೀಟ್: ನಂಗೇನೋ ಹಾಗನಿಸತಾ ಇಲ್ಲ. ನನಗೆ ಸಹಾಯ ಮಾಡೋಕೆ ಬಂದ ನೀವು ನನ್ನ ಆಸ್ತಿಯೆಲ್ಲ ಲಪಟಾಯಿಸತಿದೀರಿ ಅಂದುಕೊಂಡಿದ್ದೆನಲ್ಲ. ಎಂಥ ಪೆದ್ದ!

ಫ್ಲೇಕ್: ಹೀಗೆ ಚುಚ್ಚು ಮಾತಾಡಿ ಬೀಸೋ ದೊಣ್ಣೆಯಿಂದ ತಪ್ಪಿಸಿಕೊಳ್ಳಲಿಕ್ಕೆ ಆಗಲ್ಲ ಸ್ವಾಮಿ.

ಶೀಟ್: ಕೊನೇ ಪಕ್ಷ ಹೀಗೆ ಮಾತಾಡೋದರಿಂದ ದೊಣ್ಣೆಗೂ ಪ್ರಯೋಜನವಿಲ್ಲ. *(ಮೂರು ಜನ ಸುಳಿಯುತ್ತಾರೆ. ಆರ್ಥುರೋ ಊಯಿ, ಅವನ ಬಂಟ ಅರ್ನೆಸ್ಟೋ ರೋಮಾ ಹಾಗೂ ಅಂಗರಕ್ಷಕರು. ಹೋಗುವಾಗ ಊಯಿ ಏನೋ ಮಾತು ನಿರೀಕ್ಷಿಸುವನಂತೆ ಫ್ಲೇಕ್‌ನನ್ನು ದಿಟ್ಟಿಸುತ್ತಾನೆ. ರೋಮಾ ಹೋಗುತ್ತ ಹಿಂದೆ ತಿರುಗಿ ಕೋಪದಿಂದ ಫ್ಲೇಕ್‌ನನ್ನು ನೋಡುವನು.)*

ಶೀಟ್: ಯಾರವರು?

ಫ್ಲೇಕ್: ಆರ್ಥುರೋ ಊಯಿ, ಗೂಂಡಾ...ಹೇಗನ್ನಿಸುತ್ತೆ? ಮಾರತೀಯಾ?

ಶೀಟ್: ನಿನ್ನ ಕೂಡ ಮಾತಾಡಬೇಕೂ ಅನ್ನೋ ಹಾಗೆ ನೋಡುತ್ತಿದ್ದ!

ಫ್ಲೇಕ್: *(ಕೋಪದ ನಗು)* ಹೌದು. ಒಂದೇ ಸಮನೆ ನಮ್ಮನ್ನ ಮಾತುಕತೆಗೆ ಕರೀತಿದಾನೆ. ನಮ್ಮ ತರಕಾರಿಯುನ್ನು ಬಂದೂಕ ತೋರಿಸಿ ಮಾರಾಟ ಮಾಡೋಕೆ ಅವನು ಸಿದ್ದ. ಎಲ್ಲೆಲ್ಲಿ ನೋಡಿದರೂ ಊರ ತುಂಬ ಇವನಂಥವರೆ. ಕುಷ್ಠ ಹತ್ತಿದ ಹಾಗೆ. ಇವತ್ತು ಈ ಬೆರಳು ತಿಂದರೆ ನಾಳೆ ತೋಳು. ಭುಜ ಆಮೇಲೆ. ಎಲ್ಲಿಂದ ಬರತ್ತೋ ಯಾರಿಗೆ ಗೋತ್ತು? ರೌರವ ನರಕದಿಂದಲೇ ಇರಬೇಕು. ಲೂಟಿ! ಕೊಲೆ! ಗೂಂಡಾಗಿರಿ ಬ್ಲಾಕ್‌ಮೇಲ್. 'ಕೈ ಎತ್ತು!' 'ಕಾಸು ಬಿಚ್ಚು ಇಲ್ಲ ಜೀವ ಬಿಡು' ಅಬ್ಬಬ್ಬಾ ಇದನ್ನೆಲ್ಲ ಅಳಿಸಿ ಹಾಕಬೇಕು.

**ಶೀಟ್:** *(ತೀಕ್ಷ್ಣವಾಗಿ ನೋಡುತ್ತ)* ಹೌದು! ಅದಷ್ಟು ಬೇಗ. ಸೋಂಕುರೋಗ.

**ಫ್ಲೇಕ್:** ಸರಿ. ಅದಿರಲಿ. ಈಗೇನು? ನೀನು ಮಾರುವವನು ತಾನೇ?

**ಶೀಟ್:** *(ಹಿಂದೆ ಸರಿದು ನೋಡುತ್ತ)* ಅನುಮಾನವೇ ಇಲ್ಲ. ಈಗ ಬಂದು ಹೋದರಲ್ಲ ಥೇಟ್ ಅವರ ಹಾಗೇನೇ. ಅಷ್ಟು ಎದ್ದು ಕಾಣೋಲ್ಲ. ದಿಟ್ಟಿಸಿದರೆ ಗೊತ್ತಾಗುತ್ತೆ. ಹಾಗೇ ನೋಡತಿದ್ರೆ ಹುಟ್ಟುತ್ತೆ. ಕೊಳದ ನೀರಲ್ಲಿ ಆಗಾಗ ತೆಳ್ಳಗೆ, ಹಸುರಿಗೆ, ಇರುವ ಮರದ ಕೊಂಬೆ ನೋಡತೀರಿ. ಅದು ಹಾವೂ ಆಗಿರಬಹುದು. ಅಥವಾ ಅದು ಕೊಂಬೇನೇ ಇರಬೌದು? ಹಾಗೆ ನೀನು ರೋಮಾನ ಥರ. ರೇಗಬೇಡ. ಅವನನ್ನ ಈಗಲೇ ನೋಡಿದ್ದು. ಆದರೆ ಮೊದಲೇ ನೋಡಿದ್ದ ಮುಖ ಅನ್ನಿಸಿತು. ನೀನು ಮಾತ್ರ ಅಲ್ಲ. ಎಷ್ಟೋ ಜನ ಹೀಗೆ ಇದಾರೆ ಗೊತ್ತಾ! ಆಗಲೇ ಏನಂದೆ? 'ಸರಿ, ಅದಿರಲಿ. ಈಗೇನು? ನೀನು ಮಾರುವವನು ತಾನೇ?' ಅರೆ, ಧ್ವನಿ ಕೂಡ. ನೀನು 'ಕೈ ಎತ್ತು' ಅನ್ನಲಿಲ್ಲ. ಅನ್ನದಿದ್ದರೂ ಉದ್ದೇಶ ಮಾತ್ರ ಅದೇ. *(ಕೈ ಮೇಲೆತ್ತಿ ನಿಲ್ಲುತ್ತಾನೆ)* ಆಯ್ತಪ್ಪ. ಹಡಗು ಕಟ್ಟೆ ನಿನ್ನದೇನೆ. ಹಣದ ಬದಲು ಒಂದೆರಡು ಗೂಸ ಕೊಡು ನನಗೆ. ತಾಳು ಒಂದೆರಡು ಯಾಕೆ? ಒಂದಷ್ಟು ಧಂಡಿಯಾಗೇ ಹಾಕು.

**ಫ್ಲೇಕ್:** ನಿನಗೆಲ್ಲೋ ತಲೆಕೆಟ್ಟಿದೆ.

**ಶೀಟ್:** ಹಾಗಾಗಿದ್ರೆ ಎಷ್ಟೋ ಚೆನ್ನಾಗಿರುತಿತ್ತು.

## ದೃಶ್ಯ ೨

*(ಡಾಗ್ಸ್‌ಬರೋ ರೆಸ್ಟುರೋ. ಹಿಂದಿನ ಕೋಣೆ. ಆತ ಮತ್ತು ಅವನ ಮಗ ಬಟ್ಟಲು ಒರೆಸುತ್ತಿದ್ದಾರೆ. ಬುಚರ್, ಫ್ಲೇಕ್ ಪ್ರವೇಶ)*

**ಡಾಗ್ಸ್‌ಬರೋ:** ನೀವು ಮತ್ತೆ ಯಾಕೆ ಬಂದಿರಿ? ಇಲ್ಲಾಂತ ಹೇಳಿದ್ದಾಗಿದೆ. ನಿಮ್ಮ ಇಡೀ ಪ್ಲಾನು ಕೊಳೆತು ನಾರುತ್ತಿದೆ.

**ಮಗ:** ನಮ್ಮಪ್ಪ ಆಗಲ್ಲ ಅಂದಾಯ್ತು.

**ಬುಚರ್:** ಅದು ಬಿಡಿ. ನಾವು 'ಕೊಡಿ' ಅಂದೆವು. ನೀವು 'ಇಲ್ಲ' ಅಂದಿರಿ. ಇಲ್ಲ ಅಂತ ಆಯಿತಲ್ಲ.

**ಡಾಗ್ಸ್‌ಬರೋ:** ಸಂಚು. ನೀವೆಂತ ಬಂದರು ಕಟ್ಟತೀರಿ ನನಗೆ ಗೊತ್ತು. ನಾನದರಲ್ಲಿ ತಲೆ ಹಾಕೋದಿಲ್ಲ.

**ಮಗ:** ನಮ್ಮಪ್ಪ ಅದರಲ್ಲಿ ತಲೆ ಹಾಕೋದಿಲ್ಲ.

**ಬುಚರ್:** ಆಯ್ತು. ಅದೆಲ್ಲ ಮರೆತು ಬಿಡಿ.

**ಡಾಗ್ಸ್‌ಬರೋ:** ನಿಮ್ಮದು ಅಡ್ಡದಾರಿ. ನಗರದ ಖಜಾನೆ ಲೂಟಿ ಚೀಲ ಅಲ್ಲ, ಯಾರು ಬೇಕಾದರೂ ದೋಚೋದಕ್ಕೆ. ಏನೇ ಆಗಲಿ. ನಿಮ್ಮ ವ್ಯಾಪಾರ ಹೇಗಿದೆ?

**ಬುಚರ್:** ಫ್ಲೇಕ್, ನಾನೇನು ಹೇಳಿದ್ದೆ? ನನ್ನ ಮಾತು ನೀವು ನಂಬಲಿಲ್ಲ.

**ಡಾಗ್ಸ್‌ಬರೋ:** ನಂಬದೇ ಇರುವುದು ಅಪರಾಧ. ನೀವೇ ನಿಮ್ಮ ತಲೆಮೇಲೆ ಚಪ್ಪಡಿ ಎಳಕೊಳ್ಳತಾ ಇದೀರಿ. ಈಗ ನೀವೇನು ಮಾರೋದು? ಹೂಕೋಸು. ಅದು ಬ್ರೆಡ್ಡು, ಮಾಂಸ ಇದ್ದ ಹಾಗೆ. ಮನುಷ್ಯನಿಗೆ ಬ್ರೆಡ್ಡು, ಮಾಂಸ ಮಾತ್ರ ಸಾಕಾ? ಜತೆಗೆ ತರಕಾರಿ ಕೂಡ ಬೇಕು. ಈರುಳ್ಳಿ ಇಲ್ಲದೆ ಉಪ್ಪಿಟ್ಟು, ಬೀನ್ಸ್ ಹಾಕದೆ ಮಾಂಸದ ಸಾರು ಮಾಡಿಕೊಟ್ಟರೆ ಗಿರಾಕಿಗಳು ಮತ್ತೆ ಈ ಕಡೆ ತಲೆ ಹಾಕೋಲ್ಲ. ಜನರ ಹತ್ರ ದುಡ್ಡಿಲ್ಲ. ದಿವಿನಾದ ಬಟ್ಟೆ ಕೊಳ್ಳೋಕೇ ಹಿಂಜರಿತಾರೆ ನಿಜ. ಆದರೆ ಊಟ ಮಾಡಲೇ ಬೇಕಲ್ಲ. ತರಕಾರಿಗೇ ಅಂತ

| | |
|---|---|
| | ಪುಡಿಗಾಸನ್ನಾದ್ರೂ ಇಟ್ಕೊಂಡೇ ಇರತಾರೆ. ಹಾಗಾಗಿ ಯೋಚನೆ ಬಿಡಿ. ನಾನಾಗಿದ್ರೆ ಇಷ್ಟು ತಲೆಬಿಸಿ ಮಾಡಿಕೊಳ್ಳುತ್ತಿರಲಿಲ್ಲ. |
| ಫ್ಲೇಕ್: | ನಿಮ್ಮ ಮಾತು ಕೇಳತಿದ್ರೆ ಖುಷಿಯಾಗುತ್ತೆ. ಮುನ್ನುಗ್ಗುವುದಕ್ಕೆ ಉತ್ಸಾಹ ಬರುತ್ತೆ. |
| ಬುಚರ್: | ಹೂಕೋಸು ವ್ಯಾಪಾರಕ್ಕೆ ಒಳ್ಳೆಯ ಭವಿಷ್ಯ ಇದೆ ಅಂತ ನೀವು ಇಷ್ಟು ಖಂಡಿತವಾಗಿ ಹೇಳುವುದು ಕೇಳಿದರೆ ನನಗೆ ನಗು ಬರುತ್ತೆ. ಯಾಕಂತಿರೋ? ಹಿಂದೆ ಮುಂದೆ ಯಾಕೆ! ಅದನ್ನು ಕುರಿತು ಮಾತಾಡೋಕೇ ಇಲ್ಲಿಗೆ ಬಂದದ್ದು. ಇರಲಿ, ಯೋಚನೆ ಬೇಡ. ನೀವು ಅಂದುಕೊಳ್ಳೋ ವಿಚಾರ ಅಲ್ಲ. ಅದರ ಕಥೆ ಮುಗೀತು. ಇದು ಖುಷಿ ವಿಚಾರ. ಅಥವಾ ಹಾಗನ್ನಬಹುದು. ನೋಡಿ ಸ್ವಾಮಿ, ಈ ಜೂನ್‌ಗೆ ಸರಿಯಾಗಿ ೨೩ ವರ್ಷದ ಹಿಂದೆ ನೀವು ನಮ್ಮ ಕಂಪನಿ ಬಿಟ್ಟಿರಿ. ಅದಕ್ಕೆ ಮೊದಲು ಮೂವತ್ತು ವರ್ಷ ನಮ್ಮ ಜೊತೆಗೇ ಕೆಲಸ ಮಾಡುತಿದ್ರಿ. ಆಮೇಲೆ ಈ ನಗರದ ಕಲ್ಯಾಣಕ್ಕೆ ನಿಮ್ಮ ಪ್ರತಿಭೆ ಮೀಸಲಿಡೋಕೆ ತೀರ್ಮಾನಿಸಿದಿರಿ. ನೀವಿಲ್ಲದೇ ಹೋಗಿದ್ರೆ ಈ ನಗರ ಹೀಗೆ ಇರತಾನೇ ಇರಲಿಲ್ಲ. ನಮ್ಮ ಟ್ರಸ್ಟ್ ಕೂಡ, ನಗರದ ಹಾಗೆ, ಉದ್ಧಾರವಾಗತಾನೂ ಇರಲಿಲ್ಲ. ನಮ್ಮ ವ್ಯಾಪಾರ ಭದ್ರವಾಗಿದೇಂತ ನೀವು ಹೇಳಿದ್ದು ಕೇಳಿ ಸಂತೋಷವಾಯ್ತು. ನಿಮ್ಮ ಮೇಲೆ ನಮಗಿರುವ ಅಭಿಮಾನಕ್ಕೆ ಗೌರವಕ್ಕೆ, ಪ್ರೀತಿಗೆ ಪ್ರತಿಯಾಗಿ ಏನಾದರೂ ಕೊಡುಗೆ ನೀಡಬೇಕಂತ ತೀರ್ಮಾನ ಮಾಡಿದೀವಿ. ನಮ್ಮ ಶೀಟ್ ಅವರ ಹಡಗುಕಟ್ಟೆಯ ಹೆಚ್ಚಿನ ಷೇರುಗಳನ್ನ ಇಪ್ಪತ್ತು ಸಾವಿರ ಡಾಲರಿಗೆ, ಅಂದರೆ ಅದರ ಮುಖಬೆಲೆಯ ಅರ್ಧಕ್ಕೆ ಕೊಡಬೇಕಂತಿದೀವಿ *(ಒಂದು ಕಟ್ಟನ್ನು ಹಲಗೆ ಮೇಲೆ ಇಡುತ್ತಾನೆ.)* |
| ಡಾಗ್ಸ್‌ಬರೋ: | ನನಗೆ ಏನೂ ತಿಳೀತಿಲ್ಲ. |
| ಬುಚರ್: | ಮಿ. ಡಾಗ್ಸ್‌ಬರೋ, ಮುಚ್ಚುಮರೆ ಬೇಡ. ನಮ್ಮ ಟ್ರಸ್ಟ್‌ನಲ್ಲಿ ಇರೋವರಿಗೆಲ್ಲ ಕಲ್ಲು ಹೃದಯ. ಆದರೆ ನಿನ್ನೆ ನಾವು ನಮ್ಮ... ನಮ್ಮ ದಡ್ಡತನ ತೋರಿಸೋಕೆ ಸಾಲ ಕೇಳಿದೆವು. ನಿಮ್ಮ ಉತ್ತರ ಗೊತ್ತಾಯ್ತು. ಅಡಿಯಿಂದ ಮುಡಿವರೆಗೆ ಪ್ರಾಮಾಣಿಕ, ಕೈಶುದ್ಧಿ ಇರೋ ನೀವು ಕೊಟ್ಟ ಉತ್ತರ ಕೇಳಿ, ನಮ್ಮ ಕೆಲವರ ಕಣ್ಣಲ್ಲಿ– ಸುಮ್ಮನೇ ಅಲ್ಲ ನಾನು ಹೇಳಿತಿರೋದು–ನೀರು. ಹೌದು ಒಬ್ಬರಂತೂ– ಸುಮ್ಮನಿರಿ ಮಿ. ಫ್ಲೇಕ್–ಯಾರೂ ಅಂತ ಹೇಳೊಲ್ಲ–ಏನಂದ್ರೂ ಗೊತ್ತೆ? 'ಅಬ್ಬಾ ದೇವರೇ! ಈ ಮನುಷ್ಯ ನಮ್ಮನ್ನ ಕಾಪಾಡಿದರು, |

ಸದ್ಯ.' ಕೊಂಚ ಹೊತ್ತು ಯಾರಿಗೂ ಏನೂ ಮಾತಾಡೋಕೂ ತೋಚಲಿಲ್ಲ. ಆಮೇಲೆ ನೋಡಿ ಈ ಸಲಹೆ ಬಂತು.

**ಡಾಗ್ಸ್‌ಬರೋ:** ಆಯ್ತು. ನೀವು ಹೇಳಿದ್ದೆಲ್ಲ ಕೇಳಿದೆ. ಏನಿದರ ಗುಟ್ಟು?

**ಬುಚರ್:** ಗುಟ್ಟೇನು ಬಂತು? ಇದು ನಿಮಗೆ ನಮ್ಮ ಕೊಡುಗೆ.

**ಫ್ಲೇಕ್:** ಹೀಗೆ ನಿಮಗೆ ಕೊಡುಗೆ ನೀಡೋದಕ್ಕೆ ಸಂತೋಷವಾಗತಿದೆ. ಇಲ್ಲ, ಈ ಕೌಂಟರ್ ಹಿಂದೆ, ಬಲವಾದ ಕಂಬದ ಹಾಗೆ ಎತ್ತರವಾಗಿ ನಿಂತಿರುವ ನಿಮ್ಮ ಖ್ಯಾತಿ ಸುಮ್ಮನೆ ಆಯ್ತೇನು? ದಿಟ್ಟ ನಾಗರಿಕರಿಗೆ ನೀವು ಮಾದರಿ. ನೀವಿಲ್ಲಿ ಬಟ್ಟಲು ಒರಸತಾ ಇದೀರಿ. ನಿಜದಲ್ಲಿ ನೀವು ನಿಮ್ಮ ಮನಸ್ಸನ್ನು ಶುಭ್ರಮಾಡತಿದೀರಿ. ಹೀಗಿದ್ದರೂ ನಿಮ್ಮ ಅತಿ ದೀನ ಗಿರಾಕಿಗಿಂತ ನೀವು ದೀನರು. ಇದನ್ನ ನೆನೆದರೆ ನಮ್ಮ ಕರುಳು ಹಿಂಡುತ್ತೆ.

**ಡಾಗ್ಸ್‌ಬರೋ:** ನೀವೇನು ಹೇಳತಿದೀರೋ ನನಗಂತೂ ಅರ್ಥವಾಗತಿಲ್ಲ.

**ಬುಚರ್:** ಬೇರೆ ಮಾತೇ ಬೇಡ. ಈ ಚಿಕ್ಕ ಕಟ್ಟು ತಗೊಳ್ಳಿ. ಪ್ರಾಮಾಣಿಕ ಮನುಷ್ಯ ಇದನ್ನ ಬಳಸಬಹುದು ತಾನೇ? ಯಾವಾಗಲೂ ರಾಜಮಾರ್ಗ ಹಿಡಿಯೋಕೆ ಆಗೋಲ್ಲ. ಆಗಾಗ ಅಡ್ಡದಾರಿ ಬೇಕಾಗುತ್ತೆ. ನಿಮ್ಮ ಮಗನಿಗಾದರೂ ಇದು ಬೇಕಾಗುತ್ತೆ. ಅಪ್ಪನ ಬ್ಯಾಂಕ್ ಬ್ಯಾಲೆನ್ಸ್ ಗಿಂತ ಅವರಿಗಿರೋ ದೊಡ್ಡ ಹೆಸರು ಮುಖ್ಯ ನಿಜ. ಆದರೆ ಬ್ಯಾಂಕ್‌ಬ್ಯಾಲೆನ್ಸ್ ಇದ್ದರೆ ಮಗ ಏನು ಬೇಡಾ ಅನ್ನತಾನಾ! ಇಷ್ಟಕ್ಕೆ ನಮ್ಮನ್ನ ಹಿಡಿದು ಕೋರ್ಟಿಗೆ ಎಳೀಬೇಡಿ!

**ಡಾಗ್ಸ್‌ಬರೋ:** ಶೀಟ್ ಅವರ ಹಡಗು ಕಟ್ಟೆ!

**ಫ್ಲೇಕ್:** ಅಲ್ಲಿ ನೋಡಿ. ಇಲ್ಲಿಂದಲೇ ಕಾಣಿಸತಾ ಇದೆ.

**ಡಾಗ್ಸ್‌ಬರೋ:** *(ಕಿಟಕಿಯಲ್ಲಿ ನೋಡಿ)* ಇಪ್ಪತ್ತು ವರ್ಷದಿಂದ ನೋಡತಾನೇ ಇದೀನಿ.

**ಫ್ಲೇಕ್:** ನಮಗೂ ಹಾಗೇ ಅನಿಸಿತ್ತು.

**ಡಾಗ್ಸ್‌ಬರೋ:** ಇನ್ನು ಮುಂದೆ ಏನು ಮಾಡತಾರೆ?

**ಫ್ಲೇಕ್:** ಬಿಯರ್ ವ್ಯಾಪಾರ ಹಿಡೀತಾರೆ.

**ಬುಚರ್:** ಅಡ್ಡಿಯಿಲ್ಲ ತಾನೇ?

ಡಾಗ್ಸ್‌ಬರೋ: ಹಳೇ ಸ್ನೇಹ ನೆನಸಿಕೊಂಡು ನೀವು ತೋರಿಸತಿರೋ ಪ್ರೀತಿ ನನಗೆ ಅರ್ಥವಾಗತ್ತೆ. ಆದರೂ ಹಡಗುಕಟ್ಟೆಯನ್ನ ಯಾರೂ ಗಾಳಿಗೆ ತೂರಿಬಿಡೋಲ್ಲ.

ಫ್ಲೇಕ್: ಇದರಲ್ಲಿ ಕೊಂಚ ಸ್ವಾರ್ಥ ಇದೆ. ಸಾಲ ಕೋರಿದ್ದು ಸಿಗಲಿಲ್ಲ. ಕೊನೆಯ ಪಕ್ಷ ಈ ಇಪ್ಪತ್ತು ಸಾವಿರವಾದರು ಕೈ ಹತ್ತಲಿ ಅಂತ.

ಬುಚರ್: ಸದ್ಯಕ್ಕೆ ಉಳಿದಿರುವ ಶೇರನ್ನ ನಾವು ಮಾರೋ ಯೋಚನೆ ಮಾಡಿಲ್ಲ.

ಡಾಗ್ಸ್‌ಬರೋ: ಹಾಗಂತ ನಾನೂ ತಿಳದಿದೀನಿ. ಇನ್ನೇನು ಒಳಸಂಚಿಲ್ಲದಿದ್ರೆ ವ್ಯವಹಾರ ಅಷ್ಟೇನೂ ಕೆಟ್ಟದ್ದಲ್ಲ.

ಫ್ಲೇಕ್: ಅಂಥದೇನೂ ಇಲ್ಲ.

ಡಾಗ್ಸ್‌ಬರೋ: ಇಪ್ಪತ್ತು ಸಾವಿರಾ ಅಂದಿರಾ?

ಫ್ಲೇಕ್: ಹೆಚ್ಚಾಯ್ತು?

ಡಾಗ್ಸ್‌ಬರೋ: ಹಾಗೇನಿಲ್ಲ. ಇಪ್ಪತ್ತು ವರ್ಷದ ಹಿಂದೆ ನನ್ನ ಮೊದಲ ಕ್ಯಾಂಟಿನ್ ವ್ಯವಹಾರ ಷುರು ಮಾಡಿದ ಹಡಗುಕಟ್ಟೆ ಅದು. ನೀವು ಸಾಲದ ವಿಷಯ ಕೈ ಬಿಟ್ಟಿರಾ?

ಫ್ಲೇಕ್: ಖಂಡಿತ.

ಡಾಗ್ಸ್‌ಬರೋ: ಆ ಬಗ್ಗೆ ನಾನು ಮತ್ತೆ ಯೋಚನೆಮಾಡಬಹುದು. ಇಲ್ನೋಡೋ. ನೀನು ಕಲಿಯಬೇಕಾದ್ದು ಇಲ್ಲಿದೆ. ನೀವೆಲ್ಲ ನನ್ನ ಮುಳಗಸತೀರಿ ಅಂತಿದ್ರೆ ನೀವು ಭಾರಿ ಕೊಡುಗೇನೆ ನೀಡಿದಿರಿ. ನೋಡಯ್ಯ, ಪ್ರಾಮಾಣಿಕರಾಗಿದ್ರೆ ಎಷ್ಟು ಉಪಯೋಗ ಇದೆ ಆಗಾಗ. ನನ್ನ ಕಾಲ ಮುಗಿದಮೇಲೆ ಚಿಕ್ಕವರಿಗೆ ನನ್ನ ಹೆಸರು ಬಿಟ್ಟರೆ ಏನೂ ಉಳಿದಿರೋಲ್ಲ. ಭಿಕಾರಿಯಾಗಿರೋದು ಎಷ್ಟು ಭಯಂಕರ ಅನ್ನೋದನ್ನ ಈ ಮುದಿಗಣ್ಣಿಂದ ಕಂಡಿದೀನಿ.

ಬುಚರ್: ನೀವು ಇದನ್ನ ಒಪ್ಪಿಸಿಕೊಂಡರೆ ನಮಗೆ ನಿರಾಳ. ಸಾಲ ಕೇಳಿದ್ದರಿಂದ ಆಗಿರೋ ಮುಜುಗರ ಅದರಿಂದ ಕಡಿಮೆಯಾಗುತ್ತೆ. ಇನ್ನು ಮೇಲೆ ನಿಮ್ಮ ಬುದ್ಧಿವಾದವೇ ನಮಗೆ ದಾರಿದೀಪ. ನಮ್ಮ ಈ ದುಸ್ಥಿತಿಯಿಂದ ಪ್ರಾಮಾಣಿಕ ಹಾದಿ ಹಿಡಿದು ಪಾರಾಗೋದನ್ನ ನೀವು ತೋರಿಸಿಕೊಡಬೇಕು. ನಮ್ಮ ವ್ಯವಹಾರವೆಲ್ಲ ನಿಮ್ಮದೇ. ನೀವೀಗ ಕಾಲಿಫ್ಲವರ್ ವ್ಯವಹಾರ ಸೇರಿದಿರಿ. ನಮ್ಮ ಟ್ರಸ್ಟ್ ಗೆಲ್ಲಬೇಕು.

ಅದೇ ನಮ್ಮ ಆಸೆ. *(ಡಾಗ್ಸ್‌ಬರೋ ಕೈ ಹಿಡಿಯುತ್ತಾನೆ.)*

**ಡಾಗ್ಸ್‌ಬರೋ:** *(ಇಬ್ಬರನ್ನೂ ನೋಡಿ)* ನಾನು ನಿಮ್ಮ ಕಡೆ.

**ಮಗ:** ನಮ್ಮ ತಂದೆ ನಿಮ್ಮ ಕಡೆ.

(ಭಿತ್ತಿಪತ್ರ ಕಾಣಿಸುವುದು)

## ದೃಶ್ಯ ೩

(೧೨೨ನೇ ಬೀದಿ. ಬುಕ್ಮೇಕರ್ ಕಚೇರಿ. ಆರ್ಥುರೋ ಊಯಿ, ರೋಮ, ಅಂಗರಕ್ಷಕರು ರೇಡಿಯೋದಲ್ಲಿ ರೇಸಿಂಗ್ ವಾರ್ತೆ ಕೇಳುತ್ತಿದ್ದಾರೆ. ಪಕ್ಕದಲ್ಲಿ ಡಾಕ್‌ಡೈಸಿ ಇದ್ದಾಳೆ)

**ರೋಮಾ:** ಆರ್ಥುರೋ, ಹೀಗೆ ನೀನು ಗುಬುರು ಹಾಕ್ಕೊಂಡು, ಕೆಲಸವಿಲ್ಲದೆ ಕನಸು ಕಾಣೋದು ನಿಲ್ಲಿಸಬೇಕು. ಇಡೀ ಊರಲ್ಲಿ ಇದೇ ಮಾತು.

**ಊಯಿ:** *(ಕಹಿಯಾಗಿ)* ಏನು ಮಾತು? ಯಾರು ಮಾತಾಡೋದು? ನನ್ನ ಬಗ್ಗೆ ಯಾರೂ ಮಾತಾಡೋಲ್ಲ ಈಗ. ನೆನಪು ಅನ್ನೋದೇ ಇಲ್ಲ ಈ ಊರಿಗೆ. ಹೆಸರಿಗೆ ಬೆಲೆ ಇಲ್ಲ. ಎರಡು ತಿಂಗಳು ಒಂದು ಖೂನಿ ಮಾಡಲಿಲ್ಲ ಅಂದ್ರೆ ಆಸಾಮಿನಾ ಮರೆತ ಹಾಗೆ. *(ಪತ್ರಿಕೆಗಳನ್ನ ನೋಡಿ)* ಚಾಕು ಚೂರಿ ಸದ್ದು ಮಾಡದೇ ಇದ್ರೆ ಪೇಪರು ಕೂಡ ಗಪ್‌ಚಿಪ್. ನಾನೊಂದು ಡಜನ್ ಖೂನಿ ಮಾಡಿದ್ರು ಪೇಪರಲ್ಲಿ ಬರೋದು ಒಂದೋ ಎರಡೋ. ಕೆಲಸ ಎಷ್ಟು ನೀಟಾಗಿದ್ದೇನು? ಪ್ರಭಾವ ಬೇಕು. ಅಂದ್ರೆ ಬ್ಯಾಂಕ್ ಬ್ಯಾಲೆನ್ಸ್. ಆದರೆ ನಮ್ಮ ಗತಿ ಹೀಗಾಗಿದೆ. ಇದನ್ನೆಲ್ಲ ನೋಡತಿದ್ರೆ ಇಡೀ ಬಿಸಿನೆಸ್ ಬಿಟ್ಟುಬಿಡೋಣ ಅನ್ಸುತ್ತೆ.

**ರೋಮಾ:** ಹುಡುಗರಿಗೂ ಕೈಯಲ್ಲಿ ದುಡ್ಡಿಲ್ದೆ ಚಡಪಡಿಕೆ. ನಿಯತ್ತು ಕಡಿಮೆ ಆಗತಿದೆ. ಕೆಲಸವಿಲ್ದೆ ಇರೋದು ಅವರಿಗೆ ಒಳ್ಳೇದಲ್ಲ. ದುಡೀದೇ ಕೂತರೆ ನಾಶವಾಗತೀವಿ. ಹುಡುಗರನ್ನ ಕಂಡರೆ ಅಯ್ಯೋ ಅನ್ಸುತ್ತೆ. ಅವರಿಗೆ ಮುಖ ತೋರಿಸೋಕೆ ಹಿಂಜರಿಕೆ. 'ನಾಳೆಯಿಂದ ಕೆಲಸ ಶುರು' ಅಂತ ಅವರಿಗೆ ಹೇಳೋಕೆ ಆಸೆ. ಆದರೆ ಬಾಯಿ ಬರೋಲ್ಲ. ತರಕಾರಿ ಬಗ್ಗೆ ನಿನ್ನ ಐಡಿಯಾ ಸೊಗಸಾಗಿದೆ. ಅದನ್ನೇ ಯಾಕೆ ಹಿಡೀಬಾರದು?

**ಊಯಿ:** ಈಗಲ್ಲ. ಅದೂ ಈ ಸ್ಥಿತೀಲಂತೂ ಅಲ್ಲವೇ ಅಲ್ಲ. ಕಾಯಬೇಕು.

ರೋಮಾ: 'ಕಾಯಬೇಕು' ಅನ್ನೋದೇನೋ ಸರಿ. ನಾಕು ತಿಂಗಳಾಯ್ತು ಗೊತ್ತಾ? ಆ ಕಾಲಿಫ್ಲವರ್ ಟ್ರಸ್ಟ್‌ನವರು ನಿನ್ನ ತಳ್ಳಿಹಾಕಿ, ಕೆಲಸವಿಲ್ದೆ ಮೂಲೆ ಹಿಡಿದು ನಾಕು ತಿಂಗಳಾಯ್ತು. ಪ್ಲಾನ್. ಪ್ಲಾನ್. ಅವರು ಕೈ ಬಿಟ್ಟದ್ದರಿಂದ ನಿನ್ನ ಬೆನ್ನುಮೂಳೆ ಮುರಿದ ಹಾಗಾಗಿದೆ. ಆ ಹಾರ್ಪರ್ ಬ್ಯಾಂಕಲ್ಲಿ ಅಕಸ್ಮಾತ್ ಪೋಲಿಸ್ ಕೈಗೆ ಸಿಕ್ಕು ಇನ್ನೂ ನೀನು ಚೇತರಿಸಿಕೊಂಡಿಲ್ಲ.

ಊಯಿ: ಗುಂಡು ಹಾರಿಸಿಬಿಟ್ರಲ್ಲಯ್ಯ.

ರೋಮಾ: ಗಾಳೀಲಿ! ಅದೂ ಅಕ್ರಮ.

ಊಯಿ: ಆದರೂ ಎದೆ ಢಗ್ ಅಂತು. ನನ್ನ ಗುರುತು ಹಿಡಿಯೋ ಒಬ್ಬ ಸಾಕ್ಷೀನ ಅವರು ಹಿಡಿದು ಬಿಟ್ಟರಂತೂ ನನ್ನ ಕತೆ ಮುಗಿದ ಹಾಗೇನೆ. ಆ ಜಡ್ಜೋ ಮೂರು ಕಾಸಿನ ಯೋಗ್ಯತೆ ಇಲ್ಲದವನು; ಕರುಣೆ ಕೂಡ ಇಲ್ಲ.

ರೋಮಾ: ಪೋಲಿಸಿನವರು ಬ್ಯಾಂಕಲ್ಲಿ ಗುಂಡು ಹಾಕ್ತಿದಾರೆ. ಅಂಗಡಿ ಮುಂಗಟ್ಟಲ್ಲಿ ಅಲ್ಲ. ನೋಡೀಗ. ಹನ್ನೊಂದನೇ ಬೀದಿಯಿಂದ ಶುರು ಮಾಡೋಣ. ಒಂದು ನಾಲ್ಕು ಕಿಟಕಿಗಾಜು ಒಡೆಯೋಣ. ಕುರ್ಚಿಮೇಜು ಮುರಿಯೋಣ. ತರಕಾರೀಗೆ ಸೀಮೆಎಣ್ಣೆ ಸುರಿಯೋಣ. ಅಲ್ಲಿಂದ ಏಳನೇ ಬೀದಿಗೆ ಹೋಗೋದು. ಎರಡು ಮೂರು ದಿನ ಬಿಟ್ಕೊಂಡು ನಮ್ಮ ಗಿರಿ ಕೋಟಲ್ಲಿ ಹೂವು ಸಿಕ್ಕಿಸಿಕೊಂಡು ಹೋಗಿ ಅವರಿಗೆ ನಮ್ಮ ಕಾವಲು ಇದೆ ಅಂತಾ ಹೇಳುತಾನೆ. ಅವರ ವಹಿವಾಟಲ್ಲಿ ಒಂದಷ್ಟು ಭಾಗ ನಮಗೆ ಕೋಡೋದಕ್ಕೆ ಒಪ್ಪಿಸತಾನೆ.

ಊಯಿ: ಈ ಪೋಲಿಸು, ಜಡ್ಜ್‌ಗಳಿಂದ ನನಗೆ ಮೊದಲು ರಕ್ಷಣೆ ಬೇಕಾಗಿದೆ. ಆಮೇಲೆ ನಾನು ಬೇರೆಯವರಿಗೆ ರಕ್ಷಣೆ ಕೊಡೋದು. ನಾವು ಮೊದಲು ಮೇಲಿನವರನ್ನು ಹಿಡೀಬೇಕು. *(ಖಿನ್ನನಾಗಿ)* ಯಾರಾದರೂ ಒಬ್ಬ ಜಡ್ಜ್‌ನ ಜೇಬಿಗೆ ಏನನ್ನಾದರೂ ತುರುಕಿ ಅವನನ್ನ ನನ್ನ ಜೇಬಿಗೆ ಹಾಕಿಕೊಳ್ಳೋವರೆಗೆ ಕಾನೂನು ನನ್ನ ವಿರುದ್ಧ ಇದ್ದೇ ಇರುತ್ತೆ. ಬ್ಯಾಂಕ್ ಲೂಟಿಗೆ ಹೋದರೆ ಅಲ್ಲೊಬ್ಬ ತಲೆತಿರುಕ ಪೋಲಿಸು ಶೂಟ್ ಮಾಡುತಾನೆ.

ರೋಮಾ: ನೀನು ಹೇಳೋದು ಸರಿ. ಜಿವೋಲಾ ಮಾಡಿರೋ ಪ್ಲಾನೇ ನಮಗಿರೋ ದಾರಿ. ಅವನ ಮೂಗು ಬಲೇ ಚುರುಕು. ಕಾಲಿಫ್ಲವರ್ ಟ್ರಸ್ಟ್ ಕೊಳೆತು ನಾರತಿದೆ ಅಂತ ಅಂದನೋ, ಅಲ್ಲೇನೋ ಇದ್ದೇ ಇರುತ್ತೆ. ಡಾಗ್ಸ್‌ಬರೋ ಶಿಫಾರಸು ಮಾಡಿ ಅವರಿಗೆ

ಮುನಿಸಿಪಾಲಟಿ ಸಾಲ ಕೊಟ್ಟಾಗ ಜನ ಏನೇನೋ ಮಾತಾಡಿಕೊಳ್ಳತಿದ್ರು. ಅಲ್ಲಿಂದೀಚೆಗೆ ಕಟ್ಟಬೇಕಾಗಿದ್ದ ಬಂದರುಕಟ್ಟೆ ಸುದ್ದೀನೇ ಇಲ್ಲ. ಅದಕ್ಕೂ ಗುಸುಗುಸು. ಶಿಫಾರಸು ಮಾಡಿರೋದು ಡಾಗ್ಸ್‌ಬರೋ. ಈ ದಗಲಬಾಜಿಗೂ ಆ ಸಜ್ಜನನಿಗೂ ಏನು ಸಂಬಂಧ? ಇಗೋ ಬಂದ ವರದಿಗಾರ, ರ‍್ಯಾಗ್ ಅವನಿಗೆ ಈ ಬಗ್ಗೆ ಏನಾದ್ರೂ ಗೊತ್ತಿರುತ್ತೆ. ಏನಯ್ಯಾ!

ರ‍್ಯಾಗ್: *(ಕೊಂಚ ಅಮಲಿನಲ್ಲಿ)* ಹಾಂಯ್ ರೋಮಾ! ಹಾಂಯ್ ಆರ್ಥುರೋ! ಕೊಲೀ ಸುದ್ದಿ ಏನಾಯ್ತು?

ಊಯಿ: ಏನಂತಾನೆ ಅವನು?

ರ‍್ಯಾಗ್: ಏನೂ ಇಲ್ಲ. ಕೊಲೋನ್ ಅನ್ನೋ ಊರಿಗೆ ಹೋದ ಸೈನ್ಯ ಹೋರಾಟ ಬಿಟ್ಟು ಮಜಾ ಮಾಡತಾ ಅಲ್ಲೇ ನೆಲಕಚ್ಚಿತು.

ಊಯಿ: ಹಾಳಾಗಿ ಹೋಗು!

ರೋಮಾ: *(ರ‍್ಯಾಗ್‌ಗೆ)* ಸಾಕು ಸಾಕು. ಟ್ರಸ್ಟ್‌ಗೆ ಸಾಲ ಕೊಟ್ಟರಂತಲ್ಲ.

ರ‍್ಯಾಗ್: ನಿನಗೇನು? ನೀನೂ ತರಕಾರಿ ವ್ಯಾಪಾರಕ್ಕೆ ಇಳಿಯೋನೇನು? ಹಾಂ! ಗೊತ್ತಾಯ್ತು. ಸಾಲಕ್ಕೆ ಗಾಳ ಹಾಕತಿದ್ದೀಯಾ! ಆ ಡಾಗ್ಸ್‌ಬರೋ ಚೆನ್ನಾಗಿ ನೋಡ್ಕೊ. ಕೊಡಿಸತಾನೆ. *(ಮುದುಕನನ್ನು ಅಣಕಿಸುತ್ತಾ)* 'ಹಿಂದಿನಿಂದ ಬಲವಾಗಿ ನಡಕೊಂಡು ಬಂದ ವ್ಯಾಪಾರ, ಈಗೇನೋ ಕಷ್ಟಕಾಲ ಬಂದು ಮುಗ್ಗರಸತಾ ಇದೆ. ಅದನ್ನ ಹಾಳಾಗಿ ಹೋಗೋಕೆ ಬಿಟ್ಟು ಬಿಡೋಣವೇನು' ಎಲ್ಲ ಮೆಂಬರ ಕಣ್ಣಲ್ಲೂ ನೀರು. ಟ್ರಸ್ಟ್ ಬಗ್ಗೆ ಮುನಿಸಿಪಾಲಟಿಯವರಿಗೆಲ್ಲ ತುಂಬ ಪ್ರೀತಿ; ಅದು ಅವರ ಕರುಳ ತುಂಡು ಅನ್ನೋ ಅಷ್ಟು. ಏನಯ್ಯ ಆರ್ಥುರೋ. ಬಂದೂಕ ಇರೋದು ಕಣ್ಣೀರ ತರೀಸೋಕಾ? *(ಉಳಿದ ಗಿರಾಕಿಗಳು ನಗುತ್ತಾರೆ.)*

ರೋಮಾ: ತಲೆ ತಿನ್ನಬೇಡ. ಅವರ ಮನಸ್ಸು ಸರಿಯಿಲ್ಲ.

ರ‍್ಯಾಗ್: ಅಂದುಕೊಂಡೆ. ಜಿವೋಲಾ ಆ ಕೆಫೋನೆ ಹತ್ರ ಕೆಲಸ ಕೇಳತಿದ್ದನಂತೆ.

ಡಾಕ್‌ಡೈಸಿ: ಸುಳ್ಳು! ಅವನನ್ನ ಯಾಕೆ ಇದಕ್ಕೆ ಎಳೀತೀಯೋ?

ರ‍್ಯಾಗ್: ಹಾಯ್, ಡಾಕ್‌ಡೈಸಿ, ಆ ಕುಳ್ಳ ಜಿವೋಲಾ ಜನಾನಾದಲ್ಲಿ ಜಾಗ ಇದೆಯೋ ನಿನಗೆ ಇನ್ನೂ? *(ಅವಳನ್ನುತೋರಿಸಿ)* ನಾಲ್ಕನೆಯವಳು.

ಯಾರ ಜನಾನಾದಲ್ಲಿ? *(ಊಯಿ ತೋರಿಸಿ)* ಇವರ ಬಂಟರಲ್ಲಿ ಮೂರನೆಯವನ ಜನಾನಾ. ಏನು ಮಾಡೋದು ಗ್ರಹಗತಿ ಸರಿಯಿಲ್ಲ. ಶನಿದೆಸೆ.

ಡಾಕ್‌ಡೈಸಿ: ಈ ಬಾಯ ಹರಕನನ್ನ ಯಾರಾದ್ರೂ ತಡೀ ಬಾರದಾ?

ರ್‍ಯಾಗ್: ಗೂಂಡಾಗಳನ್ನ ಮುಂದಿನ ಜನಾಂಗ ಹಾಡಿ ಹೊಗಳುತ್ತೇನು? ತಲೆಸಮ ಇಲ್ಲದ ಜನರನ್ನ ಇನ್ಯಾವನೋ ಮರುಳು ಮಾಡತಾನೆ. ನಿನ್ನೆಯ ನಾಯಕನ್ನ ಮರೆತು ಎಷ್ಟು ಕಾಲ ಆಯ್ತು! ನಿಮ್ಮಂಥ ರೌಡಿಗಳ ಹಳೇ ಕಡತದಲ್ಲಿ ಧೂಳು ತಿನ್ನತೀರಿ. 'ಲೋ! ನಿನಗೆ ಗೂಸಾ ಕೊಟ್ಟಿದ್ದೆ ನೆನಪುಂಟಾ?' 'ಯಾವಾಗ?' 'ಒಂದಾನೊಂದು ಕಾಲದಲ್ಲಿ' 'ಅಯ್ಯೋ ಆ ಗಾಯದ ಕಲೆಯೆಲ್ಲ ಮಾಸಿಹೋಗಿ ಹಳೆಮಾತಾಯ್ತು! ಏನು ಮಾಡೋದು ಚಂದವಾಗಿರೋ ಕಲೆಗಳು ಕೂಡ, ಸತ್ತವರ ಜತೆ ಮಾಯವಾಗಿ ಬಿಡತವೆ.' ಒಳ್ಳೆ ಕೆಲಸಕ್ಕೆ ಕ್ಯಾರೆ ಅನ್ನದಿರೋ ಈ ಜಗತ್ತು ಕೆಟ್ಟ ಕೆಲಸಾನೂ ಹಾಗೇ ಮರೆತು ಬಿಡುತ್ತೋ ಏನೋ! 'ಏನು ಮಾಡೋದು ಸ್ವಾಮಿ ಅದು ಇರೋದು ಹಾಗೇ' ಇದರ ಬಾಯಿಗೆ ಮಣ್ಣ ಹಾಕ'.

ಊಯಿ: *(ಕಿರುಚುತ್ತ)* ಅವನ ಬಾಯಿಗೆ ಬೀಗ ಹಾಕರೋ. *(ಅಂಗರಕ್ಷಕರು ರ್‍ಯಾಗ್ ಬಳಿಗೆ)*

ರ್‍ಯಾಗ್: *(ಬಿಳಿಚಿಕೊಂಡು)* ಹುಷಾರ್, ಪೇಪರಿನೋರಿಗೆ ಅವಮಾನ ಮಾಡಬೇಡ. (ಉಳಿದ ಗಿರಾಕಿಗಳು ಭಯದಿಂದ ಎದ್ದು ನಿಲ್ಲುತ್ತಾರೆ.)

ರೋಮಾ: ಬಾಯಿ ಮುಚ್ಚಯ್ಯ. ಸಾಕಷ್ಟು ಬೊಗಳಿದ್ದೀಯಾ!

ರ್‍ಯಾಗ್: *(ಹಿಂಜರಿಯುತ್ತ, ಭಯದಿಂದ)* ಬರ್ತೀನ್ರಪ್ಪ. *(ಎಲ್ಲ ಹೋಗುತ್ತಾರೆ.)*

ರೋಮಾ: ಆರ್ಥುರೋ, ನಿನಗೆ ತುಂಬ ಮುಂಗೋಪ.

ಊಯಿ: ಈ ಸೂಳೆಮಕ್ಕಳು ನನ್ನನ್ನ ಕಾಲಕಸ ಅಂತ ತಿಳಿದಿದ್ದಾರೆ.

ರೋಮಾ: ಯಾಕಂದ್ರೆ ನೀನು ಕೈಕಟ್ಟಿ ಕುಳಿತಿದಿಯಾ ಅದಕ್ಕೆ.

ಊಯಿ: *(ಖಿನ್ನನಾಗಿ)* ಗಿರಿ ಮತ್ತೆ ಆ ಅಕೌಂಟೆಂಟ್ ಬಂದರಾ?

ರೋಮಾ: ಅವರು ಮೂರಕ್ಕೆ ಬರಬೇಕಿತ್ತು.

ಊಯಿ: ಜಿವೋಲಾ? ಏನವನ ಕಥೆ?

ರೋಮಾ: ಅದೇನಿಲ್ಲ. ಹೂ ಅಂಗಡಿಯಲ್ಲಿ ತನ್ನ ಪಾಡಿಗೆ ತಾನಿದ್ದಾನೆ. ಅಲ್ಲಿಗೆ ರೀತ್ ಕೊಳ್ಳೋದಕ್ಕೆ ಕೆಘೋನೆ ಬಂದಿದ್ದಕ್ಕೆ ಇದೆಲ್ಲ ಸುದ್ದಿ.

ಊಯಿ: ರೀತ್? ಯಾರಿಗೆ?

ರೋಮಾ: ನಮಗಲ್ಲ.

ಊಯಿ: ಗ್ಯಾರಂಟೀನಾ?

ರೋಮಾ: ನಿನಗೆ ಎಲ್ಲ ಹಳದಿಯಾಗಿ ಕಾಣತದೆ. ನಮ್ಮ ಬಗ್ಗೆ ಯಾರು ಯಾಕೆ ತಲೆಕೆಡಿಸಿಕೊಳ್ಳತಾರೆ?

ಊಯಿ: ಅದೂ ಸರಿ! ಅವರಿಗೆ ಕಾಲುಕಸ ಕಂಡರೇ ಮರ್ಯಾದೆ. ಆ ಜಿವೋಲಾನ್ನ ನೋಡು ನಾವು ಒಂದು ಸಾರಿ ಮುಗ್ಗರಿಸಿದರೆ ಸಾಕು ಅರಚಿಕೊಳ್ಳತಾನೆ. ದೇವರ ದಯದಿಂದ ಕೈ ಕುದುರಿದರೆ ಅವನ ಸಾಲ ತೀರಿಸಿಬಿಡತೀನಿ.

ರೋಮಾ: ಗಿರಿ? *(ಇಮ್ಯಾನುವೆಲ್ ಗಿರಿ, ಒಬ್ಬ ಸುಸ್ತಾದ ವ್ಯಕ್ತಿ, ಬೌಲ್ ಬರುತ್ತಾರೆ.)*

ಗಿರಿ: ಸಿಕ್ಕಿಬಿಟ್ಟ ಬಾಸ್.

ರೋಮಾ: *(ಬೌಲ್‌ಗೆ)* ನೀನು ಟ್ರಸ್ಟಲ್ಲಿ ಶೀಟ್ ಅವರಿಗೆ ಅಕೌಂಟೆಂಟ್ ಹೌದಾ?

ಬೌಲ್: ಆಗಿದ್ದೆ...ಕಳೆದವಾರದವರೆಗೂ, ಆ ಬಡ್ಡೀಮಗ...

ಗಿರಿ: ಅವನಿಗೆ ಕಾಲಿಫ್ಲವರ್ ವಾಸನೆ ಕಂಡರೂ ಆಗೋದಿಲ್ಲ ಈಗ.

ಬೌಲ್: ಡಾಗ್ಸ್ ಬರೋ.

ಊಯಿ: *(ಬೇಗ)* ಡಾಗ್ಸ್‌ಬರೋ? ಏನವರ ಕಥೆ?

ರೋಮಾ: ನಿನಗೂ ಅವರಿಗೂ ಏನು ಸಂಬಂಧ?

ಗಿರಿ: ಅದಕ್ಕೆ ಇವನನ್ನ ಇಲ್ಲಿಗೆ ಕರೆದುಕೊಂಡು ಬಂದದ್ದು.

ಬೌಲ್: ಡಾಗ್ಸ್‌ಬರೋ ನನ್ನನ್ನ ಕೆಲಸದಿಂದ ಕಿತ್ತುಹಾಕಿಬಿಟ್ರು.

ರೋಮಾ: ನಿನ್ನ ಕೆಲಸ ಕಿತ್ತು ಕೊಂಡರಾ? ಶೀಟ್ ಹಡಗು ಕಟ್ಟೆಯಿಂದಾ?

ಬೌಲ್: ಇಲ್ಲ. ಅವರದೇ ಹಡಗುಕಟ್ಟೆಯಿಂದ. ಸೆಪ್ಟೆಂಬರ್ ಒಂದರಿಂದ ಅವರದ್ದು ಅದು.

ರೋಮಾ: ಏನು ನೀನು ಹೇಳತಿರೋದು!

ಗಿರಿ: ಶೀಟ್ ಹಡಗುಕಟ್ಟೆ ಈಗ ಡಾಗ್ಸ್‌ಬರೋಗೆ ಸೇರಿದ್ದು. ಟ್ರಸ್ಟ್‌ನ ಬುಚರ್, ಅವರಿಗೆ ಶೇ. ಐವತ್ತೊಂದು ಶೇರುಗಳನ್ನ ಕೊಟ್ಟಾಗ ಈತ ಅಲ್ಲೇ ಇದ್ದ.

ಊಯಿ: ಅದಕ್ಕೇನೀಗ?

ಬೌಲ್: ಅದಕ್ಕೇನೀಗ! ಅವ್ಯವಹಾರ ಅದು....

ಗಿರಿ: ಗೊತ್ತಾಯ್ತು ಬಾಸ್.

ಬೌಲ್: ಡಾಗ್ಸ್‌ಬರೋ ಆ ಟ್ರಸ್ಟ್‌ಗೆ ಸಾಲಕ್ಕೆ ಶಿಫಾರಸು ಮಾಡಿದಾರೆ.

ಗಿರಿ: ಅವರೇ ಟ್ರಸ್ಟ್‌ಗೆ ಗುಟ್ಟಾಗಿ ಮೆಂಬರು ಕೂಡ ಆಗಿದಾರೆ.

ಊಯಿ: *(ಏನೋ ಹೊಳೆದವನಂತೆ)* ಅಂದರೆ ಲಂಚ. ಆ ಮುದುಕ, ದೇವರ ದಯದಿಂದ ಅಷ್ಟು ಶುದ್ಧ ಅಲ್ಲ.

ಬೌಲ್: ಸಾಲ ಟ್ರಸ್ಟ್‌ಗೆ. ಆದರೆ ಅವರು ಹಡಗುಕಟ್ಟೆ ಮೂಲಕ ವ್ಯವಹಾರ ಮಾಡಿದಾರೆ. ನನ್ನ ಕಡೆಯಿಂದ ನಾನು ಡಾಗ್ಸ್‌ಬರೋ ಪರವಾಗಿ ರುಜು ಮಾಡಿದೀನಿ. ಜನ ಶೀಟ್ ಪರವಾಗಿ ಅಂತ ತಿಳದಿದಾರೆ.

ಗಿರಿ: ಅಬ್ಬಬ್ಬ ಸಕತ್ತು. ಎಲಾ ಡಾಗ್ಸ್‌ಬರೋ. ನಂಬಿಗಸ್ಥ, ಸತ್ಯದ ಗುತ್ತಿಗೆ ಹಿಡಿದಿದ್ದವನು, ಜವಾಬ್ದಾರಿ ಇದ್ದವನು. ಅವನು ಕೈ ಕುಲುಕಿದ್ರೆ ಸಾಕು ಜನಕ್ಕೆ ಅದೇ ಒಂದು ಮರ್ಯಾದೆ, ಒಂದು ಗೌರವ. ಲಂಚ ಅಂದರೆ ಮೈಲಿ ದೂರ ಹಾರತಿದ್ದ ಮುದುಕ.

ಬೌಲ್: ಅವನು ಅದನ್ನೆಲ್ಲ ಕಕ್ಕಬೇಕು, ಹಾಗೆ ಮಾಡತೀನಿ. ಗೊತ್ತಾ? ಅವನು ಲಂಚ ತಿಂದು, ದುಡ್ಡು ನುಂಗಿ ಹಾಕಿದಾನೇ ಅಂತ ನನ್ನನ್ನ ಕೆಲಸದಿಂದ ತೆಗೆದುಹಾಕಿದ್ದಾನೆ!

ರೋಮಾ: ಸಮಾಧಾನ! ಇಂಥ ಕೆಡುಕತನ ಕಂಡರೆ ಯಾರಿಗಾದರೂ ರಕ್ತ ಕುದಿಯೋದೇ ಸರಿ. ಏನಂತೀಯಾ ಆರ್ಥುರೋ?

ಊಯಿ: *(ಬೌಲ್‌ನನ್ನು ತೋರಿಸಿ)* ಸಾಕ್ಷಿ ಹೇಳತಾನಾ?

ಗಿರಿ: ಹೇಳತಾನೆ.

ಊಯಿ: *(ಉತ್ಸುಕನಾಗಿ)* ಅವನ ಮೇಲೆ ಕಣ್ಣಿರಲಿ. ರೋಮಾ ಬಾ. ಈಗೇನೋ ಹಾದಿ ಕಾಣಸತಿದೆ. *(ಹೋಗುವನು. ಹಿಂದೆ ರೋಮಾ. ಅಂಗರಕ್ಷಕರು)*

ಗಿರಿ: *(ಬೌಲ್ ಬೆನ್ನು ತಟ್ಟಿ)* ನಿನ್ನಿಂದಾಗಿ ಚಕ್ರ ತಿರುಗೋಕೆ ಶುರು ಆಯ್ತು....

ಬೌಲ್: ಏನೇ ಆಗಲಿ, ನನಗೆ ಕೈ ತುಂಬ ಕೊಡಸತೀ ತಾನೆ.

ಗಿರಿ: ಅನುಮಾನ ಯಾಕೆ? ಬಾಸ್ ನನಗೆ ಚೆನ್ನಾಗಿ ಗೊತ್ತು.

# ದೃಶ್ಯ ೪

*(ಡಾಗ್ಸ್‌ಬರೋನ ತೋಟದ ಮನೆ. ಡಾಗ್ಸ್‌ಬರೋ ಮತ್ತು ಅವನ ಮಗ)*

**ಡಾಗ್ಸ್‌ಬರೋ:** ಅಲ್ಲದೆ ಸಾಲಕ್ಕೆ ಶಿಫಾರಸ್ಸು ಮಾಡಿದ್ದು, ಅದರಲ್ಲೂ ಚೆನ್ನಾಗಿ ಕುದುರಿದ್ದ ವ್ಯಾಪಾರ, ಪಾಪ, ಬಂಡವಾಳ ಇಲ್ಲದೆ ಮುಳುಗಿ ಹೋಗ್ತಿದೆ ಅಂತ ತಿಳಿದೂ ಶಿಫಾರಸು ಮಾಡಿದ್ದು ತಪ್ಪಲ್ಲ. ಈ ಸಾಲ ಮಂಜೂರಾಗೋಕೆ ಮೊದಲೇ, ಈ ಮನೆಯನ್ನ ಉಡುಗೊರೆ ಪಡೆದದ್ದು, ನನ್ನ ಬೇಳೆ ಬೇಯಿಸಿಕೊಂಡದ್ದು ಮಾತ್ರ ತಪ್ಪು.

**ಮಗ:** ಹೌದಪ್ಪ.

**ಡಾಗ್ಸ್‌ಬರೋ:** ತಪ್ಪು ತೀರ್ಮಾನ, ಹಾಗಂತ ಜನ ತಿಳೀಬಹುದು. ಈ ಆಸ್ತಿ ತಗೋಬಾರದಿತ್ತು.

**ಮಗ:** ಹೌದು, ತಗೋಬಾರದಿತ್ತು.

**ಡಾಗ್ಸ್‌ಬರೋ:** ನಾವಾಗಿಯೇ ಹೋಗಿ ಬಲೆಗೆ ಬಿದ್ದೆವು,

**ಮಗ:** ಹೌದಪ್ಪ.

**ಡಾಗ್ಸ್‌ಬರೋ:** ಇನ್ನು ಆ ಶೇರು. ಬಾರ್‌ಗೆ ಬಂದ ಗಿರಾಕಿಗೆ ಪುಕ್ಕಟ್ಟೆ ಕೊಡೋ ಉಪ್ಪು ಬಿಸ್ಕತ್ ಹಾಗೆ. ಹಸಿವು ಹೋಗಲಿಕ್ಕೆ ತಿಂದರೆ ತಡೀಲಾರದಷ್ಟು ಬಾಯಾರಿಕೆ. *(ಮೌನ)* ಬಂದರು ಕಟ್ಟೆ ಕುರಿತು ನಗರ ಸಭೇಲಿ ನಡೆದಿರೋ ವಿಚಾರಣೆ ನನ್ನ ಮುಗಿಸುತ್ತೆ. ಸಾಲ ಎಲ್ಲ ಬಳಸಿ ಆಗಿದೆ. ಕ್ಲರ್ಕ್, ಕಾರೂಥರ್, ಫ್ಲೇಕ್, ಬುಚರ್ ಎಲ್ಲ ತಂತಮ್ಮ ಪಾಲು ತಕ್ಕೊಂಡ್ರು, ಹೇಳೋಕೆ ಪಿಚ್ ಅನ್ಸುತ್ತೆ, ನನಗೂ ನನ್ನ ಪಾಲು ಬಂತು. ಆದರೆ ಕಟ್ಟಡದ ಕೆಲಸಕ್ಕೆ ಒಂದು ಚಿಟಕೆ ಸಿಮೆಂಟ್ ಕೂಡ ಖರ್ಚಾಗಿಲ್ಲ. ಇದ್ದದ್ದರಲ್ಲಿ ನಿರಾಳ ಅಂದರೆ, ಶೀಟ್ ಹೇಳಿದ ಹಾಗೆ ಇಡೀ ವ್ಯವಹಾರ ಗುಟ್ಟಾಗಿ ಇಟ್ಟಿದೀನಿ. ಹಾಗಾಗಿ ಹಡಗುಕಟ್ಟೆಗೂ ನನಗೂ ಇರುವ ಸಂಬಂಧ ಯಾರಿಗೂ

ಗೊತ್ತಿಲ್ಲ.

**ಬಟ್ಲರ್:** *(ಪ್ರವೇಶಿಸಿ)* ಟೆಲಿಫೋನ್ ಸರ್, ಟ್ರಸ್ಟ್‌ನಿಂದ ಮಿ. ಬುಚರ್.

**ಡಾಗ್ಸ್‌ಬರೋ:** ಅದೇನು ನೋಡಯ್ಯ *(ಮಗ, ಬಟ್ಲರ್ ನಿರ್ಗಮನ. ಚರ್ಚ್ ಗಂಟೆಗಳು)* ಈಗೇನು ಬೇಕಂತೋ ಈ ಬುಚರ್‌ಗೇ? *(ಕಿಟಕಿಯಲ್ಲಿ ನೋಡುತ್ತಾನೆ)* ಈ ಜಾಗ ತೆಗೆದುಕೊಳ್ಳೋಕೆ ಆಸೆ ಹುಟ್ಟಿಸಿದ್ದು ಈ ಸಾಲ ವೃಕ್ಷಗಳು, ಅವುಗಳ ಬದಿಯ ಸರೋವರ. ನಾಣ್ಯವಾಗೋಕೆ ಮೊದಲು ಥಳಥಳಗುಟ್ಟುವ ಬೆಳ್ಳಿಯ ಹಾಗೆ. ಗಾಳಿಗೆ ಬಿಯರ್ ನೊರೆಯ ವಾಸನೆ ಕೂಡ ಇಲ್ಲ. ಈ ಮರಗಳನ್ನ ನೋಡೋಕೇ ಒಂದು ಚಂದ. ಅದರಲ್ಲೂ ಹಸಿರು ತುದಿಯನ್ನ. ಕಾಂಡಗಳೋ ಬೂದಿ–ಹಸಿರು. ಅದರ ತುಂಬ ಧೂಳು. ಪೀಪಾಯಿಂದ ಬಿಯರ್ ಸುರಿದುಕೊಳ್ಳುವ ನಲ್ಲಿಯ ಸುತ್ತ ಸುತ್ತೋ ಚರ್ಮದ ಪಟ್ಟಿ ಹಾಗೆ. ಹಾಂ! ಈ ಸಾಲವೃಕ್ಷಗಳೇ ನನ್ನನ್ನ ಸೆಳೆದದ್ದು. ಭಾನುವಾರ. ಜಗತ್ತಿನಲ್ಲಿ ಇಷ್ಟೊಂದು ಕೆಡುಕಿಲ್ಲದೇ ಹೋಗಿದ್ದರೆ ಚರ್ಚ್ ಗಂಟೆಗಳ ನಿನಾದ ಶಾಂತವಾಗಿ ಕೇಳಸುತ್ತಿತ್ತು. ಆದರೆ ಈ ಭಾನುವಾರ ಬುಚರ್‌ಗೆ ಏನು ಬೇಕೋ? ನಾನು ಖಂಡಿತ ಇದಕ್ಕೆಲ್ಲ....

**ಮಗ:** *(ಬಂದು)* ಅಪ್ಪ. ಬುಚರ್ ಹೇಳಿದ್ದೇನು ಗೊತ್ತಾ? ನಿನ್ನೆ ರಾತ್ರಿ ಮುನಿಸಿಪಾಲಟಿಯವರು, ಕಾಲಿಫ್ಲವರ್ ಟ್ರಸ್ಟ್‌ಗೆ ಬಂದರುಕಟ್ಟೆ ನಿರ್ಮಾಣಕ್ಕೆ ಕೊಟ್ಟಿದ್ದ ಯೋಜನೆ ಬಗ್ಗೆ ವಿಚಾರಣೆ ನಡೆಸೋದಕ್ಕೆ ತೀರ್ಮಾನ ಮಾಡಿದರಂತೆ. ಅಪ್ಪಾ ಏನಾಯ್ತು?

**ಡಾಗ್ಸ್‌ಬರೋ:** ನನ್ನ ಔಷಧ!

**ಮಗ:** *(ಕೊಡುತ್ತ)* ಇಲ್ಲಿದೆ ತಗೋ.

**ಡಾಗ್ಸ್‌ಬರೋ:** ಬುಚರ್‌ಗೆ ಏನು ಬೇಕಂತೆ?

**ಮಗ:** ಇಲ್ಲಿಗೆ ಬರತಾರಂತೆ.

**ಡಾಗ್ಸ್‌ಬರೋ:** ಇಲ್ಲಿಗಾ? ನಾನವನನ್ನ ನೋಡೋಲ್ಲ. ನನಗೆ ಹುಷಾರಿಲ್ಲ. ನನ್ ಎದೆ... *(ನಿಲ್ಲಲು ಯತ್ನಿಸುತ್ತಾನೆ, ಧೈರ್ಯವಾಗಿ)* ಆ ವ್ಯವಹಾರಕ್ಕೂ ನನಗೂ ಏನೇನೂ ಸಂಬಂಧವಿಲ್ಲ. ಅರವತ್ತು ವರ್ಷ ನಾನು ಸವೆಸಿದ್ದೇ ಇಕ್ಕಟ್ಟಿನ ಹಾದಿಯನ್ನ. ಅದು ಎಲ್ಲರಿಗೂ ಗೊತ್ತು. ಈ ಸಂಚಿನಲ್ಲಿ ಅವರು ನನ್ನನ್ನು ಸೇರಿಸೋದಕ್ಕೆ ಆಗೋದಿಲ್ಲ.

**ಮಗ:** ಖಂಡಿತಾ ಆಗೋದಿಲ್ಲ. ಈಗ ಹೇಗಿದೆ?

ಬಟ್ಲರ್: *(ಬಂದು)* ಯಾರೋ ಮಿ. ಊಯಿ. ನಿಮ್ಮನ್ನ ನೋಡೋಕೆ ಬಂದಿದ್ದಾರೆ ಸಾರ್.

ಡಾಗ್ಸ್‌ಬರೋ: ಗೂಂಡಾ!

ಬಟ್ಲರ್: ಹೌದು! ನಾನವನ ಪೋಟೋ ಪೇಪರಲ್ಲಿ ನೋಡಿದೀನಿ, ಟ್ರಸ್ಟ್‌ನ ಮಿ. ಕ್ಲರ್ಕ್ ಅವನನ್ನ ಇಲ್ಲಿಗೆ ಕಳಿಸಿದ್ದಾರಂತೆ.

ಡಾಗ್ಸ್‌ಬರೋ: ಒದ್ದು ಆಚೆಗೆ ಹಾಕು! ಯಾರಂತೆ ಕಳಿಸಿದ್ದು? ಕ್ಲರ್ಕ್! ಅಯ್ಯೋ ದೇವರೇ! ಈಗವನು ನನ್ನನ್ನ ಗೂಂಡಾ ಜತೆ ಸೇರಿಸಿಬಿಟ್ಟನಾ? ನಾನೀಗ... (ಆರ್ಥುರೋ ಊಯಿ ಮತ್ತು ಅರ್ನೆಸ್ಟೋ ರೋಮಾ ಪ್ರವೇಶ)

ಉಯಿ: ಮಿ. ಡಾಗ್ಸ್‌ಬರೋ.

ಡಾಗ್ಸ್‌ಬರೋ: ಗೆಟ್ ಔಟ್!

ರೋಮಾ: ನಮಗೇನು ಅಷ್ಟು ಆತುರ ಇಲ್ಲ ಸ್ವಾಮಿ. ಹೇಗೂ ಭಾನುವಾರ. ಸಹನೆ ಇರಲಿ.

ಡಾಗ್ಸ್‌ಬರೋ: ಆಚೆ ನಡಿ ಅಂದದ್ದು ಕೇಳಿಸಲಿಲ್ಲ?

ಮಗ: ನಮ್ಮಪ್ಪ ಹೇಳತಿದ್ದಾರೆ: ನಡಿಯೋ ಆಚೆಗೆ.

ರೋಮಾ: ಹೇಳಿದ್ದನ್ನೆ ಎರಡು ಸಾರಿ ಹೇಳಿಬಿಟ್ರೆ ಏನು ನಡುಗಿ ಬಿಡತಾರೋ?

ಊಯಿ: *(ಗಾಬರಿ ಇಲ್ಲದೆ)* ಮಿ.ಡಾಗ್ಸ್‌ಬರೋ.

ಡಾಗ್ಸ್‌ಬರೋ: ಎಲ್ಲಿ ಹೋದರು ಎಲ್ಲರೂ? ಪೋಲಿಸ್ ಕರೀರಿ.

ರೋಮಾ: ಮಗೂ, ನಾನಾಗಿದ್ರೆ ಈ ರೂಮು ಬಿಟ್ಟು ಅಲ್ಲಾಡತಿರಲಿಲ್ಲ. ಆಚೆ ಹೋಗುವಾಗ ಪಡಸಾಲೇಲಿ ಒಂದಷ್ಟು ತಲೆತಿರುಕ ಹುಡುಗರು ಅಡ್ಡಬಂದರೂ ಬಂದಾರು.

ಡಾಗ್ಸ್‌ಬರೋ: ಹೋ! ಗೂಂಡಾಗಿರಿ.

ರೋಮಾ: ನಾನು ಹಾಗಂತ ಹೇಳೊದಿಲ್ಲ! ಒಂಚೂರು. ಅರ್ಥವಾಗಲೀಂತ ಒತ್ತುಕೊಟ್ಟು ಹೇಳಿದ್ದು ಅಷ್ಟೆ.

ಊಯಿ: ಮಿ.ಡಾಗ್ಸ್‌ಬರೋ ನಾನು ಯಾರು ಅನ್ನೋದು ನಿಮಗೆ ತಿಳಿದಿಲ್ಲ. ಗೊತ್ತು ಅಥವಾ ನನ್ನ ಬಗ್ಗೆ ಅವರಿವರಿಂದ ಕೇಳಿರತೀರಿ. ಅವರು ನನ್ನ ಹೆಸರಿಗೆ ಮಸಿ ಬಳಿದಿದಾರೆ. ದ್ವೇಷದಿಂದ ತೇಜೋವಧೆ

ಮಾಡಿದ್ದಾರೆ. ನನ್ನ ಉದ್ದೇಶವನ್ನು ಕೊಳಕು ಬುದ್ಧಿ ಬಳಸಿ ತಿರಚಿದಾರೆ. ಹದಿನಾಲ್ಕು ವರ್ಷದ ಹಿಂದೆ, ಈ ನಿಮ್ಮ ಸೇವಕ, ಆಗ ಸಂಕೋಚ ಸ್ವಭಾವದವನು, ಬ್ರಾಂಕ್ಸ್‌ನಿಂದ ಕೆಲಸವಿಲ್ಲದೆ ಈ ನಿಮ್ಮ ನಗರದ ಬಾಗಿಲಿಗೆ ಕೆಲಸ ಹುಡುಕ್ಕೊಂಡು, ಹೊಸ ಜೀವನ ಶುರು ಮಾಡೋಕೆ ಬಂದ. ಅಂಥ ಕೀಳು ಕೆಲಸ ಏನಲ್ಲ. ನನ್ನ ಜತೆಗೆ ಆಗ ಇದ್ದವರು ಏಳು ಜನ. ಚಿಕ್ಕವರು. ನನ್ನ ಹಾಗೆ ಬರಿಗೈ. ಆದರೆ ದೇವರು ಸೃಷ್ಟೀಲಿ ತಂತಮ್ಮ ಪಾಲು ಪಡಕೊಳ್ಳೋದರಲ್ಲಿ ಮಾತ್ರ ನನ್ನಷ್ಟೇ ಎದೆಗಾರಿಕೆ, ಛಲ ಇದ್ದವರು. ಈಗ ನನ್ನ ಜತೆ ಮೂವತ್ತು ಜನ ಇದಾರೆ. ಇನ್ನೂ ಸೇರುತಾರೆ. ನಿಮಗೀಗ ಆಶ್ಚರ್ಯ 'ಅರೇ ಇ ಆರ್ಥುರೋ ಊಯಿಗೆ ನನ್ನಿಂದ ಏನಾಗಬೇಕು' ಅಂತ. ಅಂಥದೇನೂ ಇಲ್ಲ. ಜನ ನನ್ನನ್ನ ದರೋಡೆಖೋರ, ದಗಲುಬಾಜಿ ಅದು ಇದೂ ಅಂತಿರತಾರೆ. ಹೀಗೆ ತಪ್ಪು ತಿಳಿದರೆ ನನಗೆ ಮುಜುಗರ *(ಗಂಟಲು ಸರಿಪಡಿಸಿಕೊಂಡು)* ಜನ, ಅದರಲ್ಲೂ ಪೋಲಿಸು ಹಾಗೆ ತಿಳಿದಾಗ. ಯಾಕಂದ್ರೆ ನನಗೆ ಅವರನ್ನ ಕಂಡರೆ ಗೌರವ. ಅವರೂ ನನ್ನನ್ನ ಗೌರವಿಸಬೇಕಂತ ಆಸೆ. ಅದಕ್ಕೆ ನಾನೀಗ ನಿಮ್ಮಲ್ಲಿ ಕೇಳಿಕೊಳ್ಳೋಕೆ– ನನ್ನಂಥವನಿಗೆ ಕೇಳಿಕೊಳ್ಳೋದು ಇರಸುಮುರುಸು ಕೆಲಸ–ಸಮಯ ಬಂದರೆಅಧಿಕಾರಿಗಳಿಗೆ ನನ್ನ ಬಗ್ಗೆ ಒಂದು ಮಾತು ಹೇಳಬೇಕು ತಾವು.

**ಡಾಗ್ಸ್‌ಬರೋ:** *(ನಂಬಲಾಗದೆ)* ನಿನ್ನ ಪರವಾಗಿ? ನಾನು? ಹೌದು?

**ಊಯಿ:** ಅವಶ್ಯಕತೆ ಬಿದ್ದರೆ...ತರಕಾರಿ ವ್ಯಾಪಾರಿಗಳ ಜತೆ ನಮ್ಮ ವ್ಯಾಪಾರ ಸರಿಯಾಗಿ ಕುದುರದೇ ಹೋದರೆ ಮಾತ್ರ.

**ಡಾಗ್ಸ್‌ಬರೋ:** ತರಕಾರಿ ವ್ಯಾಪಾರಕ್ಕೂ ನಿನಗೂ ಏನು ಸಂಬಂಧ?

**ಊಯಿ:** ನಾನು ಅದನ್ನೇ ಹೇಳತಿದ್ದೆ. ತರಕಾರಿ ವಹಿವಾಟಿಗೆ ಈಗ ರಕ್ಷಣೆ ಬೇಕು. ನಾನು ಆ ಕೆಲಸ ಒತ್ತಾಯ ಮಾಡಿಯಾದ್ರೂ ತಗೋಬೇಕಂತಿದೀನಿ.

**ಡಾಗ್ಸ್‌ಬರೋ:** ಆ ವಹಿವಾಟಿಗೆ ಯಾರೂ ಅಡ್ಡಿಮಾಡತಿಲ್ಲವಲ್ಲ?

**ಊಯಿ:** ಈಗ ಇಲ್ಲದೆ ಇರಬಹದು. ಆದ್ರೆ ನಾನು ನಾಳೆ ಬಗ್ಗೆ ಹೇಳತಿದ್ದೀನಿ. ಅಲ್ಲ. ಆ ಭ್ರಷ್ಟ ಪೋಲಿಸ್ ನಂಬಿಕೊಂಡು ಅವರು ಎಲ್ಲೀವರೆಗೆ ಶಾಂತಿಯಿಂದ ವಹಿವಾಟು ನಡೆಸೋಕೆ ಸಾಧ್ಯ. ಯಾವನವೋ ಕಟುಕ ಕೈ ಅವರ ಚಿಕ್ಕ ಅಂಗಡೀನ ನಾಳೆ ನಾಶಮಾಡಬಹುದು;

ಗಲ್ಲಾಪೆಟ್ಟಿಗೆ ಹೊತ್ತು ಒಯ್ಯಬಹುದು. ಹೀಗಿರುವಾಗ ಒಂದಿಷ್ಟು ಖರ್ಚಾದರೂ ಆಗಲಿ. ಅವರು ರಕ್ಷಣೆ ಏರ್ಪಾಡು ಮಾಡಕೋಬಾರದೆ? ಅದೂ ಎಡವಟ್ಟು ಆಗೋಕೆ ಮೊದಲೇ.

**ಡಾಗ್ಸ್‌ಬರೋ:** ನನಗೆ ಗುಮಾನಿ.

**ಊಯಿ:** ಅಂದರೆ ಅವರಿಗೆ ಯಾವುದು ಒಳ್ಳೆಯದನ್ನೋದು ಗೊತ್ತಿಲ್ಲಾಂತ ಆಯ್ತು. ಅದೂ ಸಾಧ್ಯ. ಪುಟ್ಟ ತರಕಾರಿ ಅಂಗಡಿಯವನು ಪ್ರಾಮಾಣಿಕನಾಗಿದ್ರೂ ನಾಳೆ ಆಗೋದನ್ನ ಕಾಣದೇ ಇರಬಹುದು. ಕಷ್ಟಪಟ್ಟು ದುಡಿದ್ರು ತನಗೆ ಯೋಗ್ಯವಾದದ್ದು ಏನು ಅನ್ನೋದನ್ನ ತಿಳಿದೇನೂ ಇರಬಹುದು. ಹಾಗಿದ್ದಾಗ ಅವರಿಗೆ ಒಬ್ಬ ನಾಯಕ ಬೇಕು. ಅಲ್ಲದೆ ಈ ಕಾಲಿಫ್ಲವರ್ ಟ್ರಸ್ಟ್‌ನಿಂದಲೇ ಅವನು ಇಷ್ಟು ಏಳಿಗೆಗೆ ಬಂದಿದ್ರೂ ಅದರ ಬಗ್ಗೆ ಅವನಿಗೆ ಕಾಳಜೀನೆ ಇಲ್ಲ. ಅದಕ್ಕೆ ನಾನು ತಲೆ ಹಾಕತಿರೋದು. ಈ ಟ್ರಸ್ಟ್‌ಗೂ ರಕ್ಷಣೆ ಬೇಕಾಗಿದೆ. ಸುಲಿಗೆ ಮಾಡುವವರ ಮನೆ ಹಾಳಾಗ! ದುಡ್ಡುಕೊಡು ಇಲ್ಲ ಅಂಗಡಿ ಮುಚ್ಚು ಅಂತೀನಿ! ತ್ರಾಣ ಇಲ್ಲದವನು ನಾಶವಾಗತಾನೆ. ಹಾಳಾಗಲಿ ಬಿಡಿ. ಲೋಕದ ಕ್ರಮಾನೇ ಹಾಗೆ. ಟ್ರಸ್ಟ್‌ಗೆ ನನ್ನ ನೆರವು ಬೇಕಾಗಿದೆ ಅಷ್ಟೆ.

**ಡಾಗ್ಸ್‌ಬರೋ:** ಆದರೆ ಟ್ರಸ್ಟ್‌ಗೂ ನನಗೂ ಏನು ಸಂಬಂಧ? ಈ ಪ್ಲಾನ್ ನನ್ನ ಹತ್ರ ಯಾಕೆ ಹೇಳ್ತಿದೀಯಾ?

**ಊಯಿ:** ಬಂದೆ. ಅದನ್ನೇ ಹೇಳ್ತಿದೀನಿ. ನಿಮಗೆ ಏನು ಬೇಕಾಗಿದೆ. ಅದೂ ಹೇಳತೀನಿ. ಟ್ರಸ್ಟ್‌ಗೆ ತೋಳುಬಲ ಬೇಕು. ನನ್ನ ನಾಯಕತ್ವದಲ್ಲಿ ಮೂವತ್ತು ಜನ ಛಲಗಾರರು.

**ಡಾಗ್ಸ್‌ಬರೋ:** ಟ್ರಸ್ಟ್‌ನವರು ಟೈಪ್‌ರೈಟರ್ ಮಾರಿ ಗನ್‌ಗಳನ್ನ ಕೊಂಡರೆ ಅದು ಅವರ ವ್ಯವಹಾರ. ನನಗೂ ಅದಕ್ಕೂ ಸಂಬಂಧವಿಲ್ಲ.

**ಊಯಿ:** ತಾಳಿ. 'ಮೂವತ್ತು ಜನ ಶಸ್ತ್ರ ಹಿಡಕೊಂಡು, ನಮ್ಮ ಸುತ್ತ ಇದ್ದ ಮಾತ್ರಕ್ಕೆ ಏನೇನೂ ತೊಂದರೆಯಿಲ್ಲಾಂತ ಹೇಗೆ ನಂಬೋದು' ಅಂತೀರಿ ನೀವು. ಉತ್ತರ ಸರಳ. ಹಣದ ಚೀಲದ ಕುಣಿಕೆಯ ದಾರ ಯಾರ ಕೈಯಲ್ಲಿರುತ್ತೋ ಅವರ ಕೈಯಲ್ಲೇ ಬಲ ಇರೋದು. ಹೇಗೂ ನೀವು ನಮಗೆ ಸಂಬಳ ಕೊಡತೀರಿ. ಹಾಗಿದ್ದಾಗ ನಿಮಗೆ ಎದುರು ಬೊಗುಳೋಕೆ ಆಗುತ್ತೇನು? ನಿಮ್ಮ ಬಗ್ಗೆ ಇರೋ ಗೌರವ ಎಲ್ಲ ಕಳೆದು ಹೋಗಿ ಎದುರು ಬೀಳಬೇಕಂದರೂ

ಆಗೋದಿಲ್ಲ. ಇಷ್ಟಕ್ಕೂ ನಾನ್ಯಾರು? ನನಗೇನು ಬಲ ಇದೆ? ಹಿಡಿಯಷ್ಟು. ಈಗಾಗಲೇ ಕೆಲವರು ಕೈಬಿಟ್ಟಿದ್ದಾರೆ. ಈಗ ಇರೋವರೆ ಇಪ್ಪತ್ತು ಮಂದಿ; ಅದೂ ಇನ್ನೂ ಕಡಿಮೆ. ನಿಮ್ಮ ಬೆಂಬಲ ಇಲ್ದೆ ಹೋದ್ರೆ ನಾನು ಮುಳುಗಿ ಹೋದ ಹಾಗೆ, ನನ್ನ ಶತ್ರುಗಳಿಂದ. ಮುಚ್ಚುಮರೆ ಯಾಕೆ! ನನ್ನ ಹಿಂಬಾಲಕರೂ ನನ್ನ ತುಳಿದು ಬಿಡತಾರೆ. ನನ್ನನ್ನ ರಕ್ಷಿಸೋದು ನಿಮ್ಮ ಹೊಣೆ. ನಿಮ್ಮ ಜವಾಬ್ದಾರಿ. ಹದಿನಾಲ್ಕು ವರ್ಷ ಮಾಡಿದ್ದೆಲ್ಲ ಮುಳುಗಿ ಹೋಗತಿದೆ. ಮನುಷ್ಯನಿಗೆ ಮನುಷ್ಯ ನೆರವಾಗಲೇ ಬೇಕು.

**ಡಾಗ್ಸ್‌ಬರೋ:** ಮನುಷ್ಯ ಮನುಷ್ಯನಿಗೆ ಏನು ಮಾಡತಾನೆ ಅನ್ನೋದನ್ನ ಈಗ ತೋರಿಸ್ತೀನಿ. ಪೋಲಿಸು ಬರತಾರೆ ತಾಳು.

**ಊಯಿ:** ಏನು? ಪೋಲಿಸ್?

**ಡಾಗ್ಸ್‌ಬರೋ:** ಹೌದು. ಪೋಲಿಸ್.

**ಊಯಿ:** ಅಂದರೆ ಮನುಷ್ಯರಾಗಿ ನೀವು ನನಗೆ ನೆರವಾಗೋಕೆ ಇಷ್ಟಪಡತಿಲ್ಲ. *(ಅಬ್ಬರದಲ್ಲಿ)* ಹಾಗಾದ್ರೆ, ಒಬ್ಬ ರೌಡಿಯಾಗಿ ಒತ್ತಾಯಿಸ್ತೀನಿ. ಯಾಕಂದ್ರೆ ನೀವು ಒಬ್ಬ ಕೇಡಿ. ನಿಮ್ಮ ಬಣ್ಣ ಬಯಲು ಮಾಡತೀನಿ. ಪುರಾವೆ. ಇದೆ. ಬಂದರು ಕಟ್ಟೆ ವ್ಯವಹಾರದ ಬಗ್ಗೆ ವಿಚಾರಣೆ ನಡೆಯುತ್ತೆ. ಸಿಕ್ಕಿಹಾಕಿಕೊಳ್ಳತೀರಿ. ಶೀಟ್ ಹಡಗುಕಟ್ಟೆ ವಿಚಾರ. ನೆನಪುಂಟಾ! ರೇಗಿಸಬೇಡಿ. ವಿಚಾರಣೆಗೆ ತೀರ್ಮಾನ ಮಾಡಿದಾರೆ.

**ಡಾಗ್ಸ್‌ಬರೋ:** *(ಕಳೆಗುಂದಿ)* ಅವರು ಹಾಗೆ ಮಾಡೋದಿಲ್ಲ. ಸಾಧ್ಯವಿಲ್ಲ. ಅವರು ನನ್ನ ಸ್ನೇಹಿತರು.....

**ಊಯಿ:** ಯಾರೂ ಇಲ್ಲ ನಿಮಗೆ. ನಿನ್ನೆವರೆಗೆ ಇದ್ರು ಕೆಲವರು. ಇವತ್ತು ಒಬ್ಬರೂ ಇಲ್ಲ. ನಾಳೆ ಎಲ್ಲ ಶತ್ರುಗಳೇ. ನಿಮ್ಮನ್ನ ಪಾರು ಮಾಡೋಕೆ ಯಾರಿಂದಲಾದರೂ ಸಾಧ್ಯವಿದ್ದರೆ ಅದು ನನ್ನಿಂದಾನೇ. ನಾನು ಆರ್ಥುರೋ ಊಯಿ ನಾನು.

**ಡಾಗ್ಸ್‌ಬರೋ:** ನನ್ನನ್ನ ಯಾರೂ ವಿಚಾರಣೆಗೆ ಎಳೆಯೋಲ್ಲ. ನನ್ನ ಕೂದಲು ಬೆಳ್ಳಗಾಗಿದೆ.

**ಊಯಿ:** ಅದನ್ನ ಬಿಟ್ಟರೆ ನಿಮ್ಮ ವ್ಯವಹಾರದಲ್ಲಿ ಬೆಳ್ಳಗಿರೋದು ಏನೂ ಇಲ್ಲ, *(ಅವನ ಕೈ ಹಿಡಿಯಲು ಯತ್ನಿಸಿ)* ಸ್ವಲ್ಪ ತಲೆ ಓಡಿಸಿ. ಈಗ ಬಿಟ್ರೆ ಮತ್ತೆ ಸಿಗೋಲ್ಲ. ನಿಮ್ಮನ್ನ ಪಾರುಮಾಡೋ ಜವಾಬ್ದಾರಿ ನನಗೆ ಬಿಡಿ. ನೀವು ಹೂಂ ಅಂದ್ರೆ ಸಾಕು. ಯಾವ

ಬಡ್ಡೀಮಗನಾದ್ರೂ ನಿಮ್ಮ ತಂಟೆಗೆ ಬಂದ್ರೆ ತೀಡಿಬಿಡತೀನಿ. ನನಗೆ ಬೆಂಬಲ ಕೊಡಿ. ಬೇಡಿಕೊಳ್ತಿದೀನಿ. ಒಂದು ಸರ್ತಿ, ಒಂದೇ ಒಂದು ಸರ್ತಿ. ಹೂಂ ಅನ್ನಿ. ಇಲ್ಲದಿದ್ರೆ ಹುಡುಗರಿಗೆ ಮುಖ ತೋರಿಸೋಕೆ ಆಗೋಲ್ಲ. *(ಅಳುತ್ತಾನೆ)*

**ಡಾಗ್ಸ್‌ಬರೋ:** ಎಂದಿಗೂ ಇಲ್ಲ. ನಿನ್ನ ಸಹವಾಸಕ್ಕಿಂತ ಸಾಯೋದೇ ಮೇಲು.

**ಊಯಿ:** ನಾನು ಮುಳುಗಿ ಹೋದೆ. ನಂಗೊತ್ತು. ನಲವತ್ತಾದರೂ ಏನೂ ಸಾಧಿಸಲಿಲ್ಲ. ನೀವೀಗ ನನಗೆ ನೆರವಾಗಲೇ ಬೇಕು.

**ಡಾಗ್ಸ್‌ಬರೋ:** ಆಗೋದಿಲ್ಲ.

**ಊಯಿ:** ಹುಷಾರ್! ನಾಶವಾಗತೀರಿ.

**ಡಾಗ್ಸ್‌ಬರೋ:** ನಾನು ಜೀವಂತ ಇರೋವರೆಗೂ ನೀನು ಈ ತರಕಾರಿ ವಹಿವಾಟಿನಲ್ಲಿ ತಲೆಹಾಕಲಾರೆ.

**ಊಯಿ:** *(ಗಾಂಭೀರ್ಯದಿಂದ)* ಮಿ.ಡಾಗ್ಸ್‌ಬರೋ, ನನಗೆ ನಲವತ್ತು. ನಿಮಗೆ ಎಂಬತ್ತು. ದೇವರ ದಯ ಇದ್ದರೆ ನಿಮಗಿಂತ ಹೆಚ್ಚು ಕಾಲ ಇರತೀನಿ. ಇಷ್ಟಂತೂ ಗಟ್ಟಿ ಮಾಡಿಕೊಳ್ಳಿ. ತರಕಾರಿ ವ್ಯವಹಾರ ಹಿಡಿಯೋದಂತೂ ಗಟ್ಟಿ.

**ಡಾಗ್ಸ್‌ಬರೋ:** ಅಸಾಧ್ಯ.

**ಊಯಿ:** ರೋಮಾ, ಬಾ ಹೊರಡೋಣ *(ಬಾಗಿ ವಂದಿಸಿ ಹೊರಡುತ್ತಾನೆ)*

**ಡಾಗ್ಸ್‌ಬರೋ:** ಉಸಿರುಕಟ್ಟುತಿದೆ. ಖದೀಮ! ಖದೀಮ! ಈ ಮನೆಯನ್ನ ತಗೋಬಾರದಿತ್ತು. ಆದರೆ ಅವರು ಮುಂದುವರೀಲಾರರು. ವಿಚಾರಣೆ ನಡೆದರೆ ನಾನು ಮುಗಿದ ಹಾಗೆ. ಆದ್ರೆ ಅವರು ಧೈರ್ಯ ಮಾಡಲಾರರು.

**ಬಟ್ಲರ್:** *(ಬಂದು)* ಮುನಸಿಪಾಲಟಿಯಿಂದ ಗುಡ್‌ವಿಲ್ ಮತ್ತೆ ಗಫ್ಲೆಸ್ ಬಂದಿದ್ದಾರೆ. *(ಅವರಿಬ್ಬರೂ ಬರುತ್ತಾರೆ)*

**ಗುಡ್‌ವಿಲ್:** ಹಲೋ ಮಿ. ಡಾಗ್ಸ್‌ಬರೋ.

**ಡಾಗ್ಸ್‌ಬರೋ:** ಹಲೋ. ಏನಾದ್ರೂ ಹೊಸ ಸುದ್ದಿ?

**ಗುಡ್‌ವಿಲ್:** ಸಾಕಷ್ಟಿದೆ. ಆದ್ರೆ ಒಳ್ಳೇದಲ್ಲ. ಈಗ ಹೊರಗೆ ಹೋದದ್ದು ಆರ್ಥರೋ ಊಯಿ ಅಲ್ವೆ?

**ಡಾಗ್ಸ್‌ಬರೋ:** *(ಒತ್ತಾಯದ ನಗೆ)* ಸಾಕ್ಷಾತ್ ಅವನೆ. ಇಂಥ ಮನೆಗೆ ಕಳೆ ತರೋ ವ್ಯಕ್ತಿ ಅಲ್ಲ.

**ಗುಡ್‌ವಿಲ್:** ಖಂಡಿತ ಅಲ್ಲ. ಯಾಕೋ ಹವಾಮಾನ ಸರಿಯಿಲ್ಲ. ಟ್ರಸ್ಟ್‌ಗೆ ನಾವು, ಬಂದರುಕಟ್ಟೆ ಕಟ್ಟೋದಕ್ಕೆ ಸಾಲ ಮಂಜೂರ ಮಾಡಿ...

**ಡಾಗ್ಸ್‌ಬರೋ:** *(ಗತ್ತಿನಿಂದ)* ಸಾಲದ್ದೇನೀಗ?

**ಗಫ್ಲೆಸ್:** ರೇಗಬೇಡಿ. ಮೆಂಬರ್ಸು ಕೆಲವರು ಅದರಲ್ಲೇನೋ ಮೋಸ ಇದೆ ಅಂತಾರೆ.

**ಡಾಗ್ಸ್‌ಬರೋ:** ಮೋಸ.

**ಗುಡ್‌ವಿಲ್:** ಸಮಾಧಾನ. ಉಳಿದವರು ತಿರುಗಿ ಬಿದ್ದೆವು. ಕೈಕೈ ಮಿಲಾಯಿಸೋದ್ರಲ್ಲಿತ್ತು.

**ಗಫ್ಲೆಸ್:** 'ಡಾಗ್ಸ್‌ಬರೋ ಒಪ್ಪಂದದಲ್ಲಿ ಮೋಸ' ಅಂತ ಅವರು, 'ಹಾಗಿದ್ರೆ ಬೈಬಲ್, ಅದರಲ್ಲೂ ಮೋಸ ಇದೆಯೋ' ಅಂತ ನಾವು. ಒಂದಷ್ಟು ಜನ ನಿಮ್ಮ ಗುಣಗಾನ ಮಾಡಿದ್ರು, ನಿಮ್ಮ ಸ್ನೇಹಿತರು, ಕೆಲವರು 'ವಿಚಾರಣೆ ನಡೀಲಿ' ಅಂದ್ರು. ನಮ್ಮಲ್ಲಿರೋ ವಿಶ್ವಾಸದಿಂದ ಕೆಲವರು 'ವಿಚಾರಣೆ ಬೇಡ' ಅಂದ್ರು. ಇಡೀ ವ್ಯವಹಾರ ಮುಚ್ಚಿಹಾಕೋಕೆ ನೋಡಿದ್ರು. ನಿಮ್ಮನ್ನ ಸಂಶಯದಿಂದ ಹೊರಗೆ ಇಡೋಕೆ ಹೆಚ್ಚು ಜನ ಪ್ರಯತ್ನಪಟ್ರು. 'ಡಾಗ್ಸ್‌ಬರೋ ಅಂದ್ರೆ ಒಂದು ಹೆಸರು, ಒಬ್ಬ ವ್ಯಕ್ತಿ ಮಾತ್ರ ಅಲ್ಲ, ಒಂದು ಸಂಸ್ಥೆ' ಅಂತ ಕೂಗಿದ್ರು. ಈ ಗಲಾಟೇಲೀ ವಿಚಾರಣೆ ಪರವಾಗಿ ತೀರ್ಮಾನವಾಗಿ ಹೋಯ್ತು.

**ಡಾಗ್ಸ್‌ಬರೋ:** ವಿಚಾರಣೆ.

**ಗುಡ್‌ವಿಲ್:** ಓಕೇಸಿಯವರೇ ವಿಚಾರಣೆ ನಡೆಸತಾರೆ. ಈಗ ಟ್ರಸ್ಟ್‌ನವರು ಶೀಟ್ ಹಡಗುಕಟ್ಟೆಗೆ ನೇರವಾಗಿ ಸಾಲ ಮಂಜೂರಾಯ್ತು ಅಂತ ಹೇಳಬೇಕು. ಆ ಹಡಗುಕಟ್ಟೆಯವರೇ ಕಟ್ಟಡದ ಕೆಲಸಕ್ಕೆ ಒಪ್ಪಂದ ಮಾಡಿಕೊಳ್ಳಬೇಕು. ಅದು ಅವರ ಜವಾಬ್ದಾರಿ.

**ಡಾಗ್ಸ್‌ಬರೋ:** ಶೀಟ್ ಹಡಗುಕಟ್ಟೆಯವರು.

**ಗುಡ್‌ವಿಲ್:** ಈಗ ನಿಮ್ಮ ಪರವಾಗಿ ವಿಚಾರಣೇಲಿ ಹೇಳಿಕೆ ಕೊಡೋಕೆ, ಇಡೀ ವ್ಯವಹಾರದಲ್ಲಿ ನಡೆದಿರೋ ಗೋಜಲು ಬಿಡಿಸೋಕೆ ಒಬ್ಬ ವ್ಯಕ್ತಿಯನ್ನ ನೀವು ನೇಮಿಸಿ. ಅವನಲ್ಲಿ ನಿಮಗೆ ನಂಬಿಕೆ ಇರಬೇಕು. ಖಂಡಿತವಾದಿ ವ್ಯಕ್ತಿಯಾಗಬೇಕು. ಒಳ್ಳೆಯ ಹೆಸರಿರಬೇಕು ಆತನಿಗೆ.

ಡಾಗ್ಸ್‌ಬರೋ: ಹಾಗೇ ಮಾಡತೀನಿ.

ಗಫ್ಲೆಸ್: ಅಲ್ಲಿಗೆ ಸರಿಯಾಯ್ತು. ಈಗ ಈ ಮನೆ ನೋಡಬಹುದಾ? ನಾವಿದರ ಬಗ್ಗೆ ನಮ್ಮ ಸ್ನೇಹಿತರಿಗೆ ಹೇಳಬೇಕಲ್ಲ.

ಡಾಗ್ಸ್‌ಬರೋ: ಖಂಡಿತ.

ಗುಡ್‌ವಿಲ್: ಎಷ್ಟು ಪ್ರಶಾಂತವಾಗಿದೆ! ಚರ್ಚ್ ಗಂಟೆಗಳು! ಇದಕ್ಕಿಂತ ಏನುಬೇಕು?

ಗಫ್ಲೆಸ್: *(ನಗುತ್ತ)* ಹಡಗುಕಟ್ಟೆ ಕಾಣೋಲ್ಲ.

ಡಾಗ್ಸ್‌ಬರೋ: ನಾನು ಸರಿಯಾದವರನ್ನ ಕಳಿಸಿಕೊಡತೇನೆ *(ಹೊರಡುವರು)*

*(ಭಿತ್ತಿ ಪತ್ರ)*

## ದೃಶ್ಯ ೫

*(ನಗರಸಭೆ, ಬುಚರ್, ಫ್ಲೇಕ್, ಕ್ಲರ್ಕ್, ಮಲ್ಬೆರಿ, ಕಾರೂಥರ್ ಅವರ ಬದಿಗೆ ಬಿಳಿಯುಡಿಗೆಯಲ್ಲಿ ಡಾಗ್ಸ್‌ಬರೋ, ಓಕೇಸಿ, ಗಫ್ಲೆಸ್ ಮತ್ತು ಗುಡ್‌ವಿಲ್. ವರದಿಗಾರರು)*

**ಬುಚರ್:** (ಮೆಲ್ಲಗೆ) ತಡ ಮಾಡತಿದ್ದಾನೆ.

**ಮಲ್ಬರಿ:** ಶೀಟನ್ನ ಕರಕೊಂಡು ಬರತಿದ್ದಾನೆ. ಅವರಿಬ್ಬರಲ್ಲಿ ಒಂದು ಒಪ್ಪಂದ ಆಗದೇನೂ ಇರಬಹುದು. ಇಡೀ ರಾತ್ರಿ ಆ ಬಗ್ಗೆ ಮಾತುಕತೆ ನಡೆದಿರಬಹುದು. ಹಡಗುಕಟ್ಟೆ ಇನ್ನೂ ತನ್ನ ಸುಪರ್ದಿನಲ್ಲಿ ಇದೇ ಅಂತ ಶೀಟ್ ಈಗ ಹೇಳಬೇಕು ತಾನೆ?

**ಕಾರೂಥರ್:** ಅವನು ಇಲ್ಲಿ ಬಂದು ತಾನೊಬ್ಬ ಖದೀಮ ಅಂತ ಒಪ್ಕೋಬೇಕು! ಯಾಕೋ ಕೊಂಚ ಅತಿಯಾಯ್ತು.

**ಫ್ಲೇಕ್:** ಅವನು ಖಂಡಿತ ಬರೋಲ್ಲ.

**ಊಯಿ:** ಬರಲೇಬೇಕು.

**ಫ್ಲೇಕ್:** ಇಲ್ಲಿ ಬಂದು 'ಐದುವರ್ಷ ಜೈಲಿಗೆ ಕಳಿಸಿ' ಅಂತ ಯಾಕೆ ಕೇಳತಾನೆ?

**ಊಯಿ:** ಯಾಕಂದ್ರೆ ಅವನ ಹೆಂಡತಿ ಮಾಬೆಲ್‌ಗೆ ಐಷಾರಾಮು ಬೇಕು. ಅವಳನ್ನ ಕಂಡ್ರೆ ಶೀಟ್‌ಗೆ ಪ್ರಾಣ. ಹಾಗಾಗಿ ಅವನು ಈ ಒಪ್ಪಂದಕ್ಕೆ ಬರಲೇಬೇಕು. ಇಷ್ಟಕ್ಕೂ ಅವನೇನು ಪೂರ್ತಿ ಜೈಲಲ್ಲಿ ಇರಬೇಕಾಗಿಲ್ಲ. ಡಾಗ್ಸ್‌ಬರೋ ಅದನ್ನೆಲ್ಲ ನೋಡ್ಕೊಳ್ತಾರೆ. *(ಪೇಪರ್ ಹುಡುಗರ ಕೂಗು. ವರದಿಗಾರರು ಪತ್ರಿಕೆ ತರುತ್ತಾರೆ.)*

**ಗಫ್ಲೆಸ್:** ಶೀಟ್ ಮರಣ. ಹೋಟೆಲ್ ರೂಮಲ್ಲಿ. ಜೇಬಲ್ಲಿ ಸ್ಯಾನ್‌ಫ್ರಾನಿಸ್ಕೋಗೆ ತೆಗೆಸಿದ್ದ ಟಿಕೆಟ್ ಸಿಕ್ಕಿವೆ.

**ಬುಚರ್:** ಶೀಟ್ ಸತ್ತು ಹೋದನಾ?

ಓಕೇಸಿ: *(ಓದುತ್ತಾ)* ಕೊಲೆ.

ಮಲ್ಬರಿ: ಅಯ್ಯೋ ದೇವರೆ!

ಫ್ಲೇಕ್: *(ತಗ್ಗಿದ ದನಿಯಲ್ಲಿ)* ಅವನು ಬರಲಿಲ್ಲ.

ಗಫ್ಲೆಸ್: ಡಾಗ್ಸ್‌ಬರೋ, ಏನಾಯ್ತು?

ಡಾಗ್ಸ್‌ಬರೋ: *(ಮಾತಾಡಲು ಕಷ್ಟಪಡುತ್ತ)* ಏನಿಲ್ಲ. ಎಲ್ಲ ಸರಿ ಹೋಗುತ್ತೆ.

ಓಕೇಸಿ: ಶೀಟ್ ಮರಣ.

ಕ್ಲರ್ಕ್: ಪಾಪ, ಅವನ ಅನಿರೀಕ್ಷಿತ ಸಾವಿನಿಂದ ನಿಮ್ಮ ವಿಚಾರಣೆ ಅಡ್ಡಿಯಾಯ್ತು...

ಓಕೇಸಿ: ಆದರೂ ಅನಿರೀಕ್ಷಿತವಾದದ್ದು ಒಮ್ಮೊಮ್ಮೆ ನಿರೀಕ್ಷಿತವಾಗೇ ತೋರುತ್ತೆ. ಕೆಲವರು ಅನಿರೀಕ್ಷಿತಕ್ಕೆ ಕಾಯತಾ ಇರತ್ತಾರೆ. ಜೀವನ ಅಂದ್ರೆ ಹೀಗೇ. ಹೀಗಾಗಿ ನನಗೆ ಇದೆಲ್ಲ ಕೊಂಚ ಗೋಜಲಾಗಿದೆ. ನಾನು ಕೇಳಬೇಕಾಗಿರೋ ಪ್ರಶ್ನೆಗಳನ್ನ ಶೀಟ್ ಅವರಿಗೆ ಕೇಳಿ ಅಂತ ನೀವು ಹೇಳೊಲ್ಲ ತಾನೆ? ಏಕೆಂದರೆ ಈ ಪತ್ರಿಕೆ ಪ್ರಕಾರ ಅವರು ನಿನ್ನೆ ರಾತ್ರಿಯಿಂದ ಏನೂ ಮಾತಾಡಿಲ್ಲ.

ಮಲ್ಬರಿ: ಪ್ರಶ್ನೆಗಳು? ಸಾಲ ಹಡಗುಕಟ್ಟೆಗೆ ಕೊಟ್ಟದ್ದು ಗೊತ್ತು ತಾನೆ ನಿಮಗೆ?

ಓಕೇಸಿ: ಸರಿ. ಆದರೂ ಪ್ರಶ್ನೆ ಹಾಗೇ ಉಳಿಯುತ್ತೆ. ಹಡಗುಕಟ್ಟೆ ಯಾರದು?

ಫ್ಲೇಕ್: *(ಉಸಿರು ಬಿಗಿಹಿಡಿದು)* ತಮಾಷೆ ಪ್ರಶ್ನೆ. ಏನೋ ಟೋಪಿ ಹಾಕತಿದ್ದಾನೆ.

ಕ್ಲರ್ಕ್: *(ಹಾಗೇ)* ಏನೋ?

ಓಕೇಸಿ: ಏನಾದ್ರೂ ತೊಂದರೇನಾ ಡಾಗ್ಸ್‌ಬರೋ? ಗಾಳಿ ಸಾಕಾಗತಿಲ್ಲವಾ? *(ಇತರರಿಗೆ)* ಶೀಟ್ ದೇಹ ಮುಚ್ಚಿ ಹಾಕೋಕೆ ಗುಡ್ಡಗಟ್ಟಲೆ ಮಣ್ಣು ಮಾತ್ರ ಸಾಕಾಗೋದಿಲ್ಲ. ಒಂದಷ್ಟು ಗೊಬ್ಬರ ಕೂಡ ಸೇರಿಸಬೇಕಾಗಬಹುದು. ಹಾಗಂತ ನನ್ನ ಗುಮಾನಿ.

ಕ್ಲರ್ಕ್: ಅತಿಯಾಗಿ ಗುಮಾನಿ ಬೇಡ. ಗೂಬೆ ಕೂರಿಸತಿದ್ದೀರಿ. ಅದನ್ನ ಕಾನೂನು ಪ್ರಕಾರ ಎದುರಿಸೋದು ನಮಗೆ ಗೊತ್ತು.

ಮಲ್ಬರಿ: ಹೀಗೆ ಮುಸುಕಿನ ಗುದ್ದು ಯಾಕೆ? ಡಾಗ್ಸ್‌ಬರೋ ಇಡೀ ವ್ಯವಹಾರವನ್ನ ಸರಿಪಡಿಸುವುದಕ್ಕೆ ತಕ್ಕ ವ್ಯಕ್ತಿಯನ್ನ ನೇಮಿಸಿದಾರೆ.

ಆತ ಬರುವವರೆಗೆ ಕಾಯೋಣ.

**ಓಕೇಸಿ:** ಬಹಳ ತಡವಾಯ್ತು. ಆತ ಬಂದರೂ ಶೀಟ್ ಬಗ್ಗೆ ಏನಾದರೂ ಹೇಳಿಯಾನು ಅಂತ ನನಗೆ ಅನ್ನಿಸತ್ತಿಲ್ಲ.

**ಫ್ಲೇಕ್:** ಆತ ಸತ್ಯ ಹೇಳತಾನೆ. ತಿಳಿಸತಾನೆ.

**ಓಕೇಸಿ:** ಪ್ರಾಮಾಣಿಕ ವ್ಯಕ್ತಿನಾ? ಹಾಗಾದರೆ ನನಗೆ ಸುಲಭ. ನಿನ್ನೆ ರಾತ್ರಿ ಶೀಟ್ ಬದುಕಿದ್ದರಿಂದ ಎಲ್ಲ ಸ್ಪಷ್ಟವಾಗಲೇಬೇಕು. ನೀವು... *(ಡಾಗ್ಸಬರೋಗೆ)* ತಕ್ಕ ವ್ಯಕ್ತಿಯನ್ನ ಆಯ್ದಿದೀರಿ ತಾನೆ?

**ಕ್ಲರ್ಕ್:** *(ತಡೆದು)* ಅವನು ಎಂಥವನೇ ಇರಲಿ. ನೀವು ಒಪ್ಪಲೇಬೇಕು. ಅಗೋ ಬಂದ. *(ಆರ್ಥುರೋ ಊಯಿ, ಅರ್ನೆಸ್ಟೋ ರೋಮಾ ಹಾಗೂ ಅಂಗರಕ್ಷಕರ ಪ್ರವೇಶ)*

**ಊಯಿ:** ಹಾಯ್ ಕ್ಲರ್ಕ್! ಹಾಯ್ ಡಾಗ್ಸಬರೋ!

**ಕ್ಲರ್ಕ್:** ಹಾಯ್, ಊಯಿ.

**ಊಯಿ:** ನೀವು ಏನೋ ಪ್ರಶ್ನೆ ಕೇಳಬೇಕಂತ ಇದೀರಂತೆ?

**ಓಕೇಸಿ:** *(ಡಾಗ್ಸಬರೋಗೆ)* ಈತ ನೀವು ನೇಮಿಸಿದ ವ್ಯಕ್ತಿನಾ?

**ಕ್ಲರ್ಕ್:** ಹೌದು. ಯಾಕೆ? ತಕ್ಕವರಲ್ಲವಾ?

**ಗುಡ್‌ವಿಲ್:** ಡಾಗ್ಸಬರೋ. ನೀವು? ಹೀಗೆ...? *(ವರದಿಗಾರರಲ್ಲಿ ಗುಸುಗುಸು)*

**ಓಕೇಸಿ:** ಸದ್ದು!

**ವರದಿಗಾರ:** ಊಯಿ! *(ನಗು. ಮತ್ತೆ ಓಕೇಸಿ ಸುತ್ತಿಗೆ ಬಡಿಯುತ್ತಾರೆ. ಅಂಗರಕ್ಷಕರು ಸಂಜ್ಞೆ ಮಾಡುತ್ತಾರೆ)*

**ಓಕೇಸಿ:** ಇವರೆಲ್ಲ ಯಾರು?

**ಊಯಿ:** ನನ್ನ ಸ್ನೇಹಿತರು.

**ಓಕೇಸಿ:** *(ರೋಮಾನಿಗೆ)* ನೀನು?

**ಊಯಿ:** ಅರ್ನೆಸ್ಟೋ ರೋಮಾ, ನನ್ನ ಅಕೌಂಟೆಂಟ್.

**ಗಫ್ಲೆಸ್:** ತಡೀರಿ! ಡಾಗ್ಸಬರೋ, ಇದೆಲ್ಲ ನಿಜಾನಾ? *(ಡಾಗ್ಸಬರೋ ಮೌನ)*

**ಓಕೇಸಿ:** ಮಿ. ಊಯಿ. ಮಿ. ಡಾಗ್ಸಬರೋ ಏನೂ ಮಾತಾಡದೆ ಇರೋದು ನೋಡಿದ್ರೆ ನಿಮ್ಮಲ್ಲಿ ಅವರಿಗೆ ನಂಬಿಕೆ ಇದೆಯಂತ ಆಯ್ತು.

ಅಲ್ಲದೆ ನಾವು ನಿಮ್ಮನ್ನ ನಂಬಬೇಕಂತ ಅವರ ಆಸೆ ಇದ್ದೀತು. ಸರಿ. ಒಪ್ಪಂದ ಪತ್ರ ಎಲ್ಲಿ?

ಊಯಿ: ಯಾವ ಒಪ್ಪಂದ ಪತ್ರ?

ಕ್ಲರ್ಕ್: *(ಓಕೇಸಿ ಗುಡ್‌ವಿಲ್ ಕಡೆ ನೋಡುವುದನ್ನ ಕಂಡು)* ಹಡಗುಕಟ್ಟೆಗೆ ಬಂದರು ಸೌಲಭ್ಯ ವಿಸ್ತರಿಸುವುದಕ್ಕೆ ಕಟ್ಟಡಗಾರರ ಜತೆ ಸಹಿ ಹಾಕಿಸಿ ಮಾಡಿಕೊಂಡ ಒಪ್ಪಂದ ಪತ್ರ, ಮತ್ತೆ ಯಾವುದು?

ಊಯಿ: ಅಂಥ ಯಾವ ಒಪ್ಪಂದ ಪತ್ರಾನೂ. ನಾನು ಕಂಡಿಲ್ಲ.

ಓಕೇಸಿ: ನಿಜವಾಗಿ?

ಕ್ಲರ್ಕ್: ಯಾವ ಒಪ್ಪಂದ ಕೂಡ ಇಲ್ಲ ಅಂತೀಯಾ?

ಓಕೇಸಿ: *(ಬೇಗನೆ)* ಶೀಟ್ ಜತೆ ನೀವು ಮಾತಾಡಿದ್ದಿರಾ?

ಊಯಿ: ಇಲ್ಲ.

ಕ್ಲರ್ಕ್: ಓ! ಶೀಟ್ ಕೂಡ ಮಾತಾಡಲಿಲ್ಲವಾ?

ಊಯಿ: *(ಕೋಪದಿಂದ)* ನಾನು ಅವರ ಜತೆ ಮಾತಾಡಿದೇಂತ ಯಾರಾದ್ರೂ ಬೊಗಳಿದ್ರೆ ಅವನೊಬ್ಬ ಸುಳ್ಳುಗಾರ

ಓಕೇಸಿ: ಮಿ. ಊಯಿ ಈ ವ್ಯವಹಾರ ನೋಡಿಕೊಳ್ಳೋಕೆ ಮಿ. ಡಾಗ್ಸ್‌ಬರೋ ನಿಮ್ಮನ್ನ ನೇಮಿಸಿದಾನೆ ತಾನೆ?

ಊಯಿ: ನಾನು ನೋಡಿಕೊಳ್ಳತಾನೇ ಇದೀನಲ್ಲ.

ಓಕೇಸಿ: ಏನಾದ್ರೂ ಪ್ರಯೋಜನ?

ಊಯಿ: ಸತ್ಯ ತಿಳಕೊಳ್ಳೋದು ಸುಲಭ ಅಲ್ಲ. ಇಷ್ಟಕ್ಕೂ ಅದು ಇಷ್ಟವಾಗೋ ಸತ್ಯ ಅಲ್ಲ. ಮಿ. ಡಾಗ್ಸ್‌ಬರೋ ಅವರು ಈ ನಗರದ ಹಿತಾಸಕ್ತಿಗೆ ಜೀವ ತೇಯುವಂಥವರು. ನಮ್ಮಂಥ, ನಿಮ್ಮಂಥ ತೆರಿಗೆದಾರರು ಕಷ್ಟಪಟ್ಟು ಸಂಪಾದಿಸಿ ಕೊಟ್ಟ ತೆರಿಗೆ ಹಣವನ್ನು ಮುನಿಸಿಪಾಲಿಟಿ ಇಲ್ಲೇ ಯಾವುದೋ ಹಡಗುಕಟ್ಟೆಗೆ ಸಾಲವಾಗಿ ಕೊಟ್ಟಿದೆ. ಆ ಹಣ ಏನಾಯ್ತು ಅಂತ ತಿಳಿಯೋಕೆ ನನ್ನನ್ನ ಮಿ. ಡಾಗ್ಸ್‌ಬರೋ ನೇಮಿಸಿದ ಮೇಲೆ ನೋಡಿದರೆ ಹಣ ಎಲ್ಲ ಲಪಟಾಯಿಸಿದ್ದಾರೆ. ಅದು ಒಂದು ಪಾಯಿಂಟು. ಇನ್ನೊಂದು ಯಾರು ಲಪಟಾಯಿಸಿದ್ದು ಅಂತ. ಅದಕ್ಕೂ ಉತ್ತರ ಇದೆ ನನ್ನಲ್ಲಿ ಹೇಳೋಕೆ ಮನಸ್ಸಿಗೆ ನೋವಾಗುತ್ತೆ. ಆದರೂ ಅಪರಾಧಿ.

ಓಕೇಸಿ: ಹೂಂ...ಯಾರು?

ಊಯಿ: ಶೀಟ್

ಓಕೇಸಿ: ಓಹೋ ಶೀಟ್! ನೀನು ಮಾತಾಡಿಸಲಿಲ್ಲವಲ್ಲ ಆ ಶೀಟ್?

ಊಯಿ: ನನ್ಯಾಕೆ ಹಾಗೆ ನೋಡತೀರಿ? ಶೀಟ್ ಅಪರಾಧಿ.

ಕ್ಲರ್ಕ್: ಶೀಟ್ ಸತ್ತಿದ್ದಾನೆ. ಗೊತ್ತಿಲ್ವ?

ಊಯಿ: ಏನು? ಸತ್ತಿದ್ದಾನಾ? ನಾನು ನಿನ್ನೆ ರಾತ್ರಿ ಸಿಸಿರೋದಲ್ಲಿದ್ದೆ. ಅದಕ್ಕೆ ಗೊತ್ತಾಗಲಿಲ್ಲ. ಈ ರೋಮಾ ಕೂಡ ನನ್ನ ಜತೆ ಇಲ್ಲ. *(ಮೌನ)*

ರೋಮಾ: ತುಂಬ ವಿಚಿತ್ರ. ಇದೆಲ್ಲ ಅಕಸ್ಮಾತ್...

ಊಯಿ: ಸ್ವಾಮಿ. ಇದು ಅಕಸ್ಮಾತ್ ಅಲ್ಲ. ಶೀಟ್ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಹಣ ಲಪಟಾಯಿಸಿದ್ದೇ ಕಾರಣ. ಶುದ್ಧ ದರೋಡೆ.

ಓಕೇಸಿ: ಆದರೆ ಅದು ಆತ್ಮಹತ್ಯೆ ಅಲ್ಲ.

ಊಯಿ: ಹಾಗಾದರೆ? ಈ ಅರ್ನೆಸ್ಟೊ ಮತ್ತೆ ನಾನು ನಿನ್ನೆ ರಾತ್ರಿ ಸಿಸಿರೊದಲ್ಲಿದ್ದದ್ದು ನಿಜ. ನಮಗಂತೂ ಗೊತ್ತಿಲ್ಲ. ಇಷ್ಟಂತೂ ಖಂಡಿತ. ಶೀಟ್ ನೋಡೋಕೆ ನಂಬಿಕಸ್ಥ ವ್ಯಾಪಾರಿ ಥರ ಇದ್ದ. ಆದರೆ ಅವನೊಬ್ಬ ಗೂಂಡಾ.

ಓಕೇಸಿ: ಊಯಿ, ನಿಮ್ಮ ತಳಮಳ ಗೊತ್ತಾಗತ್ತೆ. ಶೀಟ್ ನಿನ್ನೆ ರಾತ್ರಿ ಪಟ್ಟ ಪಾಡು ನೆನೆದರೆ ಈಗ ಅವನ ಬಗ್ಗೆ ನೀನಾಡೋದೆಲ್ಲ ಹೀನಾಯವಾಗಿ ಕಾಣೋಲ್ಲ. ಏನಂತೀರಿ ಮಿ. ಡಾಗ್ಸ್‌ಬರೋ? ಈಗ ನಿಮ್ಮ ಸರದಿ.

ಡಾಗ್ಸ್‌ಬರೋ: ನನ್ನದು?

ಬುಚರ್: *(ತಡೆದು)* ಡಾಗ್ಸ್‌ಬರೋಗೆ ಏನೀಗ?

ಓಕೇಸಿ: ಮಿ. ಊಯಿ ಹೇಳೋದು ಕೇಳಿದರೆ, ಅವರು ಹೇಳಿದ್ದು ಸರಿಯಾಗಿ ನನಗೆ ಅರ್ಥವಾಗಿದೆ ಅಂದುಕೊಂಡಿದೀನಿ. ಒಂದು ಹಡಗುಕಟ್ಟೆ ಸಾಲಪಡೆದು ಈಗ ಮಾಯವಾಗಿ ಬಿಟ್ಟಿದೆ. ಯಾರದು ಈ ಹಡಗುಕಟ್ಟೆ? ನೀವು ಹೇಳತೀರಿ ಅದು ಶೀಟ್‌ದು ಅಂತ. ಆದರೆ ಹೆಸರಲ್ಲೇನಿದೆ? ನಮಗೀಗ ಹೆಸರು ಬೇಡ. ನಿಜವಾಗಿ ಅದು

ಯಾರಿಗೆ ಸೇರಿತ್ತು ಅನ್ನೋದು ಮುಖ್ಯ. ಶೀಟ್‌ಗೆ ಸೇರಿತ್ತಾ? ಆ ಬಗ್ಗೆ ಶೀಟ್ ಹೇಳಬಹುದಿತ್ತು. ಆದರೆ ಊಯಿ ನಿನ್ನೆ ರಾತ್ರಿ ಸಿಸಿರೋದಲ್ಲಿ ಇದ್ದಾಗ ಇಲ್ಲಿ ಶೀಟ್ ಬಾಯಿ ಬಂದಾಗಿದೆ ಅಥವಾ ಇದೆಲ್ಲ ಗೋಲ್‌ಮಾಲ್ ನಡೆದಾಗ ಬೇರೆ ಯಾರಿಗಾದರೂ ಹಡಗುಕಟ್ಟೆ ಸೇರಿತ್ತಾ? ಮಿ. ಡಾಗ್ಸ್‌ಬರೋ?

**ಡಾಗ್ಸ್‌ಬರೋ:** ನಾನಾ?

**ಓಕೇಸಿ:** ಕರಾರು ಪತ್ರಗಳನ್ನ ಸಿದ್ಧಮಾಡಿ...ಅಲ್ಲ ಹೀಗೆ ಹೇಳೋಣ. ಇನ್ನೂ ಸಿದ್ದಮಾಡದೇ ಇದ್ದಾಗ ನೀವು ಶೀಟ್ ಜಾಗದಲ್ಲಿ ಕುಳಿತಿದ್ದೀರಿ ಅನ್ನೋಣವೇ?

**ಗುಡ್‌ವಿಲ್:** ಓಕೇಸಿ.

**ಗಫ್ಲೆಸ್:** *(ಓಕೇಸಿಗೆ)* ಡಾಗ್ಸ್‌ಬರೋ? ನಿನಗೆ ಹುಚ್ಚು.

**ಡಾಗ್ಸ್‌ಬರೋ:** ನಾನು...

**ಓಕೇಸಿ:** ಮೊದಲು, ಮುನಿಸಿಪಾಲಟೀಲಿ, ಕಾಲಿಫ್ಲವರ್ ಟ್ರಸ್ಟ್ ಎಂಥ ಸಂಕಷ್ಟದಲ್ಲಿದೆ ಅನ್ನೋದನ್ನ ವಿವರಿಸ್ತಿದ್ದಾಗ, ಅದರಲ್ಲಿ ಸ್ವಹಿತಾಸಕ್ತಿ ಇರಲಿಲ್ಲವೇನು?

**ಬುಚರ್:** ನಾಚಿಕೆ ಇಲ್ಲವೇನು ನಿಮಗೆ? ಅವರಿಗೆ ಆರೋಗ್ಯ ಸರಿಯಿಲ್ಲ.

**ಕಾರೂಥರ್:** ಅವರ ವಯಸ್ಸಿಗಾದರೂ ಗಮನ ಕೊಡು.

**ಫ್ಲೇಕ್:** ನಿನ್ನ ಕೆಟ್ಟ ಗುಮಾನಿಗೆ ಅವರ ಬಳಿ ತಲೆಗೂದಲೇ ಉತ್ತರ.

**ಊಯಿ:** ಪುರಾವೆ ಏನಿದೆ?

**ಓಕೇಸಿ:** ಪುರಾವೆ.....

**ಊಯಿ:** ಸದ್ದು, ದಯವಿಟ್ಟು, ದಯವಿಟ್ಟು ಗಲಾಟೆ ಮಾಡಬೇಡಿ.

**ಗಫ್ಲೆಸ್:** *(ಗಟ್ಟಿಯಾಗಿ)* ದೇವರಾಣೆ ಏನಾದ್ರೂ ಹೇಳಿ. ಡಾಗ್ಸ್‌ಬರೋ.

**ಅಂಗರಕ್ಷಕ:** *(ತಟಕ್ಕನೆ ಗರ್ಜಿಸಿ)* ಯಜಮಾನ್ರು ಸದ್ದು ಅಂತಾರೆ! ಸದ್ದು! *(ಮೌನ)*

**ಊಯಿ:** ಈಗ, ಈ ನಾಚಿಕೆಗೇಡಿನ ದೃಶ್ಯ ನೋಡಿ...ತಲೆನರೆತ ಹಿರೀಕರನ್ನ ಎಲ್ಲ ಸೇರಿ ಅವಮಾನ ಮಾಡತಿರೋವಾಗ ಅವರ ಸ್ನೇಹಿತರು ಸುಮ್ಮನಿರೋದನ್ನ ನೋಡಿದರೆ ಮಿ. ಡಾಗ್ಸ್‌ಬರೋ ನಿಮ್ಮಲ್ಲಿ

ನನಗೆ ನಂಬಿಕೆ ಇದೆ...ನಾನು ಕೇಳತೀನಿ. ಈ ಅಮಾಯಕ ಮುಖ ನೋಡಿದರೆ ಅಪರಾಧಿ ಅನ್ನಸ್ತೇನು? ಅಡ್ಡದಾರಿ ಹುಡುಕೋ ಕಣ್ಣುಗಳಾ ಇವು? ಕಪ್ಪಿಗೂ ಬಿಳುಪಿಗೂ ವ್ಯತ್ಯಾಸನೇ ಇಲ್ವಾ? ಹೀಗಾದರೆ ಚೆನ್ನಾಯ್ತು.

ಕ್ಲರ್ಕ್: ಒಂದು ಚೂರೂ ಕಳಂಕವಿಲ್ಲದ ವ್ಯಕ್ತಿ ಮೇಲೆ ಲಂಚದ ಆರೋಪ!

ಓಕೇಸಿ: ಅಲ್ಲದೆ, ದಗಾಖೋರತನ, ಯಾಕೆ ಗೊತ್ತೇನು? ಈ ಪಾಪಿ, ಹಡಗುಕಟ್ಟೆ ಯಜಮಾನ ಶೀಟ್ ಅಂಥಾ ತಿಳಕೊಂಡಿದ್ದೀವಲ್ಲ, ಅದಕ್ಕೆ. ಈ ಸಾಲದ ವ್ಯವಹಾರ ನಡೆದಾಗ ಅವರ ಯಜಮಾನ ಡಾಗ್ಸ್‌ಬರೋ ಅಂತಾ ನಾನು ಸಾಧಿಸ್ತೀನಿ.

ಮಲ್ಬರಿ: ಅಸಹ್ಯ, ಸುಳ್ಳು.

ಕಾರೂಥರ್: ಡಾಗ್ಸ್‌ಬರೋಗಾಗಿ ನನ್ನ ತಲೇನಾದ್ರೂ ಕೊಡತೀನಿ. ಕರೀರಿ ಎಲ್ಲ ಜನರನ್ನ. ಯಾರು ಇವರ ಬಗ್ಗೆ ಬೆರಳು ತೋರಿಸ್ತಾರೋ ನೋಡೋಣ.

ವರದಿಗಾರ ೧: *(ಆಗ ತಾನೇ ಬಂದ ಇನ್ನೊಬ್ಬನಿಗೆ)* ಡಾಗ್ಸ್‌ಬರೋ ಬಗ್ಗೆ ಗುಮಾನಿ!

ವರದಿಗಾರ ೨: ಡಾಗ್ಸ್‌ಬರೋ? ಅಬ್ರಹಾಂ ಲಿಂಕನ್ ಬಗ್ಗೆ ಯಾಕಲ್ಲ?

ಮಲ್ಬರಿ:ಫ್ಲೇಕ್: ಸಾಕ್ಷಿ.

ಓಕೇಸಿ: ಓಹೋ! ಸಾಕ್ಷಿ ಬೇಕಾ ನಿಮಗೆ? ಸ್ಮಿತ್ ಎಲ್ಲಿ ನಮ್ಮ ಸಾಕ್ಷಿ? ಬಂದಿದಾರಾ? ಅಲ್ಲಿದ್ದಾರೆ *(ಅವರ ವ್ಯಕ್ತಿಯೊಬ್ಬ ಬಾಗಿಲ ಬಳಿ ಬಂದು ಏನೋ ಸಂಜ್ಞೆ ಮಾಡುತ್ತಾನೆ. ಎಲ್ಲರೂ ಬಾಗಿಲ ಬಳಿ ನೋಡುತ್ತಾರೆ. ಕೊಂಚ ಮೌನ. ಗುಂಡಿನ ಸದ್ದು. ಗೊಂದಲ ವರದಿಗಾರರು ಓಡಿ ಹೋಗುತ್ತಾರೆ)*

ವರದಿಗಾರರು: ಹೊರಗೆ, ಮೆಶಿನ್‌ಗನ್...ನಿಮ್ಮ ಸಾಕ್ಷಿ ಹೆಸರೇನು ಮಿ.ಓಕೇಸಿ?...ಎಲ್ಲ ಗೋಲ್‌ಮಾಲ್...ಹಾಯ್ ಊಯಿ.

ಓಕೇಸಿ: *(ಬಾಗಿಲ ಬಳಿ ಬಂದು)* ಬೌಲ್ *(ಬಾಗಿಲ ಮುಚ್ಚಿ)* ಒಳಗೆ ಬಾ.

ಟ್ರಸ್ಟಿನವರು: ಏನಾಗತಿದೆ? ಯಾರಿಗೆ? ಗುಂಡೇಟು ಬಿದ್ದಿದೆ? ಮೆಟ್ಟಿಲ ಮೇಲೆ ದೇವರೆ ಗತಿ...

ಬುಚರ್: *(ಊಯಿಗೆ)* ಇನ್ನೂ ಕಿತಾಪತಿ? ನನ್ನ ನಿನ್ನ ವ್ಯವಹಾರ ಮುಗಿದ ಹಾಗೆ, ಏನಾದ್ರೂ...

**ಊಯಿ:** ಹಾಂ! ಹಾಂ!

**ಓಕೇಸಿ:** ಕರಕೊಂಡು ಬನ್ನಿ. ಪೋಲಿಸರು ಶವವೊಂದನ್ನು ತರುತ್ತಾರೆ ಬೌಲ್! ನಮ್ಮ ಸಾಕ್ಷಿ! ಈಗ ಅವನನ್ನ ಪ್ರಶ್ನೆ ಕೇಳೋ ಹಾಗಿಲ್ಲ *(ಬೇಗ ಹೊರಗೆ ಹೋಗುತ್ತಾನೆ. ಪೋಲಿಸರು ದೇಹವನ್ನು ಮೂಲೆಯಲ್ಲಿ ಇರಿಸುತ್ತಾರೆ.)*

**ಡಾಗ್ಸ್‌ಬರೋ:** ದೇವರಾಣೆ ಗಫ್ಲೆಸ್, ಆಚೆ ಹೋಗೋಣ. *(ಉತ್ತರ ನೀಡದೆ ಗಫ್ಲೆಸ್ ಅವನನ್ನು ದಾಟಿ ಹೊರಗೆ ಹೋಗುತ್ತಾನೆ)*

**ಊಯಿ:** *(ಕೈ ಚಾಚಿ ಡಾಗ್ಸ್‌ಬರೋ ಬಳಿಗೆ ಬಂದು)* ಅಭಿನಂದನೆ ಮಿ. ಡಾಗ್ಸ್‌ಬರೋ. ಏನೂ ಸಂಶಯಬೇಡ. ಎಲ್ಲ ನಾನು ನೆಟ್ಟಗೆ ಮಾಡತೀನಿ.

*(ಭಿತ್ತಿ ಪತ್ರ)*

# ದೃಶ್ಯ ೬

*(ಹೋಟೆಲ್ ಮಾಮೂತ್, ಊಯಿ ಕೊಠಡಿ. ಇಬ್ಬರು ಅಂಗರಕ್ಷಕರು ಚಿಂದಿಬಟ್ಟೆಯ ನಟನನ್ನು ಒಳಗೆ ಒಯ್ಯುತ್ತಾರೆ. ಹಿಂದೆ ಜೀವೋಲಾ)*

**ಅಂಗರಕ್ಷಕ ೧:** ಬಾಸ್, ನಟ, ಏನೂ ಶಸ್ತ್ರಾಸ್ತ್ರ ಇಲ್ಲ.

**ಅಂಗರಕ್ಷಕ ೨:** ಕುಡಿಯೋಕೆ ಕಾಸಿಲ್ಲ. ಬೇರೆಯೋರು ಕುಡಿದಾಗ, ಇವನ ನಟನೆ ನೋಡಿ ಖುಷಿ ಪಡೋಕೆ ಕಾಸು ಕೊಟ್ಟು ಕುಡಿಸ್ತಾರೆ. ಹಳೇ ಕಾಲದ ನಟ.

**ಊಯಿ:** ಇಲ್ನೋಡಯ್ಯ. ನಾನು ಮಾತಾಡೋ ಬಗೆ ಚೆನ್ನಾಗಿಲ್ವಂತೆ. ಮುಂದೆ ಪಾಲಿಟಿಕ್ಸ್‌ಗೆ ಇಳಿದಾಗ ಮಾತಾಡಬೇಕಾಗುತ್ತೆ, ಆಗೀಗ. ಸರಿಯಾಗಿ ಕಲೀಬೇಕು. ಜೊತೆಗೆ ಮುಖಭಾವ ಕೂಡ.

**ನಟ:** ಹಾಗೋ.

**ಊಯಿ:** ಕನ್ನಡಿ ತಗೊಂಡು ಬಾ. *(ಅಂಗರಕ್ಷಕ ಉದ್ದದ ನಿಲುಗನ್ನಡಿ ತಂದಿಡುತ್ತಾನೆ)* ಮೊದಲು ನಡೆಯೋದು. ಥೇಟರಲ್ಲಿ ನೀವು ಹ್ಯಾಗೆ ನಡೀತಿರಿ?

**ನಟ:** ಓಹೋ, ಹೀಗೋ. ಚಾರಿತ್ರಿಕ ಶೈಲಿ. ಜೂಲಿಯಸ್ ಸೀಸರ್, ಹ್ಯಾಮ್ಲೆಟ್, ರೋಮಿಯೋ...ಅಂದ್ರೆ ಶೇಕ್ಸ್‌ಪಿಯರ್. ಮಿ. ಊಯಿ ನೀವು ನನ್ನನ್ನ ಕರೆಸಿ ಒಳ್ಳೆ ಕೆಲಸ ಮಾಡಿದ್ರಿ. ಹತ್ತು ನಿಮಿಷದಲ್ಲಿ ಈತ ನಿಮಗೆ ದೊಡ್ಡವರ ನಡಾವಳಿ ಕಲಿಸಬಲ್ಲ. ಮಹಾಜನರೇ, ನಿಮ್ಮ ಎದುರಿಗೆ ನಿಂತಿರುವಾತ ಒಬ್ಬ ದುರಂತ ನಾಯಕ. ಶೇಕ್ಸ್‌ಪಿಯರ್ ಅನ್ನುವ ಒಬ್ಬ ಇಂಗ್ಲಿಶ್ ಕವಿಯಿಂದಾಗಿ ನಿರ್ಗತಿಕನಾಗಿ ಬಿಟ್ಟಿದ್ದಾನೆ. ಆ ಶೇಕ್ಸ್‌ಪಿಯರ್ ಕೈಗೆ ಸಿಗದೇ ಹೋಗಿದ್ದರೆ ನಾನು ಬ್ರಾಡ್‌ವೇನಲ್ಲಿ ಇರತಿದ್ದೆ. ನಟನ ದುರಂತಾನೇ ಹೀಗೆ. ಅಂತಾರೆ: 'ಅಯ್ಯಾ ನಟ! ಇಬ್ಸನ್ ನಾಟಕದಲ್ಲಿ ಪಾತ್ರ ವಹಿಸುವಾಗ ಶೇಕ್ಸ್‌ಪಿಯರ್‌ನ ಪಾತ್ರದ ಹಾಗೆ ನಟಿಸಬೇಡ. ಕೊಂಚ

ಕ್ಯಾಲೆಂಡರೂ ನೋಡು ೧೯೧೨. ನಾನಂತೀನಿ 'ಕಲೆಗೆ ಯಾವ ಕ್ಯಾಲೆಂಡರೂ ಇಲ್ಲ. ಕಲೆಯೇ ನನ್ನ ಜೀವನ'

ಜಿವೋಲಾ: ಬಾಸ್. ಎಲ್ಲಿಂದ ಹಿಡಿದು ತರಿಸಿದಿರಿ ಇವನ್ನ? ಲಾಯಕ್ಕಿಲ್ಲ.

ಊಯಿ: ಅದೆಲ್ಲ ಇರಲಿ. ಈ ಶೇಕ್ಸ್‌ಪಿಯರಲ್ಲಿ ಹೇಗೆ ನಡೀತಾರೆ ತೋರಿಸು. *(ನಟ ನಡೆಯುತ್ತಾನೆ)*

ಊಯಿ: ಹಾಹಾ!

ಜಿವೋಲಾ: ತರಕಾರಿ ಮಾರೋರ ಮುಂದೆ ಹೀಗೆ ನಡೀತೀರಾ? ಚೆನ್ನಾಗಿಲ್ಲ.

ಊಯಿ: ಚೆನ್ನಾಗಿ ಕಾಣಿಸೊಲ್ಲ ಅಂದ್ರೇನು? ಈ ಕಾಲದಲ್ಲಿ ಯಾವ್ದೂ ಚೆನ್ನಾಗಿ ಕಾಣಿಸೊಲ್ಲ, ನಡೀವಾಗ ನಡೀತಿರೋದು ನಾನು ಅನ್ನೋದು ಜನರಿಗೆ ಗೊತ್ತಾಗಬೇಕು. *(ನಟನನ್ನು ಅನುಕರಿಸುತ್ತಾನೆ)*

ನಟ: ತಲೆ ಹಿಂದಕ್ಕೆ *(ಊಯಿ-ತಲೆ ಹಿಂದಕ್ಕೆ ಹಾಕುವನು)* ಹೆಜ್ಜೆ ಇಡುವಾಗ ಬೆರಳು ಮೊದಲು ನೆಲತಾಗಲಿ *(ಊಯಿ ಹಾಗೇ ಮಾಡುವನು)* ಗುಡ್ ಸೊಗಸಾಗಿದೆ. ನಿಮ್ಮ ನಡಿಗೇಲಿ ಒಂದು ಸಹಜತೆ ಇದೆ. ತೋಳು ಸ್ವಲ್ಪ ಸೆಟೆದಿದೆ. ಮುಂದುಗಡೆಗೆ ಎರಡೂ ಕೈ ತಂದು ತೊಡೆ ಸಂದಿ ಮುಂದೆ *(ಊಯಿ ಹಾಗೇ ಮಾಡುತ್ತಾನೆ)* ಪರವಾಗಿಲ್ಲ. ನಿರಾಳವಾಗಿರಿ. ಆದರೆ ಗತ್ತು ಮುಖ್ಯ. ತಲೆ ಹಿಂದಕ್ಕೆ. ಗುಡ್. ನಿಮ್ಮ ಉದ್ದೇಶಕ್ಕೆ ತಕ್ಕ ಹಾಗಿದೆ. ಅಲ್ವೇ ಮಿ. ಊಯಿ? ಇನ್ನೇನು ಕಲಿಯಬೇಕು ನೀವು?

ಊಯಿ: ನಿಲ್ಲೋದು. ಜನರ ಎದುರಿಗೆ.

ಜಿವೋಲಾ: ಇಬ್ಬರು ಪೈಲ್ವಾನರನ್ನ ಬೆನ್ನ ಹಿಂದೆ ನಿಲ್ಲಿಸಿಕೊಂಡರೆ ನೆಟ್ಟಗೆ ನಿಲ್ಲತೀರಿ ಬಾಸ್.

ಊಯಿ: ತಲೆ ಹರಟೆ. ನಾನು ನಿಂತಿರೋವಾಗ ಜನ ನನ್ನ ಹಿಂದೆ ನಿಂತಿರೋ ಪೈಲ್ವಾನರನ್ನ ನೋಡಕೂಡದು. ನನ್ನನ್ನೇ ನೋಡತಿರಬೇಕು. ನೀನು ಹೇಳ್ಕೊಡು. *(ಎರಡು ಕೈಗಳನ್ನು ಎದೆಯ ಮೇಲೆ ಕಟ್ಟಿ ನಿಲ್ಲುತ್ತಾನೆ)*

ನಟ: ಇದೊಂದು ರೀತಿ. ಆದರೆ ತುಂಬ ಹಳೇ ರೀತಿ. ಒಬ್ಬ ದರ್ವೇಸಿ ಥರ ಕಾಣಿಸೋಕೆ ಇಷ್ಟಾನಾ ನಿಮಗೆ, ಕೈ ಹೀಗೆ ಕಟ್ಟಿ. *(ತನ್ನ ತೋಳುಗಳನ್ನು ಹಿಂಗೈ ಕಾಣುವಂತೆ ಕಟ್ಟುವನು. ಅಂಗೈ ತೋಳಿನ ಮೇಲೆ ಭುಜದಿಂದ ಕೊಂಚ ಕೆಳಗೆ)* ಬದಲಾವಣೆ ಕೊಂಚಾನೇ. ಆದರೆ ಪರಿಣಾಮ ಅಗಾಧ. ಕನ್ನಡಿ ನೋಡಿಕೊಳ್ಳಿ. *(ಊಯಿ ಹೊಸ ನಿಲುವನ್ನು ಕನ್ನಡಿ ಎದುರು ಪ್ರಯತ್ನಿಸುತ್ತಾನೆ.)*

ಊಯಿ: ಪರವಾಗಿಲ್ಲ.

ಜಿವೋಲಾ: ಇದೆಲ್ಲ ಯಾಕೆ ಬಾಸ್? ಆ ಟ್ರಸ್ಟ್‌ನ ಜನರಿಗಾಗಿಯಾ?

ಊಯಿ: ನಿನ್ನ ತಲೆ. ಅವರಿಗಲ್ಲ. ಸಾಮಾನ್ಯ ಜನರಿಗೆ. ಈ ಕ್ಲರ್ಕ್ ಯಾಕೆ ಭಾರಿ ಶೋಕಿ ಮಾಡತಾನೆ ಗೊತ್ತಾ? ಅವನ ಜತೆಯವರಿಗಾಗಿ ಅಲ್ಲ. ಅದಕ್ಕೆ ಅವನ ಬ್ಯಾಂಕ್ ಅಕೌಂಟೇ ಸಾಕು. ನನಗೆ ನನ್ನ ಪೈಲ್ವಾನರಿದ್ದ ಹಾಗೆ. ಅವನು ಶೋಕಿ ಮಾಡೋದು ಸಾಮಾನ್ಯ ಜನರಿಗೆ. ನಾನೂ ಹಾಗೇ ಮಾಡೋದು.

ಜಿವೋಲಾ: ಆದರೆ ಕೆಲವರು ಹಾಗೆ ನಡಕೊಂಡರೆ ಚೆನ್ನಾಗಿರೋಲ್ಲ. ಗೇಲಿ ಮಾಡತಾರೆ.

ಊಯಿ: ಹಾಗೆ ಗೇಲಿ ಮಾಡೋದು ಗೊತ್ತು. ನಾನು ಪಂಡಿತರನ್ನ, ವಿದ್ವಾಂಸರನ್ನ ಮೆಚ್ಚಿಸೋಕೆ ಹೋಗತಿಲ್ಲ. ಜನ ಸಾಮಾನ್ಯರಿಗೆ ಅವರ ಯಜಮಾನ ಹೇಗೆ ಕಾಣಿಸಬೇಕೋ ಅದು ನನ್ನ ಗುರಿ.

ಜಿವೋಲಾ: ಅತಿ ಮಾಡಬೇಡಿ ಬಾಸ್. ಸುಮ್ಮನೆ ಉದ್ದ ತೋಳಂಗಿ ಹಾಕ್ಕೊಂಡು ಸ್ನೇಹಿತನ ಥರಾ ಇರೋದೇ ವಾಸಿ.

ಉಯಿ: ಅದನ್ನ ಮಾಡೋಕೆ ಡಾಗ್ಸ್‌ಬರೋ ಇದಾರಲ್ಲ.

ಜಿವೋಲಾ: ಅವನ ಮುಖಕ್ಕೆ ಮಸಿ ಬಳಿದಿದೆ. ಆದರೂ ಕಥೆ ಕಟ್ಟೋರಿಗೆ, ಹಳೆಯದ್ದನ್ನ ನೆನೆಯೋರಿಗೆ ಅವನೇ ಬೇಕು. ಆದರೆ ಜನ ಈಗ ಅವನನ್ನ ತಲೆ ಮೇಲೆ ಹೊತ್ತು ಮೆರೀತಿಲ್ಲ. ಅವನು ಅಸಲೀನೋ ನಕಲೀನೋ ಅವರಿಗಿನ್ನೂ ಗೊತ್ತಾಗತಿಲ್ಲ. ಅವನೊಂದು ಥರಾ ತಲೆತಲಾಂತರದಿಂದ ಬಂದ ಬೈಬಲ್ ಹಾಗೆ. ಯಾರೂ ಬಿಡಿಸಿ ಓದೋಲ್ಲ. ಬಂದ ಗೆಳೆಯರ ಎದುರು ಭಾರಿ ಗತ್ತಿಂದ ಏನಾದ್ರೂ ಅದರ ಹಳೆಯ ಮಾಸಲು ಪುಟ ತೆರೆದರೆ ಸತ್ತು ಅಪ್ಪಚ್ಚಿಯಾಗಿರೋ ತಿಗಣೆ ಕಾಣುತ್ತೆ...ಅಥವಾ ಈ ತರಕಾರಿಯವರಿಗೆ ಅವನೇ ಸರಿಯೋ ಏನೋ!

ಊಯಿ: ಯಾರಿಗೆ ಮನ್ನಣೆ ಕೊಡಬೇಕನ್ನೋದನ್ನ ಹೇಳೋನು ನಾನು.

ಜಿವೋಲಾ: ಸರಿ ಬಾಸ್. ಡಾಗ್ಸ್‌ಬರೋ ಈಗಲೂ ಉಪಯೋಗಕ್ಕೆ ಬರತಾರೆ. ಮುನಿಸಿಪಾಲಟಿ ಅವರನ್ನ ಪೂರ್ತಿ ಕೈಬಿಟ್ಟಿಲ್ಲ. ಹಾಗೇನಾದರೂ ಆಗಿದ್ದರೆ ಭಾರಿ ಸುದ್ದಿ ಆಗತಿತ್ತು.

ಊಯಿ: ಕುಳಿತುಕೊಳ್ಳೋದು.

ನಟ: ಕುಳಿತುಕೊಳ್ಳೋದು. ಇದು ಭಾರಿ ಕಷ್ಟ. ನಡಿಗೆ ಬಲ್ಲವರಿದ್ದಾರೆ. ನಿಲ್ಲುವುದು ತಿಳಿದವರಿದ್ದಾರೆ. ಕುಳಿತುಕೊಳ್ಳೋದು ಗೊತ್ತಿರುವವರು ಯಾರಿದ್ದಾರೆ ತೋರಿಸಿ. ಬೆನ್ನಿರುವ ಒಂದು ಕುರ್ಚಿ ತಗೊಳ್ಳಿ. ಅದರ ಮೇಲೆ ಒರಗ ಬೇಡಿ, ಕೈ ತೊಡೆ ಮೇಲೆ, ಹೊಟ್ಟೆಗೆ ತಗಲಿದ ಹಾಗೆ. ತೋಳು ದೇಹಕ್ಕೆ ತಗಲಬಾರದು. ಎಷ್ಟು ಹೊತ್ತು ಕೂರಬಲ್ಲಿರಿ?

ಊಯಿ: ನನಗೆ ಬೇಕಾಗುವಷ್ಟು ಹೊತ್ತು.

ನಟ: ಹಾಗಾದ್ರೆ ಸರಿ.

ಜಿವೋಲಾ: ಬಾಸ್. ಡಾಗ್ಸ್‌ಬರೋ ಕಾಲ ಮುಗಿದ ಮೇಲೆ ಅವನ ಜಾಗಕ್ಕೆ ಗಿರಿ ಬರತಾನೆ. ಕೊಂಚ ಜನಬಳಕೆ ಇದೆ ಅವನಿಗೆ. ಅಲ್ಲದೆ ನಕಲಿ ಮಾಡತಾನೆ. ನಕ್ಕರೆ ಛತ್ತಿಂದ ಪ್ಲಾಸ್ಟರ್ ಕಿತ್ತು ಬರುತ್ತೆ, ಆಗಾಗ. ಯಾವಾಗ್ಲೂ ಅಲ್ಲ. ಆಗಾಗ ನೀವು ಬ್ರಾಂಕ್ಸ್‌ನಿಂದ ಬಂದ ಎಳೆ ವಯಸ್ಸಲ್ಲಿ ಏಳು ಜನ ಛಲಗಾರರ ಮುಂದೆ ನಿಂತು ಹೇಗೆ ಮಾತಾಡದ್ದಿರಿ ಅನ್ನೋದನ್ನ ನಕಲಿ ಮಾಡತಾನೆ.

ಊಯಿ: ಆಮೇಲೆ ನಗತಾನೋ?

ಜಿವೋಲಾ: ಛತ್ತಿನ ಫ್ಲಾಸ್ಟರ್ ಕಿತ್ತು ಬರುತ್ತೆ. ನಾನು ಹೀಗಂದೆ ಅಂತ ಅವನಿಗೆ ಹೇಳಬೇಡಿ. ಅದನ್ನೆ ದೊಡ್ಡದು ಮಾಡತಾನೆ. ಹೇಗಾದ್ರೂ ಮಾಡಿ ಆವನು ಹ್ಯಾಟ್ ಕೂಡಿಸೋದನ್ನ ತಪ್ಪಿಸಬೇಕು.

ಊಯಿ: ಎಂಥ ಹ್ಯಾಟು.

ಜಿವೋಲಾ: ಅವನ ಕಥೆ ಮುಗಿಸಿದವರ ಹ್ಯಾಟು. ಅದನ್ನ ಹಾಕಿಕೊಂಡು ಪಬ್ಲಿಕ್ಕಲ್ಲಿ ಓಡಾಡೋದು ಇನ್ನೂ ಅಸಹ್ಯ.

ಊಯಿ: ಹೋಗಲಿ ಬಿಡಯ್ಯಾ. ದುಡಿಯೋ ಎತ್ತಿನ ಕಾಲು ಮುರೀತಾರಾ? ಚಿಕ್ಕವರ ಚಟಗಳನ್ನ ಮರೆತು ಬಿಡಬೇಕು. *(ನಟನಿಗೆ)* ಈಗ ಮಾತಾಡೋದು? ಒಂದು ಭಾಷಣ ಮಾಡಿತೋರಿಸು.

ನಟ: ಶೇಕ್ಸ್‌ಪಿಯರ್ ಬಿಟ್ಟರೆ ಇಲ್ಲ. ಜೂಲಿಯಸ್ ಸೀಸರ್. ರೋಮನ್ ನಾಯಕ. *(ಜೇಬಿನಿಂದ ಚಿಕ್ಕ ಪುಸ್ತಕ ಹೊರತೆಗೆದು)* ಮಾರ್ಕ್ ಆಂತೋನಿ ಭಾಷಣ ಹೇಗೆ? ಸೀಸರ್ ಶವದ ಬಳಿ ನಿಂತು ಬ್ರೂಟಸ್‌ಗೆ ಎದುರು ಬಿದ್ದು ಮಾಡುವ ಭಾಷಣ. ಬ್ರೂಟಸ್ ಅಂದರೆ ಸೀಸರನ್ನ ಕೊಂದ ಗುಂಪಿನ ನಾಯಕ. ಸಖತ್ತು

ರೋಮಾಂಚಕಾರಿ ಭಾಷಣ. ಭಲೇ ೧೯೦೮ರಲ್ಲಿ ಆಂತೋನಿ ಪಾತ್ರ ಮಾಡಿದ್ದೆ. ನೀವದನ್ನ ಅಭ್ಯಾಸಮಾಡಿದರೆ ಸಾಕು. *(ಒಂದು ನಿಲುವಿನಲ್ಲಿ ನಿಂತು ಮಾರ್ಕ್ ಆಂತೋನಿ ಮಾತು ಸಾಲು ಸಾಲು ಹೇಳುತ್ತಾನೆ.)*

Friends, Romans, Countrymen, Lend me your ears! *(ಚಿಕ್ಕ ಪುಸ್ತಕ ಹಿಡಿದು ಊಯಿ ಕೂಡ ಸಾಲು ಸಾಲುಗಳನ್ನ ನಟನೊಡನೆ ಹೇಳುತ್ತಾನೆ. ಆಗ ನಟ ಅವನ ಉಚ್ಚಾರವನ್ನು ತಿದ್ದುತ್ತಾನೆ. ಆದರೂ ಊಯಿಯ ಒರಟಾದ ಗಗ್ಗರು ದನಿ ಹಾಗೇ ಇರುತ್ತದೆ)*

ನಟ: I come to bury Caesar, not to praise him.
The evil that men do lives after them:
He was my friend, faithful and just to me;
But Brutus says he was ambitious;
And Brutus is an honourable man
He hath brought many captives home to Rome
whose ransome did the general coffers full.
Did this in Caesar seem ambitious?
who that the poor have cried, caesar has wept.
Ambition should be made of sterner stuff.
Yet Brutus says he was ambitious;
And Brutus is an honourable man.
You all did see that on the Lupercal.
I thrice presented him a kingly crown,
Which he did thrice refuse, was this ambitious?
Yet Brutus says he was ambitious.
And sure he is an honourable man.
I speak not to disprove what Brutus spoke.
But here I am to speak what I do know
You all did love him once, not without cause?
What cause withholds you them, to mourn for him?
The good is oft interred with their bones; So let it be with

Caesar.The noble Brutus
Hath told you Caesar was ambitious.
If it were so. It was a grievious fault,
And grievioualy hath Caesar answer'd it.

ಊಯಿ: - *(ತಾನೇ ಮುಂದುವರೆಸುತ್ತಾನೆ)*

Here, under leave of Brutus and the rest
For Brutus is an honourable man.
So are they all, all honourable men.
Come I to speak in Caesar's funeral.

*(ಕೊನೆಯ ಕೆಲವು ಸಾಲುಗಳನ್ನು ಹೇಳುವಾಗ ನಿಧಾನವಾಗಿ ತೆರೆ ಬೀಳುವುದು.)*

*(ಭಿತ್ತಿ ಪತ್ರ)*

## ದೃಶ್ಯ ೭

*(ಕಾಲಿಫ್ಲವರ್ ಟ್ರಸ್ಟ್‌ನ ಆಫೀಸು. ಆರ್ಥುರೋ ಊಯಿ. ರೋಮಾ, ಜಿವೋಲಾ, ಗಿರಿ ಹಾಗೂ ಅಂಗರಕ್ಷಕರು. ಒಂದಷ್ಟು ಜನ ತರಕಾರಿ ವರ್ತಕರು ಊಯಿ ಮಾತನ್ನು ಕೇಳುತ್ತಿದ್ದಾರೆ. ಆರೋಗ್ಯ ಸರಿ ಇಲ್ಲದ ಡಾಗ್ಸ್‌ಬರೋ ಊಯಿ ಪಕ್ಕದಲ್ಲಿ ಕುಳಿತಿದ್ದಾನೆ. ಹಿನ್ನೆಲೆಯಲ್ಲಿ ಕ್ಲರ್ಕ್)*

**ಊಯಿ:** (ಕೂಗುವ ದನಿ) ಕೊಲೆ! ಲೂಟಿ! ದರೋಡೆ! ಇಡೀ ಊರನ್ನ ಮಶಿನ್‌ಗನ್ನು ಸುಡತಿವೆ. ತಮ್ಮ ಕೆಲಸ ತಾವು ಮಾಡಕೊಳ್ಳತಾ ಹೇಳಿಕೆ ನೀಡೋಕೆ ಮುನಿಸಿಪಾಲಿಟಿಗೆ ಹೋಗತಿರೋ ನ್ಯಾಯನಿಷ್ಠ ನಾಗರಿಕರನ್ನ ಹಾಡು ಹಗಲಲ್ಲಿ ಕೊಲೆಮಾಡತಿದ್ದಾರೆ. ಈಗ, ನಮ್ಮ ಪ್ರತಿನಿಧಿಗಳು ಏನು ಕ್ರಮ ತಗೋತಿದ್ದಾರೆ ಅಂತ ನಾನು ಕೇಳತಿದ್ದೀನಿ. ಏನೂ ಇಲ್ಲ. ತಂತಮ್ಮ ಕೊಳಕು ವ್ಯವಹಾರಗಳನ್ನ ಮುಚ್ಚಿಟ್ಟುಕೊಂಡು ಬೇರೆ ಸಜ್ಜನ ನಾಗರಿಕರ ಮುಖಕ್ಕೆ ಮಸಿ ಬಳೀತಿದ್ದಾರೆ. ಇನ್ನು ಕಾನೂನು ಪರಿಪಾಲನೆ ಮಾತೇಕೆ?

**ಜಿವೋಲಾ:** ಹಿಯರ್! ಹಿಯರ್!

**ಊಯಿ:** ಒಟ್ಟಾರೆ ಎಲ್ಲ ಗೋಜಲು. ಎಲ್ಲರೂ ತಮತಮಗೆ ತೋಚಿದ ಹಾಗೆ ಮಾಡಿದ್ರೆ, ಒಬ್ಬ ಇನ್ನೊಬ್ಬನ್ನ ಹಿಂದೆ ಮುಂದೆ ನೋಡದೆ ಇರಿದರೆ ಅದೇ ಗೊಂದಲ. ನೋಡಿ ನಾನೀಗ ನನ್ನ ತರಕಾರಿ ಅಂಗಡೀಲಿ ಸುಮ್ಮನೆ ಕುಳಿತಿರತೀನಿ, ಇಲ್ಲವೇ ಲಾರಿ ಡ್ರೈವ್ ಮಾಡತಿರತೀನಿ. ಯಾರೋ ಒಬ್ಬ ನುಗ್ಗಿ ಬಂದು 'ಹ್ಯಾಂಡ್ಸ್ ಅಪ್' ಅಂತಾನೇ. ಇಲ್ಲವೇ ಲಾರಿ ಟೈರ್ ಪಂಕ್ಚರ್ ಮಾಡತಾನೆ. ಹಾಗಿರುವಾಗ ಸುಮ್ಮನೆ ಇರೋದು ಅಸಾಧ್ಯ, ಅದೂ ಇದೆಲ್ಲ ಯಾರು ಮಾಡಿದ್ದು ಅಂತಾ ಗೊತ್ತಾದ ಮೇಲೆ, ಶತ್ರುವಿನ ಗುರುತು ಹತ್ತಿದ ಮೇಲೆ. ಮನುಷ್ಯರು ಅಂದರೆ ಕುರಿಗಳಲ್ಲ ಅನ್ನೋದು ಅರ್ಥವಾದರೆ ನನ್ನನ್ನ ಬೇಕಾದ ಹಾಗೆ ಆಟ ಆಡಿಸಬಹುದೂಂತ, ಅವರ ಆಟಗಳನ್ನ ಸಹಿಸಬಹುದೂಂತ ತಿಳಿದವರಿಗೆ ನನ್ನ ಕೈ ಕಡಲೆ ತಿಂತಿಲ್ಲ ಅಂತಾ ತೋರಿಸಬಲ್ಲೆ. ಮನುಷ್ಯ ಅಂದರೆ ಹೀಗೆ.

ಬೇರೆಯವರ ಕೈಲಿ ಒಳ್ಳೆಯವ ಅನಿಸಿಕೊಳ್ಳೋಕೆ ಹಾತೊರಿತಿರತಾನೆ. ಯಾರೋ ಮುನಿಸಿಪಾಲಟಿಯುವರ ಚರ್ಮದ ನಾಲಿಗೆ ಹೊಗಳಿಕೆಗಾಗಿ ಕೈ ಕಟ್ಟಿ ಕೂರತಾನೆ. ನಾನು ಶೂಟ್ ಮಾಡದಿದ್ರೆ ಇನ್ನೊಬ್ಬ ಮಾಡತಾನೆ. ಇದೇ ಕ್ರಮ. ಹೌದಾ? ಈಗ ನೀವು ಕೇಳಬಹುದು. 'ಈಗೇನು ಮಾಡಬೇಕು' ಅಂತ. ಕೇಳಿ. ಮೊದಲು ಇಷ್ಟು ಗಟ್ಟಿ ಮಾಡಿಕೊಳ್ಳಿ; ನೀವು ಈವರೆಗೆ ಮಾಡಿದ್ದು ಮನೆಹಾಳು ಕೆಲಸ. ಗಲ್ಲಾಪೆಟ್ಟಿಗೆ ಹಿಂದೆ ಸುಮ್ಮನೆ ಕುಳಿತು ಎಲ್ಲ ಸರಿಹೋಗತ್ತೆ ಹೇಗೋ ಅಂತ ಇದ್ದಿರಿ. ಒಬ್ಬರಿಗೊಬ್ಬರು ಕಚ್ಚಾಡತಿದ್ದಿರಿ. ಒಗ್ಗಟ್ಟಾಗದೆ ಹೋಳಾದಿರಿ. ರೌಡಿಗಳ ರಂಪದಿಂದ ಪಾರಾಗೋಕೆ ನೀವು ಗುಂಪು ಮಾಡಿಕೊಳ್ಳದೆ ಹೋದಿರಿ. ಇದೆಲ್ಲ ಹೀಗೆ ಮುಂದುವರೀಕೂಡದು. ಮೊದಲು ಒಗ್ಗಟ್ಟು. ಆಮೇಲೆ ತ್ಯಾಗ. 'ಏನು ತ್ಯಾಗ' ಅಂತೀರಿ. 'ಸಂಪಾದನೆ ಮಾಡೋ ಪ್ರತಿ ಡಾಲರಲ್ಲಿ ಮೂವತ್ತು ಸೆಂಟ್ ರಕ್ಷಣೆಗೆ ವೆಚ್ಚ ಮಾಡೋದೇ' ಅಂತೀರಾ? ಇಲ್ಲ ಇದಲ್ಲದೆ ಬೇರೆ ದಾರಿ ಇಲ್ಲ. ನಮ್ಮ ಹಣಕ್ಕೆ ಬೆಲೆ ಇದೆ. ಯಾರಾದ್ರೂ ಪುಕ್ಕಟೆಯಾಗಿ ರಕ್ಷಣೆ ಒದಗಿಸಿದರೆ ಆಯ್ತು ಅದೇ ಇರಲಿ ಎನ್ನಬಹುದಿತ್ತು. ಆದರೆ, ವರ್ತಕರೆ, ಪರಿಸ್ಥಿತಿ ಹಾಗಿಲ್ಲವಲ್ಲ. ಈಗ ಪುಕ್ಕಟೆಯಾಗಿ ಸಿಗೋದು ಸಾವು ಮಾತ್ರ. ಉಳಿದದ್ದಕ್ಕೆಲ್ಲ ಕಾಸು ಚೆಲ್ಲಬೇಕು. ಹಾಗೇ ರಕ್ಷಣೆಗೂ. ಆಗ ಎಲ್ಲ ಶಾಂತಿ, ನಿರಾಳ. ಜೀವನ ಅಂದರೆ ಹೀಗೇನೇ. ಇದು ಬದಲಾಗೋದಿಲ್ಲ. ಹಾಗಾಗಿ ಈ ಸಭ್ಯರು, ಜತೆಗೆ ನಾನು, ಹೊರಗೆ ಇನ್ನೂ ಇದ್ದಾರೆ, ಎಲ್ಲ ಸೇರಿ ನಿಮಗೆ ರಕ್ಷಣೆ ಕೊಡೋದಕ್ಕೆ ತೀರ್ಮಾನಿಸಿದೇವೆ. *(ಜಿವೋಲಾ ಮತ್ತು ರೋಮಾ ಕೈ ಚಪ್ಪಾಳೆ ತಟ್ಟುತ್ತಾರೆ)* ಆದರೆ ನಾವು ಈ ಜವಾಬುದಾರಿಯನ್ನು ತಕ್ಕ ರೀತಿಯಲ್ಲಿ ನಡೆಸಬಲ್ಲೆವು ಅನ್ನುವುದನ್ನ ತಿಳಿಸತಾರೆ, ನಮ್ಮ ಪಾರ್ಟನರ್ ಮಿ. ಕ್ಲರ್ಕ್. ಸಗಟು ವ್ಯಾಪಾರಿ. ನಿಮಗೆಲ್ಲ ಅವರು ಗೊತ್ತು. ಅವರೀಗ ನಿಮ್ಮನ್ನು ಕುರಿತು ಮಾತಾಡತಾರೆ. *(ರೋಮಾ ಕ್ಲರ್ಕ್‌ನನ್ನು ಮುಂದೆ ತಳ್ಳುತ್ತಾನೆ. ಕೆಲವು ವರ್ತಕರು ಕೈ ಚಪ್ಪಾಳೆ ತಟ್ಟುತ್ತಾರೆ.)*

ಜಿವೋಲಾ: ಮಿ. ಕ್ಲರ್ಕ್ ಈ ಸಭೆಯ ಘನತೆ ಕಾಯ್ದುಕೊಳ್ಳಬೇಕು. ಮಿ. ಊಯಿ ತಾವೇ ಮುಂದೆ ನಿಂತು ಮಾಡ್ತಿರೋ ಕಾರ್ಯಕ್ಕೆ ನಿಮ್ಮ ಟ್ರಸ್ಟ್‌ನ ಒತ್ತಾಸೆಯಿದೆ ಅನ್ನೋದು ತಿಳಿದು ತುಂಬಾ ಸಂತೋಷವಾಗಿದೆ. ಥ್ಯಾಂಕ್ ಯೂ ಮಿ. ಕ್ಲರ್ಕ್.

ಕ್ಲರ್ಕ್: ಮಹನೀಯರೆ, ಮಹಿಳೆಯರೇ, ನಮ್ಮ ಟ್ರಸ್ಟ್ ನೀವು ನಿಮ್ಮ ಸಾಮಗ್ರಿಯನ್ನು ಮಾರೋದಕ್ಕೆ ಎಷ್ಟು ಕಷ್ಟ ಪಡತಿದೀರಿ ಅನ್ನುವುದನ್ನು ಗಮನಿಸ್ತಿದೆ. 'ತರಕಾರಿ ಬೆಲೆ ಹೆಚ್ಚಾಗಿದೆ' ಅನ್ನತೀರಿ ನೀವು. ನನಗೆ ಗೊತ್ತು. ನಿಜ. ಆದರೆ ಯಾಕೆ ದುಬಾರಿಯಾಗಿದೆ? ತರಕಾರಿ ತುಂಬುವವರು, ಹೊರುವವರು ಹೊರಗಿನವರ ಕುಮ್ಮಕ್ಕಿನಿಂದ ಅತಿಯಾದ ಬೇಡಿಕೆ ಮುಂದಿಡತಿದ್ದಾರೆ. ಅದನ್ನ ಮಿ. ಊಯಿ ಮತ್ತವರ ಗೆಳೆಯರು ನಿಲ್ಲಿಸುತಾರೆ.

ವರ್ತಕ ೧: ಜನರ ಸಂಪಾದನೆ ಕಡಿಮೆಯಾದ್ರೆ ಅವರು ತರಕಾರಿ ಕೊಳ್ಳೋದು ಹೇಗೆ?

ಊಯಿ: ಒಳ್ಳೆಯ ಪ್ರಶ್ನೆ. ನನ್ನ ಉತ್ತರ ನಿಮಗೆ ಇಷ್ಟವಾಗೋದಿಲ್ಲ. ಆದರೂ ಹೇಳತೇನೆ. ಈ ಜಗತ್ತಿನಲ್ಲಿ ದುಡಿಯೋ ಮನುಷ್ಯನೇ ಕೊಳ್ಳುವ ವ್ಯಕ್ತಿ. ಮೈಮುರಿದು ದುಡಿಯುವುದರಲ್ಲಿ ಅವಮಾನ ಇಲ್ಲ. ಹಾಗೆ ದುಡಿದು ಸಂಪಾದಿಸಬಹುದು. ಹಣ ಕೂಡಿ ಹಾಕಬಹುದು. ದುಡಿಯೋರನ್ನ ಕಂಡರೆ ಈಗಲೂ ಅಯ್ಯೋ ಅನ್ನಿಸುತ್ತೆ. ಆದರೆ ಹಾಗೆ ದುಡಿಯುವವರು ಗುಂಪುಕಟ್ಟಿಕೊಂಡು ತಮಗೆ ಸಂಬಂಧವಿಲ್ಲದ ಲಾಭ, ಸಂಬಳ ಹೀಗೆ ಇಂಥದರಲ್ಲಿ ತಲೆ ಹಾಕಿದರೆ ಆಗ ನಾನು ಸಮ್ಮನಿರೋದಿಲ್ಲ. 'ಅಣ್ಣಾ ಕೊಂಚ ಹುಷಾರು, ದುಡಿಯೋನು ಅಂದರೆ ದುಡಿಯುವವನು. ಆದರೆ ನೀನು ಹರತಾಳ ಮಾಡಿ, ದುಡಿಯೋದು ನಿಲ್ಲಿಸಿದರೆ ಆಗ ನೀನು ದುಡಿಯೋನು ಹೇಗಾದೆ? ಆಗ ನೀನು ಸುತ್ತಲಿನವರಿಗೆ ತಲೆನೋವು'. ಆಗ ನಾನು ಕೈ ಕಟ್ಟಿ ಕೂರೋದು ಸಾಧ್ಯವಿಲ್ಲ *(ಕ್ಲರ್ಕ್ ಚಪ್ಪಾಳೆ ತಟ್ಟುತ್ತಾನೆ)* ಹೇಗಾದರೂ ಅನ್ನುವುದು ಇರಲಿ, ನಿಮಗೆ ಈ ವ್ಯವಹಾರವೆಲ್ಲ ಸಾಫ್‌ಸೀದಾ, ದಗಲಬಾಜಿ ಅಲ್ಲ ಅನ್ನುವುದು ಗೊತ್ತಾಗಲೀ ಅಂತ ಇಲ್ಲೇ ಇರುವ ಒಬ್ಬರ ರುಜುವಾತು ಕೊಡತೀನಿ. ಎಲ್ಲರಿಗೂ ಗೊತ್ತಿರುವ ವ್ಯಕ್ತಿ ಅವರು. ಮಿ. ಡಾಗ್ಸ್‌ಬರೋ. *(ತರಕಾರಿ ವರ್ತಕರು ಗಟ್ಟಿಯಾಗಿ ಚಪ್ಪಾಳೆ ತಟ್ಟುತ್ತಾರೆ.)* ಮಿ. ಡಾಗ್ಸ್‌ಬರೋ ನಿಮ್ಮ ಋಣ ಯಾವತ್ತೂ ತೀರಿಸೋಕೆ ಸಾಧ್ಯವಿಲ್ಲ. ಕೆಲಸಕ್ಕೆ ಬಾರದ, ಬ್ರಾಂಕ್ಸ್‌ನ ಹುಡುಗ ಒಬ್ಬನನ್ನು ನೀವು ಗೆಳೆಯನ ಹಾಗೆ, ಯಾಕೆ ಅದಕ್ಕೆ ಹೆಚ್ಚಾಗಿ ಮಗನ ಹಾಗೆ ನೋಡಿ, ತೋಳಲ್ಲಿ ಅಪ್ಪಿಕೊಂಡಿರಿ. ಇದನ್ನ ಹೇಗೆ ಮರೆಯೋದು ನಾನು? *(ಡಾಗ್ಸ್‌ಬರೋನ ಜಡಗೊಂಡು ತೂಗಾಡುತ್ತಿರುವ ಕೈ ಹಿಡಿದು ಕುಲುಕುತ್ತಾನೆ.)*

**ಜಿವೋಲಾ:** (*ತಗ್ಗಿದ ದನಿ*) ಕರುಳು ಚುರ್ ಅನ್ನುತ್ತೆ! ಅಪ್ಪ, ಮಗ!

**ಗಿರಿ:** (*ಮುಂದೆ ಬಂದು*) ಆಯ್ತು, ಏನ್ರಪ್ಪ, ಬಾಸ್ ಹೇಳಬೇಕಾದ್ದು ಹೇಳಿದಾರೆ. ಆದರೂ ನಿಮ್ಮಲ್ಲಿ ಕೆಲವರು ಏನಾದರೂ ಕೇಳಬೇಕೂ ಅಂತ ಇದೀರಿ. ಮುಖ ನೋಡಿದ್ರೆ ಗೊತ್ತಾಗತ್ತೆ. ಕೇಳೀ! ಹಿಂಜರೀಬೇಡಿ. ಯಾರೂ ನಿಮ್ಮನ್ನ ತಿನ್ನೋಲ್ಲ. ನೀವು ನಮ್ಮ ಜತೆ ಹೆಜ್ಜೆ ಹಾಕಿ, ನಾವು ನಿಮ್ಮ ಜತೆ ಹೆಜ್ಜೆ ಹಾಕತೀವಿ. ಇಷ್ಟು ಗಟ್ಟಿ. ಬರೀ ಮಾತಾಡತಾ ಕಾಲ ಹಾಕೋಕೆ ನಮಗೆ ತಾಳ್ಮೆ ಇಲ್ಲ. ಅದರಲ್ಲೂ ಎಲ್ಲದಕ್ಕೂ ಪಿರಿಪಿರಿ ಮಾಡತಾ ಇರೋದನ್ನಂತೂ ಸಹಿಸೋದಿಲ್ಲ. ಹಾಗಿದ್ರೂ ಏನಾದರೂ ಕೆಲಸಕ್ಕೆ ಬರುವ ಸಲಹೆ ಕೊಟ್ಟರೆ, ಏನು ಮಾಡಬೇಕೋ ಅದನ್ನ ಹೇಗೆ ಮಾಡೋದು ಅಂತ ಹೇಳಿದರೆ ಅದನ್ನ ಕೇಳಿಸಿಕೊಳ್ಳೋಕೆ ಸಿದ್ಧ. ಹೇಳಿ! (*ತರಕಾರಿ ವರ್ತಕರು ಉಸಿರು ಬಿಗಿ ಹಿಡಿದು ಕೂರುತ್ತಾರೆ.*)

**ಜಿವೋಲಾ:** (*ಗಡಸು ದನಿ*) ಹಿಂದೆ ಮುಂದೆ ನೋಡಬೇಡಿ. ನಾನು ಯಾರು ಅಂತ ಗೊತ್ತು ತಾನೇ! ಹೂ ಅಂಗಡಿಯವನು.

**ಅಂಗರಕ್ಷಕ:** ಜಿವೋಲಾ! ಹುರ್ರಾ!

**ಜಿವೋಲಾ:** ಇರಲಿ ಇರಲಿ, ನಿಮಗೆ ರಕ್ಷಣೆ ಬೇಕೋ? ಇಲ್ಲ, ಕೊಲೆ, ಸುಲಿಗೆ, ದರೋಡೇನೇ ಸಾಕೋ?

**ವರ್ತಕ ೧:** ಈಗೆಲ್ಲ ಗಲಾಟೆ ಇಲ್ಲವಲ್ಲ. ನನ್ನ ಅಂಗಡಿಯಲ್ಲಿ ಏನೂ ತೊಂದರೆ ಆಗಿಲ್ಲ.

**ಇನ್ನೊಬ್ಬ:** ನನ್ನ ಅಂಗಡಿಯಲ್ಲಿ ಕೂಡ.

**ಜಿವೋಲಾ:** ವಿಚಿತ್ರ.

**ಇನ್ನೊಬ್ಬ:** ಬಾರ್‌ಗಳಲ್ಲಿ ಮಿ. ಊಯಿ ಹೇಳಿದ ಹಾಗೆ ಏನೇನೋ ನಡೀತಿದೆ ಅಂತ ಕೇಳಿದೀವಿ. ರಕ್ಷಣೆಗೆ ಕಾಸು ಕೊಡದೇ ಇರುವ ಕಡೆ ಗ್ಲಾಸನ್ನ ಪುಡಿಮಾಡತಿದ್ದಾರಂತೆ. ಜಿನ್ನನ್ನ ಗಟಾರಕ್ಕೆ ಸುರೀತಿದ್ದಾರಂತೆ. ಆದರೆ ತರಕಾರಿ ಅಂಗಡಿಗಳಲ್ಲಿ ಎಲ್ಲ ಸರಿಯಾಗಿಯೇ ಇದೆ. ಕೊನೆ ಪಕ್ಷ, ದೇವರದಯ, ಇಲ್ಲಿನವರೆಗೆ.

**ರೋಮಾ:** ಶೀಟ್ ಕೊಲೆ, ಬೌಲ್ ಸಾವು? ಇದೆಲ್ಲ ನಡೆದರೂ ಏನೂ ಆಗಿಲ್ಲ ಅಂತೀರಾ?

**ವರ್ತಕರ ೨:** ಅದು ಟ್ರಸ್ಟಿಗೆ ಸಂಬಂಧಿಸಿದ್ದೋ?

**ರೋಮಾ:** ಇಲ್ಲ. ಒಂದು ನಿಮಿಷ ತಾಳಿ. *(ದೀರ್ಘ ಭಾಷಣ ನೀಡಿ ಆಯಾಸದಿಂದ ಚಡಪಡಿಸುತ್ತ ಕುಳಿತಿರುವ ಊಯಿ ಬಳಿಗೆ ಹೋಗುತ್ತಾನೆ. ಕೊಂಚ ಹೊತ್ತಾದ ಮೇಲೆ ಗಿರಿಯನ್ನು ಬಳಿಗೆ ಕರೆಯುತ್ತಾನೆ. ಪಿಸುಮಾತಿನ ಸಂವಾದದಲ್ಲಿ ಜಿವೋಲಾ ಸೇರುತ್ತಾನೆ. ಗಿರಿ ಒಬ್ಬ ಅಂಗರಕ್ಷಕನಿಗೆ ಸಂಜ್ಞೆ ಮಾಡಿ ಅವನ ಜತೆ ಬೇಗ ಹೊರ ಹೋಗುತ್ತಾನೆ.)*

**ಜಿವೋಲಾ:** ಸ್ನೇಹಿತರೇ, ಒಬ್ಬ ಬಡ ಹೆಂಗಸು, ನೋವು ತಿಂದವಳು, ನಿಮ್ಮೆದುರಿಗೆ ಮಿ. ಊಯಿ ಅವಳಿಗೆ ಹೇಗೆ ನೆರವಾದರೂ ಅನ್ನೋದನ್ನ ಹೇಳತಾಳೆ. *(ಹಿಂದೆ ಹೋಗಿ, ಅತಿಯಾದ ಮುಖವರ್ಣಿಕೆಯ, ಥಳಗುಟ್ಟುವ ವೇಷದ ಹೆಂಗಸೊಬ್ಬಳನ್ನು ಕರೆತರುತ್ತಾನೆ. ಅವಳ ಕೈಹಿಡಿದು ಒಬ್ಬ ಚಿಕ್ಕ ಹುಡುಗಿ. ಮೂವರೂ, ಈ ವೇಳೆಗೆ ನಿಂತಿರುವ ಊಯಿಯ ಮುಂದೆ ಬಂದು ನಿಲ್ಲುತ್ತಾರೆ.)*

**ಜಿವೋಲಾ:** ಮಾತಾಡಿ. ಮಿಸೆಸ್ ಬೌಲ್! *(ವರ್ತಕರಿಗೆ)* ಇವರು ಬೌಲ್ ಅವರ ಹೆಂಡತಿ. ಚಿಕ್ಕ ವಯಸ್ಸಿಗೇ ವಿಧವೆ. ಬೌಲ್ ಈ ಟ್ರಸ್ಟಲ್ಲಿ ಅಕೌಂಟೆಂಟ್ ಆಗಿದ್ರು. ತನ್ನ ಕೆಲಸ ತಾನು ಮಾಡೋಕೆ ಮುನಿಸಿಪಾಲಟಿಗೆ ಹೊರಟಿದ್ದವನನ್ನ ಯಾರೋ ಗೊತ್ತಿಲ್ಲ ನಿನ್ನೆ ಗುಂಡಿಕ್ಕಿ ಕೊಂದರು. ಮಿಸೆಸ್ ಬೌಲ್!

**ಡಾಕ್‌ಡೈಸಿ:** ಮಿ. ಊಯಿ. ನಾಗರಿಕನಾಗಿ ಮಾಡಬೇಕಾದ ಕೆಲಸ ಮಾಡೋಕೆ ನಿನ್ನೆ ಮುನಿಸಿಪಾಲಟಿಗೆ ಹೋಗತ್ತಿದ್ದ ನನ್ನ ಪತಿಯನ್ನ ಅನ್ಯಾಯವಾಗಿ ಕೊಲೆ ಮಾಡಿದಾಗ ತಾವು ಬಂದು ನನಗಾದ ದುಃಖದಲ್ಲಿ ಪಾಲುಗೊಂಡಿರಿ. ನನಗೆ, ತಂದೆಯನ್ನು ಕಳೆದುಕೊಂಡ ನನ್ನ ಈ ಆರುವರ್ಷದ ಮಗಳಿಗೆ ಹೂ ಕಳಿಸಿ ಸಂತಾಪ ಸೂಚಿಸಿದ್ದಕ್ಕೆ ನಮಸ್ಕಾರ. *(ವರ್ತಕರಿಗೆ)* ಮಹನೀಯರೇ, ನಾನೊಬ್ಬ ಬಡ ವಿಧವೆ. ನಾನು ಹೇಳೋದಿಷ್ಟೆ ಮಿ. ಊಯಿ ಇಲ್ಲದಿದ್ದರೆ ನಾನು ಬೀದಿ ಪಾಲಾಗತಿದ್ದೆ. ಇದನ್ನ ಯಾವಾಗ ಬೇಕಾದರೂ ಸಾರಿಸಾರಿ ಹೇಳಬಲ್ಲೆ. ನಾನೂ, ನನ್ನ ಐದು ವರ್ಷದ ಮಗಳೂ ಮಿ. ಊಯಿಯವರನ್ನ ಎಂದೆಂದಿಗೂ ನೆನಸ್ತೀವಿ. *(ಊಯಿ ಡಾಕ್‌ಡೈಸಿ ಕೈ ಹಿಡಿದು. ಮಗುವಿನ ಗಲ್ಲ ನೇವರಿಸುತ್ತಾನೆ)*

**ಜಿವೋಲಾ:** ಜೈ! *(ಬೌಲ್‌ನ ಹ್ಯಾಟು ಧರಿಸಿದ ಗಿರಿ ಗುಂಪಿನಿಂದ ಬರುತ್ತಾನೆ. ಹಿಂದೆ ಪೆಟ್ರೋಲ್ ಡಬ್ಬ ಹಿಡಿದ ರೌಡಿಗಳು. ಅವರೆಲ್ಲ ಹೊರ ನಡೆಯುತ್ತಾರೆ)*

ಊಯಿ: ಮಿಸೆಸ್ ಬೌಲ್. ನನಗೆ ಈಗಲೂ ಅಯ್ಯೋ ಅನ್ನಿಸುತ್ತೆ. ಕಾನೂನು, ಅಂಕೆ ತಪ್ಪಿದ ಈ ಪರಿಸ್ಥಿತಿಯನ್ನ ತಡೀಲೇ ಬೇಕು. ಯಾಕಂದರೆ...

ಜಿವೋಲಾ: *(ವರ್ತಕರು ಹೊರಡಲು ತಯಾರಾಗುತ್ತಿದ್ದಂತೆ)* ನಿಲ್ಲಿ, ಸಭೆ ಮುಗಿದಿಲ್ಲ. ಮುಂದೆ, ಪಾಪ ಬೌಲ್ ನೆನಪಿಗೊಂದು ಹಾಡು. ಅನಂತರ ವಿಧವೆಗಾಗಿ ಹಣ ಸಂಗ್ರಹ, ಹಾಡುವವನು ನಮ್ಮ ಗೆಳೆಯ ಜೇಮ್ಸ್‌ಗ್ರೀನ್‌ವುಲ್. ದನಿಕೊಂಚ ಗಡಸು. *(ಒಬ್ಬ ಅಂಗರಕ್ಷಕ ಮುಂದೆ ಬಂದು ಹಾಡು ಹೇಳುತ್ತಾನೆ. ಭಾವುಕ ಗೀತೆ. ಮತ್ತೆ ಮತ್ತೆ ಹಾಡಿನಲ್ಲಿ 'ಮನೆ'ಯ ಪ್ರಸ್ತಾಪ. ಹಾಡುವಾಗ ರೌಡಿಗಳು ಸದ್ದಿಲ್ಲದೆ ಕುಳಿತಿರುತ್ತಾರೆ. ತಲೆ ಮೇಲೆ ಕೈ ಇಟ್ಟು ಇಲ್ಲವೇ ತಲೆ ಹಿಂದಕ್ಕೆ ಚಲ್ಲಿ ಕಣ್ಣು ಮುಚ್ಚಿ. ಕೊನೆಗೆ ಮೆಲ್ಲಗೆ ಚಪ್ಪಾಳೆ. ಮುಗಿಯುವ ಹೊತ್ತಿಗೆ ಪೋಲೀಸ್ ಹಾಗೂ ಅಗ್ನಿಶಾಮಕದಳದ ಸೈರನ್. ದೊಡ್ಡ ಕಿಟಕಿಯಲ್ಲಿ ಕೆಂಪುಬಣ್ಣದ ಹಿನ್ನೆಲೆ)*

ರೋಮಾ: ಆ ಕಡೆ ಕೆರೆಯ ಆಚೆಗೆ ಬೆಂಕಿ? *(ಎಲ್ಲಿ ಎಲ್ಲಿ ಎಂಬ ಸದ್ದು ಎಲ್ಲ ಕಡೆ)*

ಅಂಗರಕ್ಷಕ: *(ಬಂದು)* ಇಲ್ಲಿ ಹುಕ್ ಎನ್ನುವ ತರಕಾರಿ ವರ್ತಕ ಯಾರು?

ವರ್ತಕ ೨: ನಾನೇ? ಏನು?

ಅಂಗರಕ್ಷಕ: ನಿಮ್ಮ ಗೊಡೌನಿಗೆ ಬೆಂಕಿ ಬಿದ್ದಿದೆ. *(ವರ್ತಕ ಹುಕ್ ಓಡುತ್ತಾನೆ. ಅವನ ಜತೆ ಕೆಲವರು ಹೋಗುವರು. ಉಳಿದವರು ಕಿಟಕಿ ಕಡೆ)*

ರೋಮಾ: ನಿಲ್ಲಿ! ಯಾರೂ ಹೊರಗೆ ಹೋಗಬೇಡಿ (ಅಂಗರಕ್ಷಕರಿಗೆ) ಅಲ್ಲಿ ಗಲಭೇನಾ?

ಅಂಗರಕ್ಷಕ: ಹಾಗೇ ಕಾಣುತ್ತೆ. ಅಲ್ಲೆ ಪೆಟ್ರೋಲ್ ಡಬ್ಬ ಬಿದ್ದದ್ದನ್ನ ಕಂಡಿದ್ದಾರೆ.

ವರ್ತಕ ೨: ಇಲ್ಲಿಂದಲೇ ಪೆಟ್ರೋಲ್ ಡಬ್ಬ ಒಯ್ದರಲ್ಲ.

ರೋಮಾ: *(ರೇಗಿ)* ಏನು? ನಾವು ಮಾಡಿದ್ದು ಅಂತಾನೋ?

ಅಂಗರಕ್ಷಕ: *(ಆಟೊಮೆಟಿಕ್ ಗನ್ ತುದಿಯನ್ನು ವರ್ತಕನ ಪಕ್ಕೆಗೆ ತಿವಿದು)* ಏನು ಒಯ್ದುದ್ದು ಇಲ್ಲಿಂದ? ಪೆಟ್ರೋಲ್ ಡಬ್ಬಾ? ನೀನು ನೋಡಿದ್ಯಾ?

ಉಳಿದ ಅಂಗರಕ್ಷಕರು: *(ವರ್ತಕರಿಗೆ)* ನೀವ್ಯಾರಾದ್ರೂ? ನೀವು?

ವರ್ತಕರು: ನಾನಲ್ಲ...ನಾನೂ ಅಲ್ಲ.

**ರೋಮಾ:** ಅದೀಗ ಸರಿ.

**ಜಿವೋಲಾ:** *(ಬೇಗ)* ಹಾಂ! ಕೊಂಚ ಹೊತ್ತು ಮೊದಲು ತರಕಾರಿ ಅಂಗಡೀಲಿ ಎಲ್ಲ ಸುಖವಾಗಿದೆ ಅನ್ನತ್ತಿದ್ದವನ ಗೋಡೋನಿಗೆ ಬೆಂಕಿ ಹತ್ತಿ ಉರೀತಿದೆ. ರೌಡಿಗಳಿಂದಾಗಿ ಬೂದಿಯಾಗತಿದೆ. ಗೊತ್ತಾಯ್ತೆ? ಇನ್ನೂ ಕುರುಡುರಾಗೇ ಇರ್ತೀರೇನು? ಒಗ್ಗಟ್ಟಾಗಲೇ ಬೇಕು! ಕೂಡಲೇ!

**ಊಯಿ:** *(ಕೂಗಿ)* ಎಲ್ಲ ಅಸಹ್ಯವಾಗತಿದೆ ನಗರದಲ್ಲಿ. ಆಗ ಕೊಲೆ ಈಗ ಬೆಂಕಿ. ಮುಂದಿನ ಹೊಡೆತ ನಿಮಗೆ ಬೀಳಬಹುದು. ತಿಳಿದುಕೊಂಡಿರಿ.

(ಭಿತ್ತಿ ಪತ್ರ)

# ದೃಶ್ಯ ೮ (ಅ)

*(ಗೋಡೋನು ಬೆಂಕಿ ವಿಚಾರಣೆ. ವರದಿಗಾರರು. ನ್ಯಾಯಾಧೀಶ, ಪ್ರಾಸಿಕ್ಯೂಟರ್, ಆಪಾದಿತ ವಕೀಲ, ಡಾಗ್ಸ್‌ಬರೋ ಮಗ, ಗಿರಿ, ಜಿವೋಲಾ, ಡಾಕ್‌ಡೈಸಿ, ಅಂಗರಕ್ಷಕರು, ತರಕಾರಿ ವರ್ತಕರು ಹಾಗೂ ಆಪಾದಿತ ಫಿಶ್)*

*(ಗಿರಿ ಸಾಕ್ಷಿ ಕುರ್ಚಿ ಎದುರು ನಿಂತಿದ್ದಾನೆ. ಹತಾಶೆಯಿಂದ ಕುಳಿತಿರುವ ಆಪಾದಿತನೆಡೆಗೆ ಬೆರಳು ಮಾಡಿದ್ದಾನೆ.)*

**ಗಿರಿ:** (ಕೂಗುತ್ತ) ಬೆಂಕಿ ಕೇಡಿ ಇವನೇ. ನಾನು ಎದುರುಬಿದ್ದು ಹಿಡಿದಾಗ ಗಲ್ಲಿ ಬಿದ್ದು ತಪ್ಪಿಸಿಕೊಳ್ಳುತ್ತಿದ್ದ. ಕೈಯಲ್ಲಿದ್ದ ಪೆಟ್ರೋಲ್ ಡಬ್ಬ ಎದೆಗೆ ಒತ್ತಿ ಹಿಡಿದಿದ್ದ. ನಿಂತ್ಕೊಳೋ ಸೂಳೆಮಗನೆ. ನಾ ನಿಂತು ಮಾತಾಡತಿದ್ದರೆ ಕುಳಿತಿದೀಯಾ? (ಫಿಶ್‌ನನ್ನು ಎಬ್ಬಿಸಿ ನಿಲ್ಲಿಸಲಾಗುವುದು. ತೂಗಾಡುತ್ತಾನೆ.)

**ನ್ಯಾಯಾಧೀಶ:** ಆರೋಪಿ ಎಚ್ಚರವಾಗಿರಬೇಕು. ಇದು ನ್ಯಾಯಾಲಯ. ಬೆಂಕಿ ಹಚ್ಚಿದ ಆರೋಪದ ಮೇಲೆ ನೀನು ವಿಚಾರಣೆಗೆ ಒಳಗಾಗಿದೀಯ. ಇದು ಗಂಭೀರ ವಿಷಯ. ನೆನಪಿರಲಿ.

**ಫಿಶ್:** *(ಗಗ್ಗರ ದನಿ)* ನ್‌ನ್‌ನ್ ರ್

**ನ್ಯಾಯಾಧೀಶ:** ಪೆಟ್ರೋಲ್ ಡಬ್ಬ ಎಲ್ಲಿ ಸಿಕ್ಕಿತು?

**ಫಿಶ್:** ನನ್‌ನ್... *(ನ್ಯಾಯಾಧೀಶರ ಸೂಚನೆ ಮೇರೆಗೆ ಚೆನ್ನಾದ ಉಡುಪು ತೊಟ್ಟ, ಸಂಶಯಾಸ್ಪದ ರೀತಿಯ ವೈದ್ಯನೊಬ್ಬ ಫಿಶ್ ಬಳಿಗೆ ಬಂದು ನೋಡುವನಂತೆ ಬಾಗಿ ಗಿರಿಯ ಕಡೆಗೆ ಕಣ್ಣು ಹಾಯಿಸುತ್ತಾನೆ.)*

**ವೈದ್ಯ:** ನಟನೆ.

**ಆಪಾದಿತನವಕೀಲ:** ಬೇರೆ ವೈದ್ಯರ ಸಲಹೆ ಪಡೆಯಲು ಅನುಮತಿ ಕೊಡಬೇಕು.

**ನ್ಯಾಯಾಧೀಶ:** *(ನಗುತ್ತ)* ಕೋರಿಕೆಯನ್ನು ತಳ್ಳಿಹಾಕಲಾಗಿದೆ.

ಆಪಾ.ವಕೀಲ: ಹುಕ್ ಗೋಡೋನಲ್ಲಿ ಹತ್ತಿದ ಬೆಂಕಿ ಇಪ್ಪತ್ತೆರಡು ಕಟ್ಟಡಗಳನ್ನು ಸುಟ್ಟು ಬೂದಿಮಾಡಿದೆ. ಈ ಅಪಘಾತ ನಡೆದಾಗ ಮಿ.ಗಿರಿ ನೀವು ಅಲ್ಲಿ ಏಕಿದ್ದಿರಿ?

ಗಿರಿ: ತಿಂದದ್ದು ಜೀರ್ಣವಾಗಲಿಕ್ಕೆ ನಡೆದಾಡುತ್ತಿದ್ದೆ *(ಅವನೂ ಕೆಲವು ಅಂಗರಕ್ಷಕರೂ ನಗುವರು)*

ಆಪಾ.ವಕೀಲ: ಪ್ರತಿವಾದಿ ಮಿ. ಫಿಶ್ ಒಬ್ಬ ನಿರುದ್ಯೋಗಿ ದುಡಿಮೆಗಾರ. ಚಿಕಾಗೋಗೆ ಯಾವತ್ತೂ ಬಂದವರಲ್ಲ. ಬೆಂಕಿ ಘಟನೆ ನಡೆದ ಹಿಂದಿನ ದಿನ ಇಲ್ಲಿಗೆ ಬಂದರು. ಗೊತ್ತಾ?

ಗಿರಿ: ಏನು? ಯಾವಾಗ?

ಆಪಾ.ವಕೀಲ: ತಮ್ಮ ಕಾರಿನ ನೊಂದಣಿ ಸಂಖ್ಯೆ XXXXX ಹೌದಾ?

ಗಿರಿ: ಹೌದು.

ಆಪಾ.ವಕೀಲ: ಬೆಂಕಿ ಹತ್ತುವುದಕ್ಕೆ ನಾಲ್ಕು ಗಂಟೆ ಮೊದಲು ನಿಮ್ಮ ಕಾರು ೮೭ನೇ ಬೀದಿಯ ಮಿ.ಡಾಗ್ಸ್‌ಬರೋ ಅವರ ಹೋಟೆಲ್ ಬಳಿ ನಿಂತಿತ್ತು. ಪ್ರತಿವಾದಿ ಫಿಶ್ ಅವರನ್ನು ಪ್ರಜ್ಞಾರಹಿತ ಅವಸ್ಥೆಯಲ್ಲಿ ಹೋಟೆಲ್‌ನಿಂದ ಹೊರಗೆ ತಂದದ್ದು ನಿಜವಾ?

ಗಿರಿ: ನನಗೆ ಹೇಗೆ ಗೊತ್ತು? ಆ ಇಡೀ ದಿನ ನಾನು ಸಿಸಿರೋಗೆ ಪಿಕ್‌ನಿಕ್ ಹೋಗಿದ್ದೆ. ನನ್ನನ್ನ ಅಲ್ಲಿ ನೋಡಿದ್ದಕ್ಕೆ ಸಾಕ್ಷಿ ಹೇಳುವ ಐವತ್ತೆರಡು ಜನರನ್ನ ಭೇಟಿಯಾಗಿದ್ದೆ. *(ಅಂಗರಕ್ಷಕರು ನಗುತ್ತಾರೆ)*

ಆಪಾ.ವಕೀಲ: ಸ್ವಲ್ಪ ಹೊತ್ತಿಗೆ ಮೊದಲು, ನೀವು ಶಿಖಾಗೋದಲ್ಲಿ ಆ ದಿನ ಜೀರ್ಣವಾಗಲಿಕ್ಕೆ ತಿರುಗಾಡುತ್ತಿದ್ದೆ ಅಂತಾ ಹೇಳಿದಿರಿ ಅಲ್ವೆ

ಗಿರಿ: ಸಿಸಿರೋದಲ್ಲಿ ಊಟ ಮಾಡಿ ಶಿಕಾಗೋದಲ್ಲಿ ಜೀರ್ಣಿಸಿಕೊಳ್ಳೋದಕ್ಕೆ ತಮ್ಮ ತಕರಾರು ಏನಾದ್ರೂ ಇದೆಯೇನು? *(ಗಟ್ಟಿಯಾದ ನಗು. ನ್ಯಾಯಾಧೀಶ ಕೂಡ ಭಾಗಿ. ಕತ್ತಲು. ಚಾಪಿನ್‌ನ 6 Funeral March' ಅನ್ನು ನೃತ್ಯಲಯದಲ್ಲಿ ನುಡಿಸಲಾಗುತ್ತದೆ.)*

## ೮ (ಆ)

*(ಬೆಳಕು ಬಂದಾಗ, ಹುಕ್, ತರಕಾರಿ ವರ್ತಕ ಕಟಕಟೆಯಲ್ಲಿ)*

ಆಪಾ.ವಕೀಲ: ಪ್ರತಿವಾದಿಯ ಕೂಡ ಯಾವಾಗಲಾದರೂ ಜಗಳವಾಡಿದ್ದೀರಾ? ಈ ಮೊದಲು ಅವರನ್ನ ಕಂಡಿದ್ದು ಉಂಟಾ?

**ಹುಕ್:** ಇಲ್ಲ.

**ಆಪಾ.ವಕೀಲ:** ಗಿರಿಯವರನ್ನು ಎಂದಾದರೂ ನೋಡಿದ್ದಿರಾ?

**ಹುಕ್:** ಹೌದು, ಬೆಂಕಿ ಹತ್ತಿದ ದಿನ ಕಾಲಿಫ್ಲವರ್ ಟ್ರಸ್ಟ್ ಆಫೀಸಿನಲ್ಲಿ.

**ಆಪಾ.ವಕೀಲ:** ಬೆಂಕಿ ಹತ್ತುವ ಮೊದಲು?

**ಹುಕ್:** ಬೆಂಕಿಗೆ ಕೊಂಚ ಮೊದಲು, ಪೆಟ್ರೋಲ್ ಡಬ್ಬ ಹಿಡಿದ ನಾಲ್ಕು ಜನ ರೌಡಿಗಳ ಕೂಡ ಈತ ಕೊಠಡಿ ಮೂಲಕ ಹಾಯ್ದು ಹೋದ. (ವರದಿಗಾರರು, ಅಂಗರಕ್ಷಕರು ಗಜಿಬಿಜಿ)

**ನ್ಯಾಯಾಧೀಶ:** ವರದಿಗಾರರು ಸದ್ದು ಮಾಡಬಾರದು.

**ಆಪಾ.ವಕೀಲ:** ಹುಕ್ ನಿಮ್ಮ ಗೋಡೌನು ಎಲ್ಲಿದೆ?

**ಹುಕ್:** ಹಡಗುಕಟ್ಟೆ ಪಕ್ಕ. ಆ ಹಡಗುಕಟ್ಟೆ ಶೀಟ್ ಅವರಿಗೆ ಸೇರಿತ್ತು. ಅದಕ್ಕೂ ಗೋಡೌನಿಗೂ ನಡುವೆ ದಾರಿ ಇದೆ.

**ಆಪಾ.ವಕೀಲ:** ಶೀಟ್‌ಗೆ ಸೇರಿದ್ದ ಹಡಗುಕಟ್ಟೆಯಲ್ಲಿ ಮಿ.ಗಿರಿ ಇರೋದು, ಅವರಿಗೆ ನಿಮ್ಮ ಗೋಡೌನಿಗೆ ಬರುವುದಕ್ಕೆ ಸಾಧ್ಯವಿದ್ದದ್ದು ನಿಮಗೆ ಗೊತ್ತಿತ್ತಾ?

**ಹುಕ್:** ಹೌದು, ಆತ ಆ ಗೋಡೌನಿನಲ್ಲಿ ಮೇಲ್ವಿಚಾರಕ. (ಮತ್ತೆ ಗಲಿಬಿಲಿ, ವರದಿಗಾರರಲ್ಲಿ. ಅಂಗರಕ್ಷಕರು ಹೀಯಾಳಿಸುವರು. ಹುಕ್, ವಕೀಲರನ್ನು ಇರಿಯುವಂತೆ ನೋಡುತ್ತಾರೆ. ಡಾಗ್ಸ್‌ಬರೋ ಮಗ ನ್ಯಾಯಾಧೀಶರ ಬಳಿ ಬಂದು ಕಿವಿಮಾತು ಹೇಳುತ್ತಾನೆ.)

**ನ್ಯಾಯಾಧೀಶ:** ಸದ್ದು! ಆರೋಪಿಗೆ ಆರೋಗ್ಯ ಸರಿಯಿಲ್ಲ. ಕೇಸ್ ವಿಚಾರಣೆ ಮುಂದೂಡಲಾಗಿದೆ. ***(ಕತ್ತಲು, 8(ಅ)ನಂತೆ)***

## ೮ (ಇ)

*(ಬೆಳಕು ಹುಕ್ ಸಾಕ್ಷಿ ಕುರ್ಚಿಯಲ್ಲಿ ಕುಸಿದಿದ್ದಾನೆ. ಪಕ್ಕದಲ್ಲಿ ಕೋಲು, ತಲೆಗೆಪಟ್ಟಿ)*

**ವಾದಿ ವಕೀಲ:** ನಿಮಗೆ ದೃಷ್ಟಿದೋಷವುಂಟೆ ಮಿ.ಹುಕ್.

**ಹುಕ್:** *(ಕಷ್ಟದಿಂದ)* ಇದೆ.

**ವಾದಿ ವಕೀಲ:** ಯಾರನ್ನಾದರೂ ಕಂಡಾಗ ಖಚಿತವಾಗಿ, ಸ್ಪಷ್ಟವಾಗಿ ಗುರುತು ಹಿಡೀತೀರಾ?

**ಹುಕ್:** ಇಲ್ಲ.

| | |
|---|---|
| ವಾದಿ ವಕೀಲ: | ನೋಡೋಣ. ಈ ವ್ಯಕ್ತಿ ಹೇಳಿ *(ಗಿರಿಯನ್ನು ತೋರಿಸುವನು)* |
| ಹುಕ್: | ಗೊತ್ತಿಲ್ಲ. |
| ವಾದಿ ವಕೀಲ: | ಇವರನ್ನ ಈ ಹಿಂದೆ ನೋಡಿದ್ದು ಏನಾದರೂ ನೆನಪಿದೆಯಾ? |
| ಹುಕ್: | ಇಲ್ಲ. |
| ವಾದಿ ವಕೀಲ: | ಈಗ ಅತಿ ಮುಖ್ಯ ಪ್ರಶ್ನೆ. ಚೆನ್ನಾಗಿ ಯೋಚಿಸಿ ಉತ್ತರ ಕೊಡಿ. ನಿಮ್ಮ ಗೋಡೌನು, ಶೀಟ್ ಅವರಿಗೆ ಸೇರಿದ್ದ ಹಡಗುಕಟ್ಟೆ ಪಕ್ಕ ಇದ್ದದ್ದು ನಿಜವೇನು? |
| ಹುಕ್: | *(ತಡೆದು)* ಇಲ್ಲ. |
| ವಾದಿ ವಕೀಲ: | ಅಷ್ಟೆ, ಮಹಾಸ್ವಾಮಿ. **(ಕತ್ತಲು ೮(ಅ)ನಂತೆ)** |

## ೮ (ಈ)

*(ಬೆಳಕು. ಡಾಕ್‌ಡೈಸಿ ಸಾಕ್ಷಿ ಕುರ್ಚಿಯಲ್ಲಿ)*

**ಡಾಕ್‌ಡೈಸಿ:** *(ಯಾಂತ್ರಿಕವಾಗಿ)* ಆರೋಪಿಯನ್ನು ನಾನು ಖಚಿತವಾಗಿ ಗುರುತಿಸಬಲ್ಲೆ. ಯಾಕಂದರೆ ಅವನ ಮುಖದಲ್ಲಿ ಅಪರಾಧಿಯ ಕಳೆ ಇದೆ. ಯಾಕಂದರೆ ಅವನು ಐದು ಅಡಿ ಎಂಟು ಅಂಗುಲ ಎತ್ತರವಿದ್ದಾನೆ. ನನ್ನ ಪತಿ ಮುನಿಸಿಪಾಲಟಿಗೆ ಹೋಗುವಾಗ ನಿನ್ನೆ ಅಪರಾಹ್ನ ಗುಂಡೇಟಿಗೆ ಬಲಿಯಾದಾಗ ಈತನನ್ನು ಅಲ್ಲಿ ನೋಡಿದ್ದಾಗಿ ನನ್ನ ನಾದಿನಿ ಹೇಳಿದ್ದಾಳೆ. ಅವನ ಬಳಿ ಒಂದು ವೆಬ್‌ಸ್ಟರ್ ಮಿಷಿನ್‌ಗನ್ ಇತ್ತಂತೆ. ಅನುಮಾನಾಸ್ಪದವಾಗಿ ಕಾಣಿಸುತ್ತಿದ್ದನಂತೆ. ***(ಕತ್ತಲು.೮(ಅ)ನಂತೆ)***

## ೮ (ಉ)

*(ಬೆಳಕು. ಜಿವೋಲಾ ಸಾಕ್ಷಿ ಕುರ್ಚಿಯಲ್ಲಿ. ಅಂಗರಕ್ಷಕ ಗ್ರೀನ್‌ವುಲ್)*

**ವಾದಿ ವಕೀಲ:** ಬೆಂಕಿ ಹತ್ತುವುದಕ್ಕೆ ಕೊಂಚ ಮೊದಲು ಟ್ರಸ್ಟ್ ಕಚೇರಿಯಿಂದ ಕೆಲವು ಜನರು ಪೆಟ್ರೋಲ್ ಡಬ್ಬಗಳನ್ನು ಹೊತ್ತು ಹೊರಹೋದರು ಅನ್ನುವ ಮಾತಿದೆ. ಈ ಬಗ್ಗೆ ನಿಮಗೇನಾದರೂ ಗೊತ್ತೇನು?

**ಜಿವೋಲಾ:** ಹೌದು! ಮಿ.ಗ್ರೀನ್‌ವುಲ್ ಹಾಗೆ ಮಾಡಿದ್ದು ನಿಜ.

**ವಾದಿ ವಕೀಲ:** ಮಿ.ಗ್ರೀನ್‌ವುಲ್ ನಿಮ್ಮ ನೌಕರನಾ?

**ಜಿವೋಲಾ:** ಹೌದು.

**ವಾದಿ ವಕೀಲ:** ನಿಮ್ಮ ವೃತ್ತಿ ಏನು!

**ಜಿವೋಲಾ:** ಹೂ ವ್ಯಾಪಾರ.

**ವಾದಿ ವಕೀಲ:** ಹೂ ವ್ಯಾಪಾರಿಗಳಿಗೆ ಪೆಟ್ರೋಲ್ ಯಾಕೆ ಬೇಕಾಗುತ್ತೆ?

**ಜಿವೋಲಾ:** *(ಗಂಭೀರ)* ಗಿಡಗಳಿಗೆ ಒಂದು ಬಗೆ ಹೇನು ಹತ್ತುತ್ತೆ. ಅದಕ್ಕೆ ಬೇಕು.

**ವಾದಿ ವಕೀಲ:** ಮಿ.ಗ್ರೀನ್‌ವುಲ್ ಟ್ರಸ್ಟ್ ಕಛೇರಿಯಲ್ಲಿ ಏನು ಮಾಡತಿದ್ದರು?

**ಜಿವೋಲಾ:** ಹಾಡು ಹೇಳುತ್ತಿದ್ದ.

**ವಾದಿ ವಕೀಲ:** ಹಾಗಾದ್ರೆ ಅದೇ ವೇಳೆಯಲ್ಲಿ ಆತ ಹುಕ್ ಅವರ ಗೋಡೌನಿಗೆ ಬೆಂಕಿ ಹಾಕಿರಲಾರ.

**ಜಿವೋಲಾ:** ಅಸಾಧ್ಯ. ಬೆಂಕಿ ಹಚ್ಚುವುದು ಅವನ ಜಾಯಮಾನದಲ್ಲೇ ಇಲ್ಲ. ಗಡಸು ದನಿಯ ಹಾಡುಗಾರ ಆತ.

**ವಾದಿ ವಕೀಲ:** ನ್ಯಾಯಾಲಯದ ಅಭ್ಯಂತರವಿಲ್ಲದಿದ್ದರೆ, ಗೋಡೌನಿಗೆ ಬೆಂಕಿ

ಬಿದ್ದಾಗ, ಸಾಕ್ಷದಾರ ಗ್ರೀನ್‌ವುಲ್ ಟ್ರಸ್ಟ್ ಕಚೇರಿಯಲ್ಲಿ ಹಾಡುತ್ತಿದ್ದ ಗೀತೆಯನ್ನು ಹಾಡಲು ಸೂಚಿಸುತ್ತೇನೆ.

**ನ್ಯಾಯಾಧೀಶ:** ಅದು ಅಗತ್ಯವೆಂದು ನ್ಯಾಯಾಲಯ ಭಾವಿಸುತ್ತಿಲ್ಲ.

**ಜಿವೋಲಾ:** ಇದಕ್ಕೆ ನನ್ನ ಪ್ರತಿಭಟನೆ ಇದೆ *(ಎದ್ದು)* ಪಕ್ಷಪಾತ ಕಂಡರೆ ಉರಿಯುತ್ತೆ. ಚಿಕ್ಕಮಟ್ಟ ಹುಡುಗರು ಒಂದೆರಡು ಗುಂಡನ್ನ ಹಾಡು ಹಗಲಲ್ಲಿ ಹಾರಿಸಿದ್ದಕ್ಕೆ ಅವರನ್ನ ಸಂಶಯದಲ್ಲಿ ನೋಡಲಾಗುತ್ತೆ. ಇದು ಪಕ್ಷಪಾತ. **(ನಗೆ. ಕತ್ತಲು. ೮(ಅ)ನಂತೆ)**

## ೮ (ಊ)

*(ಬೆಳಕು ನ್ಯಾಯಾಲಯದಲ್ಲಿ ಎಲ್ಲರೂ ಸುಸ್ತಾಗಿದ್ದಾರೆ)*

**ನ್ಯಾಯಾಧೀಶ:** ಪತ್ರಿಕೆಯವರು ಈ ನ್ಯಾಯಾಲಯ ಕೆಲವು ನಿರ್ದಿಷ್ಟ ಮೂಲಗಳ ಒತ್ತಡಕ್ಕೆ ಮಣಿಯಬಹುದು ಎಂಬ ಸುದ್ದಿ ಹರಡಿದ್ದಾರೆ. ಆದರೆ ಯಾವುದೇ ರೀತಿ ಒತ್ತಡಕ್ಕೆ ಒಳಗಾಗದೆ, ಸಂಪೂರ್ಣ ಸ್ವಾತಂತ್ರ್ಯದಿಂದ ಈ ವಿಚಾರಣೆಯನ್ನು ನಡೆಸಲಾಗುತ್ತಿದೆ ಎಂದು ನ್ಯಾಯಾಲಯ ಘೋಷಿಸುತ್ತಿದೆ. ಇಷ್ಟು ಹೇಳಿದರೆ ಸಾಕು.

**ವಾದಿ ವಕೀಲ:** ಮಾನನೀಯ ನ್ಯಾಯಾಧೀಶರೇ! ಪ್ರತಿವಾದಿ ಫಿಶ್ ತಲೆಸರಿಯಿಲ್ಲವೆಂಬಂತೆ ನಟಿಸುವುದನ್ನು ನಿಲ್ಲಿಸಿಲ್ಲ. ಹಾಗಾಗಿ ಅವರನ್ನ ಪ್ರಶ್ನಿಸುವುದು ಅಸಾಧ್ಯ. ಹಾಗಾಗಿ.....

**ಆಪಾ.ವಕೀಲ:** ಮಹಾಸ್ವಾಮಿ! ಕಕ್ಷಿದಾರ ಎಚ್ಚೆತ್ತುಕೊಳ್ಳುತ್ತಿದ್ದಾರೆ. *(ಗಜಿಬಿಜಿ)*

**ಫಿಶ್:** *(ಎಚ್ಚರಗೊಳ್ಳುತ್ತ)* ನನ್‌ರರ್...

**ಆಪಾ.ವಕೀಲ:** ನೀರು! ಸ್ವಾಮಿ! ಫಿಶ್ ಅವರಿಗೆ ಪ್ರಶ್ನೆ ಹಾಕಲು ಅನುಮತಿ ಕೊಡಬೇಕು.

**ವಾದಿ ವಕೀಲ:** ಇದಕ್ಕೆ ನನ್ನ ವಿರೋಧವಿದೆ. ಫಿಶ್ ಅವರ ಮನಸ್ಸು ಸ್ವಸ್ಥವಾಗಿದೆ ಎಂದು ನಮಗೆ ಖಚಿತವಾಗಿಲ್ಲ. ಇದೆಲ್ಲ ನನ್ನ ಎದುರಾಳಿ ವಕೀಲರ ತಂತ್ರ, ಅಗ್ಗದ ಪ್ರಚಾರಪ್ರಿಯತೆ. ಆಡಂಬರ!

**ಫಿಶ್:** ನರ್ ನರ್...*(ತನ್ನ ವಕೀಲರ ಬೆಂಬಲ ಪಡೆದು ನಿಲ್ಲುವನು)*

**ಆಪಾ. ವಕೀಲ:** ಫಿಶ್, ನನ್ನ ಪ್ರಶ್ನೆಗೆ ಉತ್ತರ ಕೊಡುತ್ತೀರಾ?

**ಫಿಶ್:** ಆ ಆಗ್...ಲ್

**ಆಪಾ.ವಕೀಲ:** ಫಿಶ್, ನ್ಯಾಯಾಲಯಕ್ಕೆ ಕಳೆದ ೨೮ರಂದು ಕೆರೆಬದಿಯ ತರಕಾರಿ ಗೋಡೌನಿಗೆ ಬೆಂಕಿ ಹಚ್ಚಿದಿರಾ? ಹೌದು ಅಥವಾ ಇಲ್ಲ.

**ಫಿಶ್:** ಇಲ್‌ಲ್...ಅ.

**ಆಪಾ.ವಕೀಲ:** ನೀವು ಈ ಊರಿಗೆ ಬಂದದ್ದು ಯಾವಾಗ?

**ಫಿಶ್:** ನೀರು.

**ಆಪಾ. ವಕೀಲ:** ನೀರು! (ಗಜಿಬಿಜಿ ಡಾಗ್ಸ್‌ಬರೋ ಮಗ ನ್ಯಾಯಾಧೀಶರೊಡನೆ ಮಾತಾಡುವನು)

**ಗಿರಿ:** (ನಿಂತು ಕೂಗುತ್ತಾನೆ) ಮೋಸ! ಸುಳ್ಳು! ತಟವಟ.

**ಆಪಾ. ವಕೀಲ:** ಈ ಮನುಷ್ಯನನ್ನು (ಗಿರಿಯನ್ನು ತೋರಿಸಿ) ಹಿಂದೆ ಎಂದಾದ್ರೂ ನೋಡಿದ್ದಿರಾ?

**ಫಿಶ್:** ಹೌದು...ನೀರು.

**ಆಪಾ. ವಕೀಲ:** ಎಲ್ಲಿ. ಕೆರೆ ಬದಿಯಲ್ಲಿರುವ ಡಾಗ್ಸ್‌ಬರೋ ಅವರ ಹೋಟೆಲ್‌ನಲ್ಲಿಯಾ?

**ಫಿಶ್:** *(ಕುಸಿಯುತ್ತ, ಮೆಲ್ಲನೆ)* ಹೌದು. *(ಗಜಿಬಿಜಿ. ಅಂಗರಕ್ಷಕರು ಗನ್‌ಗಳನ್ನು ಎತ್ತಿ ಹೀಯಾಳಿಸುತ್ತಾರೆ ವೈದ್ಯ ಗ್ಲಾಸ್ ಹಿಡಿದು ಓಡಿ ಬರುತ್ತಾನೆ. ಅದರಲ್ಲಿರುವುದನ್ನು ಫಿಶ್ ಬಾಯಿಗೆ ಸುರಿಯುತ್ತಾನೆ. ಆಪಾದಿತನ ವಕೀಲ ತಡೆಯಲು ಯತ್ನಿಸುತ್ತಾನೆ. ಆದರೆ ವ್ಯರ್ಥ)*

**ಆಪಾ. ವಕೀಲ:** ಸ್ವಾಮಿ. ಈ ಗ್ಲಾಸನ್ನು ಪರೀಕ್ಷೆಗೆ ಗುರಿಪಡಿಸಲು ಕೋರುತ್ತೇನೆ.

**ನ್ಯಾಯಾಧೀಶ:** *(ವಾದಿ ವಕೀಲರ ಕಡೆ ನೋಡಿ)* ಕೋರಿಕೆಯನ್ನು ತಳ್ಳಿಹಾಕಲಾಗಿದೆ.

**ಡಾಕ್‌ಡೈಸಿ:** *(ಫಿಶ್ ಕಡೆ ನೋಡಿ)* ಕೊಲೆಗಾರ!

**ಆಪಾ. ವಕೀಲ:** ಮಾನನೀಯರೇ! ಸತ್ಯದ ಬಾಯನ್ನು ಮಣ್ಣು ತುಂಬಿ ಮುಚ್ಚುವುದಕ್ಕೆ ಅಸಾಧ್ಯವೆಂದು ತಿಳಿದು, ಈಗ ಕಾಗದದ ಚೂರಿನ ಮೇಲಿನ ಅಕ್ಷರದಿಂದ ಮುಚ್ಚಲಿಕ್ಕೆ ಹೊರಟಿದ್ದಾರೆ. ಇಂಥ ತೀರ್ಪು ನೀಡುವವರು ಮಾನನೀಯ ಎಂಬ ಹೆಸರಿಗೆ ಅರ್ಹರಲ್ಲ; ಅವರು ಅವಮಾನನೀಯರು. ನ್ಯಾಯದ ಎದುರು ಬಂದೂಕು ತೋರಿಸಿದ್ದಾರೆ. ಕೆಲವೇ ಮಂದಿ ರಕ್ತ ಪಿಪಾಸುಗಳ ದಾಳಿಯಿಂದ ಏಳೇಏಳು ದಿನಗಳಲ್ಲಿ ನಮ್ಮ ನಗರಕ್ಕೆ ನೂರು ವರ್ಷ ವಯಸ್ಸಾಗಿ ಹೋಗಿದೆ. ಈಗ ಅದೇ ನಗರದಲ್ಲಿ ನ್ಯಾಯದ ಕೊಲೆ, ಇಲ್ಲ ಕೊಲೆಗಿಂತ ಹೀನಾಯ. ಪಾಶವೀಶಕ್ತಿಗಳಿಗೆ ನ್ಯಾಯ ಬಲಿಯಾಗುತ್ತಿದೆ. ದಯವಿಟ್ಟು ಈ ವಿಚಾರಣೆ ನಿಲ್ಲಿಸಿ.

**ವಾದಿ ವಕೀಲ:** ಇದಕ್ಕೆ ನನ್ನ ವಿರೋಧವಿದೆ.

**ಗಿರಿ:** ನೀನೊಂದು ನಾಯಿ! ಸುಳ್ಳು ಬೊಗಳತಿದೀಯಾ! ನೀನೇ ವಿಷ ತಿನ್ನಿಸಿದವನು ಬಾರೋ! ಆಚೆಗೆ ಬಾ! ನಿನ್ನ ಕರುಳು ಬಗೆದು ತಗೀತೀನಿ! ರೌಡಿ ಮಗನೇ!

**ಆಪಾ. ವಕೀಲ:** ಈತ ಯಾರು ಅನ್ನೋದು ಇಡೀ ಊರಿಗೇ ಗೊತ್ತು.

**ಗಿರಿ:** *(ಏದುಸಿರು)* ಮುಚ್ಕೋ ಬಾಯಿ *(ನ್ಯಾಯಾಧೀಶ ಅವನನ್ನು ತಡೆಯಲು ಯತ್ನಿಸಿದಾಗ)* ನೀನೂ ಅಷ್ಟೆ ಬದುಕ ಬೇಕನ್ನೋ ಆಸೆ ಇದ್ದರೆ ಮುಚ್ಕೊಂಡು ಬಿದ್ದಿರು. *(ಉದ್ವೇಗ ಹೆಚ್ಚಾದಾಗ)*

**ನ್ಯಾಯಾಧೀಶ:** ಸದ್ದು. ಇದು ನ್ಯಾಯಾಲಯ. ಆಪಾದಿತರ ಪರ ವಕೀಲರು ನ್ಯಾಯಾಲಯ ನಿಂದನೆಯ ಆರೋಪ ಎದುರಿಸಬೇಕಾಗುತ್ತದೆ. ಮಿ. ಗಿರಿಯವರ ಉದ್ವೇಗವನ್ನು ನಾವು ಅರ್ಥ ಮಾಡಿಕೊಳ್ಳಬಹುದು *(ಆಪಾ. ವಕೀಲರಿಗೆ)* ಮುಂದುವರೆಸಿ

**ಆಪಾ. ವಕೀಲ:** ಫಿಶ್! ಡಾಗ್ಸ್‌ಬರೋ ಅವರ ಹೋಟೆಲ್‌ನಲ್ಲಿ ನಿಮಗೆ ಕುಡಿಯಲು ಏನಾದರೂ ಕೊಡಲಾಯಿತೇನು? ಫಿಶ್! ಫಿಶ್!

**ಗಿರಿ:** *(ಉದ್ರೇಕದಿಂದ)* ಅರುಚಿಕೋ! ತಾಕತ್ತೆಲ್ಲ ಮುಗಿತಾ? ಈ ಊರಲ್ಲಿ ಯಾರ ಮಾತು ನಡೆಯುತ್ತೆ ನೋಡೋಣ. *(ಗಜಿಬಿಜಿ. ಕತ್ತಲು. ೮(ಅ)ನಂತೆ)*

## ೮ (ಎ)

*(ಬೆಳಕು ಬಂದಾಗ ನ್ಯಾಯಾಧೀಶ ನಿಂತು ಏರಿಳಿತವಿಲ್ಲದ ದನಿಯಲ್ಲಿ ತೀರ್ಪು ಓದುತ್ತಾನೆ. ಆರೋಪಿಯಲ್ಲಿ ಪ್ರೇತಕಳೆ)*

**ನ್ಯಾಯಾಧೀಶ:** ಚಾರ್ಲ್ಸ್ ಫಿಶ್. ನೀನು ಬೆಂಕಿ ಹಚ್ಚಿದ ಪ್ರಸಂಗದಲ್ಲಿ ಅಪರಾಧಿಯೆಂದು ಸಾಬೀತಾಗಿದೆ. ಅದಕ್ಕೆ ನಿನಗೆ ಹದಿನೈದು ವರ್ಷ ಸಶ್ರಮ ಶಿಕ್ಷೆ ವಿಧಿಸಲಾಗಿದೆ.

*(ಭಿತ್ತಿ ಪತ್ರ)*

## ದೃಶ್ಯ ೯ (ಅ)

*(ಸಿಸಿರೋ. ಹೋಗುತ್ತಿದ್ದ ಟ್ರಕ್‌ನಿಂದ ಹೆಂಗಸೊಬ್ಬಳನ್ನು ತಳ್ಳಲಾಗಿದೆ)*

**ಹೆಂಗಸು:** ಬನ್ರಪ್ಪಾ! ಯಾರಾದ್ರೂ ಬನ್ರಪ್ಪಾ! ಓಡಿಹೋಗಬೇಡ್ರೊ. ನನಗೆ ಯಾರಪ್ಪ ಸಾಕ್ಷಿ. ಆ ಲಾರೀಲಿ ನನ್ನ ಗಂಡ ಇದಾನೆ. ಅವನ್ನ ಹಿಡಕೊಂಡಿದಾರೆ. ನನ್ನ ತೋಳು ಜಜ್ಜಿ ಹೋಯ್ತು. ರಕ್ತ ಸುರೀತಿದೆ. ನಾಯಿ ಬಡಿದ ಹಾಗೆ ಬಡಿದರಲ್ಲೋ. ದೇವರೇ ಯಾರೂ ಸಹಾಯ ಮಾಡೋಲ್ಲ. ಜೀವ ತಿಂತಾರಲ್ಲೋ! ಇದೆಲ್ಲ ಯಾರು ಮಾಡಿಸ್ತಿದಾರೆ ಗೊತ್ತು. ಲೋ ಊಯಿ (ಕ್ರೋಧ) ದೆಯ್ಯ ಬಡೀಲಿ ನಿನಗೆ. ಪಿಶಾಚಿ! ಹೇಲು ತಿನ್ನೋನೆ. ನಿನ್ನ ಕಂಡ್ರೆ ಹಂದಿಗೂ ಅಸಹ್ಯ. ದರಿದ್ರದವನೆ. ಹೇಗಾದ್ರೂ ಜನ ನಿನ್ನ ಸಹಿಸಿಕೊಂಡವರೋ! ನಮ್ಮನ್ನೆಲ್ಲ ನುಂಗಿ ನೀರು ಕುಡೀತೀಯೇನೋ... *(ಮಷಿನ್‌ಗನ್ ಗುಂಡು ಹಾರಿಸಿದ ಸದ್ದು. ಅವಳು ಕುಸಿಯುತ್ತಾಳೆ)* ಊಯಿನೇ ಇದೆಲ್ಲ ಮಾಡಿದ್ದು. ಎಲ್ಲಿದೀರಪ್ಪ. ಯಾರಪ್ಪ ಇವರನ್ನ ಅಂಕೇಲಿ ಇಡೋರು?

## ೯ (ಆ)

*(ಡಾಗ್ಸ್‌ಬರೋ ತೋಟದ ಮನೆ. ಮುಂಜಾನೆ. ಡಾಗ್ಸ್‌ಬರೋ ಉಯಿಲು ಹಾಗೂ ತಪ್ಪೊಪ್ಪಿಗೆ ಬರೆಯುತ್ತಿದ್ದಾನೆ.)*

**ಡಾಗ್ಸ್‌ಬರೋ:** ನಾನು, ಡಾಗ್ಸ್‌ಬರೋ, ಎಂಬತ್ತು ವರ್ಷ ಧೀರನ ಹಾಗೆ ಬದುಕಿ ಈಗ ರಕ್ತ ಹೀರುವ ಜನರ ಆಟದ ಬೊಂಬೆಯಾಗಿಬಿಟ್ಟಿದೀನಿ. ಏನೆಲ್ಲ ನಡೀತಿದೆ ಅನ್ನುವುದು ನನಗೆ ಗೊತ್ತಿಲ್ಲ; ಗೊತ್ತಾದರೆ ನಾನು ತಡಕೊಳ್ಳಲಾರೆ ಅಂತ ನನ್ನ ಸ್ನೇಹಿತರು ತಿಳಿದಿದ್ದಾರೆ. ಆದರೆ ನನಗೆ ಎಲ್ಲ ಗೊತ್ತು. ಯಾರು ಹುಕ್‌ನ ಗೋಡೌನಿಗೆ ಬೆಂಕಿ ಹಚ್ಚಿದರು ಅನ್ನೋದು ಗೊತ್ತು. ಹೋಟೆಲ್‌ಗೆ ಪಾಪದ ಫಿಶ್‌ನ ಎಳೆದು ತಂದು ಅಮಲು ಬರಿಸಿದವರು ಯಾರು ಅನ್ನೋದು ಗೊತ್ತು. ಜೇಬಲ್ಲಿ ಹಡಗಿನ ಪ್ರಯಾಣದ ಟಿಕೆಟ್ ಇಟ್ಟುಕೊಂಡು ಅನ್ಯಾಯವಾಗಿ ಶೀಟ್ ಸತ್ತಾಗ ರೋಮಾ ಅಲ್ಲೇ ಇದ್ದದ್ದು ಗೊತ್ತು. ನಾನು ಪ್ರಾಮಾಣಿಕ ಡಾಗ್ಸ್‌ಬರೋ–ನನ್ನ ಗುಟ್ಟುಗಳು ಗೊತ್ತಿದ್ದ ಬೌಲ್ ಅನ್ನು ಮುನಿಸಿಪಾಲಟಿ ಹೊರಗೆ ಕೊಂದವನು ಗಿರಿ ಅನ್ನೋದು ಗೊತ್ತು. ಅವನೇ ಹುಕ್ ಮೇಲೆ ಗುಂಡು ಹಾರಿಸಿದ ಅನ್ನೋದು ಗೊತ್ತು. ಹುಕ್‌ನ ಹ್ಯಾಟು ಅವನು ಹಾಕಿಕೊಂಡದ್ದು ನಾನೇ ನೋಡಿದೀನಿ. ಇಲ್ಲಿ ಪಟ್ಟಿ ಮಾಡಿದ ಐದು ಕೊಲೆಗಳನ್ನು ಜಿವೋಲಾ ಮಾಡಿದ್ದು ಅನ್ನೋದು ಗೊತ್ತು. ಊಯಿ ಬಗ್ಗೆ ಎಲ್ಲ ಬಲ್ಲೆ. ಶೀಟ್‌ನ ಸಾವು, ಬೌಲ್‌ನ ಮರಣ, ಜಿವೋಲಾನ ಕೊಲೆಗಳು, ಬೆಂಕಿ ಇವೆಲ್ಲದರ ಬಗ್ಗೆ ನನಗೆ ಗೊತ್ತಿರುವುದನ್ನು ಊಯಿ ಬಲ್ಲ. ಇದೆಲ್ಲವನ್ನು ತಮ್ಮ ವಿಧೇಯ ಡಾಗ್ಸ್‌ಬರೋ ತಿಳಿದಿದ್ದ. ಅತಿ ಲಾಭದ ಆಸೆಗೆ ಎಲ್ಲವನ್ನು ಸಹಿಸಿಕೊಂಡಿದ್ದ. ನಿಮ್ಮೆಲ್ಲರ ನಂಬಿಕೆಯನ್ನ ಕಳೆದುಕೊಳ್ಳುವ ಭಯದಿಂದ ಸುಮ್ಮನಿದ್ದ.

# ದೃಶ್ಯ ೧೦

*(ಹೋಟೆಲ್‌ನಲ್ಲಿ ಊಯಿ ಕೊಠಡಿ. ದೊಡ್ಡ ಕುರ್ಚಿಯಲ್ಲಿ ಊಯಿ. ಶೂನ್ಯದಲ್ಲಿ ದೃಷ್ಟಿ. ಜಿವೋಲಾ ಬರೆಯುತ್ತಿದ್ದಾನೆ. ಬೆನ್ನ ಹಿಂದೆ ಅಂಗರಕ್ಷಕರು ನಿಂತು ಬಾಗಿ ನೋಡುತ್ತಿದ್ದಾರೆ. ಮುಖದಲ್ಲಿ ನಗು)*

**ಜಿವೋಲಾ:** 'ನಾನು, ಡಾಗ್ಸ್‌ಬರೋ ನನ್ನ ಬಾರ್ ಅನ್ನು ಕಷ್ಟಪಟ್ಟು ದುಡಿಯುವ ಸಜ್ಜನ ಜಿವೋಲಾಗೆ ಕೊಡತಿದೀನಿ. ನನ್ನ ತೋಟದ ಮನೆ, ಕೊಂಚ ಮುಂಗೋಪಿಯಾದರೂ ಧೈರ್ಯಶಾಲಿಯಾದ ಗಿರಿಗೆ. ನನ್ನ ಮಗ ಪ್ರಾಮಾಣಿಕ ರೋಮಾನ ವಶಕ್ಕೆ. ಇದಲ್ಲದೆ ತಾವು ರೋಮಾನನ್ನು ಪೋಲಿಸ್ ಮುಖ್ಯಾಧಿಕಾರಿಯಾಗಿ, ಸಮಾಜ ಕಲ್ಯಾಣ ಆಯುಕ್ತನನ್ನಾಗಿ ನೇಮಿಸಲು ಸೂಚಿಸುತ್ತೇನೆ. ನನ್ನ ಜಾಗಕ್ಕೆ ಆರ್ಥುರೋ ಊಯಿ. ಆತ ಅರ್ಹ. ಅವನಿಗೆ ಸದ್ಯಕ್ಕೆ ಇಷ್ಟು ಸಾಕು. ಅಲ್ಲಿಂದ ಮುಂದುವರಿಯಬಲ್ಲ. ಈ ಊಯಿನಿಂದ ಅದ್ಭುತಗಳು ನಡೆಯುತ್ತವೆ. ಮುದುಕ ಕೊನೆಯುಸಿರು ಎಳೆಯುತ್ತಿದ್ದಾನೆ. ಅವನಿಗೆ ಗೌರವದಿಂದ ಮಣ್ಣು ಕೊಡಬೇಕು. ಶವ ಶುಚಿ ಮಾಡಬೇಕು. ಸಮಾಧಿ ಮೇಲೆ ಚಂದದ ಸಾಲು ಬರೆಸಬೇಕು. 'ಎಂದೋ ಯಾರೋ ಬಿಳೀಕಾಗೆ ಕಂಡರಂತೆ. ಆದರೆ ಕರೀಕಾಗೆ ಹಾವಳಿಯಲ್ಲಿ ಬಿಳೀಕಾಗೆ ಇದೆಯೆನ್ನುವುದನ್ನು ಮರೆತರು, ನಂಬರು. ಈ ವೃದ್ಧನೇ ಬಿಳೀಕಾಗೆ. ಇವನಿಗಿನ್ನ ಬಿಳಿಯಾದ ಕಾಗೆಗಳು ಬರಲಿ' ಅಂದಹಾಗೆ ಬಾಸ್, ಗಿರಿ ಕೊಂಚ ಅತಿ. ಅವನ ಜತೆಗೇ ಬಿದ್ದಿರತಾನೆ. ನನಗದು ಇಷ್ಟವಾಗೋಲ್ಲ.

**ಊಯಿ:** *(ದಿಟ್ಟಿಸಿ)* ಗಿರಿ? ಏನು ಗಿರಿ ಸುದ್ದಿ?

**ಜಿವೋಲಾ:** ಅವನು ಆ ಡಾಗ್ಸ್‌ಬರೋ ಕೂಡ ಯಾವಾಗ್ಲೂ ಇರತಾನೆ. ನಂಬಬೇಡಿ ಅವನನ್ನ. (ಗಿರಿ ಹೊಸ ಹ್ಯಾಟ್ ಧರಿಸಿ ಬರುತ್ತಾನೆ. ಅದು ಹುಕ್‌ದು) ನಾನೂ ನಂಬೋಲ್ಲ. ಹಾಯ್ ಗಿರಿ. ಹೇಗಿದೆ ಡಾಗ್ಸ್‌ಬರೋ ದೇಹಸ್ಥಿತಿ?

ಗಿರಿ: ಅವನನ್ನು ಮುಟ್ಟೋದಕ್ಕೂ ಬಿಡತಿಲ್ಲ ಡಾಕ್ಟರ್‌ಗೆ.

ಜಿವ್ರೋಲಾ: ಯಾರು? ಫಿಶ್ ಅನ್ನು ಅಷ್ಟು ವಿಶ್ವಾಸದಿಂದ ನೋಡಿಕೊಂಡರಲ್ಲ ಆ ಡಾಕ್ಟರಾ?

ಗಿರಿ: ಅವರಲ್ಲದೆ ಇನ್ಯಾರು? ಮುದುಕ ಅತಿ ಮಾತಾಡತಾನೆ.

ಊಯಿ: ಯಾರೋ ಅವನ ಕೂಡ ಅತಿಯಾಗಿ ಮಾತಾಡತಿರಬೇಕು...

ಗಿರಿ: ಏನದು *(ಜಿವ್ರೋಲಾಗೆ)* ಲೋ ಖದೀಮ. ನೀನೇ ಇದೆಲ್ಲ ಸಂಚು ಮಾಡಿರೋದು. ನಿನ್ನಿಂದಾಗಿಯೇ ಎಲ್ಲ ಹಳಸಿಕೊಳ್ಳತಿದೆ.

ಜಿವ್ರೋಲಾ: *(ಹುಷಾರಿಂದ)* ಕೊಂಚ ಉಯಿಲು ಓದಯ್ಯ.

ಗಿರಿ: *(ಸೆಳೆದುಕೊಂಡು)* ಹೀಗೋ? ನೋಡೋಣ. ಏನಿದು ಪೋಲೀಸ್ ಮುಖ್ಯಾಧಿಕಾರಿ! ಅವನು ರೋಮಾ! ನಿಂಗೆಲ್ಲೋ ತಲೆ ಕೆಟ್ಟಿರಬೇಕು.

ಜಿವ್ರೋಲಾ: ಅದೇ ಬೇಕಂತ ಹಠ ಅವನದ್ದು. ನಂಗೂ ಅದು ಇಷ್ಟವಿಲ್ಲ. ಆ ಸೂಳೆಮಗನ್ನ ನಂಬಿ ಬದುಕಿದವರುಂಟೇ? *(ಅಂಗರಕ್ಷಕರೊಡನೆ ರೋಮಾ ಪ್ರವೇಶ)* ಹಾಯ್, ರೋಮ, ನೋಡು ಈ ಉಯಿಲು.

ರೋಮಾ: ಏನಿದು? ಗಿರಿ ನ್ಯಾಯಾಧೀಶ! ಆ ಮುದುಕ ಗೀಚಿದ್ದು ಎಲ್ಲಿ ಹೋಯ್ತು?

ಗಿರಿ: ತಲೆದಿಂಬಿನ ಅಡಿಯಲ್ಲಿ. ಅದನ್ನು ಕಣ್ಣತಪ್ಪಿಸಿ ಹೊರಗೆ ಸಾಗಿಸಬೇಕು ಅಂತಿದ್ದಾನೆ. ಐದು ಬಾರಿ ಅವನ ಮಗನನ್ನು ನಾನೇ ಹಿಡಿದಿದೀನಿ.

ರೋಮಾ: ಹೌದಾ! ನೀನಾ? *(ಇರಿಯುವಂತೆ ಪರಸ್ಪರ ನೋಡುತ್ತಾರೆ)* ನಿನ್ನ ತಲೆಯಲ್ಲಿ ಏನಿದೆ ಅನ್ನೋದು ನನಗೆ ಗೊತ್ತು. ಅದರಲ್ಲಿ ಶೀಟ್ ಬಗ್ಗೆ ಏನೋ ಇದೆ ಅದು ನನಗೆ ಸಂಬಂಧಪಟ್ಟಿರಬೇಕು.

ಗಿರಿ: ಬೌಲ್ ಹೆಸರೂ ಇದೆ. ಅಲ್ಲಿ ನನ್ನ ಬಗ್ಗೆ ಕೂಡ ಮಾತಿದೆ.

ರೋಮಾ: ಹಾಗೋ, ನೀವಿಬ್ಬರು ಮುಸುಕಲು. ನಾನು ಗಂಡಸು. ನೀನೆಂಥವನು ಅನ್ನೋದು ನನಗೆ ಗೊತ್ತೋ ಗಿರಿ. ಜಿವ್ರೋಲಾ ನೀನೂ ಅಷ್ಟೆ. ನಿನ್ನ ಕುಂಟುಕಾಲು ಕೂಡ ಸುಳ್ಳು. ಇಲ್ಲೇ ಯಾಕೆ ಬಿದ್ದು ಸಾಯ್ತೀರೋ ಬೋಳಿಮಕ್ಕಳಾ! ಏನು ಸಂಚು ಮಾಡತಿದೀರಿ. ಆರ್ಥುರೋ ಇವರು ನನ್ನ ಮೇಲೆ ಏನೆಲ್ಲ ಬೊಂಕತಿದ್ದಾರೆ? ಹುಷಾರು ಏನಾದ್ರೂ ನನಗೆ ಕೈ ಕೊಡೋಕೆ ನೋಡಿದ್ರೆ ನಿಮ್ಮನ್ನ ಹುಟ್ಟಲಿಲ್ಲ ಅನ್ನಿಸಿಬಿಡ್ತೀನಿ.

ಗಿರಿ: ರೊಮಾ ನಾಲಿಗೆ ಬಿಗಿ ಹಿಡಿ. ನಾನೇನು ನಿನ್ನ ಅಡಿಯಾಳಲ್ಲ. ನಿನ್ನ ಕೂಲಿಯವರ ಹಾಗೆ.

ರೋಮಾ: *(ಅಂಗರಕ್ಷಕರಿಗೆ)* ಅಂದ್ರೆ ನಿಮ್ಮ ಹಾಗಲ್ಲ ಅಂತ! ಇಲ್ಲಿ ನಿಮ್ಮನ್ನ ಹೇಗೆ ನೋಡತಾರಂತ ತಿಳೀತಲ್ಲ. ಇವರೆಲ್ಲ ಟ್ರಸ್ಟ್‌ನವರ ಜೊತೆ ಶಾಮೀಲಾಗಿದ್ದಾರೆ. *(ಗಿರಿಯನ್ನು ತೋರಿಸಿ)* ಅವರ ಶರಟನ್ನ ಕ್ಲರ್ಕ್‌ನ ಟೈಲರ್ ಹೊಲೆದದ್ದು. ಆದರೆ ನೀವು ಮಾಡೋದು ಮಾತ್ರ ಕೀಳು ಕೆಲಸ. ಮತ್ತೆ ನೀವು *(ಊಯಿಗೆ)* ಇದನ್ನೆಲ್ಲ ಸಹಿಸಿಕೊಂಡಿದೀರಿ.

ಊಯಿ: *(ನಿದ್ರೆಯಿಂದ ಎದ್ದವನ ಹಾಗೆ)* ಏನು ಸಹಿಸಿಕೊಂಡಿರೋದು?

ಜಿವೋಲಾ: ಇವನು ಕಾರೂಥರ್ ಟ್ರಕ್‌ಗೆ ಗುಂಡುಹಾರಿಸಿದ್ದನ್ನ? ಕಾರೂಥರ್ ಟ್ರಸ್ಟ್‌ನವನು.

ಊಯಿ: ನೀನು ಕಾರೂಥರ್ ಟ್ರಕ್‌ಗೆ ಗುಂಡು ಹಾರಿಸಿದೆ ಏನಯ್ಯಾ!

ರೋಮಾ: ಹಾಗೆ ಮಾಡೀಂತ ಯಾರಿಗೂ ನಾನು ಹೇಳಿರಲಿಲ್ಲ. ಯಾರೋ ಹುಡುಗರು. ತಮಗೆ ತಾವೇ, ಯಾಕೆ ಯಾವಾಗ್ಲೂ ಸಣ್ಣಪುಟ್ಟ ವರ್ತಕರಿಗೇ ರಕ್ತ ಬೆವರು ಸುರಿಸಬೇಕು, ದೊಡ್ಡ ಕುಳಗಳನ್ನ ಯಾಕೆ ಹಿಡೀಬಾರದೂ ಅಂತ ಅವರು. ಅವರಿಗ್ಯಾಕೆ, ನನಗೇ ಹಾಗನ್ನಿಸುತ್ತೆ.

ಜಿವೋಲಾ: ಟ್ರಸ್ಟ್‌ನವರೇನೋ ಒಳ್ಳೆಯವರು. ಆದರೆ ಅವರಿಗೂ ಕೋಪ ಬಂದಿದೆ.

ಗಿರಿ: ಇನ್ನೊಂದು ಸಲ ಹೀಗೇನಾದರೂ ಆದರೆ, ಕ್ಲರ್ಕ್ ಹೇಳತ್ತಿದ್ದ, ಡಾಗ್ಸ್‌ಬರೋಗೆ ಅವರು ಫಿರ್ಯಾದು ಮಾಡತಿದ್ದಾರೆ.

ಊಯಿ: *(ನಿರುತ್ಸಾಹದಿಂದ)* ಅರ್ನೆಸ್ಟೋ. ಇಂಥದೆಲ್ಲ ಆಗಬಾರದು.

ಗಿರಿ: ತಲೆಮೇಲೆ ಮೊಟಕಿ ಬಾಸ್! ಹೆಚ್ಚುಕೊಂಡಿದ್ದಾರೆ, ಅಂಕೆ ತಪ್ಪತಿದ್ದಾರೆ.

ಜಿವೋಲಾ: ಟ್ರಸ್ಟ್‌ನವರೇನೋ ಒಳ್ಳೆಯವರು. ಆದರೆ ಅವರಿಗೂ ಹುಚ್ಚು ಹಿಡಿದಂತಾಗಿದೆ.

ರೋಮಾ: *(ಬಂದೂಕ ಎತ್ತಿ)* ಜಿವೋಲಾ, ಗಿರಿ ಇವರತ್ತ ಗುರಿ? ಹೌದು! ಹ್ಯಾಂಡ್ಸ್ ಅಪ್ *(ಅಂಗರಕ್ಷಕರಿಗೆ)* ನೀವು ಎಲ್ರೂ, ಕಿತಾಪತಿ ಬೇಡ! ಗೋಡೆ ಕಡೆ ಮುಖ ಮಾಡಿ ನಡೀರಿ. *(ಜಿವೋಲಾ, ಅವನ ಜನರು, ಗಿರಿ ಕೈ ಎತ್ತುತ್ತಾರೆ. ಹತಾಶೆಯಿಂದ ಗೋಡೆ ಕಡೆಗೆ)*

ಊಯಿ: *(ನಿರ್ಲಕ್ಷ್ಯದಿಂದ)* ಏನಿದೆಲ್ಲ ಅರ್ನೆಸ್ಟೋ?ಹೆದರಿಸಬೇಡ ಅವರನ್ನ.

ಏನದು ನಿಮ್ಮ ಜಗಳ? ಯಾವುದೋ ಟ್ರಕ್ ಮೇಲೆ ಯಾರೋ ಒಂದು ಗುಂಡು ಹಾರಿಸಿದರು. ಅದರಿಂದ ಏನಾದ್ರೂ ಮನಸ್ತಾಪ ಆಗಿದ್ರೆ ಅದನ್ನೆಲ್ಲ ಸರಿಪಡಿಸೋಣ. ಎಲ್ಲ ಸಲೀಸಾಗಿ ನಡಕೊಂಡು ಹೋಗತಿದೆ. ಬೆಂಕಿ ಹಚ್ಚಿದ್ದು ಒಂದು ದೊಡ್ಡ ಗೆಲುವು. ಅಂಗಡಿಗಳಿಂದ ರಕ್ಷಣೆಗೆ ಹಣ ಬರತಿದೆ. ಸಂಪಾದಿಸಿದ ಪ್ರತಿ ಡಾಲರಿಗೆ ಮೂವತ್ತು ಸೆಂಟು. ಐದು ದಿನದಲ್ಲಿ ಅರ್ಧ ನಗರ ಮುಷ್ಟಿಯೊಳಗೆ ಬಂದಿದೆ. ಯಾರೂ ನಮ್ಮೆದುರು ಬೆರಳು ಮಾಡತಾ ಇಲ್ಲ. ಇನ್ನೂ ಏನೇನೋ ಸಾಧಿಸಬೇಕಾಗಿದೆ.

ಜಿವೋಲಾ: *(ಬೇಗ)* ಏನದು? ಏನು ಮಾಡಬೇಕಂತಿದೀರಿ.

ಗಿರಿ: ನಿನ್ನ ತಲೆ, ಮಾಡೋದರ ಮನೆಹಾಳಾಗ! ಈ ಹೆಡ್ಡನ್ನ ತಡೀರಿ, ಕೈ ಇಳಸಬೇಕು.

ರೋಮಾ: ಮೊದಲು ರಕ್ಷಣೆ ಆರ್ಥುರೋ. ನಾವಿವರನ್ನೆಲ್ಲಾ ಆಚೆಗೆ ಹಾಕಿ ಬಿಡೋಣ.

ಜಿವೋಲಾ: ಈಗೇನಾದ್ರೂ ಕ್ಲರ್ಕ್ ಬಂದು ನಮ್ಮನ್ನ ಈ ಸ್ಥಿತೀಲಿ ನೋಡಿದ್ರೆ ಸಖತ್ತಾಗಿರುತ್ತೆ.

ಊಯಿ: ಅರ್ನೆಸ್ಟೋ. ಬಂದೂಕ ಇಳಿಸು.

ರೋಮಾ: ಅದೆಲ್ಲ ಆಗೋಲ್ಲ. ಕಣ್ಣು ಬಿಟ್ಟು ನೋಡು ಆರ್ಥುರೋ. ಇವರ ಚಾಲಾಕು ನಿನಗೆ ತಿಳಿಯೋಲ್ಲ. ಕ್ಲರ್ಕ್, ಡಾಗ್ಸ್‌ಬರೊ ಅಂಥವರಿಗೆ ನಿನ್ನ ಹರಾಜ ಹಾಕತಿದ್ದಾರೆ. 'ಕ್ಲರ್ಕ್ ಈಗ ಬಂದು ನಮ್ಮನ್ನ ಹೀಗೆ ನೋಡಿದ್ರೆ'. ಏನೀಗ. ಬರಲಿ ಹಡಗುಕಟ್ಟೆ ಹಣ ಏನಾಯ್ತು ಅಂತಾ ಕೇಳತೀನಿ. ಅದರಲ್ಲಿ ಒಂದು ಕುರುಡು ಕಾಸನ್ನೂ ನಾವು ಕಂಡಿಲ್ಲ. ನಮ್ಮ ಹುಡುಗರು ಅಂಗಡಿಗಳಿಗೆ ಕಲ್ಲು ಹೊಡದು, ಗೋಡೌನುಗಳಿಗೆ ಪೆಟ್ರೋಲು ಸುರಿದು ದುಡಿತಿದ್ದಾರೆ. ಇವತ್ತು ಆರ್ಥುರೋ ಏನಾಗಿದಾರೆ. ಅದಕ್ಕೆ ನಾವು ದುಡಿದದ್ದೇ ಕಾರಣ. ಆದರೆ ಅವರಿಗೆ ಈಗ ನಾವ್ಯಾರೂ ಬೇಕಾಗಿಲ್ಲ. ಹಡಗು ಕಟ್ಟೆ ಮಾಲೀಕ, ಭಾರೀ ವರ್ತಕ ಸ್ವಲ್ಪ ಕಣ್ಣು ಬಿಟ್ಟು ನೋಡಿ ಆರ್ಥುರೋ!

ಗಿರಿ: ಆಯ್ತು ಮಾತಾಡಿ. ನೀವು ಯಾರ ಪಕ್ಷ?

ಊಯಿ: *(ನಿಂತು)* ನೀವೆಲ್ಲ ಬಂದೂಕ ಹಿಡಿದು ನನ್ನ ಬೆದರಿಸತಾ ಇದೀರಾ? ಅದೆಲ್ಲ ನಡೆಯೊಲ್ಲ. ಎಚ್ಚರಿಕೆ. ನನ್ನ ಹತ್ರ ಈ ಆಟ ನಡಿಯೋದಿಲ್ಲ. ಏನಾದ್ರೂ ಅಪಾಯ ಆದ್ರೆ ಅದಕ್ಕೆ ನೀವೇ ಕಾರಣ. ನಾನೊಬ್ಬ

ಸಾಧು ಮನುಷ್ಯ. ಆದ್ರೆ ನನ್ನ ಬೆದರಸಲಿಕ್ಕೆ ಆಗೋದಿಲ್ಲ. ನಂಬೋದಾದ್ರೆ ಸುಮ್ಮನೆ ನನ್ನ ನಂಬಿ. ಇಲ್ಲ ತೆಪ್ಪಗೆ ಕಡೆದು ನಡೀರಿ. ನಾನು ಯಾರಿಗೂ ಲೆಕ್ಕಕೊಡಬೇಕಾಗಿಲ್ಲ: ನಿಮ್ಮ ಕೆಲಸ ನೀವು ಮಾಡಿಕೊಂಡು ಹೋಗಿ. ಅಬರಲ್ಲಿ ಹಿಂದೆಮುಂದೆ ನೋಡಕೂಡದು. ಮೊದಲು ದುಡಿಮೆ, ಆಮೇಲೆ ಸಂಪಾದನೆ. ನಿಮ್ಮಿಂದ ನನಗೆ ಬೇಕಾಗಿರೋದು ನಂಬಿಕೆ. ನಿಮ್ಮಲ್ಲಿ ಅದೇ ಇಲ್ಲ. ಅದಿಲ್ಲದೇ ಹೋದರೆ ಎಲ್ಲಿ ಹೋದ ಹಾಗೆ. ನಾನು ಇದುವರೆಗೆ ಏಳಿಗೆಗೆ ಬಂದದ್ದು ಹೇಗೆ? ನಂಬಿಕೆ! ಏನು ಮಾಡತೀನೋ ಅದರಲ್ಲಿ ಕೊಂಕಿಲ್ಲದ ವಿಶ್ವಾಸ. ಬರೀ ನಂಬಿಕೆಯನ್ನು ಆಧಾರ ಮಾಡಿಕೊಂಡು ಈ ನಗರಕ್ಕೆ ಸಡ್ಡು ಹೊಡೆದು ನಿಂತೆ. ಅದು ಕಾಲೂರಿ ನನ್ನ ಮುಂದೆ ಕುಳಿತಿದೆ. ನಂಬಿಕೆ ಹಿಡಿದೇ ಡಾಗ್ಸ್‌ಬರೋನ ವಶಮಾಡಿಕೊಂಡೆ. ಆ ನಂಬಿಕೆಯಿಂದಾನೇ ಮುನಿಸಿಪಾಲಟಿ ಮೆಟ್ಟಲು ಏರಿದೆ. ಈ ಬರಿಗೈಯಿಂದಲ್ಲ ತಿಳಿರಿ.

**ರೋಮಾ:** ಜತೆಗೊಂದು ಬಂದೂಕ!

**ಊಯಿ:** ಇಲ್ಲ! ಬಂದೂಕ ಹಿಡಿದ ಎಷ್ಟೋ ಜನ ಏನ ಮಾಡತಿರತಾರೋ ಅದರಲ್ಲಿ, ನಾಳೆ ತಾವು ನಾಯಕರಾಗತೀವಿ ಅನ್ನೋದರಲ್ಲಿ ನಂಬಿಕೆ ಇರೋದಿಲ್ಲ. ಅದಕ್ಕೇ ಹೇಳೋದು. ನನ್ನಲ್ಲಿ ನಂಬಿಕೆ ಇಡಿ! ನಂಬಿಕೆ! ಜನಕ್ಕೆ ಏನು ಒಳ್ಳೇದಂಬೋದು ನನಗೆ ಗೊತ್ತು. ಅದು ನಿಮಗೆಲ್ಲ ಸಿಗಬೇಕು. ಅದೇ ನನ್ನ ಛಲ. ಗೆಲ್ತಾ ಹೋಗತೀನಿ ತುದಿಗೆ. ಡಾಗ್ಸ್‌ಬರೋ ತೀರಿಕೊಂಡಾಗ ಯಾರಿಗೆ ಏನು ಸಿಗಬೇಕೋ ಅದನ್ನ ನಾನು ಕೊಡತೀನಿ. ಈಗ ಆ ಮಾತು ಬೇಡ. ತಿಳ್ಕೊಳ್ಳಿ ನೀವು ಗೊಣಗಬೇಕಾಗಿಲ್ಲ. ಹಾಗೆ ತೀರ್ಮಾನ ಮಾಡತೀನಿ.

**ಜಿವೋಲಾ:** *(ಎದೆಯ ಮೇಲೆ ಕೈ ಇರಿಸಿ)* ಆರ್ಥುರೋ!

**ರೋಮಾ:** *(ಬೇಸರದಿಂದ)* ಹಾಳಾಗಿ ಹೋಗಿ. *(ಗಿರಿ, ಜಿವೋಲಾ, ಅವನ ಅಂಗರಕ್ಷಕರು ನಿಧಾನವಾಗಿ ಹೊರಗೆ ಹೋಗುತ್ತಾರೆ. ಕೈ ಮೇಲೆತ್ತಿದ್ದಾರೆ.)*

**ಗಿರಿ:** *(ಹೊರಡುತ್ತ, ರೋಮಾನಿಗೆ)* ನಿನ್ನ ಹ್ಯಾಟು ಸೊಗಸಾಗಿದೆ.

**ಜಿವೋಲಾ:** *(ಹೋಗುತ್ತ)* ಅಯ್ಯಾ ರೋಮಾ....

**ರೋಮಾ:** ನಡೀರೋ ಆಚೆಗೆ! ಲೋ ನಕಲಿ ಸ್ವಾಮಿ ಗಿರಿ, ಹಲ್ಲು ಕಿರೀತಾ ಹೋಗಬೇಡ. ಜಿವೋಲಾ ಖದೀಮ. ನಿನ್ನ ಸೊಟ್ಟ ಕಾಲು

ಎಳಕೊಂಡು ನಡಿ *(ಎಲ್ಲರೂ ಹೋದಮೇಲೆ, ಊಯಿ ಮತ್ತೆ ಹಿಂದಿನಂತೆ ಕುಸಿದು ಕೂರುತ್ತಾನೆ.)*

ಊಯಿ: ಈಗ ನಾನು ಒಬ್ಬನೇ ಇರಬೇಕು.

ರೋಮಾ: (ಅಲ್ಲಾಡದೆ ನಿಂತು) ಆರ್ಥುರೋ, ನೀನು ಈಗ ಹೇಳಿದೆಯಲ್ಲ, ಆ ನಂಬಿಕೆ, ಅದಿಲ್ಲದೆ ಇದ್ದಿದ್ದರೆ, ನನಗೆ ಎಷ್ಟೋ ಬಾರಿ ಹುಡುಗರ ಮುಖ ನೋಡೋಕೆ ಕೂಡ ಆಗೋಲ್ಲ. ನೀವೀಗ ಬೇಗ ಕೆಲಸ ಶುರು ಮಾಡಬೇಕು. ಗಿರಿ ಏನೋ ಸಂಚು ಹೂಡತಿದ್ದಾನೆ.

ಊಯಿ: ಗಿರಿ ಬಗ್ಗೆ ತಲೆ ಕೆಡಿಸ್ಕೋಬೇಡ. ನಾನು ಭಾರಿ ದೊಡ್ಡದಕ್ಕೆ ಗುರಿ ಇಟ್ಟಿದೀನಿ. ನೀನು ನನ್ನ ಹಳೆ ನಂಬಿಕಸ್ಥ, ಬಲಗೈ ಥರಾ. ನಿನಗೆ ಮಾತ್ರ ಅದೆಲ್ಲ ತಿಳಿಸ್ತಿದೀನಿ.

ರೊಮಾ: (ನಗುತ್ತ) ಹೇಳಿ ಹಾಗಾದ್ರೆ. ಆ ಗಿರಿ, ಅವನ ಸಂಚು ಆಮೇಲೆ ಹೇಳತೀನಿ. *(ಊಯಿ ಪಕ್ಕದಲ್ಲಿ ಕೂರುತ್ತಾನೆ. ರೋಮಾನ ಜನರು ಮೂಲೆಯಲ್ಲಿ ಕಾಯುತ್ತಿದ್ದಾರೆ.)*

ಊಯಿ: ಶಿಕಾಗೋ ಕಥೆ ಮುಗೀತು. ನಾವು ಅದನ್ನ ಮೀರಿ ಬೆಳೀಬೇಕು.

ರೋಮಾ: ಇನ್ನೂ?

ಊಯಿ: ಬೇರೆ ನಗರಗಳಲ್ಲೂ ತರಕಾರಿ ಮಾರತಾರೆ.

ರೋಮಾ: ಅಲ್ಲಿಗೆ ನಾವು ತಲೆ ಹೇಗೆ ಹಾಕೋದು?

ಊಯಿ: ಮುಂದಿನ ಬಾಗಿಲಿಂದ. ಹಿಂದಿನ ಬಾಗಲಿಂದ. ಕಿಟಕಿಗಳಿಂದ. ಬರಬೇಡಿ ಅಂತ ಆಚೆ ನೂಕಿದವರೂ ಕಾಲು ಹಿಡಕೊಂಡು ಬರಬೇಕು. ಬೈಯೋವರೇ ಹೊಗಳಬೇಕು. ಬೆದರಿಕೆ. ಒತ್ತಾಯ. ಬೇಡಿಕೆ, ಬೈಗುಳ, ಸ್ವಲ್ಪ ದಂಡನೆ. ಒಟ್ಟಾರೆ ಇಲ್ಲಿನ ಹಾಗೇನೇ.

ರೋಮಾ: ಆದ್ರೆ ಎಲ್ಲ ಕಡೇಗೂ ಇಲ್ಲಿದ್ದ ಪರಿಸ್ಥಿತೀನೇ ಇರೋಲ್ಲ.

ಊಯಿ: ಅದಕ್ಕೆ ಚಿಕ್ಕಚಿಕ್ಕ ಊರುಗಳನ್ನ ಹಿಡಿಯೋಣ. ಅಭ್ಯಾಸವಾಗುತ್ತೆ. ಬೇರೆ ಬೇರೆ ಕಡೆ ಪರಿಸ್ಥಿತಿ ಬೇರೇನೋ ಅಲ್ಲವೋ ತಿಳಿಯುತ್ತೆ. ಅಷ್ಟೇನೂ ವ್ಯತ್ಯಾಸ ಇರೋದಿಲ್ಲ.

ರೋಮಾ: ಈಗ ಯಾವ ಊರಿಂದ ಅಭ್ಯಾಸ ಶುರು ಮಾಡೋಣ?

ಊಯಿ: ಸಿಸಿರೋ.

ರೋಮಾ: ಆದರೆ ಆ ಊರಿಂದ ಹೊರಡುವ ಪತ್ರಿಕೆ, ತರಕಾರಿ ವ್ಯವಹಾರದ ಬಗ್ಗೆ ಇರುತ್ತಲ್ಲ, ಅದು ಪ್ರತಿ ಶನಿವಾರದ ಸಂಚಿಕೇಲಿ, ಶೀಟನ್ನ ಕೊಂದವನು ನಾನೇ ಅಂತ ಪ್ರಿಂಟ್ ಮಾಡ್ತಿದೆ.

ಊಯಿ: ಅದನ್ನ ತಡೀಬೇಕು.

ರೋಮಾ: ಅದು ಸಾಧ್ಯ. ವರದಿಗಾರರಿಗೆ ಶತ್ರುಗಳಿರತಾರೆ, ಅವರು ಬರೆದದ್ದನ್ನ ಓದಿ ಕೆರಳಿ ಕೆಂಡವಾದವರು, ನಾನೇ ಇದೀನಲ್ಲ. ಹೌದು, ಈ ಆರೋಪಗಳನ್ನು ನಿಲ್ಲಿಸಬೇಕು.

ಊಯಿ: ಮಾಡೋಣ. ಈ ಟ್ರಸ್ಟ್ ಈಗ ಸಿಸಿರೋ ಜತೆ ವ್ಯವಹಾರ ನಡೆಸ್ತಿದೆ. ಸದ್ಯಕ್ಕೆ ನಾವು ಸದ್ದಿಲ್ಲದೆ ಕಾಲಿಫ್ಲವರ್ ಮಾರತಿರೋಣ.

ರೋಮಾ: ಯಾರು ವ್ಯವಹಾರ ನಡೆಸತಿರೋದು?

ಊಯಿ: ಕ್ಲರ್ಕ್, ನಿನ್ನಿಂದಾಗಿ ಅವನಿಗೆ ಸ್ವಲ್ಪ ತೊಂದರೆಯಾಗಿದೆ.

ರೋಮಾ: ಹೀಗೋ ಕ್ಲರ್ಕ್ ಇದಾನೋ? ನನಗೇನೋ ಅವನ ಬಗ್ಗೆ ನಂಬಿಕೆ ಇಲ್ಲ.

ಊಯಿ: ಈ ಟ್ರಸ್ಟ್‌ನ್ನ ನಾವು ನೆರಳಿನ ಹಾಗೆ ಹಿಂಬಾಲಿಸ್ತಿದೀವಿ ಅಂತಾ ಸಿಸಿರೋದಲ್ಲಿ ಹೇಳತಿದ್ದಾರೆ. ಅವರಿಗೆ ಬರೀ ತರಕಾರಿ ಬೇಕು. ನಾವು ಬೇಕಾಗಿಲ್ಲ. ಅಂಗಡಿಯವರಿಗೆ ನಮ್ಮನ್ನ ಕಂಡರೆ ಆಗೋದಿಲ್ಲ. ಉಳಿದವರಿಗೂ ಹಾಗೇ. ಆ ಪತ್ರಿಕೆ ಸಂಪಾದಕನ ಹೆಂಡತಿ ಎಷ್ಟೋ ವರ್ಷದಿಂದ ತರಕಾರಿ ಸಗಟು ವ್ಯಾಪಾರದ ಮಂಡಿ ನಡೆಸ್ತಿದಾಳೆ. ಅವರಿಗೂ ನಮ್ಮನ್ನ ಕಂಡರಾಗೋಲ್ಲ. ಟ್ರಸ್ಟ್ ಸೇರುವ ಆಸೆ ಇದೆ. ನಾವಿಲ್ಲದೆ ಹೋಗಿದ್ರೆ ಸೇರಿಬಿಡತಿದ್ದಳೋ ಏನೋ!

ರೋಮಾ: ಹಾಗಾದರೆ ಸಿಸಿರೋ ಜತೆ ಮಾತುಕತೆ ಶುರು ಮಾಡಿದ್ದು ನೀವಲ್ಲ, ಟ್ರಸ್ಟ್, ನನಗೀಗ ಅವರ ವ್ಯವಹಾರದ ಕೊಳಕು ಗೊತ್ತಾಗತಿದೆ.

ಊಯಿ: ಯಾರ ವ್ಯವಹಾರ?

ರೋಮಾ: ಟ್ರಸ್ಟ್‌ನದು. ಡಾಗ್ಸ್‌ಬರೋ ಮನೇಲಿ ನಡಿತಿರೋದು! ಅವನ ಉಯಿಲು. ಇವೆಲ್ಲ ಆ ಟ್ರಸ್ಟ್‌ನವರ ಹೂಟ. ಅವರೆಲ್ಲ ಸಿಸಿರೋ ಜತೆ ಸಂಬಂಧ ಬೆಳಸಬೇಕಂತಿದಾರೆ. ನೀನು ಅಡ್ಡ ಇದೀಯ. ನಿನ್ನನ್ನ ದೂರ ಇಡತಾರೆ. ಆದರೆ ಅವರ ಜುಟ್ಟು ನಿನ್ನ ಕೈಲಿದೆ. ಅವರ ಕೊಳಕು ವ್ಯವಹಾರಕ್ಕೆ ನೀನು ಬೇಕು. ನಿನ್ನ ಬೆಂಬಲಬೇಕು. ನಿನ್ನನ್ನ ಹೊರಗಿಡೋಕೆ ಸಂಚು ಹೂಡಿದಾರೆ. ಡಾಗ್ಸ್‌ಬರೋ

ತಪ್ಪೊಪ್ಪಿಕೊಳ್ತಾನೆ. ಆಮೇಲೆ ಸಾಯ್ತಾನೆ. ಈ ತರಕಾರಿ ಮಾರೋರು ಎದೆ ಕರಗೋ ಹಾಗೆ ಗೋಳಾಡತಾ ಅವನ ಈ ಕಾಗದವನ್ನ ಪೇಪರಿನವರ ಎದುರಿಗೆ ಓದುತ್ತಾರೆ. ಏನಿರುತ್ತೆ ಅದರಲ್ಲಿ. 'ಏನು ತಪ್ಪು ಮಾಡಿದೆ. ಯಾರಿಗೆ ಮೋಸದಿಂದ ಸಹಾಯಮಾಡಿದೆ, ಅದರಿಂದ ಏನೆಲ್ಲ ಕೇಡುಗಾಲ ಬಂತು' ಅಂತ ಇರುತ್ತೆ. ಅಲ್ಲದೆ ಅವರೆಲ್ಲ ಸೇರಿ, ಕೇಡಿಗನನ್ನ ಹೊರಗಿಡಬೇಕೂಂತ ಹೇಳಿರತಾನೆ. ಆಗ ಮತ್ತೆ 'ತರಕಾರಿ ವ್ಯಾಪಾರ ಸಾಫ್‌ಸೀದಾ ಆಗುತ್ತೆ. ಕಾಲದಿಂದ ನಡಕೊಂಡು ಬಂದಹಾಗೆ ಮತ್ತೆ ನಡೆಸಬಹುದು' ಅಂದಿರ್ತಾನೆ. ಇದೆ ಅವರ ಪ್ಲಾನು. ಎಲ್ಲ ಒಟ್ಟಾಗಿದಾರೆ. ಡಾಗ್ಸ್‌ಬರೋ ಉಯಿಲು ಗೀಚೋಕೆ ನೆರವಾಗೋನೇ ಗಿರಿ. ಅವನು ಕ್ಲರ್ಕ್ ಜತೆಗೂ ಶಾಮೀಲಾಗಿದಾನೆ. ಸಲೀಸಾಗಿಲ್ಲ. ಅವನಿಗೆ ತನ್ನ ಕೊಳಕು ಕೈಯನ್ನು ತೊಳಕೊಂಡು ಶುದ್ಧವಾಗಬೇಕಾಗಿದೆ. ಆ ಕೊಳಕ ಜಿವೋಲಾ, ನಿನ್ನ ಬಗ್ಗೆ ಅಬದ್ಧ ಹರಡತಿರೋ ಉಯಿಲು ಬರೆದಿರೋ ಆ ಡಾಗ್ಸ್‌ಬರೋ–ಇವರಿಬ್ಬರ ಕಥೆ ಕೂಡ ಮುಗಿಸಬೇಕು. ಇಲ್ಲದಿದ್ದರೆ ನಿನ್ನ ಸಿಸಿರೋ ಆಸೆ ಮಣ್ಣು ಪಾಲಾಗುತ್ತೆ.

ಊಯಿ: ಹಾಗೊಂದು ಸಂಚು ಮಾಡಿದಾರಂತೀಯಾ? ನಿಜ. ನನ್ನನ್ನ ಸಿಸಿರೋದಿಂದ ದೂರ ಇಟ್ಟಿದ್ದಾರೆ. ನನಗದು ಗೊತ್ತು.

ರೋಮಾ: ನನ್ನ ಮಾತು ಕೇಳಿ. ನಾನಿದನ್ನು ನೋಡಿಕೊಳ್ತೇನೆ. ನಾನು ನಮ್ಮ ಹುಡುಗರು ಇವತ್ತು ರಾತ್ರಿ ಡಾಗ್ಸ್‌ಬರೋ ಮನೆಗೆ ನುಗ್ಗಿ ಅವನನ್ನ ಹೊತ್ತು ತರತೀನಿ. ಅಲ್ಲಿಂದ ಆಸ್ಪತ್ರೆಗೆ ತರೋಣ. ಮೊದಲು ಅವನಿಗೆ ಹೇಳಿ. ಆಮೇಲೆ ಹೆಣದ ಮನೆಗೆ.

ಊಯಿ: ಅವನ ಮನೇಲಿ ಗಿರಿ ಇದಾನಲ್ಲ.

ರೋಮಾ: ಅವನು ಅಲ್ಲೇ ಇರಲಿ *(ಪರಸ್ಪರ ನೋಡಿ)* ಒಂದೇ ಏಟಿಗೆ ಎರಡು ಹಕ್ಕಿ.

ಊಯಿ: ಜಿವೋಲಾ?

ರೋಮಾ: ಬರುವಾಗ ಹೂ ಅಂಗಡಿಗೆ ಹೋಗಿ ಡಾಗ್ಸ್‌ಬರೋಗೆ ಚೆನ್ನಾಗಿರೋ ರೀತ್‌ಗೆ ಆರ್ಡರ್ ಮಾಡತೀನಿ. ಹಾಗೇ ಆ ನಕಲಿ ಶ್ಯಾಮ ಗಿರಿಗೂ. ಬರುವಾಗ ಜಿವೋಲಾಗೆ ದುಡ್ಡು ಕೊಡತೀನಿ *(ಬಂದೂಕು ಸವರುತ್ತಾನೆ.)*

ಊಯಿ: ಅರ್ನೆಸ್ಟೋ. ಈ ಡಾಗ್ಸ್‌ಬರೋಗಳು, ಕ್ಲರ್ಕ್‌ಗಳು, ಪತ್ರಿಕೆಯವರು ಎಲ್ಲ ಸೇರಿ ನನ್ನ ಕೇಡಿ ಪಟ್ಟಿಗೆ ಸೇರಿಸಿ ಸಿಸಿರೋದಿಂದ ದೂರ ಇಡೋಕೆ ಮಾಡಿರೋ ಸಂಚಿನ ಬುಡವನ್ನು ಕತ್ತರಿಸಬೇಕು. ಹಿಂಜರಿಕೆ ಬೇಡ. ನಿನ್ನಲ್ಲಿ ನನಗೆ ನಂಬಿಕೆ ಇದೆ.

ರೋಮಾ: ಖಂಡಿತಾ. ಹುಡುಗ್ರು, ನಾನು, ಎಲ್ಲ ಹೊರಡೋಕೆ ಮುಂಚೆ ನೀನು ಬಂದು ಅವರಿಗೆ ವಿಷಯ ಹೀಗೆ ಹೀಗೆ ಅಂತ ಬಿಡಿಸಿ ಹೇಳಬೇಕು. ನನಗೆ ಮಾತಾಡೋಕೆ ಬರೋದಿಲ್ಲ.

ಊಯಿ: *(ತಲೆ ಆಡಿಸಿ)* ಆಯ್ತು.

ರೋಮಾ: ನಾನು ಹೀಗೆ ಆಗುತ್ತೆ ಅಂದುಕೊಂಡಿದ್ದೆ. ನಾವಿಬ್ರೂ ಹಳೆ ಗೆಳೆಯರು *(ತನ್ನ ಜನರಿಗೆ)* ಏನು ಹೇಳಿದ್ದೆ ನಿಮಗೆ? ನಾವು ಮಾಡಿದ್ದು ಸರಿ ಅಂದಿದಾರೆ.

ಊಯಿ: ನಾನಲ್ಲಿಗೆ ಬರತೀನಿ.

ರೋಮಾ: ಹನ್ನೊಂದಕ್ಕೆ.

ಊಯಿ: ಎಲ್ಲಿ?

ರೋಮಾ: ಗ್ಯಾರೇಜ್ ಬಳಿ. ನಾನೀಗ ಹೊಸಬ. ಕೊನೆಗೂ ಒಂದು ನಿಜವಾದ ಕದನ ನೋಡಬಹುದು. *(ಅವನು ತನ್ನವರ ಜತೆ ಹೊರಡುತ್ತಾನೆ. ಊಯಿ ರೋಮಾನ ಜನರ ಎದುರು ಮಾಡಬೇಕಾದ ಭಾಷಣ ಉರು ಹಚ್ಚುತ್ತಿದ್ದಾನೆ.)*

ಊಯಿ: ಸ್ನೇಹಿತರೆ, ಈ ಮಾತು ಹೇಳೋಕೆ ದುಃಖವಾಗತಿದೆ. ನನ್ನ ಬೆನ್ನ ಹಿಂದೆ ಒಂದು ಸಂಚು ಮಾಡತಿರೋ ಸುದ್ದಿ ನನ್ನ ಕಿವಿಗೆ ಬಿದ್ದಿದೆ. ನನಗೆ ಹತ್ತಿರದವರು, ನಾವು ಜೀವಕ್ಕಿಂತ ಹೆಚ್ಚಾಗಿ ನಂಬಿದವರು ನನ್ನ ವಿರುದ್ಧ ತಿರುಗಿ ಬಿದ್ದಿದ್ದಾರೆ. ಆಸೆಬುರುಕರಾಗಿ, ಕಾಸಿಗೆ ಹೊಳಪಿಗೆ ಮರುಳಾಗಿ ಈ ಪಿಶಾಚಿಗಳು ತರಕಾರಿಯವರ ಜತೆ, ಅಲ್ಲ ಅವರ ಜತೆ ಅಲ್ಲ, ಯಾರ ಜತೆ? ಹಾಂ! ಪೋಲೀಸಿನವರ ಜತೆ ಸಂಚು ಮಾಡಿದಾರೆ, ನನ್ನ ಮುಗಿಸೋಕೆ. ಹೌದು, ಹಾಗಂತ ಕೇಳಿದೀನಿ. ನನ್ನನ್ನ! ತಾಳ್ಮೆಗೂ ಒಂದು ಮಿತಿ ಇದೆ. ಹಾಗಾಗಿ ನೀವು ಅರ್ನೆಸ್ಟೋ ರೋಮಾ ನನ್ನ ನಂಬಿಕಸ್ಥ, ಹೇಳಿದ ಹಾಗೆ ಇವತ್ತು ರಾತ್ರಿ.....*(ಕ್ಲರ್ಕ್, ಗಿರಿ, ಬೆಟ್ಟಿ ಡಲ್‌ಫೀಟ್ ಬರುತ್ತಾರೆ.)*

ಗಿರಿ: *(ಊಯಿ ಗಾಬರಿಯಾದುದನ್ನು ಕಂಡು)* ನಾವು ಬಾಸ್.

ಕ್ಲರ್ಕ್: ಊಯಿ. ಇವರು ಸಿಸಿರೋದಿಂದ ಬಂದಿದ್ದಾರೆ. ಮಿಸೆಸ್

ಡಲ್‌ಫೀಟ್. ಟ್ರಸ್ಟಿನವರು ನೀವು ಇವರ ಬಗ್ಗೆ ಗಮನ ಇಡಬೇಕಂತ ಹೇಳಿದಾರೆ. ನೀವಿಬ್ಬರೂ ಒಂದು ಒಪ್ಪಂದಕ್ಕೆ ಬರಬಹುದೂಂತ ತೋರುತ್ತೆ.

ಊಯಿ: *(ಮುಖ ಹಿಂಡಿ)* ಹೇಳು. ಕೇಳತಿದೀನಿ.

ಕ್ಲರ್ಕ್: ಶಿಕಾಗೋನ ತರಕಾರಿ ಟ್ರಸ್ಟಿನವರು ಸಿಸಿರೋದ ಸರಬರಾಜುದಾರರು ಒಂದಾಗಬೇಕಂತ ಮಾಡಿದಾರೆ. ಮಾತುಕತೆ ನಡೆದಾಗ ನೀವು ಇರಕೂಡದು ಅಂತ ಸಿಸಿರೋ ಅವರ ಕರಾರು. ನಾವು ಟ್ರಸ್ಟಿನವರು ಸಾಕಷ್ಟು ಕಷ್ಟಪಟ್ಟು ನಿನ್ನ ಬಗ್ಗೆ ಅವರ ವಿರೋಧ ಕಡಿಮೆ ಮಾಡಿದೀನಿ, ಅದರಿಂದ ಮಿಸೆಸ್ ಡಲ್‌ಫೀಟ್ ಇಲ್ಲಿಗೆ....

ಬೆಟ್ಟಿ: ಬಂದಿರೋದು ತಪ್ಪು ಅಭಿಪ್ರಾಯ ಕಡಿಮೆ ಮಾಡೋಕೆ. ಅಲ್ಲದೆ ನನ್ನ ಪತಿಯ ಪತ್ರಿಕೆಯಲ್ಲಿ ನಡೆದಿರುವ ಪ್ರಚಾರಕ್ಕೆ ನೀವು ಖಂಡಿತ ಗುರಿಯಲ್ಲ ಅನ್ನೋದನ್ನ ತಿಳಿಸೋಕೆ.

ಊಯಿ: ಹಾಗಾದರೆ ಯಾರ ವಿರುದ್ಧ?

ಕ್ಲರ್ಕ್: ನೇರವಾಗಿ ಕೇಳತೀನಿ, ಊಯಿ, ಶೀಟ್ 'ಆತ್ಮಹತ್ಯೆ' ಮಾಡಿಕೊಂಡದ್ದು ಸಿಸಿರೋನಲ್ಲಿ ಒಳ್ಳೆ ಪರಿಣಾಮ ಬೀರಿತು. ಅವನು ಎಂಥವನೇ ಆಗಿರಲಿ ಶೀಟ್ ಹಡಗುಕಟ್ಟೆ ಮಾಲೀಕ ಆಗಿದ್ದ, ನಾಗರಿಕ ಮುಂದಾಳು. ಯಾರೋ ಅಬ್ಬೇಪಾರಿ ಆಗಿದ್ರೆ ಯಾರೂ ತಲೆ ಕೆಡಿಸಿಕೊಳ್ಳತಿರಲಿಲ್ಲ. ಅದೂ ಅಲ್ಲದೆ ಕಾರೂಥರ್ ಗರಾಜಿನ ಲಾರಿ ಮೇಲೆ ಯಾರೋ ದಾಳಿ ಮಾಡಿದಾರಂತೆ ಯಾರೋ ನಿಮ್ಮ ಕಡೆಯವರಂತೆ, ಇವೆರಡೂ ಕೆಲಸ ಮಾಡಿರೋದು.

ಬೆಟ್ಟಿ: ಸಿಸಿರೋದ ಒಂದೊಂದು ಮಗೂಗೂ ಗೊತ್ತು. ಶಿಕಾಗೋದ ಕಾಲಿಫ್ಲವರ್ ರಕ್ತದಲ್ಲಿ ಅದ್ದಿ ಕೆಂಪಾಗಿದೆ ಅಂತ.

ಊಯಿ: ನೀವು ನನ್ ಬೈಯೋಕೆ ಬಂದಿದೀರಾ?

ಬೆಟ್ಟಿ: ಇಲ್ಲ, ಇಲ್ಲ ನಿಮ್ಮನ್ನಲ್ಲ. ನೀವೆಂಥವರೂಂತ ಕ್ಲರ್ಕ್ ಹೇಳಿದ್ದಾರೆ. ನಿಮ್ಮ ಭಂಟ ರೋಮಾನ ಬಗ್ಗೆ.

ಕ್ಲರ್ಕ್: *(ಬೇಗ)* ಸಮಾಧಾನ, ಊಯಿ!

ಗಿರಿ: ಸಿಸಿರೋ.....

ಊಯಿ: ನನ್ನ ಹತ್ರ ನೀವು ಹೀಗೆ ಮಾತಾಡಿ ನಿಭಾಯಿಸಬಹುದು ಅಂತಿದೀರಾ? ಏನಂತ ತಿಳಿದಿದೀರಿ? ಸಾಕು ಕೇಳಿದ್ದು. ಅರ್ನೆಸ್ಟೋ

ರೋಮಾ ನನ್ನ ಭಂಟ. ಯಾರ ಜತೆ ಗೆಳೆತನ ಬೆಳಸಬೇಕನ್ನೊದನ್ನ ನನಗೆ ಯಾರೂ ಹೇಳಿಕೊಡಬೇಕಾಗಿಲ್ಲ. ಎಲ್ಲ ಅತಿಯಾಯ್ತು.

ಗಿರಿ: ಬಾಸ್.

ಬೆಟ್ಟಿ: ಈ ಜಗತ್ತಿನಲ್ಲಿರೋ ಎಲ್ಲ ರೋಮಾನಂಥವರನ್ನ ಇಗ್ನೇಷಿಯಸ್ ಡಲ್‌ಫೀಟ್ ನಿರ್ನಾಮ ಮಾಡಬಲ್ಲರು.

ಕ್ಲರ್ಕ್: *(ತಣ್ಣಗೆ)* ಅದೇ ಸರಿ. ಟ್ರಸ್ಟ್ ಅವರ ಬೆನ್ನಿಗಿದೆ. ಯೋಚನೆ ಮಾಡು. ಗೆಳೆತನ, ವ್ಯವಹಾರ ಬೇರೆ ಬೇರೆ. ಏನಂತೀಯಾ?

ಊಯಿ: *(ತಣ್ಣಗೆ)* ನಾನು ಹೇಳಿದ್ದು ಕೇಳಿಸ್ತಲ್ಲ.

ಕ್ಲರ್ಕ್: ಮಿಸೆಸ್ ಡಲ್‌ಫೀಟ್. ನಿಮ್ಮ ಭೇಟಿಯಿಂದ ಏನೂ ಉಪಯೋಗ ಆಗಲಿಲ್ಲ. *(ಹೊರಡುತ್ತ ಊಯಿಗೆ)* ಊಯಿ ನಿನಗೆ ಇದು ತರವಲ್ಲ. *(ಊಯಿ, ಗಿರಿ ಪರಸ್ಪರ ಕಣ್ಣು ತಪ್ಪಿಸುತ್ತಾರೆ)*

ಊಯಿ: ನನಗೆ ಕದನ ಅಂದರೆ ಹೆದರಿಕೆ ಇಲ್ಲ.

ಗಿರಿ: ಆಯ್ತು. ನನಗೂ ಭಯ ಇಲ್ಲ. ನಿನ್ನೆದುರು ಟ್ರಸ್ಟ್, ಪತ್ರಿಕೆ, ಇಡೀ ನಗರ ಜತೆಗೆ ಡಾಗ್ಸ್‌ಬರೋ, ಅವರ ಗುಂಪು ಇರುತ್ತೆ. ಮತ್ತೆ ಹೇಳತೀನಿ ಕೇಳಿ ಬಾಸ್. ಇನ್ನೊಂದು ಸಾರಿ ಯೋಚನೆ ಮಾಡಿ.

ಊಯಿ: ಏನು ಮಾಡಬೇಕನ್ನೋದು ನನಗೆ ಗೊತ್ತು, ಯಾರೂ ಹೇಳಿಕೊಡಬೇಕಾಗಿಲ್ಲ.

*(ಭಿತ್ತಿ ಪತ್ರ)*

## ದೃಶ್ಯ ೧೧

*(ಗರೇಜು.ರಾತ್ರಿ, ಮಳೆಯ ಸದ್ದು, ಅರ್ನೆಸ್ಟೋ ರೋಮಾ, ಇನಾ, ಹಿಂದೆ ಬಂದೂಕಧಾರಿಗಳೂ)*

**ಇನಾ:** ಒಂದು ಗಂಟೆ.

**ರೋಮಾ:** ಎಲ್ಲೋ ತಡವಾಗಿದೆ.

**ಇನಾ:** ಏನಾದ್ರೂ ಹಿಂದೆ ಮುಂದೆ ನೋಡತಿರಬಹುದಾ?

**ರೋಮಾ:** ಇರಬಹುದು. ಬೆನ್ನು ಬಿದ್ದವರನ್ನ ಕಂಡರೆ ಆರ್ಥುರೋಗೆ ಪ್ರಾಣ. ಅವರಿಗಾಗಿ ಜೀವಾನಾದ್ರೂ ಕೊಡತಾರೆ. ಅವರನ್ನ ಬಿಟ್ಟುಕೊಡೋಲ್ಲ. ಜಿವೋಲಾ, ಗಿರಿ ಅಂಥ ಹೆಗ್ಗಣಗಳನ್ನ ಕೈಬಿಡೋಕೂ ಹಿಂದೆಮುಂದೆ ನೋಡತಾರೆ. ಅದಕ್ಕೆ ಒಳಗೊಳಗೇ ನೋವು ತಿನ್ನುತಾ ಕುಳಿತಿರತಾರೆ. ಬರೋ ಹೊತ್ತಿಗೆ ಎರಡಾದ್ರೂ ಆಗಬಹುದು. ಮೂರೂ ಆದೀತು. ಹೆದರಿಕೆ ಬೇಡ. ಬಂದೇ ಬರತಾರೆ. ನಂಗೊತ್ತು, ಖಂಡಿತಾ. *(ಮೌನ)* ಗಿರಿ ಕಾರ್ಪೆಟ್ ಮೇಲೆ ರಕ್ತ ಕಾರಿಕೊಂಡು ಸತ್ತು ಬಿದ್ದದ್ದನ್ನ ಕಂಡಾಗಲೇ ನನಗೆ ನಿರಾಳ. ಇನ್ನೇನು ಬಂತು ಆ ಹೊತ್ತು ಕೂಡ.

**ಇನಾ:** ಮಳೆ ಹಿಡಿದ ರಾತ್ರೀಲಿ ಎದೆ ಝಲ್ಲಂತ ನಡಗತಿರತದೆ.

**ರೋಮಾ:** ಕಗ್ಗತ್ತಲ ರಾತ್ರಿ, ಅತಿ ವೇಗದ ಕಾರು, ಜೀವಕೊಡೋ ಗೆಳೆಯ ಈ ಮೂರು ನನಗೆ ಯಾವಾಗಲೂ ಇಷ್ಟ.

**ಇನಾ:** ಹದಿನೆಂಟಾಯ್ತು.

**ಇನಾ:** ಹಳೆಯ ಸಂಬಂಧ.

**ಬಂದೂಕಧಾರಿ:** *(ಮುಂದೆ ಬಂದು)* ಹುಡುಗರಿಗೆ ಕುಡಿಯೋಕೆ ಬೇಕಂತೆ.

**ರೋಮಾ:** ಇವತ್ತಿಲ್ಲ. ಇಡೀ ರಾತ್ರಿ ಅವರು ಎಚ್ಚರವಾಗಿರಬೇಕು. *(ಅಂಗರಕ್ಷಕರು ಒಬ್ಬನನ್ನು ಹಿಡಿದು ತರುತ್ತಾರೆ.)*

ವ್ಯಕ್ತಿ: *(ಉಸಿರು ತಡೆಹಿಡಿದು)* ಅಡ್ಡ ರಸ್ತೇಲಿ ಏನೋ ನಡೀತಿದೆ. ಪೊಲೀಸ್ ಸ್ಟೇಶನ್ ಹೊರಗೆ ಎರಡು ವ್ಯಾನು ತುಂಬಾ ಪೋಲೀಸ್.

ರೋಮಾ: ಹಾಗಾ?. ಎಲ್ಲಿ ಬುಲೆಟ್ ಪ್ರೂಫ್ ಶಟರ್ಸ್ ಎಳೀರಿ. ಅವರಿಗೂ ನನಗೂ ಏನೂ ಸಂಬಂಧವಿಲ್ಲ. ಆದರೂ ಎಚ್ಚರವಾಗಿದ್ದರೆ ಸರಿ. ಆಮೇಲೆ ಕೈಕೈ ಹಿಸಿಕಿಕೊಳ್ಳೋದು ಯಾಕೆ?. *(ಶಟರ್ಸ್ ಎಳೆದ ಸದ್ದು. ಗರೇಜು ಮುಚ್ಚಿದೆ)* ಸರೀನಾ ಈಗ?.

ಇನಾ: *(ತಲೆ ಆಡಿಸಿ)* ಈ ತಂಬಾಕು ಇದೆಯಲ್ಲ ವಿಚಿತ್ರ. ಇದನ್ನ ಸೇದತಿರೋನ ಮುಖ ಸಮಾಧಾನವಾಗಿರುತ್ತೆ. ಆದರೆ ಸಮಾಧಾನವಾಗಿರೋನ ಥರಾ ನಟಿಸ್ತ ತಂಬಾಕು ಹಚ್ಚಿದರೆ ಕೆಮ್ಮಿ ಕೆಮ್ಮಿ ಸುಸ್ತಾಗುತ್ತೆ.

ರೋಮಾ: *(ನಗುತ್ತಾ)* ಕೈ ಚಾಚು.

ಇನಾ: *(ಚಾಚಿ)* ನಡಗತಿದೆ. ಒಳ್ಳೇದಲ್ಲ.

ರೋಮಾ: ಹೆದರಬೇಡ. ಎಲ್ಲ ಸರಿಹೋಗುತ್ತೆ. ಹೊಡೆದು ಬಡಿದು ಗಾಯ ಮಾಡೋನಲ್ಲ ನಾನು. ಅವರಿಗೆ ಕರುಣೆ ಇಲ್ಲ. ಏನು ಮಾಡಿದರೂ ಜಗ್ಗೋರಲ್ಲ. ಹಾಗೇ ನೀನೂ ಅವರಿಗೆ ಏನೂ ಮಾಡೋಕೆ ಆಗೋಲ್ಲ. ಇಷ್ಟ ಬಂದಷ್ಟು ನಡಗು ಈಗಲೇ. ಕಂಪಾಸು ಸೂಜಿ ನಿಲ್ಲೋಕೆ ಮೊದಲು ನಡಗತಿರತದೆ. ನಿನ್ನ ಕೈ ಕೂಡ ಹಾಗೆ. ದಿಕ್ಕು ಸಿಗುವವರೆಗೆ ನಡಗಬೇಕು.

ಧ್ವನಿ: ಚರ್ಚ್ ಬೀದೀಲಿ ಪೋಲೀಸ್ ವ್ಯಾನ್ ಬರತಿದೆ.

ರೋಮಾ: *(ಗಟ್ಟಿಯಾಗಿ)* ನಿಲ್ಲತಾ ಇದೆಯಾ?

ಧ್ವನಿ: ಇಲ್ಲ.

ಬಂದೂಕಧಾರಿ: *(ಬಂದು)* ಲೈಟ್ ಆರಿಸಿಕೊಂಡು ಎರಡು ಕಾರು ಮೂಲೆಗೆ ಬಂದಿವೆ.

ರೋಮಾ: ಆರ್ಥುರೋಗೆ ಕಾಯ್ತಿದ್ದಾರೆ. ಜಿವೋಲಾ, ಗಿರಿ ಇಬ್ಬರೂ ಅವನಿಗೆ ಬಲೆ ಬೀಸ್ತಿದಾರೆ. ಅವನು ಸಂಚಿಗೆ ಬಲಿಯಾಗಿ ಬಿಡತಾನೆ. ತಪ್ಪಿಸಬೇಕು. ಬನ್ನಿ.

ಬಂದೂಕಧಾರಿ: ಹಾಗೆ ಮಾಡಿದ್ರೆ ನಮ್ಮ ತಲೆ ಉಳಿಯೋದಿಲ್ಲ.

ರೋಮಾ: ಹಾಗಾದ್ರೆ ಹಾಗೇ ಆಗಲಿ. ಹದಿನೆಂಟು ವರ್ಷದ ಸ್ನೇಹ ಸುಮ್ಮನೆ ಅಲ್ಲ.

ಇನಾ: *(ಗಟ್ಟಿಯಾಗಿ, ಸ್ಪಷ್ಟ)* ಶಟರ್ಸ್ ತೆಗೀರಿ. ಮೆಶಿನ್‌ಗನ್ ರೆಡಿಯಾಗಲಿ.

ಬಂದೂಕಧಾರಿ: ಓಹೋ!

ಇನಾ: ತೆರೆದರು. *(ಶಟರ್ಸ್ ತೆರೆಯುತ್ತಾರೆ. ಊಯಿ, ಜಿವೋಲಾ, ಅಂಗರಕ್ಷಕರು ಬರುವರು.)*

ರೋಮಾ: ಆರ್ಥುರೋ.

ಇನಾ: (ಉಸಿರು ಬಿಗಿಹಿಡಿದು) ಆಂ! ಜಿವೋಲಾ!

ರೋಮಾ: ಏನಿದು? ನೀವು ಬರಲಿಲ್ಲ ಅಂತ ಗಾಬರಿಯಾಗಿತ್ತು (ನಗುತ್ತ) ಎಲ್ಲ ಸರಿಯಾಗಿದೆ.

ಊಯಿ: *(ಬೇಸರದಿಂದ)* ಸರಿಯಾಗದೆ ಏನಾಗತ್ತೆ?

ಇನಾ: ಏನೋ ತೊಂದರೆಯಾಗಿದೇಂತ ಅಂದುಕೊಂಡೆವು. ಅವನ ಕೈ ಕುಲಕುತಾ ಇಲ್ವಲ್ಲ ಬಾಸ್. ನಿಮಗೆ ತೊಂದರೆಯಾದರೆ ಬೆಂಕಿಗೆ ಬೀಳೋದಕ್ಕೂ ರೋಮಾ ಸಿದ್ಧವಿದ್ದ. *(ಊಯಿ ರೋಮಾನ ಬಳಿ ಹೋಗುವನು. ಕೈಚಾಚುತ್ತಾನೆ. ರೋಮಾ ಹಿಡಿಯುವನು. ರೋಮಾ ತನ್ನ ರಿವಾಲ್ವರ್ ತೆಗೆಯುವ ಮೊದಲೇ ಜಿವೋಲಾ ಅವನ ಸೊಂಟಕ್ಕೆ ಗುಂಡು ಹಾರಿಸುವನು.)*

ಊಯಿ: ಅವರನ್ನೆಲ್ಲ ಮೂಲೆಗೆ ತಳ್ಳಿ! *(ಗಾಬರಿಯಲ್ಲಿ ರೋಮಾನ ಜನರು. ಇನಾ ಮುಂದಾಗುವನು. ಎಲ್ಲ ಮೂಲೆಗೆ. ನೆಲದ ಮೇಲಿರುವ ರೋಮಾನ ಕಡೆ ಜಿವೋಲಾ ಬಾಗಿ)*

ಜಿವೋಲಾ: ಇನ್ನೂ ಉಸಿರಿದೆ.

ಊಯಿ: ಮುಗಿಸು *(ಗೋಡೆ ಬಳಿ ನಿಂತವರಿಗೆ)* ನನ್ನ ವಿರುದ್ಧ ನೀವು ಮಾಡಿದ ಸಂಚು ಬಯಲಾಯ್ತು. ಡಾಗ್ಸ್‌ಬರೋನ ಕೊಲ್ಲೋಕೆ ಮಾಡಿದ ಪ್ಲಾನ್ ಕೂಡ. ಸರಿಯಾದ ವೇಳೆಗೆ ನಿಮ್ಮನ್ನ ಹಿಡಿದೆ. ಅಲುಗಾಡಬೇಡಿ. ನನ್ನ ಎದುರುಬಿದ್ದವರಿಗೆ ಇದೇ ಪಾಠ. ಸೂಳೆಮಕ್ಕಳಾ!

ಜಿವೋಲಾ: ಎಲ್ಲರ ಹತ್ರನೂ ಬಂದೂಕ *(ರೋಮಾಗೆ)* ಏಳ್ತಿದ್ದಾನೆ. ಏಳಲಿ. ಎಚ್ಚರವಾಗಿದ್ದಕ್ಕೆ ಪಶ್ಚಾತ್ತಾಪ ಪಡತಾನೆ.

ಊಯಿ: ನಾನು ಈ ರಾತ್ರಿ ಡಾಗ್ಸ್‌ಬರೋ ತೋಟದ ಮನೇಲಿರತೀನಿ. *(ಹೋಗುವನು)*

ಇನಾ: ದ್ರೋಹಿಗಳು.

**ಜಿವೋಲಾ:** *(ಉತ್ಸುಕನಾಗಿ)* ಅವರ ಕತೆ ಮುಗಿಸಿ. *(ಎಲ್ಲರೂ ಮೆಶಿನ್‌ಗನ್‌ಗೆ ಆಹುತಿ)*

**ರೋಮಾ:** *(ಎಚ್ಚೆತ್ತು)* ಜಿವೋಲಾ! ದೇವರೇ! (ಹೊರಳುವನು. ಮುಖ ಬಿಳಿಚಿದೆ) ಏನಾಯ್ತು?

**ಜಿವೋಲಾ:** ಏನಿಲ್ಲ. ದ್ರೋಹಿಗಳಿಗೆ ದಂಡನೆ.

**ರೋಮಾ:** ನಾಯಿ! ನನ್ನ ಜನರು! ಏನ್ಮಾಡಿದೆ ಅವರಿಗೆ? *(ಜಿವೋಲಾ ಮೌನ)* ಎಲ್ಲಿ ಆರ್ಥುರೋ? ಅವನನ್ನು ಕೊಂದುಬಿಟ್ಟಾ? ನನಗೆ ಗೊತ್ತಿತ್ತು. *(ಅವನಿಗಾಗಿ ನೆಲದಲ್ಲಿ ಹುಡುಕುತ್ತಾನೆ)* ಎಲ್ಲಿ ಅವನು?

**ಜಿವೋಲಾ:** ಈಗ ತಾನೇ ಹೊರಗೆ ಹೋದರು.

**ರೋಮಾ:** *(ಅವನನ್ನು ಗೋಡೆಯ ಕಡೆ ಎಳೆದೊಯ್ಯುವಾಗ)* ಕೊಳಕು ನಾಯಿಗಳಾ!

**ಜಿವೋಲಾ:** *(ಶಾಂತವಾಗಿ)* ನನ್ನ ಕಾಲು ಕುಳ್ಳ ಅಲ್ಲಾ! ನಿನ್ನ ಮೆದುಳು ಸಗಣಿ. ಎಲ್ಲಿ ನಿನ್ನ ಚೆಂದದ ಕಾಲಿನಿಂದ ಗೋಡೆ ಕಡೆ ನಡಿ ನೋಡೋಣ.

*(ಭಿತ್ತಿ ಪತ್ರ)*

## ದೃಶ್ಯ ೧೨

*(ಜಿವೋಲಾನ ಹೂವಿನ ಅಂಗಡಿ, ಇಗ್ನೀಷಿಯಸ್ ಡಲ್ಫೀಟ್, ಕುಳ್ಳ, ಬೆಟ್ಟಿ ಡಲ್ಫೀಟ್ ಬರುತ್ತಾರೆ)*

**ಡಲ್‌ಫೀಟ್:** ನಂಗಿದೆಲ್ಲ ಇಷ್ಟವಾಗೋದಿಲ್ಲ.

**ಬೆಟ್ಟಿ:** ಯಾಕೆ? ಅವರು ರೋಮಾನನ್ನು ಮುಗಿಸಿದಾರಲ್ಲ.

**ಡಲ್‌ಫೀಟ್:** ಹೌದು. ಅವನ ಕೊಲೆ ಮಾಡಿದಾರೆ.

**ಬೆಟ್ಟಿ:** ಅವರ ಕೆಲಸಾನೇ ಹಾಗೆ. ಏನೇ ಆಗಲಿ ಅವನಂತೂ ಇಲ್ಲ. ಎಂಥೆಂಥಾ ಘಟಾನುಘಟಿಗಳು ಬಿಡದೆ ಇರೋರು. ಕಷ್ಟದ ದಿನಗಳು ಊಯಿಗೂ ಇದ್ದವು. ಅವೆಲ್ಲ ಇನ್ನು ಮುಗಿದವು ಅಂತಿದ್ದಾರೆ, ಮಿ.ಕ್ಲರ್ಕ್. ಊಯಿ ಕೂಡ ತನ್ನ ಸೊಟ್ಟ ಹಾದಿಯನ್ನು ಬಿಡುವುದಕ್ಕೆ ಸಿದ್ಧವಾಗಿದ್ದಾನೆ. ನೀವು ಮತ್ತೆ ಅವನ ಬಗ್ಗೆ ಅಪಪ್ರಚಾರ ಮುಂದುವರೆಸಿದರೆ ಅವನು ಕೆಡುಕಿನ ದಾರೀನೇ ಹಿಡಿದಾನು. ಆಗ ಕೈಸುಟ್ಟುಕೊಳ್ಳೋರು ನೀವೇನೇ. ಈಗ ನೀವು ಸುಮ್ಮನಾದರೆ ನಮ್ಮ ತಂಟೆಗೆ ಬರೋಲ್ಲ.

**ಡಲ್‌ಫೀಟ್:** ನಾನು ಸುಮ್ಮನಿದ್ದ ಮಾತ್ರಕ್ಕೆ ಎಲ್ಲ ಸರಿಹೋಗುತ್ತೇನು?

**ಬೆಟ್ಟಿ:** ಖಂಡಿತ ಸರಿ ಹೋಗುತ್ತೆ. ಅವರೇನು ಪ್ರಾಣಿಗಳಲ್ಲ. *(ಗಿರಿ ಪ್ರವೇಶ. ರೋಮಾನ ಹ್ಯಾಟು ಧರಿಸಿದ್ದಾನೆ.)*

**ಗಿರಿ:** ಹಾಯ್! ಆಗಲೇ ಬಂದಿದೀರಿ. ಊಯಿ ಒಳಗಿದಾರೆ. ನಿಮ್ಮನ್ನ ಕಂಡು ಅವರಿಗೆ ಖುಷಿಯಾಗುತ್ತೆ. ನಾವು ನಿಲ್ಲೋ ಹಾಗಿಲ್ಲ. ಯಾರ ಕಣ್ಣಿಗೂ ಬೀಳೋದಕ್ಕೆ ಮೊದಲೇ ಹೊರಡಬೇಕು. ಜಿವೋಲಾ ಹತ್ರ ಈ ಹ್ಯಾಟು ಹಾರಿಸಿದೆ. *(ನಗು. ನಕ್ಕಾಗ ಛತ್ತಿನ ಪ್ಲಾಸ್ಟಾರ್ ಬೀಳುವುದು. ಹೊರಡುವುರು)*

**ಡಲ್‌ಫೀಟ್:** ಇವರು ಗುರುಗುಟ್ಟೋದು ಅಸಾಧ್ಯ. ನಕ್ಕರೂ ಹಾಗೆ.

**ಬೆಟ್ಟಿ:** ಹಾಗೆಲ್ಲ ಹೇಳಬೇಡಿ. ಅದೂ ಇಲ್ಲಿ.

ಡಲ್‌ಫೀಟ್: (ಕಹಿಯಾಗಿ) ಇಲ್ಲೇನು. ಎಲ್ಲೂ ಹೇಳುವಂತಿಲ್ಲ.

ಬೆಟ್ಟಿ: ಏನು ಮಾಡೋದು? ಊಯಿ, ಡಾಗ್ಸ್‌ಬರೋ ಜಾಗದಲ್ಲಿದ್ದಾನೆ, ಹಾಗಂತ ಸಿಸಿರೋದಲ್ಲಿ ಗುಸುಗುಸು ಸುದ್ದಿ. ಸಿಸಿರೋ ತರಕಾರಿ ವರ್ತಕರು ಈ ಟ್ರಸ್ಟ್‌ನವರ ಜತೆ ಸೇರಿಕೊಳ್ಳುತಿದಾರೆ.

ಡಲ್‌ಫೀಟ್: ಈಗಾಗ್ಲೆ ನನ್ನ ಎರಡು ಪ್ರಿಟಿಂಗ್ ಪ್ರೆಸ್ ಪುಡಿಪುಡಿ ಮಾಡಿದಾರೆ. ನನಗಂತೂ ಏನೂ ತೋಚುತಿಲ್ಲ. (ಜಿವೋಲಾ ಮತ್ತು ಊಯಿ ಕೈಚಾಚುತ್ತ ಬರುವರು)

ಬೆಟ್ಟಿ: ಹಾಯ್, ಊಯಿ.

ಊಯಿ: ಬನ್ನಿ ಡಲ್‌ಫೀಟ್.

ಡಲ್‌ಫೀಟ್: ಮಿ. ಊಯಿ. ಮುಚ್ಚುಮರೆ ಯಾಕೆ? ನನಗೆ ಬರೋದಕ್ಕೆ ಹಿಂಜರಿಕೆ ಇತ್ತು. ಯಾಕಂದರೆ.....

ಊಯಿ: ಯಾಕೆ ಹಿಂಜರಿಕೆ? ನಿಮ್ಮಂಥವರಿಗೆ ಎಲ್ಲರಿಂದಲೂ ಸ್ವಾಗತ.

ಜಿವೋಲಾ: ಜೊತೆಗೆ ಚೆಂದದ ಹೆಂಗಸರು.

ಡಲ್‌ಫೀಟ್: ಅನ್ಯಾಯದ ವಿರುದ್ಧ ದನಿ ಎತ್ತುವುದು ನನ್ನ ಕರ್ತವ್ಯ. ಹಾಗಂತ...

ಊಯಿ: ಬರೀ ತಪ್ಪು ಅಭಿಪ್ರಾಯ. ನಾವಿಬ್ಬರೂ ಮೊದಲಿಂದಲೇ ಒಬ್ಬರನ್ನೊಬ್ಬರು ಭೇಟಿಯಾಗಿದ್ರೆ ಹೀಗಾಗತಾ ಇರಲಿಲ್ಲ. ಏನೇ ಮಾಡಿದರೂ ಗಲಭೆ ಇಲ್ಲದೆ ಶಾಂತವಾಗಿ ಮುಗಿಸಬೇಕು ಅನ್ನುವುದೇ ನನ್ನಿಚ್ಛೆ.

ಡಲ್‌ಫೀಟ್: ಹಿಂದೆ....

ಊಯಿ: ಅದನ್ನು ಕಂಡರೆ ನನಗೆ ಅಸಹ್ಯ. ಜನರಿಗೆ ಬುದ್ಧಿ ಇದ್ದಿದ್ರೆ ಹಿಂಸೆ ಯಾಕೆ ಬೇಕು ಹೇಳಿ.

ಡಲ್‌ಫೀಟ್: ನನ್ನ ಗುರಿ....

ಊಯಿ: ನನ್ ಗುರೀನೂ. ನನ್ನ ವ್ಯವಹಾರ ಕುದುರಬೇಕು. ಟನ ಬಳಗಾದರ ಕಷ್ಟಪಡತಿರೋ ಚಿಕ್ಕ ಪುಟ್ಟ ಅಂಗಡಿಯವರು ತೊಂದರೆ ಇಲ್ಲದೆ ತರಕಾರಿ ಮಾರುವ ಹಾಗಾಗಬೇಕು. ಯಾರಾದರೂ ದಾಳಿಮಾಡಿದಾಗ ಅವರಿಗೆ ರಕ್ಷಣೆ ಸಿಗಬೇಕು.

ಡಲ್‌ಫೀಟ್: (ಖಚಿತವಾಗಿ) ರಕ್ಷಣೆ ಬೇಕೋ ಬೇಡವೋ ಅನ್ನುವ ತೀರ್ಮಾನ ಮಾಡುವುದಕ್ಕೆ ಅವರಿಗೆ ಸ್ವಾತಂತ್ರ್ಯ ಇರಬೇಕು. ಅದು ಎಲ್ಲಕ್ಕಿಂತ ಮುಖ್ಯ.

ಊಯಿ: ನಾನು ಹೇಳುವುದೂ ಅದನ್ನೆ. ಬೇಕೋ ಬೇಡವೋ ಅನ್ನುವ ತೀರ್ಮಾನ ಅವರದ್ದೇ. ಯಾಕೆ ಯಾರು ರಕ್ಷಣೆ ಕೊಡಬೇಕು ಅಂತ ಅವರೇ ಆಯ್ಕೆ ಮಾಡತಾರೆ. ಹಾಗಾಗಿ ಆ ರಕ್ಷಕನ ಬಗ್ಗೆ ಅವರು ನಂಬಿಕೆ ಬೆಳಸಿಕೊಳ್ಳಬೇಕು. ವ್ಯಾಪಾರದಲ್ಲಿ ನಂಬಿಕೆ ಎಷ್ಟು ಮುಖ್ಯವೋ ಇಲ್ಲೂ ಅಷ್ಟೇ ಮುಖ್ಯ. ನಾನು ಇದನ್ನೇ ಯಾವಾಗಲೂ ಹೇಳತಿರತೀನಿ.

ಡಲ್‌ಫೀಟ್: ನಿಮ್ಮ ಬಾಯಿಂದ ಈ ಮಾತು ಕೇಳಿ ಸಂತೋಷವಾಯ್ತು. ಯಾಕಂದ್ರೆ, ತಪ್ಪು ತಿಳಿಬೇಡಿ. ಸಿಸಿರೋ ಬಲಾತ್ಕಾರ ಎಂದೂ ಸಹಿಸೋಲ್ಲ.

ಊಯಿ: ಅದು ಸರಿ. ಪ್ರಸಂಗ ಬಿದ್ದ ಹೊರತು ಯಾರು ತಾನೇ ಬಲಾತ್ಕಾರ ಸಹಿಸತಾರೆ.

ಡಲ್‌ಫೀಟ್: ಖಂಡಿತ. ಟ್ರಸ್ಟ್‌ನ ಜೊತೆ, ವ್ಯವಹಾರ ಬೆಳಸುವುದರಿಂದ ಶಿಕಾಗೋ ತುಂಬ ಹರಡಿರುವ ರಕ್ತ ಹೀರುವ ಮಹಾಮಾರಿ ನಮ್ಮ ನಗರಕ್ಕೆ ಬರೋದಾದರೆ ಅದಕ್ಕೆ ನನಗೆ ಒಪ್ಪಿಗೆ ಇಲ್ಲ.

ಊಯಿ: ಮುಚ್ಚುಮರೆ ಇಲ್ಲದೆ ನೀವು ಹೇಳಿದಿರಿ. ನಾನೂ ಅಷ್ಟೆ. ಹಿಂದೆ ಆಗೀಗ ರೀತಿನೀತಿ ಮೀರಿ ಕೆಲವು ಕೆಲಸಗಳು ಆಗಿಹೋಗಿವೆ. ಯುದ್ಧದಲ್ಲಿ ಹಾಗಾಗುವುದು ಸರಿಯೇ. ಆದರೆ ಗೆಳೆಯರ ನಡುವೆ ಆಗಬಾರದು. ಮುಂದೆಯಾದರೂ ತಾವು ನನ್ನನ್ನ ಒಬ್ಬ ಗೆಳೆಯನ ಹಾಗೆ ನಂಬಬೇಕು. ಅದೂ ಎಂಥ ಗೆಳೆಯ? ತಲೆ ಮೇಲೆ ತಲೆ ಬಿದ್ದರೂ ನಂಬಿದವರನ್ನ ಕೈ ಬಿಡದೇ ಇರುವವನು. ಒಟ್ಟಾರೆ ನಿಮ್ಮ ಪತ್ರಿಕೆ ಭಯ ತರುವ ಕಥೆಗಳನ್ನು ಪ್ರಕಟಿಸಬಾರದು. ಓದಿದರೆ ಸುಮ್ಮನೆ ರಕ್ತಪಾತ. ಇದಕ್ಕಿಂತ ಹೆಚ್ಚಿಗೆ ಏನೂ ಕೇಳೋದಿಲ್ಲ.

ಡಲ್‌ಫೀಟ್: ಏನು ನಡೆದಿಲ್ಲವೋ ಅದರ ಬಗ್ಗೆ ಬರಿಯದೇ ಇರೋದು ಬಹಳ ಸುಲಭ.

ಊಯಿ: ಸರಿಯಾದ ಮಾತು. ಆಗಲೋ ಈಗಲೋ ಎಂಥದೋ ಒಂದು ಘಟನೆ ನಡೆಯಬಹುದು ಯಾಕಂತೀರಿ. ಈ ಭೂಮಿಯಲ್ಲಿ ಇರುವವರೆಲ್ಲ ದೇವತೆಗಳಲ್ಲ; ಮನುಷ್ಯರು. ಗುಂಡು ಹಾರಿಸಿಕೊಂಡು ತಿರುಗುವ ಹುಡುಗರ ಮೇಲೆ ಕೆಟ್ಟಕತೆಗಳನ್ನ ನೀವು ಇನ್ನೂ ಪ್ರಕಟಿಸುವುದಿಲ್ಲ ತಾನೆ? 'ನಮ್ಮ ಚಾಲಕರು ಸಭ್ಯರು, ಯಾವತ್ತೂ ಕೆಟ್ಟ ಮಾತು ಆಡುವವರೇ ಅಲ್ಲ' ಅಂತ ಪ್ರಮಾಣ ಮಾಡಲಿಕ್ಕೆ ಆಗುತ್ತೇನು? ಮನುಷ್ಯನಾದ ಮೇಲೆ ಇದ್ದದ್ದೆ. ಕ್ಯಾರೆಟ್ ಮೂಟೆಯನ್ನ ಸರಿಯಾದ ಸಮಯಕ್ಕೆ ತಂದು ಹಾಕಿದ್ದಕ್ಕೆ

ನಮ್ಮ ಚಾಲಕನಿಗೆ ಒಬ್ಬ ತರಕಾರಿ ವ್ಯಾಪಾರಸ್ಥ ಒಂದು ಬಾಟಲ್ ಬಿಯರ್ ಕುಡಿಸಿದ ಅಂತ ಇಟ್ಕೊಳ್ಳಿ, ಅಷ್ಟಕ್ಕೆ ಭ್ರಷ್ಟಾಚಾರ ಅಂತೆಲ್ಲ ಪ್ರಚಾರ ಮಾಡಿದರೆ ಹೇಗೆ?

**ಬೆಟ್ಟೆ:** ಮಿ. ಊಯಿ. ನಮ್ಮವರೂ ಮನುಷ್ಯರೇ.

**ಜಿವೋಲಾ:** ಅದರಲ್ಲೇನೂ ನಮಗೆ ಅನುಮಾನವಿಲ್ಲ. ಈಗೇನಪ್ಪ, ಎಲ್ಲ ಸಲೀಸಾಗಿ ಯಾವ ಗೋಜಲೂ ಇಲ್ಲದೆ ಒಪ್ಪಂದ ಆಯಿತಲ್ಲ, ಎಲ್ಲ ಸ್ನೇಹಿತರ ಮಧ್ಯೆ. ಇನ್ನಾದರೂ ನಮ್ಮ ಹೂಗಳನ್ನ ನೋಡತೀರಾ...

**ಊಯಿ:** *(ಡಲ್‌ಫೀಟ್‌ಗೆ)* ಮೊದಲು ನೀವು *(ಜಿವೋಲಾನ ಹೂವಿನ ಅಂಗಡಿ ನೋಡುತ್ತಾರೆ. ಊಯಿ ಬೆಟ್ಟಿಯನು, ಜಿವೋಲಾ ಡಲ್‌ಫೀಟ್‌ನನ್ನು ಕರೆದೊಯ್ಯವರು, ಆಗಾಗ ಹೂವಿನ ಮಧ್ಯೆ ಮರೆಯಾಗುವರು ಜಿವೋಲಾ, ಡಲ್‌ಫೀಟ್ ಕಾಣಿಸಿಕೊಳ್ಳುತ್ತಾರೆ.)*

**ಜಿವೋಲಾ:** ಇವು ಮಲಯಾ ದೇಶದವು.

**ಡಲ್‌ಫೀಟ್:** ಹೌದಾ. ಚಿಕ್ಕ ಚಿಕ್ಕ ಕೊಳದಲ್ಲಿ ಬೆಳೆಯುತ್ತವೇ ಅಂತ ತೋರುತ್ತೆ.

**ಜಿವೋಲಾ:** ಉದ್ದದ ನೀಲಿ ತೊಟ್ಟು ನೋಡಿ. ಗಂಟೆಗಟ್ಟಲೆ ಒಣಗದೇ ಇರುತ್ತವೆ.

**ಡಲ್‌ಫೀಟ್:** ಹೂಗಳಿಗೆ ಮರುಳಾಗದೇ ಇರುವವನದು ಕಲ್ಲೆದೆ. *(ಅವರು ಮರೆಯಾಗಿ, ಊಯಿ, ಬೆಟ್ಟಿ ಕಾಣುವರು.)*

**ಬೆಟ್ಟೆ:** ಛಲಗಾರನಾದವನು ಚಿಟಿಕೆ ಹೊಡೆದು ಏನನ್ನಾದರೂ ಜಯಿಸಬಲ್ಲ.

**ಊಯಿ:** ಆದರೂ ಗುಂಡು ಹಾರಿಸಿದಾಗಲೇ ಮಾತಿಗೆ ತೂಕಬರೋದು.

**ಬೆಟ್ಟೆ:** ಬುದ್ಧಿ ಬಳಸಿ ಆಡುವ ಮಾತಿಗೆ ಅದರದೇ ಬೆಲೆ ಇರುತ್ತೆ.

**ಊಯಿ:** ಆದರೆ ಸಂಪಾದನೆ ಮಾಡುವಾಗ ಅಲ್ಲ.

**ಬೆಟ್ಟೆ:** ಬೆದರಿಸುವುದು, ಕುತಂತ್ರ ಮಾಡುವುದು....

**ಊಯಿ:** ಪ್ರಯೋಜನ ಆಗುವ ವ್ಯವಹಾರದ ಬಗ್ಗೆ ಮಾತ್ರ ನನ್ನ ಮಾತು. *(ಅವರು ಮರೆಯಾಗಿ ಡಲ್‌ಫೀಟ್, ಜಿವೋಲಾ ಕಾಣುವರು)*

**ಡಲ್‌ಫೀಟ್:** ಹೂಗಳಿಗೆ ಆಸೆಯಿಲ್ಲ. ಕೆಟ್ಟತನ ಇಲ್ಲ.

**ಜಿವೋಲಾ:** ಅದಕ್ಕೇ ಹೂಗಳನ್ನು ಕಂಡರೆ ನನಗೆ ತುಂಬ ಪ್ರೀತಿ.

ಡಲ್‌ಫೀಟ್: ತಮ್ಮ ಪಾಡಿಗೆ ತಾವು ಇರತಾವೆ. ಆತುರ ಅನ್ನುವುದೇ ಇಲ್ಲ.

ಜಿವೋಲಾ: *(ತುಂಟತನದಿಂದ)* ತೊಂದರೇನೇ ಇಲ್ಲ. ಪತ್ರಿಕೆ ಇಲ್ಲ. ತಲೆನೋವಿಲ್ಲ. *(ಅವರು ಮರೆಯಾಗಿ, ಲೂಯಿ, ಬೆಟ್ಟಿ ಕಾಣುವರು.)*

ಬೆಟ್ಟಿ: ನೀವು ಪಾದ್ರಿಗಳ ಥರ ಕೆಟ್ಟ ಚಟಗಳನ್ನು ದೂರ ಇಟ್ಟಿದೀರಾ?

ಲೂಯಿ: ತಂಬಾಕು ಸೇದಿಲ್ಲ. ಕುಡಿದಿಲ್ಲ.

ಬೆಟ್ಟಿ: ಸನ್ಯಾಸಿ ಅನ್ನಿ.

ಲೂಯಿ: ದೇಹದ ಬಯಕೆ ಅನ್ನುವುದು ನನಗೆ ಇಲ್ಲವೇ ಇಲ್ಲ. *(ಅವರು ಮರೆಯಾಗಿ ಜಿವೋಲಾ, ಡಲ್‌ಫೀಟ್ ಕಾಣುವರು.)*

ಡಲ್‌ಫೀಟ್: ಈ ಹೂಗಳ ನಡುವೆ ಇರೋದರಿಂದ ತುಂಬ ತೃಪ್ತಿ ಸಿಕ್ಕಿರಬೇಕು ನಿಮಗೆ.

ಜಿವೋಲಾ: ಇನ್ನೇನೂ ವ್ಯವಹಾರ ಇಲ್ಲದೇ ಹೋಗಿದ್ದರೆ, ಹಾಗಾಗತಿತ್ತೋ ಏನೋ. (ಅವರು ಮರೆಯಾಗಿ, ಲೂಯಿ, ಬೆಟ್ಟಿ ಕಾಣುವರು.)

ಬೆಟ್ಟಿ: ದೇವರು ದಿಂಡರು ಅಂದರೆ?

ಲೂಯಿ: ಅಪ್ಪಟ ದೈವಭಕ್ತ. ಅದಕ್ಕೇನು ಅಡ್ಡಿ ಇಲ್ಲ.

ಬೆಟ್ಟಿ: ಮತ್ತೆ ದಾನಧರ್ಮ, ನೀತಿ ನಿಯಮ. ಅವು?

ಲೂಯಿ: ದಿನಾಲೂ ಎಲ್ಲಿ ನಡೆಸೋಕೆ ಆಗುತ್ತೆ ಹೇಳಿ!

ಬೆಟ್ಟಿ: ನಿಮ್ಮ ತಾಳ್ಮೆ ಕೆಣಕುತಿದೀನೋ ಏನೋ! ಸಮಾಜದ ಬಗ್ಗೆ ನಿಮ್ಮ ನಿಲುವು ಏನು?

ಲೂಯಿ: ಒಂದು ಥರ ಸಮತೂಕದ್ದು. ನಿರ್ಮಮವಾದ್ದು.. ಅಂದರೇನು? ನಾನು ಶ್ರೀಮಂತರನ್ನ ಕಡೆಗಣಿಸುವುದಕೆ ಆಗುವುದಿಲ್ಲ. *(ಮರೆಯಾಗುವರು. ಜಿವೋಲಾ, ಡಲ್‌ಫೀಟ್ ಕಾಣುವರು)*

ಡಲ್‌ಫೀಟ್: ಹೂಗಳಿಗೂ ಜೀವ ಇರುತ್ತೆ. ಭಾವನೆ ಇರುತ್ತೆ.

ಜಿವೋಲಾ: ನನಗೂ ಹಾಗೇ ಅನ್ನಿಸಿದೆ. ಅದರಲ್ಲೂ ಶವಯಾತ್ರೆ ಕಂಡಾಗ?

ಡಲ್‌ಫೀಟ್: ಮರೆತೇ ಬಿಟ್ಟೆ. ಹೂವಿಂದಲೇ ಅಲ್ವೇ ನಿಮ್ಮ ಅನ್ನ ಹುಟ್ಟುವುದು.

ಜಿವೋಲಾ: ನಿಜ. ಸತ್ತವರೇ ನನಗೆ ಒಳ್ಳೆಯ ಗಿರಾಕಿಗಳು.

ಡಲ್‌ಫೀಟ್: ಅವರು ಮಾತ್ರ ನಿನ್ನ ಗಿರಾಕಿಗಳಲ್ಲ. ಹೌದಾ!

| | |
|---|---|
| **ಜಿವೋಲಾ:** | ನಯ ಭಯ ಇರುವ ಇತರ ಕೆಲವರು ಇರತಾರೆ. |
| **ಡಲ್‌ಫೀಟ್:** | ಹಿಂಸೆಯಿಂದ ಶಾಶ್ವತವಾದದ್ದು ಸಿಗುವುದಿಲ್ಲ. |
| **ಜಿವೋಲಾ:** | ಪ್ರಯೋಜನವಂತೂ ಇದೆಯಲ್ಲ. |
| **ಡಲ್‌ಫೀಟ್:** | ಅದು ಬೇರೆ ಮಾತು. |
| **ಜಿವೋಲಾ:** | ಯಾಕೆ ಸಪ್ಪಗಾಗಿದೀರಿ. |
| **ಡಲ್‌ಫೀಟ್:** | ಇಕ್ಕಟ್ಟು, ಗಾಳೀನೇ ಇಲ್ಲ. |
| **ಜಿವೋಲಾ:** | ವಾಸನೆ ತುಂಬ ಕಟುವಾಗಿದೆ. ನಿಮಗೆ ಆಗಲಿಲ್ಲವೋ ಏನೋ? *(ಅವರು ಮರೆಯಾಗಿ, ಊಯಿ ಮತ್ತು ಬೆಟ್ಟಿ ಕಾಣುವರು.)* |
| **ಬೆಟ್ಟಿ:** | ನೀವಿಬ್ಬರೂ ಒಂದಾದದ್ದು ಕಂಡು ಖುಷಿಯಾಯ್ತು. |
| **ಊಯಿ:** | ಮುಚ್ಚುಮರೆ ಇಲ್ಲದೆ ಇದ್ರೆ ಹೇಗಿರುತ್ತೆ ಅನ್ನುವುದು.... |
| **ಬೆಟ್ಟಿ:** | ಬಲ್ಲವರಿಗೆ ಯಾವತ್ತೂ ಮೋಸವಾಗುವುದಿಲ್ಲ. |
| **ಊಯಿ:** | *(ಅವಳ ಭುಜದ ಮೈಲೆ ಕೈಹಾಕಿ)* ಜಾಣ ಹೆಂಗಸರನ್ನು ಕಂಡರೆ ನನಗೆ ತುಂಬ ಇಷ್ಟ *(ಜಿವೋಲಾ, ಬಳಲಿದ ಡಲ್‌ಫೀಟ್ ಬರುತ್ತಾರೆ. ಡಲ್‌ಫೀಟ್ ಊಯಿ ತನ್ನ ಹೆಂಡತಿಯು ಹೆಗಲಮೇಲೆ ಕೈಯಿಟ್ಟಿರುವುದನ್ನು ಕಾಣುತ್ತಾನೆ.)* |
| **ಡಲ್‌ಫೀಟ್:** | ಬೆಟ್ಟಿ, ಹೊರಡೋಣಾ? *(ಊಯಿ ಬಂದು ಅವನ ಕೈಹಿಡಿದು)* ನಿಮ್ಮ ನಿರ್ಧಾರಕ್ಕೆ ಸಾಟಿ ಇಲ್ಲ. ಸಿಸಿರೋ ಅದರಿಂದ ಉದ್ಧಾರವಾಗುತ್ತೆ. ನನ್ನಂಥ ನಿಮ್ಮಂಥವರ ಭೇಟಿ ಅಂದರೆ ಸುಮ್ಮನೆ ಏನು? |
| **ಜಿವೋಲಾ:** | *(ಬೆಟ್ಟಿಗೆ ಹೂ ನೀಡುತ್ತ)* ಚೆಲುವಿಗೆ ಮೆಚ್ಚು ಚೆಲುವು. |
| **ಬೆಟ್ಟಿ:** | ಎಷ್ಟು ಚೆನ್ನಾಗಿದೆ ಅಲ್ವ? ಖುಷಿಯಾಗತಿದೆ. ಬರ್ತೀವಿ. |
| **ಜಿವೋಲಾ:** | ನಾವೀಗ ಹೊರಡೋಣ. |
| **ಊಯಿ:** | *(ಕಟುವಾಗಿ)* ಅವನ ಮುಖ ಕಂಡರೆ ನನಗಾಗೋದಿಲ್ಲ. |

(ಭಿತ್ತಿ ಪತ್ರ)

# ದೃಶ್ಯ ೧೩

*(ಗಂಟೆಗಳ ದನಿ. ಸಿಸಿರೋದ ಚಾಪೆಲ್. ಶವಪೆಟ್ಟಿಗೆ. ವಿಧವೆಯ ವೇಷದಲ್ಲಿ ಬೆಟ್ಟಿ, ಕ್ಲರ್ಕ್, ಊಯಿ, ಗಿರಿ ಜಿವೋಲಾ ಭಾರಿ ರೀತ್‌ಗಳೊಡನೆ. ರೀತ್ ಇರಿಸಿ ಗಿರಿ, ಜಿವೋಲಾ ಹೊರಗೆ. ಒಳಗಿನಿಂದ ಪಾಸ್ಟರ್‌ನ ದನಿ)*

ಧ್ವನಿ: ಇಗ್ನೇಷಿಯಸ್ ಡಲ್‌ಫೀಟ್ ಅವರೀಗ ಶಾಶ್ವತ ನಿದ್ರೆಗೆ ಸಂದಿದ್ದಾರೆ. ದುಡಿಮೆಯಲ್ಲಿ ನಿರತವಾಗಿದ್ದ ಜೀವಕ್ಕೆ ಈಗ ವಿಶ್ರಾಂತಿ. ಜೀವನದ ಉದ್ದಕ್ಕೂ ಇತರರಿಗಾಗಿ ದುಡಿದವರು. ತಮಗಾಗಿ ಏನನ್ನೂ ಮಾಡಿಕೊಳ್ಳಲು ಹಿಂಜರಿದವರು. ಸ್ವರ್ಗದ ಬಾಗಿಲ ದೇವತೆಗಳು ಇಗ್ನೇಷಿಯಸ್ ಡಲ್‌ಫೀಟ್ ಅವರ ಹೆಗಲ ಮೇಲೆ ಕೈಯಿರಿಸಿದಾಗ ಅವರ ಉಡುಪು ಅಲ್ಲಿ ಸವೆದು ಹರಿದಿರುವುದನ್ನು ಗಮನಿಸುತ್ತಾರೆ. 'ಈ ಮನುಷ್ಯ ನೆರೆಯವರ ಹೊರೆಯನ್ನು ಹೊತ್ತವನು' ಎಂದು ತಿಳಿಯುತ್ತಾರೆ. ಮುಂದೆ ಎಷ್ಟೋ ದಿನಗಳವರೆಗೆ ಮುನಿಸಿಪಾಲಟಿಯಲ್ಲಿ ಎಲ್ಲರೂ ಮಾತು ಮುಗಿಸಿದ ಮೇಲೆ ಮೌನ ತುಂಬುತ್ತದೆ. ಇಗ್ನೇಷಿಯಸ್ ಡಲ್‌ಫೀಟ್ ಅವರ ನುಡಿಗಾಗಿ ಕಾಯುತ್ತಾರೆ. ನಗರದ ಪ್ರಜ್ಞೆಯೇ ಇಂದು ಸಾವನ್ನಪ್ಪಿದೆ. ದಾರಿ ಎಷ್ಟೇ ಕಡಿದಾದದ್ದು ಆಗಿರಲಿ ಹಿಂಜರಿಯದೆ ನಡೆದ ಈ ಜೀವಕ್ಕೆ ಅಕಾಲ ಮೃತ್ಯು ನ್ಯಾಯ ಅವರ ಎದೆಬಡಿತವಾಗಿತ್ತು. ಮೂರ್ತಿ ಚಿಕ್ಕದಾಗಿದ್ದರೂ ಮನಸ್ಸು ವಿಶಾಲ. ತಮ್ಮ ಪತ್ರಿಕೆಯ ಮೂಲಕ ನಮ್ಮ ನಗರದ ಆಚೆಗೂ ಕೇಳಿಸುವಂತೆ ನುಡಿಯುತ್ತಿದ್ದರು. ಇಗ್ನೇಷಿಯಸ್ ಡಲ್‌ಫೀಟ್ ಚಿರಶಾಂತಿ ನಿಮಗೆ ದೊರಕಲಿ! ಆಮಿನ್!

ಜಿವೋಲಾ: ತಂತ್ರಗಾರ. ಹೇಗೆ ಸತ್ತ ಅನ್ನೋ ಮಾತಿಲ್ಲ.

ಗಿರಿ: *(ಡಲ್‌ಫೀಟ್ ಹ್ಯಾಟು ಧರಿಸಿ)* ತಂತ್ರಗಾರ? ಅವರಿಗೆ ಏಳು ಮಕ್ಕಳಿದ್ದಾರೆ ಗೊತ್ತಾ! *(ಕ್ಲರ್ಕ್. ಮಲ್ಲರಿ ಚಾಪೆಲ್ ಹೊರಗೆ ಬರುತ್ತಾರೆ.)*

ಕ್ಲರ್ಕ್: ದೇವರೇ ಕಾಪಾಡಬೇಕು! ಸತ್ಯ ಅವರ ಶವಪೆಟ್ಟಿಗೆ ಸುತ್ತ ಸುಳಿದಾಡುತಿರಬೇಕು ಅನ್ನುವ ಭಯದಲ್ಲಿ ಇಲ್ಲೇ ಠಳಾಯಿಸುತಾ ಇದೀರೇನು?

ಜಿವೋಲಾ: ಯಾಕೆ ಹೀಗೆ ಹೇಳತೀರ ಸರ್? ಇಂಥ ಸ್ಥಳದಲ್ಲಿ ತಾಳ್ಮೆ ಇರಬೇಕು. ಅಲ್ಲದೆ ಬಾಸ್ ವಿಚಿತ್ರ, ಅವರಿಗೆ ಇಂಥ ಜಾಗ ಕಂಡರೆ ಆಗೋದಿಲ್ಲ.

ಮಲ್ಬರಿ: ಕೊಲೆಗಾರರು! ಇಗ್ನೇಷಿಯಸ್ ಡಲ್‌ಫೀಟ್ ಕೊಟ್ಟ ಮಾತಿಗೆ ತಪ್ಪದೆ ಮೌನವಾಗಿದ್ದರು.

ಜಿವೋಲಾ: ಮೌನವಾಗಿದ್ದರೆ ಸಾಲದು. ನಮಗೆಂಥ ಜನಬೇಕು? ಬರಿ ಬಾಯಿ ಮುಚ್ಚಿಕೊಂಡಿರುವವರಲ್ಲ. ನಮ್ಮ ಪರವಾಗಿ ಗಟ್ಟಿಯಾಗಿ ಮಾತಾಡುವವರು ಬೇಕು.

ಮಲ್ಬರಿ: ನಿಮ್ಮನ್ನೆಲ್ಲ ಕಟುಕರು ಅನ್ನದೇ ಇನ್ನೇನು ಹೇಳಬೇಕಿತ್ತು ಅವರು?

ಜಿವೋಲಾ: ಅವರ ಕೆಲಸ ಮುಗಿದಿತ್ತು ಸ್ವಾಮಿ. ತರಕಾರಿ ವ್ಯಾಪಾರಸ್ಥರ ಬೆವರು ಹೊರಗೆ ಹರಿಯುತ್ತಿದ್ದುದು ಈ ಡಲ್‌ಫೀಟ್ ಅನ್ನುವ ರಂಧ್ರದ ಮೂಲಕ. ಅದಕ್ಕೆ ಅವನ ಹತ್ರ ದುರ್ವಾಸನೆ ತುಂಬಿತ್ತು.

ಗಿರಿ: ನಿಮ್ಮ ಕಾಲಿಫ್ಲವರ್ ವಿಷಯ? ಅದನ್ನ ಸಿಸಿರೋದಲ್ಲಿ ಮಾರಬೇಕು ಅಂತ ಇದೀರೋ ಇಲ್ಲವೋ?

ಮಲ್ಬರಿ: ಆದರೆ ಕೊಲೆ ಸುಲಿಗೆ ಮಾಡಿ ಅಲ್ಲ.

ಗಿರಿ: ಸೋಗು ಹಾಕ್ತೀರಾ! ಇನ್ನು ಹೇಗೆ ಮಾರತೀರಿ? ನಾವು ಮಾಡುವ ಪಾಪದ ಕೆಲಸಕ್ಕೆ ಯಾರು ಹೊಣೆ? ಸೂಳೆಮಕ್ಕಳಾ. ಮಾಂಸಕ್ಕೆ ಮುಗಿಬೀಳತೀರಿ. ಆದರೆ ಅದನ್ನ ಕತ್ತರಿಸೋಕೆ ಕತ್ತಿ ಬಳಸಿದ್ದಕ್ಕೆ ತೆಗಳತೀರಿ. ತಿಂದು ಬಾಯಚಪ್ಪರಸತೀರಿ ಅಂತಿದ್ರೆ ಗೊಣಗತೀರಾ? ನಡೀರೋ ಇಲ್ಲಿಂದ.

ಮಲ್ಬರಿ: ಇವರನ್ನೆಲ್ಲ ನೀನು ಸೇರಿಸಿಕೊಂಡದ್ದೇ ತಪ್ಪಾಯ್ತು.

ಕ್ಲರ್ಕ್: ನಾನೇನು ಸೇರಿಸಿಕೊಂಡದ್ದು? *(ಇಬ್ಬರೂ ಹತಾಶೆಯಿಂದ ಹೊರಗೆ ಹೋಗುವರು.)*

ಗಿರಿ: ಬಾಸ್ ಅವರನ್ನ ಸುಮ್ಮನೆ ಬಿಡಬೇಡಿ. ಈ ಫ್ಯೂನೆರಲ್ ಮಜಾನೇ ಹಾಳು ಮಾಡತಿದಾರೆ.

ಜಿವೋಲಾ: ಶ್! ಬೆಟ್ಟಿ ಬರತಿದಾಳೆ! *(ಇನ್ನೊಬ್ಬ ಹೆಂಗಸಿನ ಮೇಲೆ ಒರಗಿ ಬೆಟ್ಟಿ ಚಾಪೆಲ್‌ನಿಂದ ಹೊರಗೆ ಬರುವಳು. ಊಯಿ ಅವಳ ಬಳಿಗೆ. ಚಾಪೆಲ್‌ನಲ್ಲಿ ಸಂಗೀತ.)*

ಊಯಿ: ಮಿಸೆಸ್ ಡಲ್‌ಫೀಟ್, ಸಹಿಸಿಕೊಳ್ಳಿ. *(ಅವಳು ಮಾತಾಡದೆ ಮುಂದೆ ಹೋಗುತ್ತಾಳೆ.)*

ಗಿರಿ: *(ಕೂಗಿ)* ಏಂವ್! ಅಮ್ಮಂಯ್ಯ! ಇಲ್ಲಿ ಕೇಳು. *(ನಿಂತು ಹಿಂದಿರುಗುತ್ತಾಳೆ. ಮುಖ ಬಿಳಿಚಿದೆ.)*

ಊಯಿ: ಸಹಿಸಿಕೊಳ್ಳಿ ಅಂದೆ. ಅವರ ಆತ್ಮಕ್ಕೆ ದೇವರು ಶಾಂತಿ ಕೊಡಲಿ. ಅವರು ಈಗ ಇಲ್ಲ. ಆದರೆ ನಿಮ್ಮ ಕಾಲಿಫ್ಲವರ್ ಇನ್ನೂ ಇದೆ. ನಿಮಗೆ ಅದು ಈಗ ಕಾಣಿಸ್ತಿಲ್ಲ. ಕಣ್ಣುತುಂಬ ನೀರು ತುಂಬಿ ಮಂಜಾಗಿದೆ. ಈ ದುರಂತ ನಿಮ್ಮನ್ನ ಕುರುಡು ಮಾಡಬಾರದು. ನ್ಯಾಯದ ದಾರಿಯಲ್ಲಿ ಹೋಗುವ ತರಕಾರಿ ಟ್ರಕ್‌ಗಳ ಮೇಲೆ, ಎಲ್ಲೆಲ್ಲೋ ಅಡಗಿಕುಳಿತು ಗುಂಡು ಹಾರಿಸ್ತಾರೆ ಅನ್ನುವುದು ನಿಮಗೆ ಗೊತ್ತಿರಬೇಕು. ಜನ ಕೊಳ್ಳುವುದಕ್ಕೆ ಕಾಯ್ದು ಕುಳಿತಿರುವ ತರಕಾರಿಗೆ ಕಟುಕರು ಸೀಮೆಎಣ್ಣೆ ಸುರೀತಾರೆ ಅನ್ನುವುದು ಗೊತ್ತಿರಬೇಕು. ನಾನು, ಈ ನನ್ನ ಗೆಳೆಯರು ನಿಮ್ಮ ರಕ್ಷಣೆಗೆ ಇದೀವಿ. ಏನಂತೀರಿ?

ಬೆಟ್ಟಿ: *(ಮೇಲೆ ನೋಡುತ್ತ)* ಅವರನ್ನ ಮಣ್ಣು ಮಾಡಿ ಒಂದು ಘಳಿಗೆ ಕೂಡ ಆಗಿಲ್ಲ. ಆಗಲೇ ಇದೆಲ್ಲ.

ಊಯಿ: ಹೀಗಾಗಬಾರದಿತ್ತು. ನಾನಿದನ್ನು ಖಂಡಿಸ್ತೀನಿ. ಯಾರನ್ನು ಅವರು ಕೊಂದಿರೋದು ಗೊತ್ತಾ? ನನ್ನ ಗೆಳೆಯನ್ನ!

ಬೆಟ್ಟಿ: ಅವರನ್ನು ಕೊಂದ ಕೈ ಬೇರೆ ಯಾವುದೂ ಅಲ್ಲ. ಅವರ ಕೈ ಹಿಡಿದು ಕುಲುಕಿದ ಕೈ ನಿನ್ನದು.

ಊಯಿ: ನನ್ನ ಜನರ ಜತೆ ಹೊಂದಿಕೊಂಡು ಬಾಳುವೆ ಮಾಡುವುದಕ್ಕೆ ಏನೆಲ್ಲ ಆಸೆ ಇರಿಸಿಕೊಂಡಿದೀನಿ; ಎಷ್ಟೆಲ್ಲ ದುಡಿದಿದೀನಿ! ಆದರೆ ನನ್ನ ಉದ್ದೇಶಕ್ಕೆ ಕೊಡಲಿ ಪೆಟ್ಟು ಹಾಕುವ ಇಂಥ ಕೆಟ್ಟ ಸುದ್ದಿಗಳನ್ನು ಹರಡತಿದೀರಲ್ಲ. ಇದನ್ನು ಕೇಳುವ ಗತಿ ಬಂತೆ ನನಗೆ! ಯಾಕೆ ಇವರೆಲ್ಲ ನನ್ನನ್ನ ಅರ್ಥಮಾಡಿಕೊಳ್ಳತ್ತಿಲ್ಲ? ಯಾಕಿವರಿಗೆ ನನ್ನ ನಂಬಿಕೆ ಬೇಕಾಗಿಲ್ಲ? ನಾನು ಯೋಚನೆ ಮಾಡಿ ಅಂತ ಹೇಳಿದ್ದಕ್ಕೇ ಅದನ್ನ ಗೂಂಡಾಗಿರಿ ಅನ್ನುವುದು ಯಾಕೆ? ಗೆಳೆತನಕ್ಕೆ ಚಾಚಿದ ಕೈಯನ್ನು ತಿರುಚುವುದು ಯಾಕೆ?

ಬೆಟ್ಟಿ: ಕೊಲ್ಲುವುದಕ್ಕೆ ಚಾಚುವ ಕೈ ಅದು.

ಊಯಿ: ಇಲ್ಲ. ನಾನು ಅವರನ್ನ ಬೇಡಿಕೊಂಡಷ್ಟೂ ಅವರು ನನ್ನನ್ನು ತಿರಸ್ಕರಿಸತಾ ಇದಾರೆ.

ಬೆಟ್ಟಿ: ಹಾವು ಹಕ್ಕಿಯನ್ನ ಬೇಡಿದ ಹಾಗಿದೆ ನಿನ್ನ ಬೇಡಿಕೆ.

ಊಯಿ: ಏನಂದರು ಕೇಳಿದಿರಾ? ಹೀಗೇ ಜನ ನನ್ನ ಕೂಡ ಮಾತಾಡುವುದು. ಆ ಡಲ್‌ಫೀಟ್ ಕೂಡ ಹೀಗೇನಾ. ನಾನು ವಿಶ್ವಾಸದಿಂದ, ಪ್ರೀತಿಯಿಂದ, ಸ್ನೇಹ ಹಸ್ತ ಚಾಚಿದರೆ ಅದನ್ನು ತಂತ್ರ ಅಂದರು. ನನ್ನ ಕ್ಷಮೆಯನ್ನು ದೌರ್ಬಲ್ಯ ಅಂತ ತಿಳಿದರು. ನನ್ನ ಸ್ನೇಹದ ಮಾತಿಗೆ ಅವರ ಉತ್ತರ ಏನು? ಮೌನ. ನನ್ನ ಬಗ್ಗೆ ಮೆಚ್ಚುಗೆ ಮಾತು ಹೇಳತಾರೆ ಅಂತ ಇದ್ದರೆ ಮೌನ. ಎಡೆಬಿಡದೆ, ತಗ್ಗಿಬಗ್ಗಿ ಸ್ನೇಹ ಬೆಳಸುವುದಕ್ಕೆ ಯಾಕೆ? ಅವರೂ ಹಾಗೇ ಮಾಡಲಿ ಅಂತ. ಬೆಚ್ಚನೆಯ ಮಾತಾಡಲಿ ಅಂತ. ಆದರೆ ನನ್ನ ಆಸೆಯೆಲ್ಲ ಮಣ್ಣುಪಾಲಾಯ್ತು. ನನಗೆ ಸಿಕ್ಕಿದ್ದು ತಿರಸ್ಕಾರ. ಮುಖ ಹಿಂಡಿಕೊಂಡು, ಗೊಣಗತಾ 'ಮೌನವಾಗಿರತೀನಿ' ಅಂತ ಮಾತು ಕೊಟ್ಟಿದ್ದನ್ನು ಅವರು ನಡೆಸಿದರಾ? ಅದನ್ನು ಮುರಿದರು. ಅವರು ಕೊಟ್ಟ ಮಾತನ್ನು ನೀವಾದರೂ ಉಳಿಸಿಕೊಳ್ಳಿ. ಇಷ್ಟೇ. ಈ ಹೊತ್ತಲ್ಲಿ ನಿಮ್ಮನ್ನು ನಾನು ಕೇಳುತ್ತಿರುವುದು. ಎಂತೆಂಥದೋ ಭಯದ ಕಥೆಗಳನ್ನ ಕಟ್ಟಿ ಎಲ್ಲ ಕಡೆ ಹರಡತಿದಾರೆ. ಹುಷಾರು! ಅತಿಯಾಗಿ ಮಾಡಬೇಡಿ! ನನ್ನ ತಾಳ್ಮೆಗೂ ಒಂದು ಮಿತಿ ಇದೆ.

ಬೆಟ್ಟಿ: ಮಾತೇ ಹೊರಡತಿಲ್ಲ.

ಊಯಿ: ಮಾತು ಎದೆಯಾಳದಿಂದ ಬರದೇ ಇದ್ದರೆ ಹಾಗೇ ಆಗೋದು.

ಬೆಟ್ಟಿ: ನಿನ್ನ ಮಾತಿಗೆ ಯಾರು ಮರುಳಾಗತಾರೆ? ನೀವು ಕೊಲೆ ಮಾಡುವುದು ಎದೆಯಾಳದಿಂದ. ಅದಕ್ಕೇ ಬೇರೆಯವರು ಒಳ್ಳೆಯ ಕೆಲಸ ಮಾಡಿದಾಗ ಆಗುವ ಆನಂದ ನಿಮಗೆ ಕೊಲೆ ಮಾಡಿದಾಗ ಸಿಗುತ್ತೆ. ನಮಗೆ ವಿಶ್ವಾಸದಲ್ಲಿ ಆಸಕ್ತಿ. ನಿಮಗೆ ದ್ರೋಹದಲ್ಲಿ. ಒಳ್ಳೆಯತನ ನಿಮ್ಮನ್ನ ಬದಲಾಯಿಸುವುದಿಲ್ಲ. ನಿಮ್ಮ ಕೊಂಕುತನ ಎಂದಿಗೂ ಬಿಡೋದಿಲ್ಲ. ಮೋಸ ಮಾಡೋದು ಕರ್ತವ್ಯ. ದ್ರೋಹ ಬಗೆಯುವುದು ವ್ಯವಹಾರ. ದುಷ್ಟ ಕೆಲಸ ಮಾಡಿ ಪುಣ್ಯ ಸಂಪಾದಿಸ್ತೀರಿ. ರಕ್ತ ನೋಡಿದರೆ ನಿಮ್ಮ ಹೃದಯ ಕುಣಿಯುತ್ತೆ. ಹಿಂಸೆ ನೋಡಿದರೆ ಉತ್ಸಾಹ ತುಂಬುತ್ತೆ. ಅಸಹ್ಯ ಕಂಡರೆ ಕಣ್ಣೀರು ಬರುತ್ತೆ. ಒಳ್ಳೆಯವರನ್ನ ಕಂಡರೆ ದ್ವೇಷ ಹುಟ್ಟುತ್ತೆ; ಪ್ರತೀಕಾರ ಹೆಡೆ ಎತ್ತುತ್ತೆ.

ಊಯಿ: ನನ್ನ ರೀತಿ ಕೇಳಿ ಮಿಸೆಸ್ ಡಲ್‌ಫೀಟ್, ಶತ್ರುವಾಗಿದ್ರೂ ಅವರ ಮಾತು ಪೂರ್ತಿಯಾಗಿ ಕೇಳಿಸಿಕೊಳ್ಳಬೇಕು. ಅವರ ಮಾತು ಎಷ್ಟೇ ಕಹಿಯಾಗಿದ್ರೂ ಕೂಡ. ನಿಮ್ಮ ಸುತ್ತಮುತ್ತ ಇರುವ ಜನರಿಗೆ ನನ್ನ ಕಂಡರೆ ಇಷ್ಟವಿಲ್ಲ. ಅದು ನನಗೆ ಗೊತ್ತು. ನಾನು ಬ್ರಾಂಕ್ಸ್‌ನ ಬಡವನ ಮಗ ಅನ್ನುವುದನ್ನು ಯಾವತ್ತೂ ಮರೆತಿಲ್ಲ. ಅದನ್ನೇ ನೆಪಮಾಡಿಕೊಂಡು ನನ್ನ ವಿರೋಧ ಮಾಡತಿದ್ದಾರೆ. 'ಯಾವ ಪೋರ್ಕಿಂದ ಮೀನು ತಿನ್ನಬೇಕು ಅನ್ನುವುದು ಕೂಡ ಗೊತ್ತಿಲ್ಲ ಅವನಿಗೆ. ಭಾರಿ ವ್ಯಾಪಾರಸ್ಥರ ಮಧ್ಯೆ ಹೇಗೆ ಬೆರೆಯಬಲ್ಲ? ಬೆಲೆ ಪ್ರವೃತ್ತಿ ಚರ್ಚೆ ಮಾಡತಿದ್ರೆ, ಇಲ್ಲವೆ ಹಣಕಾಸಿನ ವಿಷಯ ಮಾತಾಡತಿದ್ರೆ, ಪೆನ್ನು ಕೈಗೆ ತಗೊಳ್ಳುವುದರ ಬದಲು ಚೂರಿಗೆ ಕೈ ಚಾಚುತಾನೆ. ಅಸಾಧ್ಯ! ಅವನಿಂದ ನಮಗೆ ಬಿಡಿಗಾಸಿನ ಪ್ರಯೋಜನವಿಲ್ಲ ಅಂತಾರೆ. ನನ್ನ ಒರಟು ಧ್ವನಿ, ಇದ್ದದ್ದನ್ನ ಇದ್ದ ಹಾಗೆ ಹೇಳುವ ರೀತಿ. ಇವನ್ನೆಲ್ಲ ನನ್ನ ವಿರುದ್ಧ ಬಳಸ್ತಿದ್ದಾರೆ. ಜನಕ್ಕೆ ಹೀಗೆ ಮೊದಲೇ ನನ್ನ ಕಂಡರೆ ಆಗತಿಲ್ಲ. ಹಾಗಾಗಿ ಏನಿದ್ರೂ ನಾನೇನು ಸಾಧಿಸ್ತೀನೋ ಅದೇ ನನ್ನ ಆಸ್ತಿ. ನೀವು ತರಕಾರಿ ವ್ಯಾಪಾರದಲ್ಲಿದೀರಿ. ನಾನೂ ಅಷ್ಟೆ. ಅದೇ ನಮ್ಮಿಬ್ಬರ ನಡುವೆ ಸಂಬಂಧ ಬೆಳೆಯುವುದಕ್ಕೆ ಕಾರಣ.

ಬೆಟ್ಟಿ: ಆದರೆ ಮಧ್ಯದ ಬಿರುಕು ಮುಚ್ಚುವುದಕ್ಕೆ ಮೋಸದ ಕೊಲೆಗಳು ನಡೀಬೇಕು.

ಊಯಿ: ಕಹಿ ಅನುಭವ ಎಷ್ಟಾಗಿದೆ ಅಂದರೆ ಏನನ್ನೂ ಮನುಷ್ಯನ ಕಡೆಯಿಂದ ನೋಡಲೇಕೂಡದು. ಲೋಕಬಲ್ಲವನಾಗಿ ಹೇಳತೀನಿ. ನೀವು ತರಕಾರಿ ವಹಿವಾಟಿನವರು. 'ಹೇಗೆ ನಡೀತಿದೆ ವ್ಯಾಪಾರ?" ನೋವು ಎಷ್ಟೇ ಇದ್ದರೂ ಬದುಕು ನಡೆಯಲೇ ಬೇಕಲ್ಲವೇ?

ಬೆಟ್ಟಿ: ಹಾಂ! ಹಾಂ! ನಡೀತಿರ್ತದೆ. ಉಳಿದಷ್ಟು ದಿನವೂ ನಾನು ಜನರಲ್ಲಿ ಈ ರೋಗದ ಬಗ್ಗೆ ಹುಷಾರಾಗಿರೋಕೆ ಹೇಳತಾ ಇರತೀನಿ. ತೀರಿಕೊಂಡ ನನ್ನ ಗಂಡನ ಮೇಲೆ ಆಣೆ. ಇನ್ನು ಮೇಲೆ ಯಾರೇ ಎದುರಿಗೆ ಸಿಗಲಿ. 'ಊಯೀನ ನಾಶಮಾಡಿ' ಅನ್ನುವುದನ್ನ ಬಿಟ್ಟು ಇನ್ನೇನಾದರೂ ಹೇಳಿದರೆ ನನ್ನ ನಾಲಿಗೆ ಸೇದಿಹೋಗಲಿ.

ಗಿರಿ: *(ಬೆದರಿಸುವ ದನಿ)* ಹಗ್ಗ ಕೀಳೋವರೆಗೂ ಎಳೀಬೇಡ ಅಮ್ಮಣ್ಣಿ.

ಊಯಿ: ಸುತ್ತಮುತ್ತ ಗೋರಿಗಳೇ ಇರುವಾಗ ಹೂವಿನ ಬಗ್ಗೆ ಮಾತಾಡುವುದು ಕಷ್ಟ. ಸತ್ತವರ ಗೊಡವೆ ಇಲ್ಲದೆ ವ್ಯವಹಾರ ಮುಂದುವರೆಸೋದು ಒಳ್ಳೆಯದು.

**ಬೆಟ್ಟಿ:** ಡಲ್‌ಫೀಟ್! ನೀವು ತೀರಿಕೊಂಡದ್ದು ನಿಜ. ಈಗ ಗೊತ್ತಾಗತಿದೆ.

**ಊಯಿ:** ಖಂಡಿತಾ! ಅವರು ಸತ್ತಿದ್ದಾರೆ, ಗಟ್ಟಿ ಮಾಡಿಕೊಳ್ಳಿ. ಅವರ ಜತೆ ಸುಲಿಗೆ, ಬೆದರಿಕೆ ವಿರುದ್ಧ ಇದ್ದ ದನಿ ಕೂಡ ಸತ್ತಿದೆ. ಅವರ ಸಾವಿಗೆ ಅತಿಯಾಗಿ ಕೊರಗತಾ ಕೂರಬೇಕಿಲ್ಲ. ನಿಮ್ಮ ಜತೆ ಈ ಕ್ರೂರ ಜಗತ್ತಲ್ಲಿ ಯಾರಿದ್ದಾರೆ? ಅಯ್ಯೋ ಪಾಪ! ಕೈಲಾಗದವರನ್ನೇ ತುಳಿಯುವುದು ಇಲ್ಲಿ. ಈಗ ನಿಮ್ಮನ್ನು ರಕ್ಷಿಸಬಲ್ಲವನು ಒಬ್ಬನೇ, ನಾನು ಆರ್ಥುರೋ ಊಯಿ.

**ಬೆಟ್ಟಿ:** ನೀನು ಕೊಂದವನ ಹೆಂಡತಿಗೆ ಈ ಮಾತು ಹೇಳ್ತಿದ್ದೀಯಾ? ಪಿಶಾಚಿ! ನೀನು ಮತ್ತೆ ಇಲ್ಲಿಗೆ ಬರತೀಯಾ ಅಂದುಕೊಂಡಿದ್ದೆ. ಕೊಲೆ ಮಾಡಿದ ಕಡೆಗೆ ಮತ್ತೆ ಹೋಗಿ ಅಪರಾಧಾನ ಬೇರೆಯವರ ಕೊರಳಿಗೆ ಕಟ್ಟುವುದು ನಿನ್ನ ತಂತ್ರ. 'ನಾನಲ್ಲ ಕೊಲೆ ಮಾಡಿದ್ದು. ಬೇರೆ ಯಾರೋ', 'ನನಗಂತೂ ಏನೂ ಗೊತ್ತಿಲ್ಲ' 'ನಂಗೇ ಏಟಾಗಿದೆ'. ನೀನು ಏನೇ ಹೇಳು ಕೊಲೆ ಕೂಗಿ ಹೇಳುತ್ತೆ. 'ಕೊಲೆ. ಕೊಲೆಗೆ ಪ್ರತೀಕಾರ ಆಗಲೇ ಬೇಕು'.

**ಊಯಿ:** ನನ್ನ ಪ್ಲಾನು ಗಟ್ಟಿ. ಸಿಸಿರೋಗೆ ರಕ್ಷಣೆ ಕೊಡಲೇಬೇಕು.

**ಬೆಟ್ಟಿ:** *(ಕ್ಷೀಣ ದನಿ)* ನೀನು ಗೆಲ್ಲುವುದಿಲ್ಲ.

**ಊಯಿ:** ಗೆದ್ದೇ ಗೆಲ್ಲತೇನೆ. ಅದು ಗ್ಯಾರಂಟಿ.

**ಬೆಟ್ಟಿ:** ಈ ರಕ್ಷಕನಿಂದ, ದೇವರೇ, ನನ್ನನ್ನು ಕಾಪಾಡು.

**ಊಯಿ:** ಏನು ಹೇಳತೀರಿ? *(ಕೈ ಚಾಚುತ್ತಾನೆ)* ಸ್ನೇಹ?

**ಬೆಟ್ಟಿ:** ಜೀವ ಇರುವತನಕ ಸಾಧ್ಯವಿಲ್ಲ. *(ಭಯದಿಂದ ಮುಖ ಕಿವುಚುತ್ತಾಳೆ, ಓಡುವಳು)*

**(ಭಿತ್ತಿ ಪತ್ರ)**

## ದೃಶ್ಯ ೧೪

*(ಊಯಿ ಮಲಗುಮನೆ. ಹೊರಳಾಡುತ್ತಿದ್ದಾನೆ. ಕೆಟ್ಟಕನಸುಗಳು. ಕುರ್ಚಿಗಳಲ್ಲಿ ಅಂಗರಕ್ಷಕರು, ತೊಡೆಯ ಮೇಲೆ ಬಂದೂಕ)*

ಊಯಿ: *(ನಿದ್ರೆಯಲ್ಲಿ)* ದೂರ! ದೂರ! ಹೋಗೋ. ಅಯ್ಯಯ್ಯೋ! ನಡೀರೋ! ಆಚೆಗೆ *(ಅವನ ಹಿಂದಿನ ಗೋಡೆ ಪಾರದರ್ಶಕವಾಗುತ್ತದೆ. ಅರ್ನೆಸ್ಟೋ ರೋಮಾನ ಪ್ರೇತ ಬರುತ್ತದೆ. ಅವನ ಹಣೆಯಲ್ಲಿ ಗುಂಡೇಟಿನ ತೂತು.)*

ರೋಮಾ: ನಿನಗೇನೂ ದಕ್ಕೋದಿಲ್ಲ. ಈ ಎಲ್ಲ ಕೊಲೆ, ಕಟುಕತನ, ಬೆದರಿಕೆ, ಗುಲಾಮಗಿರಿ ಎಲ್ಲ ಮಣ್ಣುಪಾಲಾಗುತ್ತೆ. ನಿನ್ನ ಅಪರಾಧದ ಬೇರು ಕೊಳೀತಿದೆ. ಮತ್ತೆ ಹೂ ಬಿಡೋದಿಲ್ಲ. ದ್ರೋಹದ ಗೊಬ್ಬರ ಪುಸುಕಲು. ಕ್ಲರ್ಕ್ ಅಂಥವರನ್ನು ಕೊಲ್ಲು, ಸುಳ್ಳು ಬೊಗಳು; ಮೋಸಮಾಡು. ಡಲ್‌ಫೀಟ್‌ನಂಥವರನ್ನ ಕೊಚ್ಚಿಹಾಕು. ಆದರೆ ನಿನ್ನ ಕಡೆಯವರನ್ನಲ್ಲ. ಇಡೀ ಜಗತ್ತಿನ ವಿರುದ್ಧ ಸಂಚು ಮಾಡು. ಆದರೆ ನಿನ್ನ ಬೆನ್ನು ಬಿದ್ದವರ ವಿರುದ್ಧ ಅಲ್ಲ. ನೂರು ಹೆಜ್ಜೆ ಹಾಕಿ ನಗರ ನಾಶಮಾಡು. ಆದರೆ ಹೆಜ್ಜೆಯನ್ನೇ ಕತ್ತರಿಸಬೇಡ. ನಾಯಿ! ಎಲ್ಲರಿಗೂ ಟೋಪಿಹಾಕು. ಕನ್ನಡೀಲಿ ನಿನಗೆ ಕಾಣಿಸುವ ನಿನ್ನನ್ನೇ ಕೊಂದುಕೊಂಡಿದೀಯ. ಬೀದಿ ಬೀದೀಲಿ ನೀನು ಅಲಿತಿದ್ದಾಗ ನಿನ್ನ ಬೆನ್ನಿಗೆ ನಿಂತೆ. ಈಗ ನನಗೆ ಇಂಥ ಗತಿ. ನೀನು ಉಳ್ಳವರ ಜತೆ ದರಬಾರು ನಡೆಸುವಾಗ, ನನಗೆ ಪ್ರೇತದ ಬದುಕು. ದ್ರೋಹದಿಂದಲೇ ಉದ್ಧಾರವಾಗಿದ್ದಿ, ದ್ರೋಹದಿಂದಲೇ ಮುಳುಗಿ ಹೋಗತೀಯಾ. ನಿನ್ನ ಬಲಗೈ, ನಿನ್ನ ಬಂಟ, ಅರ್ನೆಸ್ಟೋ ರೋಮಾನಿಗೇ ಮೋಸಮಾಡತಿದ್ದಿ. ಹೀಗೆ ಎಲ್ಲರಿಗೂ ಮೋಸ ಮಾಡ್ತಿ. ಕೊನೆಗೆ ಎಲ್ಲರೂ ನಿನಗೆ ಮೋಸ ಮಾಡತಾರೆ. ಅರ್ನೆಸ್ಟೋ ರೋಮಾನ ಮೇಲೆ ಹಸಿರು ಭೂಮಿ ಇದೆ. ಆದರೆ ನಿನ್ನ ದೈವದ್ರೋಹಿ ಪ್ರೇತ ಗಾಳೀಲಿ ಗೋರಿಗಳ ಮೇಲೆ ಅಲದಾಡುತ್ತೆ. ಗುದ್ದು ಅಗೆಯೋರು ಕೂಡ ನೋಡತಿರುತಾರೆ. ನಿನ್ನಿಂದ ಕೊಲೆಯಾದವರು, ಮುಂದೆ ಒಂದಲ್ಲ ಒಂದು ದಿನ ಕೊಲೆಯಾಗೋವರು ಒಟ್ಟಾಗಿ ನಿಲ್ಲತಾರೆ. ರಕ್ತ ಸುರೀತಿದ್ರೂ,

ದ್ವೇಷದಿಂದ ತಪ್ತರಾಗಿ, ಶಸ್ತ್ರ ಹಿಡಿದು ನಿನ್ನ ಮೇಲೆ ನುಗ್ಗುತ್ತಾರೆ. ಯಾರಾದ್ರೂ ರಕ್ಷಿಸತಾರಾ ಅಂತಾ, ನಾನು ನೋಡಿದ ಹಾಗೆ ನೀನು ಆ ಕಡೆ ಈ ಕಡೆ ನೋಡತೀಯ. ಆಣೆ ಇಡು, ಬೆದರಿಸು, ಬೇಡಿಕೋ. ಯಾರೂ ಬರೋಲ್ಲ. ನನಗೆ ಯಾರು ನೆರವಿಗೆ ಬಂದರು?

**ಊಯಿ:** (ಚಟ್ಟನೆ ಕುಮುಟೆ ಬಿದ್ದು) ಹೊಡೀರಿ! ಸಾಯಿಸಿ! ದ್ರೋಹಿ! ಮುಗಿಸ್ರೋ ಅವನನ್ನ! *(ಊಯಿ ತೋರಿಸಿದ ಗೋಡೆಯ ಕಡೆಗೆ ಅಂಗರಕ್ಷಕರು ಗುಂಡು ಹಾರಿಸುತ್ತಾರೆ.)*

**ರೋಮಾ:** *(ಮರೆಯಾಗುತ್ತ)* ಅಂಜದೆ ಸೆಟೆದು ನಿಲ್ಲುವ ತ್ರಾಣ ಇನ್ನೂ ಉಳಿದಿದೆ ನನ್ನಲ್ಲಿ.

## ದೃಶ್ಯ ೧೫

*(ಸಭೆ. ಶಿಕಾಗೋದ ತರಕಾರಿ ವ್ಯಾಪರಿಗಳು. ಎಲ್ಲರ ಮುಖ ಕಳೆಗುಂದಿದೆ)*

ವರ್ತಕ ೧: ಕೊಲೆ! ದರೋಡೆ! ದಗಲಬಾಜಿ!

ವರ್ತಕ ೨: ಅದಕ್ಕಿಂತ ಕೀಳು. ದೈನ್ಯ! ಗುಲಾಮಗಿರಿ.

ವರ್ತಕ ೩: ಏನು ಗುಲಾಮಗಿರೀನಾ? ಜನವರಿಯಲ್ಲಿ ಮೊದಲ ಸರ್ತಿ ಇಬ್ಬರು ನನ್ನ ಅಂಗಡಿಗೆ ನುಗ್ಗಿ ಬೆದರಿಸಿ ಬಂದೂಕ ತೋರಿಸಿದರು. ಆಗ ಅವರನ್ನ ಮೇಲಿಂದ ಕೆಳಕ್ಕೆ ಚೆನ್ನಾಗಿ ನೋಡಿ ಹೇಳಿದೆ. ಬಲಾತ್ಕಾರಕ್ಕೆ ನಾನು ಬಗ್ಗತೀನಿ ಅಂದೆ. ಆದರೆ ಅವರ ನಡವಳಿಕೆ ಇಷ್ಟವಾಗಲಿಲ್ಲ. ಅವರಿಗೂ ನನಗೂ ಏನೂ ಸಂಬಂಧವಿಲ್ಲ ಅಂದೆ. ಮುಖ ಕಿವುಚಿದೆ. ನನ್ನ ಮುಖ ಹೇಗಿತ್ತು? 'ಹಾಗೋ. ಆಯ್ತು. ಬಂದೂಕ ಹಿಡಿದಿದ್ದೀರಿ. ಅಂದಮೇಲೆ ನಿಮ್ಮ ಪಾಲು ನೀವು ತಗೊಳ್ಳಿ' ಅನ್ನುವಂತಿತ್ತು.

ವರ್ತಕ ೪: ಹೌದಾ! ನಾನಂತೂ ಏನೂ ಗೊತ್ತಿಲ್ಲದವನಂತೆ ಸುಮ್ಮನಿದ್ದು ಬಿಟ್ಟೆ. ಹಾಗಂತ ಮನೆಯವಳಿಗೆ ಮಾತು ಕೊಟ್ಟಿದೀನಿ.

ವರ್ತಕ ೧: *(ಒತ್ತು ಕೊಟ್ಟು)* ಏನಂದೆ ದೈನ್ಯ! ಕೊಂಚ ಬುದ್ಧಿ ಓಡಿಸಿದೇವೆ ನಾವು. ಬಾಯಿ ಮುಚ್ಚಿಕೊಂಡು, ಹಲ್ಲು ಮುಡಿ ಕಚ್ಚಿಕೊಂಡು ಕೇಳಿದ್ದೆಲ್ಲ ಕೊಟ್ಟಬಿಟ್ಟರೆ ಆ ಪಿಶಾಚಿಗಳು ತೆಪ್ಪಗಾದಾವು ಅಂದುಕೊಂಡೆವು. ಬಂದೂಕ ಕೈ ಬಿಡತಾರೆ ಅಂತ ತಿಳಿದುಕೊಂಡೆವು. ಆದರೆ ಅವರು ಹಾಗೆ ಮಾಡಲಿಲ್ಲ. ಕೊಲೆ! ಸುಲಿಗೆ! ದಗಲಬಾಜಿ!

ವರ್ತಕ ೨: ಯಾರಿಗೆ ತಾನೇ ಸಹಿಸೋಕೆ ಆಗುತ್ತೆ? ನಮಗೂ ಮರ್ಯಾದೆ ಇದೆ.

ವರ್ತಕ ೫: ಬಂದೂಕ ಇಲ್ಲ ಅಂತ. ನಮ್ಮ ಹತ್ರ ಇರೋಕೆ ನಾವೇನು ಗೂಂಡಾಗಳಾ? ತರಕಾರಿ ಮಾರೋದು ನಮ್ಮ ಕೆಲಸ.

ವರ್ತಕ ೩: ಈ ಬಡ್ಡೀ ಮಗನ ಸೊಕ್ಕು ಮುರಿಯೋರು ಯಾರಾದ್ರೂ ಹುಟ್ಟಬಾರದೇ ? ಇನ್ನೆಲ್ಲಾದರೂ ಬಾಲ ಬಿಚ್ಚಲಿ ಗೊತ್ತಾಗುತ್ತೆ.

ವರ್ತಕ ೪: ಸಿಸಿರೋದಲ್ಲಿ ಹೋಗಲಿ ಗೊತ್ತಾಗತ್ತೆ. *(ಸಿಸಿರೋದ ತರಕಾರಿ ವರ್ತಕರು ಬರುತ್ತಾರೆ. ಎಲ್ಲ ಬಿಳಚಿಕೊಂಡಿದ್ದಾರೆ.)*

ಸಿಸಿರೋ ವರ್ತಕರು: ಹಾಯ್! ಶಿಕಾಗೋ.

ಶಿಕಾಗೋ ವರ್ತಕರು:ಹಾಯ್ ಸಿಸಿರೋ! ಏನು ಇಲ್ಲಿಗೆ?

ಸಿಸರೋ ವರ್ತಕರು: ಬನ್ನಿ ಅಂದಿದ್ದರು.

ಶಿಕಾಗೋ ವರ್ತಕರು:ಯಾರು?

ಸಿಸಿರೋ ವರ್ತಕರು: ಅವರು?

ಶಿಕಾಗೋ ವರ್ತಕ ೧: ಯಾರು? ಆತ ಯಾರು ನಿಮಗೆ ಆಜ್ಞೆ ಮಾಡುವುದಕ್ಕೆ? ಅಲ್ಲೂ ದರಬಾರು ಶುರು ಮಾಡಿದನಾ?

ಸಿಸಿರೋ ವರ್ತಕ ೧:ಬಂದೂಕ ಹಿಡಿದುಕೊಂಡು.

ಶಿಕಾಗೋ ವರ್ತಕ ೨: ದೈತ್ಯಶಕ್ತಿ ಅವರದ್ದು. ಕೈಲಾಗದವರು ನಾವು.

ಶಿಕಾಗೋ ವರ್ತಕ ೧: ನರಸತ್ತ ನಾಯಿಗಳು! ಗಂಡಸರಲ್ಲವಾ ನೀವು? ಸಿಸಿರೋದಲ್ಲಿ ಕಾನೂನು ಅನ್ನೋದು ಇಲ್ಲವೋ?

ಸಿಸರೋ ವರ್ತಕ ೧:ಇಲ್ಲವಲ್ಲ.

ಸಿಸಿರೋ ವರ್ತಕ ೨:ಈಗಂತೂ ಇಲ್ಲ.

ಸಿಸಿರೋ ವರ್ತಕ ೧:ಇಲ್ಲಿ ಕೇಳಿ. ನೀವು ಹೋರಾಡಬೇಕು. ಅಂಕೆಯಲ್ಲಿ ಇಡದಿದ್ರೆ ಈ ಪಿಡುಗು ದೇಶವನ್ನೆಲ್ಲ ನುಂಗಿ ಬಿಡುತ್ತೆ.

ಶಿಕಾಗೋ ವರ್ತಕ ೧: ಮೊದಲು ಒಂದು ನಗರ ಆಮೇಲೆ ಇನ್ನೊಂದು ಸತ್ತರೂ ಚಿಂತೆಯಿಲ್ಲ. ಹೋರಾಡಿ ದೇಶಕ್ಕಾಗಿ ಎಲ್ಲ ಮುಡುಪಿಡಿ.

ಸಿಸಿರೋ ವರ್ತಕ ೨:ನಾವಾ? ಯಾಕೆ ನಾವೇ ಆಗಬೇಕು?

ಶಿಕಾಗೋ ವರ್ತಕ ೪: ದೇವರ ದಯದಿಂದ ಒಂದಲ್ಲ ಒಂದು ದಿನ ಆ ಬಡ್ಡಿಮಗನನ್ನ ನುಂಗಿ ನೊಣೆಯುವವನು ಹುಟ್ಟಿ ಬರತಾನೆ ಅಂತ ಕಾಯುತಿದೀವಿ. *(ಹಬ್ಬದ ಸಡಗರ, ಆರ್ಟುರೋ ಊಯಿ, ಶೋಕದ ತೊಡುಗೆಯ*

*ಬೆಟ್ಟಿ, ಕ್ಲರ್ಕ್, ಗಿರಿ, ಜಿವೋಲಾ ಹಾಗೂ ಅಂಗರಕ್ಷಕರು, ಉಳಿದವರು ಆಚೀಚೆಗೆ ಊಯಿ ಮುಂದೆ ಬರುತ್ತಾರೆ. ಹಿಂಬದಿಗೆ ಅಂಗರಕ್ಷಕರು.)*

ಗಿರಿ: ಹಾಯ್, ಫ್ರೆಂಡ್ಸ್! ಸಿಸಿರೋದಿಂದ ಎಲ್ಲ ಬಂದಿದಾರಾ?

ಸಿಸಿರೋ ವರ್ತಕ ೧: ಎಲ್ಲ ಬಂದಿದೀವಿ.

ಗಿರಿ: ಶಿಕಾಗೋ

ಶಿಕಾಗೋ ವರ್ತಕ ೧: ಎಲ್ಲರೂ ಬಂದಿದೀವಿ.

ಗಿರಿ: (ಊಯಿಗೆ) ಎಲ್ಲ ಬಂದಿದಾರೆ.

ಜಿವೋಲಾ: ಶುಭಾಶಯಗಳು, ಗೆಳೆಯರೇ. ಕಾಲಿಫ್ಲವರ್ ಟ್ರಸ್ಟ್‌ನ ಪರವಾಗಿಯಿಂದ ನಿಮಗೆ ಹಾರ್ದಿಕ ಸ್ವಾಗತ. ಮೊದಲು ಮಿ.ಕ್ಲರ್ಕ್ ಮಾತಾಡ್ತಾರೆ.

ಕ್ಲರ್ಕ್: ಮಹನೀಯರೇ, ನಿಮಗೊಂದು ಸುದ್ದಿ ತಂದಿದೀನಿ. ಸ್ವಲ್ಪ ದಿನದ ಹಿಂದೆ ಮೊದಲಾದ ಮಾತುಕತೆ, ಬಿರುಸು ಬಿಗುಮಾನ ಕಳೆದು, ತಾಳ್ಮೆಯಿಂದ ಮುಂದುವರೆದವು. ಈಗ ಎಲ್ಲ ಫಲಪ್ರದವಾಗಿ ಕೊನೆಯಾಗಿವೆ. ಸಿಸಿರೋದ ಬಿ. ಡಲ್‌ಫೀಟ್ ಅವರ ಸಗಟು ವ್ಯಾಪಾರ ಸಂಸ್ಥೆ ಕಾಲಿಫ್ಲವರ್ ಟ್ರಸ್ಟನ್ನ ಸೇರಿ ಕೊಂಡಿದೆ. ಹಾಗಾಗಿ ಇನ್ನು ಮೇಲೆ ನಮ್ಮ ಟ್ರಸ್ಟ್ ನಿಮಗೆ ತರಕಾರಿ ಸರಬರಾಜು ಮಾಡುತ್ತೆ. ಇದರಿಂದ ನಿಮಗೆ ಲಾಭ ಇದೆ. ಸರಬರಾಜು ನಿಶ್ಚಿತ. ಹೊಸ ಬೆಲೆಗಳು, ಕೊಂಚ ಹೆಚ್ಚು, ಆಗಲೇ ನಿಗದಿಯಾಗಿವೆ. ಮಿಸೆಸ್ ಡಲ್‌ಫೀಟ್ ಅವರೇ, ನಿಮ್ಮನ್ನು ನಮ್ಮ ಟ್ರಸ್ಟ್ ತುಂಬು ಹೃದಯದಿಂದ ಬರಮಾಡಿಕೊಳ್ಳುತ್ತಿದೆ. *(ಕ್ಲರ್ಕ್, ಬೆಟ್ಟಿ, ಡಲ್‌ಫೀಟ್ ಕೈ ಕುಲುಕುವರು)*

ಜಿವೋಲಾ: ಈಗ, ಆರ್ಥುರೋ ಊಯಿ!

ಊಯಿ: (ಊಯಿ ಮುಂದೆ ಬಂದು, ಮೈಕ್ರೋಫೋನ್ ಮುಂದೆ ನಿಂತು) ಸ್ನೇಹಿತರೇ, ದೇಶ ಬಾಂಧವರೇ, ಶಿಕಾಗೋ ಮತ್ತೆ ಸಿಸಿರೋ ನಗರದ ಪೌರರೇ, ಒಂದು ವರ್ಷದ ಹಿಂದೆ ಮಿ.ಡಾಗ್ಸ್‌ಬರೋ ಅವರು-ಅವರ ಆತ್ಮಕ್ಕೆ ಶಾಂತಿ ದೊರಕಲಿ-ಕಣ್ಣಲ್ಲಿ ನೀರು ತುಂಬಿಕೊಂಡು, ಶಿಕಾಗೋ ನಗರದ ತರಕಾರಿ ವ್ಯಾಪಾರಕ್ಕೆ ರಕ್ಷಣೆ ಕೊಡಬೇಕೆಂದು ಬೇಡಿಕೊಂಡಾಗ, ಎದೆ ಕರಗಿ ಹೋಯ್ತು. ಆದರೂ ಅವರ ಮುಖದಲ್ಲಿ ನನ್ನ ಬಗ್ಗೆ ಇದ್ದ ನಂಬಿಕೆಗೆ ತಕ್ಕ ಹಾಗೆ ನಡೆದುಕೊಳ್ಳುವ ಶಕ್ತಿ ನನಗೆ ಇದೆಯೋ ಎಂಬ ಬಗ್ಗೆ ನನಗೆ

ಸಂಶಯ ಇತ್ತು. ಈಗ ಮಿ.ಡಾಗ್ಸ್‌ಬರೋ ಅವರು ಇಲ್ಲ. ಅವರು ಒಂದು ಉಯಿಲು ಬರೆದಿಟ್ಟಿದ್ದಾರೆ. ನೀವು ಯಾರು ಬೇಕಾದರೂ ಅದನ್ನು ಓದಬಹುದು. ಅವರು, ಅದರಲ್ಲಿ ನನ್ನನ್ನು ಮಗ ಅಂತ ಕರೆದಿದ್ದಾರೆ. ಅವರ ಕೋರಿಕೆಗೆ ನಾನು ಒಪ್ಪಿ ಕೆಲಸ ಮಾಡತೊಡಗಿದಾಗಿನಿಂದ ಏನೆಲ್ಲ ಸಹಾಯ ಮಾಡಿದೇನೆ ಅದಕ್ಕೆಲ್ಲ ವಂದನೆ ಹೇಳಿದ್ದಾರೆ. ಈವತ್ತು, ಈರುಳ್ಳಿ, ಕ್ಯಾರೆಟ್, ಟೊಮೋಟೊ, ಬೆಂಡೇಕಾಯಿ ಹೀಗೆ ಯಾವುದೇ ತರಕಾರಿ ವ್ಯಾಪಾರವಿರಲಿ, ಶಿಕಾಗೋದಲ್ಲಿ ಸುರಕ್ಷಿತ. ಕಾರಣ, ಧೈರ್ಯವಾಗಿ ಈ ಮಾತು ಹೇಳಬಹುದು, ನಾನು ದಿಟ್ಟವಾಗಿ ತೆಗೆದುಕೊಂಡ ಕ್ರಮಗಳ ಫಲ. ಆಗ ಇನ್ನೊಬ್ಬ ನಾಗರಿಕ ನಾಯಕ, ಮಿ.ಇಗ್ನೀಷಿಯಸ್ ಡಲ್‌ಫೀಟ್ ಅವರು ಒಂದು ದಿನ ಬಂದು ಭೇಟಿಯಾದಾಗ ಆಶ್ಚರ್ಯವಾಯ್ತು. ಅವರದ್ದೂ ಅದೇ ಕೋರಿಕೆ. ಈ ಬಾರಿ ಸಿಸಿರೋಗೆ ರಕ್ಷಣೆ. ಒಪ್ಪಿಕೊಂಡೆ. ಆ ನಗರಕ್ಕೂ ರಕ್ಷಣೆ. ಅದನ್ನು ನನ್ನ ತೆಕ್ಕೆಗೆ ತೆಗೆದುಕೊಂಡೆ. ಆದರೆ ನನ್ನದೊಂದು ಶರತ್ತು ಇತ್ತು. ಏನದು? ವರ್ತಕರಿಗೆ ನಾನು ಬೇಕು ಅನ್ನಿಸಬೇಕು. ಅವರೆಲ್ಲ ಯಾವುದೇ ಒತ್ತಾಯವಿಲ್ಲದೆ ಮುಕ್ತವಾಗಿ ತೀರ್ಮಾನಿಸಿದರೆ ಮಾತ್ರ ನಾನು ಬರೋದು ಅಂದೆ. ನನ್ನ ಹುಡುಗರಿಗೆ ಹೇಳಿದೆ. ಏನಂತ? ಸಿಸಿರೋದಲ್ಲಿ ಯಾವುದೇ ಬಲಾತ್ಕಾರ ಸಲ್ಲದು; ಒತ್ತಾಯ ಇರಕೂಡದು. ನಗರವೇ ಮುಕ್ತವಾಗಿ ಆಯ್ಕೆಮಾಡಬೇಕು.

**ಬೆಟ್ಟಿ:** ‘ಆಯ್ತು, ಅವರು ನಮಗೆ ನೆರವಾಗುವ ಹಾಗಿಲ್ಲ. ಒತ್ತಾಸೆಯಾಗಿ ನಿಲ್ಲುವ ಹಾಗಿಲ್ಲ. ನೀವೆಲ್ಲ ಮಿ.ಊಯಿ ಅವರಲ್ಲಿ ನಂಬಿಕೆ ಇಡಬೇಕೆಂದು ಕೋರುತಿದೇನೆ. ಯಾಕಂದರೆ ನನ್ನ ದುಃಖದ ದಿನಗಳಲ್ಲಿ ಅವರ ಸ್ವಭಾವವನ್ನು ಚೆನ್ನಾಗಿ ತಿಳಿದುಕೊಂಡಿದ್ದೇನೆ.

**ಜಿವೋಲಾ:** ಈಗ ಮತದಾನ. ಆರ್ಥುರೋ ಊಯಿ ಪರವಾದವರೆಲ್ಲ ಬಲಗೈ ಎತ್ತಿ. *(ಕೆಲವರು ಕೈ ಎತ್ತುವರು.)*

**ಸಿಸಿರೋ ವರ್ತಕ ೧:** ಇಲ್ಲಿಂದ ಹೋಗಬಹುದಾ?

**ಜಿವೋಲಾ:** ಪ್ರತಿಯೊಬ್ಬನಿಗೂ ಇಷ್ಟಬಂದದ್ದನ್ನು ಮಾಡುವ ಹಕ್ಕಿದೆ. *(ಬೇಗ ಹೊರಗೆ ಹೋಗುತ್ತಾನೆ. ಇಬ್ಬರು ಅಂಗರಕ್ಷಕರು ಹಿಂಬಾಲಿಸುತ್ತಾರೆ. ಗುಂಡೇಟಿನ ಸದ್ದು.)*

**ಗಿರಿ:** ಆಯ್ತು, ಸ್ನೇಹಿತರೇ, ಈಗ ಮುಕ್ತವಾಗಿ ತೀರ್ಮಾನ ಮಾಡೋಣ.

(ಎಲ್ಲರೂ ಎರಡೂ ಕೈಗಳನ್ನು ಎತ್ತುವರು)

**ಜಿವೋಲಾ:** ಬಾಸ್, ಮತದಾನ ಆಯ್ತು, ಉದ್ವೇಗದಿಂದ ಜನರ ಹಲ್ಲುಗಳು ಕಟಕಟ ನಡುಗತಿವೆ. ಸಿಸಿರೋ ಮತ್ತು ಶಿಕಾಗೋದ ತರಕಾರಿ ವರ್ತಕರು ತಾವು ಅವರಿಗೆ ವಿಶ್ವಾಸದಿಂದ ನೀಡಿರುವ ರಕ್ಷಣೆಗೆ ವಂದನೆ ಸಲ್ಲಿಸಿದ್ದಾರೆ.

**ಊಯಿ:** ಹೆಮ್ಮೆಯಿಂದ ತಮ್ಮ ಅಭಿನಂದನೆಗಳನ್ನ ಸ್ವೀಕರಿಸ್ತೀದೀನಿ. ಹದಿನೈದು ಯಾಕಾಗಬಾರದು ಅಂತ ಗೊಣಗುವುದು. ಹಲ್ಲು ಮಸೆಯುವುದು ಇವೆಲ್ಲ ನನಗೆ ಹಿಡಿಸುವುದಿಲ್ಲ. ಅರೆಬರೆ ಮನಸ್ಸಿನ ಸ್ನೇಹ ನನ್ನ ಮಟ್ಟಿಗೆ ವಿಷ ಇದ್ದ ಹಾಗೆ. ನಾನು ಕೇಳುವುದೇನು? ಒಟ್ಟಾಗಿ ಒಮ್ಮತದಿಂದ, ಹರ್ಷದಿಂದ 'ಆಗಲಿ' ಅನ್ನಬೇಕು. ಸಿಸಿರೋದ ನನ್ನ ನಾಗರಿಕರೇ, ನಿಮ್ಮ ತೀರ್ಮಾನ ಎದೆಯಾಳದಿಂದ ಗಟ್ಟಿ ಮನಸ್ಸಿನಿಂದ ಬಂದಿರಬೇಕು...ಅದಕ್ಕಾಗಿ ಶಿಕಾಗೋದ ನಾಗರೀಕರೇ, ನಿಮ್ಮನ್ನ ಕೇಳತಿದೀನಿ. ನನ್ನನ್ನ ನೀವು ಚೆನ್ನಾಗಿ ಬಲ್ಲಿರಿ, ನನ್ನನ್ನ ತುಂಬು ಗೌರವದಿಂದ ನೋಡತೀರಿ ಅನ್ನುವುದು ನನಗೆ ಗೊತ್ತು. ನೀವೇ ಹೇಳಿ! ಯಾರು ನನ್ನ ಕಡೆ? ಇಲ್ಲಿಂದ ಹೋಗತಾ ಇನ್ನೂ ಒಂದು ಮಾತು ಹೇಳತಿದೀನಿ. ಯಾರಾದರೂ ನನ್ನ ಕಡೆ ಇಲ್ಲ ಅಂದರೆ ನನಗೆ ವಿರೋಧಿಯಾಗತಾನೆ. ಅವನಿಗೆ ಏನಾದ್ರೂ ಆದರೆ ಅದಕ್ಕೆ ಅವನೇ ಹೊಣೆ. ನೀವೀಗ ಮತದಾನ ಮಾಡಬಹುದು.

**ಜಿವೋಲಾ:** ಅದಕ್ಕೆ ಮೊದಲು ಮಿಸೆಸ್ ಡಲ್‌ಫೀಟ್-ಅವರು ನಿಮಗೆಲ್ಲ ಗೊತ್ತು, ಅವರ ಯಜಮಾನರನ್ನ ನೀವೆಲ್ಲ ತುಂಬ ಇಷ್ಟಪಡತಿದ್ದಿರಿ, ಅವರಿಂದ ಒಂದು ಮಾತು.

**ಬೆಟ್ಟಿ:** ಸ್ನೇಹಿತರೇ, ನಿಮಗೆಲ್ಲ ಬೇಕಾಗಿದ್ದವರು ನನ್ನ ಪ್ರೀತಿಯ ಪತಿ ಇಗ್ನೇಷಿಯಸ್ ಡಲ್‌ಫೀಟ್. ಅವರು ಈಗ ನಮ್ಮೊಡನೆ ಇಲ್ಲ....

**ಜಿವೋಲಾ:** ದೇವರು ಅವರ ಆತ್ಮಕ್ಕೆ ಚಿರಶಾಂತಿ ಕೊಡಲಿ.ವರ್ಷದ ಹಿಂದೆ. ನಾನು ಬ್ರಾಂಕ್ಸ್‌ನಿಂದ ಬಂದ ನಿರುದ್ಯೋಗಿ; ದೀನ ಹುಡುಗ. ಆಗ ಏಳೇಏಳು ಜನ ಬೆಂಬಲಿಗರ ಜತೆ ವಿಧಿಯ ಕರೆ ಮೇರೆಗೆ ಈ ನಗರಕ್ಕೆ ಬಂದೆ. ನನಗಿದ್ದದ್ದು ಉಕ್ಕಿನಂಥ ನಿರ್ಧಾರ. ಏನು? ತರಕಾರಿ ವ್ಯಾಪಾರ ಯಾವಾಗ್ಲೂ ತಕರಾರು ಇಲ್ಲದೆ ನಡೀಬೇಕು.ಅನ್ನುವುದು. ನಾವು ಇದ್ದವರು ಕೆಲವೇ ಜನ ಆಗ.

ಈ ಶಾಂತಿಯ ಆದರ್ಶಸಾಧನೆಗೆ ನಮ್ರವಾಗಿ ದೆವ್ವ ಹೊಕ್ಕವರ ಹಾಗೆ ದುಡಿದೆವು. ಈಗ ಸಾವಿರಾರು ಜನ ಇದ್ದೇವೆ. ಶಿಕಾಗೋದ ತರಕಾರಿ ವ್ಯಾಪಾರದಲ್ಲಿ ಶಾಂತಿ ಈಗ ಕನಸಲ್ಲ ನನಸು. ಈ ಶಾಂತಿಯನ್ನೂ ಕಾಯ್ದುಕೊಳ್ಳಬೇಕು. ಅದಕ್ಕೆ ಮತ್ತಷ್ಟು ಮಶಿನ್‌ಗನ್ ಕೊಳ್ಳುವ ನಿರ್ಧಾರ ಮಾಡಿದೀನಿ. ಯಾಕೆ? ರಕ್ಷಣೆ ಬಯಸುವ ನಗರಗಳು ಶಿಕಾಗೋ, ಸಿಸಿರೋ ಮಾತ್ರ ಅಲ್ಲ. ಇನ್ನೂ ಇವೆ. ವಾಷಿಂಗ್‌ಟನ್, ಮಿಲ್‌ವಾವ್‌ಕೀ, ಡೆಟ್ರಾಯಿಟ್, ಟೊಲೋಡೋ, ಪಿಟ್ಸ್‌ಬರ್ಗ್, ಸಿನ್‌ಸಿನಾಟಿ, ತರಕಾರಿ ವ್ಯಾಪಾರ ನಡೆಯುವ ಇನ್ನೆಷ್ಟೋ ನಗರಗಳು. ಕೊಲಂಬಸ್, ಫಿಲಿಡೆಲ್ಫಿಯಾ, ಮತ್ತೆ ನ್ಯೂಯಾರ್ಕ್! ಅಲ್ಲೆಲ್ಲ ರಕ್ಷಣೆ ಬೇಕಾಗಿದೆ. ಯಾರೇ ಅಣಕಿಸಲಿ, ಯಾರೇ ಮುಖ ಹಿಂಡಲಿ, ಆರ್ಥುರೋ ಊಯಿಯನ್ನು ತಡೆಯುವವರ್‍ಯಾರು?*(ಡ್ರಮ್ ಸದ್ದು. ಸಡಗರ. ತೆರೆ ಬೀಳುವುದು. ಭಿತ್ತಿ ಪತ್ರ.)*

# ಬರಹ ಪುಸ್ತಕಮಾಲೆ

| | | |
|---|---|---|
| ತೊಂಡುಮೇವು – ಕಂತೆ ಒಂದು | 2010 | ರೂ. 225 |
| ತೊಂಡುಮೇವು – ಕಂತೆ ಎರಡು | 2010 | ರೂ. 225 |
| ತೊಂಡುಮೇವು – ಕಂತೆ ಮೂರು | 2010 | ರೂ. 200 |
| ತೊಂಡುಮೇವು – ಕಂತೆ ನಾಲ್ಕು | 2010 | ರೂ. 200 |
| ತೊಂಡುಮೇವು – ಕಂತೆ ಐದು | 2010 | ರೂ. 225 |
| ತೊಂಡುಮೇವು – ಕಂತೆ ಆರು | 2010 | ರೂ. 225 |
| ತೊಂಡುಮೇವು – ಕಂತೆ ಏಳು | 2010 | ರೂ. 225 |
| ತೊಂಡುಮೇವು – ಕಂತೆ ಎಂಟು | 2010 | ರೂ. 250 |
| ತೊಂಡುಮೇವು – ಕಂತೆ ಒಂಬತ್ತು | 2010 | ರೂ. 225 |

ನಾರಾಯಣ, ಯಾವುದೋ ಹಳೆಗನ್ನಡದ ಸಂಧಿ ಸಮಾಸಗಳನ್ನೊಳಗೊಂಡ ಯಾರಿಗೂ ಅರ್ಥವಾಗದೆ ಕೂತ ವಿಚಿತ್ರ ಪದಗಳ ಅರ್ಥಗಳನ್ನು ಲೀಲಾಜಾಲವಾಗಿ ಹೇಳುವುದರಿಂದ ಹಿಡಿದು ಅತ್ಯಂತ ಸೂಕ್ಷ್ಮ ಎಲೆಕ್ಟ್ರಾನಿಕ್ ವಸ್ತುಗಳು ಹೇಗೆ ಕೆಲಸ ಮಾಡುತ್ತವೆಂಬುದರವರೆಗೂ ಎಲ್ಲವನ್ನೂ ಸರಳವಾಗಿ ಹೇಳಬಲ್ಲ, ಕೇಳುತ್ತಾ ಕೂತವರಿಗೆ ಬೆರಗು ಹುಟ್ಟಿಸಬಲ್ಲ ಮನುಷ್ಯ.

ಪಂಡಿತರುಗಳ ಒಣಗಾಂಭೀರ್ಯ ಮತ್ತು ಆಳದ ಸೂಕ್ಷ್ಮ ಅಹಂಕಾರಗಳಿಂದಾಗಿ ಅವರುಗಳನ್ನು ಭೇಟಿ ಮಾಡಲು ಹೇಸುವ ನಾನು, ಮತ್ತು ನನ್ನಂಥ ಅನೇಕರು ನಾರಾಯಣನ ಬಳಿ ಮಾತ್ರ ಗಂಟೆಗಟ್ಟಲೆ ಹರಟೆ ಹೊಡೆಯುತ್ತಾ, ಈತ ಹೊಡೆಯಬಲ್ಲ ವಿಚಿತ್ರ ರೀತಿಯ ಜೋಕುಗಳಿಂದ ಖುಷಿಪಡುತ್ತಾ ದಿನಗಳನ್ನು ಕಳೆಯಬಲ್ಲೆವು. ಇಷ್ಟೆಲ್ಲ ನಗಬಲ್ಲ ಈತ ಪಂಡಿತನಾಗಿರುವುದೂ ಮತ್ತು ಹಿಂದೊಮ್ಮೆ ಕಟ್ಟಾ ಮಾರ್ಕ್ಸ್‌ವಾದಿಯಾಗಿದ್ದುದೂ-ಈಗಲೂ ಕೂಡ ಮಾರ್ಕ್ಸ್‌ವಾದಿಯಿರಬಹುದೇನೋ! ಆದರೂ ಅಷ್ಟೊಂದು ಕಟ್ಟಾ ಅಲ್ಲ ಎನ್ನಿಸುತ್ತದೆ-ಆಶ್ಚರ್ಯ ಹುಟ್ಟಿಸುವ ಸಂಗತಿಗಳು. ಇತಿಹಾಸ, ಖಗೋಳಶಾಸ್ತ್ರ, ಆಂತ್ರಪಾಲಜಿ, ಭಾಷಾವಿಜ್ಞಾನ, ತತ್ತ್ವಶಾಸ್ತ್ರ, ಅಣುವಿಜ್ಞಾನ ಮುಂತಾದ ಅನೇಕ ವಿಭಿನ್ನ ವಿಚಾರಗಳ ಬಗ್ಗೆ ಆಳವಾಗಿ ಅಧ್ಯಯನ ಮಾಡಿ ಖಚಿತ ಜ್ಞಾನವನ್ನು ಪಡೆದಿರುವವನು ನಾರಾಯಣ. ■

---

183

PRAGATI GRAPHICS

ISBN 938144395-2

9 789381 443954

ರೂ.350/-